
ಸಮಗ್ರ ದಾಸ ಸಾಹಿತ್ಯ

ಸಂಪುಟ : ೧೪



ಶ್ರೀ ಜಗನ್ನಾಥದಾಸರ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ
ಸಂಪುಟ : ೧೪

ಶ್ರೀ ಜಗನ್ನಾಥದಾಸರ ಕೀರ್ತನೆಗಳು

ಸಂಪಾದಕರು
ಡಾ. ಕೆ. ಎಂ. ಕೃಷ್ಣರಾವ್, ಎಂ.ಎ., ಪಿಎಚ್.ಡಿ.

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

SAMAGRA DASA SAHITYA VOLUME - 14 :
Shri Jagannathadasara Keerthanegalu, Edited by Dr. K. M. Krishnarao and Published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 58 + ೪೨೧

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯಮಯ ವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನು ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಆವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್
ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮೂವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ.ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೩ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' - ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೇ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ–ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ–ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು– ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವಕ್ಕೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ಡಾ. ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಇಂದಿನ ಕರ್ಣಾಟಕ ರಾಜ್ಯದ ರಾಯಚೂರು ಜಿಲ್ಲೆಯ ಮಾನವೀ ತಾಲ್ಲೂಕಿನಲ್ಲಿರುವ ಬ್ಯಾಗವಟ್ಟಿ ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದ ಶ್ರೀ ನರಸಿಂಹಾಚಾರ್ಯರು – ಲಕ್ಷ್ಮೀಬಾಯಿ ಎಂಬ ಮಾಧ್ವ ದಂಪತಿಗಳು ಶಾ.ಶ. ೧೬೪೯ನೆಯ ಕೀಲಕನಾಮ ಸಂವತ್ಸರದ ಶ್ರಾವಣ ಶುದ್ಧ ಬಿದಿಗೆಯ ಶುಭ ದಿನದಂದು, ಅಂದರೆ ಕ್ರಿ.ಶ. ೧೭೨೮ನೆಯ ಇಸವಿ ಜುಲೈ ತಿಂಗಳ ದಿನಾಂಕ ಇಪ್ಪತ್ತೇಳರಂದು (೨೭–೭–೧೭೨೮) ಸತ್ಪುತ್ರರೊಬ್ಬರನ್ನು ಪಡೆದರು. ತಿರುಪತಿಯ ಶ್ರೀನಿವಾಸನ ಪರಮಾನುಗ್ರಹದಿಂದ ಈ ಮಗು ಜನಿಸಿದ ನಿಮಿತ್ತ ಶ್ರೀನಿವಾಸ ಎಂದೇ ಮಗುವಿಗೆ ನಾಮಕರಣವಾಯಿತು.

ಶ್ರೀನಿವಾಸನು ಬೆಳೆದಂತೆ ಅವನ ಪ್ರತಿಭೆಯೂ ಪ್ರಕಾಶವಾಯಿತು. ಮನೆಯಲ್ಲಿಯೇ ಕೆಲವು ವರ್ಷಗಳು ವಿದ್ಯಾಭ್ಯಾಸವನ್ನು ಮಾಡಿದ ನಂತರ ಬಾಲಕನ ಪ್ರತಿಭಾ ಶಕ್ತಿಯನ್ನು ಗುರುತಿಸಿದ ತಾಯಿ ತಂದೆಯರು, ಆ ಕಾಲದಲ್ಲಿ ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಮಠದ ಪರಂಪರೆಯಲ್ಲಿ ಪೀಠಸ್ಥರಾಗಿದ್ದ ಶ್ರೀವರದೇಂದ್ರತೀರ್ಥ ಶ್ರೀಪಾದಂಗಳವರಲ್ಲಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದರು. ಆ ಹೊತ್ತಿಗಾಗಲೇ ಶ್ರೀಪಾದಂಗಳವರ ವಿಚಾರವನ್ನು ಅರಿತಿದ್ದ ಬಾಲಕ ಅವರನ್ನು ಕುರಿತು ಸಂಸ್ಕೃತದಲ್ಲಿ ವರದೇಂದ್ರ ಪಂಚರತ್ನ ಮಾಲಿಕಾ ಎಂದು ಐದು ಶ್ಲೋಕಗಳನ್ನು ರಚಿಸಿ, ಶ್ರೀಪಾದಂಗಳವರಿಗೆ ಅರ್ಪಿಸಿದನಂತೆ! ಶ್ರೀನಿವಾಸನಲ್ಲಿ ಸುಪ್ತವಾಗಿದ್ದ ಪ್ರತಿಭೆಯನ್ನು ಆ ಮೂಲಕ ಗುರುತಿಸಿದ ಶ್ರೀಪಾದಂಗಳವರು ತಮ್ಮ ಮಠದಲ್ಲಿಯೇ ಬಾಲಕನಿಗೆ ಆಶ್ರಯವಿತ್ತು ವಿದ್ಯಾದಾನ ಮಾಡಿದರು. ಶ್ರೀನಿವಾಸ ಅನೇಕ ವರ್ಷಗಳ ಸತತ ಅಭ್ಯಾಸದಿಂದಲೂ, ಭಕ್ತಿ

ಶ್ರದ್ಧಾದಿಗಳಿಂದಲೂ ಮತ್ತು ದೈವದತ್ತವಾದ ಸಹಜ ಪ್ರತಿಭಾ ಶಕ್ತಿಯಿಂದಲೂ ಸಕಲ ಶಾಸ್ತ್ರಾರ್ಥಗಳನ್ನೂ, ವೇದೋಪನಿಷತ್ತುಗಳನ್ನೂ ಕರತಲಾಮಲಕ ವನ್ನಾಗಿಸಿಕೊಂಡರು. ತರ್ಕ, ಮಿಮಾಂಸಾದಿ ಶಾಸ್ತ್ರಗಳಲ್ಲಿ ಅದ್ವಿತೀಯರಾಗಿ, ಪ್ರತಿವಾದಿ ಭಯಂಕರರೆನಿಸಿ ಖ್ಯಾತರಾದರು. ತಮ್ಮ ವಿದ್ಯಾ ಗುರುಗಳಿಂದಲೂ ಮತ್ತು ಪಂಡಿತರಿಂದಲೂ ಮಾನ್ಯರಾಗಿ, ಆಚಾರ್ಯ ಎಂಬ ಬಿರುದನ್ನು ಪಡೆದು, ಮುಂದೆ ಶ್ರೀನಿವಾಸಾಚಾರ್ಯರೆಂದೇ ಪ್ರಸಿದ್ಧರಾದರು. ಶ್ರೀವರದೇಂದ್ರ ತೀರ್ಥ ಶ್ರೀಪಾದಂಗಳವರ ಸಮಕ್ಷಮದಲ್ಲಿ ನಡೆಯುತ್ತಿದ್ದ ಎಲ್ಲಾ ವಿದ್ವತ್ಸಭೆ ಗಳಲ್ಲಿಯೂ ಇವರೇ ಮುಖ್ಯ ಪ್ರವರ್ತಕರಾಗಿದ್ದು, ಪ್ರತಿವಾದಿಗಳನ್ನು ತಮ್ಮ ಅಸಾಧಾರಣವಾದ ತರ್ಕಭೂಯಿಷ್ಠವಾದ ವಾದಸರಣಿ ಮತ್ತು ಪ್ರತಿಭೆಯಿಂದ ನಿರುತ್ತರರನ್ನಾಗಿಸಿ, ವಿಜಯೋತ್ಸಾಹದಿಂದ ಮೆರೆದರು. ಇದರಿಂದ ಶ್ರೀ ಮಠದ ಕೀರ್ತಿಯು ಹೆಚ್ಚಿತಲ್ಲದೆ, ಆಚಾರ್ಯರ ಯಶಸ್ಸು ದಿಗಂತ ವಿಶ್ರಾಂತವಾಗಿ ವ್ಯಾಪಿಸಿತು. ಇಂತಹ ಕೀರ್ತಿಶ್ರೀಯಿಂದ ಆಢ್ಯರಾಗಿದ್ದ ಆಚಾರ್ಯರಲ್ಲಿ ಸಹಜವಾಗಿಯೇ ಸಂಸ್ಕೃತ ಭಾಷೆಯಲ್ಲಿ ಅತೀವ ನಿಷ್ಠೆ ಮತ್ತು ಕನ್ನಡ ಪದಗಳನ್ನು ರಚಿಸಿ, ಹಾಡಿ, ತಾವೂ ಶ್ರೀಹರಿಯ ವಿಷಯದಲ್ಲಿ ಭಕ್ತಿ ರೂಪವಾದ ರಸ ಪ್ರವಾಹದಲ್ಲಿ ತನ್ಮಯರಾಗಿ, ಇತರರನ್ನೂ ಆನಂದ ವಾರಿಧಿಯಲ್ಲಿ ಮಗ್ನರನ್ನಾಗಿ ಮಾಡಿದ ಹರಿದಾಸರ ವಿಷಯದಲ್ಲಿ ತಾತ್ಸಾರ ಬುದ್ಧಿ ಉಂಟಾಯಿತು.

ಪಂಡಿತ ಮಾನ್ಯರಾಗಿ, ತಮ್ಮ ಗುರುಗಳ ಪ್ರೀತ್ಯಾದರಗಳಿಗೆ ಪಾತ್ರರಾಗಿ, ಆಚಾರ್ಯರು ಮಾನವಿಯಲ್ಲಿ ಬಂದು ನೆಲಸಿ, ಶಿಷ್ಯವೃಂದಕ್ಕೆ ವಿದ್ಯಾದಾನವನ್ನು ಮಾಡುತ್ತಾ, ಪರಮ ವೈಷ್ಣವಾಧ್ಯಕ್ಷರೆನಿಸಿಕೊಂಡು, ಶಿಷ್ಟ ಸದಾಚಾರನಿಷ್ಠರಾಗಿ ಕೆಲವು ನಿಯಮ ನಿಷ್ಠೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಗೌರವಾ ನ್ವಿತರೆನಿಸಿದರು. ಒಮ್ಮೆ ಭೃಗ್ವಂಶ ಸಂಭೂತರೆಂದು ವಿಖ್ಯಾತರಾದ, ಭಗವದ ಪರೋಕ್ಷಿಗಳೆಂದೆನಿಸಿದ್ದ ಶ್ರೀವಿಜಯದಾಸರು ಮಾನವಿಗೆ ತಮ್ಮ ಶಿಷ್ಯ ಪರಿವಾರ ದೊಡನೆ ಬಂದರು. ಆಚಾರ್ಯರ ಸಮೀಪದ ಬಂಧುಗಳಾಗಿದ್ದ ಶ್ರೀದಾಸರಾಯರು ಅವರನ್ನು ಭೋಜನಕ್ಕೆ ಆಹ್ವಾನಿಸಿದರು. ದಾಸರ ಬಗ್ಗೆ ಅಸಡ್ಡೆಯನ್ನು ಹೊಂದಿದ್ದ ಆಚಾರ್ಯರು ಆಹ್ವಾನವನ್ನು ತಿರಸ್ಕರಿಸಿ, ತಡವಾಗಿ ಊಟ ಮಾಡಿದರೆ

ಹೊಟ್ಟೆನೋವು ಬರುವುದಾಗಿ ಹೇಳಿ ಕಳುಹಿಸಿದರು. ಸ್ತೋತ್ತಮ ದ್ರೋಹದ ಫಲವನ್ನು ಆಚಾರ್ಯರು ಶೀಘ್ರದಲ್ಲಿಯೇ ಅನುಭವಿಸ ಬೇಕಾಯಿತು. ಉದರ ವ್ಯಾಧಿಯ ಬಾಧೆಯು ತೀವ್ರವಾಯಿತು. ಲೋಕ ವೈದ್ಯರಿಂದ ಗುಣಪಡಿಸಲು ಸಾಧ್ಯವಾಗಲಿಲ್ಲವಾದುದರಿಂದ ಪರಲೋಕೈಕನಾಥನನ್ನು ಮೊರೆ ಹೊಕ್ಕರು; ಪ್ರಾರಬ್ಧ ರೂಪದ ವ್ಯಾಧಿ ಪರಿಹಾರಕ್ಕಾಗಿ, ಶ್ರೀ ರಾಘವೇಂದ್ರ ತೀರ್ಥ ಶ್ರೀಪಾದಂಗಳವರನ್ನು ಮೊರೆಹೊಕ್ಕು, ಅತ್ಯಂತ ದೈನ್ಯದಿಂದ ಸೇವೆ ಮಾಡಿದರು. ಶ್ರೀರಾಯರು ನೀನು ಸ್ತೋತ್ತಮ ದ್ರೋಹಾನುಲಿಪ್ತನಾಗಿರುವೆ ದ್ರೋಹವು ಯಾವ ಮೂಲದಲ್ಲಿ ಉಂಟಾಯಿತೋ, ಅಂತಹ ಮಹಾನುಭಾವರೂ ಪರಮ ಕರುಣಾಮೂರ್ತಿಗಳೂ ಆದ ಶ್ರೀ ವಿಜಯದಾಸರನ್ನೇ ಮೊರೆಹೊಕ್ಕ ಹೊರತು, ಬೇರೆ ಪರಿಹಾರ ಮಾರ್ಗವಿಲ್ಲ ಎಂದು ಸ್ವಪ್ನದ್ವಾರಾ ಸೂಚನೆಯಿತ್ತರು. ಯಾರಲ್ಲಿ ಗೌರವ ವಿರಲಿಲ್ಲವೋ, ಅವರನ್ನೇ ಶರಣು ಹೋಗಬೇಕಾದ ವಿಚಿತ್ರ ಪ್ರಸಂಗ ದೈವ ಚಿತ್ತದಿಂದ ಆಚಾರ್ಯರಿಗೆ ಒದಗಿತು. ತಮ್ಮ ಅಪರಾಧವನ್ನು ಅರಿತ ಆಚಾರ್ಯರು ಶ್ರೀ ವಿಜಯ ದಾಸರಲ್ಲಿಗೆ ಧಾವಿಸಿದರು. ಶ್ರೀಹರಿಯ ಸಂಕಲ್ಪದಂತೆ ನಡೆಯಲೇ ಬೇಕಾದ ಪ್ರಸಂಗಗಳು ತಮ್ಮ ಸಂದರ್ಭಗಳ ಯೋಗಾಯೋಗ ವಿಷಯಗಳನ್ನು ಮೊದಲೇ ತಮ್ಮ ದಿವ್ಯ ಜ್ಞಾನ ದೃಷ್ಟಿಯಿಂದ ತಿಳಿದಿದ್ದ ಶ್ರೀ ವಿಜಯದಾಸರು ಅಚಾರ್ಯರ ಆಗಮನವನ್ನೇ ನಿರೀಕ್ಷಿಸುತ್ತಿದ್ದರು. ಅಡಿಗಡಿಗೆ ನಡುಗುತ್ತ ಭಯ ಭಕ್ತಿಗಳಿಂದ ತಮ್ಮೆಡೆಗೆ ಧಾವಿಸಿ ಬಂದ ಆಚಾರ್ಯರನ್ನು ಹೃದಯ ವಾತ್ಸಲ್ಯದಿಂದ ಬರಮಾಡಿಕೊಂಡು, ಆ ಆತ್ಮೀಯ ಬಂಧುವನ್ನು ಪ್ರೀತಿಯಿಂದ ಮಾತನಾಡಿಸಿ, ಸಂತೈಸಿದರು. ದಾಸರಾಯರು ತಮ್ಮ ಶಿಷ್ಯರಾದ ಶ್ರೀ ಗೋಪಾಲದಾಸರ ಬಳಿಗೆ ಹೋದರೆ ರೋಗ ನಿವಾರಣೆಯಗುವುದೆಂದು ತಿಳಿಸಿದರು. ಶ್ರೀ ವಿಜಯದಾಸರಿಗೆ ಆಚಾರ್ಯರ ರೋಗ ನಿವಾರಣೆ ಮಾಡುವ ಸಾಮರ್ಥ್ಯವಿದ್ದರೂ, ಶ್ರೀ ಗೋಪಾಲದಾಸರೇ ಅವರ ನಿಯಮಿತ ಗುರುಗಳು ಮತ್ತು ಸ್ವರೂಪೋದ್ಧಾರಕರು ಎಂದು ತಿಳಿದಿದ್ದುದರಿಂದ, ಆಚಾರ್ಯರನ್ನು ಉತ್ತನೂರಿಗೆ ಕಳುಹಿಸಿದರು.

ಶ್ರೀ ಜಗನ್ನಾಥದಾಸರು ತಮ್ಮ ಮೂಲ ರೂಪದಲ್ಲಿ ಹತ್ತೊಂಭತ್ತನೆಯ ಕಕ್ಷೆಗೆ ಸೇರಿದ ಕರ್ಮಜ ದೇವತೆಗಳು (ಸಹ್ಲಾದಾಂಶರು) ಮತ್ತು ಶ್ರೀ ಗೋಪಾಲದಾಸರು ಹದಿನೆಂಟನೆಯ ಕಕ್ಷೆಗೆ ಸೇರಿದ ಗಣೇಶಾಂಶರೆಂದು ಪ್ರಸಿದ್ಧರಾಗಿದ್ದಾರೆ.

ಶ್ರೀನಿವಾಸಾಚಾರ್ಯರು ಉತ್ತನೂರಿಗೆ ಬಂದು ಶ್ರೀಗೋಪಾಲದಾಸರನ್ನು ಕಂಡು, ಭಯಭಕ್ತಿಗಳಿಂದ ತಮ್ಮ ರೋಗ ನಿವಾರಣೆಗಾಗಿ ಪ್ರಾರ್ಥಿಸಿದರು. ಆಗ ಪರಮ ದಯಾಶೀಲರಾದ ಶ್ರೀ ಗೋಪಾಲದಾಸರಾಯರು, ತಮ್ಮ ಪೂಜ್ಯಗುರುಗಳ ಆಣತಿಯಂತೆ "ಎನ್ನ ಬಿನ್ನಪ ಕೇಳೋ, ಧನ್ವಂತ್ರಿ ದಯಮಾಡೋ, ಸಣ್ಣವನು ಇವ ಕೇವಲ" ಎಂಬ ಕೀರ್ತನೆಯನ್ನು ರಚಿಸಿ, ಎರಡು ಜೋಳದ ಭಕ್ರಿಗಳನ್ನು ಅಭಿಮಂತ್ರಿಸಿ, ಆಚಾರ್ಯರಿಗೆ ಔಷಧ ರೂಪವಾಗಿ ಭುಂಜಿಸಲು ಕೊಟ್ಟರು. ಸಕಲ ರೋಗ ಪರಿಹಾರಕನೂ, ತನ್ನ ಕರಕಮಲಗಳಲ್ಲಿ ಅಮೃತ ಕಲಶವನ್ನು ಹಿಡಿದಿರುವವನೂ ಆದ ಧನ್ವಂತ್ರಿ ನಾಮಕ ಶ್ರೀಹರಿಯನ್ನು ಅತ್ಯಂತ ಭಕ್ತಿಯಿಂದ ಪ್ರಾರ್ಥಿಸಿ, ಆಚಾರ್ಯರಿಗೆ ಬಂದೊದಗಿದ್ದ ಅಪಮೃತ್ಯುವನ್ನು ಪರಿಹರಿಸುವಂತೆ ಮೊರೆ ಇಟ್ಟರು. ಈ ಕೀರ್ತನೆಯಲ್ಲಿ 'ಸಣ್ಣವನು ಇವ ಕೇವಲ' ಎಂಬ ಪದ ಪ್ರಯೋಗವಿರುವುದರಿಂದ, ಆಚಾರ್ಯರು ವಯಸ್ಸಿನಲ್ಲಿ ಕಿರಿಯರು ಎಂಬುದು ತಿಳಿಯುತ್ತದೆ, ಅಲ್ಲದೆ "ಎನ್ನ ಮಾತಲ್ಲವಿದು, ಎನ್ನ ಪಿರಿಯರ ಮಾತು" ಎಂಬ ಉಕ್ತಿ ಪ್ರಯೋಗದಿಂದ, ಶ್ರೀ ಗೋಪಾಲದಾಸಾರ್ಯರು, ತಮ್ಮ ಗುರುಗಳಾದ ಶ್ರೀ ವಿಜಯದಾಸರಲ್ಲಿಟ್ಟಿದ್ದ ಪೂಜ್ಯ ಭಾವ ಮತ್ತು ಭಕ್ತಿಯ ಅತಿಶಯಗಳನ್ನು ತಿಳಿಯಬಹುದಾಗಿದೆ. ಜ್ಞಾನಿವರೇಣ್ಯರಾದ ದಾಸರಾಯರ ಭಕ್ತಿ ಪುರಸ್ಸರವಾದ ಪ್ರಾರ್ಥನೆಗೆ ಕರುಣಾವತ್ಸಲನಾದ ಧನ್ವಂತ್ರಿಯು ಕೃಪೆದೋರಿದನು. ಅಂದಿನಿಂದ ಆಚಾರ್ಯರ ಉದರ ಶೂಲೆಯು ಸಂಪೂರ್ಣವಾಗಿ ಗುಣವಾಗಿ, ಅವರು ಮೊದಲಿನಂತೆ ದೃಢಾಂಗರಾದರು. ದೈವ ಸಂಕಲ್ಪದಿಂದ ಬಂದೊದಗಿದ ಈ ಪ್ರಸಂಗವು ಆಚಾರ್ಯರ ಜೀವನದಲ್ಲಿ ಒಂದು ದೊಡ್ಡ ತಿರುವು. ಅವರ ಜೀವನದಲ್ಲೇ ಮಹತ್ವ ಪೂರ್ಣವಾದ ಕ್ರಾಂತಿಯನ್ನುಂಟು ಮಾಡಿ, ಭಗವತ್ಸಾಧನೆಗೆ ಪ್ರತಿಬಂಧಕಗಳಾಗಿದ್ದ ಗರ್ವ, ಅಸಹನೆ ಮತ್ತು ಹರಿದಾಸರಲ್ಲಿದ್ದ ತಾತ್ಸಾರ ಮನೋಭಾವಗಳನ್ನು ಬೇರು ಸಹಿತ ಕಿತ್ತೊಗೆದು, ಕೇವಲ ಸಾತ್ವಿಕ ಮಾರ್ಗದಲ್ಲಿಯೇ

ಅವರು ಪ್ರವೃತ್ತರಾಗುವಂತೆ ಮಾಡಿದ ಈ ಘಟನೆಯು ಅದ್ಭುತವಾದ ಪವಾಡವೇ ಸರಿ. ಈ ಭಾವವನ್ನೇ ಆಚಾರ್ಯರು ತಮ್ಮ ಸ್ವರೂಪೋದ್ಧಾರಕ ಗುರುಗಳಾದ ಶ್ರೀ ಗೋಪಾಲದಾಸರ ಸ್ತೋತ್ರದಲ್ಲಿ "ಅಪಮೃತ್ಯುವನ್ನು ತೊಡೆದೆ, ಎನ್ನೊಳಗಿದ್ದ ಅಪರಾಧಗಳ ಮರೆದೆ" ಎಂದು ಕಳಕಳಿಯಿಂದ ಕೇಳಿಕೊಂಡಿರುತ್ತಾರೆ.

ಶ್ರೀ ಗೋಪಾಲದಾಸರಿಂದ ಆಯುರ್ದಾನವನ್ನು ಪಡದ ನಂತರ ಶ್ರೀನಿವಾಸಾಚಾರ್ಯರಿಗೆ ಅಂಕಿತವನ್ನು ಪಡೆದು ಹರಿದಾಸ ದೀಕ್ಷೆಯನ್ನು ಹೊಂದಬೇಕೆಂಬ ಪ್ರಬಲ ಹಂಬಲ ಉಂಟಾಯಿತು 'ಅಪರೋಕ್ಷ ಜ್ಞಾನಿಗಳಾಗಿದ್ದ ಶ್ರೀ ಗೋಪಾಲದಾಸರು ಆಚಾರ್ಯರು ಫಂಡರಪುರಕ್ಕೆ ಹೋಗಬೇಕೆಂದೂ, ಅಲ್ಲಿ ಶ್ರೀಹರಿಯ ವರಪ್ರಸಾದ ರೂಪವಾಗಿ ಪಾಂಡುರಂಗನೇ ಅಂಕಿತ ಪ್ರದಾನ ಮಾಡುವನೆಂದೂ ತಿಳಿಸಿದರು'. ಆಚಾರ್ಯರು ಫಂಡರಪುರಿಗೆ ಪಾಂಡುರಂಗನ ದರ್ಶನಕ್ಕಾಗಿ ಧಾವಿಸಿ ಬಂದರು. ಅಲ್ಲಿ ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ, ಅವರ ತಲೆಯ ಹತ್ತಿರ ಒಂದು ಶಿಲಾ ಫಲಕವು ದೊರಕಿತು. ಅದರ ಮೇಲೆ ಜಗನ್ನಾಥವಿಠಲ ಎಂಬ ಅಂಕಿತನಾಮವು ಸ್ಫುಟವಾಗಿ ಮೂಡಿರುವುದನ್ನು ಕಂಡು ಅವರು ಆನಂದ ತುಂದಿಲರಾದರು. ಶ್ರೀ ಗೋಪಾಲದಾಸರಾಡಿದ ಮಾತು, ತಮ್ಮ ಜೀವನದಲ್ಲಿ ಪ್ರತ್ಯಕ್ಷ ನಿದರ್ಶನವಾಗಿ, ಶ್ರೀಹರಿಯು ತೋರಿದ ಕರುಣಾ ವಿಲಾಸಕ್ಕೆ ಆನಂದ ಬಾಷ್ಪಲೋಚನರಾಗಿ, ಜ್ಞಾನ ಮೂರುತಿಯಾದ ಪಾಂಡುರಂಗ ವಿಠಲನನ್ನು ಸ್ಮರಿಸಿ ಮೈ ಮರೆತು, ನರ್ತಿಸಿ.

ವಿಠಲಯ್ಯಾ ವಿಠಲಯ್ಯಾ ಪ

ತಟಿತ್ಕೋಟಿನಿಭಕಾಯ ಜಗನ್ನಾಥ ಅ

ಭಜಿಸುವೆ, ನಿನ್ನನು ಅಜಭವಸುರ ನುತ
ಭಜ ಕಾಮರತರು ಕುಜನ ಕುಠಾರಿ ೧

ನೀ ಕರುಣಿಸದೆ ನಿರಾಕರಿಸಲು ಎನ್ನ
ಸಾಕುವರಾರು ದಯಾಕರ ಮೂರುತಿ ೨

ಶರಣಾಗತರನು ಪೊರೆವೆನೆಂಬ ತವ
ಬಿರುದು ಕಾಣೋ ಕರಿವರದ ಜಗನ್ನಾಥ
ವಿಠಲಯ್ಯಾ ವಿಠಲಯ್ಯಾ ೩
ಎಂದು ಹಾಡಿದರು

ಅನಂತರ ಪಾಂಡುರಂಗನ ದರ್ಶನ ಮಾಡಿ ಹರ್ಷಗೊಂಡು ತಮ್ಮ ಊರಿಗೆ ಹಿಂದಿರುಗಿದರು. ಶ್ರೀನಿವಾಸಾಚಾರ್ಯರಿಗೆ, ಪರಮಾತ್ಮನಿಂದಲೇ ಅಂಕಿತ ದೊರೆತ ಮೇಲೆ ಅವರು ಕನ್ನಡದಲ್ಲಿ ಭಕ್ತಿಸುಧಾಪೂರಿತವಾದ ಕೀರ್ತನೆ, ಸುಳಾದಿ, ಸುವ್ವಾಲಿಗಳನ್ನು ರಚಿಸಲಾರಂಭಿಸಿದರು. ಕಾಲಕಳೆದಂತೆ ಆಚಾರ್ಯರು ಜಗನ್ನಾಥದಾಸರಾಯರೆಂದೇ ಪ್ರಸಿದ್ಧಿಯಾದರು. ಗುರುಗಳ ಆಶೀರ್ವಾದದಿಂದ ಹರಿ ಕರುಣೆಯುಂಟಾಗಿ ಶ್ರೀ ಜಗನ್ನಾಥದಾಸರು ಅಪರೋಕ್ಷ ಜ್ಞಾನಿಗಳಾದರು.

ಬಿಂಬ ಮೂರ್ತಿಯ ದರ್ಶನ ಪಡೆದ ಮೇಲೆ ಲೋಕದ ವಿಚಾರದಲ್ಲಿ ವೈರಾಗ್ಯವೂ ಪರಲೋಕೈಕನಾಥನಲ್ಲಿ ಭಕ್ತಿಯೂ ಅಧಿಕವಾಯಿತು. ಈ ಜ್ಞಾನ ಶಕ್ತಿಯಿಂದ ಶ್ರೀಜಗನ್ನಾಥದಾಸರು ಅನೇಕರನ್ನುದ್ಧಾರ ಮಾಡಿದರು. ರಂಗೋಲಿಯಲ್ಲಿ ಚಿತ್ರವನ್ನು ಬಿಡಿಸುವುದರಲ್ಲಿ ಅತಿ ನಿಪುಣರಾದ ಇವರನ್ನು ರಂಗೋಲಿದಾಸರು ಎಂದೂ ಕರೆಯುವುದುಂಟು, ರಂಗವೊಲಿದ ದಾಸರು ಎಂದೂ ಕರೆಸಿಕೊಂಡರು.

ಒಮ್ಮೆ ದಿವಾನ್ ಪೂರ್ಣಯ್ಯನವರ ಮನೆಯಲ್ಲಿ ಶ್ರೀರಂಗದ ರಂಗನಾಥಸ್ವಾಮಿಯ ಚಿತ್ರವನ್ನು ರಂಗೋಲಿಯಲ್ಲಿ ಬಿಡಿಸಿದರು; ಆದರೆ ಆ ದೇವರಿಗೆ ಕಿರೀಟವನ್ನು ಮಾತ್ರ ಚಿತ್ರಿಸಲಿಲ್ಲ ! ದಿವಾನರು ಇದನ್ನು ಗಮನಿಸಿ ದಾಸರನ್ನು ಪ್ರಶ್ನಿಸಿದಾಗ ಆ ದಿನ ರಂಗನಾಥನಿಗೆ ಕಿರೀಟ ಹಾಕಿಲ್ಲವೆಂದು ದಾಸರು ಉತ್ತರಿಸಿದರು. ದಿವಾನ್ ಪೂರ್ಣಯ್ಯನವರು ಶ್ರೀರಂಗಕ್ಕೆ ದೂತರನ್ನು ಕಳುಹಿಸಿ ವಿಚಾರಿಸಿದಾಗ ಅದು ನಿಜ ಸಂಗತಿಯಾಗಿತ್ತು ! ದಾಸರ ದಿವ್ಯ ಜ್ಞಾನವನ್ನು ತಿಳಿದು ಪೂರ್ಣಯ್ಯನವರು ಆಶ್ಚರ್ಯ ಚಕಿತರಾದರು. ದಿವಾನರು ಶ್ರೀ ಜಗನ್ನಾಥದಾಸರ ಅತಿಶಯ ಜ್ಞಾನ ಶಕ್ತಿಯನ್ನು ತಿಳಿಯುವ ಮುನ್ನ ಅವರಿಗೆ ಐದು ರೂಪಾಯಿ ಮತ್ತು ಮಂಡ್ಯದ ಧಾಬಳಿಯನ್ನು ಕೊಡಬೇಕೆಂದಿದ್ದ ತಮ್ಮ

ನಿರ್ಧಾರವನ್ನು ಪ್ರಧಾನಿಗಳು ಬದಲಾಯಿಸಿ ವಿಶೇಷ ಗೌರವವನ್ನು ಸಲ್ಲಿಸಿದರು; ಆಗ ಶ್ರೀ ಜಗನ್ನಾಥದಾಸರು ತಮಗೆ ಹೆಚ್ಚಿನ ಬಹುಮಾನ ಬೇಡವೆಂದು ಹೇಳಿ ಐದು ರೂಪಾಯಿ ಮತ್ತು ಮಂಡ್ಯದ ಧಾವಳಿ ಮಾತ್ರ ಸಾಕೆಂದು ಹೇಳಿದರಂತೆ!

ಶ್ರೀ ಜಗನ್ನಾಥದಾಸರು ಅಪರೋಕ್ಷ ಜ್ಞಾನಿಗಳೆಂದು ಪ್ರಸಿದ್ಧರಾದ ಮೇಲೆ ಅವರನ್ನು ವ್ಯಂಗ್ಯವಾಗಿ ಆಡಿಕೊಂಡವರೂ ಉಂಟು. ಅಂತಹವರು ದಾಸರ ಬಳಿ ಬಂದು ಅವರನ್ನು ಪರೀಕ್ಷಿಸಿ ಸೋತವರೂ ಇಲ್ಲದಿಲ್ಲ. ಒಮ್ಮೆ ಉಡುಪಿಗೆ ದಾಸರು ಹೋಗಿದ್ದಾಗ ಕುಹಕಿಗಳು ದಾಸರ ಬಳಿ ಮೂಕನೊಬ್ಬನನ್ನು ಕರೆತಂದು ಅವನಿಗೆ ಮಾತು ಬರುವಂತೆ ಮಾಡಬೇಕೆಂದು ಪ್ರಾರ್ಥಿಸಿದರು. ದಾಸರ ಜ್ಞಾನ ದೃಷ್ಟಿಗೆ ವಾಸ್ತವ ವಿಚಾರ ತಿಳಿಯಿತು. ಆಗ ಮೂಕನಿಗೆ ಮಾತನಾಡುವ ಶಕ್ತಿ ದಯಪಾಲಿಸಿ ಕುಹಕಿಗಳನ್ನು ಮೂಕರನ್ನಾಗಿಸಿದರಂತೆ. ಶ್ರೀ ವೆಂಕಟವಿಠಲರು ಒಂದು ಪದದಲ್ಲಿ ಈ ವಿಚಾರವನ್ನು ಹೀಗೆ ಹೇಳಿರುವರು:

ನಿನ್ನ ಮಹಿಮೆ ಘನ್ನವಯ್ಯ । ಗುರು ಶ್ರೀನಿವಾಸ ಪ

ಮೂಕ ಮಂದ ಮತಿಗಳಿಂದ ।
ನೇಕ ಚತುರ ನುಡಿಯ ನುಡಿಸಿ
ಸಾಕಿದ ಗಿಳಿಯಂತೆ ದಯದಿ ।
ವಾಕು ಶುದ್ಧಿಯ ಮಾಡಿದೆ ೧

ಪೊಡವಿಪತಿಯು ಹಾಟಕರದಿ ।
ಅಡವಿಯೊಳಗೆ ಕುಳಿತಿರಲು
ಬಿಡದೆ ಅನ್ನವಸ್ತ್ರವನ್ನಿತ್ತು । ಬಡವ ಬಲ್ಲಿದನೆನಿಸಿದೇ ೨

ಸಂಕಟದಿಂದ ಬಂದ ಜನರ । ಬಿಂಕದಿಂದ ಪಾಲಿಸುವಿ
ವೆಂಕಟ ವಿಠಲರಾಯನ ಪಾದ ।
ಪಂಕಜ ತೋರು ಕರುಣದೀ ೩

ಮಾನವಿಯಲ್ಲಿ ಒಮ್ಮೆ ಕಡು ದರಿದ್ರನೊಬ್ಬನು ಬಂದು ತನ್ನನ್ನು ಉದ್ಧಾರ ಮಾಡಬೇಕೆಂದು ಪ್ರಾರ್ಥಿಸಿದನು. ದಾಸರು ಜ್ಞಾನ ದೃಷ್ಟಿಯಿಂದ ಅವನ ಹಿಂದಿನ ಅನೇಕ ಜನ್ಮಗಳ ಕರ್ಮಗಳನ್ನು ಪರಿಶೀಲಿಸಿದಾಗ ಅವನಿಂದ ಯಾವ ಪುಣ್ಯ ಕರ್ಮವೂ ನಡೆಯದಿದ್ದುದನ್ನು ಅರಿತರು. ಆಗ ಅವನಲ್ಲಿದ್ದ ತಂಬಿಗೆಯನ್ನು ಮಾರಿಸಿ, ಅದರಿಂದ ಬಂದ ಧನದಿಂದ ಪಾನಕ ಮಾಡಿಸಿ ಸತ್ಪಾತ್ರರಿಗೆ ಕೃಷ್ಣಾರ್ಪಣ ಬುದ್ಧಿಯಿಂದ ದಾನ ಮಾಡಿಸಿ ತಾವೂ ಸ್ವೀಕರಿಸಿದರು. ಅಲ್ಲದೆ, ದುರಿತವನ ಕುಠಾರಿ ದುರ್ಜನ ಕುಲವೈರಿ, ಎಂಬ ಶ್ರೀನಾರಸಿಂಹ ಸುಳಾದಿಯನ್ನು ರಚಿಸಿ ಬಡವನಿಗೆ ಉಪದೇಶಿಸಿ ಅದನ್ನು ಪಾರಾಯಣ ಮಾಡಬೇಕೆಂದು ಹೇಳಿದರು. ಆ ವ್ಯಕ್ತಿ ಶ್ರದ್ಧೆಯಿಂದ ಸ್ತೋತ್ರವನ್ನು ಪಾರಾಯಣ ಮಾಡಿ ಕೆಲ ಕಾಲದಲ್ಲಿಯೇ ಸಂಪತ್ತು ಅಧಿಕಾರಗಳನ್ನು ಪಡೆದನು. ಇಂದಿಗೂ ಮೇಲೆ ಹೇಳಿದ ಸುಳಾದಿಯನ್ನು ಪಠಿಸಿ ಅನೇಕರು ಕುತ್ತುಗಳಿಂದ ಪಾರಾಗಿರುವುದುಂಟು.

ಶ್ರೀ ತಂದೆ ವೆಂಕಟೇಶವಿಠಲರು ತಮ್ಮ ಒಂದು ಕೃತಿಯಲ್ಲಿ ಈ ಸುಳಾದಿಯ ಪಠನೆಯಿಂದುಂಟಾದ ಅನುಗ್ರಹವನ್ನು ಹೀಗೆ ತಿಳಿಸಿರುವರು.

ಯಾರೆ ಕೂಗಿದವರು । ಕದವನದಾರೆ ತಾಗಿದವರು ಪ

ಪಾಪ ಶೇಷ ರೋಗ ರೂಪದಿ ತಾಪ ಪಡಿಸುವಾಗ
ದುರಿತವನ ಕುಠಾರಿ ಎಂಬುರುತರ ಸುಳಾದಿ ನಾರೀ
ಪರವಶದಲಿ ಪಠಿಸಿರೆ ಮನ ಒಲಿದದಕರರೆ ಬಂದ
ನರಹರಿ ಎಂಬುವ ಪರಿ ॥

ಭೂಸುರ ಜಗನ್ನಾಥದಾಸರ ಕವನಕೆ ಶ್ರೀನಿವಾಸ
ಅವಸರದಲಿ ಒಂದು ವಿನತನಪರಾಧವನು ಮರೆತು
ಅಭಯವನು ಕರುಣಿಸುತ ॥

ಶ್ರೀ ಜಗನ್ನಾಥದಾಸರು ಹತ್ತೊಂಭತ್ತನೆಯ ಕಕ್ಷದ ಕರ್ಮಜ ದೇವತೆ ಎಂದೇ ಪ್ರಸಿದ್ಧರು. ಪ್ರಹ್ಲಾದನ ಅನುಜನಾಗಿ ಸಹ್ಲಾದನೆನಿಸಿದ ಇವರು ದ್ವಾಪರ ಯುಗದಲ್ಲಿ

ಶಲ್ಯ ಮಹಾರಾಜರಾಗಿ ಅವತರಿಸಿ ಕರ್ಣನಿಗೆ ಸಾರಥಿಯಾಗಿದ್ದರು. ಅಲ್ಲದೆ ಶ್ರೀವ್ಯಾಸರಾಜರು, ಶ್ರೀ ವಾದಿರಾಜರು, ಶ್ರೀ ಪುರಂದರದಾಸರು, ಒಮ್ಮೆ ಪರಮಾತ್ಮನ ಲೀಲಾ ವಿನೋದಗಳನ್ನು ಚಿತ್ರಿಸಿಕೊಳ್ಳುತ್ತಾ ಆನಂದಭಾಷ್ಪವನ್ನು ಸುರಿಸುತ್ತಿರಲು ಕನಕದಾಸರನ್ನು ಅಲ್ಲಿಗೆ ಕರೆಸಿ ಕೊಳ್ಳಬೇಕೆಂದೆನಿಸಿತಂತೆ. ಆಗ ಅಲ್ಲಿಯೇ ಹತ್ತಿರದಲ್ಲಿದ್ದ ಅಪರಿಚಿತ ವ್ಯಕ್ತಿಯನ್ನು ಕರೆದು ಕನಕದಾಸರನ್ನು ಕರೆತರಲು ಹೇಳಿದರು. ಆಗ ಆ ವ್ಯಕ್ತಿ ಕನಕದಾಸರನ್ನು ಕರೆತಂದನು. ದಾರಿಯಲ್ಲಿ ಕನಕದಾಸರು ತಮ್ಮನ್ನು ಕರೆತರುವ ಕಾರ್ಯಕ್ಕಾಗಿ ಯತಿಗಳನ್ನು ಪುರಂದರದಾಸರ ನಗು ಮತ್ತು ಅಳುವಿನಲ್ಲಿ ಕೊಂಚ ಭಾಗವನ್ನು ದಯಪಾಲಿಸಬೇಕೆಂದು ಕೇಳಲು ಆ ವ್ಯಕ್ತಿಗೆ ಹೇಳಿಕೊಟ್ಟರಂತೆ. ಆ ವ್ಯಕ್ತಿ ಅಪರೋಕ್ಷ ಜ್ಞಾನಿಗಳಿಂದ ನಗು ಅಳುವಿನ ಕೊಂಚ ಭಾಗವನ್ನು ಶ್ರೀ ಜಗನ್ನಾಥದಾಸರಾಗಿ ಜನ್ಮ ತಾಳಿದಾಗ ಅನುಭವಿಸಿದರೆಂದು ಐತಿಹ್ಯವಿದೆ. ಪರಮಾತ್ಮನ ವಿಚಾರವನ್ನು ಭಕ್ತಿಯಿಂದ ನೆನೆವವರಿಗೆಲ್ಲಾ ಆನಂದ ಬಾಷ್ಪ ಉಕ್ಕುವುದು ಸಹಜ, ಶ್ರೀ ಜಗನ್ನಾಥದಾಸರು ಭಕ್ತರ ರೀತಿಯನ್ನು ಬಣ್ಣಿಸುತ್ತಾ,

'ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ' ಎಂಬ ಕೃತಿಯಲ್ಲಿ ಹೀಗೆ ಹೇಳಿರುವರು.

ನಗುವರೋ ರೋದಿಸುವರೋ ನಾಟ್ಯವಾಡೋರು
ಬಗೆಯರೋ ಬಡತನ ಭಾಗ್ಯ ಭಾಗವತರು ॥

ಶ್ರೀ ಜಗನ್ನಾಥದಾಸರ ಅವತಾರ ವಿಚಾರವನ್ನು ಅವರ ಅಂತರಂಗ ಶಿಷ್ಯರಾದ ಶ್ರೀಪ್ರಾಣೇಶದಾಸರು ಹೀಗೆ ತಿಳಿಸಿರುತ್ತಾರೆ

ತಿಳಿಯನು ಎಂದೆಂದಿಗನ್ಯ ರಂಗ ಒಲಿದ ದಾಸರು ಜಗನ್ನಾನ್ಯ ಪ

ಹಿರಣ್ಯಕಶಿಪುಜ ಸಹ್ಲಾದನೇವೆ । ಎರಡನೇ ಜನ್ಮ ಶಲ್ಯನಾದ
ಗುರು ವಾದಿರಾಜರನರ್ಚಿಸಿದ ।
ಪುರಂದರ ದಾಸರಾಯರಲ್ಲುದಿಸಿದ

ಶ್ರೀ ಕಮಲಾಪತಿದಾಸರು ಒಂದು ಕೃತಿಯಲ್ಲಿ :

ಅಂಬುಜಾಕ್ಷಿ ಸ್ತಂಭದಿ ಇಹರ್‍ಯಾರೇ। ಸಾರೆ।
ಫಲ್ಲಲೋಚಲ ಬಲೆಯೂ ಇವ । ರಿಲ್ಲಿರುವ ಕಾರಣವಿದೇನೇ
ಫುಲ್ಲನಾಥನ ಪುಡುಕಲೀ । ಪ್ರಹ್ಲಾದನನುಜ
ಸಹ್ಲಾದರಿವರೇ

ಎಂದಿದ್ದಾರೆ;

ಪ್ರಹ್ಲಾದಾವರಜೋ ಯಃ ಸಹ್ಲಾದೋ
ನಾಮಕೋ ಹರೇರ್ಭಕ್ತ ಃ
ಸಮೂರುತಾವೇಶಾತ್ ಪೃಥಿವ್ಯಾಂ ಬಲಾಧಿಕೋ
ಭೂದ್ವರತಶ್ಯಧಾತು ಃ

ಶಲ್ಯಚ್ಛನಾಮ್ನಾ - ಎಂದು ಶ್ರೀ ಮಧ್ವಾಚಾರ್ಯರು, ಸಹ್ಲಾದರೇ ಶಲ್ಯರಾಗಿ ಅವತರಿಸಿದರೆಂದು ತಿಳಿಸಿರುತ್ತಾರೆ.

ಶ್ರೀ ಜಗನ್ನಾಥದಾಸರು ೮೧ ವರ್ಷ ೧ ತಿಂಗಳು ೨ ದಿನಗಳ ಸುದೀರ್ಘ ಬಾಳಿನಲ್ಲಿ ಸತ್ಸಾಧನೆಯನ್ನು ಮಾಡಿ ಕೊಂಡರಲ್ಲದೆ, ಮುಂದಿನ ಸುಜೀವಿಗಳಿಗೆ ದಿವ್ಯ ಮಾರ್ಗವನ್ನು ತೋರಿಸಲು ಶ್ರೀ ಹರಿಕಥಾಮೃತಸಾರವೆಂಬ ಕಾವ್ಯ ರತ್ನವನ್ನೂ ಅನೇಕ ಸುಳಾದಿ, ಕೀರ್ತನೆ ತತ್ವ ಸುವಾಲಿಗಳನ್ನು ರಚಿಸಿದರು. ಇವರ ಸಾಹಿತ್ಯರಾಶಿ ಉಳಿದು ಬಂದಿರುವುದು, ಸುಜೀವಿಗಳ ಪುಣ್ಯವೆನಿಸುತ್ತದೆ. ಇವರು ಶಾಲೀವಹನಶಕ ೧೭೩೧ನೆಯ ಶುಕ್ಲ ನಾಮ ಸಂವತ್ಸರದ ಭಾದ್ರಪದ ಶುದ್ಧ ನವಮಿಯ ಭಾನುವಾರದ ದಿನ ಮೂಲಾ ನಕ್ಷತ್ರದಲ್ಲಿ ರಾತ್ರಿ ೮-೩೦ ಗಂಟೆಗೆ [೧೭-೯-೧೮೦೯] ಹರಿಪುರವನ್ನು ಸೇರಿದರು.

ತೆರಳಿದರು ಶ್ರೀ ಜಗನ್ನಾಥದಾಸಾರ್ಯರು
ಸಿರಿ ಪತಿಯ ಸ್ಮರಿಸಿ ಹರಿಪುರಕೆ ಹರುಷದಲಿ ಪ

ವರ ಶುಕ್ಲ ವತ್ಸರದ ಭಾದ್ರಪದ ಸಿತ ಪಕ್ಷ
ಹರಿವಾರ ನವಮಿಯಲ್ಲಿ

ಪುರಸಿದ್ಧ ಸಾಧ್ಯ ಸನ್ಮುನಿ ಗಣಾರ್ಚಿತ ಪಾದ
ಹರಿಯೆ ಪರನೆಂದೆನುತಲಿ
–ಶ್ರೀದ ವಿಠಲರು

ಮೋಕ್ಷ ಶುಕ್ಲ ವರುಷ ಶುಕ್ಲಪಕ್ಷ ಭಾದ್ರಪದ ನವಮಿ
ದಕ್ಷಿಣಾಯನದಿ ಮೂಲ ನಕ್ಷತ್ರ ರವಿವಾರ ರಾತ್ರಿಯಂದು
ಲಕ್ಷ್ಯವಿಟ್ಟು ಲಯದ ಚಿಂತನಾ
ತತ್‍ಕ್ಷಣ ಅಭಿನವ ಜನಾರ್ದನ ವಿಠಲನಲ್ಲಿ
ದೀಕ್ಷೆ ಪಡೆದು ನಡೆದರಾಕ್ಷಣ ಭಕುತಿಯಿಂದ
ಈ ಕ್ಷೋಣಿ ಬಿಟ್ಟು ಇಂದೆ ತಾ ಕ್ಷೇಮದಿಂದ ಮುದದಿ
ನಗುನಗುತಲೆ ಹರಿಯಪುರಕೆ ತೆರಳಿ ಪೋದರು ॥
–ಶ್ರೀ ಅಭಿನವ ಜನಾರ್ದನ ವಿಠಲದಾಸರು

ಶ್ರೀ ಜಗನ್ನಾಥದಾಸರು ವಾಸಿಸುತ್ತಿದ್ದ ಮಾನ್ವಿಯ ಮನೆ ಇಂದು ಗುಡಿಯಾಗಿದೆ. ಆ ಗುಡಿಯಲ್ಲಿ ದಾಸರು ಹಿಂದೆ ಒರಗಿ ಕುಳಿತು ಹರಿದಾಸ ಸಾಹಿತ್ಯವನ್ನು ರಚಿಸುತ್ತಿದ್ದ ಕಂಬದಲ್ಲಿಯೇ ಅವರು ಸನ್ನಿಹಿತರಾಗಿರುವರೆಂದು ಇಂದಿಗೂ ಕಂಬಕ್ಕೆ ಭಕ್ತರು ಪೂಜೆ ಸಲ್ಲಿಸಿ ಕೃತಾರ್ಥರಾಗುವರು.

ಶೋಕ ಬ್ಯಾಡಲೆ ನರಲೋಕ ಉಳಿದರೆಂದು
ಈ ಕಂಭದೊಳಗಿಹರೇ । ಹೇ ನೀರೇ
ಎಂದು ಶ್ರೀ ಪ್ರಾಣೇಶದಾಸರು ಹೇಳಿರುತ್ತಾರೆ
ದಿಟ್ಟ ಜಗನ್ನಾಥ ವಿಠ್ಠಲ ಮೂರ್ತಿಯ
ಘಟ್ಯಾಗಿ ಮನದೊಳಗಿಟ್ಟುಕೊಂಡು
ದಟ್ಟದಿ ಸ್ವಾಂಶವ ಇಟ್ಟು ಕಂಭದಿ ಪೋದ
ಧಿಟ್ಟ ಗುರುಜಗನ್ನಾಥ ವಿಠ್ಠಲ ದೂತ

ಎಂದು ಶ್ರೀ ಗುರು ಜಗನ್ನಾಥವಿಠಲರು ಮಾನ್ವಿಯ ಕಂಭದಲ್ಲಿ ಶ್ರೀ ಜಗನ್ನಾಥದಾಸರನ್ನು ಕೊಂಡಾಡಿದ್ದಾರೆ.

ಕೃತಿಗಳ ಅವಲೋಕನ

ಶ್ರೀ ಹರಿಕಥಾಮೃತಸಾರ

ಶ್ರೀ ಮದಾನಂದತೀರ್ಥರು ಸಂಸ್ಕೃತದಲ್ಲಿ ಪ್ರತಿಪಾದಿಸಿದ ದ್ವೈತ ಸಿದ್ಧಾಂತದ ತತ್ವಗಳನ್ನು ಕನ್ನಡ ಭಾಷೆಯಲ್ಲಿ ಬೋಧಿಸುವ ಛಂದೋ ವೈವಿಧ್ಯವುಳ್ಳ ಸಂಗೀತದ ತಾಳಲಯಗಳ [illegible]ವು ಪಡೆದು ಸುಮಧುರವೂ ಸುಶ್ರಾವ್ಯವೂ ಆದ ಸಂಕೀರ್ತನ ಸಾಹಿತ್ಯವೇ – ಹರಿದಾಸ ಸಾಹಿತ್ಯ. ಕರ್ಣಾಟಕದ ಹರಿದಾಸ ಸಾಹಿತ್ಯ ಒಂದು ಪುಷ್ಪವೃಕ್ಷ, ದ್ವೈತ ಸಿದ್ಧಾಂತ ಗ್ರಂಥಗಳನ್ನೇ ಬೇರಾಗಿ, ಅವುಗಳ ಟೀಕೆ, ಟಿಪ್ಪಣಿ ಗ್ರಂಥಗಳೇ ಕಾಂಡವಾಗುಳ್ಳ ಇಲ್ಲಿ ಸಾವಿರಾರು ಸುಂದರ ಭಕ್ತಿ ಪುಷ್ಪಗಳು ಅರಳಿವೆ. ಹರಿದಾಸರ ಅನುಭವಪೂರ್ಣವಾದ ಸದುಕ್ತಿಗಳು, ವೇದ, ಉಪನಿಷತ್ತು, ರಾಮಾಯಣ, ಭಾರತ ಭಾಗವತಾದಿ ಪುರಾಣಗಳ ದ್ವೈತ ಸಿದ್ಧಾಂತದ ಸಾರಭೂತ ಸಾಹಿತ್ಯವಿಲ್ಲಿದೆ. ಸಂಸ್ಕೃತ ಭಾಷೆಯ ಜ್ಞಾನವಿಲ್ಲದ ಕನ್ನಡಿಗರು, ಶ್ರೀ ಮದಾನಂದತೀರ್ಥರು ತಿಳಿಸಿದ ತತ್ವಸಾರವನ್ನು ಹರಿದಾಸ ಸಾಹಿತ್ಯದ ನೆರವಿನಿಂದ ಅರಿತುಕೊಳ್ಳಬಹುದಾಗಿದೆ. ಇಂತಹ ಮಹತ್ಕಾರ್ಯವನ್ನು ಶ್ರೀ ಶ್ರೀ ಪಾದರಾಜರು ಕ್ರಿ.ಶ.೧೫ನೆಯ ಶತಮಾನದಲ್ಲಿಯೇ ಆರಂಭಿಸಿ ಅದರೊಡನೆ ದಾಸ ಪರಂಪರೆಯನ್ನು ಬೆಳೆಸಿದರು, ಶ್ರೀ ಪಾದರಾಜರು ಶ್ರೀ ವ್ಯಾಸರಾಜರು, ಶ್ರೀ ವಾದಿರಾಜರು, ಶ್ರೀ ಪುರಂದರದಾಸರು, ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರೇ ಮೊದಲಾದ ಪ್ರಮುಖ ಹರಿದಾಸರು ಈ ತತ್ವವಾದವನ್ನು ಬಿಡಿ ಬಿಡಿ ಪದ್ಯಗಳಲ್ಲಿ ಹೇಳಿರುವವರಾದರೆ, ಶ್ರೀ ಜಗನ್ನಾಥದಾಸರು ಈ ವಿಚಾರವನ್ನು ಕಾವ್ಯದ ಚೌಕಟ್ಟಿನಲ್ಲಿ ಸುಂದರವಾಗಿ ಷಟ್ಪದಿ ಛಂದಸ್ಸಿನಲ್ಲಿ ಶ್ರೀ ಹರಿಕಥಾಮೃತಸಾರದ ಮೂಲಕ ತಿಳಿಸಿರುತ್ತಾರೆ. ಅತ್ಯುದಾತ್ತ ಮಹಾಚೇತನವೊಂದರ ಸತತ ಸಾಧನೆಯ ಫಲವಾಗಿ ಹೊಮ್ಮಿರುವ ಈ ಅನರ್ಘ್ಯ ಕೃತಿಯ ಮೂವತ್ತೆರಡು ಸಂಧಿಗಳ ೯೮೮ ಷಟ್ಪದಿಗಳಲ್ಲಿ, ದ್ವೈತ ಸಿದ್ಧಾಂತವನ್ನು ಲೌಕಿಕ, ಪಾರಮಾರ್ಥಿಕ ದೃಷ್ಟಾಂತಗಳಿಂದ ಬಹು ಗಂಭೀರವಾಗಿಯೂ, ರಸವತ್ತಾಗಿಯೂ ಶ್ರೀ

ಜಗನ್ನಾಥದಾಸರು ನಿರೂಪಿಸಿರುತ್ತಾರೆ. ಪದಗಳ ಪ್ರೌಢಿಮೆ, ಕವಿತಾ ಕೌಶಲ, ಅತೀಂದ್ರಿಯ ವಸ್ತುಗಳ ಅನುವಾದ; ಒಂದೇ ವಿಷಯವನ್ನು ಅತಿ ಸಂಕ್ಷಿಪ್ತ, ಬಹು ವಿಸ್ತಾರ ರೂಪಗಳಿಂದ ವಿವರಿಸಿರುವ ಅಪಾರ ಜ್ಞಾನಶಕ್ತಿ, ಇದೇ ಮೊದಲಾದ ಅಸದೃಶ ಅಪೂರ್ವ ಗುಣಗಳಿಂದ ಈ ಗ್ರಂಥ ಶೋಭಿಸುತ್ತಿದೆ.

ಶ್ರೀ ಜಗನ್ನಾಥದಾಸರು ಈ ಕೃತಿಯ ಪಲ್ಲವಿಯಲ್ಲಿಯೇ ಕಾವ್ಯದ ವಿಷಯ, ಅಧಿಕಾರಿ, ಪ್ರಯೋಜನ ಮತ್ತು ಸಂಬಂಧಗಳನ್ನು ತಿಳಿಸಿದ್ದಾರೆ. ಅಮೃತ ಸದೃಶವಾದ ಪರಮಾತ್ಮನ ಕಥೆಯ ಸಾರ ಇದರ ವಸ್ತು. ಪರಮ ಭಗವದ್ಭಕ್ತರೇ ಇದಕ್ಕೆ ಅಧಿಕಾರಿಗಳು; ಗುರುಕರುಣವೇ ಪ್ರಯೋಜನ ಮೋಕ್ಷ. ಈ ಕಥೆಯನ್ನು ಆದರದಿ ಕೇಳುವುದು – ಸಂಬಂಧವೆನ್ನಬಹುದು; ಹರಿಕಥಾಮೃತಸಾರ ಎಂಬ ಪದದಲ್ಲಿಯೇ ಶ್ರೀ ಜಗನ್ನಾಥದಾಸರು ತಾರತಮ್ಯಾತ್ಮಕವಾಗಿ ಹರಿಗುರುಗಳ ಸ್ತೋತ್ರ ಮಾಡಿ ತನ್ಮೂಲಕ ಮಧ್ವ ಸಿದ್ಧಾಂತದ ಅಡಿಗಲ್ಲೆನಿಸಿದ, ತಾರತಮ್ಯ ವಿಚಾರವನ್ನೇ ಮಾರ್ಮಿಕವಾಗಿ ತಿಳಿಸಿದ್ದಾರೆ.

ಹರಿ	=	ಸರ್ವೋತ್ತಮನಾದ ಸಕಲ ಜೀವರ ಬಿಂಬ ಮೂರ್ತಿ.
ಹರಿಕಥಾ	=	ಪರಮಾತ್ಮನ ಕಥೆಯನ್ನು ಸರಿಯಾಗಿ ತಿಳಿಸುವ ವೇದಗಳು; ಈ ವೇದಗಳಿಗೆ ಅಭಿಮಾನಿ ಲಕ್ಷ್ಮೀಯಾಗಿರುವುದರಿಂದ = ಹರಿಕಥಾ ಎಂದರೆ ಲಕ್ಷ್ಮೀ ಎಂದು ಅರ್ಥವಾಗುತ್ತದೆ.
ಅಮೃತ	=	ವಾಯುದೇವರಿಗೆ ಅಮೃತ ಎಂಬ ಹೆಸರುಂಟು, ಆದುದರಿಂದ ಹರಿಕಥಾಮೃತ ಎಂಬ ಪದದಲ್ಲಿ ತಾರತಮ್ಯದಲ್ಲಿ ಹರಿ ಹಾಗೂ ಲಕ್ಷ್ಮೀಯ ತರುವಾಯ ಬ್ರಹ್ಮ ವಾಯುಗಳು ಎಂದು ಸೂಚಿಸಿದ್ದಾರೆ.
ಸಾರ	=	ಸೃ ಪದದಿಂದ ಉಂಟಾದ ಸಾರ ಶಬ್ದಕ್ಕೆ ಮುಂದುವರಿ

ಎಂಬರ್ಥವುಂಟು. ಶೇಷ ದೇವರು ಸರಿಯುವಂತಹ
ವರು ಅಂದ ಮೇಲೆ ಗರುಡ ಶೇಷರುದ್ರರನ್ನು ಈ
ಪದದಿಂದ ತಿಳಿದಂತಾಯಿತು. ಅಲ್ಲದೆ ಸೃ ಎಂದರೆ
ಸೃಷ್ಟಿಯೂ ಹೌದು. ಪರಮಾತ್ಮನಿಂದ ಸೃಷ್ಟಿಯಾದ
ಸಮಸ್ತ ಸುಜೀವರ ತಾರತಮ್ಯ ಹೀಗೆಂಯೇ
ಸರಿಯುವುದೆಂಬ ಅರ್ಥವನ್ನು ಹೇಳಬಹುದು.

ಹೀಗೆ,

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು.

ಎಂಬ ಮೊದಲ ಪಲ್ಲವಿಗೆ ಇನ್ನೂ ವಿಶೇಷಾರ್ಥಗಳನ್ನು ಹೇಳಲು ಸಾಧ್ಯವಿದೆ ಎಂದ ಮೇಲೆ ಈ ಗ್ರಂಥದ ಮುಂದಿನ ಪದ್ಯಗಳು ವ್ಯಾಖ್ಯಾನ ಸಾಪೇಕ್ಷ ವಾದುವೆಂಬುದರಲ್ಲಿ ಸಂಶಯವೇ ಇಲ್ಲ. ಆದುದರಿಂದಲೇ ಈ ಕೃತಿಯನ್ನು ಕುರಿತು, ಶ್ರೀ ಸಂಕರ್ಷಣ ಒಡೆಯರು, ಶ್ರೀ ಪದ್ಮನಾಭದಾಸರು, ಶ್ರೀ ಕಮಲಾಪತಿದಾಸರು ವ್ಯಾಖ್ಯಾನಗಳನ್ನು ರಚಿಸಿದರು.

ಅಧ್ಯಾತ್ಮ ವಿಚಾರಗಳೆಲ್ಲವೂ ಒಂದು ಕೃತಿಯಲ್ಲಿ ಕ್ರೋಢೀಕೃತವಾಗಿರುವುದು ಯಾವ ಭಾಷೆಯಲ್ಲಿಯಾದರೂ ವಿರಳವಾದುದು. ಶ್ರೀ ಹರಿಕಥಾಮೃತಸಾರದಲ್ಲಿ ಪರಮಾತ್ಮನ ಸೃಷ್ಟ್ಯಾದಿ ಅಷ್ಟಕರ್ತೃತ್ವ, ಸರ್ವೋತ್ತಮತ್ವ, ವ್ಯಾಪ್ತತ್ವ, ಹರಿ ಕಾರುಣ್ಯ ದೇವದೈತ್ಯ ತಾರತಮ್ಯ, ಜೀವರ ಸಾಧನೆಯ ಕ್ರಮ, ಭಕ್ತಿಯ ಪ್ರಾಶಸ್ತ್ಯ, ಧ್ಯಾನಕ್ರಮ, ಬಿಂಬಾಪರೋಕ್ಷ, ದತ್ತ ಸ್ವಾತಂತ್ರ್ಯ ಮೊದಲಾದ ವಿಚಾರಗಳನ್ನು ಯುಕ್ತಿ ಯುಕ್ತವಾಗಿ ಕಾವ್ಯ ಶೈಲಿಯಲ್ಲಿ ತಿಳಿಸಲಾಗಿದೆ. ಶ್ರೀ ಹರಿಕಥಾಮೃತಸಾರ ವೇದಾಂತದ ವಿಶ್ವಕೋಶ. ಹರಿಕಥೆಯ ಅಮೃತಸಾರ ಎಂದರೆ ಸಾರಾಮೃತ–ಅಣುಸುಧಾ ಎಂದೇ ಹೇಳಬೇಕು.

ಯುಕ್ತಿ ಮಾತುಗಳಲ್ಲ ಶ್ರುತಿಸ್ಮೃ
ತ್ಯುಕ್ತಿ ಮಾತುಗಳಿವು ವಿಚಾರಿಸೆ
ಮುಕ್ತಿಗಿವು ಸೋಪಾನವೆನಿಪುವು ಪ್ರತಿ ಪ್ರತಿ ಪದವು.
ಭಕ್ತಿ ಪೂರ್ವಕ ಪಠಿಸುವವರಿಗೆ
ವ್ಯಕ್ತಿ ಕೊಡುವ ಸ್ವರೂಪ ಸುಖ ಪ್ರವಿ
ವಿಕ್ತರನು ಮಾಡುವನು ಭವಭಯದಿಂದ ಬಹುರೂಪಾ
ಎಂಬ ಶ್ರೀ ಜಗನ್ನಾಥದಾಸರ ಮಾತು ಅಕ್ಷರಶಃ ನಿಜವಾದುದು.

ಶ್ರೀ ಹರಿಕಥಾಮೃತಸಾರ ಕೃತಿಯನ್ನು ಓದಿದವರಿಗೆ ದೊರೆಯುವ ಫಲವನ್ನು ದಾಸರು ಈ ಕೃತಿಯಲ್ಲಿ ಹೇಳಿರುವುದರೊಡನೆ ಕೀರ್ತನೆಯೊಂದರಲ್ಲಿಯೂ ಧ್ವನ್ಯಾತ್ಮಕವಾಗಿ ಸೂಚಿಸಿರುವಂತಿದೆ:

ತಾರಕವಿದು ಹರಿಕಥಾಮೃತಸಾರ ಜನಕೆ ಪ

ಘೋರತರ ಅಪಾರ ಸಂಸಾರವೆಂಬ ನವಶರಧಿಗೆ ಅ.ಪ

ಶ್ವಾನ ಸೂಕರಾದಿ ನೀಚ ಯೋನಿಗಳಲಿ ಬಂದು ನೊಂದು
ವೈನತೇಯ ವಾಹನ ಸನ್ನಿಧಾನ ಬೇಕು ಎಂಬವರಿಗೆ ೧

ಪ್ರೀಯ ವಸ್ತುಗಳೊಳು ಪಾಂಡವೇಯ
ಸಖನೆ ಎಮಗೆ ಬ್ರಹ್ಮ
ವಾಯು ಉಚ್ಚ ಸುರರು ತಂದೆ
ತಾಯಿಯೆಂದರಿತವರಿಗೆ ೨

ಶ್ರೀ ಮುಕುಂದ ಸರ್ವಮಯ ಸ್ವಾಮಿ ಅಂತರಾತ್ಮ ಪರಂ
ಧಾಮ ಧೀನಬಂಧು ಪುಣ್ಯನಾಮವೆಂದರಿತವರಿಗೆ ೩

ಜ್ಞೇಯ ಜ್ಞಾನ ಜ್ಞಾತೃ ಬಾದಾರಾಯಣಾಖ್ಯ ಹರಿಯ ವಚನ
ಕಾಯ ಮನದಿ ಮಾಡ್ದ ಕರ್ಮ ಶ್ರೀಯರಸನಿಗೀವರಿಗೆ ೪

ಭೂತ ಭವ್ಯ ಭವತ್ಪ್ರಭು ಅನಾಥ ಜನರ ಬಂಧು ಜಗ
ನ್ನಾಥವಿಠಲ ಪಾಹಿಯೆಂದು ಮಾತು ಮಾತಿಗೆಂಬುವರಿಗೆ ೫

ಈ ಪ್ರಾಸಾದಿಕ ಗ್ರಂಥವನ್ನು ಶ್ರೀ ಜಗನ್ನಾಥದಾಸರಾಯರು ರಚಿಸುವಾಗ ವರ್ಣಾಭಿಮಾನಿ ದೇವತೆಗಳು ಅಹಮಹಮಿಕೆಯಿಂದ ತಾವಾಗಿಯೇ ಮುಂದೆ ಬರುತ್ತಿದ್ದರಲ್ಲದೆ, ಶ್ರೀ ವ್ಯಾಸರಾಜರು, ಶ್ರೀ ಪುರಂದರದಾಸರು, ಶ್ರೀ ವಾದಿರಾಜರ ವಿಶೇಷ ಅನುಗ್ರಹಗಳಿಂದ ರಚನೆ ಮಾಡಿದರೆಂದು ಶ್ರೀದವಿಠಲರು ತಿಳಿಸಿರುತ್ತಾರೆ:

ವ್ಯಾಸ್ಯತೀರ್ಥರ ಒಲವೂ ವಿಠಲೋ
ಪಾಸಕ ಪ್ರಭುವರ್ಯ ಪುರಂದರ
ದಾಸರಾಯರ ದಯವೊ ತಿಳಿಯದು ಓದಿ ಕೇಳದಲೆ

ಕೇಶವನ ಗುಣಮಣಿಗಳನು ಪ್ರಾ
ಣೇಶಗರ್ಪಿಸಿ ವಾದಿರಾಜರ
ಕೋಶಕೊಪ್ಪುವ ಹರಿಕಥಾಮೃತಸಾರ ಪೇಳಿದರು.

ಆದುದರಿಂದಲೇ ಅವರವರ ಜ್ಞಾನದ ಪಾರಕ್ಕನುಗುಣವಾಗಿ ಅರ್ಥ ವಿಶೇಷವನ್ನು ಆನಂದಗೊಳಿಸುವ ಮಹತ್ಕೃತಿ ಶ್ರೀಹರಿಕಥಾಮೃತಸಾರ ರೂಪವಾಗಿ ಶ್ರೀ ಜಗನ್ನಾಥವರ್ಯರಿಂದ ಪ್ರಕಾಶಿತವಾಯಿತು.

ಕೀರ್ತನೆಗಳು

ಶ್ರೀ ಜಗನ್ನಾಥದಾಸರು, ರಚಿಸಿರುವ ಕೀರ್ತನೆಗಳಲ್ಲಿ ಸುಮಾರು ೨೦೦ ದೊರೆತು ಮುದ್ರಣವಾಗಿವೆ. ಈ ಕೀರ್ತನೆಗಳಲ್ಲಿ ಸ್ತೋತ್ರ ರೂಪವಾದುವು ಹೆಚ್ಚಾಗಿವೆ. ಭಗವದ್ಭಕ್ತಿಯಿಂದ ಒಡಮೂಡಿರುವ ಈ ಕೀರ್ತನೆಗಳನ್ನು ಹಾಡಿದಾಗ ಆಗುವ ಆನಂದ ಅಪಾರ. ಪರಮಾತ್ಮನನ್ನು ಅವರು ಪೂಜಿಸುವ ಪರಿ ಅನನ್ಯವಾದುದು.

ಪ್ರಕೃತಿಯ ಒಂದೊಂದು ಲೀಲೆಯನ್ನು ನೆನೆದು ತನ್ಮೂಲಕವಾಗಿ ಅವರು ಪೂಜಿಸುವ ವೈಖರಿ ಬೆರಗುಗೊಳಿಸುವಂತಹುದಾಗಿದೆ.

ಅರಿತವರಿಗತಿ ಸುಲಭ ಹರಿಯ ಪೂಜೆ
ಅರಿಯದವ ನಿರ್ಭಾಗ್ಯತರ ಲೋಕದೊಳಗೆ ಪ

ಹೈಮಾಂಡ ಮಂಟಪವು ಭೂಮಂಡಲವೆ ಪೀಠ
ಸೋಮ ಸೂರ್ಯರೇ ದೀಪ, ಭೂರುಹಗಳು
ಚಾಮರಗಳತಿವ್ಯೋಮ ಮಂಡಲ ಛತ್ರ
ಯಾಮಾಷ್ಟಕಗಳಷ್ಟದಳದ ಪದ್ಮವುಯೆಂದು ೧

ಮಳೆಯೆ ಮಜ್ಜನವು ದಿಗ್ವಲಯಂಗಳೇ ವಸನ
ಮಲಯಜಾಲವೆ ಶ್ರೀಗಂಧ ಧೂಪಾ
ಇಳೆಯೊಳಗೆ ಬೆಳೆದ ಧಾನ್ಯಗಳೆಲ್ಲ ನೈವೇದ್ಯ
ಥಳ ಥಳಿಪ ಮಿಂಚು ಕರ್ಪೂರದಾರತಿಗಳೆಂದು ೨

ನಕ್ಷತ್ರ ಮಂಡಲವೆ ಲಕ್ಷ ದೀಪಾವಳಿಯು
ದಕ್ಷಿಣೋತ್ತರ ಅಯನಗಳೆ ಬನವು
ವೃಕ್ಷವಲ್ಲಿಜ ಸುಫಲ ಪುಷ್ಪಗಳೊಳಗೆ ಲಕ್ಷ್ಮೀ
ವಕ್ಷ ವ್ಯಾಪಕನಾಗಿ ತಾನೆ ಭೋಗಿಪನೆಂದು ೩

ಗುಡುಗು ಸಪ್ತ ಸಮುದ್ರ ಸಿಡಿಲು ಘೋಷವೆ ವಾದ್ಯ
ಪೊಡವಿಪರಿಗೀವ ಕಪ್ಪವೆ ಕಾಣಿಕೆಗಳು
ಉಡುಪ ಭಾಸ್ಕರರ ಮಂಡಲಗಳಾದರ್ಶಗಳು
ನಡೆವ ನಡೆಗಳು ಹರಿಗೆ ಬಿಡದೆ ನರ್ತನವೆಂದು ೪

ಹೀಗೆ ಸಾಗುವ ಏಳು ನುಡಿಗಳ ಈ ಪದ್ಯವು ದಾಸರ ಪ್ರತಿಭೆ ಮತ್ತು ಜ್ಞಾನದ ಪರಮ ಸಂಕೇತವಾಗಿದೆ. ಪರಮಾತ್ಮನ ವಿರಾಡ್ರೂಪಕ್ಕೆ ಅಭಿಷೇಕ ಪೂಜೆ, ನಮಸ್ಕಾರ, ಮಂಗಳಗಳೆಲ್ಲವೂ ಪ್ರಪಂಚದಲ್ಲಿ ನಡೆಯುವ ಸರ್ವ ವ್ಯಾಪಾರಗಳು ಎಂಬ ಭವ್ಯ ರೂಪಕದಂತಹ ಕೀರ್ತನೆ ಹರಿದಾಸ ಸಾಹಿತ್ಯದಲ್ಲಿಯೇ ವಿಶಿಷ್ಟ ರಚನೆಯೆನ್ನಬಹುದು.

ಆದರ್ಶ ಭಕ್ತರ ನಿಲುವನ್ನು ಶ್ರೀ ಜಗನ್ನಾಥದಾಸರು ತುಂಬ ಚೆನ್ನಾಗಿ ತಿಳಿಸಿರುತ್ತಾರೆ. :

ಬೇಡಲೇತಕೋ ಪರರ ದೇಹಿಯೆಂದು
ನೀಡುವ ದೊರೆ ಎನಗೆ ನೀನಿರಲು ಸರ್ವದಾ ಪ

ಕಲ್ಪ ಕಲ್ಪಗಳಲ್ಲಿ ವಿಶ್ವಜೀವರಿಗನ್ನ
ಕಲ್ಪಕನು ನೀನಿರಲು, ಭ್ರಾಂತಿಯಿಂದ
ಅಲ್ಪಮಾನವರಿಗಾಲ್ಪರಿದರೇನಹುದಹಿ
ತಲ್ಪ ಜಗನ್ನಾಥ ವಿಠ್ಠಲ ಕಲ್ಪತರುವಿರಲು ॥

ಈ ಅಭಿಪ್ರಾಯವನ್ನೇ ದಾಸರು ತತ್ವ ಸುವಾಲಿಯಲ್ಲಿಯೂ ತಿಳಿಸಿದ್ದಾರೆ. "ಅಶನವಸನಗಳೀವ ವಸುದೇವ ಸುತನಿರಲು ಹುಸಿಯಾಗಿ ಬಾಳುವ ನರರಿಗಾಲ್ಪರಿದರೆ ಹಸಿವೆ ಅಡಗುವುದೆ ಎಲೆ ಜೀವ ?" ಎಂಬ ಮಾತು ಸಾರ್ಥಕವಾದುದು. ಭಕ್ತನಾದವನು ಭವವಿಮುಕ್ತನಾಗಲು ಪರಮಾತ್ಮನನ್ನು ಎಲ್ಲ ಕಾಲದಲ್ಲಯೂ ಸ್ಮರಿಸಬೇಕು. ಆಗ ಅವನನ್ನು ಲೋಕದ ಯಾವ ಶಕ್ತಿಗಳು

ಭಯಗೊಳಿಸಲಾರವು. "ಆವ ಭಯವಿಲ್ಲ ಪರಾವರೇಶನ ಸಕಲ । ಠಾವಿನಲಿ ಚಿಂತಿಸುವ ಭಾವಜ್ಞರಿಗೆ" ಎಂದು ದಾಸರು ಧೈರ್ಯ ಹೇಳಿರುವರು.

ಶ್ರೀ ಜಗನ್ನಾಥದಾಸರು ಮಾಧ್ವಯತಿ ಪರಂಪರೆಯನ್ನು, 'ಸ್ಮರಿಸು ಗುರು ಸಂತತಿಯನು' ಎಂಬ ಕೀರ್ತನೆಯಲ್ಲಿ ಸ್ತುತಿಸಿರುವರು. ಇತಿಹಾಸವನ್ನರಿಯುವ ದೃಷ್ಟಿಯಿಂದ ಈ ಕೃತಿ ಮುಖ್ಯವಾಗಿದೆ ಎನ್ನಬಹುದು. ಶ್ರೀ ರಾಘವೇಂದ್ರರಲ್ಲಿ ಭಕ್ತಿ ಹೊಂದಿದ್ದ ದಾಸರು, ರಾಯರನ್ನು ಕುರಿತು,

"ಶ್ರೀ ರಾಘವೇಂದ್ರಾ ನಿಮ್ಮ ಚಾರು ಚರಣವ ; ಶ್ರೀ ರಾಘವೇಂದ್ರ ಬಾರೋ ವಂದಿಸುವೆ ಗುರುರಾಘವೇಂದ್ರಾ, ರಾಘವೇಂದ್ರ ಯತಿ ಸಾರ್ವಭೌಮ; ರಾಘವೇಂದ್ರ ರಾಜಿತ ಗುಣ ಸಾಂದ್ರಾ: ರೋಗಹರನೇ ಕೃಪಾಸಾಗರ ಶ್ರೀ ಗುರು ರಾಘವೇಂದ್ರ, ವಂದಿಸುವೆ ಗುರು ರಾಘವೇಂದ್ರಾರ್ಯರಾ, ಪೊಂದಿ ಬದುಕಿರೋ ರಾಘವೇಂದ್ರರಾಯರ; ಕರುಣಿಗಳೊಳಗೆಣಿಗಾಣೆನೋ ನಿನಗೆ ಸದ್ಗುರುವರ ರಾಘವೇಂದ್ರಾ", ಮೊದಲದ ಭಕ್ತಿಭರಿತ ಕೃತಿಗಳನ್ನು ರಚಿಸಿದ್ದಾರೆ.

ಶ್ರೀ ಜಗನ್ನಾಥದಾಸರು ತಮ್ಮ ಕಾಲದಲ್ಲಿಯೇ ಇದ್ದ ಶ್ರೀವ್ಯಾಸತತ್ವಜ್ಞರು, ಶ್ರೀ ಗೋಪಾಲದಾಸರು ಮತ್ತು ಶ್ರೀ ವಿಜಯದಾಸರನ್ನು ಕುರಿತು ಹಾಡಿರುವ ಕೃತಿಗಳಿಂದ ಅವರವರ ವ್ಯಕ್ತಿತ್ವದ ಪರಿಚಯ ಉಂಟಾಗುತ್ತದೆ. ಪರಮಾತ್ಮನ ವಿವಿಧ ಅವತಾರ, ರೂಪಗಳ ವರ್ಣನಾತ್ಮಕವಾದ, ಸ್ತೋತ್ರ ರೂಪವಾದ ಸುಮಾರು ಎಂಭತ್ತು ಕೀರ್ತನೆಗಳನ್ನು ದಾಸರು ರಚಿಸಿದ್ದಾರೆ. ಇವುಗಳಲ್ಲಿ ತತ್ತ್ವಾರ್ಥಗರ್ಭಿತವೂ, ಪ್ರೌಢವೂ ಸಾಮಾನ್ಯ ಜನರಿಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವ ಅರ್ಥ ಪರಂಪರೆಯನ್ನು ಹೊಂದಿರುವ ಕೀರ್ತನೆ ಎಂದರೆ, 'ಶ್ರೀ ವೇಂಕಟ ಶೈಲಾಧಿಪ ನಮೋ' ಎಂಬ ಕೃತಿಯಾಗಿದೆ. ಶ್ರೀ ಜಗನ್ನಾಥದಾಸರ ಸಂಸ್ಕೃತ ಭಾಷೆಯ ಪಾಂಡಿತ್ಯ ಇಲ್ಲಿ ನಿರರ್ಗಳವಾಗಿ ಹರಿದಿರುವುದು ಕಂಡು ಬರುತ್ತದೆ. ಇವರು ರಚಿಸಿರುವ 'ದಾಸೋಹಂ ತವ ದಾಸೋಹಂ' ಎಂಬ ಕೀರ್ತನೆಯು ಮತ್ತೊಂದು ಅನರ್ಘ್ಯ ಕೃತಿಯಾಗಿದೆ. ಶ್ರೀ ಜಗನ್ನಾಥದಾಸರ ಹೆಚ್ಚು ಕೀರ್ತನೆಗಳು ನರ್ತನ –

ಹರಿವಾಣ ಸೇವೆಗೆ ಅಳವಡುವಂತಹುದಾಗಿವೆ. ಶ್ರೀ ವಾದಿರಾಜರು, ಶ್ರೀ ಸತ್ಯಬೋಧರು, ಶ್ರೀ ಪುರಂದರದಾಸರೇ ಮೊದಲಾದವರನ್ನು ಕುರಿತ ಕೀರ್ತನೆಗಳಲ್ಲದೆ ಇವರ ತಂದೆಯವರಾದ ಶ್ರೀನರಸಿಂಹದಾಸರ ಮೇಲೆ ಕುರಿತ ರಚನೆ ಇವರ ವಂಶದ ವಿಚಾರವನ್ನು ತಿಳಿಯಲು ಸ್ಪಷ್ಟವಾದ ಆಧಾರವಾಗಿದೆ. ಪರಮಾತ್ಮನ ವೈಕುಂಠ ಮಂದಿರದ ದ್ವಾರಪಾಲಕರನ್ನು ಇವರು ಸ್ತುತಿಸಿರುವರು, ಹರಿದಾಸರ ಸಾಹಿತ್ಯದಲ್ಲಿ ಈ ದ್ವಾರಪಾಲಕರನ್ನು ಕುರಿತ ಸ್ತೋತ್ರ ಅನ್ಯರಿಂದ ರಚಿತವಾಗಿಲ್ಲ.

ಮಾನವನ ಬಾಳು ಸಾರ್ಥಕವಾಗಬೇಕಾದರೆ ಅವನು ನಡೆದುಕೊಳ್ಳ ಬೇಕಾದಂತಹ ಕ್ರಮವನ್ನು ದಾಸರು, "ಫಲವಿದು ಬಾಳ್ದುದಕೆ" ಎಂಬ ಕೀರ್ತನೆಯಲ್ಲಿ ವಿಶದವಾಗಿ ತಿಳಿಸಿರುವರು. ಇವರು ರಚಿಸಿರುವ ಶ್ರೀ ಮಾರುತಾತ್ಮ ಸಂಭೂತ ಎಂಬ ಹನ್ನೊಂದು ನುಡಿಗಳ ಕೀರ್ತನೆ ಹನುಮ ಭೀಮ, ಮಧ್ವರ ಜೀವನವನ್ನು ಸ್ಥೂಲವಾಗಿ ತಿಳಿಸುವ ಪ್ರಮೇಯಾತ್ಮಕವಾದ ಸರಳ ಸುಂದರ ಕೃತಿಯಾಗಿದೆ. ಅಲ್ಲದೆ ಲಕ್ಷ್ಮೀದೇವಿಯರು, ಶಾರದೆ, ಭಾರತಿ, ಶೇಷ, ಗರುಡ, ರುದ್ರ ಮೊದಲಾದ ದೇವತೆಗಳನ್ನು ಕುರಿತು ಸ್ತೋತ್ರಗಳನ್ನೂ ರಚಿಸಿರುವರು.

ಹರಿದಾಸ ಚತುಷ್ಟಯರಲ್ಲಿ ಕೊನೆಯವರೆನಿಸಿಕೊಂಡಿರುವ ಶ್ರೀ ಜಗನ್ನಾಥದಾಸರು ತಮ್ಮ ಕೃತಿಗಳಿಂದ ಜ್ಞಾನ ಭಿಕ್ಷುಗಳಿಗೆ ಮಾಡಿರುವ ಉಪಕಾರ ಅನನ್ಯವಾಗಿದೆ. ಅಲ್ಲದೆ ದಾಸರು ಹರಿದಾಸ ಪರಂಪರೆಯನ್ನು ಮುಂದುವರಿಸಲು ಆಸಕ್ತ ಭಕ್ತ ಜನರಿಗೆ ಅಂಕಿತೋಪದೇಶ ಮಾಡಿ ಸದ್ಗತಿಯ ಹಾದಿಯನ್ನು ತಿಳಿಸಿರುವರು. ಶ್ರೀ ಜಗನ್ನಾಥದಾಸರು ಹನ್ನೆರಡು ಜನರಿಗೆ ಅಂಕಿತೋಪದೇಶವನ್ನು ಮಾಡಿರುವರು. ಈ ಹರಿದಾಸರ ಅಂಕಿತಗಳು ಹೀಗಿವೆ.

೧. ಪ್ರಾಣೇಶವಿಠಲ
೨. ಶ್ರೀದವಿಠಲ
೩. ಶ್ರೀಶವಿಠಲ (ಹುಂಡೇಕಾರ ದಾಸರು)
೪. ವೆಂಕಟವಿಠಲ

೫. ಪ್ರಸನ್ನವಿಠಲ

೬. ಗೋಪತಿವಿಠಲ

೭. ಜ್ಞಾನಮಯವಿಠಲ

೮. ಆನಂದಮಯವಿಠಲ

೯. ಸಿರಿವತ್ಸಾಂಕಿತ

೧೦. ಯೋಗೇಂದ್ರವಿಠಲ

೧೧. ಬಾದರಾಯಣವಿಠಲ

೧೨. ತಂದೆ ಜಗನ್ನಾಥವಿಠಲ

ಹೀಗೆ ಹರಿದಾಸ ಸಾಹಿತ್ಯ, ಮತ್ತು ಪರಂಪರೆಯನ್ನು ಬೆಳೆಸಿದ ಶ್ರೀ ಜಗನ್ನಾಥದಾಸರ ಸ್ಮರಣೆ ಪಾವನಕರವಾದುದು. ಅವರ ಜೀವನ ಮತ್ತು ಸಂದೇಶ ಆದರ್ಶವಾದುದಾಗಿ, ಸಾಧು ಸಾಧಕ ಜೀವಿಗಳಿಗೆ ಅನುಕರಣೀಯ ವೆನಿಸಿದೆ. ಅವರು ಹರಿದಾಸ ಸಾಹಿತ್ಯ ವಲಯದಲ್ಲಿ ಭಕ್ತ ಜನರ ಹೃದಯ ಮಂದಿರದಲ್ಲಿ ಎಂದೆಂದಿಗೂ ಅಮರರಾಗಿರುತ್ತಾರೆ. ಇವರನ್ನು ಸ್ಮರಿಸಿದ ದಿನವೇ ಪುಣ್ಯದಿನ, ಆದ್ದರಿಂದ ಇವರನ್ನು ಕುರಿತು.

"ದಾಸವರ್ಯಂ ದಯಾಸಿಂಧುಂ ದೂರೀಕೃತ ದುರಾಶಿಷಂ
ಹರಿಕಥಾ ಮೃತ ವಕ್ತಾರಂ ಜಗನ್ನಾಥ ಗುರುಂ ಭಜೇ ॥"

ಎಂಬ ಸ್ತುತಿಯಿದೆ.

ಜಗನ್ನಾಥದಾಸರು ರಚಿಸಿರುವ ಕೀರ್ತನೆಗಳೆಲ್ಲದರಲ್ಲಿಯೂ ಜಗನ್ನಾಥವಿಠಲ ಎಂಬ ಅಂಕಿತವೇ ಇರುವುದಾದರೂ ಅವರೇ ರಚಿಸಿರುವರೆಂಬ ಖಚಿತ ಮಾಹಿತಿ ಇರುವ ಶ್ರೀದವಿಠಲರ ಅಂಕಿತ ಪದದಲ್ಲಿ ಗುರು ಜಗನ್ನಾಥವಿಠಲ ಎಂಬ ಅಂಕಿತ ಪ್ರಯೋಗವಿದೆ. ಆದ್ದರಿಂದ ಹಿಂದಿನ ಹಲವು ಪ್ರಕಟಣೆಗಳಲ್ಲಿ ಗುರು ಜಗನ್ನಾಥವಿಠಲಾಂಕಿತವಾದ ಕೆಲವು ಕೀರ್ತನೆಗಳು ಜಗನ್ನಾಥದಾಸರ ಕೃತಿ ಸಮುದಾಯದಲ್ಲಿ ಸೇರಿರುವುದುಂಟು. ಆದರೆ ಈ ಸಂಕಲನದಲ್ಲಿ ಗುರು ಜಗನ್ನಾಥವಿಠಲಾಂಕಿತವಾದ ಕೀರ್ತನೆಗಳನ್ನು ಕೈ ಬಿಡಲಾಗಿದೆ.

ಜಗನ್ನಾಥ ದಾಸರು ಹನ್ನೆರಡು ಮಂದಿಗೆ ಅಂಕಿತ ಪ್ರದಾನ ಮಾಡಿದ್ದರೂ ನಮಗೆ ಕೇವಲ ಶ್ರೀದವಿಠಲ ಹಾಗೂ ಶ್ರೀಶವಿಠಲರಿಗೆ ಉಪದೇಶಿಸಿದ ಕೇವಲ ಎರಡೇ ಎರಡು ಅಂಕಿತ ಪದಗಳು ದೊರೆತಿವೆ. ಉಳಿದ ಹತ್ತು ಅಂಕಿತ ಪದಗಳನ್ನು ಸಂಗ್ರಹಿಸಿದರೆ ಜಗನ್ನಾಥದಾಸರಿಂದ ರಚನೆಗೊಂಡ ಒಟ್ಟು ಇನ್ನೂರ ಹದಿನಾಲ್ಕು ಕೃತಿಗಳು ದೊರಕಿದಂತಾಗುತ್ತದೆ.

ತತ್ವ ಸುವಾಲಿಗಳು

ಜಗನ್ನಾಥದಾಸರು ತ್ರಿಪದಿಯ ಛಂದಸ್ಸನ್ನು ಹೋಲುವಂತಹ ಮೂರು ಸಾಲುಗಳುಳ್ಳ ತತ್ವ ಸುವಾಲಿಗಳನ್ನು ರಚಿಸಿದ್ದಾರೆ. ಇವು ಜಾನಪದ ಧಾಟಿಯಲ್ಲಿವೆ. ಹಾಡಿಕೆಗೆ ಹಾಗೂ ನೆನಪಿನಲ್ಲಿಟ್ಟುಕೊಳ್ಳಲು ತುಂಬ ಸುಲಭವಾದುದು. ತತ್ವ ಎಂದರೆ ತ್ರಿಕಾಲ ಸತ್ಯವಾದ ಸಿದ್ಧಾಂತ ಪೂರ್ವಕ ವಾದ, ಸು ಎಂದರೆ ಸಮೀಚೀನವಾದ ವಾಲಿ ಎಂದರೆ –ಅಲಿ– ವಚನಗಳು ಎಂದರ್ಥ, ಸುವಾಲಿ ಎಂದರೆ ವಚನಗಳ ಸಮೂಹ; ತತ್ವ ಬೋಧನೆ ಈ ರಚನೆಯ ಗುರಿ ಎನ್ನಬಹುದು. ಶ್ರುತಿ ಸುಭಗತೆ ಇದರಲ್ಲಿ ರಾರಾಜಿಸುತ್ತಿದೆ. ಜಗನ್ನಾಥದಾಸರು ಈ ತತ್ವ ಸುವಾಲಿಗಳನ್ನು ತಮ್ಮ ಮಗಳ ಮಾನಸಿಕ ನೆಮ್ಮದಿಗಾಗಿ ರಚಿಸಿದರೆಂದು ಪ್ರತೀತಿ ಉಂಟು.

ವಿಘ್ನೇಶ್ವರ, ರುದ್ರ, ವಾಯು, ತುಳಸಿ, ಶ್ರೀ, ಭೂ ದುರ್ಗಾ, ಬ್ರಹ್ಮ, ದಶಾವತಾರಗಳು, ನವಗ್ರಹಗಳು, ಅಗ್ನಿ ಇತ್ಯಾದಿ ದೇವತೆಗಳ ಸ್ತೋತ್ರ, ತತ್ವ ಪ್ರತಿ ಪಾದನೆ ಇಲ್ಲಿ ಮೇಲುಗೈಯನ್ನು ಪಡೆದಿವೆ, ಇದರೊಡನೆ ಕೃಷ್ಣ ಚರಿತೆ, ರುಕ್ಮಿಣಿ ವಿಲಾಸ ಹಾಗೂ ಶ್ರೀನಿವಾಸನ ಸ್ತೋತ್ರಗಳು ಇದರಲ್ಲುಂಟು. ಜಗನ್ನಾಥದಾಸರ ಭಕ್ತಿ ನವನೀತ ದರ್ಶನ ಇಲ್ಲಾಗುತ್ತದೆ. ಇದರಲ್ಲಿ ಬಂದಿರುವ ಉಪದೇಶ ಹೃದ್ಯವಾಗಿದೆ.

ಮಾನಸಿಕ ಶಾಂತಿಗೆ ಅತಿಮುಖ್ಯವಾದುವೆಂದರೆ ಪ್ರಪಂಚದ ಜನರ ಹೊಗಳಿಕೆ –ತೆಗಳಿಕೆಗಳಿಗೆ ಮನಸ್ಸನ್ನು ಕೊಡದೆ ಅನ್ಯರನ್ನು ಟೀಕಿಸದೆ – ಬೈಯದೆ ಇರುವುದೆಂಬ ದಾಸರಾಯರ ವಾಣಿ ಒಪ್ಪತಕ್ಕದ್ದೆನಿಸುತ್ತಿದೆ. ಅವರು ಭಗವಂತನನ್ನು ಕುರಿತು

ಶಿಷ್ಯನೆಂದೆನಿಸೆನ್ನಾ ಭ್ರಷ್ಟನೆಂದೆನಿಸು ಸ
ರ್ವೇಷ್ಟ ಮೂರುತಿಯೆ ಜನರಿಂದ । ಜನರಿಂದ ನುಡಿಸಿದ್ದು
ಇಷ್ಟವೇ ಕಾಣೋ ಎನಗಿನ್ನು ಎಂದು

ನಿಂದಿಸುವರೆಲ್ಲ ನಿಂದ್ಯರಾಗುವರು ಅಭಿ
ವಂದಿಸುವ ಜನರು ಜಗದೊಳು । ಜಗದೊಳು ಜನರಿಂದ
ವಂದ್ಯರಾಗುವರು ಎಂದೆಂದು

ಎಂದು ಹೇಳಿದ್ದಾರೆ.

ಭಗವಂತನ ಒಲುಮೆಗೆ ಸರಳವಾದ ಶ್ರಮವಿಲ್ಲದ ಅನುಸಂಧಾನ ಪೂರ್ವಕವಾದ ಚಿಂತನೆಯೊಂದೇ ಸಾಕೆಂದು ದಾಸರು ಭರವಸೆ ನೀಡಿದ್ದಾರೆ.

ಉಂಡು ಉಟ್ಟದ್ದೆಲ್ಲ ರಂಗನ ಸೇವೆಯೆನ್ನಿ ಕಂಡ
ಕಂಡದ್ದು ಹರಿ ಪ್ರೀತಿಯೆನ್ನಿ । ಹರಿ ಪ್ರೀತಿಯೆನ್ನಿ ಮೂಲೋರ್ಕಕ್ಕೆ
ಪಾಂಡವ ಪ್ರಿಯನೆ ದೊರೆಯೆನ್ನಿ

ಭಗವನ್ನಾಮಸ್ಮರಣೆಯೇ ಮಹಾ ಪುಣ್ಯವೆಂದು, ಭಗವಂತನ ಮರೆವೇ ಪಾಪ ಸಂಘಟನೆಗೆ ಕಾರಣವೆಂದು ದಾಸರು ಹೇಳುತ್ತಾರೆ;

ನಿನ್ನ ಸ್ಮೃತಿಗಿಂತನ್ಯ ಪುಣ್ಯ ಕರ್ಮಗಳಿಲ್ಲ
ನಿನ್ನ ವಿಸ್ಮೃತಿಗಧಿಕ ಮಹ ಪಾಪ । ಮಹಪಾಪ ಕರ್ಮಗಳು
ಇನ್ನೆಲ್ಲಿ ಇಹವು ಇಳೆಯೊಳು.

ಹರಿದಾಸರಾದ ಜಗನ್ನಾಥದಾಸರು ತಿಳಿಯದುದೆ ಪಾಪ, ತಿಳಿಯುವುದೆ ಮಹಾ ಪುಣ್ಯ ಎಂದು ಹೇಳಿರುವುದನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದಾಗಿದೆ. ಆತ್ಮ ಗೌರವವನ್ನು ರಕ್ಷಿಸಿಕೊಳ್ಳುವವರು ಯಾರೊಬ್ಬರನ್ನು ಎಂದಿಗೂ ಬೇಡುವುದಿಲ್ಲ:- ಬೇಡ ಬಾರದೆಂಬುದು ದಾಸರ ನಿಲುವು, ಅಲ್ಲದೆ

ಅಶನವಸನಗಳೀವ ವಸುದೇವ ಸುತನಿರಲು ।
ಪುಸಿ ಯಾಡಿ ಬದುಕೇ ನರರಿಗೆ /ನರರಿಗಾಲ್ಪರಿದರೆ
ಹಸಿವೆ ಅಡಗುವುದೆ ಎಲೆ ಜೀವಾ

ಎಂದು ದಾಸರು ಪ್ರಶ್ನಿಸುತ್ತಾರೆ.

ಒಟ್ಟಾರೆ ಈ ತತ್ವ ಸುವಾಲಿಗಳಲ್ಲಿ ಜಗನ್ನಾಥದಾಸರು ತಮ್ಮ ಜೀವನಾನುಭವವನ್ನು ತತ್ವ ಜ್ಞಾನದ ಬೆಳಕಿನಲ್ಲಿ ವಿವೇಚನಾತ್ಮಕವಾಗಿ ಮಂಡಿಸಿರುವರೆನ್ನಬಹುದು. ಹೃದಯವನ್ನು ಮೃದು ಮಾಡುವ ಶಕ್ತಿ ಈ ತತ್ವ ಸುವಾಲಿಗಳಿಗುಂಟು.

ಜಗನ್ನಾಥದಾಸರು ಹರಿದಾಸ ಸಾಹಿತ್ಯ ವಲಯದಲ್ಲಿ ಅತ್ಯಂತ ಪ್ರಸಿದ್ಧರು. ಈ ಮೊದಲಲ್ಲಿ ಪರಿಚಯಸಿರುವ ಇವರ ಹರಿಕಥಾಮೃತಸಾರ ಈ ಶತಮಾನದಲ್ಲಿ ಹತ್ತಾರು ಬಾರಿ ಮರು ಪ್ರಕಟಣೆಗೊಂಡಿದೆ, ಎಂದರೆ ಇವರ ಸಾಹಿತ್ಯ ಅದೆಷ್ಟು ಜನಪ್ರಿಯವಾಗಿದೆ ಎಂಬುದನ್ನು ಊಹಿಸಬಹುದಾಗಿದೆ. ಇಂತಹ ಜಗನ್ನಾಥದಾಸರ ಕೃತಿಗಳನ್ನು ಕರ್ನಾಟಕ ಸರ್ಕಾರ ಸಮಗ್ರ ದಾಸವಾಙ್ಮಯ ಪ್ರಕಟಣೆ ಯೋಜನೆಯ ಮೂಲಕ ಸಾರ್ವಜನಿಕರಿಗೆ ಕೊಡುತ್ತಿರುವುದು ತುಂಬ ಸಂತೋಷದ ಸಂಗತಿಯಾಗಿದೆ. ಇದಕ್ಕೆ ಕಾರಣರಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನೀರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ ಅವರಿಗೆ ಧನ್ಯವಾದಗಳು. ಈ ಸಂಪಾದನಾ ಕಾರ್ಯವನ್ನು ನನಗೆ ವಹಿಸಿದ ಕಾರ್ಯನಿರ್ವಾಹಕ ಸಂಪಾದಕರಾದ ಡಾ॥ ಟಿ.ಎನ್. ನಾಗರತ್ನ ಅವರಿಗೂ ಹಾಗೂ ಸಂಪಾದಕ ಮಂಡಳಿಗೂ ನನ್ನ ಕೃತಜ್ಞತೆಗಳು.

ಈ ಕೃತಿಯ ಹಸ್ತ ಪ್ರತಿಯನ್ನು ತಯಾರಿಸುವಲ್ಲಿ ನನ್ನ ಮಕ್ಕಳಾದ ಚಿ ॥ ಕೆ. ಗೋಕುಲನಾಥ ಮತ್ತು ಚಿ॥ ಕೆ. ಅಮೃತನಾಥ ಅವರು ವಿಶೇಷ ಶ್ರಮ ವಹಿಸಿದ್ದಾರೆ. ಅವರಿಗೆ ಶ್ರೀ ಹರಿ ವಾಯುಗಳು ಅನುಗ್ರಹಿಸಲೆಂದು ಆಶೀರ್ವದಿಸುತ್ತೇನೆ.

ಕೆ. ಎಂ. ಕೃಷ್ಣರಾವ್

ಕೀರ್ತನೆಗಳ ಕ್ರಮಸೂಚಿ

ಸರಸ್ವತಿ – ಭಾರತೀ

ಗರುಡ – ಶೇಷ

ರುದ್ರ – ಜಯ, ವಿಜಯರು

ಕೀರ್ತನೆ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಪುಟ ಸಂಖ್ಯೆ

ವಸುಧೀಂದ್ರರು

ರಾಘವೇಂದ್ರ ತೀರ್ಥರು

ಇತರ ಯತಿವರೇಣ್ಯರ ಸ್ತೋತ್ರ

ನವಬೃಂದಾವನ ಸ್ತೋತ್ರ

ಶ್ರೀ ಜಗನ್ನಾಥದಾಸರ ಕೀರ್ತನೆಗಳು

ಗಣಪತಿ ಸ್ತುತಿ

೧

ಅಂಬಾತನಯ ಹೇರಂಬ ಪೂರ್ಣಕರು ಪ

ಣಾಂಬುಧೇ ತವ ಚರಣಾಂಬುಜ ಕೆರಗುವೆ ಅ.ಪ

ದಶನ ಮೋದಕ ಪಾಶಾಂಕುಳ ಪಾಣೇ
ಅಸಮಸಹಸ ಚರುದೇಷ್ಣ ವಂದಿಪೆ ೧

ವೃಂದಾರಕ ವೃಂದವಂದಿತ ಚರಣಾರ
ವಿಂದುಯುಗಳ ದಯದಿಂದ ತೋರೆನಗೆ ೨

ಯೂಥಪವದನ ಪ್ರದ್ಯೋತ ಸನ್ನಿಭ ಜಗ
ನ್ನಾಥ ವಿರು ಸಂಪ್ರೀತಿ ವಿಜಯ ಜಯ ೩

೨

ಲಂಬೋದರ ರಕ್ತಾಂಬರಧರ
ಅಂಬರಾಧೀಶ್ವರ ಗೌರೀಕುಮಾರ ಪ

ಸಿಂಧುರವದನಾರವಿಂದ ಸುಂದರ ವಿಘ್ನಾ
ಘಾಂಧಕಾರ ಶರಚ್ಚಂದಿರ ಧೀರ ೧

ವರ ಪಾಶಾಂಕುಶ ದಂತಧರ ಸುಮೋದಕ ಶೂರ್ಪ
ಕರಣ ತ್ವಚ್ಚರಣ ಪಂಕಜಕ್ಕಾನಮಿಪೆ ೨

ಜಗನ್ನಾಥವಿಠಲನ ಮಗನಾಗಿ ದ್ವಾಪರ
ಯುಗದಲ್ಲಿ ಜನಿಸಿದ ಸುಗುಣ ನೀ ಸಲಹೊ ೩

ಅವರೋಹಣ ದೇವತಾ ತಾರತಮ್ಯ ಸ್ತೋತ್ರ

೩

ಆ ನಮಿಪೆ ವಿಷ್ಣು ಶ್ರೀ ಬ್ರಹ್ಮ ವಾಯು
ವಾಣಿ ಭಾರತಿ ಮುಖ್ಯರವತಾರ ಆವೇಶಕಾನಮಿಪೆ ಪ

ಶ್ರೀ ಮತ್ಸ್ಯ ಕೂರ್ಮ ಭೂವರಹ ನರಸಿಂಹ ದಧಿ
ವಾಮನ ತ್ರಿವಿಕ್ರಮ ಭೃಗುಕುಲೋದ್ಭವ
ರಾಮ ಯಾದವ ಕೃಷ್ಣ ಬುದ್ಧ ಕಲ್ಕಿ ಹಯಾಸ್ಯ
ನಾಮ ತಾಪಸ ಮನು ಉಪೇಂದ್ರ ಅಜಿತಾದಿಗಳಿಗಾ ನಮಿಪೆ ೧

ವಾಸುದೇವಾಚ್ಯುತಾನಂತ ಗೋವಿಂದ ಮಹಿ
ದಾಸ ಧನ್ವಂತ್ರಿ ಹರಿ ಹಂಸ ದತ್ತಾ
ವ್ಯಾಸ ಕಪಿಲಾತ್ಮಂತರಾತ್ಮ ಪರಮಾತ್ಮ ಯ
ಜ್ಞೇಶ ವೈಕುಂಠ ನಾರಾಯಣಾದ್ಯವತಾರಕಾನಮಿಪೆ ೨

ನಾರಾಯಣೀ ಋಷಭ ಐತರೇಯ ಶಿಂಶು
ಮಾರ ಯಜ್ಞ ಪ್ರಾಜ್ಞ ಸಂಕರುಷಣಾ
ಕ್ಷಿರಾಬ್ಧಿ ನಿಲಯ ಯಮನಂದನಾ ಕೃಷ್ಣ ಹರಿ
ನಾರಾಯಣ ಧರ್ಮಸೇತು ರೂಪಾದಿಗಳಿಗಾನಮಿಪೆ ೩

ಗುಣಗಳಭಿಮಾನಿ ಶ್ರೀ ಭೂ ದುರ್ಗ ದಕ್ಷಿಣಾಂ
ಭೃಣಿ ಮಹಾಲಕ್ಷ್ಮೀ ಶ್ರೀ ವಿಷ್ಣುಪತ್ನೀ
ಜನನಿ ಮಾಯಾ ಜಯ ಕೃತಿ ಶಾಂತಿ ಶುದ್ಧ ರು
ಕ್ಮಿಣಿ ಸತ್ಯ ಸೀತಾದ್ಯಮಿತ ರೂಪಗಳಿಗಾನಮಿಪೆ ೪

ಹೀನಳೆನಿಸುವಳನಂತಾಂಶದಲಿ ಸುಖ ಬಲ
ಜ್ಞಾನಾದಿ ಗುಣದಿ ಮಹಾಲಕ್ಷ್ಮಿ ಹರಿಗೆ
ಆನಂದ ವಿಜ್ಞಾನ ಮಯನ ವಕ್ಷಸ್ಥಳವೆ
ಸ್ಥಾನವಾಗಿಹುದು ಇಂದಿರೆಗೆ ಆವಾಗ ೫

ಪುರುಷ ನಾಮಕ ವಿಧಿ ವಿರಿಂಚಿ ಮಹನ್ ಬ್ರಹ್ಮ
ಸುರುಚಿ ಮುಖ್ಯ ಪ್ರಾಣ ಸೂತ್ರ ಸ್ಮೃತಿ
ಗುರು ಮಹಾಪ್ರಭು ಋಜ ಸಮಾನ ವಿಜ್ಞ ಪ್ರಾಜ್ಞ
ಹರಿಭಕ್ತಿ ಮೇಧಾವಿ ಮುಕ್ತಿ ಧೃತಿ ಅಮೃತನಿಗೆ ೬

ಸ್ಥಿತಿ ಯೋಗ ವೈರಾಗ್ಯ
ಚಿಂತ್ಯ ಬಲಸುಖ ಬುದ್ಧಿ
ವಿತತಾದಿ ಗೋಪ ಹನುಮ ಭೀಮ
ವೃಷಿವರಾನಂದ ಮುನಿ ಮೊದಲಾದ ರೂಪಶ್ರೀ
ಪತಿಗಧಿಷ್ಟಾನ ಕೋಟಿಗುಣಾಧಮರು ರಮೆಗೆ ಆ ನಮಿಪ ೭

ಸರಸ್ವತಿ ಗಾಯತ್ರಿ ಬುದ್ಧಿ ವಿದ್ಯಾ ಪ್ರೀತಿ
ಗುರುಭಕ್ತಿ ಸರ್ವ ವೇದಾತ್ಮಿಕ ಭುಜಿ
ಪರಮಾನು ಭೂತಿ ಸಾವಿತ್ರಿ ಸು ಸುಖಾತ್ಮಿಕಾ
ಪರಮೇಷ್ಠಿ ಪತಿ ನಾಮಗಳಿವೆಂದರಿದು ೮

ಶಿವಕನ್ಯ ಇಂದ್ರಸೇನಾ ಕಾಶಿಜಾ ಚಂದ್ರ
ಯುವತಿ ದ್ರೌಪದಿಯು ಭಾರತಿ ರೂಪವು
ಪವಮಾನ ಬ್ರಹ್ಮರಿಗೆ ಶತಗುಣಾಧಮ ಸದಾ
ಶಿವನ ರೂಪಗಳ ಈ ಪರಿಯ ಚಿಂತಿಸುತ ೯

ತತ್ಪುಮಾನ್ನೂರ್ಧ್ವಪಟ ದುರ್ವಾಸ ವ್ಯಾಧ ಅ
ಶ್ವತ್ಥಾಮ ಜೈಗೀಷವ್ಯ ತಪ ಅಹಂಕ್ರತು
ನಿತ್ಯ ವಾಯ್ವಿಷ್ಟ ಶುಕ ವಾಮದೇವ ಗುರು
ಮೃತ್ಯುಂಜಯೋರ್ವ ಸದ್ಯೋಜಾತ ತತ್ಪುರುಷಗಾನಮಿಪೆ ೧೦

ನರ ವಯು ಶುಕಕೇಶವೇಶ ಬಲಗೆ ಸಂ
ಕರುಷಗಾವೇಶ ಲಕ್ಷ್ಮಣದೇವಗೆ
ಗರುಡ ಶೇಷಾಘೋರ ಸಮರು ಶತಗುಣದಿಂದ
ಕೊರತೆಯೆನಿಸುವರು ಮೂವರು ವಾಣಿ ದೇವಿಗೆ ೧೧

ಶೇಷಗೆ ಸಮಾನನೆನಿಪಳು ಜಾಂಬವತಿ ರಮಾ
ವೇಶ ಕಾಲದಿ ಷಣ್ಮಹಿಷಿಯರ ಒಳಗೆ
ಹ್ರಾಸಕಾಲದಿ ಸಮಳು ಐವರಿಗೆ ಜಾಂಬವತಿ
ವೀಶಾದ್ಯರಿಗೆ ಹರಿ ಸ್ತ್ರೀಯರ ಸಮರೈದುಗುಣ ೧೨

ರೇವತಿ ಶ್ರೀಯುತ ಶ್ರೀ ಪೇಯ ರೂಪತ್ರ
ಯಾವಕಾಲದಿ ವಾರುಣಿಗೆ ಪಾರ್ವತೀ
ದೇವಿ ಸೌಪರಣಿಗೆ ಸಮ ಷಣ್ಮಹಿಷಿಯರಿಗೆರಡು
ಮೂವರೀರೈದು ಗುಣ ಕಡಿಮೆ ಪತಿಗಳಿಗೆ ೧೩

ಕುಶ ವಾಲಿ ಗಾಧಿ ಮಂದ್ರಪ್ರದ್ಯುಮ್ನನು ವಿಕುಕ್ಷಿ
ಶ್ವಸನ ಹರಿ ಶೇಷ ಸಂಯುಕ್ತಾರ್ಜುನಾ
ಅಶನೀಧರನ ಸುರೂಪಂಗಳಿವು ಮನ್ಮಥನ
ಪೆಸರು ಪೇಳುವೆನು ಅವತಾರಗಳ ನಿತ್ಯ ೧೪

ಪ್ರದ್ಯುಮ್ನ ಸಂಯುಕ್ತ ರುಕ್ಮಿಣೀ ದೇವಿ ಸುತ
ಪ್ರದ್ಯುಮ್ನ ಭರತನು ಸನತ್ಕು ಮಾರಾ
ಪದ್ಮಜಾನಿಷ್ಟ ಸಾಂಬ ಸ್ಕಂಧ ಸುದರುಶನ
ರುದ್ರ ನಾರ್ಧಾಂಗಿನಿಗೆ ದಶಗುಣಾಧಮರೆಂದು ೧೫

ಕಾಮೇಂದ್ರರಿಗೆ ದಶಾಧಮನು ಅಹಂ ಭವ ಪ್ರಾಣ
ನಾಮರಗೆ ರೂಪ ಸಮೋತ್ತುಂಗನು
ಕಾಮ ಪುತ್ರಾನಿರುದ್ಧಾದಿಗಳು ದಶ ಹೀನ
ಈ ಮಹಾತ್ಮರ ದಿವ್ಯ ಅವತಾರರೂಪಗಳಿಗಾನಮಿಪೆ ೧೬

ತಾರನಾಮಕ ಪ್ಲವಗ ಬ್ರಹ್ಮಾಂಶಯುಗ್ದ್ರೋಣ
ಮಾರುತಾವೇಶ ಸಂಯುತ ವುದ್ಧವಾ
ಮುರು ರೂಪವು ಬೃಹಸ್ಪತಿಗೆ ಪ್ರದ್ಯುಮ್ನನ ಕು
ಮಾರಾನಿರುದ್ಧ ಶತ್ರುಘ್ನ ಅನಿರುದ್ಧನಿಗೆ ೧೭

ತಾರ ಚಿತ್ರಾಂಗದ ಶಚಿ ರೂಪ ಲಕ್ಷುಣ
ಈ ರುಗ್ಮವತ್ರಿ ಎರಡು ರತಿರೂಪವು
ಆರುಜನ ದಕ್ಷ ಸ್ವಯಂಭುವ ಮನು ಪ್ರಾಣ
ಗಿರೈದು ಗುಣಗಳಿಂದಧಮರೆಂದರಿದು ೧೮

ಭೂತಾಭಿಮಾನಿ ಪ್ರವಹ ಪಂಚಗುಣದಿ ಪುರು
ಹೊತ ಪತ್ನ್ಯಾದಿಗಳಿಗಧಮನೆನಿಪ
ಈತಗವತಾರವಿಲ್ಲವನಿಯೊಳು ಚಂದ್ರ ಪ್ರ
ದ್ಯೋತನಾಂತಕ ಸ್ವಯಂಭುವ ಪತ್ನಿ ಶತರೂಪಿ ೧೯

ಸತ್ಯಜಿತ ಜಾಂಬವಾನ್ ವಿದುರ ಗುರು ವಾಯು ಸಂ
ಯುಕ್ತ ಧರ್ಮಜ ಯಮಗೆ ರೂಪ ನಾಲ್ಕು
ರಾತ್ರಿ ಚರನವತಾರ ಯಿಂದ್ರ ಯುಕ್ತಾಂಗದಾ
ದಿತ್ಯ ನವತಾರ ಬ್ರಹ್ಮ ವಿಷ್ಟ ಸುಗ್ರೀವ ೨೦

ಹರಿಯುಕ್ತ ಕರ್ನ ಮನು ಪತ್ನಿ ಶತರೂಪ ನಾ
ಲ್ವರು ಸಮರು ಪ್ರವಹಗಿಂದೆರಡು ಗುಣದೀ
ಕೊರತಿ ಮಹ ಭಿಷಕು ಮಂಡೂಕ ಶಂತನು ಸುಶೇ
ಣ್ವರುಣ ರೂಪಗಳಧಮ ಪಾದ ಪಾದಾರ್ಧಿಕಾನಮಿಪೆ ೨೧

ನಾರದಾಧಮ ವರುಣಗಿಂತಗ್ನಿ ಅವ
ತಾರ ದೃಷ್ಟದ್ಯುಮ್ನ ಲವ ನೀಲರೂ
ಮೂರು ಭೃಗುರೂಪ ಜನರೆಂಬ ವ್ಯಾಧ ಪ್ರಸೂತಿ
ವಾರಿನಿಧಿಗಿಂತ ಪಾದ ಗುಣದಾಧಮರು ಎಂದು ೨೨

ಅಂಗೀರ ಪುಲಸ್ತ್ಯಾತ್ರಿ ಪುಲಹನು ಮರೀಚಿ ಮುನಿ
ಪುಂಗವ ದಶಿಷ್ಠ ಕೃತು ಬ್ರಹ್ಮ ಸುತರೂ
ತುಂಗ ವಿಶ್ವಾಮಿತ್ರ ವೈವಸ್ವತರು ಸದಾ
ಕೆಂಗದಿರಗಧಮರೊಂಭತ್ತು ಜನರೆಂದು ೨೩

ಸಪ್ತ ಋಷಿಗಳಿಗೆ ಸಮನೆನಿಪ ವೈವಸ್ವತನು
ಸಪ್ತ ವಾಹನನ ಆವೇಶ ಬಲದೀ
ಲುಪ್ತವಾಗಲು ಕಡಿಮೆಯೆನಿಪ ಪ್ರಾವಹ ತಾರ
ಕ್ಲುಪ್ತ ಒಂದೇ ರೂಪ ಕೃಪೆಯೆಂದು ಕರೆಸುವಳಿಗಾನಮಿಪೆ ೨೪

ಹರನಾವೇಶಯುತ ಘಟೋತ್ಕಚ ದುರ್ಮುಖನು
ನಿಋುಋುತಿ ಕರೆಸುವನು ರಾಹು ಯುಗ್ಭೀಷ್ಟಕ ನೃಪಾ
ನರೆ ಮಿತ್ರ ನಾಮಕನ ರೂಪ ನಾಲ್ವರು ಅಗ್ನಿ
ಗೆರಡು ಗುಣದಿಂಧಮರೆನಿಪರೆಂದೆಂದು ೨೫

ಮಾರಾರಿಯುಕ್ತ ಭಗದತ್ತ ತತ್ತನಯ ಕು
ಬೇರಗೆರಡವತಾರ ವಿಘ್ನೇಶಗೆ
ಚಾರುದೇಷ್ಣನು ಒಂದೆ ಇಂದ್ರನಾವೇಶಯುತ
ಆರುರೂಪಗಳುಳ್ಳ ನಾಸತ್ಯ ದಸ್ರರಿಗೆ ೨೬

ವಿವಿಧ ಮೈಂದ ತ್ರಿಸಿಖ ನಕುಲ ಸಹದೇವ ವಿಭು
ಅವತಾರ ಅಶ್ವಿನೀ ದೇವತೆಗಳ
ಲವಣಾದಿ ಷಡ್ರಸಗಳೊಳಗಿದ್ದು ಜೀವರಿಗೆ
ವಿವಿಧ ಭೋಗಗಳಿತ್ತು ಸಂತೈಪರೆಂದೆಂದು ೨೭

ದ್ರೋಣಾರ್ಕ ದೋಷಾಗ್ನಿ ಧ್ರುವ ವಿಭಾವಸು ವಸ್ತು
ಪ್ರಾಣಾಷ್ಟ ವಸುಗಳೊಳಗೆ ದ್ಯುನಾಮಕ
ವಾಣೀಶಯುಕ್ತ ಭೀಷ್ಮನು ನಂದಗೋಪಾಲ
ದ್ರೋಣನಾಮಕ ಪ್ರಧಾನಾಗ್ನಿಗಿಂದಧಮರೆಂದಾ ನಮಿಪೆ ೨೮

ಭೀಮರೈವತ ವೋಜಜೈಕಪಾದ ಹಿರ್ಬುದ್ನಿ ಭವ
ವಾಮ ಬಹುರೂಪೋಗ್ರಜ ವೃಷಾಕಪಿ
ಈ ಮಹನ್ನೆಂಬ ಹನ್ನೊಂದು ರುದ್ರರು ಭೂರಿ
ನಾಮಕ ಜೈಕ ಪಾದಹಿರ್ಬುದ್ನಿ ಭೂರಿಶ್ರವಗಾನಮಿಪೆ ೨೯

ತ್ರ್ಯಕ್ಷನುಳಿಧತ್ತು ರುದ್ರರು ಸಮರು ಶಲ್ಯ ವಿರು
ಪಾಕ್ಷನವತಾರ ಕೃಪ ವಿಷ್ಕಂಭುನೂ
ಅಕ್ಷೀಣಬಲ ಪತ್ರತಾಪಕ ಸಹದೇವ
ರಕ್ಷಘ್ನ ಸೋಮದತ್ತನು ಎನಿಸುತಿಹಗೆ ೩೦

ವಿರೂಪಾಕ್ಷ ವಿಷ್ಕಂಭ ಪತ್ರತಾಪಕ ಮೂರು
ಹರನ ರೂಪಾಂತರಗಳಿವು ವಿವಸ್ವಾನ್
ಅರಿಯಮ ಪೂಷ ಭಗ ಸವಿತು ತ್ವಷ್ಟಾಧಾತ
ವರುಣ ಶಕ್ರೋರುಕ್ರಮನು ಮಿತ್ರ ಪರ್ಜನ್ಯಗಾನಮಿಪೆ ೩೧

ಶೌರಿನಂದನ ಭಾನು ಸವಿತ್ರ ನಾಮಕ ಸೂರ್ಯ
ವೀರಸೇನನು ಯಮಾವಿಷ್ಟ ತ್ವಷ್ಟಾ
ಆರುಜನ ರುಕ್ತರೆನಿಪರು ವುರುಕ್ರಮ ಶಕ್ರ
ವಾರಿಧಿ ವಿವಸ್ವಾನ್ ಮಿತ್ರ ಪರ್ಜನ್ಯರಿಗೆ ೩೨

ಪ್ರಾಣ ನಾಗ ಪಂಚಕ ಅಹಂಕಾರಿಕ
ಪ್ರಾಣ ಪ್ರವಹ ನಿವಹ ಸಂವಹ ಸ್ವಹಾ
ಮಾನದಾವಹ ವಿವಹ ಕಾಲ ಶ್ವಾಸ ಏ
ಕೋನ ಪಂಚಾಶನ್ ಮರುದ್ಗಣಸ್ಥರು ಎಂದು ೩೩

ಅನಿಳ ನಳ ಕುಮುದ ಮಂಡೂಖ ಸಾಂಗ ಶ್ವೇತ ಶಂ
ತನು ಕೃಷ್ಣ ಶುಚಿ ಶಂಕು ರಕ್ತ ಸಿಂಧೂ
ಹನುಮ ಭೀಮ ಯತಿವುದಿತ ಕಾಮ ಜಡಪಿಂಗ ಕಂ
ಪನ ವೃದ್ವಹ ಧನಂಜಯ ದೇವದತ್ತರಿಗೆ ೩೪

ಶುಕ್ರ ಶಂಕು ಗುರು ಕಾಂತ ಪ್ರತಿಭ ಸಂವರ್ತಕನು
ಪಿಕ ಕಪಿಗಳಿವರು ಮುರುತರು ಸಮೀರಾ
ಯುಕುತ ಪಾಂಡು ವರಾಹನು ಎನಿಪ ಸಂಪಾತಿ
ಭೃಕುಟ ಕೇಸರಿ ಶ್ವೇತ ಮರುತನವತಾರ ವೆಂದಾನಮಿಪೆ ೩೫

ಪ್ರತಿಭವಂಶನು ಚೇಕಿತಾನೆಂದೆನಿಪ ವಿ
ಪ್ರಥು ಸೌಮ್ಯ ಕುಂತೀಭೋಜನೆ ಕೂರ್ಮನು
ಕ್ಷಿತಿ ಯೊಳಗೆ ಪ್ರಾಣಪಂಚಕರೊಳು ಪ್ರಾಣ ಗಜ
ಅಥ ಗವಾಕ್ಷಾಪಾನ ವ್ಯಾನ ಗವಯನು ಎಂದು ೩೬

ವೃಷನು ಸರ್ವತ್ರಾತನು ವುದಾನಗಂಧ ಮಾ
ದ ಸಮಾನನರಿವರು ವಿತ್ತಪನ ಸುತರು
ಶ್ವಸನಗಣದೊಳು ಕಿಂಚಿದುತ್ತ ಮರಹಂ ಪ್ರವಹ
ಗಸಮರೆನಿಪರು ಪ್ರಾಣ ಪಂಚಕರು ಎಂದೂ ೩೭

ಪ್ರತಿ ವಿಂಧ್ಯ ಧರ್ಮಜನ ಭೀಮಸೇನನ ಪುತ್ರ
ಶೃತಸೋಮ ಅರ್ಜುನಜ ಶೃತಕೀರ್ತಿಸಾ
ಶತಾನೀಕನ ಕುಲಜ ಸಹದೇವಾತ್ಮಜನು
ಶೃತಕರ್ಮರಿವರು ದ್ರೌಪದಿ ದೇವಿಗಾತ್ಮಜರಿಗಾನಮಿಪೆ ೩೮

ಚಿತ್ರರಥ ಅಭಿಪೌಮ್ರಬಲ ಕಿಶೋರ ಗೋಪಾಲ
ರುತ್ತಮರು ಗಂಧರ್ವರೈವರಿಂದ
ಯುಕ್ತರಾಗಿಹರು ಕೈಕೇಯರೈವರು ಪಾಂಡು
ಪುತ್ರಜರು ವಿಶ್ವದೇವತೆಗಳಿವರೆಂದು ೩೯

ಧ್ರುವ ಕಾಲ ಕಾಮಲೋಚನದಕ್ಷ ಕ್ರತು ಪುರೂ
ರವ ಸತ್ಯ ವಸು ಧುರಿಗಳಿವರು ವಿಶ್ವೇ
ದಿವಿಜರೀರೈದು ಋಭು ಗುಣ ಪಿತೃತ್ರಯ ದ್ಯಾವ
ಅವನಿಪರು ಗಣಪಾದ್ಯರಧಮ ಮಿತ್ರನಿಗೆಂದು ೪೦

ವಸುಗಳೆಂಟಾದಿತ್ಯರೀರಾರು ಒಂದಧಿಕ
ದಶರುದ್ರಗಣ ಪಿತೃತ್ರಯ ಬೃಹಸ್ಪತೀ
ದಶ ವಿಶ್ವ ದೇವ ಅಶ್ವಿನಿಗಳೆರಡೈವತ್ತು
ಶ್ವಸನಗಣರು ಋಭುವೊಂದು ಎರಡು ದ್ಯಾವಾಪೃಥವಿ ೪೧

ಒಂಭತ್ತು ಕೋಟಿ ದೇವತೆಗಳೊಳು ನೂರು ಜನ
ಕೆಂಬರಿವರಿಗೆ ಸೋಮ ಪಾನಾರ್ಹರೂ
ಅಂಬುಜಾಪ್ತರ ಒಳಗುರುರುಕ್ರಮನುಳಿದು ಪದ್ಮ
ಸಂಭವನ ಸಹರಾಗಿಹರು ಶತಸ್ಥರಿಗೆ ೪೨

ಮರುತತ್ರಯರು ವನಿಯಮ ಸೋಮ ಶಿವದಿವಾ
ಕರರಾರು ರುದ್ರ ಗುರು ಇವರುಕ್ತರೂ
ಉರವರಿತ ಎಂಭತ್ತೈದು ಸಮರು ತಮ್ಮೊಳಗೆ
ಸರಸಿಜೋದ್ಭವನ ಸುತರೆನಿಪ ಸನಕಾದಿಗಳಿಗಾನಮಿಪೆ ೪೩

ಸನಕಾದಿಗಳೊಳುತ್ತಮ ಸತತ್ಕುಮಾರ ಶಿಖಿ
ತನುಜ ಪಾವಕನು ಪರ್ಜನ್ಯನು ಮೇಘಪ
ಎನಿಸುವನು ಶರಭವೊಂದೇರೂಪ ಧರ್ಮರಾ
ಜನ ಪತ್ನಿ ದೇವಕಿಯು ಶಾಮಲೆಯ ರೂಪವೆಂದಾ ನಮಿಪೆ ೪೪

ಯಮ ಭಾರ್ಯ ಶಾಮಲಾ ರೋಹಿಣಿದೇವಿ ಚಂ
ದ್ರಮನ ಸ್ತ್ರೀ ಅನಿರುದ್ಧದೇಹಿ ಉಷಾ
ದ್ಯುಮಣಿ ಭಾರ್ಯಾ ಸಂಜ್ಞ ಗಂಗಾ ವರುಣ ಭಾರ್ಯ
ಸುಮರಾರು ಜನರು ಪಾವಕಗೆ ಕಿಂಚಿದಧಮರೆಂದಾ ನಮಿಪೆ ೪೫

ಎರಡು ಗುಣ ಮಿತ್ರಗಿಂದಧಮ ಪರ್ಜನ್ಯ ಈ
ರೆರಡು ವಹ್ನಿಗೆ ಕಡಿಮೆ ಪಾದಮಾನೀ
ಸುರಪನಂದನ ಜಯಂತನು ಪ್ರಹಲ್ಲಾದ ಈ
ರ್ವರು ಮುಖ್ಯರಧಮ ಪರ್ಜನ್ಯಗೆಂದೆಂದು ೪೬

ಎರಡು ಗುಣ ಪರ್ಜನ್ಯಗಿಂದಧಮಳು ಸ್ವಹಾ
ರೆರಡಧಿಕ ಗುಣದಿ ಸ್ವಪತಿಗೆ ನೀಚಳೂ
ಹರಿ ಶಕ್ರಸತಿ ಅಶ್ವಿ ಯುಕ್ತಾಭಿಮನ್ಯು ಚಂ
ದಿರಜ ಬುಧನವತಾರ ಸ್ವಾಹಾ ದೇವಿಗಧಮಳೆಂದಾ ನಮಿಪೆ ೪೭

ಎನಿಸುವಳು ಶಲ್ಯ ಜರಾಸಂಧನಾತ್ಮಜಾ
ಶ್ವಿನಿ ಭಾರ್ಯಾನಾಮಾಭಿಮಾನಿ ಉಷಾ
ಘನರಸಾಧಿಪ ಬುಧಗೆ ಕಿಂಚಿದ್ಗುಣ ಕಡಿಮೆ
ಅವಳ ಪತ್ನಿಗೆ ದಶಗುಣಾಧಮಳುಯೆಂದು ೪೮

ಧರಣಿಗಭಿಮಾನಿ ಎನಿಸುವ ಸೂರ್ಯಸುತ ಶನೇ
ಶ್ವರ ಉಷಾದೇವಿಗೆರಡು ಗುಣಾಧಮ
ತರಣಿ ನಂದನಗೆ ಸತ್ಕರ್ಮಾಭಿಮಾನಿ ಪು
ಷ್ಕರ ಕಡಿಮೆ ಪಂಚಗುಣದಿಂದ ಎಂದೆಂದು ೪೯

ನಾರದನ ಶಿಷ್ಯ ಪ್ರಹ್ಲಾದ ಬಾಲ್ಹೀಕ ಸ
ಮೀರ ಸಂಯುಕ್ತ ಸಹ್ಲಾದ ಶಲ್ಯಾ
ಮೂರನೆಯನುಹ್ಲಾದ ಸವಿತ್ರನಾವೇಶದಲಿ
ತೋರಿದನು ದೃಷ್ಟಕೇತು ಎನಿಸಿ ಧರೆಯೊಳಗೆ ೫೦

ತಾಮಾಂಶಯುಗ್ ಜಯಂತನು ಬಭ್ರುವಹ ವರು
ಭೌಮನು ಯಿರಾವಾನ್ ಚಿತ್ರಗುಪ್ತಾ
ನಾಮಕ ಸುಹೋತ್ರನು ಮಣಿ ಭದ್ರಾಖ್ಯ ಸು
ತ್ರಾಮನವತಾರವೆಂದರಿದು ನಿತ್ಯದಲಿ ೫೧

ಚಾವನೋಚಿಥ್ಯ ಋಷಿಗಳು ನೂರು ಚಾಕ್ಷುಸನು
ರೈವತ ಸ್ವಾರೋಚಿಷೋತ್ತಮನು
ಸಾವರ್ಣಿ ಬ್ರಹ್ಮ ರುದ್ರಾವ್ಹ ಸಾವರ್ಣಿತ್ರಯ
ದೇವೇಂದ್ರ ದಕ್ಷ ಧರ್ಮಾಖ್ಯ ಸಾವರ್ಣೀಗಳಿಗಾನಮಿಪೆ ೫೨

ಮನುಗಳೇಕಾದಶರು ತದನಂತರದಿ ವಿರೋ
ಚನಪುತ್ರ ಬಲ್ಯಾದಿ ಭಾವೀಂದ್ರರಾ
ಇನಿತು ನಾಮವ ಪೇಳೆ ಕರ್ಮದೇವತೆಗಳೆಂ
ದೆನಿಸುವರು ಲೋಕದೊಳು ಸರ್ವತ್ರ ಸರ್ವದ ೫೩

ಮನುಗಳೇಕಾದಶರು ತದನಂತರದಿ ವಿರೋ
ಚನಪುತ್ರ ಬಲ್ಯಾದಿ ಭಾವೀಂದ್ರರಾ
ಇನಿತು ನಾಮವ ಪೇಳೆ ಕರ್ಮ ದೇವತೆಗಳೆಂ
ದೆನಿಸುವರು ಲೋಕದೊಳು ಸರ್ವತ್ರ ಸರ್ವದ ೫೪

ಬಲಿರುದ್ಭುತಃ ಶಂಭು ವಿಧೃತಿ ರತಧಾಮ ನಿ
ಷ್ಕಲುಷನು ದಿವಸ್ಪತಿಯು ಶುಚಿಸಪ್ತರು
ಕುಲಿಶಧರಪದಯೋಗ್ಯರನ್ಯ ಕರ್ಮಪ ನೃಪರು
ಜಲಜಾಕ್ಷ ವಿಷ್ಣು[ವಿ]ನಾವೇಶಯುತರೆಂದು ೫೫

ಕೃತವೀರ್ಯ ತನಯ ಶಶಿಬಿಂದು ಮಾಂ
ಧಾತ ಗಯನಾಮಕ ಕಕು ಸ್ಥಪ್ರೀಯ ವ್ರತತಿ ಜನ್ಮ
ಧೃತ ಭರತ ದೌಷ್ಯಂತಿ ಭರತ ಮುಖ್ಯ ರಾಜನ್ಯ
ಶತ ಅಷ್ಟ ಗಂಧರ್ವ ಸಪ್ತ ಪಿತೃಗಳಿಗೆ ೫೬

ದ್ವಿನವತಿ ಅಪ್ಸರ ಸ್ತ್ರೀಯರು ಮೊದಲಾದ ಶತ
ಗುಣದಿಂದಧಮರು ಪರ್ಜನ್ಯಗಿಂದ
ದನುಜಾರಿ ಆವೇಶ ಬರಲು ಪರ್ಜನ್ಯಾದಿ
ಅನಿಮಿಷಗುತ್ತಮರು ಕರ್ಮ ದೇವತೆಗಳೆಂದಾನಮಿಪೆ ೫೭

ಸುರಕುಲೋದ್ಭೂತ ಅನಾಖ್ಯಾತ ಅಜಾನಜೇಯಾ
ಮರರು ಎನಿಸುವರು ಉದ್ವಹನಾಮ ತಾ
ಮರುತನಾವೇಶಯುತ ಸಂಜಯ ವಿರಾಧ ತುಂ
ಬರನ ಅವತಾರವೆಂದರಿದು ನಿತ್ಯದಲಿ ೫೮

ಜನಮೇಜಯ ತ್ವಷ್ಟನಾಮಿಷ್ಟ ಚಿತ್ರರಥ
ದನುನಾಮ ಗಂಧರ್ವ ದಮಘೋಷನು
ಎನಿಸುವ ಕದಂಬದ್ವಯಾಬ್ಜ ಸ್ಥಾಯಂಭು
ಮನು ಯುಕ್ತಾಕ್ರೂರ ಕರೆಸುವ ಕಿಶೋರನೆಂದಾನಮಿಪೆ ೫೯

ಧೃತರಾಷ್ಟ್ರ ಗಂಧರ್ವ ವಾಯುವಾವೇಶದಿಂ
ಧೃತರಾಷ್ಟ್ರ ನೆನಿಸಿದರು ನಕ್ರ ದ್ರುಪದ
ಕ್ಷಿತಿಪರೀರ್ವರು ಹೂಹು ಗಂಧರ್ವಾಹವ ವಾಯು
ಯುತನಾಗಿ ಜನಿಸಿಹರು ಹರಿಸೇವೆಗೆಂದು ೬೦

ವೃಂದಾರಕರ ಗಾಯಕನೆನಿಪ ಹಾಹಾ ವಿವಹ
ಗಂಧರ್ವನಾವೇಶ ಯುಗ್ವಿರಾಟಾ
ನಂದದಂಶಜಗರನು ವಿದ್ಯಾಧರ ಕಂಸನ
ತಂದೆಯೆನಿಪುಗ್ರಸೇನನೆ ವುಗ್ರಸೇನನೆಂದಾ ನಮಿಪೆ ೬೧

ತಾಮರಸ ಭವಯುಕ್ತನಾದ ವಿಶ್ವಾವಸು ಯು
ಧಾಮನ್ಯು ವುತ್ತಮೋಜಸನು ಆರ್ಯನು
ವೋಮಮಣಿಯುಕ್ ಪರಾವಹ ಸುಪತ್ಯ ಜನ್ಮಿತ್ರ
ನಾಮಕಾನವಿಷ್ಟ ಚಿತ್ರಸೇನನಿಗೆ ೬೨

ಬಲನೆಂಬ ಗಂಧರ್ವ ಮೊದಲಾದ ನೂರು ಗೋ
ಕುಲದೊಳಗೆ ಗೋಪಾಲರೆನಿಸುತಿಹರು
ತಿಳಿವುದೂರ್ವಶಿ ಮುಖ್ಯ ಅಪ್ಸರರೊಳಗೆ ಪಿಂ
ಗಳ ನಾಮ ಅಪ್ಸರನ ಸೈರಂಧ್ರಿ ಯೆನಿಪಳೆಂದಾ ನಮಿಪೆ ೬೩

ನಕುಲನ ಲಲನೆ ಪಾರ್ವತಿ ತಿಲೋತ್ತಮಳು ಷ
ಣ್ಮುಖಿ ಜನನಿ ಸಂಯುಕ್ತ ಅಭಿಮನ್ಯು ನಾ
ಸಖಿ ಸುಭದ್ರಾ ತ್ರಿಜಟ ನಾಮಕಳು ಪೂರ್ವದಲಿ
ಅಕಳಂಕ ಗೋಪಿಕಾಸ್ತ್ರೀಯರು ಅಪ್ಸರರೆಂದಾನಮಿಪೆ ೬೪

ನೂರುಳಿದು ಶತಕೋಟ ಋಷಿಗಳುತ್ತಮರ ಬಿ
ಟ್ಟೀರೆಂಟು ಸಾವಿರದ ನೂರೆನಿಸುವ
ಶೌರಿ ಸ್ತ್ರೀಯರು ರಮಾವೇಶಯುತರಗ್ನಿಗೆ ಕು
ಮಾರಕರು ಪಾವಕಗೆ ಅಧಮರೆಂದರಿದು ೬೫

ಇವರೊಳಧಿಕ ಕಸೇರು ತ್ವಷ್ಟಾ ನಾಮಕ ಸೂರ‍್ಯ
ಕುವರಿ ಅಜಾನಜರು ಕರ್ಮಜರಿಗೆ
ಅವರರೀರೈವತ್ತು ಗುಣದಿ ಅಜಾನಜರಿಗೆ
ದಿವಿಜ ಕೃಶಾನು ಸೂನುಗಳು ಸಮರೆಂದರಿದು ೬೬

ಕೃಷ್ಣಾಂಗ ಸಂಗ ಗೋಪಿಯರಿಂದಲಿ ಭಕ್ತಿ
ದ್ವೃಷ್ಟ ಸಹಸ್ರ ಶತ ಸ್ತ್ರೀ ಯರಧಿಕಾ
ವಿಷ್ಣು ಪತ್ನ್ಯಾವೇಶ ಬರಲು ಅಜಾನಜರಿಗೆ
ಶ್ರೇಷ್ಠರೆನಿಪರು ಹ್ರಾಸಕಾಲದಲಿ ಸಮರೆಂದು ೬೭

ನಂದಗೋಪಿನಿ ಅಗ್ನಿ ಪುತ್ರರ್ಗೆ ಸಹಸ್ರಗುಣ
ದಿಂದುತ್ತಮಳು ದೇವಕಿ ಯಶೋದೆಗೆ
ವಂದ್ಯಳೆನಿಪಳು ವಸುದೇವ ಉತ್ತಮ ಏಳು
ಮಂದಿಗಳನುಳಿದು ಚಿರಪಿತೃ ಶತಾಧಮರೆಂದು ೬೮

ಸ್ವಮುಖ ಪ್ರೇರಿತ ದೇವ ಗಂಧರ್ವಗಣ ಶತಾ
ಧಮ ಚಿರ ಪಿತೃಗಳಿಗೆ ನರಗಾಯಕ
ಸಮುದಾಯ ನೂರುಗಣ ಕ್ಷಿತಿಪರೈವತ್ತು
ಸಮಿತ ಗುಣ ಮನುಜೋತ್ತಮರು ಶತಾವರರೆಂದು ೬೯

ಪರಮ ಮುಖ್ಯ ಸುತಾತ್ತ್ವಿಕರು ಎನಿಪರೀ ಶನ್ಯೈ
ಶ್ಚರನ ಪರಿಯಂತ ಧರಾಂತವಾಗಿ
ಕರೆಸುವರಮುಖ್ಯ ತಾತ್ತ್ವಿಕರೆಂದು ತಮ್ಮೊಳಗೆ
ಶರದಶ ಶತಸಹಸ್ರನಂತೆ ಗುಣದಿ ಕ್ರಮದಿ ೭೦

ದೇವತಾ ಸ್ತ್ರೀಯರು ತಮ್ಮ ಪತಿಗಳಿಗೆ ದಶ ಗು
ಣಾವರರು ಎನಿಪರು ಮುಕ್ತಿಯೊಳಾದರು
ಈ ವಿಧದಿ ನೀಚೋಚ್ಚಕ್ರಮವರಿತು ಭಜಿಪರಿಗೆ
ಈವರಖಿಳಾರ್ಥಗಳ ಅಹಿಕ ಪಾರತ್ರದಲಿ ೭೧

ಭಕ್ತಿ ವಿಜ್ಞಾನ ಬಲ ದೇವತಾ ಗಣಕಭಿ
ವ್ಯಕ್ತಿ ತತ್ತದ್ಯೋಗ್ಯತಾನುಸಾರಾ
ಮುಕ್ತಿ ಪರಿಯಂತ ಭಗವದ್ರೂಪ ದರ್ಶನ ಪ್ರ
ಯುಕ್ತ ಮಾಳ್ಪರು ಸಾಧನಗಳ ನಿಷ್ಕಾಮದಿ ೭೨

ಪ್ರತಿ ದಿನಗಳಲ್ಲಿ ಸದ್ಭಕ್ತಿ ಪೂರ್ವಕ ತ್ರಿಸ
ಪ್ತತಿ ಪದಾತ್ಮಕ ಬೃಹತ್ತಾರತಮ್ಯಾ
ಜಿತವಾಗಿ ಕಂಠ ಮಧ್ಯದಲಿ ಧರಿಸುವರ ಶಾ
ಶ್ವತ ಕರುಣೆ ಸಂತೈಪ ಸರ್ವಕಾಲದಲೀ ೭೩

ಪುರುಷ ರೂಪನೆ ಕ್ಷರಾಕ್ಷರ ಪುರುಷ ಪೂಜ್ಯ ಸಮ
ಚರಣ ಪಂಕಜ ಚಾರು ಚರಿತ ಸ್ವರತಾ
ಕರುಣಾಕರೇಶ ಕಾಮಿತ ಕಲ್ಪತರು ಜನ್ಮ
ಮರಣವಿವರ್ಜಿತ ಜಗನ್ನಾಥ ವಿಠ್ಠಲರಾಯಗಾ ನಮಿಪೆ ೭೪

ಶ್ರೀ ಜಗನ್ನಾಥ ವಿಠಲ ಸ್ತೋತ್ರ

೪

ಇದನೆ ಪಾಲಿಸು ಜನ್ಮ ಜನ್ಮಗಳಲಿ ಪ

ಮಧುಸೂದನನೆ ನಿನ್ನ ಸ್ಮರಣೆ ದಾಸರ ಸಂಗ ಅ

ಪುಣ್ಯಪಾಪ ಜಯಾಪಜಯ ಕೀರ್ತಿ ಅಪಕೀರ್ತಿ
ಮನ್ಯುಮೋಹಾಸಕ್ತಿ ಕಾಮಲೋಭಾ
ನಿನ್ನಾಧೀನವು ಎನ್ನದಲ್ಲವೆಂದಿಗು ಪ್ರಕೃತಿ
ಜನ್ಮ ಗುಣಕಾರ್ಯವೆಂಬುವ ಜ್ಞಾನವೇ ಸತತ ೧

ಗುಣಕರ್ಮ ಕಾಲಗಳ ಮನಮಾಡಿ ಜೀವರಿಗೆ
ಉಣಿಸುತಿಹೆ ಸುಖದುಃಖ ಘನ ಮಹಿಮನೆ
ಗುಣಗಳಭಿಮಾನಿ ಶ್ರೀವನಿತಾರಮಣ ಪ್ರಯೋ
ಜನವಿಲ್ಲದಲೆ ಮಾಡಿ ಜನರ ಮೋಹಿಪಿಯೆಂಬೋ ೨

ಈಶ ನೀನಾದ ಕಾರಣದಿಂದ ಸುಖದುಃಖ
ಲೇಶವಿಲ್ಲವು ಸರ್ವಕಾಲಗಳಲಿ
ಕೇಶವ ಜಗನ್ನಾಥ ವಿಠ್ಠಲನೆ ಭಕ್ತರ ಪ್ರ
ಯಾಸವಿಲ್ಲದೆ ಕಾಯ್ವಿಯೆಂಬ ಸ್ಮರಣೆ ನಿರುತ ೩

೫೫

ಇದನೆ ಪಾಲಿಸು ಪಾಲಿಸೆನಗೆ ದೇವಾ ಪ

ವಿದುರ ಸನ್ನುತ ಮಹಿಮ ಪದೋಪದಗೆ ಬಿನ್ನೈಪೆ ಅ

ಶ್ರೀವಿರಿಂಚಾದ್ಯಖಿಳ ಚೇತನಾಚೇತನವು
ಶ್ರೀವರನೆ ನಿನಗಧಿಷ್ಠಾನವೆಂದೂ
ಸ್ಥಾವರಗಳೊಳಗೆ ನೈಜನುಯೆನಿಸಿ ಪರಿಣಾಮ
ನೀವೆ ವೃದ್ಧಿ ಹ್ರಾಸ ಸರ್ವಕಾಲದ ವೆಂಬೋ ೧

ಪ್ರಕೃತಿ ಗುಣಗಳ ಪ್ರವೇಶಿಸಿ ಬಾಧ್ಯ ಬಾಧಕನು
ಅಕೃತಜ್ಞ ನೀನೆನಿಸಿ ಭಕತಾ ಜನರಾ
ಸುಕೃತ ದುಷ್ಕೃತ ಕರ್ಮ ಪರಿಹರಿಸಿ ಪಾಲಿಸುವೆ
ಸಕೃತ ನಿನ್ನನು ಸ್ಮರಿಸಿ ಹಿಗ್ಗುವರ ಸಂಗ ಸುಖ ೨

ಕರ್ತು ಕಾರ್ಯರ್ತು ಪ್ರೇರಕ ಪ್ರೇರ್ಯ ಸುಖ ಸಾಕ್ಷಿ
ಕ್ಷೇತ್ರ ಧನಧಾನ್ಯಹಿಕ ಪಾರತ್ರಿಕಾ
ಮಿತ್ರ ತಮ ಶ್ರೀ ಜನಗನ್ನಾಥ ವಿಠಲನೆ ಸ
ರ್ವತ್ರ ವ್ಯಾಪಕ ಮಮಸ್ವಾಮಿಯೆಂಬೋ ಜ್ಞಾನ ೩

೬

ಇದು ನಿನಗೆ ಧರ್ಮವೇ ಇಂದಿರೇಶ
ಬದಿಗ ನೀನಾಗಿದ್ದು ಭೀತಿ ಪಡಿಸುವುದು ಪ

ನಿನ್ನ ಗುಣಗಳ ತುತಿಸಿ ನಿನ್ನನ್ನೇ ಹಾರೈಸಿ
ನಿನ್ನವರ ಪ್ರೀತಿಯನು ಸಂಪಾದಿಸಿ
ಅನ್ಯರನು ಲೆಕ್ಕಿಸದೆ ಚೆನ್ನಾಗಿ ಬಾಳುವ
ಮಾನ್ಯವರನ ಈ ಪರಿಯ ಬನ್ನಬಡಿಸುವುದು ೧

ದುರುಳನಲ್ಲವೊ ನಿನ್ನ ಚರಣ ಸೇವಕರವನೊ
ಪರಿಪಾಲಿಸುವುದು ನಿನ್ನ ಪರಮ ಧರ್ಮ
ಗುರುಗಳಂತರ್ಯಾಮಿ ಕರಮುಗಿದು ಬಿನ್ನೈಪೆ
ಶರಣ ರಕ್ಷಕನೆಂಬೊ ಬಿರಿದು ಸುಳ್ಳಾಗುತಿದೆ ೨

ಶೋಕನಾಶಕ ವಿಗತಶೋಕನೆಂಬೋ ನಾಮ
ನಾ ಕೇಳಿ ಮೊರೆಹೊಕ್ಕೆ ಲೋಕಬಂಧು ನಿ
ರಾಕರಿಸದೆಮ್ಮ ನೀ ಸಾಕಬೇಕನುದಿನವು
ವಾಕು ಮನ್ನಿಪುದು ಲೋಕೈಕ ರಕ್ಷಾಮಣಿಯೆ ೩

ಗುಣವೆ ನಿನಗಿದು ಬರಿದೆ ದಣಿಸುವುದು ಶರಣರನು
ಪ್ರಣತಾರ್ತಿಹರ ವಿಭೀಷಣ ಪಾಲಕ
ಕ್ಷಣಕನಂತಪರಾಧವೆಣಿಸುವರೆ ಕಡೆಯುಂಟೆ
ಮಣಿದು ಬಿನ್ನಹ ಮಾಳ್ಪೆ ದನುಜದಲ್ಲಣನೆ ೪

ನಮೋ ನಮೋ ಬ್ರಹ್ಮಣ್ಯ ದೇವರ ದೇವ
ನಮೋ ನಮೋ ಧನ್ವಂತ್ರಿ ದುರಿತ ಹಂತ್ರೀ
ನಮೋ ನಮೋ ಕಾರುಣ್ಯ ಶೀಲ ಸಜ್ಜನ ಪಾಲಾ
ನಮೋ ನಮೋ ಜಗನ್ನಾಥವಿಠಲ ವಿಖ್ಯಾತ ೫

೭

ಕರುಣಿಸೆನಗಿನಿತು ಕರುಣಾರ್ಣವನೆ ನಿನ್ನ
ಚರಣಾಬ್ಜದಲಿ ಭಕುತಿ ವಿಷಯದಿ ವಿರಕುತಿ ಪ

ಬಿಂಬನೇ ಸರ್ವ ಪ್ರಯೋಜನವ ಮಾಡಿ ಪ್ರತಿ
ಬಿಂಬರಿಗೆ ತತ್ಫಲಗಳೀವ ಕಾವ
ಬಿಂಬನೆ ಸ್ವತಂತ್ರ ಪ್ರತಿಬಿಂಬಾ ಸ್ವತಂತ್ರತಮ
ನೆಂಬ ಸುಜ್ಞಾನ ಪೂರ್ವಕ ನಿನ್ನ ಭಜಿಪ ಸುಖ ೧

ಕಾರ್ಯ ಕಾರಣ ಅಂಶಿ ಅಂಶಾವತಾರ ಅಂ
ತರ್ಯಾಮಿ ವ್ಯಾಪ್ಯ ವ್ಯಾಪಕ ಪ್ರೇರಕ
ಪ್ರೇರ್ಯ ಬಾಧಕ ಬಾಧ್ಯ ಪೋಷ್ಯ ಪೋಷಕ ರೂಪ
ಆರ್ಯರಿಂದರಿತು ಅನುದಿನದಿ ಸುಖಿಸುವ ಭಾಗ್ಯ ೨

ತಾರತಮ್ಯದ ಜ್ಞಾನ ದುರ್ವಿಷಯಗಳಲಿ ಸ
ದ್ವೈರಾಗ್ಯ ಹರಿದ್ವೇಷಿಗಳಲಿ ದ್ವೇಷಾ
ಸೂರಿಗಳ ಸಂಗ ಗುಣರೂಪಕ್ರಿಯೆಗಳನು ಸುವಿ
ಚಾರಗೈಯುತ ನಿತ್ಯ ಅನುಮೋದ ಬಡುವಂತೆ ೩

ಮಿಂದೋದಕಗಳೆಲ್ಲ ಮಜ್ಜನವು ದೇಹಾನು
ಬಂಧಿ ಜನರೆಲ್ಲ ನಿನ್ನ ಪರಿವಾರವು
ನಿಂದ್ಯ ಕರ್ಮಗಳೆಲ್ಲ ಪಾದುಕಗಳೆಂಬ ಅನು
ಸಂಧಾನ ಮನಕೆ ನಿತ್ಯದಲಿ ಬರುವಂತೆ ೪

ಚೇತನಾಚೇತನಗಳೆರಡು ಪ್ರತಿಮೆಗಳು ಸಂ
ಪ್ರೀತಿಯಲಿ ಸುರಕ್ಷಿಸುವುದು ಪೂಜೆ
ಈ ತನುವೆ ಸದನವೆಂದರಿತು ನಿತ್ಯದಿ ಜಗ
ನ್ನಾಥ ವಿಠ್ಠಲನೆಂಬ ವಿಷಯವೇ ಮುಖವೆಂದು ೫

೮

ಕಾಯೋ ಕಾಯೋ ಪ

ಕಾಯೋ ಕಾಯೋ ಕಮಲಯತಾಕ್ಷ ಭವ
ತೋಯಧಿಯೊಳು ಬಿದ್ದು ಬಾಯ ಬಿಡುವನ ಅ

ಅದ್ವೈತ ತ್ರಯದದ್ವ ಪ್ರವರ್ತಕ
ಸದ್ವೈಷ್ಣವರ ಪದದ್ವಯತೋರಿ ೧

ಸಂಜೆಯ ತೋರಿ ಧನಂಜಯನುಳುಹಿದ
ಕುಂಜರವರದ ನಿರಂಜನ ಮೂರ್ತೆ ೨

ಸತ್ಯಕಾಮ ತವ ಭೃತ್ಯೆಗೆ ಬಂದಪ
ಮೃತ್ಯು ಕಳೆದು ಸಂಪತ್ತು ಪಾಲಿಸಿದೆ ೩

ಕುಕ್ಷಿಯೊಳಂದು ಪರೀಕ್ಷಿದ್ರಾಜನ
ರಕ್ಷಿಸಿದಂತೆ ಪ್ರತಿಕ್ಷಣದಲಿ ೪

ಎಲ್ಲರೊಳಿಹ ಕೈವಲ್ಯದರಸು ನೀ
ಬಲ್ಲಿದನೆಂಬುದ ಬಲ್ಲೆ ಬಹು ಬಗೆ ೫

ನೀ ದಯ ಮಾಡದಿರೀ ದಿವಿಜರು ಒಲಿ
ದಾದರಿಸುವರೆ ವೃಕೋದರ ವಂದ್ಯ ೬

ಅಧಮ ನಾನಹುದುದಧಿ ಮಥನ ಸ
ನ್ಮುದ ಮುನಿಮತ ಪೊಂದಿದವರಣುಗನು ೭

ಕ್ಷುದ್ರ ಭೂಮಿಪರುಪದ್ರವ ಕಳೆದು ಸು
ಭದ್ರವೀಯೋ ಕ್ಷುದ್ರುಮದಂತೆ ೮

ವೀತಭಯ ಜಗನ್ನಾಥ ವಿಠಲ ಸು
ಖೇತರ ಕಳೆದು ಮಹಾತಿಶಯದಲಿ ೯

೬

ದಯವಾಗೋ ದಯವಾಗೋ ಪ

ಹಯಮುಖ ಭಯಕೃದ್ಭಯನಾಶನ ಹರಿ ಅ

ದ್ರೌಪದಿ ಮೊರೆ ಕೇಳ್ದ್ಯಾಪದ್ಬಾಂಧವ
ನೀ ಪೊರೆದಯ್ ರಮಾಪತಿ ನಿರುತ ೧

ಖರಮುರ ನರಕಾದ್ಯರ ಸಂಹರಿಸಿದೆ
ಪರಮ ಪುರುಷ ಸಂಹರಭವಹರನೆ ೨

ಶತ್ರುತಾಪಕ ಜಗತ್ರಯ ವ್ಯಾಪ್ತ ಪ
ವಿತ್ರ ಪಾಣಿ ಸರ್ವತ್ರದಿ ಎಮಗೆ ೩

ಎಷ್ಟೆಂದುಸುರಲಿ ದುಷ್ಟಜನರು ಬಲು
ಕಷ್ಟ ಬಡಿಪ ಬಗೆ ಜಿಷ್ಣು ಸಾರಥಿಯೆ ೪

ಗೋಭೂಸುರರಿಗೆ ಭೂಭುಜರ ಭಯ ಪ
ರಾಭವಗೈಸುದು ಶ್ರೀ ಭೂರಮಣನೆ ೫

ಅಪ್ರಮೇಯ ನೀ ಕ್ಷಿಪ್ರದಿ ಒಲಿದು ಜ
ಯಪ್ರದನಾಗು ಸುಪ್ರಹ್ಲಾದವರದನೆ ೬

ಯಾತಕೆ ಎಮ್ಮನು ಭೀತಿಗೊಳಿಪೆ ಪುರು
ಹೂತವಿನುತ ಜಗನ್ನಾಥವಿಠ್ಠಲಾ ೭

೧೦

ದಾಸೋಹಂ ತವ ದಾಸೋಹಂ ಪ

ವಾಸುದೇವ ವಿತತಾಘಸಂಘ ತವ ಅ

ಜೀವಾಂತರ್ಗತ ಜೀವ ನಿಯಾಮಕ
ಜೀವವಿಲಕ್ಷಣ ಜೀವನದ
ಜೀವಾಧಾರಕ ಜೀವರೂಪ ರಾ
ಜೀವ ಭವಜನಕ ಜೀವೇಶ್ವರ ತವ ೧

ಕರ್ಮಕರ್ಮಕೃತ ಕರ್ಮಕೃತಾಗಮ
ಕರ್ಮ ಫಲಪ್ರದ ಕರ್ಮಜಿತ
ಕರ್ಮಬಂಧ ಮಹಕರ್ಮ ವಿಮೋಚಕ
ಕರ್ಮನಿಗ್ರಹ ಕರ್ಮಸಾಕ್ಷಿ ತವ ೨

ಕಾಲಾಹ್ವಯ ಮಹಕಾಲ ನಿಯಾಮಕ
ಕಾಲಾತೀತ ತ್ರಿಕಾಲಜ್ಞ
ಕಾಲಪ್ರವರ್ತಕ ಕಾಲನಿವರ್ತಕ
ಕಾಲೋತ್ಪಾದಕ ಕಾಲಮೂರ್ತಿ ತವ ೩

ಧರ್ಮಯೂಪ ಮಹಧರ್ಮ ವಿವರ್ಧನ
ಧರ್ಮ ವಿಧೋತ್ತಮ ಧರ್ಮನಿಧೇ
ಧರ್ಮ ಸೂಕ್ಷ್ಮ ಮಹಧರ್ಮ ಸಂರಕ್ಷಕ
ಧರ್ಮಸಾಕ್ಷಿ ಯಮಧರ್ಮಪುತ್ರ ತವ ೪

ಮಂತ್ರಯಂತ್ರ ಮಹ ಮಂತ್ರ ಬೀಜ ಮಹ
ಮಂತ್ರರಾಜಗುರು ಮಂತ್ರ ಧೃತ (ಜಿತ)
ಮಂತ್ರಮೇಯ ಮಹಮಂತ್ರಗಮ್ಯ ಫಲ
ಮಂತ್ರಮೇಯ ಜಗನ್ನಾಥ ವಿಠಲ ತವ ೫

೧೧

ನಿನ್ನ ಪೋಲುವ ಕರುಣಿಗಳನಾರ ಕಾಣೆ ಪ್ರ
ಪನ್ನ ತಾ ಪಾಪಹರನೇ ಪ

ಎನ್ನಪರಾಧಗಳ ಎಣಿಸದಿರು ಅಜಭವಶ
ರಣ್ಯ ಪರಿಪೂರ್ಣೇಂದಿರಾಗಾರ ಅ

ಶುದ್ಧಾಖ್ಯ ದ್ವಿಜನು ದಾರಿದ್ರ್ಯದಲಿ ನೆರೆ ನೊಂದು
ಸದ್ಧರ್ಮ ತೊರೆದು ಮರೆದು
ಶ್ರಾದ್ಧಾದಿ ದುಷ್ಟನ್ನ ಮೆದ್ದು ನಿಂದಿತನಾಗಿ
ಬಿದ್ದಿರಲು ಸತಿಯು ಮತಿಯು
ತಿದ್ದಿ ಪೇಳಲು ಕೇಳಿ ಶುದ್ಧ ಭಾವದಿ ತವ ಪ
ದದ್ವಯಕ್ಕೆರಗಿ ಮರುಗಿ ಪದ್ಮೇಶ ಸಲಹೆನಲು
ಸಿದ್ಧಿಸಿ ಮನೋರಥವ ಉದ್ಧಾರವನು ಮಾಡ್ದೆ ನೋಡ್ದೆ ೧

ವಿಧಿಯ ಸಂಸ್ತುತಿ ಕೇಳಿ ಮದ್ವಜಾಕಾರಿ
ಮದಡತಮನುದರ ಬಗೆದೇ
ಉದಧಿ ಮಥನದಲುದಿಸಿದಮೃತ ದೇವತೆಗಳಿಗೆ
ಮುದದಿಂದಲೆರೆದೆ ಪೊರೆದೆ
ಕದನ ಕರ್ಕಶ ಹೇಮ ಲೋಚನನ ನೀ ದೌಂಷ್ಟ
ತುದಿಯಿಂದ ಕೊಂದೆ ತಂದೆ
ಬೆದರದಲೆ ಕರೆದರ್ಭಕನ ನುಡಿಗೆ ಅವನಯ್ಯ
ನುದರ ರಕ್ತವನು ಸುರಿದೇ ಮೆರೆದೇ ೨

ವೈರೋಚನಿಯ ಭೂಮಿ ದಾನವನು ಬೇಡಿ ಭಾ
ಗೀರಥಿಯ ಪಡದಿ ಪದದಿ

ಧಾರಿಣಿಯ ದಿವಿಜರಿಗೆ ದಾನವಿತ್ತವನಿಪರ
ಗಾರು ಮಾಡಿದೆ ಸವರಿದೇ
ನೀರಧಿಯ ಬಂಧಿಸಿ ದಶಾಸ್ಯನ ಬಲವನು ಸಂ
ಹಾರ ಮಾಡಿದೆ ರಣದೊಳು
ಕಾರಗೃಹದೊಳಗಿಪ್ಪ ಜನನಿ ಜನಕರ ಬಿಡಿಸಿ
ತೋರಿಸಿದೆ ವಿಶ್ವರೂಪಾ ಶ್ರೀಪಾ ೩

ಆದಿತೇಯರು ಮಾಳ್ಪ ಸಾಧುಕರ್ಮಗಳ
ಶುದ್ಧೋದನಾಚರಿಸೆ ತಿಳಿದು
ವೇದ ಶಾಸ್ತ್ರಾರ್ಥ ಪುಸಿಯೆಂದರುಪಿ ಜಿನನತಿ
ಭೇದಗೈಸಿದೆ ಸಹಿಸಿದೇ
ಭೇದಗೊಳಿಸುವ ಕಲಿಯ ಕೊಂದು ಶೀ
ಘ್ರದಿ ತಮಸಿಗೈಸಿದೆ ಕಲ್ಕಿ ಭಳಿರೇ
ಸ್ವೋದರದಿ ನಿಖಿಳ ಲೋಕವನೆಲ್ಲ ಧರಿಸಿ ಪ್ರಳ
ಯೋದಕದಿ ಮಲಗಿ ಮೆರೆದೇ ಪೊರೆದೇ ೪

ಹಂಸರೂಪದಲಿ ಕಮಲಾಸನಗೆ ತತ್ವೋಪ
ದೇಶಮಾಡಿದೆ ಕರುಣದೀ
ವ್ಯಾಸಾವತಾರದಲಿ ದೇವ ಋಷಿ ಪಿತೃಗಳಭಿ
ಲಾಷೆ ಪೂರೈಪ ನೆವದೀ
ಭಾಷ್ಯತ್ರಯಗಳಿಂದ ಭಗವದ್ಗುಣಂಗಳ ಪ್ರ
ಕಾಶ ಮಾಡಿದೆ ಮೋದದಿ
ಭಾಷ್ಯತ್ರಯಗಳಿಂದ ಭಗವದ್ಗುಣಂಗಳ ಪ್ರ
ಕಾಶ ಮಾಡಿದೆ ಮೋದದಿ
ವಾಸವಾನುಜ ಜಗನ್ನಾಥವಿಠಲ ನಿನ್ನವರ ಸಲ
ಹೋ ಸಮರ್ಥಾ ಕರ್ತಾ ೫

೧೨

ನಿನ್ನ ಸಂಕಲ್ಪಾನುಸಾರ ಮಾಡೋ
ಎನ್ನ ಸಾಕುವ ಧೊರೆಯೆ ತಿಳಿದು ನೀ ನೋಡೋ ಪ

ಪಾತ್ರನೆಂದೆನಿಸೋ ಬಹು ಪಾಪಾತ್ಮನೆಂದೆನಿಸೋ
ಶ್ರೋತ್ರೀಯನೆಂದೆನಿಸೋ ಶುಂಠನೆನಿಸೋ
ಪುತ್ರಮಿತ್ರಾದ್ಯರಿಂ ಬಯಸಿ ಪೂಜೆಯಗೈಸೋ
ಕರ್ತೃ ನೀ ಜಗಕೆ ಸರ್ವತ್ರ ವ್ಯಾಪಕನೆ ೧

ಜನರೊಳಗೆ ನೀನಿದ್ದು ಜನ್ಮಗಳಲ್ಲಿ
ಗುಣಕಾಲಕರ್ಮ ಸ್ವಭಾವಂಗಳಾ
ಅನುಸರಿಸಿ ಪುಣ್ಯ ಪಾಪಗಳ ಮಾಡಿಸಿ ಫಲಗ
ಳುಣಿಸಿ ಮುಕ್ತರ ಮಾಡಿ ಪೊರೆವೆ ಕರುಣಾಳು ೨

ಯಾತಕೆನ್ನನು ಇನಿತು ದೂಷಕನ ಮಾಡುವಿ ಧ
ರಾತಲದೊಳನುದಿನದಿ ಮಾಯಾಪತೇ
ಭೀತಿಗೊಂಬುವನಲ್ಲ ಭಯನಿವಾರಣ ಜಗ
ನ್ನಾಥ ವಿಠ್ಠಲ ಜಯಪ್ರದನೆ ಜಗದೀಶಾ ೩

೧೩

ನಿಲ್ಲು ಬಾರೊ ದಯಾನಿಧೆ ಪ

ನಿಲ್ಲು ಬಾರೋ ಸರಿಯಲ್ಲ ನಿನಗೆ ಲಕ್ಷ್ಮೀ
ವಲ್ಲಭ ಮನ್ಮನದಲಿ ಬಿಡದೆ ಬಂದು ಅ

ಅತಿ ಮೃದುವಾದ ಹೃತ್ಸತ ಪತ್ರಸದನದಿ ಶಾ
ಶ್ವತವಾಗಿ ಭವ್ಯ ಮೂರುತಿ ಭಕ್ತವತ್ಸಲ ೧

ತನುಮನಧನದ ಚಿಂತೆಯ ಬಿಟ್ಟು ತ್ವತ್ಪದ
ವನರುಹ ಧೇನಿಪೆ ಮನುಮಥನಯ್ಯ ೨

ಆಶೆಪುಟ್ಟಿತು ನಿನ್ನಲ್ಲೀ ಸಮಯದಲಿ ಪಾ
ರಾಶರವರದ ಪೂರೈಸು ಬಯಕೆಯ ೩

ನಾನಾವ್ರತಂಗಳ ನಾನನುಕರಿಸಿದೆ ಶ್ರೀನಿಧಿ
ನಿನ್ನಂಘ್ರಿ ಕಾಣಬೇಕೆನುತಲಿ ೪

ಯಾತರ್‍ಯೋಚನೆ ಮನಸೋತ ಬಳಿಕ ಪುರು
ಹೂತವಂದಿತ ಜಗನ್ನಾಥವಿಠ್ಠಲರೇಯ ೫

೧೪

ಪತಿತ ಪಾವನ ನಾಮ ಪೂರ್ಣ ಕಾಯ ಪ

ಗತಿ ನೀನೆ ಎನಗೆ ಸಂತತ ಪರಂಧಾಮಾ ಅ

ಕೃಪಣ ವತ್ಸಲನೆ ಎಮ್ಮಪರಾಧಗಳ ನೋಡಿ
ಕುಪಿತನಾಗುವರೇನೋ ಸುಫಲದಾಯೀ
ನೃಪಗನಿರುದ್ಧ ಬಿನ್ನಪವ ಮಾಡುವೆ ನಿನಗೆ
ಚಪಲ ಚಿತ್ತರಾದ ಕಾಶ್ಯಪಿಸುರರನ ಕಾಯೋ ೧

ಮಾನ್ಯಮಾನದನೆ ಬ್ರಹ್ಮಣ್ಯದೇವ ನೀನೆಂದು
ಉನ್ನತ ಶ್ರುತಿಗಳು ಬಣ್ಣಿಸುವುವು
ಸನ್ನುತ ಮಹಿಮನೆ ನಿನ್ನ ಪೊಂದಿದವರ
ಬನ್ನ ಬಡಿಸುವುದು ನಿನಗಿನ್ನು ಧರ್ಮವು ಅಲ್ಲ ೨

ಹಲವು ಮಾತುಗಳಾಡಿ ಫಲವೇನು ಬ್ರಾಹ್ಮಣರ
ಕುಲಕೆ ಮಂಗಳವೀಯೋ ಕಲುಷದೂರ
ಸುಲಭ ದೇವೇಶ ನಿನ್ನುಳಿದು ಕಾವರ ಕಾಣೆ
ಬಲಿಯ ಬಾಗಿಲ ಕಾಯ್ದ ಜಗನ್ನಾಥ ವಿಠಲಾ ೩

೧೫

ಪಾಹಿ ಪದ್ಮದಳಾಯತಾಂಬಕ ಪಾಹಿ ಪದ್ಮಾರಮಣ ಪರಾತ್ಪರ
ಪಾಹಿ ಪದ್ಮಾಸನ ಜನಕ ಮಾಂ ಪಾಹಿ ಪ್ರಪನ್ನ ಪಾಲಕ ಪ

ವಾಸುದೇವ ಕೃತೀಶ ಶಾಂತಿಪ
ಕೇಶವಾಚ್ಯುತ ವಾಮನ ಹೃಷೀಕೇಶ
ಪ್ರಶ್ನಿಗರ್ಭ ಋಷಭ ನೃಕೇಸರಿ ಹಯಗ್ರೀವ ವೇದ
ವ್ಯಾಸ ದತ್ತಾತ್ರಯ ಉರುಕ್ರಮಾ
ವಾಸವಾನುಜ ಕಪಿಲ ಯಜ್ಞ ಮ
ಹೇಶ ಧನ್ವಂತ್ರಿ ಹಂಸ ಮಹಿ
ದಾಸ ನಾರಾಯಣ ಕೃಷ್ಣಹರೆ ೧

ಮಾಧವ ಪ್ರದ್ಯುಮ್ನ ಶ್ರೀ ದಾಮೋದ
ರಾಧೋಕ್ಷಜ ಜನಾರ್ದನ ಶ್ರೀಧರ ಶ್ರೀ
ಪದ್ಮನಾಭ ವೃಕೋದರ ಪ್ರಿಯತಮ ತ್ರಿವಿಕ್ರ
ಮ ದೇವಗರ್ಭ ವಿರಿಂಚಿ ವಿನುತ
ಗದಾಧರ ಗಯಾಸುರ ವಿಮರ್ದನ
ಸಾಧಿತ ಜಗತ್ರಯ ಪುರಾತನ
ಪಾದ ಪರಮ ಕೃಪಾಂಬುಧೇ ಮಾಂ ೨

ನಂದಗೋಪನ ಕುಮಾರ ಗೋಪಿ
ವೃಂದ ಪೋಷಿತನಮಿತ ಸಂಕ್ರಂಡನ ಕೃಪಾ
ಸಾಂದ್ರ ವರ ಕಾಳಿಂದಿ ತಟನಿ ವಿಹಾರ ಪಾಂಡವ
ಬಂಧು ದ್ರೌಪದಿವರದ ನೃಪ ಮುಚು

ಕುಂದಸ್ತುತಿ ಸಂಪ್ರೀತ ಲಕ್ಷ್ಮೀ
ಮಂದಿರ ಮಹಾ ಮಹಿಮ ನಿತ್ಯಾ
ನಂದಮಯ ನಿಜ ಭಕ್ತವತ್ಸಲ ೩

ಮೀನಕೂರ್ಮವರಾಹ ಪಂ
ಚಾನನಾ ದಿತಿಸುತ ವಾಮನ
ಕ್ಷೋಣಿಪಾರ್ವನ ಬ್ರಾಹ್ಮಣ ಪ್ರಿಯ
ವನೌಕಸನಾಥ ಮುಖ್ಯ
ಪ್ರಾಣಸಖ ವಸುದೇವ ದೇವಕಿ
ಸೂನು ಸುಂದರಕಾಯ ಪುರಹರ
ಬಾಣರೂಪ ಬುದ್ಧ ಕಲ್ಕಿ ಪ್ರ
ಧಾನ ಪುರುಷೇಶ್ವರ ದಯಾಕರ ೪

ನಿಂತ ನಿಜಬಲ ಮಾತುಳಾಂತಕ
ಶ್ವೇತವಾಹನ ಸೂತ ತ್ರಿಗುಣಾ
ತೀತ ಭವನಿಧಿ ಪೋತ ಮೋಕ್ಷನಿ
ಕೇತನಪ್ರದ ಭೂತಭಾವ ಧೌತ ಪಾಪ
ವ್ರಾತ ತ್ರಿಜಗತಾತ ನಿರ್ಗತ ಭೀತ
ಶ್ರುತಿ ವಿಖ್ಯಾತ ಭಕ್ತಿಸುವೇತನ ಪ್ರಿಯ
ಭೂತಿದ ಜಗನ್ನಾಥ ವಿಠ್ಠಲ ೫

೧೬

ಪಿಡಿ ಎನ್ನ ಕೈಯ್ಯ ರಂಗಯ್ಯ ಪ

ಪಿಡಿ ಎನ್ನ ಕೈಯ ಪಾಲ್ಗಡಲ ಶಯನ ಮೋಹ
ಮಡುವಿನೋಳ್ ಬಿದ್ದು ಬಾಯ್ಬಿಡುವೆ ಬೇಗದಿ ಅ

ನೀರಜನಾಭಾ ನಂಬಿದೆ ನಿನ್ನ ನೀರಪ್ರದಾಭಾ
ಕಾರುಣ್ಯ ನಿಧಿ ಲಕ್ಷ್ಮೀನಾರಸಿಂಹನ ಪರಿ

ವಾರಸಹಿತ ಈ ಶರೀರದೊಳಡಗಿರ್ದು
ಘೋರತರ ಸಂಸಾರ ಪಂಕದಿ
ಚಾರು ವರಿವನ ದೂರ ನೋಡುವ
ರೇ ರಮಾಪತೆ ಗಾರುಮಾಡದೆ
ಚಾರುವಿಮಲ ಕರಾರವಿಂದದಿ ೧

ಅನಿಮಿತ್ತ ಬಂಧೋ ನೀನೇ ಗತಿ ಗುಣ ಗಣಸಿಂಧೋ
ಅನಘಾ ನಾ ಸೇವಿಸುವೆನು ವಿಧಿ ಭವಸಂಕ್ರಂ
ದನ ಮುಖ್ಯ ವೇದ ಸನ್ಮುನಿ ಗಣಾರ್ಚಿತ ಪಾದಾ
ಅನುಜ ತನುಜಾಪ್ತಾನುಗ ಜನನೀ
ಜನಕ ಪಶು ಕೃಷಿ ಧನ ಸದನ ಸಂ
ಹನನ ಮೊದಲಾದಿನಿತು ಸಾಕುವ
ಘನತೆ ನಿನ್ನದು ಜನುಮ ಜನುಮದಿ ೨

ಶ್ರೀ ಜಗನ್ನಾಥವಿಠ್ಠಲ ದ್ವಿಜರಾಜ ವರೂಥ
ಓಜಕಾಮಿಕ ಕಲ್ಪ ಭೂಜ ಭಾಸ್ಕರ ಕೋಟಿ
ತೇಜ ಮನ್ಮನದಿ ವಿರಾಜಿಸು ಪ್ರತಿದಿನ
ಈ ಜಗತ್ರಯ ಭಂಜನನೆ ಬಹು
ಸೋಜಿಗವಲಾ ನೈಜ ನಿಜನಿ
ವ್ಯಾಜದಿಂದಲಿ ನೀ ಜಯಪ್ರದ
ನೈಜ ಜನರಿಗೆ ಹೇ ಜಗತ್ಪತೇ ೩

೧೭

ಬೆಡಗು ತೋರುತಲಿದಕೋ ಮಾಧವರಾಯ ಪ

ಉಡುರಾಜ ಮೌಳಿ ವಿನುತನೆ ಎನಗೊಂದು ಅ

ಕುಂಜವರದ ಧನಂಜಯ ದುರಿತ
ಭಂಜಿಸಿ ಕರದಿ ಗುಲಗುಂಜಿಯ ಪಿಡಿದಿದ್ದು ೧

ಮೋಕ್ಷ ಪದವಿಯ ಉಪೇಕ್ಷೆ ಮಾಡಿ ಬಂದು
ಈ ಕ್ಷಿತಿಯೊಳಗೆ ಪಂಪಾಕ್ಷೇತ್ರದಿ ಇಪ್ಪ ೨

ಸಗುಣ ಸಾಕಾರನೆ ಜನ್ನಾಥ ವಿಠಲನೆ
ಜಗತಿಯ ಬಗೆದಿಲ್ಲಿ ಮಿಗೆ ವಾಸವಾದದ್ದು ೩

೧೮

ಯಾತರವ ನಾನಯ್ಯ ಇಂದಿರೇಶ
ಹೋತಾಪ್ವಯನೆ ನಿನ್ನಾಧೀನ ಜಗವೆಲ್ಲ ಪ

ಕಾಲಗುಣಕರ್ಮ ಸ್ವಭಾವಗಳ ಮನ ಮಾಡಿ
ಶ್ರೀಲೋಲ ನೀ ಸರ್ವರೊಳಗೆ ಇದ್ದು
ಲೀಲೆಗೈಯುತ ಲಿಪ್ತನಾಗದೆ ನಿರಂತರದಿ
ಪಾಲಿಸುವೆ ಸಂಹರಿಪೆ ದಿವಿಜ ದಾನವ ತತಿಯ ೧

ತಿಳಿಸಿಕೊಂಬುವ ನೀನೆ ಶ್ರುತಿತತಿಗಳೊಳಗಿದ್ದು
ತಿಳಿಸುವವ ನೀನೆ ಉಪದೇಶಕರೊಳು
ತಿಳಿವವನು ನೀನೆ ಬುದ್ಧ್ಯಾದಿಂದ್ರಿಯಗಳೊಳು
ನೆಲೆಗೊಂಡು ನಿಖಿಳ ವ್ಯಾಪಾರ ಮಾಡುತಲಿಪ್ಪೆ ೨

ಅಗಣಿತ ಮಹಿಮೆ ಜಗಜ್ಜನ್ಮಾದಿಕಾರಣನೆ
ತ್ರಿಗುಣವರ್ಜಿತ ತ್ರಿವಿಕ್ರಮ ತ್ರಿಧಾಮಾ
ಭೃಗುಮುನಿ ವಿನುತ ಜಗನ್ನಾಥ ವಿಠ್ಠಲ ನಿನ್ನ
ಪೊಗಳಿ ಹಿಗ್ಗುವ ಭಾಗ್ಯಕೊಡು ಜನ್ಮ ಜನ್ಮಕೂ ೩

೧೯

ವಾರಿಜಾನನೆ ಇವನ್ಯಾರು ಪೇಳಮ್ಮ
ಮಾರಜನಕ ಮುರಾರಿ ಕಾಣಮ್ಮ ಪ

ಅರುಣ ಚರಣ ಕಳದಿರವು ಅಂಕುಶಧ್ವಜ
ಅರವಿಂದ ರೇಖಾಂಕ ಪುರುಷನಾರಮ್ಮ
ಉರಗಶಯನ ಕರಸರೋಜ ಮಧ್ಯದೊಳಿಟ್ಟು
ಸುರರಿಂದರ್ಚನೆಗೊಂಬ ಹರಿಯು ಕಾಣಮ್ಮ ೧

ಪೊಳೆವ ಉದಯ ಶಶಿ ಬೆಳಗು ಸೋಲಿಪ ನಾಖಾ
ವಳಿಯಿಂದ ಒಪ್ಪುವ ಚಲುವನಾರಮ್ಮಾ
ಕುಲಿಶ ಪಾಣಿಗೆ ಒಲಿದಿಳೆಯೊಳು ಬಂದು ಖಂ
ಜಲವ ಪಡೆದಾನಂದ ಜಲಧಿ ಕಾಣಮ್ಮ ೨

ಕಡಗ ಅಂದುಗೆ ಗೆಜ್ಜೆ ಕಡಗ ಪೊನ್ನೂಪುರ
ತೊಡಂದ ಬರುತಿಹ ಪ್ರೌಢನಾರಮ್ಮ
ದೃಢ ಭಕ್ತರೆಡೆಯಲಿ ಬಿಡದೆ ನಲಿಯುತಲಿಪ್ಪ
ಮೃಡಸುರಪಾದ್ಯರ ಪತಿಯು ಕಾಣಮ್ಮ ೩

ಕರಿಗಲ್ಲಿನಂತೆ ಸುಂದರ ಜಂಘೆ ಜಾನುಗ
ಳೆರಡು ತರಣಿಯಂತೆ ಇವನಾರಮ್ಮಾ
ಪರಮೇಷ್ಠಿ ಪ್ರಳಯದಿ ಸಿರಿಯಿಂದ ನುತಿಗೊಂಬ
ಪರಮ ಪುರುಷ ನರಹರಿಯು ಕಾಣಮ್ಮ ೪

ಇಭವರಕರದಂತೆ ಉಭಯ ಊರು ಕಟಿ
ಪ್ರಭ ವಸನವನುಟ್ಟ ಸುಭಗನಾರಮ್ಮಾ
ರಭಸದಿಂದಲಿ ಕಂಭ ಬಿಗಿದು ಪ್ರಹ್ಲಾದಗೆ
ಅಭಯವಿತ್ತ ಸುರಪ್ರಭುವು ಕಾಣಮ್ಮ ೫

ವಲಿಮೀಕ ಬಿಲದಂತೆ ಸುಳಿನಾಭಿ ಜಠರತ್ರಿ
ವಳಿಗಳಿಂದಲಿ ಬಲು ಪೊಳೆವನಾರಮ್ಮಾ
ನಳಿನೋದ್ಭವನ ಪುತ್ರಾಖಿಳ ಲೋಕ ತಾಳಿದಾ
ಹಾಲಾಹಲಕಂಠನ ಗೆಳೆಯ ಕಾಣಮ್ಮಾ ೬

ಸಿರಿವತ್ಸ ಕೌಸ್ತುಭ ವೈಜಯಂತೀ ಸರ
ಸಿರಿಯಿಂದಲೊಪ್ಪೋ ನಿರಯನಾರಮ್ಮ
ವರಭೃಗುಮುನಿಪನ ಸ್ವರುಶವನು ತಾಳ್ದ
ಕರುಣ ಸಾಗರ ಸಿರಿಧರನು ಕಾಣಮ್ಮ ೭

ಚತುರ ಹಸ್ತದಿ ಗದೆ ಶತಪತ್ರ ಅರಿ ಶಂಖ
ಸತತ ಪಿಡಿದಿಹ ಚತುರನಾರಮ್ಮ
ದಿತಿಜರ ಸದೆದು ದೇವತೆಗಳ ಸಲಹಿದ
ಚತುರಾಸ್ಯ ಕೃತಿದೇವಿ ಪತಿಯು ಕಾಣಮ್ಮ ೮

ಧರತೇರ ಕಂಧರ ಸುರಚಿತರ ಬಿಂಬ ಅ –
ಧರದಿಂದೊಪ್ಪುತಲಿಹ ಪಿರಿಯ ನಾರಮ್ಮಾ
ಸಿರಿಯೊಡನೆ ಕ್ಷೀರಶರಧಿ ಯೊಳೊರಗಿಪ್ಪ
ಶರಣರ ವಜ್ರ ಪಂಜರವನು ಕಾಣಮ್ಮ ೯

ಸುರಕಪೋಲ ನಾಸ ಸರಸಿಜನಯನ ಪು
ಬ್ಬೆರಡು ಕುಂಡಲಿ ಯುಗಧರನು ಆರಮ್ಮಾ
ಶರಧಿ ಮಥನದಲ್ಲಿ ತರುಣಿಯಾಗಿ ಅಸು
ರರ ಮೋಹಿಸಿದ ಅಜರನು ಕಾಣಮ್ಮ ೧೦

ಬಾಲಶಶಿಯಂತೆ ಫಾಲಕಸ್ತೂರಿನಾಮ
ಮೌಳಿ ಸುಳಿಕೇಶ ಬಾಲನಾರಮ್ಮಾ
ಮೂಲೇಶನಾದ ಜಗನ್ನಾಥ ವಿಠ್ಠಲ
ಮೂಲೋಕಾಧಿಪ ಶ್ರೀ ಗೋಪಾಲ ಕಾಣಮ್ಮ ೧೧

೨೦

ಶ್ರೀನಿಕೇತನ ಪಾಲಯ ಮಾಂ ಪ

ಜ್ಞಾನಗಮ್ಯ ಕರುಣಾನಿಧೆ ನಿನ್ನಡಿ
ಗಾನಮಿಸುವೆ ಪೊರೆ ದೀನ ದಯಾಳೊ ಅ

ಜ್ಞಾನ ಮಾನದ ಶರಣರ ಸುರಧೇನು ಸರ್ವದಾ
ನೀನೆಂದರಿದು ಸದಾನುರಾಗದಲಿ
ಧೇನಿಪೆ ಮನದನುಮಾನವ ಕಳೆಯೋ ೧

ಶ್ರೀ ಕರಾರ್ಚಿತ ಪದಾಬ್ಜ ಪರಾಕು ಅಚ್ಯುತ
ಶೋಕನಾಶನ ವಿಶೋಕ ಸುಲಭ ಹೃದ್
ವ್ಯಾಕುಲ ಕಳೆ ಏಕ ಪ್ರಕಾರದಿ ಒಲಿದು ೨

ಪನ್ನಗಾಚಲ ನಿವಾಸ ಪ್ರಪನ್ನ ವತ್ಸಲಾ
ಬಿನ್ನಪ ಕೇಳು ಜಗನ್ನಾಥ ವಿಠ್ಠಲ
ಧನ್ಯನಮಾಡು ಶರಣ್ಯ ಶರಣನ ೩

೨೧

ಶ್ರೀಶ ಬ್ರಹ್ಮ ಸದಾಶಿವಾದಿ ಸುರಾರ್ಚಿತ ದಾಶರಥಿ ತವ
ದಾಸರೊಳಗಿಟ್ಟು ನೀ ಸಲಹೊ ವಿಷಯಾಶೆಗಳ ಬಿಡಿಸಿ ಪ

ಲೋಕನೀಯ ವಿಶೋಕ ಭಕ್ತರ
ಶೋಕ ಮೋಹವ ನೀ ಕಳೆದು ಸುಖ
ವೇ ಕರುಣಿಸು ಕೃಪಕಟಾಕ್ಷದಿ ಅಕೂತಿತನಯ
ವಾಕುಮನ್ನಿಸನೇಕ ಮಹಿಮ ವಿ
ವೇಕ ಬುದ್ಧಿಯ ನೀ ಕೊಡೆನೆಗೆ ಪಿ
ನಾಕಿಸುತ ಪರಲೋಕದಾಯಕ
ಲೌಕಿಕವ ಬಿಡಿಸೊ ೧

ವೈರಿವರ್ಗಗಳಾರು ಇಂದ್ರಿಯ
ದ್ವಾರದೊಳು ಪೊಕ್ಕು ಚಾರುಧರ್ಮದ
ದಾರಿ ಮನಸಿಗೆ ತೋರ ಗೊಡದಲೆ
ನಾರಿ ಧರಣಿ ಧನಾ ಹಾರಯಿಸುತಿದ್ದು
ಘೋರಿಸುತಿವೆ ಮುರಾರಿ ತವಚರ
ಣಾರವಿಂದವ ತೋರಿ ಮನದಿ ಸಂ
ಸಾರ ಶರಧಿಯ ತಾರಿಸನುದಿನ ೨

ವೀತಭಯ ಭವವೈರಿ ತರಣಿ ನವ
ಪೋತ ಕಾಲವ ಭೀತಿ ಬಿಡಿಸು ಪುರು
ಹೂತನ ಪ್ರಿಯ ಮಾತುಳಾಂತಕ
ಮಾತುಗಳನೆ ಮನ್ನಿಸಿ
ಶ್ವೇತವಾಹನ ಸೂತಸುಖಮಯ
ವಾತಪಿತ ಜಗನ್ನಾಥವಿಠ್ಠಲ
ಪಾತಕಾರಣ್ಯ ವೀತಿಹೋತ್ರ ನಾ ತುತಿಪೆನೆ ನಿನ್ನಾ ೩

೨೨

ಸರ್ವಾಂತರ್ಯಾಮಿ ನೀ ಸಲಹೋ ಎನ್ನ ಪ

ದುರ್ವಾರ್ತೆ ಕೇಳಿ ಮನ ಬರಿದೆ ಚಿಂತಿಸುತಿದೆ ಅ

ಜೀವರಿಗೆ ಗುಣ ಕಾಲ ಕರ್ಮ ಪ್ರಕೃತಿಯು ಸ್ವ
ಭಾವಗಳನನುಸರಿಸಿ ಸುಖದುಃಖವಾ
ಈವ ದೊರೆ ನೀನಲ್ಲದಿನ್ನುಂಟೆ ಜಗಕೆ ಮ
ತ್ತಾವ ನೈಜ ಭಕ್ತರನು ಕಾಪಾಡುವ ದಾತ ೧

ಸತ್ಯ ಸಂಕಲ್ಪ ನೀನೆಂದೆಂದಿಗೂ ಸರಿ
ಭೃತ್ಯವತ್ಸಲನೆಂಬ ಬಿರುದಲ್ಲವೇ

ದತ್ತರೂಪನೆ ನಿನ್ನ ಸ್ಮರಣೆ ಮಾತ್ರದಲಿ ಅಪ
ಮೃತ್ಯು ಪರಿಹರವಾಹುದು ಸಂದೇಹವಿಲ್ಲಿದಕೆ ೨

ಮಾಪತಿ ಎನ್ನ ವಿಜ್ಞಾಪನೆ ಕೈಕೊಂಡು
ಪಾಪಿಜನರಿಂದ ಬಂದಾಪತ್ತನು
ನೀ ಪರಿಹರಿಸಿ ಸಲಹೋ ದ್ರೌಪದಿ ವರದ ೩

೨೩

ಸ್ಮರಿಸು ಸಂತತ ಹರಿಯನು ಮನವೇ ಪ

ಸ್ಮರಿಸು ಸಂತತ ಹರಿಯ ಕರುಣಾಳುಗಳ ದೊರೆಯ
ಸರಸಿಯೊಳಗಂದು ಕರಿಯ ನರನ ಸಂಗರದೊಳಗೆ ಕಾಯ್ದು
ದರಿಯ ಜಪ ಹೋಮ (ವ್ರತ) ದಾನ ತಪಕೆ
ದೊರೆಯ ಜಗದೀಶ ಅ.ಪ.

ತಾನೆ ಇಹ ಪರ ಸೌಖ್ಯ ದಾನಿಗಳರಸನೆಂದು
ಸಾನುರಾಗದಿ ನಂಬಿದ ಜನಕೆ ಸುರ
ಧೇನುವಂದದಲಿ ಮೋದ ಸಲಿಸುವ ಶ್ರೀಮ
ದಾನಂದ ಪೂರ್ಣಬೋಧ ಪತಿ ಸಾಮ
ಗಾನ ಲೋಲನ ಪ್ರಸಾದಾ ಪಾದಾ ೧

ಎಲ್ಲೆಲ್ಲಿ ನೋಡೆ ಮತ್ತಲ್ಲಲ್ಲಿ ನೆಲೆಸಿಹನು
ಬಲ್ಲಿದನು ಭಾಗ್ಯವಂತ ನಂಬಿದವರಿ
ಗಲ್ಲದೆ ಒಲಿಯ ಭ್ರಾಂತಾ ದುಷ್ಟ ಜನ
ರೊಲ್ಲ ನಿಶ್ಚಯ ಮಹಂತಾರೊಡೆಯ ಕೈ
ವಲ್ಯದಾಯಕನ ಇಂಥಾ ಪಂಥಾ ೨

ಅಣುವಿನೊಳಗಣುವಹನು
ಘನಕೆ ಘನತರನಹನು
ಅಣು ಮಹದ್ವಿಲಕ್ಷಣಾ ಕಲ್ಯಾಣ
ಗುಣಜ್ಞಾನ ಘನಲಕ್ಷಣಾ ಸಂಪೂರ್ಣ
ಮನ ಮುಟ್ಟಿ ಕರೆದಾಕ್ಷಣಾ ಬಂದೊದಗಿ
ಕುಣಿವ ಲಕ್ಷ್ಮೀ ವಕ್ಷನಾ ಅನಪೇಕ್ಷನಾ ೩

ಚೆಲುವರೊಳಗತಿ ಚೆಲುವ ಸುಲಭರೊಳಗತಿ ಸುಲಭ
ಒಲಿವ ಸರಿ ಬಂದ ತೆರದಿ ಗುಣಕರ್ಮ
ಕುಲಶೀಲಗಳನೆಣಿಸನರಿದೀ – ಭಕುತಿ
ಫಲವ ಕೊಡೆ ತಾ ತವಕದಿ ಶಬರಿ ಎಂ
ಜಲನುಂಡ ಕರುಣಾ ಶರಧಿ ಭರದೀ ೪

ನೋಡಿ ನೋಡಿಸುತಿಹನು ಮಾಡಿ ಮಾಡಿಸುತಿಹನು
ನೀಡಿ ನೀಡಿಸುವ ಪಿಡಿವಾ ಪಿಡಿಸುವನು
ಬೇಡಿ ಬೇಡಿಸುವ ಬಡವರೊಡೆಯ ಕೊಂ
ಡಾಡುವರ ಒಡನಾಡುವಾ ಈ ಮಹಿಮೆ
ಗೀಡೆಂದು ಆವ ನುಡಿವಾ ಕೆಡುವಾ ೫

ಪ್ರಾದೇಶ ಮಾತ್ರ ಸ್ಥಿತ ಶ್ರೀ ದೇವಿಯರಸ ಕನ
ಕೋದರಾದ್ಯಮರ ವ್ರಾತಾ ಸಹಿತ ಮಹ
ದಾದಿ ಪೃಥ್ವಂತ ಭೂತಾದೊಳು ನಿಲಿಸಿ
ಕಾದುಕೊಂಡಿಹ ವಿಧಾತಾ ಅಂಡತ್ರಿದ
ಶಾಧಿಪನ ಸೂತ ಸಚ್ಚರಿತಾ ೬

ಸ್ವಗತಭೇದವಿಶೂನ್ಯ ನಿಗಮ ಸಂಚಾರ ಶ್ರೀ
ಜಗನ್ನಾಥವಿಠಲರೇಯಾ ತನ್ನ ಪಾ
ದಗಳ ಧ್ಯಾನಿಪರ ನೋಯಾಗೊಡದಂತೆ
ಹಗಲಿರುಳು ಕಾವಾ ಮಾಯಾ ರಮಣ ನಮ್ಮ
ನಗಲಿ ಸೈರಿಸನು ಪ್ರಿಯಾ ಧ್ಯೇಯಾ ೭

೨೪

ರಮಾ ಮನೋಹರನೆ ದೀನ – ಪತಿತಪಾವನಾ ಪ

ಚೆಂದದಿಂದ ವೇದ ತಂದ
ಮಂದರೋದ್ಧಾರಾ ಅರ
ವಿಂದನಯನ ಬಂಧು ರಕ್ಷಿಸೊ
ಇಂದು ಭೂಧರಾ ೧

ಕರುಳಮಾಲೆ ಧರಿಸಿದ ಶ್ರೀ
ವರದ ವಾಮನಾ ಧೃತ
ಕರದ ಪರಶುರಾಮ ರಾಘವ
ಯರು ಕುಲೋತ್ತಮಾ ೨

ಲೋಕ ಮೋಹಕ ಬುದ್ಧನಾಗಿ
ತೇಜಿಯೇರಿದಾ ಜಗ
ದೇಕ ಜಗನ್ನಾಥ ವಿಠಲ
ಭೀಕರಾಂತಿಕಾ ೩

೨೫

ಮಧ್ವಾಂತರ್ಗತ ವೇದವ್ಯಾಸ ಮಮ
ಹೃದ್ವನರುಹ ಸನ್ನಿವಾಸ ಪ

ಸದ್ವಿದ್ಯಾ ಕೊಡು ಶ್ರೀ ಕೃಷ್ಣ ದ್ವೈಪಾಯನ ಚಿದ
ಚಿದ್ವಿಲಕ್ಷಣ ತ್ವತ್ಪಾದ ದ್ವಯಾಬ್ಜವ ತೋರೊ ಅ

ಬಾದರಾಯಣ ಬಹುರೂಪಾ ಸನ
ಕಾದಿ ಸನ್ನುತ ಧರ್ಮಯೂಪಾ
ವೇದೋದ್ಧಾರ ದನಾದಿ ಕರ್ತ ಪೂರ್ಣ

ಬೋಧ ಸದ್ಗುರುವರಾರಾಧಿತ ಪದಯುಗ
ಮೇದಿನಿಯೊಳಾನೋರ್ವ ಪಾಮ
ರಾಧಮನು ಕೈ ಪಿಡಿ ಕರುಣ ಮ
ಹೋದಧೇ ಕಮನೀಯ ಕಾಯ ಪ್ರ
ಬೋಧ ಮುದ್ರಾಭಯ ಕರಾಂಬುಜ ೧

ಹರಿತೋಪ ಲಾಭ ಶರೀರಾ ಪರಾ
ಶರ ಮುನಿವರ ಸುಕುಮಾರ
ಪರಮ ಪುರುಷಕಾರ್ತಸ್ವರಗರ್ಭ ಪ್ರಮುಖ ನಿ
ರ್ಜರಗಣಮುನಿನುತ ವರಪಾದಪಂಕೇಜ
ಕುರುಕುಲದಿ ಧೃತರಾಷ್ಟ್ರ ಪಾಂಡು ವಿ
ದುರರ ಪಡೆದೈವರಿಗೊಲಿದು ಸಂ
ಹರಿಸಿ ದುರ್ಯೋಧನನ ಭಾರತ
ವಿರಚಿಸಿದ ಸುಂದರ ಕವೀಂದ್ರ ೨

ಜಾತರೂಪ ಜಟಾ ಜೂಟ ಶ್ರೀ ನೀಕೇತನ ತಿಲಕ ಲಲಾಟ
ಪೀತ ಕೃಷ್ಣಾಜಿನ ಶ್ವೇತ ಶ್ರೀಯಜ್ಞೋಪ
ವೀತ ಮೇಖಲ ದಂಡಾನ್ವಿತ ಕಮಂಡಲ
ಭೂತಭಾವನ ಭೂತಿಕೃತ್ಸದ್ಭೂತಿದಾಯಕ ಶ್ರೀ ಜಗ
ನ್ನಾಥ ವಿಠಲನೆ ನಿನ್ನ ಮಹಿಮೆಯ
ನಾ ತುತಿಸಬಲ್ಲೆನೆ ಸುಖಾತ್ಮ ೩

೨೬

ಆವ ಕಾರಣ ಮೊಗವ ತಿರುಗಿಹಿದ್ಯೊ ಪೇಳು
ಭೂವರಹ ಸ್ವಾಮಿ ಪುಷ್ಕರಣಿ ತೀರಗನೆ ಪ

ರಥ ಸಮೂಹಗಳೇರಿ ನೀ ಪ್ರಕಾಶಿಪ ಬಗೆಯೇ
ಸತಿಯ ಲಾವಣ್ಯಾತಿಶಯವ ನೋಡುವ ಬಗೆಯೋ
ಮಿತಿಯಿಲ್ಲದಸುರರ ಉಪೇಕ್ಷೆ ಮಾಡುವ ಬಗೆಯೋ

ಪತಿತ ಪಾವನ ಪೂರ್ಣಕಾಮ ನಿನಗೆ
ನುತಿಸಿ ಬಿನ್ನೈಸುವೆನು ಪೇಳೋ ಗುಣಧಾಮಾ ೧

ಭಜಕರೆನ್ನನು ಬಿಡರೆಂಬ ಮನಸಿನಾ ಬಗೆಯೇ
ಅಜಭವಾದಿಗಳ ಸಂಸ್ತುತಿಗಳಾಲಿಪ ಬಗೆಯೋ
ರಜನೀಚರರ ಸದೆಯ ನಾಟ್ಯವಾಡುವ ಬಗೆಯೇ
ಭುಜಗ ಭೂಷಣ ಪೂಜ್ಯ ಚರಣ
ತ್ರಿಜಗದ್ವಿ ಲಕ್ಷಣ ಸುರೂಪಾ ನಿರ್ಲೇಪ ೨

ಅನುಗರೊಶ ನೀನಾದಡೆಮ್ಮನ ಮರೆವರೆಂದು
ವನತಿಗಾರರಿಯದಂತುಪದೇಶಿಸು ಬಗೆಯೋ
ಘನಲಕ್ಷಣ ಮುಖಾಬ್ಜವನು ಚುಂಬಿಸುವ ಬಗೆಯೋ
ವನಜ ಸಂಭವನ ನಾಸಜನೆ ಜಗ
ಜ್ಜನಕ ಜಗನ್ನಾಥವಿಠ್ಠಲ ಕೃಪಾಸಾಂದ್ರಾ ೩

ನರಸಿಂಹ ಸ್ತೋತ್ರ

೨೭

ಕನಕಮುನಿ ಕರಕಮಲ ಪೂಜಿತಾಂಘ್ರಿ
ಮನುಜಮೃಗವೇಷ ಮಾರಮಣ ನಿನಗಾನಮಿಪೆ ಪ

ನಿರ್ದುಷ್ಟ ನಿರವದ್ಯ ನಿರವಧಿಕ ಮಹಮಹಿಮ
ಸ್ವರ್ದುನಿ ಪಿತನೆ ಸಮಭ್ಯಧಿಕ ಶೂನ್ಯ
ವರ್ಧಿಸಲಿ ನಿನ್ನಲ್ಲಿ ಸದ್ಭಕ್ತಿ ಖಳಸಂಪ್ರ
ಮರ್ದನ ಮಮಸ್ವಾಮಿ ಸರ್ವರಂತರ್ಯಾಮಿ ೧

ತೀರ್ಥಪದ ನಿನ್ನ ಸತ್ಕೀರ್ತಿ ಸರ್ವತ್ರ
ಕೀರ್ತಿಸುವ ಭಕ್ತರ ಭವಾಬ್ಧಿಹರನೆ
ಪಾರ್ಥಸಖ ಸರ್ವದಾ ಪ್ರಾರ್ಥಿಸುವೆ ನಿನ್ನ ಚಿ
ನ್ಮೂರ್ತಿ ಮನದಲ್ಲಿ ಸ್ಫೂರ್ತಿಸಲಿ ಸರ್ವದಾ ೨

ಸೂತ್ರನಾಮಕ ಪ್ರಾಣಮಿತ್ರ ಭಾರತ ಪಂಚ
ರಾತ್ರಾದಿ ಆಗಮಸೂತ್ರಪ್ರಿಯ
ಕ್ಷೇತ್ರಜ್ಞ ಶ್ರೀ ಜಗನ್ನಾಥವಿಠ್ಠಲ ಅಹೋ
ರಾತ್ರಿಯಲಿ ನಿನ್ನವರ ಸಹವಾಸ ಕೊಡು ಎನಗೆ ೩

೨೮

ನಮೋ ನಮಸ್ತೇ ನರಸಿಂಹ ದೇವಾ
ಸ್ಮರಿಸುವವರ ಕಾವಾ ಪ

ಸುಮಹಾತ್ಮ ನಿನೆಗೆಣೆ ಲೋಕದೊಳಾವಾ ತ್ರಿಭುವನ ಸಂಜೀವಾ
ಉಮೆಯರಸನ ಹೃತ್ಕಮಲದ್ಯುಮಣಿ ಮಾ
ರಮಣ ಕನಕ ಸಂಯಮಿ ವರವರದಾ ಅ

ಕ್ಷೇತ್ರಜ್ಞ ಕ್ಷೇಮಧಾಮ ಭೂಮಾ ದಾನವ ಕುಲಭೀಮಾ
ಗಾತ್ರ ಸನ್ನುತ ಬ್ರಹ್ಮಾದಿ ಸ್ತೋಮಾ ಸನ್ಮಂಗಳ ನಾಮಾ
ಚಿತ್ರ ಮಹಿಮನಕ್ಷತ್ರನೇಮಿಸ
ರ್ವತ್ರಮಿತ್ರ ಸುಚರಿತ್ರ ಪವಿತ್ರ ೧

ಅಪರಾಜಿತ ಅನಘ ಅನಿರ್ವಿಣ್ಣ ಲೋಕೈಕ ಶರಣ್ಯ
ಶಫರಕೇತು ಕೋಟಿಲಾವಣ್ಯ ದೈತ್ಯೇಂದ್ರ ಹಿರಣ್ಯಕ
ಶಿಪುಸುತನ ಕಾಯ್ದಪೆನೆನುತಲಿ ನಿ
ಷ್ಕಪಟ ಮನುಜಹರಿವಪುಷ ನೀನಾದೆ ೨

ತಪನ ಕೋಟಿ ಪ್ರಭಾವ ಶರೀರಾ ದುರಿತೌಘವಿದೂರಾ
ಪ್ರಪಿತಾಮಹ ಮಂದಾರ ಖಳವಿಪಿನ ಕುಠಾರಾ
ಕೃಪಣಬಂಧು ತವ ನಿಪುಣತನಕೆ ನಾ
ನುಪಮೆಗಾಣೆ ಕಾಶ್ಯಪಿವರವಾಹನಾ ೩

ವೇದವೇದಾಂಗವೇದ್ಯಾ ಸಾಧ್ಯ ಅಸಾಧ್ಯ
ಶ್ರೀದ ಮುಕ್ತಾಮುಕ್ತರಾರಾಧ್ಯಾ
ಅನುಪಮ ಅನವದ್ಯ ಮೋದಮಯನೆ ಪ್ರಹ್ಲಾದವರದ ನಿ
ತ್ಯೋದಯ ಮಂಗಳ ಪಾದಕಮಲಕೆ ೪

ಅನಿಮಿತ್ತ ಬಂಧು ಜಗನ್ನಾಥ ವಿಠಲ ಸಾಂಪ್ರತ
ನಿನಗೆ ಬಿನ್ನೈಸುವೆ ಎನ್ನಯ ಮಾತಾ ಲಾಲಿಸುವುದು ತಾತಾ
ಗಣನೆಯಿಲ್ಲದವ ಗುಣವೆನಿಸಿದೆ ಪ್ರತಿ
ಕ್ಷಣಕೆ ಕಥಾಮೃತ ಉಣಿಸು ಕರುಣದಿ ೫

೨೯

ನರಸಿಂಹ ಪಾಹಿ ಲಕ್ಷ್ಮೀ ನರಸಿಂಹ ಪ

ನರಸಿಂಹ ನಮಿಪೆ ನಾ ನಿನ್ನ
ಚಾರುಚರಣಕಮಲಕೆ ನೀ ಎನ್ನ
ಕರವ ಪಿಡಿದು ನಿಜ ಶರಣನೆಂದೆನಿಸೊ ಭಾ
ಸುರ ಕರಣಾಂಬುಧೆ ಗರುಡವಾಹನ ಲಕ್ಷ್ಮೀ ಅ

ತರಳ ಪ್ರಹ್ಲಾದನ್ನ ನುಡಿಯಾ ಕೇಳಿ
ತ್ವರಿತದಿ ಬಂದ್ಯೊ ಎನ್ನೊಡೆಯ ನಾನು
ಕರುಣಾಳೊ ಭಕ್ತರ ಭಿಡೆಯ ಮೀರ
ಲರಿಯೆ ಎಂದೆಂದು ಕೆಂಗಿಡಿಯ ಅಹ
ಭರದಿಂದುಗುಳುತ ಬೊಬ್ಬಿರಿದು ಬೆಂಬತ್ತಿಕ
ರ್ಬುರ ಕಶ್ಯಪುವಿನ ಹಿಂಗುರುಳ ಪಿಡಿದೆ ಲಕ್ಷ್ಮೀ ೧

ಪ್ರಳಯಾಂಬುನಿಧಿ ಘನಘೋಷದಂತೆ
ಘುಳಿ ಘುಳಿಸುತಲಿ ಪ್ರದೋಷ ಕಾಲ
ತಿಳಿದು ದೈತ್ಯನ ಅತಿರೋಷದಿಂದ

ಪ್ಪಳಿಸಿ ಮೇದಿನಿಗೆ ನಿರ್ದೋಷ ಅಹ
ಸೆಳೆಸೆಳೆಯುತ ಚರ್ಮಸುಲಿದು ಕೆನ್ನೆತ್ತರೋ
ಕುಳಿಯನಾಡಿದೆ ದಿಶಾವಳಿಗಳೊಳಗೆ ಲಕ್ಷ್ಮೀ ೨

ಕ್ರೂರ ದೈತ್ಯನ ತೋರಗರುಳಾ ತೆಗೆ
ದ್ವಾರ ಮಾಡಿದೆ ನಿಜಕೊರಳ ಕಂಡು
ವಾರಿಜಾಸನ ಮುಖದಯರ್ಕಳ ಪುಷ್ಪ
ಧಾರಿಗೆರೆದು ವೇಗ ತರಳಾ ಆಹ
ಸೂರಿ ಪ್ರಹ್ಲಾದಗೆ ತೋರಿ ತವಾಂಘ್ರಿ ಸ
ರೋರುಹಾವನು ಕಾಯ್ದೆ ಕಾರಣ್ಯನಿಧಿ ೩

ಜಯಜಯ ದೇವವರೇಣ್ಯಾ ಮಹ
ದ್ಭಯ ನಿವಾರಣನೆ ಅಗಣ್ಯ ಗುಣಾ
ಶ್ರಯ ಘೋರ ದುರಿತಾರಣ್ಯ ಧನಂ
ಜಯ ಜಗದೇಕ ಶರಣ್ಯ ಅಹ
ಲಯವಿವರ್ಜಿತ ಲೋಕ
ತ್ರಯ ವ್ಯಾಪ್ತ ನಿಜಭಕ್ತ
ಪ್ರಿಯ ಘೋರಮಯ ಹರ
ದಯ ಮಾಡೆನ್ನೊಳು ಲಕ್ಷ್ಮೀ ೪

ಕುಟಲ ದ್ವೇಷದವನು ನೀನಲ್ಲ ನಿನ್ನಾ
ರ್ಭಟಕಂಜಿದರು ಸುರರೆಲ್ಲ ನರ
ನಟನೆ ತೋರಿದ್ಯೋ ಲಕ್ಷ್ಮೀನಲ್ಲ ನಾ ಪಾ
ಸಟಿ ಕಾಣೆನಪ್ರತಿಮಲ್ಲ ಅಹ
ವಟಪತ್ರಶಯನ ಧೂ
ರ್ಜಟಿವಂದ್ಯ ಜಗನ್ನಾಥ
ವಿಠಲ ಕೃತಾಂಜಲಿಪುಟದಿ ಬೇಡುವೆ ಲಕ್ಷ್ಮೀ ೫

೩೦

ನೀರ ತರಂಗಿಣಿ ತೀರ ನಾರಸಿಂಹ ಪ

ಸಾರಿದೆನೊ ತವಪಾದ ಪಂಕಜ
ತೋರು ಮನದಲಿ ತವಕದಿ ಅ

ನಾರದನುತ ಚಿಚ್ಛರೀರವ ಶ್ರೀ ಭೂದು
ರ್ಗಾರಮಣ ದುರಿತಾರಿ ಬ್ರಹ್ಮ ಸ
ಮೀರ ಮುಖ ವಿಬುಧಾರ್ಚಿತ
ಚಾರು ಚರಣಯುಗ ಕ್ಷೀರಾಬ್ಧಿ ಶಯನ ಮ
ದ್ಭಾರ ನಿನ್ನದು ಮೂರು ಲೋಕದ
ಸೂರಿಗಮ್ಯ ಸುಖಾತ್ಮಕ ೧

ವೇದವೇದ್ಯ ಸಂಸಾರೋದಧಿ ತಾರಕ
ಛೇದ ಭೇದ ವಿಷಾದವೇ ಮೊದ
ಲಾದ ದೋಷವರ್ಜಿತ
ಶ್ರೀದ ಶ್ರೀಶ ಅನಂತ ಆಪ್ತಕಾಮ
ಬಾದರಾಯಣ ಭಕ್ತವರ ಪ್ರ
ಹ್ಲಾದಪೋಷಕ ಪಾಹಿ ಮಾಂ ೨

ಹೋತಹೃದ್ಯ ಜಗನ್ನಾಥವಿಠಲ ನಿನ್ನ
ಮಾತು ಮಾತಿಗೆ ಸ್ಮರಿಸುತಿಹ ಸ
ಚ್ಚೇತನರನು ನೀ ಸರ್ವದಾ
ವೀತಶೋಕ ಭವಭೀತಿ ಬಿಡಿಸಿ ತವ
ದೂತರೊಳಗಿಡು ಮಾತರಿಶ್ವಗ ಭೂತಭಾವನ ಭವ್ಯದ ೩

೩೧

ಪಾಲಿಸೊ ನರಸಿಂಹ ಪಾಲಿಸೊ ಪ

ಪಾಲಿಸೊ ಪರಮ ಪಾವನ್ನ ಕಮ
ಲಾಲಯ ನಂಬಿದೆ ನಿನ್ನ ಆಹ
ಬಾಲೇಂದುಕೋಟಿಯ ಸೋಲಿಪ ನಖ ತೇಜ
ಮೂಲೋ೯ಕದರಸೆ ನೀನಾಲಯ ಬಿಡದಲೆ ಅ.ಪ

ಹಿಂದೆ ಪ್ರಹ್ಲಾದನ ಮೊರೆಯ ಕೇಳಿ
ಬಂದು ಕಾಯಿದೆ ಭಕ್ತ ಪ್ರಿಯ ಸುಖ
ಸಂದೋಹ ಮೂರುತಿ ಆಯ ತಾಕ್ಷ
ಎಂದೆಂದು ಬಿಡದಿರು ಕೈಯ ಆಹ
ವೃಂದಾರ ಕೇಂದ್ರಗೆ ಬಂದ ದುರಿತಂಗಳ
ಹಿಂದೆ ಮಾಡಿ ಕಾಯ್ದೆ ಇಂದಿರಾರಮಣನೆ ೧

ಹರಣದಲ್ಲಿ ನಿನ್ನ ರೂಪ ತೋರಿ
ಪರಿಹರಿಸೊ ಎನ್ನ ಪಾಪ ದೂರ
ದಿರದಿರು ಹರಿಸಪ್ತ ದ್ವೀಪಾಧಿಪ
ಸಿರಿಪತಿ ಭಕ್ತ ಸಲ್ಲಾಪ ಆಹ
ಕರಣಶುದ್ಧನ ಮಾಡಿ ಕರೆಯೊ ನಿನ್ನ ಬಳಿಗೆ
ನರಕಂಠೀರವ ದೇವ ಚರಣ ಆಶ್ರೈಸಿದೆ ೨

ಶರಣ ಪಾಲಕನೆಂಬೊ ಬಿರುದು ಕೇಳಿ
ತ್ವರಿತದಿ ಬಂದೆನೊ ಅರಿದು ಇನ್ನು
ಪರಿ ಪರಿ ಅಪರಾಧ ಜರಿದು
ಪರತರನೆ ನೋಡೆನ್ನ ಕಣ್ತೆರೆದು ಆಹ
ಮರಣ ಜನನಂಗಳ ತರಿದು ಬಿಸುಟು ನಿನ್ನ
ಶರಣರ ಸಂಗದಲ್ಲಿರಿಸಿ ಉದ್ಧರಿಸೆನ್ನ ೩

ಸಂಸಾರ ಸಾಗರ ದೊಳಗೆ ಎನ್ನ
ಹಿಂಸೆ ಮಾಡುವರೇನೊ ಹೀಂಗೆ ನಾನು
ಕಂಸಾರಿ ಅನ್ಯರಿಗೆ ಬಾಗೆ ಮತ್ತೆ
ಸಂಶಯವಿಲ್ಲ ಮಾತಿಗೆ ಆಹ
ಹಂಸ ಡಿಬಿಕರನ್ನು ಧ್ವಂಸ ಮಾಡಿದ ಶೌರಿ
ಶಿಂಶುಮಾರ ಮೂರ್ತಿ ದಿವಸ ದಿವಸದಲ್ಲಿ ೪

ಸಿರಿಬೊಮ್ಮ ಭವ ಶಕ್ರಾದ್ಯಮರ ಕೈಯ
ನಿರುತ ತುತಿಸಿಕೊಂಬ ಧೀರ ಶುಭ
ಪರಿಪೂರ್ಣ ಗುಣ ಪಾರಾವರ ಭಕ್ತ
ವಾರಿನಿಧಿಗೆ ಚಂದಿರ ಆಹ
ಸ್ಮರನ ಕಾಂತಿಯ ನಿರಾಕರಿಸುವ ತೇಜನೆ
ಎರವು ಮಾಡದೆ ಹೃತ್ಸರಸಿಜದೊಳು ತೋರಿ ೫

ಮೊದಲು ಮತ್ಸ್ಯಾವತಾರದಿ ವೇದ
ವಿಧಿಗೆ ತಂದಿತ್ತ ವಿನೋದಿ ಶ
ರಧಿಯೊಳು ಸುರರಿಗೋಸ್ಕರದಿ ನೀನು
ಸುಧೆಯ ಸಾಧಿಸಿ ಉಣಿಸಿದೆ ಆಹ
ಅದುಭೂತ ಭೂಮಿಯ ತೆಗೆದೊಯ್ದುವನ ಕೊಂಡು
ಮುದದಿ ಹಿರಣ್ಯಕನುದರ ಬಗಿದ ಧೀರ ೬

ಬಲಿಯ ಮನೆಗೆ ಪೋಗಿ ದಾನ ಬೇಡಿ
ತುಳಿದೆ ಪಾತಾಳಕ್ಕೆ ಅವನ ಪೆತ್ತ
ವಳ ಶಿರ ತರಿದ ಪ್ರವೀಣ ನಿನ್ನ
ಬಲಕೆಣೆಗಾಣೆ ರಾವಣನ ಆಹ
ತಲೆಯನಿಳುಹಿ ಯದುಕುಲದಿ ಜನಿಸಿ ನೀನು
ಲಲನೇರ ವ್ರತವಳಿದಾಶ್ವಾರೂಢನೆ ೭

ಮಾನಸ ಪೂಜೆಯ ನೀ ದಯದಿ ಇತ್ತು
ಶ್ರೀನಾಥ ಕಳೆ ಭವವ್ಯಾಧಿ ಕಾಯೋ
ಅನಾಥ ಬಂಧು ಸುಮೋದಿ ಚತುರಾ
ನನಪಿತ ಕೃಪಾಂಬುಧಿ ಆಹ
ತಾನೊಬ್ಬರನರಿಯೆ ದಾನ ವಿಲೋಲನೆ
ಏನು ಮಾಡುವ ಸಾಧನ ನಿನ್ನದೊ ಹರಿ ೮

ನಿನ್ನ ಸಂಕಲ್ಪವಲ್ಲದೆ ಇನ್ನು
ಅನ್ಯಥಾವಾಗಬಲ್ಲುದೆ ಹೀಂಗೆ
ಚೆನ್ನಾಗಿ ನಾ ತಿಳಿಯದೆ ಮಂದ
ಮಾನವನಾಗಿ ಬಾಳಿದೆ ಆಹ
ಎನ್ನಪರಾಧವ ಇನ್ನು ನೀ ನೋಡದೆ
ಮನ್ನಿಸಿ ಕಾಯೋ ಜಗನ್ನಾಥ ವಿಠಲ ೯

೩೨

ಪ್ರಣವ ಪ್ರತಿಪಾದ್ಯ ಪ್ರಹ್ಲಾದವರದಾ ಪ

ಪ್ರಣತಕಾಮದನೆ ಪ್ರಾರ್ಥಿಸುವೆ ಪ್ರಭುವೆಂದು ಅ.ಪ.

ಸಕಲ ಜೀವ ಜಡಾತ್ಮಕ ಜಗತ್ತಿನೊಳಗಿದ್ದು
ಅಕಳಂಕ ನಾಮರೂಪದಲಿ ಕರೆಸಿ
ಪ್ರಕಟನಾಗದಲೆ ಮಾಡಿಸಿ ಸರ್ವ ವ್ಯಾಪಾರ
ಸುಖ ದುಃಖಗಳಿಗೆ ಗುರಿಮಾಡಿ ಎಮ್ಮನು ನೋಳ್ಪೆ ೧

ಏನೆಂಬೆ ನಿನ್ನ ಮಹಿಮೆಗೆ ರಮಾಪತಿ ನಿನ್ನ
ಧೀನರಲ್ಲದೆ ತತ್ವಮಾನಿ ಸುರರು
ದಾನವಾಂತಕನೆ ವಿಜ್ಞಾಪನೆಯ ಕೈಕೊಂಡು
ದೀನರುದ್ಧರಿಸುವುದು ದಯದಿಂದ ನಿರುತಾ ೨

ಸರ್ವ ಸ್ವತಂತ್ರ ನೀನಾದ ಕಾರಣ ಬ್ರಹ್ಮ
ಶರ್ವಾದಿಸುರರು ಪ್ರಾರ್ಥಿಸುತಿಪ್ಪರು
ದುರ್ವಿಭಾವ್ಯನೆ ಸುರಗಮೃತ ಪಾನವ ಗೈಸಿ
ಗರ್ವಿಸಿದ ದಾನವರ ಗಣವ ಸಂಹರಿಪೆ ೩

ಬುಧ್ಯಾದಿ ಇಂದ್ರಿಯಗಳೊಳಗೆ ತತ್ಪತಿಗಳೊಳ
ಗಿದ್ದು ಬಹುವಿಧ ಚೇಷ್ಟೆಗಳನೆ ಮಾಡಿ
ಬದ್ಧರನ ಮಾಳ್ಪೆ ಭವದೊಳಗೆ ಜೀವರನ ಅನಿ
ರುದ್ಧರೆಂದೆನಿಪೆ ಎಲ್ಲರೊಳು ವ್ಯಾಪಕನಾಗಿ ೪

ದಾಶರಥಿ ನೀನೆ ಗತಿಯೆಂದು ಮೊರೆಹೊಕ್ಕ ವಿ
ಭೀಷಣಗೆ ಲಂಕಾಧಿಪತ್ಯವಿತ್ತೇ
ವಾಸವಾನುಜ ಜಗನ್ನಾಥ ವಿಠ್ಠಲ ಭಕ್ತ
ಪೋಷಕನು ನೀನಹುದು ಕಲ್ಪ ಕಲ್ಪಗಳಲ್ಲಿ ೫

೩೩

ರುದ್ರಾಂತರ್ಗತ ನಾರಸಿಂಹ ಪಾಹಿ
ಭದ್ರಾಮೂರುತಿ ನಿರ್ವಾತಾಂಘ್ರ ಪ

ಹೃದ್ರೋಗ ಕಳೆದು ಜ್ಞಾನಾದ್ರ್ ಸ್ವಾಂತನ ಮಾಡು
ಪದ್ರಾ ಸಾಮಗಾಘ ಸಮುದ್ರ ದಾಟಿಸಿ ಬೇಗ ಅ

ಏಸೇಸು ಕಲ್ಪಗಳಲ್ಲಿ ನಿನ್ನಾ
ದಾಸನೆಂದು ಎನ್ನ ಬಲ್ಲೀ ಈಶ ನೀನೆಂಬುದು
ಲೇಶವರಿಯೆ ಕ್ಲೇಶನಾಶನ ಪ್ರಭುವೆ ವಾರಾಶಿಜೆ ವಲ್ಲಭ
ವಾಸವಾನುಜ ವನಧಿಶಯನ ಮ
ಹೇಶವಂದಿತ ವರದ ಹೇ ಕರು
ಣಾ ಸಮುದ್ರ ಕರಾಳವದನನೆ ನೀ
ಸಲಹದಿರೆ ಕಾಣೆ ಕಾಯ್ವರ ೧

ಹೇಮ ಕಶ್ಯಪು ತನ್ನ ಸುತನಾ ನೋಯಿಸೆ
ಶ್ರೀ ಮನೋಹರನೇ ಆನತನಾ
ವ್ಯೋಮ ಪರ್ವತಾಂಬುಧಿ ಧಾಮದೊಳುಳುಹಿದ
ಭೂಮ ಸನ್ಮುನಿ ಗಣಸ್ತೋಮ ವಂದಿತ ಪಾದ
ಸಾಮಜೇಂದ್ರನನರಸಿಯೊಳು ಸು
ತ್ರಾಮನಂದನನಾ ರಣದಿ ಕುರು
ಭೂಮಿಪತಿ ಸಭೆಯೊಳಗೆ ದ್ರೌಪದಿ
ಯಾ ಮಹಾತ್ಮರ ಕಾಯ್ದ ಕರುಣಿ ೨

ವೇದಗಮ್ಯನೆ ವೇದ ವ್ಯಾಸ ಕಪಿಲ
ಯಾದವೇಶ ಮಹಿದಾಸ ಶ್ರೀದ ಶ್ರೀಶ ಅ
ನ್ನಾದಾ ಕಲ್ಕಿ ಧನ್ವಂತ್ರಿ ಮೇಧಾವಿ ಪತಿಯ ಏವ
ಮಾದಿರೂಪಕ ವಿಷ್ಣು ಕಾದುಕೊ ನಿನ್ನವರ ಮನದ ವಿ
ಷಾದರೋಗಂಗಳನಳಿದು ಮಹ
ದಾದಿದೇವ ಜಗನ್ನಾಥ ವಿಠ್ಠಲ ಆದರದಿ ಪ್ರಹ್ಲಾದವರ ೩

೩೪

ಶ್ರೀ ನಾರಸಿಂಹ ಚಿತ್ಸುಖಮಯ ಕಾಯ ಪ

ದಾನವಾರಣ್ಯಪಾವಕ ವೀತಶೋಕ ಅ.ಪ.

ಆನತೇಷ್ಟ ಪ್ರದಾಯಕ ನಮಿಸುವೆನು ಸದಾ
ಮೈನಾಕಿಧರ ಬಿಂಬ ಸುರಮುನಿಕದಂಬ
ಧ್ಯಾನಗಮ್ಯನೆ ಭಕ್ತರಾಪತ್ತು ಕಳೆ ಶಕ್ತಾ
ನೀನೆ ಗತಿಯೆಂಬೆ ಮುನಿಮನ ವನಜ ತುಂಬೆ ೧

ಶ್ರವಣ ಮಂಗಳನಾಮಧೇಯ ನಿರ್ಜಿತಕಾಮ
ಸವನ ದ್ವಿತಿಯರೂಪ ವಿಗತಕೋಪ
ಸ್ವವಶ ಸ್ವಾತಂತ್ರ್ಯ ವಿಖನಸ ಪೂಜ್ಯವಜ್ರನಖ
ಪವಿ ದಂಷ್ಟದರ್ಶ ಭಾರ್ಗವಿರಮಣಗಶನಾ ೨

ಆದಿದೇವಾನಂತ ಮಹಿಮನೇ ನಿಶ್ಚಿಂತಾ
ಕಾದುಕೋ ನಿನ್ನವರ ವಿಬುಧ ಪ್ರವರಾ
ಮೋದಮಯ ಶ್ರೀ ಜಗನ್ನಾಥವಿಠಲರೇಯ
ವೈದಿಕವ ನುಡಿಸು ಲೌಕಿಕ ಮಾರ್ಗವ ಬಿಡಿಸು ೩

೩೫

ರಾಮನ ನೋಡಿರೈ ನಿಮ್ಮಯ ಕಾಮಿತ ಬೇಡಿರೈ ಪ

ತಾಮರಸಸಖ ಸುವಾಂಶಾಬ್ಧಿಶರ
ತ್ತೋಮಾ ಕಮಲಧೀಮ ಅ.ಪ.

ಧಾತನನುಜ್ಞದಿ ದೇವತ್ವಷ್ಟ ನಿರ್ಮಿಸಿದಾ ಅಜ ಪೂಜಿಸಿದಾ
ಜ್ಯೋತಿರ್ಮಯ ಜಾಬಾಲಿ ಮುನಿಯ
ತಪವರಿದಾ ಕಾಮಿತ ನೆರೆದಾ
ಭೂತಾಧಿಪನ ಭವನದೊಳರ್ಚನೆಗೊಂಡಾ ಧೃತಕೋದಂಡಾ
ಮಾತಂಗಾರಿ ವರೂಥಿಯ ಜನಕ
ಮೇದಾಗಾರಕೆ ಪೋದಾ ೧

ಸೌಭರಿ ಮುನಿಪಗೆ ಸೌಖ್ಯವ ಕರುಣಿಸಿ ಕೊಟ್ಟ ಜಗಕತಿದಿಟ್ಟ
ನಾಭಿಜನ್ಮನಿಹ ನಗವರ ಸ್ಥಾನಕೆ ಬಂದ ಶುಭಗುಣ ವೃಂದಾ
ವೈಭವದಿಂದಲಯೋಧ್ಯಾ ನಗರದಿ ಮೆರೆದಾ ಕಾಮಿತವೆರೆದಾ
ಸ್ವಾಭಿಮಾನದಲಿ ಸತಿಯಳಿಗಿತ್ತನು ವರವಾ ದೇವರ ದೇವಾ ೨

ಜಾಂಬವಂತನಿಗೆ ಜಾನಕಿರಮಣನು ಇತ್ತ ತನ್ನಯಧ್ಯಾತ
ಸಂಭ್ರಮದಲಿ ವೇದಗರ್ಭನೊಡನಾಡ್ದಾ ಮುಕ್ತಿಯ ನೀಡ್ದಾ
ಕುಂಭೀಶ್ವರನ ಸುಕೋಶದಿ ಬಹುದಿನ ವಾಸ ವೆಸಗಿದನೀಶಾ
ನಂಬಿ ತುತಿಸಿದ ನರಹರಿ ಮುನಿಪಗೆ
ಒಲಿದಾ ಮೋದದಿ ನಲಿದ ೩

ಅಲವಬೋಧಮುನಿ ಅತಿಮೋದದಲರ್ಚಿಸಿದ ಸಲೆ ಮೆಚ್ಚಿಸಿದ
ಇಳೆಯೊಳು ಬಹು ಯತಿಕರ ಪೂಜಿತನಾದ ಲೀಲ ವಿನೊದಾ
ಬಲುನಂಬಿದ ಭಕುತರ ಕಲಿಮಲಗಳ
ಕಳೆದ ಮನದೊಳು ಪೊಳೆದ
ಸುಲಲಿತ ಗುಣನಿಧಿ ವಸುಧೇಂದ್ರಾರ್ಯರ
ಪ್ರೀಯ ಕವಿಜನಗೇಯ ೪

ವಾರಿಧಿಬಂಧನ ವಾನರ ನಾಯಕರಾಳ ದೈತ್ಯರ ಸೀಳ್ದಾ
ನಾರದ ಮುಖ ಮುನಿನಮಿತ
ಪದಾಂಬುಜನೀತಾ ತ್ರಿಗುಣಾತೀತ
ಆರಾಧಿಪರಿಗೆ ಅಖಿಳಾರ್ಥಗಳನು ಕೊಡುವಾ ದುರಿತವ ತಡೆವ
ನೀರಜಾಕ್ಷ ಜಗನ್ನಾಥ ವಿಠ್ಠಲ ನಿಶ್ಚಿಂತಾ ಸೀತಾಕಾಂತ ೫

೩೬

ರಾಮಾ ರಘುಕುಲರಾಮ ಪ

ಸುರ ಸಾರ್ವಭೌಮ ಪಾಹಿ ಗುಣಧಾಮಾ ಅ.ಪ.

ವೀಂದ್ರ ವಾಹನ ಫಣೀಂದ್ರಶಯನ ವರ
ದೇಂದ್ರನುತ ರಾಮಚಂದ್ರಾ ೧

ಚಂಡಬಾಣ ಕೋದಂಡಾ ವಿಧೃತ ದೋ
ರ್ದಂಡಾ ಲೋಕೈಕ ಶುಂಡಾ ೨

ಗೋಪ್ತಾ ಮೂಜಗದ್ವ್ಯಾಪ್ತಾ ದೋಷನಿ
ರ್ಲಿಪ್ತಾ ವಿಬುಧಜನರಾಪ್ತಾ ೩

ಘನ್ನಾ ಸೌಪರಿಭಿನ್ನ ಕಾಲಾತಿ
ಭಿನ್ನ ಜಗದ ಮೋಹನ್ನಾ ೪

ಅಂಬಾವಲ್ಲಭ ಬಿಂಬಾಸುರ ಮುನಿಕ
ದಂಬಾ ಸೇವೆ ಕೈಕೊಂಬಾ ೫

ಗಣ್ಯಾಗಣ್ಯನೆ ಶರಣ್ಯ ಸಲಹೋ ನಿ
ರ್ವಿಣ್ಣ ಸುರವರವರೇಣ್ಯ ೬

ಜ್ಞಾನಾನಂದಾದಿ ನಾನಾ ಗುಣಪೂರ್ಣ
ಶ್ರೀ ನಾರಾಯಣ ಸಮಾನಾ ೭

ಕಪಿಲಾ ಭಕ್ತರಿಗೆ ಸುಫಲಾದಾಯಕ
ಚಪಲಚಿತ್ತರಿಗೆ ಉಪಲಾ ೮

ಸೀತಾಪತೆ ಜಗನ್ನಾಥ ವಿಠಲ
ಖ್ಯಾತಾ ಭವವನನಿಧಿ ಪೋತಾ ೯

೩೭

ರಾಮಾ ಸದ್ಗುಣಗಣಧಾಮಾ ನಿರ್ಜರ ಸಾರ್ವ
ಭೌಮಾ ದನುಜಕುಲಭೀಮಾ ಭೀಮಾ ರಘು ಸದ್ವಂಶದೊಳು
ದ್ದಾಮಾ ಕಾದುಕೋ ನಿನ್ನ ಭಕ್ತ
ಸ್ತೋಮ ಮಂಗಳನಾಮ ಹನುಮ
ತ್ಪ್ರೇಮಾತಮ ಸೀತಾ ಮನೋಭಿರಾಮ ಪ

ಸರಸಿಜೋದ್ಭವನ ಮಂದಿರದೊಳರ್ಚನೆಗೊಂಡು
ನಿರುತಾ ಪಾವನತರ ಚರಿತಾ
ಸರ್ವದೇವರ ದೇವ ಇಷ್ವಾಕರ ರಸನ್ವಯ ನೃ
ಪರಕರವಾರಿರುಹ ಪೂಜಿತನಾಗಿ ದಶರಥಾ
ನರಸಿ ಜಠರದಿ ಜನಿಸಿ ಮೆರೆದಿಹ ರಾಮಾ ೧

ಗಾಧಿನಂದನನ ಸುಮೇಧಾ ರಕ್ಷಿಸಿದಾ
ಗಾಧನಂದ ಬಲಬೋಧಾ
ಮೇದಿನಿ ಜಾತಳನೊಲಿಸಲು
ಮಾಧವನ ಧನು ಮುರಿದ ನೀಲ ಪ
ಯೋಧರ ಶಾಮಲ ಸುಮನಸ ವಿ
ರೋಧಿ ಲೋಕಮಯ ಸದೆದ ರಘುರಾಮಾ ೨

ಚತುರವಿಂಶತಿ ದಶಶತ ಸಹಸ್ರ
ಜಿತಾದ್ಯಮಿತಾ ಆದ್ಯಮಿತ ರೂಪ ಜಗನ್ನಮಿತಾ
ಅತುಳ ಭುಜಬಲ ರಾವಣನ ಸಂ
ತತಿ ಸವರಿ ಲಂಕಾಧಿಪತ್ಯ
ನತ ವಿಭೀಷಣಗಿತ್ತಾ ವರದೇಂದ್ರ
ಯತಿ ವರದ ಜಗನ್ನಾಥ ವಿಠ್ಠಲ ರಾಮಾ ೩

೩೮

ಕಂಡೆ ಕಂಡೆ ಕೃಷ್ಣನ ಕಂಡೆ ಕಂಡೆ ಪ

ಕಂಡೆ ಕಮಲ ಕಳಾಯತಾಕ್ಷನ ಪುಂಡರೀಕ ಭವಾದಿ ಪೂಜ್ಯನ
ದಂಡ ಪಾಶಾನ್ವಿತನ ಕೋಟಿ
ಮಾರ್ತಾಂಡಸಮ ಸಂಕಾಶದೇವನ ಅ

ಅರುಣ ಪಂಕಜದಿರವ ಸೋಲಿಪ
ಚರಣತಳಿನಖ ಬೆರಳ ಪಂಕ್ತಿಯು
ಪರಡು ಬಣ್ಣದ ಪಿರಡಿಜಂಘೆಯು
ಉರದಿ ಜಾನುಗಳೆರಡು ದರ್ಪಣ
ತೆರದಿ ಶೋಭಿಸೆ ಕರಿಕರೋರುಗಳು

ತರು ನಿತಂಬದಿ ಮೆರೆವ ಪೀತಾಂ
ಬರದ ನಿರಿ ಸಡಗರದಿ ದೈತ್ಯರ
ಮರುಳುಗೊಳಿಸಿದ ಪರಮ ಪುರುಷನ ೧

ನಳಿನನಿಭ ಪೊಕ್ಕಳು ತನೂದರ
ವಳಿಗಳತ್ರಯ ಚೆಲುವ ವಕ್ಷ
ಸ್ಥಳದಿ ಪದ್ಮಾಲಲನ ಕಾಂಚನ
ಗಳದ ರೋಮದ ಕಲಿತ ಭುಜಯುಗ
ಕುಲಿಶ ಪಲ್ದುಟಿಗಳು ಪ್ರವಾಳ ವರ್ತುಳ ಕ
ಪೋಲ ಪರಿಮಳ ಚಂಪಕದಳದ ನಾಸಿಕ
ಜಲಜಲೋಚನ ವಿಲಸಿತ ಭ್ರೂ
ತಿಲಕ ಫಣಿಯನು ೨

ಪೊಳೆವ ಮಕುಟರಳಲೆಯ ಮಕರ ಕುಂ
ಡಲವು ಮೂಗುತಿ ಎಳೆನಗೆಯ ಮೊಗ
ಹುಲಿಯುಗುರು ಥಳಥಳಿಪ ಕೌಸ್ತುಭ
ಬಲವು ಪದಕಾವಳಿ ಸರಿಗೆ ಶ್ರೀ
ತುಲಸಿ ವನಮಾಲ ಸಗ್ವಲಯ ರುಳಿ ಬಿಂ
ದಲಿ ರಸಾದ್ಯೆಳದಳ ಯುಗಳ ಕರ
ತಳನಾಗೋ ಮಕ್ಕಳೊಡನೆ ಗೋ
ಕುಲದಿ ಚರಿಸಿದೆ ಲಲಿತಾಂಗನೆ ೩

ನೇಣು ಕಡಗೋಲು ಪಾಣಿಪೃಥಗಳ
ಶ್ರೇಣಿಯಲಿ ಒಡ್ಯಾಣ ನೂಪುರ
ಪ್ರಾಣಮುಖ್ಯರು ಕಾಣದತಿ ಕ
ಲ್ಯಾಣಗುಣಗಣ ಶ್ರೇಣಿವಂತನ
ಮಾಣದನುದಿನ ಸಾನುರಾಗದಿ
ಧೇನಿಸುವರ ಮನೋನುಕೂಲನ
ಬಾಣಗುರುವಿನ ಕಾಣೆನೆನಿಸಿದ
ಜಾಣ ಪರಮ ಪುರಾಣ ಪುರುಷನ ೪

ಭೂತಕೃತ್ಯದ್ಭೂತಿದಾಯಕ
ವೀತ ಶೋಕ ವಿಧಾತಮರ ಪುರು
ಹೂತ ಮುಖವಧ್ಯಾತ ಖರಮುರ
ಮಾತುಳಾಂತಕ ಶ್ವೇತವಾಹನ
ಸೂತಗತಸಂಕೇತ ತ್ರಿಗುಣಾ
ತೀತ ನಂದನೀಕೇತನದಿ ನವ
ನೀತ ಸವಿದ ಪುರಾತನ ಜಗ
ನ್ನಾಥ ವಿಠಲನ ೫

೩೯

ಕೃಷ್ಣನ ನೋಡಿರೈ ಭಕ್ತಿ ತುಷ್ಟನ ಪಾಡಿರೈ
ಕೃಷ್ಣಗೆ ಬಲಿದತಿ ದುಷ್ಟ ರಾಯರನು ತರಿದಾ
ಜಗದೊಳು ಮೆರೆದಾ ಪ

ನಂದ ವ್ರಜದಲಿ ಕಂದನಾಗಿ ತಾ ಬೆಳೆದಾ ದೈತ್ಯನರಳಿದಾ
ವೃಂದಾವನದೊಳು ಇಂದುಮುಖಿಯರನು
ಕೂಡಿ ಪರಿಪರಿಯಾಡಿ
ಒಂದೊಂದು ಪರಿಲೀಲೆ ಸಂದೇಹ
ತೋರಿಸಿದಾ ಮೋಹ ಚರಿಸಿದ
ಕಂದರ್ಪಪಿತ ತನ್ನ ಹೊಂದಿದ ಜನರನು
ಕಾವಾ ವರಗಳನೀವಾ ೧

ಬಾಲೆರ ಮನೆಯಲಿ ಪಾಲು ಮೊಸರುಗಳ
ಕದ್ದಾ ತೀವ್ರದಿ ಮೆದ್ದಾ
ಕಾಲಕಾಲದಿ ಗೋಪಾಲರ ಒಡಗೂಡಿ
ಗೋವಾ ಕಾಯ್ದನು ದೇವಾ

ಶೈಲವ ಬೆರಳಲಿ ತಾಳಿ ಗೋಕುಲವ
ಪೊರೆದ ಗರ್ವವ ಮೆರೆದಾ
ಶ್ರೀ ಲೋಲುಪನು ವಿಶಾಲ ಮಹಿಮೆಗಳ ತೊರೆದಾ
ಸುರದಿಂದ ಮೆರೆದಾ ೨

ಮಧುರ ಪಟ್ಟಣದಲಿ ಕದನ ಕರ್ಕಶರ ಕೊಂದಾ ಸಚ್ಚಿದಾನಂದಾ
ಸದುಗುಣ ನಿಧಿಯ ಪಡೆದವಳ ಜನಕಗೆ ಪಟ್ಟಾ ಗಟ್ಟಿದ ದಿಟ್ಟಾ
ಸುದತಿಗೋಸುಗ ಸುಧಾ ಪಾನೀಯ
ಪುರದಿಂದಾ ಸುರಪಮ ತಂದ
ಪದುಮಜಾಂಡಧರ ಜಗನ್ನಾಥ ವಿಠಲ ಗೀತಾ ತ್ರಿಗುಣಾತೀತಾ ೩

೪೦

ಕೃಷ್ಣರಾಯನೆ ನಿನ್ನ ಕೃತ್ಯಗಳೆಲ್ಲ
ಸೃಷ್ಟಿಯೊಳಗೆ ನಾ ಬೇರಲ್ಯಾ ಪ

ಶಿಷ್ಟರೊಳಗಿಟ್ಟು ಚಿರ ಕಾಲದ ಲೆನ್ನ
ಕಷ್ಟ ಬಿಡಿಸದೆ ಸುಮ್ಮನಿದ್ದೆಯಾ ಸ್ವಾಮಿ ಅ.ಪ.

ಜನನ ಮರಣ ಶೂನ್ಯನೆನಿಸಿಕೊಂಡು ಗೋಪಿ
ತನಯನಗಿದ್ದುದ ಹೇಳಲ್ಯಾ
ಸನಕಾದಿಸೇವ್ಯ ಪೂಜ್ಯನೆ ತುರುಗಳ ಹಿಂಡು
ವನದಲ್ಲಿ ಕಾಯ್ದದ್ದು ಹೇಳಲ್ಯಾ ನಾನು ೧

ದನುಜ ಭಂಜನನಾದ ಘನ ಮಹಿಮನೆ ಮಾಗ
ಧನಿಗಂಜಿ ಓಡಿದ್ದು ಹೇಳಲ್ಯಾ
ಎಣೆಯಿಲ್ಲದಾ ಶೂರ ರಣದೊಳು ಪಾರ್ಥಗೆ
ಅನುಗನಾಗಿದ್ದದ್ದು ಹೇಳಲ್ಯಾ ನಾನು ೨

ಸತತ ತೃಪ್ತನಾಗಿ ಕ್ಷಿತಿಯೊಳು ಬೆಣ್ಣೆಯ
ಮಿತವಾಗಿ ಕದ್ದದ್ದು ಹೇಳಲ್ಯಾ
ಕೃತಿದೇವಿರಮಣನೆ ಅತಿ ಪ್ರೀತಿಯಲಿ ಗೋಪ
ಸತಿಯರ ಕೂಡಿದ್ದು ಹೇಳಲ್ಯಾ ನಾನು ೩

ಶ್ರುತಿತತಿಗಳಿಗಭೇದ್ಯ ಪ್ರತಿಯಿಲ್ಲದೆ ದೇವ
ಸತಿಗೊಶನಾದದ್ದು ಹೇಳಲ್ಯಾ
ಶತಕೃತು ವಿಧಿವಂದ್ಯ ಸುತರಾಪೇಕ್ಷಿಸಿ ಭೂತ
ಪತಿಯನ್ನು ಬೇಡಿದ್ದು ಹೇಳಲ್ಯಾ ನಾನು ೪

ಭೂತಳದೊಳು ದೇವತೆಗಳೊಡನೆ ಇಂಥ
ರೀತಿಲಿ ಚರಿಸಿದ್ದು ಹೇಳಲ್ಯಾ
ಭೀತಿರಹಿತ ಜಗನ್ನಾಥವಿಠ್ಠಲನೆ ಅ
ದ್ಭುತ ಮಹಿಮನೆಂದು ಹೇಳಲ್ಯಾ ನಾನು ೫

೪೧

ನಾರದ ಪ್ರಿಯ ಕೃಷ್ಣ ನರಾಕಾರ
ಜಾರ ಚೋರ ಶೂರ ಧೀರ ಪ

ಘೋರತರವಾದ ಸಂಸಾರ ಸುಖ ದುಃಖಗಳ
ಮೀರಿ ಪೊರೆವಂಥ ಬಲು ಭಾರಕರ್ತನೇ
ಧಾರಿಣಿಯ ಮೇಲಿರುವ ಸೂರಿ ಜನರನು ಸದಾ
ಸಾರಸಾಕ್ಷ ಬಿಡದಲೆ ಪಾರುಗಾಣಿಸುವ ದೇವಾ ೧

ಮಂದಮತಿಯನಳಿದು ಚಂದದಿ ಸುಮಾರ್ಗವನ್ನು
ನಂದದಿಂದ ತೋರ್ಪ ಮುಚುಕುಂದ ವಂದ್ಯನೆ
ಎಂದಿಗೆಮ್ಮ ಗತಿಯೆಂದು ಹೊಂದಿ ಬೇಡ್ವ ಭಕುತರ
ವಂದಿಸುವರ ಭವಬಂಧನ ಬಿಡಿಸುವ ದೇವಾ ೨

ದಾಶರಥೆ ಎನ್ನ ಕ್ಲೇಶ ನಾಶ ಮಾಡು ದಯದಿ ದಿ
ನೇಶ ಶತಕೋಟಿ ಭಾಸ ಸಂಕಾಶ ಶ್ರೀಶ
ವಾಸವಾದಿ ವಂದ್ಯ ಜಗನ್ನಾಥ ವಿಠ್ಠಲನೆ ಪ್ರೀಯ
ದಾಸರಭಿಲಾಷೆಗಳ ಲೇಸುಗಯ್ಯೊ ವಾಸುದೇವ ೩

೪೨

ಪಾಲಿಸೆನ್ನ ಗೋಪಾಲ ಕೃಷ್ಣ ಪ

ಪಾಲಿಸೆನ್ನ ದಧಿಪಾಲ ಮುಖರ ಗೋ
ಪಾಲಬಾಲ ಕೃಪಾಲಯ ಹರಿಯೇ ಅ.ಪ.

ಪುಂಡರೀಕ ಭವ ರುಂಡಮಾಲ ಮೇ
ಷಾಂಡ ಪ್ರಮುಖ ಸುರಷಂಡ ಮಂಡಿತನೆ ೧

ಗೋಪ ಗೋಪಿ ಗೋಪಾಲ ವೃಷ್ಣಿಕುಲ
ದೀಪ ಶ್ರೀಪಶಿವಚಾಪ ಭಂಜನಾ ೨

ಅಂಡಜಾಧಿಪ ಪ್ರಕಾಂಡ ಪೀಠ ಕೋ
ದಂಡಪಾಣಿ ಬ್ರಹ್ಮಾಂಡ ನಾಯಕ ೩

ವ್ಯಾಪ್ತ ಗೋಪ್ತ ಜಗದಾಪ್ತ ದೋಷ ನಿ
ರ್ಲಿಪ್ತ ಪ್ರಾಪ್ತಗತಸುಪ್ತ ಸುಷುಪ್ತಾ ೪

ವೇದವೇದ್ಯ ಬ್ರಹ್ಮಾದಿವಂದ್ಯ ಸುಖ
ಬೋಧಪೂರ್ಣ ಬ್ರಹ್ಮೋದನ ಭೋಕ್ತಾ ೫

ಅಧ್ವರೇಶ ಲೊಕೋದ್ಧಾರ ಪಾಣಿ ಸ
ರಿದ್ವರ ಪಿತಗುರು ಮಧ್ವವಲ್ಲಭಾ ೬

ಪೋತ ವೇಷದರ ಪೊತನಾರಿ ಪುರು
ಹೂತ ಮದಹ ಜಗನ್ನಾಥ ವಿಠ್ಠಲ ೭

೪೩

ಆ ವೆಂಕಟಗಿರಿನಿಲಯನಂಘ್ರಿ ರಾ
ಜೀವಯುಗಳಗಾನಮಿಸುವೆನು ಪ

ಸೇವಿಪ ಜನರಿಗಮರ ತರುವೆನಿಸಿ ಧ
ರಾವಲಯಾಖ್ಯ ದಿವಿಯೊಳೆಸವ ಅ.ಪ.

ಅವನಂಘ್ರಿ ಜಲ ನಿಖಿಳ ಜಗತ್ತಿಗೆ
ಪಾವನತರವೆಂದೆನಿಸುವುದು
ಶ್ರೀ ವಿಧಿಭವ ಶಕ್ರಾದ್ಯರು ಆವನ
ಸೇವಕ ಸೇವಕರೆನಿಸುವರು
ತಾ ಉತ್ತಮ ಪುರುಷನೆನಿಸಿ ಜಗವ ಸ
ದಾವಕಾಲ ಸಂತೈಸುವನು
ಜೀವಾಂತರ್ಗತನಾಗಿ ವಿವಿಧ ವೇ
ದಾವಳಿಯಿಂದ ತುತಿಸಿ ಕೊಂಬಾ ೧

ಪಾತನೊಳಹಿಪ ವಿರೋಧಿಸೆ ತವಸ
ತ್ವಾತಿಶಯನ ತೋರೆಂದೆನುತಾ
ಜಾತರೂಪ ಶೈಲಾತ್ಮಜನಪ್ಪಿರೆ
ವೀತಿ ಹೋತ್ರ ಸಖ ಕಿತ್ತೊಗೆಯೆ
ವೀತ ಕರ್ನನಳವಳಿದು ವೇಗ
ಧಾತ ಮಹಿಳೆ ತೀರ್ಥದಿ ಭೂ ಲಕ್ಷ್ಮೀಸ
ಮೇತನಾಗಿ ಮೋದಿಸುತಿಪ್ಪೆ ೨

ಭೂಸುರನೊರ್ವನು ತೊಂಡಮಾನ ಧರ
ಣೀಶನ ನಿಲಯದೊಳುಳುಹಿ ಸತಿಯ
ಕಾಶಿಗೆ ಪೋಗಲು ನೃಪತಿ ಮರೆಯೆ ನಿ
ಶ್ವಾಸ ವನ್ನೈದಿದಳಾ ಸತಿಯು

ಆ ಸಮಯದಿ ದ್ವಿಜವರ್ಯನು ಬೆಸಗೊಳೆ
ಕ್ಲೇಶದಿ ಭೂಮಿಪ ಸಂಸ್ತುತಿಸೆ
ಕೇಶವ ತಾನಸ್ಥಿಗಳ ತರಿಸಿ ಸು
ವಾಸಿನಿ ಶಿಶು ಸಹ ಒಲಿದಿತ್ತಾ ೨

ವೃದ್ಧ ಬ್ರಾಹ್ಮಣನು ತುತಿಸೆ ಸಲಿಲದೊಳ
ಗದ್ದಿ ಕುಮಾರತ್ವವನಿತ್ತ
ಅಧ್ವರವೆಸಗಿದ ಋಷಿಗಳ ಮಂತ್ರದ
ಪದ್ಧತಿ ತಿದ್ದಿಯಜ್ಞವ ಮಾಡ್ದ
ಮಧ್ಯರಾತ್ರಿಯೊಳು ಬೆಸಗೊಂಡ ನೃಪನು
ಪದ್ರವ ಕಳೆದಾಯುಧವಿತ್ತು
ಮೃದ್ಭಾಂಡವ ರಚಿಸುವನಿಗೊಲಿದವನ
ಚೋದ್ಯ ತೋಂಡಮಾನಗೆ ತೋರ್ದ ೪

ಮನವಾಕ್ಕಾಯದಿ ಬಿಡದೆ ಸೇವಿಸುವ
ಜನರ ಸಂಚಿತ ಕುಕರ್ಮಗಳ
ಮನೆಯ ಮುರಿದು ಆಗಾಮಿ ಫಲಂಗಳ
ಅನುಭವಕೀಯದೆ ಪ್ರಾರಬ್ಧಾ
ಉಣಿಸಿ ಸುಲಭದಲಿ ತನ್ನ ಮೂರ್ತಿ ಚಿಂ
ತನೆ ಇತ್ತು ಸ್ವರೂಪಸುಖಾ
ಅನುದಿನದಲಿ ವ್ಯಕ್ತಮಾಡಿಸಿ ಕೊ
ಟ್ಟನಿಮಿತ್ತಾಪ್ತನೆನಿಸುತಿಪ್ಪ ೫

ಏಕಮೇವ ರತ್ನಾಕರ ಮಂದಿರ
ಆಕೂತಿಜ ಯಜ್ಞಾಕರನೇ
ಲೊಕವಿಲಕ್ಷಣ ಸೂಕರಾತ್ಮ ಪಿ
ನಾಕಿ ವಿನುತ ಲಕ್ಷ್ಮೀ ಕಾಂತಾ
ಗೋಕುಲ ಮಂದಿರ ಏಕಾಂತಿಗಳ ನಿ
ರಾಕರಿಸಿದೆ ಲೋಕೈಕ ಸುಖ

ಶೋಕ ರಹಿತ ನಿಜಲೋಕವಿತ್ತು ನಿ
ರಾಕುಲ ಸುಖಗಳ ತಾ ಕೊಡುವಾ ೬

ದಿನಪನೊಳಗೆ ವೃಜಿನಿ ವಸು ತಾ ಎಂ
ದೆನಿಸಿ ಜಯಾಪತಿ ಪ್ರದ್ಯುಮ್ನ
ಅನಿರುದ್ಧಾದಿ ಚತುರ್ಮೂರ್ತ್ಯಾತ್ಮಕ
ತನಗೆ ತಾನೆ ಪೂಜಕ ಪೂಜ್ಯ
ಅನುಪಮ ನಾಮದಿ ಕರೆಸುತಲಿಹ ತ
ನ್ನನು ಈ ಪರಿಧೇನಿಸುತಿಪ್ಪ
ಮನುಜರಿಗೊಲಿದು ಜಗನ್ನಾಥವಿಠ್ಠಲ
ಜನನ ಮರಣಗಳ ಪರಿಹರಿಪಾ ೭

೪೪

ಗಿರಿರಾಜ ಗಿರಿರಾಜ ಪ

ತರಣಿಶತ ರುಚಿರ ತೇಜ ವೆಂಕಟ ಅ.ಪ.

ಆರನ ಕಾಣದೆ ಸಾರಿದೆ ತ್ರಿಜಗ ವಿ
ಹಾರ ಪಿಡಿ ಕರ ಸಮೀರಾಶನ ೧

ಶ್ರೀ ಕಮಲಭವ ಪಿನಾಕಿ ಮುಖ್ಯ ಸುರ
ನಿಕರವನಾಳ್ವ ಲೋಕೈಕ ಶರಣ್ಯ ೨

ನಂಬಿದ ಭಕುತ ಕುಟುಂಬಿಯೆಂಬದಂಬು
ಜಾಂಬಕ ಬಲ್ಲೆ ಕೃಪಾಂಬುಧಿ ಕರುಣಿಸು ೩

ಮನವಾಕ್ಕಾಯದಿ ಮನಸಿಜಪಿತ ನನ್ನ
ಧೇನಿಸುವಂತೆ ಅನುದಿನ ಮಾಡೋ ೪

ಸಟೆಯಲ್ಲೀ ನುಡಿ ದಿಟವೆಂಬುದು ಬುಧ
ಕಟಕ ಜಗನ್ನಾಥ ವಿಠಲ ವಿಹಂಗಪ ೫

೪೫

ತುತಿಸಬಲ್ಲೆನೆ ನಾ ನಿನ್ನ ವೆಂಕಟರನ್ನ ಪ

ತುತಿಸಬಲ್ಲೆನೆ ಲಕ್ಷ್ಮೀ ಪತಿ ನಿನ್ನ ಬ್ರಹ್ಮ ಪಾ
ರ್ವತಿ ಪತ್ಯಾದ್ಯಳವಡದುತುಳ ಮಹಿಮೆಗಳ ಅ.ಪ.

ನಮಿಪ ಜನರ ಕಲ್ಪದ್ರುಮ ದುಷ್ಟದಾನವ
ದಮನ ದಿವಿಜಕುಲೋತ್ತಮ ಲಕ್ಷ್ಮೀ ಪವನಾದಿ
ಸುಮನಸಾರ್ಚಿತ ಪಾದಕಮಲ ಯುಗ್ಮನೆ ಅನು
ಪಮ ರೂಪ ಲಾವಣ್ಯ ಕಮನೀಯ ಕಾಯ ಹೃ
ತ್ತಿಮಿರ ಭಾಸ್ಕರ ಶ್ರೀ ಭೂರಮಣ ಸರ್ವಗ ಸದಾ
ಗಮವೇದ್ಯ ವೇದವ್ಯಾಸ ಕಪಿಲ ದತ್ತ
ಕುಮುದಾಪ್ತ ಕೋಟಿ ಭಾಸಾ ತದ್ಭಕ್ತರ
ಸಮುದಾಯಕೀಯೋ ಲೇಸಾ ಆನತ ಬಂಧು
ಸುಮುಖ ಸುಲಭನೆಂದಾ ನಮಿಪೆ ಎನ್ನರಸಾ ೧

ಘನಮಹಿಮನೆ ವೃಂದಾವನವಾಸಿ ಸ್ವಪ್ರಯೋ
ಜನವಿವರ್ಜಿತ ಗೋವರ್ಧನಧಾರಿ ಗೋ ಗೋಪೀ
ಜನ ಮನೋರಂಜನ ಜನಕಜಾರಮಣ ಪೂ
ತನಿ ಪ್ರಾಣಾಂತಕ ವೇದವಿನುತ ಶ್ರೀ ವತ್ಸಲಾಂ
ಛನ ವಕ್ಷ ಕೌಸ್ತುಭ ಮಣಿ ವೈಜಯಂತೀ ಸ
ದ್ವನ ಮಾಲಾಂಚಿತ ಕಂಧರಾ ಸತ್ಕಲ್ಯಾಣ
ಗುಣ ಜ್ಞಾನಾತ್ಮಕ ಶರೀರಾ ಸಂತತ ನಿಷ್ಕಿಂ
ಚನ ಭಕ್ತಜನಮಂದಾರಾ ವಂದಿಸುವೆ ಮ
ನ್ಮನದಲಿ ನಿಲಿಸೋ ಕರುಣಾ ಪಾರಾವಾರಾ ೨

ಕವಿಭಿರೀಡಿತ ಪುಣ್ಯ ಶ್ರವಣ ಕೀರ್ತನ ಮತ್ಸ್ಯಾ
ದ್ಯವತಾರಂತರ್ಯಾಮಿ ಪ್ರವಿವಿಕ್ತ ಭುಗ್ವಿಭು
ಭುವನ ನಿಧಿಯ ಪೆತ್ತ ಸವನ ತ್ರಯಾಹ್ವಯ
ಶಿವರೂಪಿ ಶಿವದ ಭೂರ್ಭುವಸ್ವಸ್ಥ ಸ್ವಶ ಭಾ
ರ್ಗವ ನಿನ್ನೊಳಿಪ್ಪ ದಾನವನ ಸಂಹರಿಸುವ
ನೆವದಿಂದ ದಾಶರಥೀ ಸಂಗಡ ಯುದ್ಧ
ತವಕದಿ ಮಾಡಿ ಭೀತಿ ಬಟ್ಟವನಂತೆ
ಅವನಿಗೆ ತೋರ್ದ ರೀತಿ ವರ್ಣಿಸಲಿನ್ನು
ಪವನಮುಖಾದ್ಯರಿಗವಶ ನಿನ್ನಯ ಖ್ಯಾತಿ ೩

ಗತಶೋಕ ಗಾಯಿತ್ರಿ ಪ್ರತಿಪಾದ್ಯ ತತ್ವಾಧಿ
ಪತಿಗಳೆನಿಸುವ ದೇವತೆಗಳೊಳಗಿದ್ದು ಮಾ
ರುತನಿಂದ ಒಡಗೂಡಿ ಪ್ರತಿದೇಹಗಳಲಿ ಯೋ
ಗ್ಯತೆಯನರಿತು ಕರ್ಮಗತಿಗಳನೀವೆ ಸಾಂ
ಪ್ರತ ಬೇಡಿಕೊಂಬೆ ಆನತರ ಸಂತೈಸೆಂದು
ಪ್ರಥಮಾಂಗ ಪ್ರಿಯ ಸತ್ತಮ ಸೌಭಾಗ್ಯ ಸಂ
ಭೃತಸಾರ ಸರ್ವೋತ್ತಮ ನೀನೆ ಪಾಂಡು
ಸುತರಾದ ಧರ್ಮ ಭೀಮಾ ಪಾರ್ಥರ ಕಾಯ್ದೆ
ಪ್ರತಿಗಾಣೆ ನಿನಗೆ ಸಂತತ ಪರಂಧಾಮಾ ೪

ಕಲಿ ಮುಖ್ಯ ದೈತ್ಯ ಗಂಟಲಗಾಣ ಗುರುತಮ
ಬಲಿಬಂಧಮೋಚಕ ಸುಲಭ ಚೆತ್ಸುಖದಾಯಿ
ಫಲ ಚತುಷ್ಟಯನಾಮ ಫಲಸಾರ ಭೋಕ್ತೃ ಶಂ
ಬಲನಾಗಿ ಭಕತರ ಸಲಹುವ ಕರುಣಿ ಶಂ
ಫಲಿಪುರವಾಸಿ ಬಾಂಬೊಳೆಯ ಜನಕ ಲಕ್ಷ್ಮೀ
ನಿಲಯ ನಿರ್ಗತ ದುರಿತಾ ಮನ್ಮನದ ಚಂ
ಚಲವ ಬಿಡಿಸೋ ನಿರುತಾ ಬೇಡಿಕೊಂಬೆ
ತಲೆ ಬಾಗಿ ಸರ್ವಗತಾ ನೀನಹುದೆಂದು
ತಿಳಿಸೋ ತೀವ್ರದಿ ಮುಪ್ಪೊಳಲುರಿಗನ ತಾತಾ ೫

ಉದಿತ ಭಾಸ್ಕರನಂತೆ ಸುದತೇರಿಂದೊಡಗೂಡಿ
ಉದರ ನಾಮಕ ನೀನು ಉದರದೊಳಿದ್ದೆನ್ನ
ಉದಕಗಳಿಗೆ ನಿತ್ಯಾಸ್ಪದನಾಗಿ ಜೀವರ
ಹೃದಯದೊಳಿರುತಿಪ್ಪೆ ಸದಸದ್ವಿಲಕ್ಷಣಾ
ವಿಧಿಭವ ಶಕ್ರಾದಿ ತ್ರಿದಶರೊಂದಿತ ಪಾದ
ಬದಿಗನಾಗಿರಲು ಪಾಪ ಕರ್ಮಗಳು ಬಂ
ದೊದಗುವುವೇನೋ ಶ್ರೀ ಪಾ ಬಿನ್ನೈಸುವೆ
ಬುಧ ಜನರಂತಸ್ತಾಪಾ ಕಳೆದು ನಿತ್ಯ
ಬೆದರದಂದದಲಿ ಮಾಳ್ಪುದು ದೋಷ ನಿರ್ಲೇಪಾ ೬

ಪಣಿಗಣ್ಣ ಸ್ವರದಿಂದಾಗ್ರಣಿಯಾದ ದುಷ್ಟ ರಾ
ವಣನ ಬಾಹುಬಲ ಗಣಿಸಿದೆ ನಿಶಿತ ಮಾ
ರ್ಗಣದಿ ಸದೆದು ವಿಭೀಷಣಗೆ ನೀ ಲಂಕಾಪ
ಟ್ಟಣ ಭೋಗ ತತ್ಕಾಲ ಉಣಲಿತ್ತು ಭಕ್ತಗೆ
ಪ್ರಣತ ಕಾಮದನೆಂಬೋ ಗುಣ ನಿನ್ನಲ್ಲಿದ್ದ ಕಾ
ರಣದಿ ಪ್ರಾರ್ಥಿಸುವೆ ನಿನ್ನಾ ದಾಸರೊಳು
ಗಣಿಸು ನೀ ದಯದಿ ಎನ್ನಾ ತಪ್ಪುಗಳ ನೀ
ನೆಣಿಸಲಾಗದು ಪ್ರಸಾನ್ನಾ ಪಾಲಕನೆ ಕುಂ
ಭಿಣಿಸುರರನು ಕಾಯೊ ಕ್ಷಣಾ ಲಕ್ಷ್ಮಣಣ್ಣಾ ೭

ಬಿಸಜ ಸಂಭವನ ನಿರ್ಮಿಸಿ ನಾಭಿಕಮಲದಿ
ಸಶರೀರದೊಳು ಸುಮನಸರ ಪಡೆದು ನಿನ್ನಾ
ಪೆಸರಿಟ್ಟು ಅವರವರೊಶನಾದೋಪಾದಿ ತೋ
ರಿಸಿದಿ ನೀ ಸ್ವಾತಂತ್ರ್ಯ ಅಸಮನೆಸಿಕೊಂಡು
ಬಸಿರೊಳಗಿಟ್ಟು ಪೊಂಬಸರಾದಿ ಸುರರ ಪಾ
ಲಿಸುವಿ ನೀ ಪ್ರತಿ ಕಲ್ಪದಿ ನರಕ ಸ್ವರ್ಗ
ವಸುಮತಿ ಯಮ ಲೋಕದಿ ನರಕ ಸ್ವರ್ಗ
ವಸುಮತಿ ಯಮ ಲೋಕದಿ ವಾಸಿಸುತ ರ
ಕ್ಕಸರನಂಧಂತಮದಿ ದಣಿಸುತಿಪ್ಪ
ಪ್ರಸವಿತ್ತ ನಾಮ ವಂದಿಸುವೆ ಪ್ರಮೋದೀ ೮

ಆಪದ್ಬಾಂಧವ ಬಹುರೂಪಾ ರುಕ್ಮಿಣೀಶಾ
ತಾಪಸ ಜನರ ಹೃತ್ತಾಪದರ ಧರ್ಮ
ಸ್ಥಾಪಕ ಸ್ಥವಿರ ನಿರ್ಲೇಪ ಗುಣತ್ರಯ
ವ್ಯಾಪಕ ಸುಖಧರ್ಮ ಪ್ರಾಪಕ ಸುಜನ ಲೋ
ಕೋಪಕಾರಕ ಧರ್ಮ ವ್ಯಾಪ ಊರ್ಧ್ವಗ ನಿರ್ಗು
ಣೋಪಾಸಕರ ಸಲಹಲೋಸುಗದಿ ಸ
ಲ್ಲಾಪದಿ ಬಹ ಕಲಹಾ ಮನ್ನಿಸೋ ಭವಾ
ಕೂಪಾರ ನಾವಿಕ ಭೂಪತಿ ವರಹಾ ೯

ಶಫರ ಕೂರ್ಮ ಕ್ರೋಡ ವಪುಷ ಹಿರಣ್ಯಕ
ಶಿಪುವಿನ ಸೀಳ್ದ ಕಾಶ್ಯಪಿಯಾಚಿಕನೆ ದುಷ್ಟ
ನೃಪರ ಸಂಹರಿಸಿದ ಕಪಿವರ ಪೂಜಿತ
ದ್ರುಪದಾತ್ಮಜೆಯ ಕಾಯ್ದ ತ್ರಿಪುರಾರಿ ಕಲಿಮುಖ್ಯ
ರುಪಟಳ ಬಿಡಿಸಿದ ಕೃಪಣವತ್ಸಲ ಕಲ್ಕಿ
ಅಪವರ್ಗಪ್ರದ ಅಮಿತ ರೂಪಾತ್ಮಕ
ಸುಫಲ ಚಿತ್ಸುಖ ಭರಿತಾ ತ್ರೈ ಲೋಕಕ್ಕೆ
ಪ್ರಪಿತಾಮಹನೆ ನಿರುತಾ ಪ್ರಾರ್ಥಿಸುವೆ ನಿ
ನ್ನಪರೋಕ್ಷವಿತ್ತು ಪಾಲಿಪುದೆಮ್ಮ ಸ್ವರತಾ ೧೦

ವಟಪತ್ರಶಯನ ವೆಂಕಟಗಿರಿ ನಿಲಯ ನಿ
ಷ್ಕುಟಿಲ ದುರ್ವಿಷಯ ಲಂಪಟವ ಸದೆದು ನಿನ್ನ
ಭಟಜನರಿಗೆ ಧರ್ಮ ಘಟಕನಾಗುವೆ ನಿತ್ಯ
ವಟುರೂಪಿ ಎಡಪಾದಂಗುಟದಿ ಅಬ್ಜಜಾಂಡ
ಕಟಾಹ ಭೇದಿಸಿ ದೇವ ತಟನೀಯ ಪಡಿಯೋ ಧೂ
ರ್ಜಟಿ ತಲೆಯೊಳು ಧರಿಸಿ ನಿನ್ನ ನಾಮ
ಪಠಿಸುತ್ತ ಸತಿಗೆರಸಿ ಕುಣಿದನೆಂದು
ತ್ಕಟದಿ ಕೈಗಳ ಬಾರಿಸಿ ಜಗನ್ನಾಥ
ವಿಠಲ ಸರ್ವೋತ್ತಮ ದಿಟನೆಂದುದ್ಘಟಿಸೀ ೧೧

೪೬

ನಾರಾಯಣಾದ್ರಿ ಕೃತವಾಸ ಶರಣು
ತೋರಯ್ಯ ತವರೂಪ ರವಿಕೋಟಿಭಾಸ ಪ

ಆನತಜನಾಪ್ತ ನೀನೆಂಬೋ ನುಡಿಕೇಳಿ ಮಿಗೆ
ಸಾನುರಾಗದಲಿ ನಡೆತಂದೆ ನಿನ್ನ ಬಳಿಗೆ
ಮೀನಾಂಕಜನಕ ತವಪದಯುಗಾರ್ಚನೆ ಹೀಗೆ
ಜ್ಞಾನ ಪೂರ್ವಕದಿಂದಲೆನಗೆ ದಯದಿ
ಪಾನೀಯಜಾಂಬಕನೆ ಪೊರೆಯೆಂದೆ ನಿನಗೆ ೧

ವಾಸುಕೀ ತಪಕೆ ಸಲೆಮೆಚ್ಚಿ ಗಿರಿಯಲಿ ನಿಂದೆ
ಆ ಸಲಿಲದೊಳು ಮಿಂದು ಕರಿವರ ಕರೆಯೆ ಬಂದೆ ಸ್ವಾಮಿ
ವಾಸವಾತ್ಮಜನು ಬಿನ್ನೈಸೆ ನಿನ್ನಯ ಮುಂದೆ
ಆ ಸಮರದೊಳಗೊಲಿವನೆಂದೆ ನಿನಗೆ
ಪಾಸಟಿ ಯಾರು ನೀರಜಭವನ ತಂದೆ ೨

ಪೊಗಳಲರಿಯರು ಸುರರು ನಿನ್ನ ಮಹಿಮಾತಿಶಯ
ಬಗೆಯನರಿಯಳು ಲಕುಮಿ ಬದರ ಸನ್ನಿಭಕಾಯ
ಮುಗುದ ಮಾನವ ತಿಳಿವನೆನೋ ತಿರುಮಲರಾಯ
ಖಗರಾಜಗಮನ ಕಮನೀಯ ಪಾಹಿ
ಜಗನ್ನಾಥವಿಠಲ ವಿಗತಾಘ ಕವಿಗೇಯ ೩

೪೭

ಪನ್ನಗಾದ್ರಿ ನಿವಾಸ ಸುದರುಶನ ಪಾಂಚ
ಜನ್ಯಧರ ದೂರ್ವಾಸ ಪ್ರಮುಖ ಮುನಿ ಸ
ನ್ನಾನ ಕರುಣಿ ವಿಲಾಸ ಶ್ರೀ ಶ್ರೀನಿವಾಸ ಪ

ಎನ್ನವಗುಣ ಸಹಸ್ರವೆಣಿಸದೆ
ನಿನ್ನವರೊಳಗೆಣಿಸಿ ಅನುದಿನ

ಮನ್ಮನಾಲಯದೊಳು ನೆಲಸು ಮೈ
ಗಣ್ಣನನುಜ ವರಾಭಯ ಶ್ರೀಕರ ಅ.ಪ.

ಕಾಮಿತಪ್ರದಕೋಲಾ ಅಂಜನಾಧಿರ ಧಾರ
ಧಾಮ ಭೂಮಿ ವಿಲೋಲಾ ಶಂಖಣನೃಪವರದ
ಹೇಮ ಲೋಚನ ಕಾಲಾ ದ್ವಿಜ ಮಹಿಳೆಯುಳುಹಿದ
ಶಾಮಲಾಂಗ ಸುಶೀಲಾ ವೆಂಕಟ ಕುಲಾಲ
ಭೀಮಗೊಲಿದ ಮಹಾಮಹಿಮನೆ ಪಿ
ತಾಮಹನ ನಾಸೋದ್ಭವನೆ ವಿಯ
ದ್ಭೂಮಿಪತಿ ಜಾಮಾತ ಕಟಿಸು
ತ್ರಾಮಸುತಸೂತ ಪ್ರಮೋದಾಸು
ಧಾಮ ಸೌಖ್ಯ ಪ್ರದವರಾಹ
ತ್ರಯೀಮಯನೆ ಪ್ರಣತಾರ್ತಿಹರ ಬಲ
ರಾಮನಾನುಜ ದಂಷ್ಟ್ರಿ ಸಾಲಿಗ್ರಾಮ ಸದನ ಸಹಸ್ರನಾಮ
ಸಾಮಜಪತಿ ಪೋಷಕ ರಿಪುವನ
ಧೂಮಧ್ವಜ ವಿಧಿಭ ಸೇವಿತ
ವ್ಯೋಮಾಳಕಸಖ ಸರ್ವಜ್ಞರ
ಮಾಮನೋಹರ ಮನ್ನಿಪುದೆಮ್ಮ ೧

ದೀನಜನ ಮಂದಾರ ದೇವಕಿಸುತ ಜಗ
ತ್ರಾಣ ಗುಣ ಗಂಭೀರ ಪೃಥ್ವೀಶ ತೋಂಡ
ಮಾನವರದ ಉದಾರ ಲುಬ್ಧಕನ ವಿಷ್ವ
ಕ್ಸೇನನೆನಿಸಿದ ಧೀರ ವೆಂಕಟವಿಹಾರ
ವೈನತೇಯ ವರೂಥ ಖಳ ಸ್ವ
ರ್ಭಾನುವಿನ ತಲೆಗಡಿದು ರವಿಶಶಿ
ಕ್ಷೋಣಿಜ ಬುಧ ಗುರು ಕವಿ ಶನಿಗಳ
ಶ್ರೇಣಿಯಲಿ ಮಾನಿಗಳ ಮಾಡ್ದ ಮ
ಹಾನುಭಾವ ಮನೋಜಪಿತ ಚಲುವಾನನ
ಕಲಿಮಲಾಪಹಾರಿ ಕೃ

ಶಾನುಸಖಿ ಸಂಪೂಜ್ಯ ಸುಮನಸ
ಧೇನು ಶರಣ ಜನರ್ಗೆ ಸಂತತ
ಆ ನಮಿಸುವೆ ನಳಿನಜಪಿತ ನಿ
ರ್ವಾಣ ನಿರವದ್ಯ ನಿರುಜ ಬ್ರ
ಹ್ಮಾಣಿ ಸುರನಿಕರ ನಿಲಯನುಸಂ
ಧಾನಕೆ ಕೊಡು ಬಹುವಿಧಕರ್ಮ ೨

ಸಾರ ಶ್ರೀ ಮದನಂತಾ ಸನಕಾದಿ ಸೇವ್ಯ ಪಾ
ದಾರವಿಂದ ಮಹಂತಾ ಸತ್ವಾದಿ ತ್ರಿಗುಣವಿ
ದೂರ ದಿತಿಜ ಕೃತಾಂತಾ ಗುಣರೂಪ ಪಾರಾ
ವಾರ ವಿಗತಾದ್ಯಂತಾ ಶ್ರೀ ಭೂಮಿಕಾಂತಾ
ಭಾರಿ ಶಫರ ಕಮಠ ವರಹ ಕ
ರ್ಬುರ ಕಶಿಪು ವಿದಾರಣನೆ ಭಾ
ಗೀರಥಿಯ ಪದನಖದಿಪಡದಂಗಾರ ವರ್ಣನೆ
ಭೃಗುಕುಲೋದ್ಭವ
ವಾರಿನಿಧಿಬಂಧನ ವನೌಕಸ
ವಾರ ಪೋಷಕ ನಂದಗೋಪ ಕು
ಮಾರ ತ್ರಿಪುರ ವಿದೂರ ತುರಗವನೇರಿದ ಜಗನ್ನಾಥವಿಠಲ
ಸಾರುವೆ ತವ ಪದಪಂಕಜ ಜಂ
ಭಾರಿಮದ ವಿಭಂಜನ ಭವ ಭಯ
ತಾರಕ ನಿನ್ನವರೊಳು ತತ್ವ ವಿಚಾರಕೊಡು ಚಿರಕಾಲದಲಿ ೩

೩೮

ಬಾ ವೆಂಕಟಶೈಲಾಧಿಪ ಮನ್ಮನಕೆ ತಡಮಾಡುವುದ್ಯಾಕೆ
ಶ್ರೀ ವಲ್ಲಭನಾ ನಿನ್ನಂಘ್ರಿ ಕಮಲಕೆ ನಮಿಸುವೆ ಪ್ರತಿ ಕ್ಷಣಕೆ ಪ

ನೀ ಒಲಿದೆನ್ನ ದಯಾವಲೋಕನದಿ
ಪಾವನಮಾಡಲು ದೇವವರೇಣ್ಯ ಅ.ಪ.

ವೈಕುಂಠಾಧೀಶ ವಿಗತಕ್ಲೇಶ
ಚಿತ್ಸುಖಮಯವಪುಷ
ಆಕಾಶವತ್ಸರ್ವತ್ರಾವಕಾಶ ಶ್ರೀ ವೆಂಕಟೇಶ
ಶ್ರೀ ಕಮಲಜ ಭವ ಪಾಕಹ ಮದನ ದಿ
ವಾಕರ ಪ್ರಮುಖ ದಿವೌಕಸ ವರದ ೧

ಮಮಸಮಾಸ್ವಾಮಿ ಮದಂತರ್ಯಾಮಿ ಸರ್ವಾಂತರ್ಯಾಮಿ
ಅಮಿತಾತ್ಮ ಅತಿರೋಹಿತ ನಿಷ್ಕಾಮಿ ಸೇವಿತ ಶ್ರೀಭೂಮಿ
ಶಮಲವರ್ಜಿತೆ ಅಮಿತ ಸುಗುಣಪೂರ್ಣ
ಅಮಲಮಹಿಮ ಖಳದಮನ ದಯಾಳೊ ೨

ಸೋಮಾರ್ಕಾನಲ ಸಂಕ್ರಮ ಋತುಭುಕ್ಷಾ ಸಿತಾಸಿತ ಪಕ್ಷ
ನಾಮಾಭಿಧೇಯ ಲೋಕಾಧ್ಯಕ್ಷಾ ಕಮಲಾಯತಾಕ್ಷ
ಸೋಮ ಭೂಮ ನಿಸ್ಸೀಮ ಮಹಿಮ ತ್ರಿ
ಧಾಮರಾಮ ಘನಶ್ಯಾಮ ಲಲಾಮ ೩

ಪವನಂತರಾತ್ಮಾ ನಿರ್ಮಲಾತ್ಮಾ ಪರಮಾತ್ಮ ಜ್ಞಾನಾತ್ಮಾ
ಅವಿಕಾರ ಅತಿರೋಹಿತ ಭೂತಾತ್ಮ ಪೂತಾತ್ಮ ಮಹಿತಾತ್ಮ
ತ್ರಿವಿಧ ಜೀವರಿಗೆ ವಿವಿಧ ಫಲಂಗಳ
ತವಕದಿ ಕೊಟ್ಟವರವರ ಪಾಲಿಸೋ ೪

ಸೃಷ್ಟ್ಯಾದಿಕರ್ತ ತ್ರಿಜಗದ್ಭರ್ತ ಲೋಕೈಕ ಸಮರ್ಥ
ವೃಷ್ಣೀಶಾ ವೃಂದಾರಕ ರಿಪುಹರ್ತಾ ಮುಕ್ತರ ಪುರುಷಾರ್ಥ
ಹೃಷ್ಟ ಪುಷ್ಟ ಪರಮೇಷ್ಠಿ ಜನಕ ಶಿ
ಷ್ಟೇಷ್ಟ ಹೃಷ್ಟ ಅನಿವಿಷ್ಟ ನಿವಿಷ್ಟ ೫

ವೇದಸ್ತೇಯಾರಿ ಮಂದರಧಾರಿ ಭೂವರ ನರಹರಿ
ಭೂ ದಾನವ ಬೇಡಿದ ಚಾಪಕುಠಾರಿ ರಾವಣಕುಲವೈರಿ
ಯಾದವ ವಂಶ ಮಹೋದಧಿ ಚಂದಿರ
ಸಾದಿತ ತ್ರಿಪುರ ಖಳೋದರ ಪಾಹಿ ೬

ದಯದಿಂದ ನೋಡೊ ದೀನೋದ್ಧಾರ ಸದ್ಗುಣ ಗಂಭೀರಾ
ಪ್ರಿಯ ನೀನೇ ಎನಗೆ ಲೋಕೋದ್ಧಾರ ಸೌಂದರ್‍ಯಸಾರಾ
ಹಯಮುಖ ಲೋಕತ್ರಯ ಪತ್ರಯಾಮಯ
ವಯನಗಯ್ಯ ನಾ ಬಯಸುವೆ ನಿನ್ನ ೭

ಬಹು ಮಾತುಗಳೇಕೋ ಭವ ಭಯಹಾರಿ ಬಿನ್ನೈಸುವೆ ಶೌರಿ
ವಿಹಿತಾಹಿತಗಳು ನಿನ್ನನು ಮೀರಿ ಮಾಳ್ಪೆಗೆ ಕಂಸಾರೀ
ಮಹಿತ ಶಮಲ ಸದಹಿತ ಲಕುಮಿ ಭೂ
ಸಹಿತ ಮನದಿ ಸನ್ನಿಹಿತನಾಗೆಲೋ ೮

ದಾತಾ ನೀನಲ್ಲದನ್ಯರರಿಯೇ ಕಂಡವರನು ಕರಿಯೇ
ಪ್ರೀತನಾಗೆನ್ನೊಳು ಶ್ರೀ ಹರಿಯೇ ಮೂರ್ಲೋಕದ ದೊರೆಯೇ
ಶ್ರೀ ತರುಣಿಯೊಡಗೂಡೀ ತನು ಸದನಕೆ ನೀ ತ್ವ
ರಿತದಿ ಜಗನ್ನಾಥ ವಿಠ್ಠಲ ೯

೪೯

ರಕ್ಷಿಸೊ ಶ್ರೀಶ ಶ್ರೀನಿವಾಸ ಪ

ರಕ್ಷಿಸೆನ್ನ ಪದ್ಮಾಕ್ಷ ತ್ರಿಜಗದ
ಧ್ಯಕ್ಷ ಖಳ ಜನಶಿಕ್ಷ ಪಾಂಡವ
ಪಕ್ಷ ಕರುಣ ಕಟಾಕ್ಷದಲಿ ನೀ
ನೀಕ್ಷಿಸುತ ಪೊರೆ ಪಕ್ಷಿ ವಾಹನ ಅ.ಪ.

ಕೊಂಚ ಮತಿಯಲಿ ಕುಜನರ ಸೇರಿ
ಸಂಚರಿಸುತಲಿ ದೀನನಾದೆ
ಪಂಚಶರಸ್ಮರ ವಂಚಿಸುತ ಬಿಡೆ
ಚಂಚಲಾಕ್ಷೇರ ಸಂಚು ನೋಟದ
ಮಿಂಚಿಗೆನ್ನ ಮನ ಚಂಚಲಾಗುತೆ
ವಂಚಿಸೆ ಯಮನಂಚಿಗೆ ಸಿಲುಕಿದೆ ೧

ಕಿಟ್ಟಗಟ್ಟಿದ ಕಬ್ಬಿಣದಂತೆ
ಕೆಟ್ಟ ಕಿಲ್ಬಿಷದ ರೂಪದಿ ಬಿದ್ದು
ದಿಟ್ಟ ನಿನ್ನಯ ಗುಟ್ಟು ತಿಳಿಯದೆ
ಪೊಟ್ಟೆ ಗೋಸುಗ ಕೆಟ್ಟ ಕುಜನರ ಘಟ್ಟನಾ ಕಾಲ್ಗಟ್ಟೆ ಬಹುಶ್ರಮ
ಪಟ್ಟು ಭವದಿ ಕಂಗೆಟ್ಟೆ ಪ್ರತಿದಿನ ೨

ಶ್ರೀ ಕಮಲೇಶ ಹೃತ್ಪದ್ಮದಿನೇಶ
ಪ್ರಕಾಶ ಬೇಗನೆ ಬಂದು
ಯಾಕೇ ತಡೆವೆನ್ನ ವಾಕ್ಕುಲಾಲಿಸಿ
ಜೋಕೆಯಿಂದಲಿ ನೀ ಕರವ ಪಿಡಿ
ದಾ ಕುಚೇಲನ ಸಾಕಿದಾಪರಿ
ಶ್ರೀ ಕರ ಜಗನ್ನಾಥ ವಿಠಲ ೩

೫೦

ರಥವನೇರಿದ ರಥಿಕನಾರೇ ಪೇಳಮ್ಮಯ್ಯ
ಕಥಿತಧ್ಯಾತ ಸಂಸ್ತುತ ವಿತತಾನತ
ಹಿತಕರ ದಿವಿಷತ್ಪತಿ ಕಾಣಮ್ಮ ಪ

ಹಾಟಕ ರತ್ನಸುಪೀಠ ಮಧ್ಯ ಮಂಟಪದಿ ಪೇಳಮ್ಮಯ್ಯ
ಕೋಟಿ ಭಾಸ್ಕರ ಪ್ರಭಾಟೋಪದಿ ರಾಜಿಸುವ ಪೇಳಮ್ಮಯ್ಯ ಅ.ಪ.

ತಾಟಂಕಯುತ ವಧೂಟಿಯರಿಕ್ಕೆಲದಲಿಹ ನೋಡಮ್ಮಯ್ಯ
ಆಟದೆ ಕುರುಜ ಮಹಾಟವಿ ಸವರಿ ಕಿ
ರೀಟಿಯ ಸಲಹಿದ ಖೇಟವಾಹನನೇ ಕೇಳಮ್ಮಯ್ಯ ೧

ಭುಜಗರಾಜ ಫಣಿಮಣಿ ಮಂಡಲ ಮಂಡಿತನೇ ನೋಡಮ್ಮಯ್ಯ
ವಿಜಯವರದ ಅರಿಗದಾಂಬುಜಧರ ಭುಜನೇ ನೋಡಮ್ಮಯ್ಯ
ಗಜಚರ್ಮಧರಾದ್ಯನಿಮಿಷಗಣಸೇವಿತನ ನೋಡಮ್ಮಯ್ಯ

ಅಜನ ನಾಭಿಯಲಿ ಪಡೆದು ಚರಾಚರ
ಸೃಜಿಸಿ ಪೇಳ್ದ ನೀರಜಲೋಚನ ಕಾಣಮ್ಮ ೨

ಏತಾದೃಶ ಮಹಾಮಹಿಮ ರಮಾವಲ್ಲಭನೆ ಪೇಳಮ್ಮಯ್ಯ
ಶ್ವೇತ ದ್ವೀಪಾನಂತಾಸನ ವೈಕುಂಠನುಳಿದು ಪೇಳಮ್ಮಯ್ಯ
ವೀತಭಯ ಜಗನ್ನಾಥವಿಠಲ ಬರಲೇಕೆ ಪೇಳಮ್ಮಯ್ಯ
ಭೂತಳ ಜನರಭಿಲಾಷೆ ಸಲಿಸಲು
ವಾತಾಶನ ಗಿರಿಗಿಳಿದ ಕಾಣಮ್ಮಯ್ಯ ೩

೫೧

ವೆಂಕಟೇಶ ಕಾಯೋ ಕಿಂಕರರವನೆಂದು ಪ

ಪಂಕಜಾಸನ ಶಂಕರರಾರ್ಚಿತ
ಶಂಬಸುದರ್ಶನಾಂಕಿತ ಅ.ಪ.

ವಾಸುದೇವ ನೀನೆ ಶ್ರೀ ಸರಸಿಜಭವ
ವೀಶ ಫಣಿಪ ವಹೇಶ ವಾಸವರಾಶೆ ಪೂರೈಸಿ
ಪೋಷಿಸುವ ಜಗದೀಶ ಜೀವನದ ವಾ
ರಾಶಿಜಾಧಿಪ ಭೇಶ ರವಿ ಸಂಕಾಶ ಕರಿವರಕ್ಲೇಶ ಹಾ ೧

ಸ್ವಾಮಿತೀರ್ಥ ನಿವಾಸ ಸ್ವರಮಣ ಭಕುತರ
ಕಾಮಿತಪ್ರದ ಕೈರವದಳಶ್ಯಾಮ ಸುಂದರನೆ
ಹೇಮ ಶೃಂಗೀವರಧಾಮ ದೀನಬಂಧು
ಸಾಮ ಸನ್ನುತ ಸೋಮಧರ
ಸುತ್ರಾಮ ಮುಖ ಸುರಸ್ತೋಮನಾ ೨

ತ್ರಿಗುಣಾತೀತ ನರಮೃಗರೂಪ ನಾನಿನ್ನ
ಪೊಗಳಬಲ್ಲೆನೆ ನಿಗಮವೇದ್ಯನೆ ಜಗನ್ನಾಥ ವಿಠಲ
ಸ್ವಗತಭೇದ ಶೂನ್ಯನೆ ಮುಗಿವೆ ಕರಗಳ ಪನ್ನಗನಗಾಧಿಪ
ಪೊಗರೊಗುವ ನಗೆಮೊಗವ ಸೊಬಗಿನ ಸುಗುಣನೆ ೩

೫೨

ಶರಣು ಶಂಕರ ಭೂಷಣಾದ್ರಿಗೆ
ಶರಣು ಅಭಯಾಚಲನಿಗೆ ಪ

ಶರಣು ಖಗಮೃಗ ತರುಲತಾಂಕಗೆ
ಶರಣು ವಿಂಶತಿ ನಾಮಗೆ ಅ.ಪ.

ವರಹ ನೀಲಾಂಜನ ಕನಕಋಷಿ
ಗರುಡ ಘನ ನಾರಾಯಾಣಾ
ಉರಗ ತೀರ್ಥಾನಂದ ಶ್ರೀ ಪು
ಷ್ಕರ ವೃಷಭ ವೈಕುಂಠಗೆ ೧

ಜ್ಞಾನ ಪರ್ವತ ಮೇರು ಶೃಂಗಗೆ
ಶ್ರೀನಿವಾಸ ಸುಕ್ರೀಡಗೆ ಪಂ
ಚಾನನಾಹ್ವಯ ವೆಂಕಟಾದ್ರಿಗೆ
ಕ್ಷೋಣಿಯೊಳು ಸುರಮಾನ್ಯಗೆ ೨

ರತುನ ಕಾಂಚನ ಶ್ರೀನಿವಾಸನ
ಪ್ರತಿಮೆಯಂದದಿ ಪೊಳೆವಗೆ
ಕೃತಿರಮಣ ಜಗನ್ನಥವಿಠಲಗೆ
ಅತುಳ ಮಂಗಳನೆನಿಪಗೆ ೩

೫೩

ಶ್ರೀ ವೆಂಕಟ ಶೈಲಾಧಿಪ ನಮೋ ರಾ
ಜೀವಭವ ಭವಾರಾಧ್ಯ ನಮೋ ಪ

ಭೂವರಾಹಾದ್ಯವತಾರ ನಮೋ
ಭೂ ವೈಕುಂಠವಿಹಾರ ನಮೋ

ಕೇವಲ ನಿರ್ಗುಣ ಬೋಧಾನಂದ ಮಾ
ಯಾವತಾರತೇ ನಮೋ ನಮೋ
ಗೋವಿಂದ ಜಗಜ್ಜೀವನ ಜಿತ - ಮದ
ದೇವಕಿನಂದನ ದೇವ ನಮೋ ೧

ಸ್ವಾಂತ ಧ್ವಾಂತ ನಿಕೃಂತನ ಕಮಲಾ
ಕಾಂತ ಶ್ರೀಮದನಂತ ನಮೋ
ಚಿಂತಿತ ಫಲದ ಮದಂತರ್ಯಾಮಿ ದು
ರಂತ ಶಕ್ತಿ ಜಯವಂತ ನಮೋ
ಸಂತತಾದಿಮಧ್ಯಾಂತ ವಿವರ್ಜಿತ
ನಂತಾಸನ ಕೃತಾಂತ ನಮೋ ೨

ಕುಸ್ಥ ನಮೋ ಆಪಸ್ಥ ನಮೋ ತೇ
ಜಸ್ಥ ನಮೋ ವಾಯಸ್ಥ ನಮೋ
ಖಸ್ಥ ನಮೋ ಆಶಸ್ಥ ನಮೋ ಮ
ಧ್ಯಸ್ಥ ನಮೋ ನಮೋ ಸ್ವಸ್ಥ ನಮೋ
ಮತ್‌ಸ್ಥನಮೋ ಕಮಲಸ್ಥ ನಮೋ
ಗೋಸ್ಥ ನಮೋ ಕಾಲಸ್ಥ ನಮೋ ದೇ
ವಸ್ಥ ನಮೋ ಸರ್ವಸ್ಥ ನಮೋ ೩

ಶ್ರೀಶ ನಮೋ ಬ್ರಹ್ಮೇಶ ನಮೋ ಪ್ರಾ
ಣೇಶ ನಮೋ ವಾಣೀಶ ನಮೋ
ವೀಶ ನಮೋ ಫಣಿಪೇಶ ನಮೋ ರು
ದ್ರೇಶ ನಮೋ ಉಮೇಶ ನಮೋ
ವಾಸವ ಮುಖ ದೇವೇಶ ನಮೋ ದು
ರ್ವಾಸ ಮುನಿ ಹೃದಯ ವಾಸವ ನಮೋ
ಭೇಶ ಬಿಂದು ಕ್ಷಿತಿಪೇಶ ನಮೋ ಹರಿ
ವ್ಯಾಸ ಋಷಭ ಮಹಿದಾಸ ನಮೋ ೪

ಲೊಕಾಂತರ್ಗತ ಲೋಕ ನಿಯಾಮಕ
ಲೋಕ ವಿಲಕ್ಷಣ ಪಾಲಯ ಮಾಂ
ಲೋಕಾಲೋಕ ವಿಲೋಕನ ವಿಷಯ ತ್ರಿ
ಲೋಕಾಧಾರಕ ಪಾಲಯ ಮಾಂ
ಲೊಕಮಹಿತ ಪರಲೋಕಪ್ರದ ವರ
ಲೋಕೈಕೇಶ್ವರ ಪಾಲಯ ಮಾಂ
ಲೋಕ ಜನಕ ತೈ ಲೋಕ್ಯ ಬಂಧು ಕರು
ಣಾಕರ ವೇಂಕಟ ಪಾಲಯಮಾಂ ೫

ಮುಕ್ತಾಮುಕ್ತ ನಿಷೇಧಿತಾವಯವಾ
ಸಕ್ತ ಜನಪ್ರಿಯ ಪಾಲಯ ಮಾಂ
ರಕ್ತ ಪೀತನಿಭ ಪಾಲಯ ಮಾಂ
ಉಕ್ತ ನಿಗಮ ತತಿಸೂಕ್ತ ಸಿತಾಸಿತ
ವ್ಯಕ್ತಾವ್ಯಕ್ತ ಸ್ವಾಂತ ಮಹಿಮ ಸಂ
ಯುಕ್ತ ಸದಾ ಹೇ ಪಾಲಯ ಮಾಂ
ಶಕ್ತ ನಿಗಮ ತತಿನಿಭ ಪಾಲಯ ಮಾಂ
ಯುಕ್ತಾಯುಕ್ತಾ ನಜಾನೆ ರಮಾಪತೆ
ಭಕ್ತೋಹಂ ತವ ಪಾಲಯ ಮಾಂ ೬

ವೇದಸ್ತೇಯ ಖಳಾಂತಕ ಕಮಠ ಧ
ರಾಧರ ನರಹರೇ ಪಾಲಯ ಮಾಂ
ಸಾಧಿತ ಲೋಕತ್ರಯ ಬಲಿಮದಹ ಹಯ
ಮೇಧ ವಿಭಂಜನ ಪಾಲಯ ಮಾಂ
ಭೂಧರ ಭುವನ ವಿರೋಧಿ ಯಮಕುಲ ಮ
ಹೋದಧಿ ಚಂದ್ರಮ ಪಾಲಯ ಮಾಂ
ಬೋಧ ಬುದ್ಧ ತನು ಶ್ರೀ ದಕಲ್ಕಿ ಕಪಿ
ಲಾದಿರೂಪ ಹೇ ಪಾಲಯ ಮಾಂ ೭

ಶರಣಾಗತ ರಕ್ಷಾಮಣಿ ಶಾರ್ಙ್ಗ
ಅರಿದರಧರ ತವ ದಾಸೋಹಂ

ಪರ ಪುರುಷೋತ್ತಮ ವಾಙ್ಮನೋಮಯ ಭಾ
ಸ್ಕರ ಸನ್ನಿಭ ತವ ದಾಸೋಹಂ
ಗರುಡಸ್ಕಂಧ ಕರಾರೋಪಿತ ಪದ
ಸರಸಿಜಯುಗ ತವ ದಾಸೋಹಂ
ಉರಗಾಧಿಪ ಪರಿಯಂಕಶಯನ ಮಂ
ದರ ಗಿರಿಧರ ತವ ದಾಸೋಹಂ ೮

ಸೃಷ್ಟಿ ಸ್ಥಿತಿಲಯಕಾರರೂಪ ಪ್ರ
ಹೃಷ್ಟ ತುಷ್ಟತವ ದಾಸೋಹಂ
ಪುಷ್ಟ ಮಹಿಮ ಪರಮೇಷ್ಠಿ ಜನಕ
ಶಿಷ್ಟೇ ಷ್ಟದಿಷ್ಟ ತವ ದಾಸೋಹಂ
ಜೇಷ್ಠ ಶ್ರೇಷ್ಠ ತ್ರಿವಿಷ್ಠ ದಾರ್ಚಿತ
ವೃಷ್ಣಿವರ್ಯ ತವ ದಾಸೋಹಂ
ಅಷ್ಟ ಫಲಪ್ರದ ಪಕ್ಷಿಧ್ವಜ ಜಗನ್ನಾಥ
ವಿಠ್ಠಲ ತವ ದಾಸೋಹಂ ೯

೫೪

ಶ್ರೀ ವೆಂಕಟಾಚಲ ನಿವಾಸ ನಿನ್ನ
ಸೇವಾನುಸೇವಕರ ದಾಸಾ ಎನಿಸಿ
ಜೀವಿಸುವ ನರಗೆ ಆಯಾಸಾ ಯಾಕೆ
ಶ್ರೀವರನೆ ಕೊಡು ಎಮಗೆ ಲೇಸಾ ೧

ಸ್ವಾಮಿ ಕಂಸಾರಿ ಪ್ರಭು ನಿನ್ನ ದಿವ್ಯ
ನಾಮ ಒದಗಲು ಜಿಹ್ವೆಗೆನ್ನಾ ದೋಷ
ಸೀಮೆಗಾಣದಿದ್ದರೆನ್ನ ಸ್ವಾಮಿ
ನೀ ಮರೆಯಲಾಗದು ಸುಪ್ರಸನ್ನ ೨

ನೀಚ ಯೋನಿಗಳಲ್ಲಿ ಬಂದೆ ಇನ್ನು
ನಾಚಿಕಿಲ್ಲವೊ ಎನಗೆ ತಂದೆ ನೀನೆ

ಮೋಚಕನು ಬಿನ್ನಪ ವಿದೆಂದೆ ಸವ್ಯ
ಸಾಚಿಸಖ ಕೈಪಿಡಿಯೋ ತಂದೆ ೩

ನಾನೊಬ್ಬನೇ ನಿನಗೆ ಭಾರವಾದೆ
ನೇನೊ ಸಂತತ ನಿರ್ವಿಕಾರ ಎನ್ನ
ಹೀನತ್ವ ನೋಡಲ್ಕಪಾರ ಚಕ್ರ
ಪಾಣಿ ಮಾಡಿದಿರೆನ್ನ ದೂರ ೪

ಕಂಡ ಕಂಡವರಿಗಾಲ್ಪರಿದು ಬೇಡಿ
ಬೆಂಡಾದೆ ನಿನ್ನಂಘ್ರಿ ಮರೆದು ದಿಟ
ತೊಂಡವತ್ಸಲನೆಂಬ ಬಿರುದು ಕಾಯೊ
ಪುಂಡರೀಕಾಕ್ಷ ನೀನರಿದು ೫

ಈ ಸಮಯದೊಳೆನ್ನ ತಪ್ಪ ನೋಡಿ
ನೀ ಸಡಿಲ ಬೇಡುವರೇನಪ್ಪ ನಿನ್ನ
ದಾಸರ್ಪೆಸರ್ಗೊಳಲು ಬಪ್ಪಾ ದೋಷ
ನಾಶವಾಗೋದು ತಿಮ್ಮಪ್ಪ ೬

ಕಾಮಾದಿಗಳ ಕಾಟದಿಂದ ನಿನ್ನ
ನಾ ಮರೆದೆ ಸಚ್ಚಿದಾನಂದ ಎನ್ನ
ಈ ಮಹಾ ದೋಷಗಳ ವೃಂದ ನೋಡದೆ
ನೀ ಮನ್ನಿಸೆನ್ನ ಮುಕುಂದ ೭

ನೀ ಪಿಡಿದವರ ಸಹಸ್ರಾರ ಸುಜನ
ಪಾಪಾಟವಿಗೆ ಸುಕುಠಾರಾ ಜಗ
ದ್ವ್ಯಾಪಕನೆ ಎನ್ನ ಸಂಸಾರ ಘೋರ
ಕೊಪದಿಂದೆತ್ತಯ್ಯ ಧೀರ ೮

ಸಿಂಧೂರ ರಾಜ ಪರಿಪಾಲ ಕೋಟಿ
ಕಂದರ್ಪ ಲಾವಣ್ಯ ಶೀಲ ಧರ್ಮ

ಮಂದಾರ ಭೂಜಾಲಪಾಲ ಯೋಗಿ
ಸಂದೋಹ ಹೃತ್ಕುಮುದ ಶೀಲಾ ೯

ಶಿವನ ವೈರಿಯ ಕೊಂದ ಶಕ್ತ ಪುಣ್ಯ
ಶ್ರವಣ ಕೀರ್ತನ ನಿನ್ನ ಭಕ್ತಾ ಜನರ
ಭವದೊಳಗೆ ದಣಿಸುವುದು ಯುಕ್ತವೇನೊ
ಭುವನ ಪಾವನ ನಿತ್ಯಮುಕ್ತ ೧೦

ಶ್ರೀಕರ ಶ್ರೀಮದಾನಂತ ನಿಖಿಳ
ಲೋಕೈಕನಾಥ ನಿನ್ನಂಥ ಸಖರ
ನಾ ಕಾಣೆನೆಲ್ಲಿಯೂ ಮಹಂತಾ ಎನ್ನ
ನೀ ಕಾಯೋ ಕಂಡ್ಯ ಭೂಕಾಂತಾ ೧೧

ಕರ ಕರ್ಮ ಚಿತ್ರತ್ವಗ್ರಸನ ಕಾಯ
ಕರಣ ಮನಹಂಕಾರ ಘ್ರಾಣಾ ಬುದ್ಧಿ
ಚರಣ ಪಾಯೂಪಸ್ಥ ನಯನಜಾತ
ಉರುಪಾಪ ಕ್ಷಮಿಸು ಶ್ರೀ ರಮಣಾ ೧೨

ಅನಿಮಿತ್ತ ಬಂಧು ನೀಯೆನ್ನ ಬಿಡುವು
ದನುಚಿತವೋ ಲೋಕಪಾವನ್ನ ಚರಿತ
ಮನ ವಚನ ಕಾಯದಲಿ ನಿನ್ನ ಪಾದ
ವನಜ ನಂಬಿದೆ ಸುಪ್ರಸನ್ನಾ ೧೩

ನೀನಲ್ಲದೆನಗೆ ಗತಿಯಿಲ್ಲ ಪವ
ಮಾನವಂದಿತ ಕೇಳೋ ಸೊಲ್ಲ ಎನ್ನ
ಜ್ಞಾನೇಚ್ಛೆ ಕ್ರಿಯಂಗಳೆಲ್ಲಾ ನಿನ್ನ
ಧೀನವಲ್ಲವೆ ಲಕ್ಷ್ಮೀನಲ್ಲಾ ೧೪

ಪ್ರಾಚೀನ ಕರ್ಮಾಂಧ ಕೂಪದೊಳಗೆ
ಯೋಚಿಸುವ ನರರ ಸಂತಾಪ ನಿನಗೆ

ಗೋಚರಿಸದೇನೋ ಬಹುರೂಪ ವೆಂಕ
ಟಾಚಲನಿಲಯ ಪಾಹಿ ಶ್ರೀಪಾ ೧೫

ಯಾಕೆ ದಯ ಬಾರದೆನ್ನಲ್ಲಿ ನರಕ
ನಾಕ ನರಕ ಭೂ ಲೋಕಂಗಳಲ್ಲಿ ಚರಿಸಿ
ನಾ ಕಷ್ಟಪಟ್ಟ ಬಗ್ಗೆ ನೀ ಬಲ್ಲಿ ವೀತ
ಶೋಕ ಕೊಡು ಭಕುತಿ ನಿನ್ನಲ್ಲಿ ೧೬

ನಿನ್ನಂಘ್ರಿ ದರುಶನವ ಕೊಡದೆ ಹೀಗೆ
ಬನ್ನ ಬಡಿಸುವರೇನೋ ಬಿಡದೆ ನಾನು
ಮುನ್ನ ಮಾಡಿದ ಪಾಪ ಕೆಡದೆ ನೀ ಪ್ರ
ಪನ್ನ ವತ್ಸಲನೆಂದು ನುಡಿದೆ ೧೭

ತಾಪತ್ರಯಗಳಿಂದ ನೊಂದೆ ಮಹಾ
ಪಾಪಿಷ್ಠರಲ್ಲನ್ನ ತಿಂದೆ ಇನ್ನು
ಅಪರೇತೇಶ್ವರನ ಮುಂದೆ ಪೋಗಿ
ನಾ ಪೇಕೊಳಲೇನು ತಂದೆ ೧೮

ದೇಹ ಸಂಬಂಧಿಗಳ ಸಹಿತವಾಗಿ
ನಾ ಹೊಂದಿದೆನು ಲೋಕಮೋಹಿತ ಎನ್ನ
ಮೋಹಿಪ್ರದು ನಿನ್ನಗೇನು ವಿಹಿತ ಹೃದಯ
ಬಾಹಿರಂತರದಿ ಸನ್ನಿಹಿತ ೧೯

ಪೋಗುತಿದೆ ದಿವಸ ಕಮಲಾಕ್ಷ ಪರಮ
ಯೋಗೇಶ ನಿನ್ನ ಅಪರೋಕ್ಷ ಎನಗೆ
ಹೇಗಾಗುವುದೊ ಸುರಾಧ್ಯಕ್ಷ ದುರಿತ
ನೀನು ಕಾಮಿತ ಕಲ್ಪವೃಕ್ಷ ೨೦

ಗತಿಯಾರು ನಿನ್ನುಳಿದು ದೇವ ರಮಾ
ಪತಿ ನೀನೆ ಭಕ್ತ ಸಂಜೀವ ಎನ್ನ

ಸತಿಸುತರ ಅನುದಿನದಿ ಕಾವ ಭಾರ
ಸತತ ನಿನ್ನದು ಮಹಾನುಭಾವ ೨೧

ದೊಡ್ಡವರ ಕಾಯ್ವುದೇನರಿದು ಪರಮ
ದಡ್ಡರನು ಕಾಯ್ವುದೇ ಬಿರುದು ಎನ್ನ
ಗುಡ್ಡದಂತಹ ಪಾಪ ತರಿದು ಕಾಯೋ
ವಡ್ಡಿ ನಾಯಕ ಸಾರೆಗರದೊ ೨೨

ಜ್ಞಾನಿಗಳು ನೀಚರಲಿ ಕರುಣಾ ಮಾಡ
ರೇನೋ ಬಿಡುವರೇ ರಥಚರಣ ಪಾಣಿ
ಭಾನು ಚಂಡರವಿಕಿರಣ ಬಿಡದೆ
ತಾನಿಪ್ಪನೆ ರಮಾರಮಣ ೨೩

ಆಡಲ್ಯಾತಕೆ ಬಹಳ ಮಾತಾ ಪರರ
ಬೇಡಲಾರೆನೋ ಜಗತ್ರಾತಾ ಹೀಗೆ
ಮಾಡುವರೇ ಕೆಳೆನ್ನ ಮಾತ ನೀನೆ
ನೀಡೆನಗೆ ಪುರುಷಾರ್ಥ ದಾತಾ ೨೪

ಬೇಡಲೇತಕೆ ಬಹಳ ಮಾತಾ ಎನ್ನ
ಕೇಡು ನಿನ್ನದಲ್ಲೇ ಬಲಿದೌತ ಪಾದ
ಬೇಡಿಕೊಂಬುವೆ ನಾನನಾಥ ದೂರ
ನೋಡಲಾಗದು ಪಾರ್ಥಸೂತ ೨೫

ಸಾರಸದ್ಭಕ್ತಿಯಲಿ ನಿತ್ಯ ಬಿಡದೆ
ಶಾರದೇಶನ ನುತಿಪ ಭಕ್ತ ಜನರ
ಪಾರ ಸಂತೈಸುವುದು ಮಿಥ್ಯವಲ್ಲ
ಶ್ರೀರಮಣ ಸಾಕ್ಷಿದಕೆ ಸತ್ಯಾ ೨೬

ಫಣಿರಾಜ ಭೋಗ ಪರಿಯಂತ ಶಯನ
ಪ್ರಣತಾರ್ತಿ ಹರನೆಂಬೊ ಅಂಕಾ ಕೇಳಿ

ಮಣಿದ ನಿನ್ನಂಘ್ರಿಗೆ ಶಶಾಂಕಾ ಭಾಸ
ದಣಿಸಲಾಗದು ನಿಷ್ಕಳಂಕಾ ೨೭

ಕಾರ್ತವೀರ್ಯಾರ್ಜುನನ ಕೊಂದ ಭವ್ಯ
ಕೀರ್ತಿ ನಿನ್ನಾನಂದ ವೃಂದ ಸತತ
ಕೀರ್ತಿಸುವ ನರರ ಬಹುಕುಂದ ನೋಡ
ದಾರ್ತನ್ನ ಪೊರೆಯೊ ಗೋವಿಂದ ೨೮

ದಯದಿಂದ ನೋಡೆನ್ನ ಹರಿಯೆ ಜಗ
ನ್ಮಯನೆ ಜ್ಞಾನಾನಂದ ವೃಂದ ಸಿರಿಯೆ ಮನಾ
ಮಯವ ಪರಿಹರಿಸಿನ್ನು ದೊರೆಯೆ ಸರ್ವ
ಭಯದೂರರಿನ್ನೊಬ್ಬರರಿಯೇ ೨೯

ನರಸಿಂಹ ನಿನ್ನುಳಿದು ಜಗವ ಕಾಯ್ವ
ಪರದೈವರುಂಟೆಂದು ಬಗೆವ ನರರ
ಪರಮೇಷ್ಠಿ ರಾಯನು ನಗುವ ನಿತ್ಯ
ನಿರಯಾಂಧ ರೂಪದೊಳು ಹುಗಿವಾ ೩೦

ದಾಸ ದಾಸರ ದಾಸನೆಂದು ಬಿಡದೆ
ನೀ ಸಲಹೋ ಎನ್ನನೆಂದೆಂದೊ ನಿನ್ನ
ನಾ ಸೇವಿಸುವೆ ಕೃಪಾಸಿಂಧು ಎಮ್ಮನು
ದಾಸಿಸದನಿಮಿತ್ತ ಬಂಧೂ ೩೧

ಎಂದೆಂದು ನೀ ಬಡವನಲ್ಲ ನಿನ್ನ
ಪೊಂದಿದವನ ಬಿಡುವವನಲ್ಲ ಹೃದಯ
ಮಂದಿರದೊಳಗೆ ಬಲ್ಯಲ್ಲಾ ಚಿದಾ
ನಂದ ನೀ ಭಕ್ತ ವತ್ಸಲ್ಲಾ ೩೨

ಕಾಮಿತಪ್ರದನೆಂಬ ಬಿರಿದು ಕೇಳಿ
ನಾ ಮುದದಿ ಬಂದೆನೋ ಅರಿದು ಎನ್ನ

ತಾಮಸ ಮತಿಗಳೆಲ್ಲ ತರಿದು ಮಮ
ಸ್ವಾಮಿ ನೋಡೆನ್ನ ಕಣ್ದೆರದು ೩೩

ಹಿತವರೊಳು ನಿನಗಧಿಕರಾದ ತ್ರಿದಶ
ತತಿಗಳೊಳು ಕಾಣೆನೋ ಪ್ರಮೋದ ನೀನೆ
ಗತಿಯೆಂದು ನಂಬಿದೆ ವಿವಾದವ್ಯಾಕೊ
ಪತಿತಪಾವನ ತೀರ್ಥಪಾದ ೩೪

ಮಡದಿ ಮಕ್ಕಳು ತಂದೆ ತಾಯಿ ಎನ್ನ
ಒಡಹುಟ್ಟಿದವರ ನೀ ಕಾಯಿ ಲೋಕ
ದೊಡೆಯ ನೀನಲ್ಲದಿನ್ನಾರ್‍ೈ ಎನ್ನ
ನುಡಿ ಲಾಲಿಸೋ ಶೇಷಶಾಯಿ ೩೫

ಅನುಬಂಧ ಜನರಿಂದ ಬಪ್ಪ ಕ್ಲೇಶ
ವನುಭವಿಸಲಾರೆ ಎನ್ನಪ್ಪ ಉದಾ
ಸೀನ ಮಾಡಿ ದಯಮಾಡದಿಪ್ಪರೇನೋ
ಘನ ಮಹಿಮ ಫಣಿರಾಜತಲ್ಪ ೩೬

ಹದಿನಾಲ್ಕು ಲೋಕಂಗಳನಾಳ್ವ ಬ್ರಹ್ಮ
ಮೊದಲಾದವರು ನಿನ್ನ ಚಲ್ವನಖದ
ತುದಿ ಬಣ್ಣ ಕಂಡು ಕಡೆ ಬೀಳ್ವದಿಲ್ಲಾ
ವಿಧಿಸಲಾಪೆನೆ ನಿನ್ನ ಸಲ್ವಾ ೩೭

ಧನ ಧಾನ್ಯ ಪಶು ಪತ್ನಿ ಗೇಹ ಜನನೀ
ಜನಕ ಜಾಮಾತ ಸಖ ನೇಹ ಅನುಜ
ತನುಜಾಪ್ತವರ್ಗದಿಂದಾಹ ಸೌಖ್ಯ
ನಿನಗರ್ಪಿಸಿದೆ ಎನ್ನ ದೇಹಾ ೩೮

ನೀನಿತ್ತ ಸಂಸಾರದೊಳಗೆ ಸಿಲುಕಿ
ನಾನೊಂದೆ ಕರೆ ನಿನ್ನ ಬಳಿಗೆ ಚರಣ

ಧ್ಯಾನ ದೊರಕಲು ಭವದಿ ಮುಳುಗೆ ನಿನ್ನ
ಕಾಣದಿರಲಾರೆನರ ಘಳಿಗೆ ೩೯

ಸಲುಗೆ ಬಿನ್ನಪವ ನೀ ಕೇಳೋ ಎನ್ನ
ಬಲು ದುರುಳತನವ ನೀ ತಾಳೋ ನೀನೆ
ನೆಲೆಯಲ್ಲದೆನಗಾರು ಪೇಳೋ ಎನ್ನ
ಕುಲದೈವ ಬಹುಕಾಲ ಬಾಳೋ ೪೦

ಸಾಂದೀಪ ನಂದನನ ತಂದ ನಂದ
ನಂದನನೆ ಎನ್ನ ಭವ ವೃಂದ ಕಳೆದು
ಎಂದೆಂದು ಕುಂದದಾನಂದವೀಯೋ
ಇಂದಿರಾರಮಣ ಗೋವಿಂದ ೪೧

ವಿಶ್ವ ತೈಜಸ ಪ್ರಾಜ್ಞ ತುರಿಯಾ ಎನ್ನ
ದುಸ್ವಭಾವವ ನೋಡಿ ಪೊರೆಯದಿಹರೆ
ನಿಸ್ಪೃಹ ನಾನಿನ್ನಂಘ್ರಿ ಮೊರೆಯ ಪೊಕ್ಕೆ
ಅಸ್ವತಂತ್ರನ ಕಾಯೋ ಪಿರಿಯಾ ೪೨

ಇಹಪರದಿ ಸೌಖ್ಯ ಪ್ರದಾತ ನೀನೆ
ಅಹುದೋ ಲೋಕೈಕ ವಿಖ್ಯಾತ ಮಹಾ
ಮಹಿಮ ಗುಣಕರ್ಮ ಸಂಜಾತ ದೋಷ
ದಹಿಸು ಸಂಸಾರಾಬ್ಧಿ ಪೋತಾ ೪೩

ಲೋಕಬಾಂಧವನೆಂಬ ಖ್ಯಾತಿಯನ್ನು
ನಾ ಕೇಳಿದೆನು ಖಳಾರಾತಿ ಮನೋ
ಶೋಕ ಮೋಹಾಜ್ಞಾನ ಭೀತಿ ಬಿಡಿಸು
ಶ್ರೀ ಕರಾರ್ಚಿತ ಸ್ವಯಂ ಜ್ಯೋತಿ ೪೪

ಒಂದು ಗೇಣೊಡಲನ್ನಕಾಗಿ ಅಲ್ಪ
ಮಂದಭಾಗ್ಯರ ಮನೆಗೆ ಪೋಗಿ ದೈನ್ಯ

ದಿಂದ ಸತ್ಕರ್ಮಗಳ ನೀಗಿ ಕಂದಿ
ಕುಂದಿದೆನೋ ಸಲಹೋ ಲೇಸಾಗಿ ೪೫

ಪಾತಕರೊಳಗಧಿಕ ನಾನಯ್ಯ ಜಗ
ತ್ಪಾತಕವ ಕಳೆವ ಮಹಾರಾಯ ನಿನ್ನ
ದೂತನಲ್ಲವೆ ಜೀಯ ಜಗ
ನ್ನಾಥ ವಿಠ್ಠಲ ಪಿಡಿಯೋ ಕೈಯಾ ೪೬

ಪಂಡರ ಪುರದ ವಿಠ್ಠಲ

೫೫

ಎಂದು ಕಾಂಬೆನು ಪಾಂಡುರಂಗ ಮೂರುತಿಯಾ
ಇಂದು ಭಾಗನಿವಾಸ ನರನ ಸಾರಥಿಯ ಪ

ಅರುಣಾಬ್ಜೋಪಮ ಚಾರು ಚರಣಾಂಗುಲಿ ನಖರ
ತರುಣೇಂದುಚ್ಛವಿ ತಿರಸ್ಕರಿಸುವ ಪ್ರಖರ
ಕಿರುಗೆಜ್ಜೆ ಕಡಗ ನೂಪುರ ಪೆಂಡೆ ಶಫರ
ತೆರಜಾನು ಜಂಘೆ ಭಾಸ್ಕರ ರತ್ನ ಮುಕುರ ೧

ರಂಭಾ ಪೋಲುವ ಊರು ಪೊಂಬಣ್ಣಾಂಬರವ
ಕುಂಭೀ ಮಸ್ತಕದೊಲ್ ನಿತಂಬದಿ ಪೊಳೆವ
ಕಂಬು ಮೇಖಳಕಂಜ ಗಂಭೀರ ನಾಭೀ
ಅಂಬುಧಿಶಾಯಿ ವಿಧಿ ಶಂಭು ಪೂಜಿತನ ೨

ಲವಕುಕ್ಷಿತ್ರವಳಿ ಬಾರ್ಗವಿ ವಕ್ಷ ಉರವು
ದ್ರವಿಪೋಲುವ ಕೌಸ್ತುಭ ವೈಜಯಂತಿಯ
ಸುವಿಶಾಲ ವಕ್ಷದೊಳ್ ವಿವಿಧ ಹಾರಗಳು
ನವನೀತ ಚೋರ ಶ್ರೀ ಪವಮಾನಾರ್ಚಿತನ ೩

ಪದಕ ಸರಿಗೆಯ ಜಾಂಬೂನದ ಕಂಬುಕಂಠ
ರದನೀಕರ ಬಾಹು ಚದುರ ಭುಜಕೀರ್ತಿ
ಬದರ ಸಂಕಾಶಾ ಅಂಗದ ರತ್ನ ಕಟಕಾ
ಪದಮಾರುಣ ಕರಯುಗ್ಮ ಕಟಿಯಲ್ಲಿಟ್ಟವನಾ ೪

ವಿಧುಬಿಂಬೋಪಮ ಚಲ್ವವದನ ಕೆಂದುಟಿಯಾ
ಬಿದುರಾಭಾದಶನಾಲಿಂಗದನೊಳ್ ಕಿರುನಗೆಯಾ
ಕದಪು ಕನ್ನಡಿ ನಾಸಾ ತುದಿ ಚಂಪಕ ತೆನೆಯಾ
ಉದಕೇಜಾಯತ ನೇತ್ರಯದುವಂಶೋದ್ಭವನಾ ೫

ಜ್ವಲಿತ ಕುಂಡಲ ಕರ್ಣ ಸುಲಲಿತ ಭ್ರೂಯುಗಳ
ಪೊಳೆವ ಬಾಲ ಶಶಾಂಕ ತಿಲಕಾಂಕಿತ ಫಾಲ
ಅಳಿಬಾಲವೆನಿಪ ಕುಂತಳ ರತ್ನ ಚಕಿತ
ಕಲಧೌತ ಮಕುಟ ದಿಗ್ವಲಯ ಬೆಳಗುವನ ೬

ಶಕೂರ್ಮರೂಪಿಯ ಕಿಟ ಮಾನವ ಹರಿಯಾ
ವಟುಭಾರ್ಗವ ಕಾಕುಸ್ಥ ಶಠ ಕಂಸದ್ವಿಷನ
ನಿಟಿಲಾಂಬಕ ಸಹಾಯ ಖಳಕಟಕಾರಿ ಭೀಮಾ
ತಟವಾಸ ಜಗನ್ನಾಥವಿಠಲ ಮೂರುತಿಯ ೭

೫೬

ಕಂಡೆ ಪಂಡರಿರಾಯನ ತನ್ನನು
ಕೊಂಡಾಡುವರ ಪ್ರಿಯನ ವಿಠ್ಠಲನ ಪ

ಸಮಚರಣ ಭುಜನ ನಿಗಮಾ
ಗಮತತಿಗೋಚರನಾ
ಅಮಿತ ಪರಾಕ್ರಮನ ರುಕ್ಮಿಣಿ
ರಮಣ ರವಿಕ್ಷಣನಾ ವಿಠ್ಠಲನ ೧

ಕಾಮಿತಾರ್ಥ ಪ್ರದನ ಶ್ರೀ ತುಲಸೀ
ಧಾಮ ವಿಭೂಷಿತನ
ಸಾಮಜ ಪತಿ ಪಾಲನ ತ್ರಿಭುವನ
ಸ್ವಾಮಿ ಚಿತ್ಸುಖಮಯನ ವಿಠ್ಠಲನ ೨

ಗೋಕುಲ ಪೋಷಕನ ಮುನಿ ಪುಂಡ
ರೀಕಗೊಲಿದು ಬಂದನ
ಲೋಕವಿಲಕ್ಷಣನ ಪ್ರಣತರ
ಶೋಕವಿನಾಶಕನ ವಿಠ್ಠಲನ ೩

ಚಂದ್ರಭಾಗವಾಸನಾ ವಿಧಿ ವಿಹ
ಗೇಂದ್ರ ಮುಖಾರ್ಚಿತನ
ಇಂದ್ರೋತ್ಪಲನಿಭನ ಗುಣಗಣ
ಸಾಂದ್ರ ಸರ್ವೋತ್ತಮನ ವಿಠ್ಠಲನ ೪

ಶ್ವೇತವಾಹನ ಸಖನ ಸತಿಗೆ ಪಾರಿ
ಜಾತನ ತಂದವನಾ
ವೀತ ಶೋಕ ಭಯನಾ ಶ್ರೀ ಜಗ
ನ್ನಾಥ ವಿಠಲರೇಯನಾ ೫

೫೭

ಕಂಡೆ ಪಂಡರಿರಾಯನ ಸಿರಿಮನ ಪ್ರಿಯನಾ ಪ

ಚಂಡವಿಕ್ರಮ ಕರದಂಡ ಮುನಿಪನೊಲಿ
ದಂಡಜಾಧಿಪ ಪ್ರಕಾಂಡ ಸುಪೀಠನ ಅ.ಪ.

ಮಣಿಮಯ ಮಕುಟ ಮಧುಪನವಿರಪ್ಪರೇ
ಪಣೆಯೊಳಿಟ್ಟ ಕಸ್ತೂರಿ ತಿಲಕಾ

ವನರುಹ ಉಪಮ ಲೋಚನಯುಗ ಚಂಪಕ
ಸುನಾಸ ವಕುಂಡಲವ ವಿಕಾಸವ ಕದಪಿನ ವಿಲಾಸವ
ಮೊಗದ ಮಂದಹಾಸವ ೧

ಕುಂದ ಕೋರಕ ದಶನಾವಳಿಯ ಬಿಂಬಾ
ದಂದದಿ ಪೊಳೆವ ಅಧರ ಕಳೆಯ
ಕಂಧರ ತ್ರಿವಳಿ ಪುರಂದರ
ಇಭಕರ ಪೋಲುವ ಭುಜಯುಗ ವಿಶಾಲವಾ
ಕರತಳರಸಾಲವ ನಖರ ಮಲ್ಲಿಕಾಸವ ೨

ಅತಿವಿಸ್ತೃತ ವಕ್ಷಸ್ಥಳವಾ ಸಿರಿ
ಸತಿ ಸದನಾರ್ಕನಂದದಿ ಪೊಳೆವಾ
ರತುನ ಕೌಸ್ತುಭ ದೀಧಿತಿ ವಿಲಸಿತ
ವೈಜಯಂತಿಯ ಉದರ ರೋಮ ಪಂಕ್ತಿಯಾ
ಕುಕ್ಷಿತ್ರಿವಳಿ ಕಾಂತಿಯಾ ನಾಭಿವಲ್ಮೀಕ ದಂತಿಹ ೩

ಮುಂಬಿಸಿಲಿನಂತೆ ಕನಕ ಚೈಲಾ ಸುನಿ
ತಂಬದಿ ಪೊಳೆವ ಗೋಲಿಯ ಚೀಲಾ
ಕುಂಬು ಕೋಕನದ ವಿಡಂಬ ಮೇಖಲ ಕದಂಬವ
ಊರು ಕದಳೀ ಜಾನುಗಳಿಂದು ಬಿಂಬನಾ
ಆಚರಿಪ ವಿಡಂಬನಾ ೪

ಮಾತಂಗಕರವ ಜಂಘೆಗಳ ಗುಲ್ಫ
ಜಾತಿಮಣಿಕಾಂಗುಲಿ ಸಂಘಗಳ
ಜ್ಯೋತಿ ಬೆಳಗೆ ಜಗನ್ನಾಥ ವಿಠಲ
ನಂಘ್ರಿ ಪುಷ್ಕರಾ ಉದಿತ ಶತ ಭಾಸ್ಕರಾ
ಗಭಸ್ತಿ ತಿರಸ್ಕರ ಸುಜನರಿಗೆ ಶ್ರೇಯಸ್ಕರ ೫

೫೮

ಧನ್ಯನಾದೆನು ವಿಠಲನ ಕಂಡು ಓಡಿತು ಅಘದ್ವಿಂಡು ಪ

ಧನ್ಯನಾದೆನೂ ಕಾಮನ್ನ ಪಿತನ ಲಾ
ವಣ್ಯ ಮೂರುತಿಯ ಕಣ್ಣಿಲೆ ಕಂಡು ಅ.ಪ.

ದೇವವರೇಣ್ಯ ಸದಾ ವಿನೋದಿ ವೃಂ
ದಾವನ ಸಂಚರ ಗೋವನ ಕಂಡು ೧

ಮಂಗಳಾಂಗ ಕಾಳಿಂಗ ಮಥನ ಮಾ
ತಂಗವರ ವರದ ರಂಗನ ಕಂಡು ೨

ಹಾಟಕಾಂಬರ ಕಿರೀಟ ಸಾರಥಿ
ತಾಟಕಾರಿ ವೈರಾಟನ ಕಂಡು ೩

ಚಿಂತಿತ ಫಲವ ಕೃತಾಂತನಾತ್ಮಜಾ
ದ್ಯಂತರಹಿತ ನಿಶ್ಚಿಂತನ ಕಂಡು ೪

ಮಾತುಳಾಂತಕ ವಿಧಾತಪಿತ ಜಗ
ನ್ನಾಥ ವಿಠಲ ವಿಖ್ಯಾತನ ಕಂಡು ೫

೫೯

ನೋಡಿದೆ ವಿಠಲನ ನೋಡಿದೆ ಪ

ನೋಡಿದೆನು ಕಂಗಳಲಿ ತನುವೀ
ಡಾಡಿದೆನು ಚರಣಾಬ್ಜದಲಿ ಕೊಂ
ಡಾಡಿದೆನು ವದನದಲಿ ವರಗಳ
ಬೇಡಿದೆನು ಮನದಣಿಯ ವಿಠಲನ ಅ.ಪ.

ಇಂದಿರಾವಲ್ಲಭನ ತಾವರೆ
ಗಂದನಂಜಿಸಿ ತಪತಪಾವೆಂ
ತೆಂದು ಪೇಳ್ದನ ಯುವತಿ ವೇಷದಿ
ಕಂದು ಗೊರಳನ ಸ್ತುತಿಸಿದನ ಪು
ರಂದರಾನುಜನಾಗಿ ದಿವಿಯೊಳು
ಕುಂದದರ್ಚನೆಗೊಂಬ ಸನಕ ಸ
ನಂದನಾದಿ ಮುನೀಂದ್ರ ಹೃದಯ ಸು
ಮಂದಿರನ ಮಮ ಕುಲದ ಸ್ವಾಮಿಯ ೧

ಯಾತುಧಾನರ ಭಾರ ತಾಳದೆ
ಭೂತರುಣಿ ಗೋರೂಪಳಾಗಿ ಸ
ನಾತನನ ತುತಿಸಲ್ಕೆ ಶೇಷ ಫ
ಣಾತ ಪತ್ರನು ನಂದಗೋಪ ನಿ
ಕೇತನದಲವತರಿಸಿ ವೃಷ ಬಕ
ಪೂತನಾದ್ಯರ ಸದೆದು ಬಹುವಿಧ
ಚೇತನರಿಗೆ ಗತಿನೀಡಲೋಸುಗ
ಜಾತಿಕರ್ಮಗಳೊಹಿಸಿ ಮೆರೆದನ ೨

ತನ್ನತಾಯ್ತಂದೆಗಳ ಹೃದಯವೆ
ಪನ್ನಗಾರಿಧ್ವಜಗೆ ಸದನವೆಂ
ದುನ್ನತ ಭಕುತಿ ಭರದಿ ಅರ್ಚಿಪ
ಧನ್ಯಪುರುಷನ ಕಂಡು ನಾರದ
ಬಿನ್ನಯಿಸಿ ತುತಿಸಲ್ಕೆ ಕೇಳಿ ಪ್ರ
ಪನ್ನ ವತ್ಸಲ ಬಿರಿದು ಮೆರೆಯಲು
ಜೊನ್ನೊಡಲು ಭಾಗದಿ ನೆಲೆಸಿದ ಜ
ಗನ್ನಾಥ ವಿಠ್ಠಲನ ಮೂರ್ತಿಯ ೩

೬೦

ಪಾಲಿಸೋ ಫಂಡರಿಪುರಾಯಾ ಪಾವನ ಕಾಯಾ ಪ

ಶ್ಲೋಕ : ತರುಣ ತುಲಸಿಮಾಲಾ ತಪ್ತಗಾಂಗೇಯ ಚೇಲಾ
ಶರಧಿ ತನಯಲೋಲಾ ಶಕ್ವರೀಕಾರಿ ಫಾಲ
ಶಿರಿ ಅಜಭವ ಮೂಲಾ ಶುದ್ಧ ಕಾರುಣ್ಯ ಲೀಲಾ
ಪುರಹರ ಸುಖ ಲೀಲಾ ಪಾಹಿ ಗೋಪಾಲ ಬಾಲಾ

ಪದ : ನವ ಜಲಾಧರನಿಭ ಶಾಮಲಾ ವಪು
ಕೋಮಲ ವೈಜಯಂತಿ ಮಾಲಾ
ರವಿಯಂತೆ ಪೊಳೆವ ಕುಂಡಲ ಹಾರಾ ಧೃತ
ಕೇಯೂರ ಕೌಸ್ತುಭ
ಮಣಿರುಚಿರಾ ದಿವಿ ಭೂ ಪಾತಾಳ
ಲೋಕದಿ ವ್ಯಾಪ್ತಾ ದೋಷ ಸಿರ್ಲಿಪ್ತ
ವಿಪಶ್ಚಿತಜನರಾಪ್ತಾ ಭವವನಧಿಗೆ ಕುಂಭ ಸಂಭವ
ದೇವರ ದೇವಾ ಧರುಮಾದ್ವರ ಭಾವಾ ೧

ಶ್ಲೋಕ : ಅಮಿತ ಸುಗುಣಧಾಮಾ ಆತ್ಮಭೂಪೂರ್ಣ ರಾಮಾ
ಅಮರಕುಲಲಲಾಮ ಅಬ್ಜಧಾಮಾಭಿರಾಮಾ
ಯಮಿಕುಲೋದಧಿ ಸೋಮ ಯಜ್ಞ ಭೃದ್ಯಜ್ಞ ನಾಮಾ
ಸಮರವಲಯ ಭೀಮಾ ಸಾತ್ವತಾಂ ಸಾರ್ವ ಭೌಮಾ

ಪದ : ದಿತಿಜಮರ್ದನ ದೀನರಕ್ಷಕಾ ಕರ್ಮ ಸಾಕ್ಷಿಕಾ
ಸಂರಕ್ಷಿತ ಸರ್ವ ಲೋಕಾ
ವಿತತ ಮಹಿಮ ವಿಶ್ವನಾಟಕ ವತ್ಸ ಘೋಟಕಾ ಶೋ
ಭಿತ ರತ್ನಕಟಕಾ ನತಿಸುವೆ ನಳಿನ
ಜಾಂಡೋದರಾ ಸರ್ವಾಧಾರಾ
ಸಂತತ ನಿರ್ವಿಕಾರಾ ಮತಿ ಮಂದನಾಗಿ ನಿನ್ನನು ಬಿಟ್ಟೆ ಮ
ಮತೆಯ ತೊಟ್ಟೆ ಕಾಣೆನೋ ಪುಣ್ಯ ಬಟ್ಟೆ ೨

ಶ್ಲೋಕ : ಜನನ ಮರಣ ದೂರ ಜಂಗಮಾಚಾರ ವಿಹಾರಾ
ದನುಜವನ ಕುಠಾರಾ ದೀನಮಂದಾರ ಧೀರಾ
ಪ್ರಣತ ಭಯ ವಿಹಾರಾ ಪ್ರಾಕೃತಾತೀತ ಸಾರಾ
ದಿನಪನಿಭ ಶರೀರಾ ದುಃಖವಾರಿಹ ಸಮೀರಾ ೩

ಪದ : ವನಧಿ ಬಂಧನ ವನೌಕಪನಾಥಾ
ಜಿತಾಸುರಯೂಥ ನಿರ್ಮಲ ಶ್ರುತಿಗಾಥಾ
ಅನುದಿನದಲಿ ನಂಬಿದೆ ನಿನ್ನ ಪಾಲಿಸು
ಎನ್ನ ಸಂತತ ಸಂಪ್ರಸನ್ನಾ
ಮನೋವಾಕ್ಕಾಯದಿ ಮಾಡಿದ ಕ್ರಿಯೆ ನಿನ್ನದು
ಜೀಯ ಕರಣಾದಿ ಪಿಡಿಕಯ್ಯಾ
ನೆನೆಯೆ ನೀನಲ್ಲದೆ ಅನ್ಯರ ದುರ್ಜನ ದೂರಾ ನಂದ
ಗೋಪಕುಮಾರಾ ೩

ಶ್ಲೋಕ : ಶಫರ ಕಮಠ ಕೋಲಾ ಶತ್ರುಕಾಶ್ಯಪಿಬಾಲಾ
ನೃಪಕುಲ ಈರವಾಳಾ ನೀಲಕಂಠಾಸ್ತ್ರಕಾಲಾ
ದ್ರುಪದತನಯ ಪಾಲಾ ದುರವರ್ಜಿತದುಕುಲಾ
ರಿಪುದಿತಿಸುರ ಬಾಲಾ ರಕ್ತಪದ ಭೇದ ಸಾಲಾ

ಪದ : ಕ್ಷೇತ್ರಜ್ಞಾ ಕ್ಷೇತ್ರನಾಮಕ ಕ್ಷೀ ಅಬ್ಧಿನಿಜಾಗಾರ
ನಿರ್ಮಲ ಓಂಕಾರಾ
ಮಾತೃ ಪ್ರತಿಪಾದ್ಯ ಸ್ವರೂಪಾ ವರ್ಜಿತ ಪಾಪ
ಗರುವೆನಿಪ ಸಾಂದೀಪ
ಪುತ್ರನ ತಂದ ಪರಾಕ್ರಮಿ ಎಲ್ಲರ ಸ್ವಾಮಿ
ಪರಮ ಪ್ರೀಯ ಜಾಮಿ
ಭಕ್ತಗೊಲಿದು ವಿಶ್ವರೂಪವಾ ತೋರಿ ಚಾಪವಾ ಕೊಟ್ಟು
ಕಳೆದ್ಯೊ ತಾಪವಾ ೪

ಶ್ಲೋಕ : ನಗಧರ ನಳಿನಾಕ್ಷ ನಾಕನಾಥಾದ್ಯ ಪಕ್ಷ
ನೃಗ ನಗಪತಿ ಶಾಪಾ ನಿರ್ವಹಕಾರ ಶ್ರೀಪಾ
ಭೃಗು ಮುನಿಗೇಯಾ ಭೂತನಾಥ ಸಹಾಯ
ಅಗಣಿತ ಸುಮಹಾತ್ಮ ಸರ್ವ ಜೀವಾಂತರಾತ್ಮಾ

ಪದ : ರಜನೀಶ ಬಿಂಬವನಿಳುಹಿದಾ ಮಾವಕಳುಹಿದ
ಅಹಿತರನಳುಹಿದಾ
ದ್ವಿಜನ ಸಾಹನಾಂತಾಸನ ಪುರಾವೈದೆ ಸತ್ವರಾ
ತೋರಿದೆ ಸತ್ಪುತ್ರರಾ
ಭುಜಗಮಾರ್ಗಣ ರವಿನಂದನಾ ಬಿಡೆ ಶಂದನಾ
ವಡಿತ್ರಿ ಕುಂತಿನಂದನಾ
ನಿಜಭಾಪುರೆ ಕಾಯ್ದೆ ರಣದೋಳು ಬಾಣನ ತೋಳು
ಖಂಡ್ರಿಸಿದ್ಯೋ ಕೃಪಾಳು ೫

ಶ್ಲೋಕ : ಶುಭತಮ ಸುಖತೀರ್ಥಾರಾಧ್ಯ ಸದ್ದಾನಪಾತ್ರಾ
ಇಭವರರಿಪು ಹತಾನ ವಿಶ್ವಜನ್ಮಾವಿಕರ್ತಾ
ಅಭಯದ ತವಪದಾಂಭೋಜಾತ ಯುಗ್ಮ ಪ್ರಸಾದಾ
ನಭದನುಪಿತ ದೇಹಿ ನಿಶ್ಚಲಾನಂತ ಪಾಹಿ

ಪದ : ವಸುಪತಿಸುತ ನಳಕೂಬರಾ ಮಣಿಗ್ರೀವರಾ
ತರುಜನ್ಮ ವಿದೂರಾ
ವೃಷಭ ಶಕಟ ಬಕಭಂಜನಾ ಜನರಂಜನಾ
ನಿರ್ಗುಣ ನಿರಂಜನಾ
ವಸುದೇವನಿಗೆ ಮಗನಾಗಿದ್ದೆ ಬೆಣ್ಣೆಯ ಕದ್ದೆ
ಗೋಪರೊಡಗೂಡಿ ಮೆದ್ದೆ
ಬಿಸಿಜಾಂಡವ ವದನದೊಳಂದು ಸಜ್ಜನಬಂಧೂ
ತೋರಿದೆ ದಯಸಿಂಧೂ ೬

ಶ್ಲೋಕ : ಅತಿವಮಲಸುಗಾತ್ರ ಅಖಿಳಲೋಕೈಕ ಪಾತ್ರಾ
ಷತತಿಜದಳನೇತ್ರಾ ವೃತ್ತಹಾದ್ಯ ಮರಮಿತ್ರಾ
ಶ್ರುತಿಕಮಂಜ ಸೂತ್ರಾ ಸ್ತುತ್ಯ ಪಾವನ ಪವಿತ್ರಾ
ಪ್ರತಿಹಯ ಸುಚರಿತ್ರಾ ಪಾತು ಲಕ್ಷ್ಮೀ ಕಳತ್ರ

ಪದ : ಏಳು ಘೊಳಿಯ ಗೆದ್ದ ಯದುಪತಿ ಸುಪರಂಜ್ಯೋತಿ
ನಿನ್ನಯ ದಿವ್ಯ ಖ್ಯಾತಿ ಈ
ರೇಳು ಜಗದೊಳು ನುತಿಸೋರು ನಿತ್ಯ
ಸುಖಿಸೋರು ಆನಂದಾಬ್ಧಿ ಸದ್ಗತರೋ
ಕೀಳು ಮಾನವ ನಾ ಬಲ್ಲೆನೆ ನಿನ್ನಾ ನಿರುತಾಪನ್ನ
ಜನಕ್ಲೇಶ ಭಂಜನಾ
ತಾಳಿದೆ ನರರೋಳು ನರವೇಷಾ ಮಂಜುಳ
ಭಾಷಾ ಎನ್ನಯ ಅಭಿಲಾಷಾ ೭

ಶ್ಲೋಕ : ವನರುಹಭವತಾತಾ ವೀತ ತನ್ಮಾತ್ರಭುತ
ದ್ಯುನದಿ ಜಲವಿಧೂತ ದಿವ್ಯ ಪಾದಾಂಬುಜಾತಾ
ಅನಿಲತನಯ ಪ್ರೀತಾ ಅತ್ರಿಸದ್ವಂಶಜಾತಾ
ಅನಿಮಿಷಜಯಸೂತಾ ಆನತೇಷ್ಟಪ್ರದಾತಾ

ಪದ : ಕರದಂಡಧರ ಕಟಸ್ಥಿತಪಾಣಿ
ಮಂಗಳಶ್ರೇಣಿ ಲೋಕೈಕಸತ್ರಾಣಿ
ಶರಣು ಹೊಕ್ಕರ ಕಾಯುವ ಛಲದಂಕಾ ಕಾಳಿಂಗನ
ಬಿಂಕಾ ಬಿಡಿಸಿದ್ಯೊ ನಿಷ್ಕಳಂಕಾ
ಮುರ ಶಿಶುಪಾಲ ಧೇನುಕಾಹಂಸಾ ವತ್ಸಾಸುರ ಕಂಸ
ದಂತವಕ್ತ್ರಾದ್ಯರ ಹಿಂಸಾ
ಪರನಾಗಿ ಕೊಟ್ಟೆ ಧಾರಿಣಿಷ್ಟಾ ಸುಜನರ ಕಷ್ಟಾ
ಬಿಡಿಸಿದೆಯೋ ಓಜಿಷ್ಠಾ ೮

ಶ್ಲೋಕ : ಹನುಮನತ ಪಾದಾಬ್ಜಹಂಸ ಸಂವಕ್ತುಕುಬ್ಜಾ
ತನುವಿಕೃತ ವಿನಾಶಂ ಕಾಳಿ ಜಿಹ್ವಾಷುದೇಶಂ
ದನುಜವಿಕರಾಳ ಮತ್ತೆ ಪೌಂಡ್ರೇ ಶೃಗಾಲಂ
ಹನನ ವಿದುರವಿಂದ್ಯ ಹೇಮಗರ್ಭಾಂಡ ವಂದ್ಯಂ

ಪದ : ಇಟ್ಟಿಗೆ ಪೀಠ ಸಂಸ್ಥಿತ ಪಾದಾ ಮಂಗಳಪ್ರದಾ
ಶಾಶ್ವತ ಮೋದ ಸುಪದ
ಕೊಟ್ಟು ಪಾಲಿಸೋ ಅನಿಮಿಷತರು ನಿನ್ನಯಚಾರು
ಮೂರುತಿಯನ್ನು ತೋರು
ಪುಟ್ಟಲಾರೆನೋ ಜಗದೊಳು ದಾತಾ ಎನ್ನಯ
ಮಾತಾ ಲಾಲಿಸು ಜಗನ್ನಾಥ
ವಿಠ್ಠಲ ವೃಂದಾರಕರರಸಾ ಸಂತತ ಲೇಸಾ
ನಿನ್ನವರಿಗೀಯೋ ಶ್ರೀಶಾ ೯

೬೧

ವಿಠಲಯ್ಯ ವಿಠಲಯ್ಯ ಪ

ತಟಿತ್ಕೋಟಿನಿಭಕಾಯ ಜಗನ್ನಾಥ ವಿಠಲಯ್ಯಾ ಅ.ಪ.

ಭಜಿಸುವೆ ನಿನ್ನನು ಅಜಭವ ಸುರನುತ
ಭಜಕಾಮರತರು ಕುಜನ ಕುಠಾರಾ ೧

ನೀ ಕರುಣಿಸದೆ ನಿರಾಕರಿಸಲು ಎನ್ನ
ಸಾಕುವರಾರು ದಯಾಕರ ಮೂರುತಿ ೨

ಶರಣಾಗತರನು ಪೊರೆವನೆಂಬ ತವ
ಬಿರಿದು ಕಾಯೋ ಕರಿವರದ ಜಗನ್ನಾಥ ೩

ಲಕ್ಷ್ಮೀ

೬೨

ಇಂದಿರೆ ಇಂದುವದನೇ ಸರಸಿಜಸದನೇ
ನಿಂದಿತ ಜನಸೂದನೆ ಪ

ವಂದಿಸುವೆನೆ ಅರವಿಂದಗಂಧಿನಿ
ಮಂದಿರದಲಿ ಗೋವಿಂದನ ತೋರಿಸೆ ಅ.ಪ.

ಮೂಲೋಕಮಾತೆ ವಿಖ್ಯಾತೆ ಕೈವಲ್ಯದಾತೆ
ಪಾಲಗಡಲ ಸಂಭೂತೆ ಕಾಲ ದೇಶದಿ ವ್ಯಾಪಿತೆ ಭಜಕರಪ್ರೀತೆ
ಶೀಲೆ ಸಂಪೂರ್ಣ ಗುಣವ್ರಾತೇ
ಫಾಲನಯನ ತ್ರಿದಶಾಲಯ ಪ್ರಮುಖರ
ಪಾಲಿಸುತಿಹೆ ಮಂದಜಾಲಜನಕೆ ರಮೇ
ಶ್ರೀಲತಾಂಗಿ ನಿನ್ನಾಳುಗಳೊಳು ಹರಿ
ಲೀಲೆಯ ಮನದಲಿ ಅಲೋಚನೆ ಕೊಡೆ ೧

ಲೋಕನಾಯಕಿ ಲಕುಮಿ ಶ್ರೀ ಸಾರ್ವ ಭೌಮೆ
ಶೋಕರಹಿತ ಸುನಾಮೆ ನಾಕಜವನಧಿ ಸೋಮೆ ದೇವಲಲಾಮೆ
ಸಾಕಾರವಂತೆ ಗುಣ ಸ್ತೋಮೆ
ನೀ ಕರುಣಿಸಿ ಅವಲೋಕಿಸಿ ಎನ್ನಯ
ಕಾಕುಮತಿಯ ಕಳೆದೇಕಾಂತದಿ ನಿತ್ಯ
ಏಕ ಮನದಿ ಹರಿ ಶ್ರೀ ಕರಪದಧ್ಯಾನ
ನೀ ಕರುಣಿಸು ನಿರಾಕರಿಸದಲೆ ೨

ಜಾತರಹಿತ ಜಯವಂತೆ ದೈತ್ಯಕೃತಾಂತೆ
ಸೀತಾಂಶುಕೋಟಿ ಮಿಗೆಕಾಂತೆ
ಪಾತಕದೂರೆ ನಿಜಪಂಥೆ ನಿತ್ಯಾ ನಿಶ್ಚಿಂತೆ
ನೀತದೂರಾದಿ ಮಧ್ಯಾಂತೆ

ಭೂತನಾಥ ಪುರುಹೂತ ಮುಖಾವರ
ವ್ರಾತ ವಿನುತೆ ಅತಿಪ್ರೀತಿಯಿಂದಲಿ ನಮ್ಮ
ವಾತಜನಕ ಜಗನ್ನಾಥ ವಿಠಲನ
ಮಾತು ಮಾತಿಗೆ ನೆನೆವಾತುರ ಮನ ಕೊಡೇ ೩

೬೩

ನಮೋ ನಮೋ ಕಮಲಾಲಯೆ ಸರ್ವೋ
ತ್ತುಮ ನಾರಾಯಣನಂಕದ್ವಯ
ಸಮುಪಸ್ಥಿತೆ ಸುಂದರ ಮದಗಜ
ಗಮನೆ ಗುಣಪೂರ್ಣೆ ಶೋಭಾನೆ ಪ

ಕಂಗಳ ಕುಡಿನೋಟದಿ ಕಂಜಜ
ಗಂಗಾಧರ ಸುರಮುಖ ಸುಜನರ
ಇಂಗಿತ ಫಲ ಪೂರೈಸಿಕೊಡುವ ಮಂಗಳ ಸುಚರಿತ್ರೆ
ಭೃಂಗಾಳಿಗಳಂದದಿ ಸೊಗಯಿಪ
ಮುಂಗುರುಳಿಂದೊಪ್ಪುವ ನಿಜಪತಿ
ಸಂಗಡ ಬಾ ಹಸಿಯ ಜಗಲೀಗೆ ೧

ಜಲಜಾಕ್ಷನ ವಿಮಲಾಂಗದಿ
ಪ್ರತಿ ಫಲಿಸಿದ ರೂಪಗಳನೆ ನೋಡುತ
ಪುಳಕೋತ್ಸವದಿಂದಲಿ ಪಾಡುತ
ಹೊಲಬು ಗಾಣದಲೆ ತಲೆದೂಗುತ ಮಿಗೆ ಸಂತೋಷದಿ
ಗಳರವದಿಂ ಪಾಡುತ ಶ್ರೀ ಭೂಲಲನೆ
ಬಾ ಹಸಿಯ ಜಗಲೀಗೆ ೨

ಪ್ರತಿಫಲಿಸಿಹ ರೂಪಗಳೆನ್ನುವು
ಕತಿಪಯರೂಪಗಳೆನಗಿಂದಲಿ
ಅತಿಶಯವೆ ತೋರುತಲಿಪ್ಪವು
ಪ್ರತಿ ಪ್ರತಿಕ್ಷಣದಿ ಶ್ರುತಿ ಪ್ರತೀಕನು ದಯದಿಂದೆನ

ಗ್ಹಿತದಿಂದಲಿ ತೋರಿದನೆನುತಲಿ
ನತಿಸುತ ನಗುತಿಪ್ಪ ಲಕ್ಷ್ಮೀ ಹಸಿಗೇಳು ೩

ಆ ಬ್ರಹ್ಮಾಂಡಗಳೊಳ ಹೊರ
ಗುಪಮರು ನಿನಗಿಲ್ಲವಾಗಲು
ಅಪರಾಜಿತನಮಲ ಸುರೂಪ
ಗಳಪರೋಕ್ಷಣದಿ ಕಾಂಬ
ಚಪಲಾಂಬಕ ಕೃಪಣರ ಸಲಹಲು ಸ್ವಪತಿಯ
ಶಿಪಿವರನಂಸಗೆ ಸುಫಲದೆ ಬಾಹಸಿಯ ಜಗುಲೀಗೆ ೪

ವೀತಭಯನ ವಕ್ಷಸ್ಥಳವೆ ಪು
ರಾತನ ಮನೆಯೆನಿಪುದು ಅವಿನಾ
ಭುತರು ನೀವಿರ್ವರು ಅಮೃತಾ
ಜಾತರು ಎಂದೆಂದೂ
ಭೌತಿಕ ಮಂದಿರದೊಳು ನೆಲೆಸಿ ಪು
ನೀತರ ಮಾಳ್ಪುದೆಮ್ಮ ಜಗ
ನ್ನಾಥ ವಿಠಲನರ್ಧಾಂಗಿ ಜಗ
ನ್ಮಾತೆ ವಿಖ್ಯಾತೆ ಬಾಹಸಿಯ ಜಗುಲೀಗೆ ೫

೬೪

ನಮೋ ನಮೋ ರಮೆ ಕಮಲ ಸಂಭವೆ
ಹಿಮನಗಜಾರಮಣ ಸನ್ನುತೆ
ತಮರಿಪು ಶತ ಸಮಸನ್ನಿಭೆ ಇಭ
ಗಮನೆ ಇಂದಿರೆ ಶೋಭಾನೆ ಪ

ಶೃಂಗಾರ ತರಂಗ ಹೆಳಲಾ
ಬಂಗಾರವ ಪೊಂಗ್ಲಾದಿಗೆ ಬಲಿ
ವಂಗನೆ ಶಿರೋಮಂಗಳ ಮಡಿ ಜಡ ಜಂಗಮ ವ್ಯಾಪ್ತಿ
ಅಂಗಜ ಶರ ಕಂಗಳೆ ದ್ವಿಜೋ

ತ್ತುಂಗಮ ರಂಗನ ನಿಜ ಅ
ರ್ಧಾಂಗಿನಿಯೆ ಬಾ ಹಸಿಯ ಜಗುಲೀಗೆ ೧

ಪೊಸುಕುಸುಮ ಶಿರಸದಲೊಪ್ಪುವ
ನೊಸಲಲಿ ರಂಜಿಸುವ ಕಸ್ತೂರಿ
ದಿಶದುಂಬಿದ ಬಿಸಿಜಾನನ ಪ್ರಭೆ
ಎಸೆವ ಕಂಧರ ಕಕ್ಕಜ ಕುಚಕು
ಪ್ಪುಸದಲ್ಲತಿ ಶೋಭಿಸುತಿಹ ಪವಳ
ದಾ ಸರವ ತೂಗುವ ಅಸಮೇ ಬಾ ಹಸೆಯ ಜಗುಲೀಗೆ ೨

ಕರಿಸೊಂಡಿಲುತೆರ ಚತುರಕರ
ವರ ಅಭಯಸರಸಿಜಯುಗಧರ ಜಠರಾ
ವರತ್ರಿವಳಿ ಗಂಭೀರನಾಭಿ ಕ
ಟಿಸೂತರೆ ಹೇಮಾಂಬರೆ
ಚರಣಂದಿಗಿ ಸಪಳಿ ಪೊಂಗೆಜ್ಜೆಯಾ
ಮೆರೆಯುತ ಸರಸಳೆ ಬಾಹಸಿಯ ಜಗುಲೀಗೆ ೩

ಮೃಗಲಾಂಛನೆ ಮಿಗೆ ಶೋಭಿಪ ಪದ
ಯುಗ ನಖ ಪಂಕ್ತಿಗಳೊಪ್ಪುವ ಗತ
ಅಘ ಸಂಕುಲೆ ಅಗಣಿತ ಮಹಿಮಳೆ ಸುಗುಣ ಸಂಪನ್ನೆ
ಭಗವಂತನ ಜಘನದಿ ಪೊಳೆಯುತ
ಖಗರಾಜನ ಪೆಗಲನೇರಿ ಅಮ
ರ ಗಣವ ಚಿರ ಬಾ ಹಸಿಯ ಜಗಲೀಗೆ ೪

ಅಂಭೃಣಿ ಸ್ವಾಯಂಭೂ ಸುರ ನಿಕು
ರುಂಬಕರ ಅಂಬುಜ ಪೂಜಿತೆ
ನಂಬಿದ ಜನರ್ಹಂಬಲಿಸುವ ಫಲ
ಸಂಭ್ರಮದಿ ಕೊಡುವಾ ಗಂಭೀರಾ ಸು
ಖಾಂಬೋಧಿ ಹರಿ ನಿತಂಬೆ ಪ
ಯಾಂಬೋಧಿ ಸುತೆ ಜಗದಂಬೆ ಬಾ ಹಸಿಯ ಜಗುಲೀಗೆ ೫

ಮಾಯೆ ನಾರಾಯಣಿ ಶ್ರೀ ಭೂ
ಜಾಯೆ ಕೃತಿ ಆಯತಾಕ್ಷಳೆ ಕಾಯಜನ ತಾಯೆ ಶರಣೆ
ಪ್ರಿಯ ಪಾವನ್ನೆ ವಾಯುಭುಕು ಶಾಯಿ ಅಮರಾಧೇಯಾ
ಜಗನ್ನಾಥವಿಠಲನ ಜಾಯೆ ಬಾ ಹಸಿಯ ಜಗುಲೀಗೆ ೬

ಹನುಮ–ಭೀಮ–ಮಧ್ವ ಸ್ತೋತ್ರ

೬೫

ಅಪಮೃತ್ಯು ಪರಿಹರಿಸೊ ಅನಿಲದೇವಾ
ಕೃಪಣ ವತ್ಸಲನೆ ಕಾಯ್ವರ ಕಾಣೆ ನಿನ್ನುಳಿದು ಪ

ನಿನಗಿನ್ನು ಸಮರಾದ ಅನಿಮಿತ್ತ ಬಂಧುಗಳು
ಎನಗಿಲ್ಲವಾವಾವ ಜನ್ಮದಲ್ಲಿ
ಅನುದಿನ ನೀನೆಮ್ಮನುದಾಸೀನ ಮಾಡುವುದು
ಅನುಚಿತವು ಜಗಕೆ ಸಜ್ಜನ ಶಿಖಾಮಣಿಯೆ ೧

ಕರಣಮಾನಿಗಳು ನಿನ್ನ ಕಿಂಕರರು ಮೂಲೋಕ
ದೊರೆಯು ನಿನ್ನೊಳಗಿಪ್ಪ ಸರ್ವಕಾಲ
ಪರಿಸರನೆ ಈ ಭಾಗ್ಯ ದೊರೆತನಕೆ ಸರಿಯುಂಟೆ
ಗುರುವರಿಯ ನೀ ದಯಾಕರನೆಂದು ಮೊರೆ ಹೊಕ್ಕೆ ೨

ಭವರೋಗ ಮೋಚಕನೆ ಪವಮಾನರಾಯಾ ನಿ
ನ್ನವರನು ನಾನು ಮಾಧವಪ್ರಿಯನೇ
ಜವನ ಬಾಧೆಯ ಬಿಡಿಸು ಅವನಿಯೊಳು ಸುಜನರಿಗೆ
ದಿವಿಜಗಣ ಮಧ್ಯದಲಿ ಪ್ರವರ ನೀನಹುದಯ್ಯ ೩

ಜ್ಞಾನಾಯು ರೂಪಕನು ನೀನಹುದೋ ವಾಣಿ ಪಂ
ಚಾನನಾದ್ಯಮರರಿಗೆ ಪ್ರಾಣದೇವಾ
ದೀನವತ್ಸಲನೆಂದು ನಿನ್ನ ಮೊರೆ ಹೊಕ್ಕೆ
ದಾನವಾರಣ್ಯ ಕೃಶಾನು ಸರ್ವದ ಎಮ್ಮ ೪

ಸಾಧನ ಶರೀರವಿದು ನೀ ದಯದಿ ಕೊಟ್ಟಿದ್ದು
ಸಾಧಾರಣವು ಅಲ್ಲ ಸಾಧುಪ್ರಿಯಾ
ವೇದವದೋದಿತ ಜಗನ್ನಾಥ ವಿಠಲನ
ಪಾದ ಭಕುತಿಯನಿತ್ತು ಮೋದ ಕೊಡು ಸತತ ೫

೬೬

ಪವಮಾನ ಮದ್ಗುರುವೆ ಪವಮಾನ
ಪವಮಾನ ಪಾವನ ಚರಿತ ಪದ್ಮ
ಭವನ ಪದಾರ್ಚನೆ ನಿರುತ ಅಹ ಪ

ಶ್ರವಣಾದಿ ಭಕುತಿ ಜ್ಞಾನವಿತ್ತು ಸಲಹೊ ಮೂ
ರವತಾರಾತ್ಮಕ ತತ್ವ ದಿವಿಜನಿಯಾಮಕ ಅ.ಪ.

ಪ್ರಾಣೋಪಾನ ವ್ಯಾನೋದಾನ ಹೇ ಸ
ಮಾನ ರೂಪಕನೆ ವಿಜ್ಞಾನ ತತ್ವ
ಮಾನಿಯೆ ಅಮೃತಾಭಿಧಾನ ಚತು
ರಾನನ ತನಯ ಗೀರ್ವಾಣ ಅಹ
ಸೇನಾಧಿಪತಿ ನಿನ್ನ ಜ್ಞಾನಸಾರದಲಿಪ್ಪ
ಮಾನವರನು ಕಾಯೋ ಮೌನಿ ಧ್ಯಾನಗಮ್ಯ ೧

ನಾಗಕೂರ್ಮ ದೇವದತ್ತ ಕೃಕಳ
ಯೋಗಿವರಿಯ ಮುಕ್ತಾಮುಕ್ತ ಕ್ಲುಪ್ತ
ಭೋಗಗಳೀವ ಸುಶಕ್ತಾ ತಲೆ
ಬಾಗಿ ಬೇಡುವೆ ಸರ್ವೋದ್ರಿಕ್ತ ಅಹ
ಪೋಗುತಲಿದೆ ಹೊತ್ತು ಜಾಗುಮಾಡದೆ ನಿಜ
ಭಾಗವತರೊಳಿಡೊ ಮೈಗಣ್ಣಪದನಾಳ್ದ ೨

ಮೂರುಕೋಟಿ ರೂಪಧರನೆ ಲೋಕ
ಧಾರಕ ಲಾವಣ್ಯಕರನೆ ಸರ್ವ

ಪ್ರೇರಕ ಭಾರತಿವರನೆ ತ್ರಿಪು
ರಾರಿಗೆ ವಜ್ರಪಂಜರನೆ ಆಹ
ನೀರಜ ಜಾಂಡದಿ ಮೂರೇಳು ಸಾವಿರ
ದಾರು ನೂರು ಜಪ ಬೇರೆ ಬೇರೆ ಮಾಳ್ಪ ೩

ಆಖಣಾಶ್ಮ ಸಮಚರಣ ಪದ್ಮ
ಲೇಖರ ಮಸ್ತಕಾಭರಣ ಕಲ್ಪ
ಶಾಖೆಯಂತೆ ಅತಿಕರುಣಾದಿಂದ
ಈ ಖಂಡದೊಳು ಮಿಥ್ಯಾವರಣ ಆಹಾ
ನೀ ಖಂಡಿಸಿದಿ ದಂಡ ಮೇಖಲ ಭೂಷಣ
ಆಖುವಾಹನಪಿತ ಆಖಂಡಲರ್ಚಿತ ೪

ಶ್ರೀವಲ್ಲಭಗೆ ಪ್ರತಿಬಿಂಬನಾಗಿ
ಜೀವವೇದ ಕಾಲಸ್ತಂಭಗತ
ಆವಾಗ ಹರಿರೂಪ ಕಾಂಬ ಶಕ್ತ
ನೀ ಒಬ್ಬನಹುದೋ ನಾನೆಂಬೆ ಆಹಾ
ದೇವತೆಗಳಿಗುಂಟೆ ಈ ವಿಭವ ಜಗ
ಜೀವನ ಜಯಶೀಲಾ ನಾ ವಂದಿಸುವೆ ನಿತ್ಯ ೫

ದಕ್ಷಿಣಾಕ್ಷಿಗತ ವತ್ಸಾ ರೂಪಿ
ದಕ್ಷನಹುದೋ ಪರಮೋಚ್ಚಾ ಚಾರು
ತ್ರ್ಯಕ್ಷಾದಿ ಸುರರೊಳಧ್ಯಕ್ಷಾ ಸರ್ವಾ
ಪೇಕ್ಷರಹಿತನೆ ಸ್ವೇಚ್ಛಾ ಆಹಾ
ಮೋಕ್ಷಾದಿ ದ್ವಾತ್ರಿಂಶ ಲಕ್ಷಣ ಪುರುಷ ನಿ
ರೀಕ್ಷಿಸಿ ಕರುಣದಿ ರಕ್ಷಿಸೋ ಎನ್ನನು ೬

ಮೂಲೇಶನಂಘ್ರಿ ಸರೋಜ ಭೃಂಗ
ಏಳೇಳು ಲೋಕಾಧಿರಾಜಾ ಇಪ್ಪ
ತ್ತೇಳು ರೂಪನೆ ರವಿತೇಜಾ ಲೋಕ
ಪಾಲಕರಾಳ್ವ ಮಹೋಜಾ ಆಹಾ

ಕಾಳಿರಮಣ ನಿನ್ನ ಕಾಲಿಗೆರಗುವೆ ಕೃ
ಪಾಳು ಭಕ್ತಿ ಜ್ಞಾನವಾಲಯ ಕರುಣಿಸು ೨

ಅಧಿಭೂತ ಅಧ್ಯಾತ್ಮಗತನೇ ವಿಮಲ
ಅಧಿದೈವರೊಳು ಪ್ರವಿತತನೆ ಕಲಿ
ಹೃದಯ ವಿಭೇದನಾ ರತನೆ ಎನ್ನ
ವದನದಿ ನಿಲಿಸೋ ಮಾರುತನೆ ಆಹಾ
ಬದರಿಕಾಶ್ರಮದೊಳು ಹದಿನಾರು ಸಾವಿರ
ಸುದತೇರ ಕಾಯ್ದ ನಾರದ ಮುನಿ ಸನ್ನುತ ೮

ಮಾತರಿಶ್ವ ಮಹಾಮಹಿಮ ಸರ್ವ
ಚೇತನ ಹೃದ್ಗತ ಹನುಮ ಭೀಮ
ಭೂತಳದೊಳು ಮಧ್ವ ನಾಮಾದಿಂದ
ಜಾತನಾಗಿ ಜಿತಕಾಮಾ ಆಹಾ
ಆ ತಿಪ್ಪಣ್ಣಾದಿ ವಿಖ್ಯಾತ ಮಾಯ್ಗಿಳ ಗೆದ್ದ
ಸೀತಾರಮಣ ಜಗನ್ನಾಥ ವಿಠ್ಠಲ ದೂತ ೯

೬೭

ಪ್ರಾಣದೇವ ನೀನಲ್ಲದೆ ಕಾಯ್ವರ
ಕಾಣೆ ಲೋಕದೊಳಗೆ ಮುಖ್ಯ ಪ

ಪ್ರಾಣೋಪಾನ ವ್ಯಾನೋದಾನ
ಸಮಾನನೆನಿಪ ಮುಖ್ಯ ಅ.ಪ.

ವಾಸವ ಕುಲಿಶದಿ ಘಾತಿಸೆ ಜೀವರ
ಶ್ವಾಸ ನಿರೋಧಿಸಿದೆ
ಆ ಸಮಯದಿ ಕಮಲಾಸನ ಪೇಳಲು
ನೀ ಸಲಹಿದೆ ಜಗವಾ ಮುಖ್ಯ ೧

ಅಂಗದ ಪ್ರಮುಖ ಪ್ಲವಂಗರು ರಾಮನ
ಅಂಗನೆಯನು ಪುಡುಕೆ
ತಿಂಗಳು ಮೀರಲು ಕಂಗೆಡೆ ಕಪಿಗಳ
ಜಂಗುಳಿ ಪಾಲಿಸಿದೆ ಮುಖ್ಯ ೨

ಪಾವಿನ ಪಾಶದಿ ರಾವಣ ನೀಲ ಸು
ಗ್ರೀವ ಮುಖ್ಯರ ಬಿಗಿಯೆ
ಸಾವಿರದೈವತ್ತು ಗಾವುದದಲ್ಲಿಹ ಸಂ
ಜೀವನ ಜವದಿ ತಂದೆ ಮುಖ್ಯ ೩

ಪರಿಸರ ನೀನಿರೆ ಹರಿತಾನಿಪ್ಪನು
ಇರದಿರೆ ತಾನಿರನು
ಕರಣ ನಿಯಾಮಕ ಸುರರಗುರುವೆ ನೀ
ಕರುಣಿಸೆ ಕರುಣಿಸುವಾ ೪

ಭೂತೇಂದ್ರಿಯದಧಿನಾಥ ನಿಯಾಮಕ
ಆ ತೈಜಸಹರನಾ
ತಾತನೆನಿಪ ಜಗನ್ನಾಥ ವಿಠಲನ
ಪ್ರೀತಿ ಪಾತ್ರನಾದ ಮುಖ್ಯ ೫

೬೮

ಭಾರತೀರಮಣಾ ಮನ್ಮನದಲಿ
ತೋರು ತವ ಚರಣಾ ಪ

ಮೂರೇಳು ಸಾವಿರದಾರುನೂರು ಜಪ
ಓರಂತೆ ಜಪಿಸಿ ಉದ್ಧಾರ ಮಾಡುವಿ ಎಮ್ಮ ಅ.ಪ.

ಮೂರುವಿಧ ಜೀವರೊಳು ಹೊರ ನೀ ಪ್ರೇರಕನೋ ದೇವ
ನಾರಾಯಣನ ನಿಜಾರಾಧಕರೊಳು
ಆರು ನಿನಗೆ ಸರಿ ಮೂರವತಾರನೆ ೧

ಚತುರವಿಂಶತಿ ತತ್ವೇಶರಾಪತಿಯ ನಿನ್ನ
ತುತಿಪ ಉಪೇಂದ್ರ ಸುಯತಿಕರ ಪೂಜಿತ
ನತಿಸುವೆ ಎಮಗೆ ಸನ್ಮತಿ ಕೊಡು ಸರ್ವದಾ ೨

ಪ್ರಾಣಪಂಚಕ ರೂಪನೆ ಖಳ ಶ್ರೇಣೀವಂಚಕ
ಕ್ಷೋಣಿಯೊಳಗೆ ಕೃಷ್ಣ ವೇಣೀತರಂಗಿಣಿ
ತ್ರಾಣಗೈದ ನಿರ್ವಾಣ ಪ್ರದಾಯಕ ೩

ಲೋಕರೂಪನೆ ಜಗದೊಳನೇಕ ಚರಿತನೆ
ನೀ ಕರುಣಿಸಲು ಪಿನಾಕಿ ಸುರೇಂದ್ರ ದಿ
ವೌಕಸರೆಮ್ಮನು ಸಾಕುವರನುದಿನ ೪

ಭೂತತ್ರಯ ವಪುಷಾ ಭವಿಷ್ಯದ್ವಿಧಾತಾ ಗತದೋಷಾ
ಮಾತರಿಶ್ವನು ಜಾತಹನುಮ ಜಗನ್ನಾಥವಿಠಲನ
ಪ್ರೀತಿಯಿಂದಲಿ ತೋರೋ ೫

೬೯

ಭಾರತೀರಮಣ ಸದ್ಭಕ್ತ ಬಂಧೋ
ಘೋರ ಭವ ಭಯ ಪರಾಭವಗೈಸು ಬೇಗ ಪ

ಲೋಕಾಂತರಾತ್ಮಕನೆ ಈ ಕಮಲಜಾಂಡದೊಳು
ನಾ ಕಾಣೆ ಲೋಕದೊಳು ಸಾಕುವವರಾ
ನೀಕೈಯ ಪಿಡಿದು ಕೃಪಾವಲೋಕನದಿಂದ
ಜೋಕೆ ಮಾಡುವುದೆನ್ನ ಮೈನಾಕಿವರಜನಕ ೧

ಅನಿಲ ಎನ್ನವಗುಣಗಳೆಣಿಸಲು ಕಡೆಯುಂಟೆ
ಕೊನೆಗೆ ನೀನೆ ಗತಿಯೋ ಅನಿಮಿಷೇಶಾ
ಜನನಿ ಜನಕ ಭ್ರಾತ ಜನಪ ಗುರುವರ ಮಿತ್ರ
ಎನಗೆ ನೀ ಸಕಲ ಸೌಖ್ಯದನೆಂದು ಪ್ರಾರ್ಥಿಸಿದೆ ೨

ಹನುಮ ಭೀಮಾನಂದ ಮುನಿರಾಯ ನಿನ್ನ ಪ್ರಾ
ರ್ಥನೆ ಗೈಯುವರು ವಾಣಿ ಫಣಿಪ ಮೃಡರು
ಅನಿಮಿತ್ತ ಬಾಂಧವ ಶ್ರೀ ಜಗನ್ನಾಥ ವಿಠ್ಠಲನ
ತನಯ ತಾವಕರ ಬಂಧನವ ಮೋಚನ ಮಾಡೋ ೩

೭೦

ಆನೆಂತು ತುತಿಪೆ ನಿನ್ನಾ ಶ್ರೀ ಗುರು ರನ್ನಾ
ಆನೆಂತು ತುತಿಪೆ ನಿನ್ನಾ ಪ

ಆನೆಂತು ತುತಿಪೆ ಪಂಚಾನನಸುತ ಪವ
ಮಾನ ಹನುಮ ಭೀಮ ಆನಂದತೀರ್ಥನೆ ಅ.ಪ.

ಸನಕನಂದನ ಸನತಕುಮಾರಾದಿ
ಮುನಿಗಳು ಹರಿ ದರುಶನವ ಮಾಡುವೆವೆಂದು
ಘನಹರುಷದಿ ಮೋಕ್ಷವನು ಕುರಿತು ಬಂದೊ
ಡನೆ ಬಾಗಿಲಲಿ ನಿಲ್ಲೆನಲು ಜಯ ವಿಜಯ
ರನ ನೋಡಿ ಎರಡೊಂದು ಜನುಮದಲಿ ಕ್ರೂರ
ದನುಜಕುಲದಲಿ ಜನಿಸಿರೆಂದೆನೆ ಸಿರಿ
ವನಜಾಕ್ಷರಗೋಸ್ಕರಾ ಅವತರಸಿ
ಗುಣಪೂರ್ಣ ಗುರು ಸಮೀರಾ ಸೇವಿಪೆನೆಂದಾ
ಕ್ಷಣದಿ ಜನಿಸಿ ವಾನರಾ ರೂಪಿಲಿ ಭುವ
ವನದೊಳು ಮೆರೆದೆ ಅಸಮಶೂರಾ ಹರಿಹರಾ ೧

ಕೋತಿ ಕಟಕಮಾಡಿ ಜಾತರಹಿತ ಹರಿ
ಗೇ ತಲೆಬಾಗಿ ಸುಪ್ರೀತಿಯಿಂದಲಿ ರವಿ
ಜಾತನ ಸಲಹಿ ಅತೀ ತೀವ್ರದಿಂದಲಿ
ಸೀತೆಯ ಕ್ಷೇಮವ ದೂತ ಪೇಳುವೆನೆಂದು
ವಾತವೇಗದಿ ವನಧಿಯ ತಡಿಲ್ಲದೆ ದಾಟಿ

ಮಾತೆಗುಂಗುರವಿತ್ತ ಶೋಕತರುಗಳ
ಭೀತಿ ಬಡದಲೆ ಕಿತ್ತಿ ರೋಮ ಬಳ
ವ್ರಾತವೆಲ್ಲವ ನುಗ್ಗೊತ್ತೀ ಲಂಕಾಪುರ
ಜಾತವೇದಸಗೆ ಇತ್ತೀ ಹನುಮಶಿರಿ
ನಾಥನಿಗೆರಗಿ ಪಡೆದ ಬಹುಕೀರ್ತಿ ೨

ದುರುಳ ಕಲ್ಯಾದ್ಯರು ಊರ್ವಿಯೊಳ್ಪುಟ್ಟಿ ಸಂ
ಚರಿಸುತ್ತ ಇರಲಾಗಿ ಮರುತದೇವನು ಅವ
ತರಿಸಿ ಅವನಿಯೊಳು ದುರಿಯೋಧನುಣಲಿತ್ತ
ಗರಳವ ಭುಂಜಿಸಿ ಅರಗಿನ ಸದನದಿ
ಪುರೋಚನಾದಿಗಳನ್ನು ಉರುಹಿ ಏಕಚಕ್ರಾ
ಪುರದಲ್ಲಿದ್ದ ಬಕಾಸುರನ ಸದೆದು ಭೂಮಿ
ಸುರವೇಷವನೆ ಧರಿಸೀ ಪಾಂಚಾಲಿ ಸ್ವಯಂ
ವರ ಪತಿಕರಿಸಿ ಮಗಧದೇಶ
ದರಸನ ಸಂಹರಿಸೀ ರಾಜಸೂಯಜ್ಞ
ಹರಿಗೆ ಅರ್ಪಿಸಿದಿ ಮೆರೆಸೀ ೩

ಭಕುತಳಾದ ಇಂದುಮುಖಿ ದ್ರೌಪದಿಗೆ ಸೌಗಂ
ಧಿಕವ ತರುವೆನೆಂದು ವೃಕೋದರ ಪೋಗಲು
ಅಕುಟಿಲ ಹನುಮಂತನನು ಅವಲೋಕಿಸ್ಯಂ
ಜಿಕೆಯಿಂದ ನಿಂದು ಮಾರಕಜನರಿಗೆ ಮೋ
ಹಕವ ತೋರಿಸಿ ಕುಪಥ ಖಳರನೊರಿಸಿ ನೀ
ಸಖಿಗೆ ಪೂವಿತ್ತು ಗುರುಕುಮಾರನಸ್ತ್ರಕ
ಳುಕದೆ ಯುದ್ಧವ ಮಾಡಿದೆ ದುಶ್ಯಾಸನ
ರಕುತ ವೆರಿಸಿ ಕುಡಿದೆ ಉಭಯಗಳ ರ
ಥಿಕರ ಬಲವಕರೆದೆ ಭಯದಲಿ ಉ
ದಕದಲಿರ್ದ ದುರ್ಯೋಧನನೂರು ಕಡಿದೆ ೪

ಭೀಮ ಭಯಂಕರ ಕಾಮಕೋಟಿ ಚಲ್ವ
ಧೀಮಂತಜನ ಮನೋಪ್ರೇಮ ಪಾವನ ಗುಣ
ಸ್ತೋಮ ಸರ್ವಾಧಾರ ಭ್ರಾಮಕಜನ ವನ
ಧೂಮಕೇತುವೆ ಸರ್ವಾಸೀಮ ಸೌಖ್ಯ ಪೂರ್ಣ
ಸೋಮಾರ್ಕ ಸುರಪತಿ ಸಾಮಜ ಹರಿಗುರು
ರೋಮ ಕೋಟೇಶ್ವರ ಶ್ರೀಮಾನ್ಯ ಭಕುತಲ
ಲಾಮ ಭವ್ಯ ಚರಿತಾ ಸೋಮಕುಲ
ಸೋಮ ಸುಖ ಭರಿತಾ ಭಕುತ ಪ್ರೀತಾ
ಹೇಮವರ್ಣ ಕಾಯ ಹಿತದಿಂದ ನಿರುತಾ ೫

ಮಣಿಮಂತನೆಂಬವನಿಯೊಳು ಪುಟ್ಟಿ ವೇ
ನನ ಮತ ಪಿಡಿದು ಜೀವನೆ ಪರಮಾತ್ಮನೆಂ
ದೆನುತ ಸ್ಥಾಪಿಸಿ ಪಣೆಗಣ್ಣೆನ್ವರದಿಂದ
ಅನಿಮಿಷರೆಲ್ಲರು ವನಜಜಗುಸುರಲು
ಮುನಿಗಳು ಸಹ ನಾರಾಯಣನ ಪದಕೆ ದಂಡ
ಪ್ರಣಾಮವ ಮಾಡಿ ಸ್ತೋತ್ರವಿನಯದಿ ಗೈಯೆ
ಅನಿಲನ ಅವಲೋಕಿಸಿ ಪೇಳಲು ಹರಿ
ಮನ ಭಾವವನು ಗ್ರಹಿಸಿ ಮಧ್ಯಗೇಹ
ಮನೆಯೊಳಗವತರಿಸಿ ಮೆರೆದೆ ಗುರು
ಅನುಗಾಲದಲಿ ನಿನ್ನ ಗುಣಗಳಾಶ್ರೈಸೀ ೬

ವಾಸುದೇವನೆಂಬ ಭೂಸುರನಾಮದಿ
ಲೇಸಾಗಿ ಚರಿಸಿ ಸಂತೋಷ ಭರಿತರಾಗಿ ಸಂ
ನ್ಯಾಸಾಚ್ಯುತ ಪ್ರೇಕ್ಷರಾ ಕರಸರಸಿಜ
ದೀ ಸಂತೋಷದಿ ಕೊಂಡು ಆಶಂಕರರ ಭಾಷ್ಯ
ದೂಷಿಸೆ ಗರುಗಳುಲ್ಲಾಸ ಸನ್ಮುಖದಲಿ ವಿ
ಶೇಷದಿಂದಲಿ ವಿರಚಿಸುವುದೆನಲು ಉ

ಲ್ಲಾಸದಿಂದಲಿ ಕೇಳಿ ಆಕ್ಷಣದಿ ಸಂ
ತೋಷ ಮನದಲಿ ತಾಳಿ ಮೋಹಕವ ಪರಿಹ
ರಿಸಿ ಅರ್ಥವ ಪೇಳೆ ಭೂಸುಜನರ
ಆಶೆ ಪೂರೈಸಿದ ಘನನಿನ್ನ ಲೀಲೆ ೭

ತರಳತನದಲಿ ಬದರಿಗೈದಿ ಪಾರಾ
ಶರ ನಾರಾಯಣನ ಸಂದರುಶನ ಕೊಂಡು ತೀ
ವರದಿಂದ ಹರಿತತ್ವ ನಿರ್ಣಯ ಶಾಸ್ತ್ರವ
ವಿರಚಿಸುವುದಕಿನ್ನು ವರವ ಪಡೆದು ಬಂದು
ಎರಡೇಳು ಆರೊಂದು ದುರುಳ ಭಾಷ್ಯಗಳೆಂಬ
ಗರಳ ತರುಗಳ ಮುರಿದಿಕ್ಕಿ ನೀ ಮೂವ
ತ್ತೆರಡೈದು ಗ್ರಂಥಗಳ ನಿರ್ಮಿಸಿ ವಿಬು
ಧರಿಗೆಲ್ಲ ಪೇಳಿ ವ್ಯಾಳ ಭೂಷಣದೇವ
ಪರನೆಂಬ ಯುಕುತಿಜಾಲ ಹರಿದು ಹರಿ
ಪರ ಶ್ರೀ ಬೊಮ್ಮಾದ್ಯರೆ ಗುರುಗಳೆಂದೆನಲು ೮

ನಮೋ ನಮೋ ಸಮೀರನೆ ನಮೋ ಶ್ರೀ ಮುಖ್ಯಪ್ರಾಣ
ನಮೋ ನಮೋ ದಯಾಸಿಂಧು ನಮೋ ಭಕ್ತಜನ ಬಂಧು
ನಮೋ ನಮೋ ಗುಣಶೀಲ ನಮೋ ಭಾರತಿಲೋಲ
ನಮೋ ನಮೋ ಭವ್ಯಾಂಗ ನಮೋ ಅರಿಗಜಸಿಂಗ
ನಮೋ ನಮೋ ಜಗದ್ವ್ಯಾಪ್ತ ನಮಿತಜನರಾಪ್ತ
ನಮೋ ನಮೋ ಸುಖತೀರ್ಥ ನಮೋ ಮೂರ್ಲೋಕದ ಕರ್ತ
ನಮೋ ಗುರುಕುಲ ತಿಲಕ ಪಾಲಿಸು ಎನ್ನ
ತಮಹರದೂರಶೋಕ ಸಜ್ಜನರಿಗೆ
ಅಮಿತ ಮೋದದಾಯಕ ಶ್ರೀಭೂ ದುರ್ಗಾ
ರಮಣ ಜಗನ್ನಾಥವಿಠಲ ಭಕ್ತಾಧಿಕಾ ೯

೭೧

ಕೀಚಕಾಂತಕ ಭೀಮಸೇನರಾಯ
ಯಾಚಿಸುವೆ ನಿನಗಾನು ಎಲ್ಲರನು ಸಲಹೆಂದು ಪ

ಕುಂತಿ ಜಠರೋದ್ಭವನೆ ಕುವಲಯದೊಳಗಿಪ್ಪಮ
ಹಂತರಿಗೆ ಬಪ್ಪ ಜನ್ಮಾದಿರೋಗ
ಚಿಂತೆಗಳ ಕಳೆದ ನಿಶ್ಚಿಂತರನು ಮಾಡು ಸ
ರ್ವಾಂತರಾತ್ಮಕ ಸುಖದ ಸರ್ವೇಶ ಶಕ್ರಾದಿ ನುತ ೧

ದ್ರೌಪದೀರಮಣ ಜ್ಞಾತಾಜ್ಞಾತ ಕರ್ಮಜ ಮ
ಹಾಪರಾಧಗಲೆಸದನು ದಿನದಲಿ
ನೀ ಪೊರೆಯಬೇಕುಪೇಕ್ಷಿಸದೆ ನಿನ್ನವರ ವಿ
ಜ್ಞಾಪನವ ಕೈಕೊಂಡು ವಿಶ್ವ ಚೇಷ್ಟಕನೆ ೨

ಕೌರವಾಂತಕನೆ ಕಾಶ್ಯಪಿಸುತರ ಸಂತೈಪ
ಭಾರ ನಿನ್ನದು ಭವದಿ ಭಕ್ತಬಂಧೋ
ಪ್ರೇರಕ ಪ್ರೇರ್ಯ ರೂಪಗಳಿಂದ ಸರ್ವರ ಶ
ರೀರದೊಳಗಾಡುವೆ ದೇವತೆಗಳೊಡನೆ ೩

ಪವಮಾನತನಯ ಪಾಪಿಷ್ಠರೊಳಗಿದ್ದು ನಿ
ನ್ನವರನೀಪರಿ ದಣಿಸಿ ನೋಡುತಿಹುದು
ಭುವನತ್ರಯೇಶ ಭೂಷಣವೇನೋ ನಿನಗೆ ಸ
ತ್ಕವಿ ಕುಲೋತ್ತಂಸ ಕಾವರ ಕಾಣೆ ನಿನ್ನುಳಿದು ೪

ವನುಜಾಂತಕನೆ ನಿನ್ನ ದಯವೊಂದಿರಲು ಮನೆ
ಧನಧಾನ್ಯ ಪಶುಪತ್ನಿ ಜ್ಞಾನಭಕುತಿ
ತನಗೆ ತಾನೊದಗಿ ಬಪ್ಪುದು ಸುನಿಶ್ಚಯ ಸನಾ
ತನ ಜಗನ್ನಾಥ ವಿಠ್ಠಲನೊಲುಮೆ ಪಾತ್ರ ೫

೭೨

ಬಿನ್ನೈಪೆ ನಿನಗಾನು ಭೀಮಸೇನ ಪ

ಬನ್ನಬಡುತಿಹ ಜನರ ಭಯವ ಪರಿಹರಿಸೆಂದು ಅ.ಪ.

ನೀಚರಿಂದಲಿ ಬಂದ ಭಯಗಳಿಂದಲಿ ಜನರು
ಯೋಚಿಸುವರೆಮಗಾರು ಗತಿಯೆನುತಲಿ
ಕೀಚಕಾಂತಕ ನಿನ್ನ ಕೀರ್ತಿ ಬಹುವಿಧ ಕೇಳಿ
ಯಾಚಿಸುವೆ ನಿನಗಾನು ಎಲ್ಲರನು ಸಲಹೆಂದು ೧

ರೋಚನೇಂದ್ರನೆ ಭವ ವಿಮೋಚಕನು ನೀನೆ ಸಚ
ರಾಚರಕೆ ಸಂತತ ಪುರೋಚನಾರಿ
ಪ್ರಾಚೀನ ಕರ್ಮಾಬ್ಧಿ ವೀಚಿಯೊಳು ಮುಳುಗಿಹ
ಖೇಚರೇಂದ್ರಾಹಿಪ ತ್ರಿಲೋಚನರ ಗುರುವೆ ೨

ಖಚರೋತ್ತಮನೆ ನಿನ್ನ ಸುಚರಿತೆಗಳನು ಕೇಳಿ
ರಚನೆಗೈಯ ಬಲ್ಲೆನೆ ಅಚಲ ಸತ್ವ
ಪ್ರಚಲಿಸುತಿಹ ಮನೋವಚನ ಕಾಯುವ ಘಟೋ
ತ್ಕಚನ ಜನಕ ಸಜ್ಜನರ ಪ್ರಚಯ ಮಾಡುವುದೆಂದು ೩

ಈ ಚತುರ್ದಶ ಭುವನದಾಚಾರ್ಯ ದೇಶ ಕಾ
ಲೋಚಿತದ ಧರ್ಮಗಳ ಸೂಚಿಸೆಮಗೆ
ಪಾಚಕನೆ ನಿನ್ನಡಿಗೆ ಚಾಚುವೆನು ಶಿರ ಸವ್ಯ
ಸಾಚಿ ಸೋದರನೆ ದಯದಿ ಗೋಚರಿಸಿ ಸಲಹೆಂದು ೪

ವಾಚಾಮಗೋಚರ ಜಗನ್ನಾಥ ವಿಠ್ಠಲನ
ಶ್ರೀ ಚರಣ ಭಜಕನೆ ನಿಶಾಚರಾರಿ
ಮೈಚರ್ಮ ಸುಲಿದು ದುಶ್ಯಾಸನನ ರಕುತ ಪರಿ
ಷೇಚನೆಯ ಮಾಡಿದೆ ಮಹೋಚಿತವಿದೆಂದರಿದು ೫

೭೩

ಭಾರತೀರಮಣ ಭವಭಯ ಹರಣ ಸೀಳಿದ
ದಾರಿತಾರಾತಿಸಂಘ ನಮಿಪೆನನವರತ ಪ

ಜ್ಞಾನ ಜ್ಞೇಯ ಜ್ಞಾತೃನಾಮಕ ರಮಾಪತಿಗೆ
ವಾನರೋತ್ತಮ ಕರ್ತೃ ಕರ್ಮ ಕರಣಾ
ನೀನೆನಿಸಿ ತತ್ವದೇವತೆಗಳಿಂದೊಡಗೂಡಿ
ಪ್ರಾಣಪಂಚಕ ರೂಪ ಜಗವ ಪಾಲಿಸುವೆ ೧

ಕಾರುಣ್ಯನಿಧಿಯೆ ಇಪ್ಪತ್ತೊಂದು ಸಾವಿರದ
ಆರುನೂರು ಹಂಸ ಮಂತ್ರ ಜಪವಾ
ಈರೇಳು ಲೋಕದೊಳು ಸರ್ವಜೀವರೊಳಿದ್ದು
ಈ ರೀತಿ ಮಾಳ್ಪೆನೆಂದೆಲ್ಲರಿಗೆ ತೋರ್ಪೆ ೨

ಉದ್ಧರಿಸಬೇಕು ಯಂತ್ರೋದ್ಧಾರ ಪ್ರಾಣ ಶ್ರೀ
ಮದ್ಧನುಮ ಭೀಮ ಗುರುಮಧ್ವ ಮುನಿಪ
ಸಿದ್ಧಾಂತ ತತ್ವಜ್ಞ ಸದ್ವೈಷ್ಣವರ ಸಭಾ
ಮಧ್ಯದೊಳಗಸಮ ಸದ್ವಿದ್ಯೆಗಳನೊರೆದೆ ೩

ದಾಶರಥಿ ಪ್ರೀಯತಮ ವಿಭೀಷಣನ ಮನದಭಿ
ಲಾಷೆಗಳನೆಲ್ಲ ಪೂರೈಸಿ ನಿಂದೆ
ವ್ಯಾಸಮುನಿ ಹೃತ್ಕುಮುದ ಭೇಶ ಬಿನ್ನೈಪೆ ಸಂ
ತೈಸು ನಿನ್ನವರ ಭವಕ್ಲೇಶಗಳ ಕಳೆದು ೪

ಜ್ಞಾನ ಬಲ ಭಕ್ತಿ ವೈರಾಗ್ಯ ಅಪರೋಕ್ಷ ಪವ
ಮಾನ ನಿನ್ನವತಾರ ಅಂಶಗಳಲಿ
ನ್ಯೂನವಿಲ್ಲದೆ ಜಗನ್ನಾಥವಿಠಲನ ಚರಿ
ತಾನುಸಾರದಲಿ ತವ ಚರಿತೆ ತೋರಿಸುವೆ ೫

೭೪

ಮಾರುತೀ ನಮ್ಮಗುರು ಮೂರುತೀ ಪ

ಮಾರುತಿ ಕರುಣಿಸು ಜ್ಞಾನಾ ಎನ್ನ
ಸೇರಿದ ಸತತ ಅಜ್ಞಾನಾ ಆಹ
ದೂರ ಓಡಿಸಿ ಹರಿ ಆರಾಧನೆ ಇತ್ತು
ತೋರಿಸು ಪಥ ಸರ್ವಾಧಾರ ಉದಾರನೆ ಅ.ಪ.

ದ್ವಿತೀಯ ಯುಗದಲ್ಲವತರಿಸಿ ಸೀತಾ
ಪತಿಯ ಪಾದಕೆ ನಮಸ್ಕರಿಸಿ ಅಬ್ಧಿ
ಅತಿ ವೇಗದಿಂದ ಉತ್ತರಿಸಿ ರವಿ
ಸುತಗೊಲಿದವನುದ್ಧರಿಸಿ ಆಹಾ
ಕ್ಷಿತಿಜದೇವಿಯಳನು ಸ್ತುತಿಸಿ ಮುದ್ರಿಕೆಯಿತ್ತು
ದಿವಿಜರ ಸದೆದ ಭಾರತಿಯ ರಮಣನೆ ೧

ಕುರುಕುಲದಲ್ಲಿ ಉದ್ಭವಿಸಿ ಬಲು
ಗರಳ ಪದಾರ್ಥವ ಸಲಿಸಿ ಚೆಲ್ವ
ತರಣಿ ರೂಪವನೆ ಸಿಂಗರಿಸಿ ನೀಚ
ತರ ಕೀಚಕನ ಸಂಹರಿಸಿ ಆಹ
ಜರೆಯ ಸುತನ ಸೀಳಿ ಧರಣಿಪಾಲಕರನ್ನು
ಸೆರೆಯ ಬಿಡಿಸಿ ಕಾಯ್ದ ಪರಮ ಸಮರ್ಥನೆ ೨

ಭೂತಳದೊಳಗೆ ಯತಿಯ ರೂಪ
ನೀ ತಾಳಿದೆಯೋ ಶುಭಕಾಯ ಮಾಯಿ
ವ್ರಾತ ಗೆಲಿದೆ ಮಧ್ವರಾಯಾ ಕಾಯ
ಜಾತ ಜನಕಗತಿ ಪ್ರೀಯಾ ಆಹಾ
ಭೂತನಾಥನೆ ಪರಮಾತುಮನೆಂಬ
ಪಾತಕರರಿ ಜಗನ್ನಾಥವಿಠಲನ ದೂತ ೩

೭೫

ಶರಣು ಭಾರತಿರಮಣ ಶಮಲವರ್ಜಿತ ಚರಣ
ಕೆರಗಿ ಬೇಡುವೆ ವರವ ಪಿಡಿಯೆನ್ನ ಕರವಾ ಪ

ಇಪ್ಪತ್ತೊಂದು ಸಾವಿರದಾರುನೂರು ಜಪ
ತಪ್ಪದೆಲೆ ಸಕಲ ಜೀವರೊಳು ಜಪಿಸಿ
ಮುಪ್ಪಿಲ್ಲದ ಜನ ಪದವಿಯನ್ನೈದಿ ಭಜಕರಿಗೆ
ಸುಪ್ತಿ ಸ್ವಪ್ನವ ಬಿಡಿಸಿ ಮುಕ್ತರನು ಮಾಳ್ಪೆ ೧

ಪವಮಾನರಾಯಾ ನೀ ಸಲಹದಿರೆ ಪಾಲಿಸುವ
ದಿವಿಜರಿನ್ನುಂಟೇನೋ ಲೋಕದೊಳಗೆ
ಯವನರಿಂದಲಿ ಬಂದ ಭಯವ ಪರಿಹರಿಸಿ ನಿ
ನ್ನವರ ಸಂತೈಸು ಸರ್ವಕಾಲದಲೀ ೨

ಲೋಗರಿಗೆ ಬೇಡಿದಿಷ್ಟಾರ್ಥಗಳ ಕೊಟ್ಟು ಚ
ನ್ನಾಗಿ ಸಂತೈಪೆನೆಂದನು ದಿನದಲೀ
ಭೋಗಪುರದಲಿ ಬಂದು ನೆಲೆಸಿದೆಯ ನೀ ಪರಮ
ಭಾಗವತ ತಿಲಕ ಪಾಲಕ ವೀತಶೋಕ ೩

ಭಾನುನಂದನಗೆ ನೀ ಒಲಿದ ಮಾತ್ರದಲಿ ರಘು
ಸೂನು ಸಂರಕ್ಷಿಸಿದ ಸುರಪತನಯಾ
ವಾನರೋತ್ತಮ ವಾಲಿಯನು ಸದೆದ ನಿನ್ನ ದಯ
ಕೇನೆಂಬೆ ಕಮಲ ಸಂಭವನ ಪದಕೆ ಯೋಗ್ಯ ೪

ಶುಚಿನಾಮಕನೆ ಎನಗೆ ಹರಿಕಥಾ ಶ್ರವಣದಲಿ
ರುಚಿಪುಟ್ಟುವಂತೆ ಮಾಡುನುಗಾಲದೀ
ಮುಚುಕುಂದ ವರದ ಜಗನ್ನಾಥವಿಠಲನ ಗುಣ
ರಚನೆಗೈವ ಸಮರ್ಥ ನೀನೇ ಸುಕೃತಾರ್ಥ ೫

೭೬

ಶ್ರೀ ಮಾರುತಾತ್ಮ ಸಂಭೂತ ಹನುಮ
ಭೀಮ ಮಧ್ವಾಖ್ಯ ಯತಿನಾಥ । ಮೂಲ
ರಾಮಕೃಷ್ಣಾರ್ಪಿತ ಸುಚೇತಾ । ಮಮ
ಸ್ವಾಮಿ ಚಿತ್ತೈಸೆನ್ನ ಮಾತಾ ೧

ಅಂಜನಾದೇವಿ ಸುಕುಮಾರ ।ಎಮ್ಮ
ನಂಜಿಸುವ ಘೋರ ಸಂಸಾರ ।ಹೇ ಪ್ರ
ಭಂಜನನೆ ನಿಗಮ ಸಂಚಾರ । ಕ್ಲೇಶ
ಭಂಜಿಸಿ ಸಲಹೋ ಗುಣೋದಾರ ೨

ಕುಂತಿ ಜಠರದಲುದಿಸೆ ಬಂದೆ । ಮಾ
ಹೊಂತ ಕೌರವರ ನೀ ಕೊಂದೆ । ಅನಾ
ದ್ಯಂತ ಕಾಲದಿ ಎಮ್ಮ ತಂದೆ । ನೀನೆ
ಸಂತೈಸಬೇಕೆಂದು ನಿಂದೆ ೩

ಮಧ್ಯ ಗೇಹಾಖ್ಯ ದ್ವಿಜಸದನ । ದೊಳಗೆ
ಉದ್ಭವಿಸಿ ಮೆರೆದೆ ಜಿತಮದನ । ಧರ್ಮ
ಪದ್ಧತಿಗಳ ಪ್ರಸನ್ನವದನಾ । ತಿಳಿಸಿ
ಉದ್ಧರಿಸೋ ದನುಜಕುಲ ನಿಧನ ೪

ಶ್ರೀ ಪೂರ್ಣಬೋಧ ಯತಿರಾಯ । ಎಮ್ಮ
ತಾಪತ್ರಯಗಳಿಂದ ನೋಯ । ಗೊಡದೆ
ಪಾಲಿಪುದು ಗುಣ ನಿಕಾಯ । ಕೃಷ್ಣ
ದ್ವೈಪಾಯನಗೆ ನೀನೆ ಪ್ರೀಯ ೫

ಬದರಿಕಾಶ್ರಮಕೆ ನೀ ಪೋಗಿ । ಲಕ್ಷ್ಮೀ
ಹೃದಯ ವಾಸನ ಪದಕೆ ಬಾಗಿ । ಭಾಷ್ಯ
ಮುದದಿಂದ ಪೇಳ್ದೆ ಚೆನ್ನಾಗಿ । ಎನಗೆ
ಅದರ ಭಾವವ ತಿಳಿಸೋ ಯೋಗಿ ೬

ಯಾರಿಗುಸುರಲಿ ಮನದ ತಾಪ ಭಾರ
ತೀರಮಣ ಮಹಪಾಪ ವೆಣಿಸಿ
ದೂರ ನೋಳ್ಪರೆ ಸುಪ್ರತಾಪ ಪರಮ
ಕಾರುಣಿಕ ತೋರೋ ತವರೂಪ ೭

ಭಕ್ತರಿಗೊಲಿದು ಭವದಿಂದ ನೀ
ಮುಕ್ತರನ ಮಾಡು ದಯದಿಂದ ನೀನೆ
ಶಕ್ತನಹುದೆಂದು ವೇದವೃಂದದೊಳಗೆ
ಉಕ್ತವಾಗಿದೆ ನಿಮ್ಮಾನಂದಾ ೮

ಜೀವಕೋಟಿಯೊಳು ನೀನೆ ಪಿರಿಯ ಎಮ್ಮ
ನೋವು ಸುಖಗಳನು ನೀನೆ ಅರಿಯ ಈಗ
ನೀವೊಲಿಯದಿರೆ ಹರಿ ನಮ್ಮ ಪೊರೆಯಾ ಜಗವ
ಕಾಯ್ವ ಗುರುವರ ನೀನೆ ಖರೆಯ ೯

ಶ್ರೀ ಜಗನ್ನಾಥ ವಿಠ್ಠಲಯ್ಯ ನಂಘ್ರಿ
ಪೂಜಿಸುವ ಸಜ್ಜನರ ಕೈಯಾ ಪಿಡಿದು
ನೀ ಜೋಕೆ ಮಾಡುವುದು ಜೀಯಾ ನೀನೆ
ಈ ಜಗತ್ರಯ [ಕೆ] ಗುರುವರ್ಯಾ ೧೦

೭೭

ಶ್ರೀ ಹನುಮ ಮಾಂ ಪಾಹಿ ಪವನ ಜ
ಮೋಹದಾಹನನೆ ಖಗ ವಾಹನನ ದಾಸ
ನೇಹದಲಿ ಬಿಂಬರೂಪ ತೋರೆನಗೆ ಪ

ಭಾನುಸುತ ಪವಮಾನ ನಂದನ
ನೀನೆ ಸಲಹಿದೆ
ಮಾನನಿಧಿ ರಾಮಬಾಣದಲಿ ಇಂದ್ರ
ಸೂನುವಿನ ಪ್ರಾಣ
ಹಾನಿಯ ಗೈಸಿ ಮೇಣ್ ಆ ಕಿಷ್ಕಿಂಧ ನಗರದಲ್ಲಿ
ವಾನರೇಂದ್ರಗೆ
ನಾನಾ ಪರಿಯಲ್ಲಿ ಆನಂದವಿತ್ತ
ಜ್ಞಾನಿ ನಿನ್ನ ಅಧೀನದವನೆಂದೆಂದು ೧

ಸುರೇಶನಂದನ ಮಾರುತನೆ ನಿನ್ನ
ಕರುಣವು ಎನ್ನೊ
ಳಿರದ ಕಾರಣ ಹರಿ ಮುನಿದನೆಂದು
ಅರಿದು ಮನದಿ ದ್ವಾ
ಪರದಲ್ಯವ ತರಿಸಿ ಗುರುವರ್ಯ ನಿಮ್ಮ
ಚರಣ ಸೇವಿಸೆ
ಪೊರೆದೆ ಅಂದು ಸಮರದಿ ಕೃಷ್ಣನ
ಪರಮಕೃಪೆ ಪಡೆದವರಿಗೆ ನಿನ್ನಯ ಕರುಣ ಕಾರಣವೊ ೨

ಮೂರನೆಯ ಅವತಾರದಿಂದಲಿ
ಧಾರುಣಿಯೊಳು .... ಬೀರಿದ್ದ ಶಾಸ್ತ್ರವ
ಬೇರೊರಿಸಿ ಕೀಳ್ದು
ತೋರಿಸಿದಿ ಹರಿಯ ಆರು ನಿನ್ನನು
ಆರಾಧಿಪರೊ ಆ
ಧೀರರಿಗೆ ದೋಷ ಸೇರಲಮ್ಮವು
ಮಾರಪಿತ ಜಗನ್ನಾಥ ವಿಠಲನ ಕರುಣ ವಾಹುದೊ ೩

೭೮

ಹನುಮ ಭೀಮಾನಂದ ಮುನಿವರೇಣ್ಯಾ
ತನು ಮನದ ತಾಪ ಕಳೆದನುದಿನದಿ ಪಾಲಿಪುದು ಪ

ಪ್ರಾಣಪಂಚಕ ಸುಪರ್ವಾಣ ಗುರುವರ ಜಗ
ತ್ರಾಣ ತ್ರಯೀಮಯಿ ಪುರಾಣವೇದ್ಯಾ
ಮಾಣದೆನ್ನಯ ಹೃದಯ ತಾಣದೊಳಗರಿ ಶಂಖ
ಪಾಣಿರೂಪನ ಬಿಡದೆ ಕಾಣಿಸು ಕೃಪಾಸಿಂಧು ೧

ಸೂತ್ರನಾಮಕನೆ ತಾಪತ್ರಯಗಳಿಂದ್ಹಗಲು
ರಾತ್ರಿಯಲಿ ಬಳಲುತಿಹ ನಿತ್ರಾಣನ
ಗಾತ್ರದೊಳು ನೆಲೆಸಿ ಸರ್ವತ್ರದಲಿ ಸುಖವಿತ್ತು
ಶತ್ರುತಾಪಕನಾಗು ಸ್ತೋತ್ರವನೆ ಕೈಕೊಂಡು ೨

ಅಸುನಾಥ ಶರಣಂಗೆ ವಶವಾಗು ಅನುದಿನದಿ
ಅಸುರಭಂಜನ ಜ್ಞಾನ ಸುಸುಖಾತ್ಮನೇ
ಬಿಸರುಹಾಂಬಕ ಜಗನ್ನಾಥವಿಠಲನ ಕೈ
ವಶಮಾಡಿ ಕೊಡುತಿಪ್ಪ ಶ್ವಸನಾವತಾರಿ ೩

೭೯

ಅಪರಾಧವೆಣಿಸದಲೆ ಕಾಯಬೇಕು
ಕೃಪಣವತ್ಸಲನೆ ಶ್ರೀ ಮಧ್ವಮುನಿ ಗುರುರಾಯ ಪ

ನೀ ಮಾಡಿದುಪಕಾರ ನಾ ಮರೆವುದೆಂತೋ ಲ
ಕ್ಷ್ಮೀ ಮನೋಹರನ ನಿಜದಾಸಾಗ್ರಣೀ
ಪಾಮರನ ಲೋಕದೊಳು ಧೀಮಂತನೆನಿಸಿದೆ ಮ
ಹಾಮಹಿಮ ನಿನ್ನ ಕರುಣಾಮೃತದ ಮಳೆಗರೆದೂ ೧

ಅವಿವೇಕಿ ನಾನು ನಿನ್ನವನೆಂದು ತಿಳಿದು ಎ
ನ್ನವಗುಣಗಳೆಣಿಸದೆ ನಿತ್ಯದಲ್ಲಿ
ಸುವಿವೇಕಿಯನೆ ಮಾಡು ಕವಿವರ್ಯ ತವ ಮನೋ
ತ್ಸವಕೆ ಎಣೆಗಾಣೆ ನಾನವನಿಯೊಳಗಾವಲ್ಲಿ ೨

ಏನರಿಯದ ಮೂಢ ಮಾನವನು ನಾನು ಸು
ಜ್ಞಾನವರ್ಯನು ನೀನೆ ಕಾಯಬೇಕು
ಮಾನುತ ಜಗನ್ನಾಥ ವಿಠಲನ ಪದಯುಗಳ ಸ
ಧ್ಯಾನ ಮಾಡುವ ಧೀರಪ್ರಾಣ ಪಂಚಕರಾಯ ೩

೮೦

ಬಂದೆ ಗುರುರಾಯ ನಿಮ್ಮ
ಸಂದರುಶನಂಗಳ ಬಯಸಿ ಪ

ರಾಮದೂತನಾಗಿ ತ್ರಿಜಗದೊಳಗೆ ಮೇಲಾಗಿ ಪೋಗಿ
ಕಾಮಿನೀ ಮಣಿಗೆ ಪ್ರೇಮದುಂಗುರುವನಿತ್ತೆ ೧

ಚಂದಕುಲದಲ್ಲೇ ಪುಟ್ಟಿ ಚಂದ ಕುಮತಿಗಳ ತರಿದು
ಭಂಡಿಲನ್ನವನುಂಡು ದುರುಳನ ಚೆಂಡಾಡಿದ ಕೇಳಿ ೨

ಕಟ್ಟಕಡೆಯಲ್ಲೇ ಪುಟ್ಟಿ ಕೆಟ್ಟಕುಮತಗಳ ತರಿದು
ಪುಟ್ಟ ಜಗನ್ನಾಥ ವಿಠಲನ ಕೊಂಡಾಡಿದ ಕೇಳಿ ೩

೮೧

ಮಧ್ವರಾಯರ ಪಾದ ನಂಬೋ
ಸಿದ್ಧಾಂತ ಸಾರವ ಹೃದಯದಿ ತುಂಬೋ ಪ

ಶತಕೋಟಿ ಜನ್ಮ ಸುಕೃತದಿ
ಅತುಳ ವೈಷ್ಣವಜನ್ಮ ದೊರಕಿತು ನಿಜದಿ

ಸತತ ಸಜ್ಜನ ಪಾದ ರಜದಿ ಮುಣುಗುತ
ದುರ್ವಿಷಯಗಳನು ನಿಗ್ರಹಿಸೊ ನೀ ತ್ವರದಿ ೧

ಈತನ ವಾಕ್ಯವೆ ವೇದವಾಕ್ಯಗಳೆಂದರಿಯೊ
ಜಿಷ್ಣು ಸರ್ವೇಶ ಧಾತೃಗಳೊಂದೆಂಬ ದು
ರ್ವಾದಿ ದುರ್ಗಜಕೆ ಕೇಸರಿಯಾಗಿರುವ ೨

ವಟು ವೃಷ್ಣಿವಂಶ ಲಲಾಮ
ತಟಿತಾಭ ಜಗನ್ನಾಥ ವಿಠಲಗೆ ಪ್ರೇಮಾ
ಸ್ಫುಟರೂಪತ್ರಯನೆ ನಿಷ್ಕಾಮಾ ನಿ
ಷ್ಕುಟಿಲ ಭಾರತಿರಮಣ ಹನುಮಂತ ಭೀಮ ೩

೮೨

ಮುನಿರಾಯಗೊಂದಿಸುವೆನನು ದಿನದಲಿ
ಮನವಚನಕಾಯದಿಂ ಮರೆಯದಲೆ ಗುರು ಮಧ್ವ ಪ

ವಾಸುದೇವ ಅಮಾನವಪ್ರತಿಮ ವಿಷ್ಣು ಹರಿ
ದಾಸವರ ಪ್ರಥುಧಿ ತ್ರಿಜಗದ್ಗುರು ವರ
ಶ್ವಾಸಪತಿ ಚತುರಧೀ ತ್ರಿಜಗದ್ಗುರುವರೇಣ್ಯ
ಪೂಶರಭಯಂಕರ ಮಹಾಮತಿ ಅಲವ ಬೋಧ ೧

ವಿಭುವಿಶ್ವವಿತುಪೂರ್ಣ ಬೋಧಾಲವ
ಸುಬುದ್ಧಿ ತ್ರಿಭುವನಾಲಯ ಧಿಷಣ ಭೂರಿಚೇತಾ
ಪ್ರಭು ಮಹಾಹೃತ್ ಅಮಿತ ಬುದ್ಧಿ ಸುಖತೀರ್ಥ ಜಗ
ದಭಿವಂದ್ಯದಭ್ರಚೇತಸ ಮಹಾಮನ ಮಧ್ವ ೨

ಸೂರಿಮಸ್ತಕ ಮುಕುಟ ಸಕಳಜ್ಞ ಸರ್ವವಿತ್
ಮಾರುತಾತ್ಮಜ ಪೂರ್ಣ ಪುಷ್ಠ ಬುದ್ಧಿ
ಧೀರಮತಿ ಪ್ರಚುರ ವೃಜಿನ ನಾಶಕನಂತ
ಪ್ರೇರಕಪ್ರಮತಿ ಕವಿ ಲೋಕನಾಯಕ ಪ್ರಾಜ್ಞ ೩

ಆನಂದತೀರ್ಥ ಗುರು ಬುದ್ಧಿ ಸುಖತೀರ್ಥ ಅನು
ಮಾನಯತಿ ಸಂಮೋದ ಹಂಸರಾಟ್
ಜ್ಞಾನಾಬ್ಧಿ ಚಾರು ಕೃತಾಂತವಿತ್ ಮಹಾ
ಮಾನಸ ಪ್ರಮೋದಾರ್ಯವರ್ಯ ವಿದ್ಯಾಧಿಪತಿ ೪

ಭುವನ ಭೂಷಣ ವ್ಯಾಸಶಿಷ್ಯ ಅಜಸಮ ಧನ್ಯ
ಪ್ರವರ ಪ್ರಾಜ್ಞಾರ್ಯ ಧ್ವಸ್ತದುರಾಗಮ
ಕವಿರಾಯಾ ಸುಹೃತ್ ಅಖಿಳಜ್ಞ ದಶಧಿಷಣನೆ
ಅವಿರಳ ಜಗನ್ನಾಥ ವಿಠಲನಿಗತಿ ಪ್ರಿಯ ೫

ಸರಸ್ವತಿ–ಭಾರತಿ ಸ್ತೋತ್ರಗಳು

೮೩

ದಯಮಾಡೆ ದಯಮಾಡೆ ತಾಯಿ ವಾಗ್ದೇವಿ ಪ

ದಯದಿಂದ ನೀನೆನ್ನ ನೋಡೆ ವಾಗ್ದೇವಿ ಅ.ಪ.

ಹಿತದಿ ಸನ್ಮತಿಯ ಶ್ರೀಮತಿದೇವಿ ನೀಡೆ
ವ್ರತತಿಜನೇತ್ರೆ ಭಾರತಿ ನೀ ದಯಮಾಡೆ ೧

ಸುಮುಖೀ ತ್ವಚ್ಚರಣಾಬ್ಜದ್ರುಮಛಾಯಾಶ್ರಿತರ
ಸುಮತಿಗಳೊಳಗಿಟ್ಟು ಮಮತೆಯಿಂ ಸಲಹೆ ೨

ಜಗನ್ನಾಥವಿಠಲನಂಘ್ರಿಗಳ ಸೇವೆಯೊಳು
ಸುಗುಣೆ ಸನ್ಮತಿಗೊಟ್ಟು ಬೇಗೆನ್ನ ಸಲಹೆ ೩

೮೪

ವಂದಿಪೆನಮ್ಮ ಮುದ್ದು ಶಾರದೆ ಶರ
ಚ್ಚಂದಿರವದನೆ ಶಾರದೆ ಪ

ಇಂದೀವರಾಕ್ಷಿ ಶತಾನಂದನ ಪ್ರಿಯೆ ದೇವಿ
ಕುಂದು ನೋಡದೆ ಶ್ರುತಿವಂದೆ ಜ್ಞಾನವ ನೀಡೆ ಅ.ಪ.

ಸಿತಾಬ್ಜಾಸನೆ ಸುಖದಾಯಕಿ ಸುರ
ನಾಥಾರಾಧಿತೆ ವಿಶ್ವನಾಯಕೀ
ವೀತದುರಿತೆ ಶಿವ ಮಾತೆ ಸದ್ಗುಣಮಣಿ
ವ್ರಾತೆ ವೇದೋಪನಿಷದ್ಗೀತೆ ವಾಗ್ದೇವಿ ಮಾತೆ ೧

ಕೋಕಿಲವಾಣಿ ಕವಿಸೇವಿತೆ ಎನ್ನ
ವಾಕು ಲಾಲಿಸೆ ಮನಿವಂದಿತೆ
ತೋಕನೆಂದು ಸುವಿವೇಕ ಬುದ್ಧಿಯನಿತ್ತು
ಸಾಕು ಸಜ್ಜನರನ್ನು ವಾಕು ಮನ್ನಿಸು ತಾಯೆ ೨

ಪಾತಕಿಗಳೊಡನಾಡಿ ನಾ ನಿನ್ನ
ಪೋತಾಬ್ಜಪದ ಭಜಿಸದ್ಹೋದೆ ನಾ
ಪಾತಕವೆಣಿಸದೆ ಸೀತಾರಮಣ ಜಗ
ನ್ನಾಥವಿಠ್ಠಲನಘ್ರಿ ಗೀತಾಮೃತವನುಣಿಸು ೩

೮೫

ಭಾರತೀ ಮಜ್ಜನನಿಯ ಭಾರತೀ ಪ

ಭಾರತೀ ಭರತನಾರ್ಧಾಂಗಿ ಕರು
ಣಾರಸ ಪೂರಿತಾಪಾಂಗಿ ಅಹ
ತಾರಕ್ಷ್ಯ ಪ್ರಮುಖ ವೈಕಾರಿಕ ದೇವಗ
ಣಾರಾಧಿತಾಂಘ್ರಿ ಸರೋರುಹೆ ಪಾಲಿಸೆ ಅ

ವಿದ್ಯುನಾಮ್ನಮಕೆ ವಿಧಿಜಾತೆ ಕೃತಿ
ಪ್ರದುಮ್ನ ಜಠರಸಂಭೂತೆ ಅನ
ವದ್ಯ ಸದ್ಗುಣಗಣವ್ರಾತೆ ಬ್ರಹ್ಮ
ವಿದ್ಯವ ಪಾಲಿಸು ಮಾತೆ ಅಹ
ಬುಧ್ಯಾಭಿಮಾನಿಯೆ ಸದ್ಯೋಜಾತನ ಪೆತ್ತ
ಶ್ರದ್ಧಾ ನಾಮಕೆ ಅನಿರುದ್ಧನ ತೋರಿಸೆ ೧

ಗುಣತ್ರಯಾತ್ಮಕವಾದ ಲಿಂಗದೊಳು
ಅಣರೂಪಳಾಗಿ ತುರಂಗ ಮುಖ
ಅನಿಲಾಂತರ್ಗತ ಪಾಂಡು ರಂಗನಂಘ್ರಿ
ವನಜಯುಗಳ ಮತ್ತ ಭೃಂಗ ಆಹ
ಎನಿಸಿ ತತ್ತತ್ಕಾರ್ಯ ಅನಿರುದ್ಧ ದೇಹಸ್ಥ
ಅನಿಮಿಷರೊಳು ಪೊಕ್ಕು ದ್ವಿನವರೂಪದಿ ಮಾಳ್ಪೆ ೨

ಕಾಳಿದ್ರೌಪದಿ ಶಿವಕನ್ಯಾ ಮನ್ಮ
ನಾಲಯದೊಳು ನಿಲ್ಲೆ ಘನ್ನ ಪ್ರಾಜ್ಞ
ಮೌಳಿಮಣಿಯೆ ನಿತ್ಯ ಎನ್ನ ಪರಿ
ಪಾಲಿಸು ನಂಬಿದೆ ನಿನ್ನ ಆಹ
ಶೈಲಜೆ ಶ್ಯಾಮಲೆ ಪೌಲೋಮಿ ಉಷೇರಿಂದ
ಓಲಗ ಕೈಕೊಂಬ ಕಾಲಾಬ್ಧಿ ಮಾನಿಯೆ ೩

ವಂದಿಪೆ ನಿನಗಿಂದ್ರಸೇನಾ ನಳ
ನಂದಿನಿ ಕರುಣಿಸು ಜ್ಞಾನ ಶ್ರೀ ಮು
ಕುಂದನ ಪರಮ ಕಲ್ಯಾಣ ಗುಣ
ಸಿಂಧುವಿನೊಳಗೆ ಪಾಠೀನ ಆಹ
ನಂದದಿ ಚರಿಸುವ ಗಂಧವಾಹನ ರಾಣಿ
ಸಿಂಧೂರ ಗಮನೆ ಪುರಂದರಾರಾಧಿತೆ ೪

ನಿಗಮತತಿಗಳಭಿಮಾನಿ ನಿನ್ನ
ಪೊಗಳಲೆನ್ನೊಳವೆ ಕಲ್ಯಾಣಿ ಆ ಪ

ನ್ನಗರಾಜ ಸಹಸ್ರ ವಾಣಿಯಿಂದ
ಬಗೆ ಬಗೆ ತುತಿಪ ಸುಶ್ರೋಣಿ ಆಹ
ಮುಗಿವೆ ಕರಗಳೆನ್ನವಗುಣಗಳೆಣಿಸದೆ
ಜಗನ್ನಾಥವಿಠಲನಂಘ್ರಿಗಳ ಧ್ಯಾನವನೀಯೆ ೫

ಶೇಷ

೮೬

ಅತಿ ಶೋಭಿಸುತಿದೆ ಶ್ರೀಪತಿವಾಹನ ಪ

ಚತುರದಶ ಲೋಕದಲಿ ಅಪ್ರತಿವಾಹನ ಅ.ಪ.

ವಿನುತಕಶ್ಯಪ ಮುನಿಗೆ ತನಯನೆನಿಸಿದ ವಾಹನ
ಅನುಜರನು ಕದ್ರೊಯ್ದು ಅತ್ಯಾಢ್ಯ ವಾಹನ
ವನಧಿ ಮಧ್ಯಧಿ ನಾವಿಕರ ಭಕ್ಷಿಸಿದ ವಾಹನ
ಜನಪನಾಜ್ಞದಿ ಕೂರ್ಮಗಜರ ನುಂಗಿದ ವಾಹನ ೧

ಕುಲಿಶಪಾಣಿಯ ಕೂಡೆ ಕಲಹ ಮಾಡಿದ ವಾಹನ
ಒಳಹೊಕ್ಕು ಪೀಯೂಷ ತಂದ ವಾಹನ
ಮಲತಾಯಿ ಮಕ್ಕಳನು ಮರುಳುಗೊಳಿಸಿದ ವಾಹನ
ಬಲಿರಾಯ ಬಯ್ದು ಮಕುಟವ ತಂದ ವಾಹನ ೨

ಕಾಲನಾಮಕನಾಗಿ ಕಮಲಭವನಲಿ ಜನಿಸಿ
ಕಾಲಾತ್ಮಹರಿಯ ಸೇವಿಪ ವಾಹನ
ಕಾಳಗದಿ ಕಪಿವರರ ಕಟ್ಟುಬಿಡಿಸಿದ ವಾಹನ
ವಾಲಖಿಲ್ಲರ ಪಿಡಿದ ವರವಾಹನ ೩

ಕೂಪಾರದೆಡೆಗೆ ಮಂದರವೈದ ವಾಹನ ನಿಜ
ರೂಪದಿ ಹರಿಸೇವೆಗೈವ ವಾಹನ

ಆ ಪಿತೃಗಳಿಗಮೃತ ಪ್ರಾಪ್ತಿಸಿದ ವಾಹನ
ಸೌಪರ್ಣಿ ಪತಿಯೆಂಬ ಹೊಂಬಣ್ಣ ವಾಹನ ೪

ಪನ್ನಗಾಶನವಾಹನ ಪತಿತ ಪಾವನ ವಾಹನ
ಸನ್ನುತಿಪ ಭಕ್ತರನು ಸಲಹುವ ವಾಹನ
ಪನ್ನಗಾದ್ರಿನಿವಾಸ ಜಗನ್ನಾಥ ವಿಠ್ಠಲಗೆ
ಉನ್ನತ ಪ್ರಿಯವಾದ ಶ್ರೀ ಗುರುಡವಾಹನ ೫

೮೭

ಬಲು ರಮ್ಯವಾಗಿದೆ ಹರಿಯ ಮಂಚ ಪ

ಎಲರುಣಿಕುಲ ರಾಜ ರಾಜೇಶ್ವರನ ಮಂಚ ಅ.ಪ.

ಪವನತನಯನ ಮಂಚ ಪಾವನತರ ಮಂಚ
ಭುವನತ್ರಯನ ಪೊತ್ತ ಭಾರಿಮಂಚ
ಕಿವಿಗಳಿಲ್ಲದ ಮಂಚ ಶ್ರೀನಿಕೇತನ ಮಂಚ
ಶಿವರೂಪದಲಿ ಹಿಂದೆ ಹರಿಯನೊಲಿಸಿದ ಮಂಚ ೧

ನೀಲಾಂಬರವನುಟ್ಟು ನಳನಳಿಸುವ ಮಂಚ
ನಾಲಗೆ ಎರಡುಳ್ಳ ನೈಜಮಂಚ
ನಾಲ್ವತ್ತು ಕಲ್ಪದಿ ತಪವ ಮಡಿದ ಮಂಚ
ತಾಲ ಮುಸಲ ಹಲವ ಪಿಡಿದಿರುವ ಮಂಚ ೨

ರಾಮನನುಜನಾಗಿ ರಣವ ಜಯಿಸಿದ ಮಂಚ
ತಾಮಸ ರುದ್ರನನು ಪಡೆದ ಮಂಚ
ಭಿಮಾವರಜನೊಳು ಆವೇಶಿಸಿದ ಮಂಚ
ಜೀಮೂತ ಮಂಡಲವ ತಡೆಗಟ್ಟಿದ ಮಂಚ ೩

ಜೀವನಾಮಕನೆನಿಸಿ ವ್ಯಾಪ್ತನಾದ ಹರಿಯ
ಸೇವಿಸಿ ಸುಖಿಸುವ ದಿವ್ಯ ಮಂಚ
ಸಾವಿರ ಮುಖದಿಂದ ತುತ್ತಿಸಿ ಹಿಗ್ಗುವ ಮಂಚ
ದೇವಕೀಜಠರದಿ ಜನಿಸಿದ ಮಂಚ ೪

ವಾರುಣೀ ದೇವಿ ವರನೆನಿಸಿದ ಮಂಚ
ಸಾರುವ ಭಕುತರ ಸಲಹೊ ಮಂಚ
ಕಾರುಣ್ಯನಿಧಿ ಜಗನ್ನಾಥ ವಿಠಲನ ವಿ
ಹಾರಕ್ಕೆ ಯೋಗ್ಯವಾದ ವಿಮಲ ಶೇಷ ಮಂಚ ೫

೮೮

ಶೇಷದೇವ ವಾರುಣೀಪತಿ ಪಾಹಿ ಪ

ಶೇಷದೇವ ತ್ರೈಘೋಷಣ ಮುಖ ಪರಿ
ಪೋಷಿಸು ಎಮ್ಮಭಿಲಾಷೆಯ ಸಲಿಸಿ ಅ.ಪ.

ಭಜಿಸುವೆ ಸರ್ವದಾ ಸುಜನರಭೀಷ್ಟವ
ಸುಜನಾರಾಧಕ ಭುಜಗೋತ್ತಂಸ ೧

ಪುಣ್ಯ ಚರಿತ ಸುಶರಣ್ಯಗೆ ಸುಬ್ರ
ಹ್ಮಣ್ಯದೇವ ಕಾರುಣ್ಯ ಮೂರುತಿ ೨

ವಾರುಣಿ ಸುಮುಖ ಸರೋರುಹ ದಿನಕರ
ತೋರು ತವಾಂಘ್ರಿ ಮಹೋರಗ ರಾಜ ೩

ಅಸಿತವಸನ ಹಲಮುಸಲಾಯುಧ ಧರ
ದ್ವಿಸ [ಹ] ಸ್ರೇಕ್ಷಣ ಸುಶರಣ ಪಾಲ ೪

ಪಾತಾಳಪ ಪುರುಹೂತನುತ ಜಗ
ನ್ನಾಥ ವಿಠಲನ ಪ್ರೀತಿ ವಿಷಯನೆ ೫

೮೯

ನೀಲಲೋಹಿತ ಡಮರುಗ ತ್ರಿಶೂಲ ಶೋಭಿತ ಪ

ಫಾಲನಯನ ಶುಂಡಾಲ ಚರ್ಮ ಸುದು
ಕೂಲ ಮೃಡ ಸತತ ಪಾಲಿಸು ಕರುಣದಿ ಅ.ಪ.

ನಂದಿವಾಹನ ನಮಿಪೆ ಖಳ
ವೃಂದ ಮೋಹನ
ಅಂಧಕರಿಪು ಶಿಖಿ ಸ್ಯಂದನ ಜನಕ ಸ
ನಂದನಾದಿ ಮುನಿ ವಂದಿತ ಪದಯುಗ ೧

ಸೋಮಶೇಖರ ಗಿರಿಜಾಸು
ತ್ರಾಮ ಲೇಖರಾ
ಸ್ತೋಮವಿನುತ ಭವ ಭೀಮ ಭಯಾಂತಕ
ಕಾಮರಹಿತ ಗುಣಧಾಮ ದಯಾನಿಧೆ ೨

ನಾಗಭೂಷಣ ವಿಮಲ ಸ
ರಾಗ ಭಾಷಣ
ಭೋಗಿಶಯನ ಜಗನ್ನಾಥ ವಿಠಲನ
ಯೋಗದಿ ಒಲಿಸುವ ಭಾಗವತರೊಳಿಡೊ ೩

೯೦

ಪಂಪಾಪುರನಿವಾಸ ಪ್ರಮಥರೇಶಾ ಪ

ತ್ವಂ ಪಾಹಿ ಪಾಹಿ ತ್ರಿಪುರಾರಿ ತ್ರಿನೇತ್ರ ಅ.ಪ.

ಕೈಲಾಸಸದ್ಮ ಚಿತಿಚೇಲ ಭೂಷಣ ಮನೋ
ಮೈಲಿಗೆಯ ಪರಿಹರಿಸೊ ನೀಲಕಂಠ

ಕಾಲ ಕಾಲಗಳಲ್ಲಿ ಕಾಲನಿಯಾಮಕನ
ಲೀಲೆಗಳ ತುತಿಪ ಸುಖ ನಾಲಿಗೆಗೆ ಕೊಡು ಸತತ ೧

ಪಾರ್ವತೀರಮಣ ನೀ ಮೋಹಶಾಸ್ತ್ರವ ರಚಿಸಿ
ಶಾರ್ವರೀಚರರ ಮೋಹಿಸಿದೆ ಹಿಂದೆ
ದೂರ್ವಾಸ ಶುಕ ವ್ಯಾಧ ಜೈಗೀಷ ರೂಪದಲಿ
ಈರ್ವಗೆ ಚರಿಯದಲಿ ಹರಿಯ ಮೆಚ್ಚಿಸಿದೆ ೨

ಸುರನದೀಧರ ನಿನ್ನ ಚರಿತೆಗಳ ವರ್ಣಿಸಲು
ಸುರಪಮುಖ ಸುಮನಸಾದ್ಯರಿಗಸದಳಾ
ಸ್ಮರನಪಿತ ಶ್ರೀ ಜಗನ್ನಾಥ ವಿಠ್ಠಲನ ಸಂ
ಸ್ಮರಣೆಯನು ಕೊಟ್ಟು ಉದ್ಧರಿಸು ದಯದಿಂದ ೩

೯೧

ಶಂಭೋ ಸುರಗಂಗಾಧರನೆ ಪಾಲಿಸಂಬಾರಮಣ ಲಿಂಗ ಪ

ನಂಬಿದವರಘ ಕಾದಂಬಿನಿ ಪಾವನ ಹೇ
ರಂಭ ಜನಕ ಕರುಣಾಂಬುಧಿ ಗುರುವರ ಅ.ಪ.

ಮುರಾರಿ ಮಹದೇವ ನಿನ್ನಯ ಪಾದ
ವಾರಿಜದಳಯುಗವ
ಸಾರಿದೆ ಸತತ ಸರೋರುಹೇಕ್ಷಣ ಹೃ
ದ್ವಾರಿಜದೊಳು ತೋರು ಗಾರುಮಾಡದಲೆನ್ನ
ಆರುಮೊಗನಯ್ಯ ಅಮಿತ ಗುಣಗುಣ
ವಾರಿನಿಧಿ ವಿಗತಾಘ ವ್ಯಾಳಾ
ಗಾರ ವಿತ್ತಪ ಮಿತ್ರ ಸುಭಗ ಶ
ರೀರ ದುರಿತಾರಣ್ಯ ಪಾವಕ ೧

ಇಳೆದೇರು ಇಂದು ಮೌಳೀ ಈಪ್ಸಿತಫಲ
ಸಲಿಸುವ ಘನತ್ರಿಶೂಲೀ
ಸಲೆ ನಂಬಿದೆನೊ ಹಾಲಾ ಹಲಕಂಠ ಎನ್ನ ನೀ
ಸಲಹೋ ಸಂತತ ರೌಪ್ಯಾಚಲವಾಸ ವರಪಂಪಾ
ನಿಲಯ ನಿರ್ಜರ ಸೇವಿತಾನಲ
ನಳಿನಸಖ ಸೋಮೇಕ್ಷಣನೆ ಬಾಂ
ದಳಪುರಾಂತಕ ನಿಜಶರಣವ
ತ್ಸಲ ವೃಷಾರೋಹಣ ವಿಬುಧವರ ೨

ದೃತಡಮರುಗ ಸಾರಂಗ ನಿನ್ನಯಪಾದ
ಶತಪತ್ರಾರ್ಚಿಪರ ಸಂಗ
ಸತತ ಪಾಲಿಸೊ ಜಗನ್ನಾಥ ವಿಠ್ಠಲನ ಸ
ನ್ನುತಿಸುವ ನೆರೆಧೀರ ಕ್ಷಿತಿಧರ ಧೃತಧನ್ವಿ
ಶತಮಖನ ಜೈಸಿದನ ಪುತ್ರನ
ಪಿತನ ಜನಕನ ಕೈಲಿ ಕೊಲಿಸಿದೆ
ಅತುಳ ಭುಜಜಲ ಭೂತಪಡೆ ಪಾ
ವನತಿ ಮುಖಾಂಭೋರುಹ ದಿವಾಕರ ೩

೯೨

ಶರಣು ಶರಣು ಪ

ಶರಣು ಶರಣು ಮೃತ್ಯುಂಜಯ ಶರಣು ಸಜ್ಜನರ ಭಯ
ಪರಿಹರಿಸು ಕರುಣಾಳು ಬಿನ್ನಪವ ಕೇಳು ಅ.ಪ.

ವಾಸವಾದ್ಯಮರನುತ ವನಜಸಂಭವನ ಸುತ
ನೀ ಸಲಹೊ ಕೈಲಾಸವಾಸ ಈಶ
ಕ್ಲೇಶ ಮೋದಾದಿ ಸಮ ತಿಳಿದು ಅಶ್ವತ್ಥಾಮ
ಶ್ರೀಶುಕ ದುರ್ವಾಸ ಸ್ಫಟಿಕ ಸಮಭಾಸ ೧

ವೈಕಾರಿಕಾದಿ ತ್ರೈರೂಪ ನಿನ್ನಯ ಕೋಪ
ಶೋಕಕೊಡುವುದು ದೈತ್ಯಜನಕೆ ನಿತ್ಯ
ಲೌಕಿಕಗಳೆಲ್ಲ ವೈದಿಕವಾಗಲೆನಗೆ ಮೈ
ನಾಕಿ ಹೃತ್ಕುಮುದೇಂದು ಭಕ್ತಜನ ಬಂಧು ೨

ಪವಮಾನತನಯ ನಿನ್ನವರಲ್ಲಿ ಕೊಡು ವಿನಯ
ದಿವಸ ಸವನಗಳಲ್ಲಿ ಎನ್ನಿರುವ ನೀ ಬಲ್ಲಿ
ಪವನ ದ್ವಿತಿಯರೂಪ ಸತತ ಎನ್ನಯಪಾಪ
ಅವಲೋಕಿಸದಲೆನ್ನ ಸಲಹೊ ಸುರಮಾನ್ಯ ೩

ಶೇಷನಂದನ ಶೇಷಭೂಷಣನೆ ನಿಶೇಷ
ದೋಷರಹಿತನ ತೋರು ಕರುಣವನು ಬೀರು
ಶ್ರೀ ಷಣ್ಮುಖನ ತಂದೆ ಸತತ ನೀ ಗತಿಯೆಂದೆ
ಶೋಷಿಸು ಭವಾಮಯವ ಬೇಡುವೆನು ದಯವ ೪

ಗರ್ಗ ಮುನಿಕರಪದುಮ ಪೂಜ್ಯ ಚರಣಾಬ್ಜ ಮಮ
ದುರ್ಗುಣಗಳೆಣಿಸದಲೆ ಜಗದೆ ಮೇಲೆ
ನಿರ್ಗತಾಶನ ಜಗನ್ನಾಥ ವಿಠಲನ ಸ
ನ್ಮಾರ್ಗವನೆ ತೋರು ಈ ದೇಹ ನಿನ ತೇರು ೫

೯೩

ಸೋಮಶಿವ ಶರ್ವ ಭವ ಶಿತಿಕಂಠ ನಿನ್ನಪದ
ತಾಮರಸಯುಗ್ಮಗಳಿಗಾನಮಿಸುವೆ ಪ

ಕಾಮಹರ ಕೈಲಾಸ ಹೇಮಗಿರಿಯಾವಾಸ
ರಾಮನಾಮನ ಭಜಿಪ ಉಮೆಯರಸ ಶಂಭೋ ಅ

ಮೃತ್ಯುಂಜಯ ಮೃಗಾಂಕ ಕೃತ್ತಿವಾಸ ಕೃಪಾಳೊ
ವಿತ್ತಪತಿ ಸಖ ವಿನಾಯಕರ ಜನಕ

ಭೃತ್ಯವರ್ಗಕೆ ಬಾಹಪಮೃತ್ಯು ಕಳೆದು ಸಂ
ಪತ್ತು ಪಾಲಿಸುವುದು ನಿವೃತ್ತಿ ಸಂಗಮಪ ೧

ಗೋಪತಿ ಧ್ವಜ ಘೋರ ಪಾಪ ಸಂಹರಣ ಹರಿ
ತೋಪಲೋಪಮ ಕಂಠ ಚಾಪಪಾಣೀ
ಶ್ರೀ ಪತಿಯ ಶ್ರೀನಾಭಿ ಕೂಪಸಂಭವತನಯ
ನೀ ಪಾಲಿಸೆಮ್ಮನು ವಿರೂಪಾಕ್ಷ ಗುರುವೆ ೨

ಭಸಿತ ಭೂಷಿತಡಮರು ತ್ರಿಸುಳಗೈಯನೆ ಶಂಭೋ
ಕಿಸಲಯೋಪಮ ನವಿರ ಶಶಿಭೂಷಣ
ಅಸುರಾರಿ ಶ್ರೀ ಜಗನ್ನಾಥ ವಿಠಲನ ಪದ
ಬಿಸಜ ಧ್ಯಾನವನೀಯೊ ಹಸನಾಗಿ ಕಾಯೊ ೩

೯೪

ದ್ವಾರಪಾಲಕರಿಗಾನಮಿಪೆ ನಿತ್ಯ
ಶ್ರೀ ರಮಣ ನಾರಯಣನ ಪುರತ್ರಯದೊಳಿಹ ಪ

ಜಯ ವಿಜಯ ಬಲಪ್ರಬಲ ಚಂಡ ಪ್ರಚಂಡ ನಿ
ರ್ಭಯ ನಂದ ಸುನಂದ ಕುಮುದ ಕುಮುದಾ
ನಯನ ಭದ್ರ ಸುಭದ್ರಾ ಧಾಮ ಸುಧಾಮ ಸಂ
ಪ್ರಿಯ ತಮನ ಆಜ್ಞಾಧಾರಕರೆಂದೆನಿಸುವ ೧

ಲಸದೂರ್ಧ್ವಪುಂಡ್ರ ದ್ವಾದಶನಾಮ ಶಂಖ ಸುದ
ರುಶನ ಸುಗದಾ ಪದ್ಮ ನಾಮ ಮುದ್ರಾ
ಬಿಸಿಜಾಕ್ಷ ಶ್ರೀತುಳಸಿ ಕುಸುಮ ಮಾಲಿಕೆ ಧರಿಸಿ
ನಸುನಗುತಹರ್ನಿಶಿಗಳಲಿ ಹರಿಯ ತುತಿಪಾ ೨

ಮಣಿಮಯ ಕಿರೀಟ ಕುಂಡಲ ಹಾರ ಪದಕ ಕಂ
ಕಣ ನಡುವಿನೊಡ್ಯಾಣ ಪೀತಾಂಬರ

ಕ್ವಣಿತನೂಪುರ ಗೆಜ್ಜೆ ಚರಣಾಭರಣ ಸುಲ
ಕ್ಷಣರಾದ ಸರ್ವಾಂಗ ಸುಂದರರೆನಿಸುವಾ ೩

ಕರದೊಳೊಪ್ಪುವ ಗದಾಯುಧ ಕುಂದರದನ ಕ
ಸ್ತುರಿನಾಮ ಮಾಣಿಕಕ್ಷತೆಯ ಧರಿಸಿ
ಪರಿಮಳಿಪ ಕುಸುಮ ಕೇಸರಿ ಗಂಧದಿಂ ಭಯಂ
ಕರರಾಗಿ ತೋರುವರು ನೋಳ್ಪರಿಗೆ ನಿತ್ಯ ೪

ಮೂರು ಬಾಗಿಲಲಿ ಶ್ರೀ ದೇವಿಯಿಪ್ಪಳು ವಾಯು
ಭಾರತಿ ಆಜ್ಞದಿಂದೀ ದೇವರು
ವೀರಜಯ ವಿಜಯಾದಿಗಳಿಗೆ ವಿಷ್ವಕ್ಸೇನ
ಪ್ರೇರಕನು ತಾನಾಗಿ ಶ್ರೀಶನರ್ಚಿಪನೆಂದು ೫

ಹೃದಯ ಶ್ರೋತ್ರ ಚಕ್ಷುವದನಾದಿ ಕರಣದೊಳು
ನದನದಿಗಳೊಳು ಮಹೋದಧಿಗಳೊಳಗೆ
ಉದಿತ ಭಾಸ್ಕರ ಮಂಡಲದಿ ದೇವಗೃಹದಿ
ಸದಸದ್ವಿಲಕ್ಷಣ ಸುದತಿಸಹ ಪೂಜಿಸುವ ೬

ದ್ರುಹಿಣ ಮೊದಲಾದ ಸುಮನಸ ಪೂಜ್ಯ ಚರಣಾಬ್ಜ
ಮಹಿಮ ಮಂಗಳಚರಿತ ಸುಗುಣ ಭರಿತ
ಅಹಿರಾಜ ಶಯನ ಜಗನ್ನಾಥವಿಠಲನ ಸ
ನ್ಮಹಿಮೆಗಳ ತಿಳಿಸಿ ತೋರಿಸಲಿ ಮನ್ಮನದೀ ೭

ತೀರ್ಥಕ್ಷೇತ್ರ

೯೫

ಸ್ಮರಿಸಿ ತೀರ್ಥಕ್ಷೇತ್ರ ಸಜ್ಜನರು ನಿತ್ಯದಲಿ
ಅರಣೋದಯದಲೆದ್ದು ಭಕ್ತಿಪೂರ್ವಕವಾಗಿ
ಕಠಿಣಶ್ರಮದಿ ಮಾಳ್ಪ ಪಾಪರಾಶಿಗಳ ಪರಿಹರಿಸುತ್ತ ಸಂತೈಸುವಾ ಪ

ಭಾಗೀರಥಿ ಸರಸ್ವತಿ ಯಮುನಾ ವಾರಾಣಾ
ಶ್ರೀ ಗೋದ ಫಲ್ಗುಣಿ ಶೋಣಭದ್ರಾ ನರ್ಮ
ದಾ ಗಂಡಕಿ ಭಿಮರಥಿ ತುಂಗಭದ್ರೆ ಪ್ರಯಾಗ ತ್ರಿವೇಣಿ ಹೇಮಾ
ವೇಗವತಿ ಗಾಯತ್ರೀ ಕಾಶಿಮಣಿಕರ್ಣಿ
ಕಾ ಗೌತಮಿ ವಿಯದ್ಗಂಗಾ ಕುಮುದ್ವತೀ
ಕಾಗಿನೀ ನೇತ್ರಾವತಿ ಹೈಮ ಸಿಂಧು ಪಾಪಾಘನಾಶಿನೀ ೧

ಸರಯು ಜಯಮಂಗಳ ಜಮದಗ್ನಿ ವರತಾಮ್ರ
ಪರಣಿ ಯೋಗಾನಂದ ಕೃತಮಾಲಕುಹು ಮಹೇ
ಶ್ವರಿ ಶಂಖ ಚಕ್ರವತಿ ಭವನಾಶಿನಿ ಗದಾಧರ ಮೇನಕಾ
ಧುನಾಶಿ ಗರುಡ ಮದಿರಾ
ಮರುದ್ವತಿ ಸ್ವರ್ಣಮುಖರಿ ವರ ಝುರತಾಪಿನಿ ಕಾಳಿ ಸೌ
ಪರಣಿ ದಕ್ಷಿಣೋತ್ತರಪಿನಾಕಿ ಕಪಿಲ ಶೀತಳ ಕಾನಂದ
ಕುರಮುಖಿ ಪ್ರಣವಸಿದ್ಧ ೨

ಕಾವೇರಿ ಸಿಧು ಮಾಲತಿ ಗಾರ್ಗಿಣಿ ಹರಿ
ದ್ರವತಿ ಇಂದ್ರಾಣಿ ಕುಂದ ಕುಂದಿನಿ ಶೈವ
ದೇವವತಿ ಪಾತಾಳ ಗಂಗಾ ಪುನಹ ನೀರಾ ಕುಮಾರಧಾರಾ
ಸಾವಿತ್ರಿ ದಾನ್ಯಮಾಲಾ ಪುಷ್ಪವತಿ ಲೋಕ
ಪಾವನಿ ಮೌಳಿ ಮೌಕ್ತಿಕ ಸಿಂಧು ಧರ್ಮಕು
ಶಾವಂತಿನಿ ಚಕ್ರತೀರ್ಥ ಭವ ನಾಶಿನಿ
ವರದಾ ಮಲಾಪಹಾರಿ ೩

ಸ್ವಾಮಿ ಪುಷ್ಕರಣಿ ಮಾನಸ ಚಂದ್ರ ಪುಷ್ಕರಣಿ
ಭೂಮಂಡಲದೊಳುತ್ತಮೋತ್ತಮ ತ್ರಿಪುಷ್ಕರಣಿ
ಶ್ರೀ ಮಧ್ವ ನಿತ್ಯ ಪುಷ್ಕರಣಿ ಸೀತಾ
ಪದ್ಮಸರ ಚಂದ್ರಭಾಗತೀರ್ಥ
ವಾಮನ ಮಯೂರ ಪಂಪಾಸರೋವರ ಪುಣ್ಯ

ಧಾಮ ವ್ಯಾಸ ಸಮುದ್ರ ಧವಳಗಂಗಾ ಸುಸಾ
ಧ್ಯಮೃತ ಸಮುದ್ರ ಗುರು ಭೀಮಸೇನತಟಾಕ
ರೋಮಹರ್ಷತೀರ್ಥ ೪

ದ್ವಾರಕಾನಗರ ಸಾಲಗ್ರಾಮ ಟರರ ಬದರಿ ಕೇ
ದಾರ ನರನಾರಾಯಣ ಶ್ರೀ ಮಜ್ಜಗನ್ನಾಥ ಶ್ರೀ ಮುಷ್ಣ
ಮೇರು ಪಾರ್ಶ್ವ ಮಂದರ ಸುಪಾರ್ಶ್ವ
ಮೈನಾಕ ಕೈಲಾಸ ಕಂಚಿ
ಶ್ರೀರಂಗನಾಥ ನೈಮಿಷ ದ್ವೈತವನ ಚಂಪ
ಕಾರುಣ್ಯ ಕಾಶಿ ಪಂಪಾವಂತಿಕಾ ಪುರಿ
ಗೌರಿ ಮಯೂರ ಸಿಂಹಾದ್ರಿ ಪಾಟಲ
ಹರಿದ್ವಾರ ಛಾಯಾಪಿಪ್ಪಲ ೫

ಕೇದಾರ ಸಾಗರ ಮಂದಾಕಿನಿ ಕುಸುಮವತಿ
ಆದಿಸುಬ್ರಹ್ಮಣ್ಯ ಕೋಟೇಶ್ವರ ನಂದಿ
ಪಾದ ಕ್ರೌಂಚಾದ್ರಿ ಮಹಾನಂದಿ ಶಂಕರ ನಾಮ
ನಾರಯಣ ನಿವರ್ತಿ
ವೇದಪಾದ ಯಯಾತಿ ಗಿರಿ ಕಾಲಹಸ್ತಿ ಕೌ
ಮೋದಕೀ ಪಾಡುರಂಗ ಕ್ಷೇತ್ರ ಶ್ರೀ ವಿಷ್ಣು
ಪಾದ ಗಯಾ ಕಾಳೇಶ್ವರೀ ಹಸ್ತನಾಪುರಿ
ಪಾಟಲೀ ಮಂತ್ರಾಲಯ ೬

ಗೋವರ್ಧನಾದ್ರಿ ಮೈನಾಕ ಮಂದರ ಮಲಯ
ಕೈವಲ್ಯನಾಥ ಕಾಶೀರ ಜಾಂಬವತಿ ವೃಂ
ದಾವನ ಧನುಷ್ಕೋಟಿ ವಾತಾಪುರಿ
ಕನ್ಯಾಕುವರಿ ಕೈಲಾದ್ರಿ ವೃಷಭಾ
ಶ್ರೀ ವಿರೂಪಾಕ್ಷ ಕುಂದರ ನಂದಪುರಿ ಮಾಯಾ
ಶ್ರೀವತ್ಸ ಗಂಧಮಾದನ ಚಿತ್ರಕೂಟ ದ್ವಾ
ರಾವತಿ ವ್ಯಾಘ್ರಪುರಿಗೋಕುಲ
ನರಾಚಲಾಸೌಭದ್ರಿ ಆದಿನಾಥ ೭

ಈ ಮಹಿಮಂಡಲದೊಳಿಪ್ಪ ತೀರ್ಥಕ್ಷೇತ್ರ
ನಾಮಗಳ ಕಾತ್ರಯದಲ್ಲಿ ಸರಿಸುತಿಹ
ಧೀಮಂತರಿಗೆ ಸಂಚಿತಾಪ ಪರಿಹರದಾನಂತರದಲಿ
ಸೋಮಾರ್ಕರುಳ್ಳನಕ ಸಕಲ ಭೋಗಗಳ ಸು
ತ್ರಾಮಲೋಕದಲುಣಿಸಿ ಕರುಣಾಳು ಪ್ರಾತ್ಯಕೆ ಸ್ವ
ಧಾಮ ಮುಕ್ತರ ಪಾಳ್ವನು ಅಹುದು
ಅಹುದೆಂದು ಸೂತ ಶೌನಕಗೆ ಪೇಳ್ದ ೮

ಈ ಭರತ ಖಂಡದೊಳಗುಳ್ಳ ತೀರ್ಥಕ್ಷೇತ್ರ
ವೈಭವಾಬ್ಜ ಭವಾಂಡ ಪಾರನದೊಳಗೆ ಹರಿ
ನಾಭಿ ಸಂಭವ ಪೇಳ್ದ ನಾರದನಿಗಿಸಿತೆಂದು
ಪರಮಕಾರುಣ ದಿಂದ
ಸ್ತ್ರೀಬಾಲ ಗೋವಿಪ್ರಮಾತ ಪಿತೃಗಳ ಧನ
ಲೋಭದಿಂದಲಿಕೊಂದ ಪಾತಕವ ಪರಿಹರಿಸಿ
ಶ್ರೀಭೂರಮಣ ಜಗನ್ನಾಥ ವಿಠ್ಠಲ ಕೊಡುವ
ಬೇಡಿದಿಷ್ಟಾರ್ಥಗಳನು ೯

ನದಿಗಳು

೯೬

ಭಾಗೀರಥ್ಯಾದಿ ನದಿಗಳ ತಾರತಮ್ಯ ನಿಜ
ಭಾಗವತ ತಿಲಕ ನಿಮಿರಾಜಗೊಲಿದು ವಸಿಷ್ಠ
ಯೋಗೀಶ ಪೇಳ್ದ ಸುಕಥಾಕುತೂಹಲವನು
ರಾಗದಲಿ ಕೇಳಿ ಜನರಯ್ಯಾ ಪ

ಒಂದು ದಿನ ಗೋದಾವರಿಯ ತಟದಿ ನಿಮಿರಾಜ
ಸಂದು ಯಜ್ಞವ ಮಾಡುತಿರಲಾಗ ಪರಮೇಷ್ಠಿ
ನಂದನೆನಿಪ ವಸಿಷ್ಠ ಮಹಮುನಿ ನಡೆತಂದ ಮೇಧಾಗಾರಕೆ

ಬಂದ ಯತಿವರನ ಮಣಿಪೀಠದಲಿ ಕುಳ್ಳಿರಿ,
ಮಂದಹಾಸದಲಿ ತನ್ನಯ ಮನೋವಾಂಛಿತವ
ಸುಂದರಾಧಿಪ ಬೆಸಸಿದಾ ೧

ವ್ರತಿಪತಿ ವಶಿಷ್ಠ ವೈಷ್ಣವಕುಲ ಶಿರೋರತುನ
ಶ್ರುತಿಶಾಸ್ತ್ರ ಸರ್ವಜ್ಞ ಗಂಗಾದಿ ಪುಣ್ಯತೀ
ರ್ಥ ತಾರತಮ್ಯ ಎನಗರುಪು ಕರುಣದಲೀ
ಮತ್ತಿತನೆನುತ ಪದಕೆರಗುವಾ
ಕ್ಷಿತಿಪನೋಕ್ತಿಯ ಕೇಳುತಾನಂದ ಶರಧಿಯೊಳು
ಗತನಾಗಿ ರೋಮ ಲಕ್ಷಣ ಕಳೇವರದಿ ಪುಳ
ಕಿತವಾದವನ ಕಾರುಣ್ಯದಲಿ ಯತಿವರನುನ್ನತ
ನೃಪತಿಗಿಂತೆಂದನು ೨

ಕೇಳು ಜನನಾಥ ಮಹಭಾಗ ನಿನ್ನಯ ಪ್ರಶ್ನ
ದೇಳಿಗೆಗೆ ಎನ್ನ ಸಂತೋಷ ಕಲ್ಪತರು ತ
ತ್ಕಾಲ ಉದಿಸಿ ಫಲೋನ್ಮುಖವಾಯಿತು
ಶಿಷ್ಯರೊಳು ಮೌಳಿಮಣಿ ನೀನಹುದು
ಮಾಲತಿ ಮೊದಲೊಂಡು ನಿಖಿಳ ನದಿಗೊಳಿಪ್ಪ
ಶ್ರೀಲೋಲನ ಸುಮೂರ್ತಿಗಳು ತಾರತಮ್ಯ ಸುವಿ
ಶಾಲವ ನಿನಗೊರೆವೆ ಮಾನವ ಚಂಚಲಿಸದೆ
ಇದನಾಲಿಪುದು ನೀನೆಂದನು ೩

ಹರಿಪಾದನಖದ ಸಂಸ್ಪರ್ಶ ಮಾತ್ರದಿಂದಲಿ
ಸುರತರಂಗಿಣಿ ಶ್ರೇಷ್ಠಳೆನಿಸುವಳು ನದಿಗಳೊಳು
ದರರಥಾಂಗನದಾ ವಿಧೃತಪಾಣಿ ಮಾಧವನು
ದೊರೆಮೆನಿಪನಾ ತೀರ್ಥಕೆ
ಸರಿತಾಗಗಣ್ಯ ಗೋದಾವರಿ ನಳಿನಿಗಿಂ
ಕೊರತೆಯೆನಿಪಳ್ಳೆ ವತ್ತು ಗುಣದಲಿ ಶಂಖ
ಚರಣ ಸುಗದಾಬ್ಜ ಶೋಭಿತ ವೀರನಾರಾಯಣ-
ರಸೆನಿಪನಾ ಸಲಿಲಕೆ ೪

ಹರಜಟೋದ್ಭವ ಕುಶಾವರ್ತಿಗೆ ಸಹಸ್ರಗುಣ
ವರಳೆನಿಪ ಕೃಷ್ಣಾಖ್ಯಾಸ್ಲಂದನದಿ ಚಾರು ಕಂ
ಬುರಲಿ ವಾರುಚಿ ಧನುರ್ಧಾರಿ ಯಮನಂದನಲಿ
ವಿಹರಿಸುತಿಹನಾಜಲದೊಳು
ತುರುಗಾಯ್ದ ದೇವನಂಗಜ ನದಿಗೆ ಈರೈದು
ನೆರೆ ಗುಣವಿರುವ ಹೀನ ವಾಗ್ದೇವಿ ಶರಧಿಯೊಳು ಪು
ಷ್ಕರನಾಭ ಆ ಸರಸ್ವತಿ ಸಮಳು ಕಾವೇರಿ
ಗೋದ ರಂಗನಾಥನೆನಿಪ ೫

ಆ ಯಮಳನದಿಗಳಿಗೆರಡು ಗುಣಾಧಮ ಸರಯು
ತೋಯಾಧಿಪತಿ ರಾಮ ಸರಯು ನೀರೆಂದು ಗುಣ
ದಿ ಯಮುನೆ ಕಡಿಮೆನಿಪಳಲ್ಲಿ ದಾಮೋದರ
ವಿಹಾಯ ಸಮಮಣಿತನಯಳೆ
ಸ್ಥಾಯಕೆ ಚತುರ್ಬಾಹು ವಿಷ್ಣು ಕಾವೇರಿಗೆ
ರಾಯಕೇಳ್ವರಾಹಿನೂರೊಂದುಗುಣ ಕಡಿಮೆ
ನಾಯಕ ವರಾಹದೇವಾ ೬

ಸಿಂಧು ಭವನಾಶಿಗೀರ್ವರು ಸಮರು ಕ್ಷೀರಾಬ್ಧಿ
ಮಂದಿರ ನೃಸಿಂಪರಲ್ಲಿಹರು ಭವನಾಶನಿಗೆ
ಸುಂದರ ಕುಮುದ್ವತಿಯ ಕಿಂಚಿತ್ಗುಣಾಧಮಳು
ತಂದೆಯೆನಿಪ ತ್ರಿವಿಕ್ರಮ
ಒಂದೆನಿಸುವುವು ನಾಲ್ಕು ನದಿಗಳು ಗುಣಗಳಿಂದ
ಮುಂದಿಪ ಪದದಿ ಪೇಳ್ವೆ ಪೆಸರು ಹರಿರೂಪ ನೆಲ
ದಿಂದಲಿ ಶ್ರೀಮಂತನೆನುತ ಕರುಣದಲಿ
ತಮ್ಮಿಂದೀರಗಿಂತೆಂದನೂ ೭

ವಾಜಿವದನು ಮಂಝುರಾನದಿಯೊಳಿಹನು ನವ
ರಾಜೀವನಯನ ಶ್ರೀಧರ ಭೀಮರಥಿಯೊಳಿಹ
ರಾಜಶಯನಾನಂತ ತಾಮ್ರಪರ್ಣಿಯೊಳಗೆ
ವಿರಾಜಿಪ ಮಲಾಪಹಾರಿ

ಭಾಜನದೊಳಿಪ್ಪ ದುಷ್ಟ ಜನರನು ಮರ್ದಿಸುವ
ಶ್ರೀ ಜನಾರ್ದನ ನಾಲ್ಕು ನದಿಗಳು ದ್ವಿಗುಣದಿಂದಾ
ಈ ಜಗತಿಯೊಳಧಮರೆನಿಸುತಿಪ್ಪರು ನಿತ್ಯ
ನೈಜಭಕ್ತಿ ಜ್ಞಾನದಿ ೮

ಭೀಮರಥಿ ಸಮ ಪಿನಾಕಿನಿಯೊಳಗೆ ಕೇಶವನು
ಭೂಮಿಯೊಳು ಪೃಥಕು ಪೃಥಕು
ಸಮಾನವೆನಿಪವು ಪಿನಾಕಿನಿಗೆ ತಮೊಳಸಮವೊಪ್ಪುತ
ಸುಖ ಜ್ಞಾನದಿ
ಶ್ರೀ ಮನೋರಮ ಕೇಶವಾದಿ ರೂಪಗಳಿಂದ
ಸ್ವಾಮಿಯೆನಿಸುವನಲ್ಲ ಸ್ನಾನಾದಿ ಸತ್ಕರ್ಮ
ಧೀಮಂತರಾಚರಿತೆ ಪ್ರತಿದಿನದಿ ಧರ್ಮಾರ್ಥ ಕಾಮ
ಮೋಕ್ಷ ಗಳೀವನೊ ೯

ಈ ನದಿಗಳೆರಡು ಗುಣ ಪುಷ್ಕರಣಿನಿಚಯ
ನ್ಯೂನವೆನಿಪವು ಮುಕ್ತಿ ದತ್ತಾತ್ರಯನು ಕೃಷ್ಣ
ವೇಣಿಗೆ ಸಮಾನ ಚಂದ್ರ ಸ್ವಾಮಿ ಪುಷ್ಕರಣಿ
ಮಾನಸ ಸರೋವರದೊಳು
ಜ್ಞಾನಾತ್ಮ ವಾಮನನ ಶ್ರೀ ಭೂ ಸಹಿತ ಪ್ರಸ
ನ್ನಾನನಾಬ್ಜದಿದರೆ ಜಘನಸ್ಥಿತಾಭಯ ಸು
ಪಾಣಿ ವೆಂಕಟನ ಮಧುಸೂದನನ ತ್ರಿಸ್ಥಳದಿ
ಧೇನಿಪುದು ಎಂದಾ ೧೦

ದೇವಖಾತಗಳು ಶತಗುಣಕಡಿಮೆ ಮಾನಸ ಸ
ರೋವರಕೆ ಇತರ ಪುಷ್ಕರಣಿಗಳಿಗಲ್ಪಗುಣ
ಭಾವಿಸುವುದಲ್ಲ ಸುಗಧಾಧರನ ಪಾಪಿಗಳ
ಪಾವನವಗೈವ ಕ್ಷುದ್ರಾ
ಪ್ರಾವಹಿಗಳೀರೈದು ಗುಣದಿ ಕಡಿಮೆ ಲಕ್ಷ್ಮೀ
ದೇವಿಪತಿ ನಾರಾಯಣನ ಚಿಂತಿಸೆಂದು ನೃಪ

ಗಾ ವಶಿಷ್ಠ ಮುನೀಶ ಪೇಳ್ದ ಶ್ರೀಪ್ರದಲಿ
ಭವನೋವ ಪರಿಹರಿಪುದೆಂದು ೧೧

ಈ ಸಲಿಲತೀರ್ಥಂಗಳೆರಡು ಗುಣದಿ ತಟಾಕ
ಶೇಷಪರ್ಯಂಕ ಅಚ್ಯುತನಿಹನು ಸಜ್ಜನರ
ದೋಷಗಳ ಕಳೆವ ವಾಪಿಗಳೆರಡು ಕಡಿಮೆ
ವಾಸವಾಗಿಹನು ಚಕ್ರಿ
ಘೋಷಗೈವ ಧರಾಂತಕೂಪಗಳೊಳಿರುತಿಹ ನಾ
ಕೇಶನದಿಗಳ ತಾರತಮ್ಯ ರೂಪಗಳನುಪ
ದೇಶಿಸದೆ ಸರ್ವವು ನಿನಗೆ ಮಹಾರಹಸ್ಯವಿದು
ಪಾಸನಗೈವುದೆದೆಂದು ೧೨

ಈ ತೆರದಿ ನಿಮಿರಾಜಗೋಸುಗ ವಶಿಷ್ಠಮುನಿ
ತಾ ತಿಳಿದ ಕಥಾತಿಶಯ ಪರಮ ವಿಬುಧರು ಧ
ರಾತಳದೊಳಿಪ್ಪ ತೀರ್ಥಗಳಲ್ಲಿ ಸ್ನಾನ ಜಪ
ಪ್ರೀತಿಯಿಂದಾಚರಿಸಲು
ಶೀತಾಂಶು ಕಮಲಾಪ್ತರುಳ್ಳನಕ ಸುರಪತಿ ನಿ
ಕೇತನದಿ ವಿವಿಧ ಭೋಗಗಳಿತ್ತು ಶ್ರೀ ಜಗ
ನ್ನಾಥ ವಿಠ್ಠಲ ಪಾಲಿಸುವನು ತನ್ನವರ
ಸಂಪ್ರೀತಿಯಿಂದನುರಾಗದೀ ೧೩

೯೭

ಶ್ರೀಶೈಲದೊಳಗಿಪ್ಪ ಸ್ವಾಮಿ ಪುಷ್ಕರಣಿ ಇತಿ
ಹಾಸವ ದಿಲೀಪನೃಪ ಬೆಸಗೊಳಲು ಕೇಳಿ ದು
ರ್ವಾಸಮುನಿ ಪೇಳ್ದ ಇನಿತೆಂದು ಸಜ್ಜನರಿದನು
ಕೇಳಿ ಸಂತೋಷಿಸುವುದು ಪ

ಮುನಿಕುಲೋತ್ತಮ ನೆನಿಸಿ ದುರ್ವಾಸಋಷಿ ದಿಲೀ
ಪನ ಸದನವೈದಿರಲು ಕೇಳಿ ಸಂತೋಷದಲಿ

ವಿನಯೋಕ್ತಿಯಿಂದ ತಲೆವಾಗಿ ಕರಗಳ
ಮುಗಿದು ವಿಜ್ಞಾಪಿಸಿದನು ಋಷಿಗೆ
ಅನಿಮಿಷೇಶಾ ವೆಂಕಟನ ನಾಮಧೇಯ ಕುಂ
ಭಿಣಿ ಯೊಳಿಪ್ಪಾಖ್ಯಾನ ತೀರ್ಥಗಳ ವೈಭವಗ
ಳೆನಗರುಪುವುದು ಯೆಂದು ಭಕ್ತಿಯಲಿ ಬೆಸಗೊಳಲು
ದುರ್ವಾಸ ಪೇಳೊದಗಿದಿ ೧

ಕೇಳು ರಾಜೇಂದ್ರ ವೆಂಕಟ ಪರ್ವತನು ಮೇರು
ಶೈಲಾತ್ಮಜನು ವಾಯು ಶೇಷರ ಸುಸಂವಾದ
ಮೂಂದಿಂದ್ಯೈವತ್ತು ಸಾಹಸ್ರಯೋಜನದ
ಸ್ವರ್ಣ ಮುಖರೀ ತೀರದಿ
ಬೀಳಲ್ಕೆ ನೊಂದು ಪ್ರಾರ್ಥಿಸಿದ ಶೇಷನು ಎನ್ನ
ಮ್ಯಾಲೆ ಮಲಗಿಪ್ಪ ತೆರದಂತೆ ದಯದಿಂ ನೀನೆ
ಪಾಲಿಸೆಂದೆನೆ ಬಂದು ನೆಲೆಸಿದುದರಿಂದ ಗಿರಿ
ಶೇಷಾದ್ರಿಯೆನಿಸುತಿಹುದು ೨

ಈ ನಗೋತ್ತಮದಾದಿ ಮಧ್ಯಾವಸಾನ ಪ್ರ
ಸೂನು ಫಲ ಸಂಯುಕ್ತ ಸಾನುಗಳ ಸುರುಚಿಕೋ
ದ್ಯಾನಗಳನುಳಿದು ಲಕ್ಷ್ಮೀ ಸಹಿತ ಸ್ವಾಮಿ
ಪುಷ್ಕರಣಿ ತೀರ್ಥದ ತಟದಲಿ
ಶ್ರೀನಿವಾಸನು ಬಂದು ನಿಂತ ಕಾರಣವೆನಗೆ
ನೀನರುಪುವುದು ಯೆಂದು ಬೆಸಗೊಳಲು ದುರ್ವಾಸ
ಮುನಿ ಪೇಳಿದ ಪೂರ್ವದಿತಿಹಾಸ ಇನಿತೆಂದು
ನೃಪಗೆ ಹರುಷೋದ್ರೇಕದಿ ೩

ತೀರ್ಥೋತ್ತಮತ್ವ ಸಾಪೇಕ್ಷಿಯಿಂದಲಿ ಬ್ರಹ್ಮ
ಪತ್ನಿ ಪೂರ್ವದಲಿ ಬ್ರಹ್ಮಾವರ್ತ ದೇಶದೊಳ
ಗುತ್ತಮ ಶೋಕನಂ ಭಜಿಸುತಿರೆ ತಾಪಸೋತ್ತಮ
ಪುಲಸ್ತಾಖ್ಯ ಮುನಿಪ
ತತ್ತೀರದಲಿ ತಪವಗೈವೆನೆಂದೆನುತ ಬರೆ

ಪುತ್ರನೆಂದರಿದು ಮನ್ನಿಸದಿರಲು ಕೋಪದಲಿ
ಇತ್ತ ಶಾಪವ ನೀನಪೇಕ್ಷಿಸಿದ ತಪವು
ನಿಷ್ಫಲವಯ್ಯೆದಲೆಂದು ನುಡಿದ ೪

ನದ್ಯೋತ್ತಮತ್ವ ಜಾಹ್ನವಿಗಿರಲಿ ಗುಣಗಳಿಂ
ಸ್ವರ್ಧುನಿಯು ನೀಚಳಾದರೆಯು ಸರಿ ಲೋಕ ಪ್ರ
ಸಿದ್ಧ ನದಿಗಳೊಳು ಉತ್ಕೃಷ್ಟಳಾಗಲಿ ವಿಷ್ಣು
ಪಾದ ಪ್ರಸಾದದಿಂದ
ಉದ್ಧಟೋಕ್ತಿಯ ಕೇಳಿ ವಾಗ್ದೇವಿ ನುಡಿಗಳು ಭ
ವದ್ವಂಶರೆಲ್ಲ ರಾಕ್ಷಸರಾಗಿ ಬಹಳ ವಿ
ಷ್ಣುದ್ವೇಷ ಸಂಪಾದಿಸಲಿಯೆನಲು ಮುನಿವರನು
ಪದಕೆರಗಿ ಬಿನ್ನೈಸಿದ ೫

ಅನಭಿಜ್ಞ ಲೋಕೋಪಕಾರ ತಪವೆಂದರಿಯ
ದನುಚಿತೋಕ್ತಿಗಳನಾಡಿದೆ ಮಯಾಕೃತದೋಷ
ವೆಣಿಸದೆ ವಿಶಾಪವಿತ್ತೆನ್ನನುದ್ಧರಿಸೆಂದು
ಮುನಿವರನು ಸಂಪ್ರಾರ್ಥಿಸೆ
ಪುನರಪಿ ವಿಶಾಪವಿತ್ತಳು ಪ್ರಸನ್ನುಖಳಾಗಿ
ಜನಿಸಲೀ ಭವದ ಪ್ರಾಂತಕ್ಕೆವರ ವಿಭೀ
ಷಣ ವಿಷ್ಣು ದಾಸ ಕಲ್ಪ ಸ್ಥಾಯಿಯೆಂದು
ಭಗವದ್ಧ್ಯಾನಪರಳಾದಳು ೬

ತೀರ್ಥೋತ್ತಮತ್ವ ಸಾಪೇಕ್ಷಯಿಂ ವಾಗ್ದೇವಿ
ಮತ್ತು ತಪದಿ ಪ್ರೀತಿಗೊಳಿಸಲ್ಕೆ ದೇವದೇ
ವೋತ್ತಮನು ಸನ್ನಿಧಾನಕ್ಕೈದೆ ಕಂಡು
ಬಿನ್ನೈಸಿದಳು ವಾಂಛಿತವನು
ವ್ಯರ್ಥವಾಯಿತು ತಪವು ಬಹ್ಮ ಶಾಪದಲಿ ತೀ
ರ್ಥೋತ್ತಮತ್ವವು ಕರುಣಿಸೆಂದು ಕೇಳ್ದುದಕೆ ಪ್ರ
ತ್ಯುತ್ತರವ ನುಡಿದ ಹರಿಬ್ರಹ್ಮಾಣಿಜವದನೆ
ಇನಿತೆಂದು ಕಾರುಣ್ಯಸಿಂಧು ೭

ನದಿಯರೂಪಕೆ ಬ್ರಹ್ಮಶಾಪ ನಿನಗಾಯಿತ
ಲ್ಲದೆ ಸರೋವರಕೆ ಬ್ಯಾರಿಲ್ಲ ಪುಷ್ಕರಣಿಗಳೊ
ಳಧಿಕಳೆಂದೆನಿಸಿ ಶೇಷಾಚಲದೊಳಿರು ಪೋಗು
ಸ್ವಾಮಿ ಪುಷ್ಕರಣಿ ಎನಿಸಿ
ವಿಧಿಪತ್ನಿ ಶೇಷನೋದ್ದೇಶ ತ್ವತ್ ಸನ್ನಿಧಾ
ನದಿ ವಾಸವಾಹೆ ಸಂದೇಹವಿಲ್ಲಿದಕೆ ಸ
ರ್ವದ ನಿನ್ನ ಮಹಿಮೆ ಕೀರ್ತನೆ ಮಾಳ್ಪ
ಸಜ್ಜನರಿಗಖಿಳಾರ್ಥವೀವೆನೆಂದ ೮

ಮೂರುವರೆ ಕೋಟಿ ತೀರ್ಥಗಳು ಭುವನತ್ರಯದೊ
ಳಾರಾಧಿಸಿದರೆಯೆನ್ನ ಸ್ವಸ್ವ ಪಾಪೌಘ ಪರಿ
ಹರಗೋಸುಗ ಪೇಳೆನಿನಿತೆಂದು ಅವರಿಗೆ
ಧನುರ್ಮಾಸ ಸಿತಪಕ್ಷದ
ಈರಾರುದಿನದಲರುಣೋದಯಕೆ ತೀರ್ಥ ಪರಿ
ವಾರನೈದಿರಿ ಶುದ್ಧರಾಗುವಿರಿಯೆಂದು ತ
ತ್ತೀರದಲಿ ವಾಸವಾದನು ಮಹಪ್ರಭು ತೀರ್ಥ
ಪ್ರೇಷ್ಯತ್ವ ವಾಣಿಗಿತ್ತ ೯

ವಾಣಿದೇವಿಯು ತೀರ್ಥರೂಪಳಾಗಲು ಕೃಷ್ಣ
ವೇಣಿಸಮ ಬಕುಳ ಮಾಲಿಕೆ ತೀರ್ಥ ಭೂಮಾಭಿ
ಮಾನಿತ್ವ ಐದಿದಳು ಶ್ರೀದೇವಿಯಾಜ್ಞಧಿಂ
ಹರಿಗೆ ನೈವೇದ್ಯರಚಿಸಿ
ಪಾನೀಯ ಧೀ ಭೋಗ ಪತ್ನಿ ಪೂರ್ವದಿ ಸನ್ನಿ
ಧಾನದಲ್ಲಿಪ್ಪೆನೆಂದೆನುತ ಪ್ರಾರ್ಥಿಸೆ ಶೇಷ
ಸಾನು ನೀ ತೀರ್ಥಭೂಮಾಧಿ ಪತ್ಯವನು
ತಾನಿತ್ತ ಕಮಲಾಕಾಂತನು ೧೦

ಸ್ವಾಮಿ ಪುಷ್ಕರಣಿ ನವತೀರ್ಥಮಾನಿಗಳಿಗೆ ಸು
ಧಾಮವೆನಿಸುವಳು ತತ್ತನ್ನಾಮಗಳು ಪೇಳ್ವೆ

ಶ್ರೀ ಮಧ್ವರಹ ಧನಪಗಾಲ್ವ ಮಾರ್ಕಾಡೇಯ
ಅಗ್ನಿಯನು ಋಣವಿಮೋಚನಿ
ಈ ಮಹಾ ವಾಯು ತೀರ್ಥಗಳ ಸುಸ್ನಾನಲ
ಕ್ಷ್ಮೀ ಮನೋಹರನ ದರುಶನ ತತ್ಪಸಾದಾತ್ರ
ಯಿ ಮೂರುಲೋಕದೊಳು ದೊರೆವುವತಿ ದುರ್ಲಭವು
ಅಲ್ಪಾಧಿಕಾರಿಗಳಿಗೆ ೧೧

ಕವಿಭಿರೀಡಿತ ಪೂಜ್ಯನೆನಿಸುವನು ಪದ್ಮಸಂ
ಭವನು ಪೂಜಕನೆನಿಪ ನೈವೇದ್ಯಕರ್ತೃ ಭಾ
ರ್ಗವಿಯೆನಿಪಳೆಂದೆಂದು ಸೇವಿಸುವ ಜನರೊಳಗೆ
ಶರ್ವಶಕ್ರಾರ್ಕ ಮುಖ್ಯ
ದಿವಿಜಗಣವಿಹರೆಂದು ಚಿಂತಿಸದೆ ಮರೆದು ಮಾ
ನವರೆ ವರ್ತಿಪರೆಂದು ತಿಳಿವವನು ಘೋರ ರೌರವ
ನರಕ ಯ್ಯೆದಿ ಚಾಂಡಾಲ ಯೋನಿಯೊಳು ಪುಟ್ಟುವ
ಧರಾತಳದೊಳೆಂದ ೧೨

ಮೇರುನಂದನ ವೈಕುಂಠಾದ್ರಿಶತಯೋಜನದ
ಮೇರೆಯೊಳು ಪುಣ್ಯತೀರ್ಥಗಳಿಪ್ಪವಲ್ಲೆಲ್ಲ
ಆರಧಿಕ ಅರವತ್ತು ಕೋಟಿ ಸಂಖ್ಯೆಯಲಿ
ಮುಖ್ಯಾಮುಖ್ಯ ಭೇದದಿಂದ
ನೂರೆಂಟು ತೀರ್ಥಗಳು ಮುಖ್ಯವೆನಿಸುವುವಿದರೊ
ಳಾರುತ್ತಮೋತ್ತಮವುಗಳ ನಾಮ ಪೇಳ್ವೆನು ಕು
ಮಾರಧಾರಕ ಪಾಂಡು ಪಾಪನಾಶನಿ ಸ್ವಾಮಿ
ತುಂಬರ ಆಕಾಶಗಂಗ ೧೩

ವಸುರುದ್ರ ಕಾಣ್ವಗ್ನಿ ಮನ್ವಿಂದ್ರಯಮ ಸೋಮ
ಬಿಸರುಹ ಪ್ರೀಯ ನವಪ್ರಜ ಆಶ್ವಿನಿಗಳು ಶುಕ
ಪಶು ಯಕ್ಷ ಯಮ ಭೌಮ ಪಾನಿ ಭದ್ರವು
ಜಗಜ್ಜಾಡ್ಯಹರ ಬಾರ್ಹಸ್ಪತಿ
ದಶಪ್ರಚೇತಸ ಗರುಡ ಶೇಷವಾಸುಕಿಯು ಹೈ

ಬ್ಜಸುರ ನಾರದ ವೈಶ್ವದೇವ ಸ್ವಾಹಾಸ್ವಧಾ
ಋಷಿ ಹಸ್ತಿ ಜಾಹ್ನವೀ ಕಾವೇರೀ ವಾರುಣೀ
ನಾರಾಯಣಾದಿ ಪಂಚ ೧೪

ಶಿವರೂಪಿ ದೂರ್ವಾಸ ಪೇಳ್ದನಿನಿತೆಂದು ಜಾ
ಹ್ನವಿಯೊಳಬ್ದ ಸ್ನಾನಫಲ ಧನುರ್ಮಾಸದೊಳು
ನವತೀರ್ಥಯಕ್ತ ವಾಗ್ದೇವಿ ಪುಷ್ಕರಣಿಯೊಳು
ಶುಕ್ಲಪಕ್ಷ ದ್ವಾದಶಿ
ದಿವಸದಿ ಶುಚಿರ್ಭೂತನಾಗಿ ಸಂತೋಷದಲಿ
ವಿವರಾಗ್ರಜೋದಯದಿ ಸ್ನಾನವನು ಮಾಡೆ ಐ
ದುವನು ಸಂಶಯವಿಲ್ಲವೆಂದು ನೃಪತಿಗೆ ಪೇಳ್ದ
ಶಿಷ್ಯನೆಂದರಿದು ದಯದಿ ೧೫

ನಾರದ ಮುನೀಂದ್ರನುಪದೇಶದಿಂ ದಕ್ಷನ ಕು
ಮಾರಕರು ಸಾಹಸ್ರ ತಮ್ಮ ತಮ್ಮಾಶ್ರಮದ
ತೀರದಲಿ ತೀರ್ಥಗಳ ನಮಿಸಿದ ಕಾರಣದಿ
ದಾಕ್ಷಣ್ಯವೆನಿಸುತಿಪ್ಪದು
ಭೈರವಾಷ್ಟ ತೀರ್ಥ ಸಿದ್ಧಿಪ್ರದಾಯಕ ಕು
ಮಾರಧಾರಿಕ ಪಶ್ಚಿಮದಲಿಹವು ಎಂಟಧಿಕ
ನೂರು ತೀರ್ಥಗಳಿಗಾಸ್ಪದವಾದ ಕಾರಣದಿ
ತೀರ್ಥಾದ್ರಿಯೆನಿಸುತಿಹುದು ೧೬

ಭೂತಳಾಧಿಪ ದಿಲೀಪನಿಗೆ ದುರ್ವಾಸಮುನಿ
ತಾ ತಿಳಿ ಪುದಿತಿಹಾಸ ಶೌನಕಾದ್ಯರಿಗೆ ವರ
ಸೂತ ಋಷಿಪುಂಗವನು ಪೇಳ್ದ ವೈಕುಂಠ ಶೈಲಸ್ವಾಮಿ
ಪುಷ್ಕರಣಿಮಹಿಮೆ
ಪ್ರೀತಿಯಿಂದಲಿ ತಿಳಿದು ಪಠಿಸುವವರಿಗೆ ಜಗ
ನ್ನಾಥ ವಿಠಲ ಮನೋವಾಂಛಿತಗಳಿತ್ತು ಪುರು
ಹೂತ ಲೋಕದಲಿ ಸುಖಬಡಿಸಿ ಪ್ರಾಂತಕೆ
ತನ್ನ ಪುರವನ್ನೈದಿಪ ಕೃಪಾಳು ೧೭

೯೮

ಜನನಿ ಜಾಹ್ನವಿ ಜಗತ್ರಯ ಪಾವನಿ
ಪ್ರಣತಕಾಮದೆ ಪದ್ಮಜಾಂಡ ಸಂಭೂತೆ ಪ

ಸೃಷ್ಟೀಶ ಪದಜಾತೆ ವಿಶ್ವಮಂಗಳ ಮಹೋ
ತ್ಕೃಷ್ಟ ತೀರ್ಥಗಳೊಳುತ್ತಮಳೆನಿಸುವೇ
ಕಷ್ಟವರ್ಜಿತವೆನಿಪ ತ್ರಿಪಥಗಾಮಿನಿ ದಯಾ
ದೃಷ್ಟಿಯಿಂದಲಿ ನೋಡು ಪ್ರತಿದಿನದಿ ಎನ್ನಾ ೧

ಕರ್ಕರಾಶಿಗೆ ಕರ್ಮ ಸಾಕ್ಷಿಯೆನಿಸುತಿಹ
ಅರ್ಕದೇವನು ಬಂದ ಸಮಯದಲ್ಲಿ
ಶರ್ಕರಾಪ್ಪರು ಸ್ನಾನಗೈಯೆ ದುರಿತಗಳು ಸಂ
ಪರ್ಕವಾಗದ ತೆರದಿ ಸಂತೈಪೆ ದಯದಿ ೨

ಕಾರುಣಿಕ ಬಹಿರಾವರಣದಿಂದ ನೀ ಪೊರಟು
ವಾರಾಹಿಯೊಡಗೂಡಿ ಭಕ್ತಜನರ
ಪ್ರಾರಬ್ಧ ಕರ್ಮಗಳನುಣಿಸಿ ಮುಕ್ತರನ ಮಾಳ್ಪೆ
ದೂರಗೈಸುವೆ ಸಂಚಿತಾಗಾಮಿಗಳನೂ ೩

ನಂದಿನೀ ನಳಿನಿ ಸುಸೀತಾ ಮಲಾಪಹರ
ಳೆಂದ ಮಾತ್ರದಿ ಪುನೀತರನು ಮಾಳ್ಪೆ
ಸಂದರುಶನ ಸ್ವರುಶನ ಸ್ನಾನಗಳ ಫಲ ಪು
ರಂದರಾರ್ಯರೆ ಬಲ್ಲರಲ್ಪರು ಅರಿಯರು ೪

ಮಾತೆ ವಿಜ್ಞಾಪಿಸುವೆ ಬಿನ್ನಪವ ಕೇಳು ಸಂ
ಪ್ರೀತಿಯಿಂದಲಿ ಕರುಣಿಸೆನಗೆ ಇದನೆ
ಶ್ರೋತವ್ಯ ವಕ್ತವ್ಯ ಮಂತವ್ಯ ಸ್ತವ್ಯ । ಜಗ
ನ್ನಾಥ ವಿಠ್ಠಲನೊಬ್ಬನೆಂದು ತಿಳಿವಂತೇ ೫

೯೯

ಶ್ರೀ ಕೃಷ್ಣವೇಣಿ ಕಲ್ಯಾಣೀ
ಪಂಕಜಾಸನ ಸ್ವೀಕೃತ ಬುಧ ಶ್ರೇಣೀ
ನೀ ಕೃಪೆಯಿಂದ ಮಹಾಕೃತು ಹರಿಯ ನಿ
ಜಾಕೃತಿ ತೋರ್ದೂರೀಕೃತ ದುರಿತೇ ಪ

ಭ್ರಮರ ಕುಂತಳ ಶೋಭಿತೇ । ಸುಜನ ಮಾತೆ
ಶಮಲ ಸಂಕೂಲ ನರ್ಧೂತೆ
ಸುಮನಸ ಜನ ಸನ್ನುತೆ ಸನ್ಮೋದ ದಾತೆ
ವಿಮಲ ಸದ್ಗುಣ ಸಂಭೃತೆ
ನಮಿಸುವೆ ತ್ವತ್ಪದ ಕಮಲಯುಗಳಿಗನು
ಪಮ ಸುಂದರೆ ಭ್ರಮೆಗೊಳಿಸುವ ದುರ್ಮಮ ಕಳೆದು ।ಸೋ
ತ್ತಮರ ಪದಾಬ್ಜಕೆ ಭ್ರಮರನೆನಿಸಿ
ಮಾರಮಣನ ದುಹಿತ್ರೆ ೧

ಮದಗಜಯಾನೆ ಪಿಕಗಾನೆ ಉಭಯಾನೆ
ಉದಧೀರಾಜನ ಮಾನಿನಿ
ಮದನಾರಿ ಜಟಜಸೂನೆ ಪಾಪೌಘದಹನೆ
ಮುದವ ಕೊಡು ಎಮಗೆ ನೀನೆ
ಮದಡನರನು ಒಂದು ದಿನ ಮಜ್ಜನವ ವಿಧಿಸೆ ಶರೀರದಿ
ಹುದುಗಿದ ಪಾಪಗಳುದುರಿಸಿ ಕಾಲನ
ಸದನವ ಹೋಗಗೊಡದುದಧಿ ಮಥನ
ಪದ ಪದುಮವ ತೋರ್ಪೆ ೨

ಅನುಪಮ ನೀಲ ಸಮಕಾಶೇ । ಸೋಮಂದಹಾಸೆ
ಪುನತ ಹೃತ್ಕುಮುದಾ ಭೇಶೇ
ವನರಾಶೀಕಾಲ ವಿಲಾಶೇಯಮಭಿಲಾಪೇ ಅನುದಿನ ಪೂರೈಸೇ
ಜನನಿಯೆನ್ನ ದುರ್ಗುಣವೆಣಿಸದೆ । ಮಾ
ತನು ಲಾಲಿಸು ಸುಹೃದ್ವನರುಹದಲಿ ಶ್ರೀ
ವನತೆಯರಸ ಜಗನ್ನಾಥ ವಿಠಲನ
ಅನವರತ ನಿಲಿಸು ಘನ ಮಾಂಗಲ್ಯೇ ೩

೧೦೦

ತ್ರಾಣಿ ಶ್ರೀ ಕೃಷ್ಣವೇಣಿ ಪ್ರಾಣಪತಿ ಪದಕಮಲ
ಕಾಣಿಸು ಹೃದಯದಿ ತ್ರಾಣಿ ಶ್ರೀ ಕೃಷ್ಣ ವೇಣಿ ಪ

ಯಮಧರ್ಮತನಯೆ ಶ್ರೀ ಕೃಷ್ಣ ಸಂಗದಿ ಜನಿಸಿ
ಕಮಲ ಸಂಭವನ ಲೋಕದಲಿ ಮೆರೆದೆ
ಸುಮನಸರ ನುಡಿಗೇಳಿ ಲೋಕಗಳ ದುರಿತೋಪ
ಶಮನ ಗೊಳಿಸಲು ಬಂದೆ ತುಮಲ ಹರುಷದಲಿ ೧

ಭೂತನಾಥನ ಜಟಾಜೂಟದಿಂದುದ್ಭವಿಸಿ
ಶ್ವೇತಪಿಂಗಳ ಶೈಲಶಿಖರಕಿಳಿದೇ
ಭೂತಳಕೆ ಭೂಷಣಳೆನಿಸಿ ಪೂರ್ವವನಧಿ ನಿ
ಕೇತನವನೈದಿ ಸುಖಿಸಿದಿ ನಿನ್ನ ಪತಿಯೊಡನೇ ೨

ಪ್ರಾಣಿಗಳು ನಿನ್ನ ಜಲಪಾನವನು ಗೈಯೆ ನಿ
ತ್ರಾಣ ಸಂಹಾರ ವ್ಯಾಧಿಗೆ ಭೇಷಜಾ
ಪ್ರಾಣ ಪ್ರಯಾಣ ಪಾಥೇಯವೆಂದರಿಯೆ ನಿ
ರ್ವಾಣಪದವಿತ್ತು ಕಲ್ಯಾಣವಂತರ ಮಾಳ್ಪೆ ೩

ಜನಪದಗಳಾಗಿ ಕಾನನವಾಗಿ ಮನ್ವಾದಿ
ದಿನಗಳಲ್ಲಾಗಿ ಮತ್ತೇನಾಗಲೀ
ಮನುಜ ಮಜನಗೈಯೆ ವಾಜಪೇಯಾದಿ ಮಖ
ವನುಸರಿಸಿದಕೆ ಫಲವೇನು ತತ್ಫಲವೀವೆ ೪

ಅರವತ್ತು ಸಹಸ್ರ ವರುಷಂಗಳಲ್ಲಿ ನಿ
ರ್ಜರ ತರಂಗಿಣಿಯ ಮಜ್ಜನದ ಫಲವು
ಗುರುವು ಕನ್ಯಸ್ಥನಾಗಿರಲು ಒಂದಿನ ಮಿಂದ
ನರರಿಗಾ ಪುಣ್ಯಸಮನೆನಿಸಿ ತತ್ಫಲವೀವೇ ೫

ಮನನಶೀಲ ಸುಯೋಗಿಗಳಿಗಾವ ಗತಿಯು ಇಹ
ವನುದಿನದಿ ನಿನ್ನ ತೀರದಲಿ ಇಪ್ಪಾ
ಮನುಜೋತ್ತಮರಿಗೆ ಆ ಗತಿಯಿತ್ತು ಪಾಲಿಸುವೆ
ಅನುಪಮ ಸುಕಾರುಣ್ಯಕೆಣೆಗಾಣೆ ಜಗದೊಳಗೆ ೬

ತಾಯೆ ಎನ್ನನುದಿನದಿ ಹೇಯ ಸಂಸಾರದೊಳ
ಗಾಯಾಸ ಗೊಳಿಸದಲೆ ಕಾಯಬೇಕೊ
ವಾಯುಪಿತ ಶ್ರೀ ಜಗನ್ನಾಥ ವಿಠ್ಠಲ ಹೃ
ತ್ತೋಯಜದೊಳಗೆ ಕಾಂಬುಪಾಯ ಮಾರ್ಗವ ತೋರೆ ೭

೧೦೧

ಕಾವೇರಿ ಕಲುಪಾಪಹಾರಿ ಪಾವನ
ಶರೀರೆ ಶುಭತೋಷಕಾರಿ ಪ

ಶ್ರೀ ವಾಸುದೇವ ರಂಗೇಶನಾಲಯಕೆ ನೀ
ನಾವರಣಳಾಗಿಪ್ಪೆ ವಿರಜೆಯಂತೇ
ದೇವ ಋಷಿ ಗಂಧರ್ವ ಪಿತೃಪ ನರವರರಿಂದ
ಸೇವನೀಯಳಾಗಿ ಸರ್ವಾರ್ಥ ಪೂರೈಪೆ ೧

ಜಲಚರಾನ್ವೇಷಣ ಲುಬ್ಧ ಸಾಲಿಗ್ರಾಮ
ತುಲಸಿ ವೃಕ್ಷವನೆ ಕೊಡಿಸಿದ ಮಾತ್ರದೀ
ಕಲುಷರಾಶಿಗಳೆಲ್ಲ ಕಳೆದು ಮುಕ್ತಿಯನಿತ್ತೆ
ಸಲಿಲಮಂದಿರೆ ನಿನ್ನ ಕರುಣಕೇನೆಂಬೆ ೨

ರವಿ ತುಲಾರಾಶಿಗೈದಿದ ಸಮಯದೊಳಗೊಂದು
ದಿವಸ ಮಜ್ಜನ ಗೈವ ಮಾನವರಿಗೆ
ಪವನಾಂತರಾತ್ಮಕನ ಪಾದಕಮಲವ ತೋರಿ
ಭವಜ ರೋಗವ ಕಳೆದು ಭಾಗ್ಯವಂತರ ಮಾಳ್ಪೆ ೩

ಶ್ರೀ ಪವನ ಶಿವರಿಂದ ತಾ ಪೂಜೆಗೊಳುತ ಬಹು
ರೂಪಗಳ ಧರಿಸಿಕೊಂಡಾ ಪರ ಮನು
ವ್ಯಾಪಿಸಿಹ ನಿನ್ನೊಳದ್ಯಾಪಿ ಸ್ವರ್ಗಸ್ಥ ಜನ
ರೀ ಪೊಡವಿಯೊಳು ತವ ಸಮೀಪದಲಿ ಜನಿಸುವರು ೪

ಮೂಢಮತಿ ನಾನು ಕೊಂಡಾಡ ಬಲ್ಲೆನೆ ನಿನ್ನ
ಬೇಡಿಕೊಂಡೆನು ಹೃದಯ ನೀಡದೊಳಗೇ
ಗೂಡ ಪದ ಶಯನ ಜಗನ್ನಾಥ ವಿಠ್ಠಲನಂಘ್ರಿ
ನೋಡುವ ಸೌಭಾಗ್ಯ ದಯ ಮಾಡು ಪ್ರತಿದಿನದಲ್ಲಿ ೫

೧೦೨

ಯಮುನೇ ದುರಿತೋಪಶಮನೇ ಪ

ಕರ್ಮ ಪರಿಹರಿಸು ಖಳದಮನೆ ದಯವಂತೆ ಅ

ಶರಣೆಂಬೆ ತವ ಪಾದಾಂಬುರುಹ ಯುಗಳಿಗೆ ದಿವಾ
ಕರತನಯೆ ಸಪ್ತಸಾಗರ ಭೇದಿನೀ
ಹರಿತೋಷ ಲಾಭ ಸುಂದರಿ ಸುಭಗೆ ನಿನ್ನ ಸಂ
ದರುಶನಕೆ ಬಂದೆ ಭಕ್ತರ ಪಾಲಿಪುದು ಜನನಿ ೧

ಮಕರಾದಿ ಮಾಸದಲಿ ವಿಖನಸಾವರ್ತ ದೇ
ಶಕೆ ಬಂದು ವಿಜ್ಞಾನ ಭಕುತಿಯಿಂದಾ
ತ್ರಿಕರಣದ ಶುದ್ಧಿಯಲಿ ಸಕೃತ ಸ್ನಾನದ ಗೈಯೆ
ಸಕಲ ಸುಖವಿತ್ತು ದೇವಕೀಸುತನ ತೋರಿಸುವೆ ೨

ಕನಕಗರ್ಭಾವರ್ತವೆನಿಪ ದೇಶದಲಿ ಸ
ಜ್ಜನರ ಪಾಲಿಪೆನೆಂಬ ಅನುರಾಗದಿ
ಪ್ರಣವಪಾದ್ಯಗೆ ವಿಮಲ ಮುನಿಯಂತೆ ನಿರುತ ಕುಂ
ಭಿಣಿಯೊಳಗೆ ಸರಸ್ವತಿ ದ್ಯುನದಿಯಂದದಿ ಮೆರೆದೆ ೩

ಜಮದಗ್ನಿ ಮುಖ್ಯ ಸಂಯಮಿಗಳನುದಿನದಿ ಆ
ಶ್ರಮದ ತ್ರಿವೇಣಿ ಸಂಗಮದಿ ರಚಿಸಿ
ತಮ ತಮ್ಮೊಳಗೆ ರಮಾರಮಣ ದಾಮೋದರನ
ಸುಮಹಿಮೆಗಳನು ಪೊಗಳುತಮಿತ ಮೋದದಲಿಹರು ೪

ಪಿಂಗಳಾಧಿಷ್ಠಿತೆ ಶುಭಾಂಗಿ ಸುಮನವನಿತ್ತು
ಕಂಗೊಳಿಸು ಎನ್ನಂತರಂಗದಲ್ಲಿ
ತುಂಗ ಸುಮಹಿಮ ಜಗನ್ನಾಥ ವಿಠಲನ ಸುಗು
ಣಂಗಳ ತುತಿಪುದಕೆ ಮಂಗಳ ಮತಿಯನೀಯೇ ೫

೧೦೩

ವರದೇ ಕಾರುಣ್ಯ ಶರಧೇ
ಕರೆದೆನ್ನ ತವ ಸನ್ನಿಧಿಯಲಿಟ್ಟು ಪೊರೆಯೇ ಪ

ವರದೆ ವರದೇ ಎಂದು ಕರೆದ ಮಾತ್ರದಲಿ ವಗ್ದುರಿತಗಳ
ಪರಿಹರಿಸಿ ಪೊರೆವ ನೀನು
ಕರಣ ಶುದ್ಧಿಯಲಿ ಸಂದರುಶನಭಿವಾದನವ
ವಿರಚಿಸುವ ಮಾನವಗೆ ಪರಮ ಸೌಖ್ಯವನೀವೆ ೧

ಸ್ನಾನ ಸಂಧ್ಯಾನ ಜಪ ಧ್ಯಾನಾರ್ಚನೆಯ ಮಾಳ್ಪ
ಮಾನವರಿಗನುದಿನದಲೇನು ಫಲವೋ
ಸಾನುರಾಗದಿ ಒಲಿದು ನೀನಿತ್ತು ಪಾಲಿಸಿದೆ
ಆನರಿಯೆ ವಾರಿನಿಧಿ ರಾಣಿ ಕಲ್ಯಾಣಿ ೨

ಕರುಣಿಸೆನಗಿದನೆ ವರ ವರವ ಬೇಡುವೆ ನಿನಗೆ
ಹರಿಗುರುಗಳಲಿ ಭಕುತಿ ಪರಮ ಜ್ಞಾನ
ಮರುತಾಂತರಾತ್ಮಕ ಜಗನ್ನಾಥ ವಿಠಲ ಒಂ
ದರೆಘಳಿಗೆ ಬಿಡದೆ ಪೊಂದಿರಲಿ ಮನ್ಮನದಿ ೩

ಜಯತೀರ್ಥರು

೧೦೪

ಜಯರಾಯ ಜಯರಾಯ
ದಯವಾಗೆಮಗನುದಿನ ಸುಪ್ರೀಯಾ ಪ

ಸುರನಾಥನೆ ನೀ ನರನ ವೇಷದಿ
ಧರಣಿಯೊಳಗೆ ಅವತರಿಸಿ ದಯದಿ ೧

ವಿದ್ವನ್ಮಂಡಲಿ ಸದ್ವಿನುತನೆ ಪಾ
ದದ್ವಯಕೆರಗುವೆ ಉದ್ಧರಿಸೆನ್ನನು ೨

ವಿದ್ಯಾರಣ್ಯನಾ ವಿದ್ಯಮತದ ಕು
ಸಿದ್ಧಾಂತಗಳ ಅಪದ್ಧವೆನಿಸಿದೆ ೩

ಅವಿದಿತನ ಸತ್ಕವಿಗಳ ಮಧ್ಯದಿ
ಸುವಿವೇಕಿಯ ಮಾಡವನಿಯೊಳೆನ್ನನು ೪

ಗುರುಪೂರ್ಣಪ್ರಜ್ಞರ ಸನ್ಮತವನು
ಉದ್ಧರಿಸಿ ಮೆರೆದೆ ಭುಸುರವರ ವರದಾ ೫

ಸಭ್ಯರ ಮಧ್ಯದೊಳಭ್ಯಧಿಕ ವರಾ
ಕ್ಷೋಭ್ಯ ಮುನಿಕರಾಬ್ಜಾಭ್ಯುದಿತ ಗುರು ೬

ನಿನ್ನವರವ ನಾನನ್ಯಗನಲ್ಲ ಜ
ಗನ್ನಾಥವಿಠಲನೆನ್ನೊಳಗಿರಿಸೋ ೭

೧೦೫

ಜಯತೀರ್ಥ ಗುರುರಾಯ ಕವಿಗೇಯಾ ಪಾದ
ದ್ವಯಕಭಿನಮಿಸುವೆ ಶುಭಕಾಯ ಪ

ಭಯಹರ ಕರುಣಾನಯನದಿ ದಿನ ದಿನ
ವಯಿನವೆ ಪಾಲಿಸು ಬಯಸುವೆ ಒಡನೆ ಅ

ಎಂದೆಂದು ನಿನ್ನ ಪಾದ ಪೊಂದಿದವರ ಪಾದ
ದ್ವಂದ್ವಾರಾಧಕರ ಸಂಬಂಧಿಗ ನರ
ನೆಂದು ಪಾಲಿಪುದು ಕಾರುಣ್ಯ ಸಾಗರ
ಮಂದ ನಾನು ಕರ್ಮಂದಿಗಳರಸ ಮು
ಕುಂದನ ತೋರೋ ಮನಮಂದಿರದಲ್ಲಿ ೧

ಹರಿಪಾದಾಂಬುಜಾಸಕ್ತ ನಿಜ ಭಕ್ತ ಜನರಾ
ಪರಿಪಾಲಿಪ ಸಮರ್ಥ ಅಕ್ಷೋಭ್ಯ ತೀರ್ಥ
ಕರಕಮಲ ಸಂಜಾತಾನಂದ ದಾತಾ
ಪರಮಹಂಸ ಕುಲವರನೆ ವಂದಿಸುವೆ
ಕರುಣದಿಂದಲೆನಗರುಪು ಸುತತ್ವವ ೨

ಕಾಮಿತ ಫಲದಾತಾ ಜಗನ್ನಾಥ ವಿಠ್ಠಲ
ಸ್ವಾಮಿ ಪರಮ ದೂತಾ ಸುವಿಖ್ಯಾತಾ
ಶ್ರೀ ಮಧ್ವ ಮತಾಂಬರುಹ ಪ್ರದ್ಯೋತಾ
ತಾಮಸಗಳೆದೀ ಮಹೀಸುರರ ಮ
ಹಾಮಹಿತರ ಮಾಡ್ದೆ ಮುನಿವರ್ಯಾ ೩

ವಾದಿರಾಜರ ಸ್ತೋತ್ರ

೧೦೬

ವಾದಿರಾಜ ಅಸ್ಮದ್ಗುರು ವಾದಿರಾಜ ಪ

ವಾದಿರಾಜ ತವ ಪಾದಕಮಲಕಭಿ
ವಾದನ ಮಾಳ್ಪೆ ಸಮೋದವಿತ್ತು ಕಾಯೊ ೧

ಸಾರಿದರಿಗೆ ಕಲ್ಪ ಭೂರುಹ ದಂತೆ ಮ
ನೋರಥ ಸಲಿಸುವ ಸೂರಿಗಳರಸೇ ೨

ಭೇದ ಪಂಚಕವನು ಸಾಧಿಸಿ ಕುಮತಕು
ವಾದಿಗರ್ವಾದ್ರಿ ವಿಭೇದನ ಗೈದೆ ೩

ದೇಶಿಕವರ್ಯ ವಾಗೀಶ ಕುವರನೆ
ಕ್ಲೇಶ ಹರಿಸು ಅಘನಾಶ ಗೈದು ೪

ನಿಗಮವಿನುತ ಸಿರಿ ಜಗನ್ನಾಥವಿಠಲನ
ಸುಗುಣಗಳನುದಿನ ಪೊಗಳಿ ಹಿಗ್ಗುವೊ ೫

೧೦೭

ವಾದಿರಾಜ ಗುರು ನೀ ದಯಮಾಡದೆ
ಈ ದುರಿತಗಳ ಕಳೆದಾದರಿಪರಾರೊ ಪ

ದೈಶಿಕಾರ್ಯ ವಾಗೀಶಕುವರ ತವ
ದಾಸಸಮೂಹವ ನೀ ಸಲಹೋ ಸದಾ ೧

ನೀ ಗತಿಯೆಂದನುರಾಗದಿ ನಂಬಿದೆ
ಭೋಗಪತೀಶನ ರೋಗವ ಕಳೆದೆ ೨

ಜನ್ಮಾಧಿವ್ಯಾಧ್ಯುನ್ಮಾದ ಭ್ರಮ
ನಿಮ್ಮ ಮೊರೆ ಹೊಕ್ಕ ಮೇಲಿನ್ನರಲುಂಟೆ ೩

ಭೂಮಿಪರುಪಟಳಕಾ ಮಹಿನಾಥನು
ತಾ ಮೈಮರೆದಿರೆ ನೀ ಮುದವಿತ್ತೆ ೪

ಮೋದಮುನಿಮತ ಪಯೋದಧಿ ಪೂರ್ಣ
ವಿಧೋದಯ ಶರಣರ ಕಾದುಕೊ ಧೊರಿಯೆ ೫

ಕಲಿಬಾಧೆಯು ವೆಗ್ಗಳವಾಗಿದೆ ಕಾಯೊ
ಇಳೆಯೊಳು ಯತಿಕುಲತಿಲಕ ಕೃಪಾಳೊ ೬

ನಿನ್ನೊಳಿಶನಾದ ಜಗನ್ನಾಥ ವಿಠಲನ
ಉನ್ನಾಹದಲಿ ತೋರೆನ್ನ ಮನದಲಿ ೭

೧೦೮

ವಾದಿರಾಜ ಪ್ರತಿವಾದಿ ಗಜೇಂದ್ರ ಧ
ರಾಧರಾಟ ವಿಬೋಧಧಿ ಚಂದ್ರ ಪ

ಯಮಿವರನೆ ತ್ರಿವಿಕ್ರಮನ ರಥೋತ್ಸವ
ಸಮಯವಿದೆಂದು ಉತ್ತುಮಣವ ತೊರೆದೆ ೧

ಬಂದು ಕರೆಯಲು ಪುರಂದರನಾಳ್ಗಳ
ಹಿಂದಟ್ಟಿದೆ ಕರ್ಮಂದಿಗಳರಸ ೨

ಆರ್ಥಿಗಳಿಗೆ ಪರಮಾರ್ಥ ಕೊಡುವ ಸ
ತ್ತೀರ್ಥ ಪ್ರಬಂಧವ ಕೀರ್ತನೆ ಗೈದೆ ೩

ಅದ್ವೈತ ಸಮಿಧಿ ಮಧ್ವ ಸುಸಿದ್ಧಾಂ
ತಿಧ್ಮಜಿಂಹದಿ ಪ್ರಧ್ವಂಶಿಸಿದೆ ೪

ಪಾವನೀಯ ಸುಮತಾವಲಂಬಿಗಳ
ತಾವಕರೆಂದೀವುದು ವರವ ೫

ಎಲರುಣಿ ಭಯಕಂಜಿಲಿ ನಿಮ್ಮಾಸನ
ಕೆಳಗಿರೆ ಕಂಡದನುಳುಹಿದೆ ಕರುಣಿ ೬

ಹಯಮುಖ ಪಾದದ್ವಯ ಭಕ್ತಾಗ್ರನೀ
ದಯದಿ ವಿಪ್ರನಿಗೆ ನಯನಗಳಿತ್ತೆ ೭

ಭಾಗೀರಥಿಯಂತ್ಯೋಗಿ ವರಗುರು
ವಾಗೀಶರ ಕರಾಬ್ಜ ಸಂಭವನೆ ೮

ನಮಿಪೆ ತ್ವತ್ಪದಕಮಲಗಳಿಗೆಮ
ಧ್ವಮತ ಸರೋರುಹ ದ್ಯುಮಣಿಯೆ ನಿರುತ ೯

ಗರಮಿಶ್ರಿತ ನರಹರಿ ನೈವೇದ್ಯವ
ನರಿತು ಪೇಳೆ ಉಂಡರಗಿಸಿಕೊಂಡೆ ೧೦

ಪೂತಾತ್ಮ ಜಗನ್ನಾಥವಿಠಲನ
ಖ್ಯಾತಿಯ ತುತಿಸುವನಾಥ ಜನಾಪ್ತ ೧೧

೧೦೯

ಕೃಷ್ಣ ದ್ವೈ ಪಾಯನ ಕೃಪಣವತ್ಸಲ ಪರ
ಮೇಷ್ಠಿ ಜನಕನ ತೋರೊ ಪ

ಅನಿಮಿಷ ಕುಲಗುರು ಆನಂದತೀರ್ಥ ಸ
ನ್ಮುನಿಮತ ವಿಮಲಾಂಬುಜಾ ಅ.ಪ.

ದಿನಕರ ದಯದಿ ನೋಡೆನ್ನನು ಬಾದರಾ
ಯಣ ನಾಮಧೇಯರ ತನಯ ಸಂಯಮಿ ವರ ೧

ಭೀಮ ತರಂಗಿಣಿ ಬದಿಗನೆನಿಸಿ ಸೀತಾ
ರಾಮ ಕರ್ಮ ಗುಣಕೀರ್ತನಗೈವ
ನಿರ್ಮಲಾತ್ಮಕನ ಸತ್ಪ್ರೇಮದಿ ಸಲಹುವ
ಸುಜನ ಶಿರೋಮಣಿ ೨

ವಿಗತದೇಹಾಭಿಮಾನಿಯೆ ನಿರ್ಮೊಡನೆ ನಿತ್ಯ
ಹಗೆಗೊಂಬ ಪಾಪಿಗಳ
ವಿಗಡಕರ್ಮಗಳೆಲ್ಲ ಮರೆದು ವಿಶ್ವವ್ಯಾಪಿ
ಜಗನ್ನಾಥ ವಿಠಲ ಸ್ವತಂತ್ರ ಕರ್ತಯೆಂಬಾ ೩

೧೧೦

ಕೃಷ್ಣದ್ವೈ ಪಾಯನ ಗುರುರಾಯ ಮನೋ
ಭೀಷ್ಟದಾಯಕ ಕರುಣದಿ ಪಿಡಿ ಕೈಯಾ ಪ

ರಾಮಕೃಷ್ಣ ಪವನಾತ್ಮಜನಂಘ್ರಿ
ತಾಮರಸವ ಧೇನಿಸು ಪರಿವ್ರಾಜಾ
ಭೀಮತೀರ ಪಿಪ್ಪಲ ಭೂಜ ಮೂಲ
ಸೀಮೆಯೊಳಗೆ ರಾಜಿಸುವ ಯತಿರಾಜ ೧

ಭೇದ ಮತಾಂಬುಧಿ ಚಂದಿರಾ ಗುರು
ವೇದವ್ಯಾಸ ಮುನಿವರ ಸುಕುಮಾರಾ
ಸಾಧು ಸದ್ಗುಣಗಣ ಗಂಭೀರನಾದ
ಬಾದರಾಯಣನಾಮದಲಿಪ್ಪ ಧೀರಾ ೨

ದೇವ ಜಗನ್ನಾಥ ವಿಠಲನ್ನ ಪಾದ
ಸೇವಕ ಬೇಡುವೆ ಹರಿಮೂರ್ತಿ ಧ್ಯಾನ
ಕೇವಲ ಭಕುತಿ ನಿರ್ಮಲ ಜ್ಞಾನ
ವಿತ್ತು ಪಾವನ್ನ ಮಾಡಿ ಪಾಲಿಸೋ ಪ್ರತಿದಿನ ೩

ವಸುಧೀಂದ್ರ ತೀರ್ಥರು

೧೧೧*

ಶ್ರೀ ವಸುಧೀಂದ್ರ ರಾಯಾ । ಪಾವನಕಾಯಾ
ಕೋವಿದ ಜನ ಪ್ರೀಯಾ ಪ

ಭೂವಲಯದೊಳತಿ । ತೀವಿದ ಅಘವನ
ದಾವಕ ನತಜನ ದೇವತರು ಎನಿಪ ಅ

ಜಿತಕ್ರೋಧ ಜಯಶೀಲಾ । ದುರ್ವ್ಯಸನ ಪ
ರ್ವತ ವಜ್ರ ಹರಿಲೋಲಾ
ರತಿಪತಿ ಮಾರ್ಗಣ । ಮಥನ ಮೌನೀಶ ವಾಂ
ಛಿತಫಲವಿತ್ತು ಸಂ । ತತ ಪಾಲಿಸುವುದೆಮ್ಮ
ಪತಿತ ಪಾವನ ವಿತತ ಕರುಣಾ
ಮೃತರತಾನತ ಹಿತಕರಾಗಮ
ತತಿ ಪಯೋಜಾರ್ಕ ಅತಿಮುದಾ ೧

ಭೂದೇವಾನುತ ಮಹಿಮಾ ।ಶಾತವಾನು ಭೀಮ
ವೇದಪೂಜಿತರಾಮಾ
ವೇದವ್ಯಾಸರ ಪಾದ । ಸಾದರದಲಿ ನಿತ್ಯಾ
ರಾಧಿಸುತಿಹ ಸುವಿ । ನೋದಚರಿತ ಗುರು
ಮೋದತೀರ್ಥ ಮತಾಬ್ಧಿ ಸೋಮ ಕು
ವಾದಿ ಮತ ಮತ್ತೇಭಕುಂಭಧ
ರಾಧರಾತಟವಾನುಗರೊಳೆ
ನ್ನಾದರಿಸುವುದಖಿಳಗುಣಾಂಬುಧೇ ೨

---

* ಈ ಕೀರ್ತನೆ ಗುರುಜಗನ್ನಾಥವಿಠಲ ಅಂಕಿತದಲ್ಲೂ ಇದೆ.

ಸರಸಭಾಷೋಹ್ಲಾಸಾ । ವರ್ಜಿತ ದೋಷಾ
ಹರಿನಿಭಸಂಕಾಶಾ
ಶರೀರಾ ಸಜ್ಜನಗೇಯಾ । ಗುರುವಾದೀಂದ್ರಕರ
ಸರಸೀರುಹ ಸಂಜಾತ । ನಿರುಪಮ ನಿರ್ಭೀತಾ
ಸುರುಚಿರಹಿಮ ಕಿರಣ ತೇಜ
ಸ್ಫುರಣ ಶ್ರೀ ಜಗನ್ನಾಥವಿಠಲನ
ಚರಣ ಪಂಕೇರುಹ ಯುಗಳ ಮಧು
ಕರದುರಿತಘನ ಮಾರುತಾ ೩

ರಾಘವೇಂದ್ರ ತೀರ್ಥರು

೧೧೨

ಕರುಣಿಗಳೊಳಗೆಣೆಗಾಣೆ ನಾ ನಿನಗೆ ಸ
ದ್ಗುರುವರ ರಾಘವೇಂದ್ರ
ಚರಣ ಕಮಲಯುಗ ಮೊರೆಹೊಕ್ಕವರ ಮನದ
ಹರಕೆಯ ನಿರುತ ಈವೆ ನೀ ಕಾವೆ ಪ

ರಾಘವೇಂದ್ರ ಗುರುವೆ ನೀ ಗತಿ ಎಂದನು
ರಾಗದಿಂದಲಿ ಭಜಿಪ
ಭಾಗವತರ ದುರಿತೌಘಗಳಳಿದು ಚ
ನ್ನಾಗಿ ಸಂತೈಸುವೆ ನೀ ಸನ್ಮೌನಿ ೧

ಸುಧೀಂದ್ರ ಯತಿಕರ ಪದುಮ ಸಂಭವ ಮಧು
ವದ ಪಾದಾಂಬುಜ ಮಧುಪಾ
ತ್ರಿದಶ ಭೂರುಹದಂತೆ ಬುಧ ಜನರೀಪ್ಸಿತ
ಒದಗಿ ಪಾಲಿಸಿ ಪೊರೆವೆ ಮದ್ಗುರುವೆ ೨

ಕುಧರದೇವನ ದಿವ್ಯರದನದಿ ಜನಿಸಿದ
ನದಿಯ ತೀರದಿ ಶೋಭಿಪ
ಸದಮಲ ಘನಮಂತ್ರ ಸದನನಿಲಯ ಜಿತ
ಮದನ ಶ್ರೀ ಜಗನ್ನಾಥ ವಿಠಲದೂತ ೩

೧೧೩

ನಮೋ ನಮೋ ಶ್ರೀ ರಾಘವೇಂದ್ರ । ಸದ್ಗುಣ ಸಾಂದ್ರ
ಕಮಲ ನಾಭನ ದಾಸ ಕಮಲಾಪ್ತ ಭಾಸಾ ಪ

ದೇಶ ದೇಶಗಳಿಂದ ದೈನ್ಯದಿಂದಲಿ ಬಂದಾ
ಶೇಷ ಜನರಿಗಳಿಗಿಷ್ಟ ಸಲ್ಲಿಸುವ ವಿಶಿಷ್ಟಾ
ನಾ ಸೇರಿದೆನೋ ನಿನ್ನ ನಮಿತ ಜನರ ಪ್ರಸನ್ನ
ಭಾಸುರ ಚರಿತನೆ ಭಜಿಸುವೆನು ಅನವರತ ೧

ಭೇದಾರ್ಥ ಜಲಜಾರ್ಕ ಭೂರಿ ಬಲತರತರ್ಕ
ವಾದಿಶೈಲ ಕುಲಿಶ ವರಹಸುತೆ ವಾಸಾ
ಬಾಧಿಪ ಅಘ ಜೀರ್ಣ ಮಾಡು ಗುರುವರ ಪೂರ್ಣ
ಬೋಧ ಮತ ಸಂಭೂತ ಭೂರಿ ಪ್ರಖ್ಯಾತ ೨

ನತಜನಾಶ್ರಯ ಪ್ರೀಯ ನೆರೆ ನಂಬಿದೆನೋ ಮಾಯ
ಮತ ಕದಳಿ ಗಜೇಂದ್ರ ವಿಬುಧಾಬ್ಧಿ ಚಂದ್ರ
ಕ್ರತು ಭುಕು ಜಗನ್ನಾಥ ವಿಠಲನ ನಿಜದೂತ
ತುತಿಸಲಾಪೆನೆ ನಿನ್ನ ಯತಿಶಿರೋರನ್ನ ೩

೧೧೪

ಪೊಂದಿ ಬದುಕಿರೋ ರಾಘವೇಂದ್ರ ರಾಯರ
ಕುಂದದೆಮ್ಮನು ಕರುಣದಿಂದ ಪೊರೆವರ ಪ

ನಂಬಿ ತುತಿಸುವಾ ಜನ ಕದಂಬಕಿಷ್ಟವ
ತುಂಬಿ ಕೊಡುವರೋ ಅನ್ಯ ಹಂಬಲೀಯರು ೧

ಫಾಲಲೋಚನ ವಿನುತ । ಮೂಲ ರಾಮನಾ
ಶೀಲ ಸದ್ಗುಣ ನುತಿಪ ಮೇಲು ಭರತನಾ ೨

ಅಲವ ಬೋಧರಾ ಸುಮತ । ಜಲಧಿ ಚಂದಿರಾ
ಒಲಿದು ಭಕ್ತಾರಾ ಪೊರೆವ ಸುಲಭ ಸುಂದರಾ ೩

ಗುರು ಸುಧೀಂದ್ರರಾ ವಿಮಲ । ಕರಜರೆನಿಪರಾ
ಸ್ಮರಿಸಿ ಸುರುಚಿರಾ ವಿಮಲ ಚರಣ ಪುಷ್ಕರಾ ೪

ಭೂತ ಭಾವನಾ ಜಗನ್ನಾಥ ವಿಠಲನಾ
ಪ್ರೀತಿ ಪಾತ್ರನಾ ನಂಬಿರೀತನೀಕ್ಷಣಾ ೫

೧೧೫

ಯಾಕೆ ಮೂಕನಾದ್ಯೋ ಗುರುವೆ ನೀ
ನ್ಯಾಕ ಮೂಕನಾದ್ಯೋ ಪ

ಲೋಕ ಪಾಲಕ ಎನ್ನ ಸಾಕುವರ್‍ಯಾರಯ್ಯ
ಶ್ರೀಕರ ರಾಘವೇಂದ್ರ ಅ.ಪ

ಹಿಂದಕ್ಕೆ ನೀ ಎನ್ನ ಮುಂದೆ ಸುಳಿದಾಡಿದೆ
ಮಂದಿಯೊಳಗೆನ್ನ ಮಂದನ್ನ ಮಾಡಿದ್ಯೊ ೧

ಬೇಕಾಗದಿದ್ದರಿನ್ಯಾಕೆ ಕೈಯನು ಪಿಡಿದೆ
ಕಾಕುಜನರೊಳೆನ್ನ ನೂಕಿ ಬಿಟ್ಟು ನೀನು ೨

ಹೀಂಗೆ ಪಾಲಿಸಿದರೆ ಯೋಗಿಕುಲವರ್ಯ ರಾಘ
ವೇಂದ್ರನೆ ಭವ ಸಾಗುವದ್ಯಾಂಗಯ್ಯ ೩

ನಿನ್ನಂಥ ಕರುಣಿಲ್ಲ ಎನ್ನಂಥ ಕೃಪಣಿಲ್ಲ
ಘನ್ನ ಮಹಿಮ ನೀ ಎನ್ನನು ಬಿಟ್ಟೀಗ ೪

ಜನನಿಯು ನೀ ಎನ್ನ ಜನಕನಯ್ಯ
ಮನ್ನಿಸೋ ನೀ ನಿತ್ಯಾನನ್ಯ ಶರಣನೆ ೫

ಎಂದಿಗಗಾದರು ನಿನ್ನ ಪೊಂದಿಕೊಂಡವನೆಲೊ
ಇಂದು ಕೈ ಬಿಟ್ಟರೆನ್ನ ಮುಂದೆ ಕಾಯುವರ್‍ಯಾರೊ ೬

ನಾಥನು ನೀ ಅನಾಥನು ನಾನಯ್ಯ
ಪಾತಕದ ಜಗನ್ನಾಥ ವಿಠಲ ದೂತ ೭

೧೧೬

ರಾಘವೇಂದ್ರ ಯತಿಸಾರ್ವಭೌಮ ದುರಿ
ತೌಗಘದೂರ ತೇ ನಮೋ ನಮೋ ಪ

ಮಾಗಧರಿಪು ಮತಸಾಗರ ಮೀನ ಮ
ಮಾಘ ವಿನಾಶಕ ನಮೋ ನಮೋ ಅ.ಪ.

ಶ್ಲಾಘಿತ ಗುಣಗಣ ಸೂರಿಪ್ರಸಂಗ ಸ
ದಾಗಮಜ್ಞ ತೇ ನಮೋ ನಮೋ
ಮೇಘ ಶ್ಯಾಮಲ ರಾಮಾರಾಧಕ
ಮೋಘ ಬೋಧತೇ ನಮೋ ನಮೋ ೧

ತುಂಗಭದ್ರ ಸುತರಂಗಿಣಿ ತೀರಗ
ಮಂಗಳಚರಿತ ಶುಭಾಂಗ ನಮೋ
ಇಂಗಿತಜ್ಞ ಕಾಳಿಂಗ ಮರ್ದ ಯದು
ಪುಂಗವ ಹೃದಯ ಸುಸಂಗ ನಮೋ
ಸಂಗಿರ ಚಿಹ್ನಿತ ಶೃಂಗಾರಾನನ
ತಿಂಗಳ ಕರುಣಾಪಾಂಗ ನಮೋ
ಗಾಂಗೇಯ ಸಮಾಭಾಂಗ ಕುಮತ ಮಾ
ತಂಗ ಸಿಂಗ ಶಿತ ಪಿಂಗ ನಮೋ ೨

ಶ್ರೀ ಸುಧೀಂದ್ರ ಕರಜಾತ ನಮೋ ನಮೋ
ಭೂಸುರ ನುತ ವಿಖ್ಯಾತ ನಮೋ
ದೇಶಿಕ ವರ ಸಂಸೇವ್ಯ ನಮೋ ನಮೋ
ದೋಷವಿವರ್ಜಿತ ಕಾವ್ಯ ನಮೋ
ಕ್ಲೇಶಿತಜನ ಪರಿಪಾಲ ನಮೋ ನಮೋ
ಭಾಸಿತ ಕರುಣಾಶೀಲ ನಮೋ
ವ್ಯಾಸ ರಾಮ ಪದ ಭಕ್ತ ನಮೋ ನಮೋ
ಶಾಶ್ವತ ಕರುಣಾಸಕ್ತ ನಮೋ ೩

ಕೋವಿದ ಮಸ್ತಕ ಶೋಭಿತ ಮಣಿ ಸಂ
ಭಾವಿತ ಮಹಿಮ ಪಾಲಯ ಮಾಂ
ಸೇವಾಪರ ಸರ್ವಾರ್ಥಪ್ರದ ವೃಂ
ದಾವನ ಮಂದಿರ ಪಾಲಯ ಮಾಂ
ಭಾವಜ ಮಾರ್ಗಣ ಭುಜಗ ವಿನಾಯಕ
ಭಾವಜ್ಞ ಪ್ರಿಯ ಪಾಲಯ ಮಾಂ
ಕೇವಲ ನತಜನ ಪಾವನರೂಪ ಸ
ದಾ ವಿನೋದಿ ಹೇ ಪಾಲಯ ಮಾಂ ೪

ಸನ್ನುತ ಮಹಿಮ ಜಗನ್ನಾಥ ವಿಠಲ
ಸನ್ನಿತ ಮಾನಸ ಜಯ ಜಯ ಭೋ

ಚಿಹ್ನಿತ ದಂಡಕಮಂಡಲ ಪುಂಡ್ರ ಪ್ರ
ಪನ್ನೆ ಭಯಾಪಹ ಜಯ ಜಯ ಭೋ
ಮಾನ್ಯ ಮಹಾತ್ಮ ಪ್ರಸನ್ನ ವದನ ಕಾ
ರುಣ್ಯ ಪ್ರಯೋದಧೆ ಜಯ ಜಯ ಭೋ
ಧನ್ಯ ಕ್ಷಮಾಸಂಪನ್ನ ಬುಧಜನ ಶ
ರಣ್ಯ ಸದಾರ್ಚಿತ ಜಯ ಜಯ ಭೋ ೫

೧೧೭

ರಾಯ ಬಾರೋ ತಂದೆ ತಾಯಿ ಬಾರೋ ನಮ್ಮ
ಕಾಯೊ ಬಾರೋ
ಮಾಯಿಗಳ ಮರ್ದಿಸಿದ ರಾಘವೇಂದ್ರ ರಾಯ ಬಾರೋ ಪ

ಭಾಸುರ ಚರಿತನೆ ಭೂಸುರ ವಂದ್ಯನೆ
ಶ್ರೀ ಸುಧೀಂದ್ರಾರ್ಯರ ವರಪುತ್ರ ರಾಯ ಬಾರೋ
ಶ್ರೀ ಸುಧೀಂದ್ರಾರ್ಯರ ವರಪುತ್ರರೆನಿಸಿದ
ದೇಸಿಕರೊಡೆಯ ರಾಘವೇಂದ್ರರಾಯ ಬಾರೋ ೧

ವಂದಿಪ ಜನರಿಗೆ ಮಂದಾರ ತರುವಂತೆ
ಕುಂದಾದಭೀಷ್ಟೆಯ ಸಲಿಸುತಿಪ್ಪ ರಾಯ
ಕುಂದದಾಭೀಷ್ಟ ಸಲಿಸುತಿಪ್ಪ ಸರ್ವಜ್ಞ
ಮಂದನಮತಿಗೆ ರಾಘವೇಂದ್ರ ರಾಯ ಬಾರೋ ೨

ಆರು ಮೂರೇಳು ನಾಲ್ಕೆಂಟು ಗ್ರಂಥ ಸಾರಾರ್ಥ
ತೋರಿಸಿದೆ ನ್ಯಾಯದಿಂದ ಸರ್ವರಿಗೆ ರಾಯ ಬಾರೋ
ತೋರಿಸಿದಿ ನ್ಯಾಯದಿಂದ ಸರ್ವರಿಗೆ ನ್ಯಾಯದಿಂದ
ಸೂರಿಗಳರಸನೆ ರಾಘವೇಂದ್ರಾ ರಾಯ ಬಾರೋ ೩

ರಾಮ ಪಾದಾಂಬುಜ ಸರಸಭೃಂಗ
ಕೃಪಾಪಾಂಗ ಭ್ರಾಮಕ ಜನರ ಮಾನಭಂಗ ರಾಯ ಬಾರೋ

ಭ್ರಾಮಕಜನ ಸನ್ಮಾನಭಂಗ ಮಾಡೀದಾ
ಧೀಮಂತರೊಡೆಯನೆ ರಾಘವೇಂದ್ರಾ ರಾಯ ಬಾರೋ ೪

ಭೂತಳಾಧಿಪನಾ ಭೀತಿಯ ಬಿಡಿಸಿದೆ
ಪ್ರೇತತ್ವ ಕಳೆದ ಮಹಿಷಿಯಾ ರಾಯ ಬಾರೋ
ಪ್ರೇತತ್ವ ಕಳೆವ ಮಹಿಷಿಯಾ ಶ್ರೀಜಗ
ನ್ನಾಥ ವಿಠ್ಠಲನಾ ಪ್ರೀತಿಪಾತ್ರಾ ರಾಯ ಬಾರೋ ೫

೧೧೮

ರೋಗಹರನೇ ಕೃಪಾಸಾಗರ ಶ್ರೀ ಗುರು
ರಾಘವೇಂದ್ರ ಪರಿಪಾಲಿಸೊ ಪ

ಸಂತತ ದುರ್ವಾದಿ ಧ್ವಾಂತ ದಿವಾಕರ
ಸಂತವಿನುತ ಮಾತ ಲಾಲಿಸೊ ೧

ಪಾವನಗಾತ್ರ ಸುದೇವವರನೆ ತವ
ಸೇವಕ ಜನರೊಳಗಾಡಿಸೊ ೨

ಘನ್ನ ಮಹಿಮ ಜಗನ್ನಾಥವಿಠಲ ಪ್ರಿಯ
ನಿನ್ನಾರಾಧನೆ ಮಾಡಿಸೊ ೩

೧೧೯

ವಂದಿಸುವೆ ಗುರು ರಾಘವೇಂದ್ರಾರ್ಯರ
ವೃಂದಾವನಕೆ ಪ್ರತಿ ಪ್ರತಿ ದಿನಗಳಲ್ಲಿ ಪ

ಸುವಿರೋಧಿ ವತ್ಸರದಿ ಶ್ರಾವಣ ಪರ ದ್ವಿತೀಯ
ಕವಿವಾರ ತುಂಗಭದ್ರಾ ತೀರದಾ
ನವ ಸುಮಂತ್ರಾಲಯದಿ ದೇಹವನು ಬಿಟ್ಟು ಮಾ
ಧವನ ಪುರವೈದಿದ ಮಹಾತ್ಮರಿವರಹುದೆಂದು ೧

ಸ್ವಪದಾವಲಂಬಿಗಳಿಗುಪನಿಷತ್ ಖಂಡಾರ್ಥ
ಉಪದೇಶಗೈದು ಕಾಶ್ಯಸುರರನಾ
ಪುಪುನೀತರನ ಮಾಡಿ ಅಪವರ್ಗ ದಾಸರೊ
ಳುಪಮರಿಲ್ಲೆಂದರುಪಿದುಪಕಾರಿಗಳ ಕಂಡು ೨

ದೇವತೆಗಳಿವರು ಸಂದೇಹ ಬಡಸಲ್ಲ ವೃಂ
ದಾವನದೆ ರಚಿಸಿ ಪೂಜಿಪ ಭಕ್ತರ
ಸೇವೆ ಕೈ ಕೊಂಡವರ ಮನೋರಥವ ಸಲಿ
ಸುವರು ಜಗನ್ನಾಥ ವಿಠಲಗೆ ಪ್ರಿಯರೆಂದು ೩

೧೨೦

ಶ್ರೀ ರಾಘವೇಂದ್ರ ನಿಮ್ಮ ಚಾರು ಚರಣವ
ಸಾರಿದೆ ಶರಣ ಮಂದಾರ ಕರುಣವ
ಬೀರಿ ಭವವನಧಿ ತಾರಿಸು ತವಕದಿ
ಸೂರಿ ಸುಧೀಂದ್ರ ಕುಮಾರ ಉದಾರ ಪ

ಮುನಿರಾಯ ನಿನ್ನ ಪಾದ ವನರುಹ ಧ್ಯಾನ
ಪ್ರಣವನ ಸ್ತವನ ಅರ್ಚನೆ ಮಾಳ್ಪ ನಾನಾ
ಜನರ ವಾಂಛಿತವೀವಗುಣ ಪೂರ್ಣ ಜ್ಞಾನ
ಧನಪ ಪಾಲಿಸೆನಗೀಕ್ಷಣ ನಿನ್ನಾಧೀನ
ಮನುಜನ ನೀ ಪ್ರತಿದಿನದಿ ದಣಿಸುವುದು
ಘನವೆ ಗುರುವೆ ಪಾವನತರ ಚರಿತ ೧

ಮೂಲರಾಮನ ಪಾದ ಕೀಲಾಲಜ ಮಧುಪಾ
ಬಾಲಕನ ಬಿನ್ನಪವ ಲಾಲಿಸೋ ಮುನಿಪ
ತಾಳಲಾರೆನೊ ತಾಪತ್ರಯದ ಸಂತಾಪ

ಕೇಳೋವಿಮಲಜ್ಞಾನ ಶೀಲ ಸ್ವರೂಪ
ಭೂಲಲನಾಧವ ಕೋಲನಂದನಾ
ಕೂಲಗವರ ಮಂತ್ರಾಲಯ ನಿಲಯ ೨

ಕಲಿಕಲ್ಮಷವಿದೂರ ಕುಜನ ಕುಠರಾ
ನಳಿನಾಕ್ಷ ವಿಮಲ ಶ್ರೀ ತುಲಸಿಯ ಹಾರ
ಗಳ ಸುಶೋಭಿತ ಕಮಂಡಲ ದಂಡಧರಾ
ಅಲವಬೊಧರ ಮತ ಜಲಧಿ ವಿಹಾರಾ
ಸುಲಲಿತ ಕರುಣಾಂಬುಧಿಯೆ ಜಗನ್ನಾಥ ವಿ
ಠಲನೊಲಿಮೆಯ ಪಡೆದಿಳೆಯೊಳು ಮೆರೆದಾ ೩

೧೨೧

ಶ್ರೀ ರಾಘವೇಂದ್ರಾರ್ಯ ಬಾರೋ
ಕಾರುಣ್ಯ ವಾರಿಧಿಯೆ ಬಾರೋ
ಆರಾಧಿಪ ಭಕ್ತರಿಷ್ಟಾ ಪೂರೈಸುವ ಪ್ರಭುವೆ ಬಾರೋ ಪ

ರಾಜವಂಶೋದ್ಭವ ಪಾದ ರಾಜೀವ ಭೃಂಗನೆ ಬಾರೋ
ರಾಜಾಧಿರಾಜರೊಳು ವಿ
ರಾಜಿಸುವ ಚೆಲುವ ಬಾರೋ ೧

ವ್ಯಾಸರಾಯನೆನಿಸಿ ನೃಪನ ಕ್ಲೇಶ ಕಳೆದವನೆ ಬಾರೋ
ಶ್ರೀ ಸುಧೀಂದ್ರ ಕರಸಂಜಾತ
ವಾಸು ದೇವಾರ್ಚಕನೆ ಧೀರ ಬಾರೋ ೨

ಸನ್ಯಾಸಕುಲದೀಪ ಬಾರೋ ಸನ್ನುತ ಸದ್ಗುಣನೆ ಬಾರೋ
ಮಾನ್ಯ ಜಗನ್ನಾಥವಿಠಲಾಪನ್ನ
ಜನರ ಪ್ರೀಯಾ ಬಾರೋ ೩

೧೨೨

ಸುರಪನಾಲಯದಂತೆ ಮಂತ್ರಾಲಯ
ಕರೆಸುವುದು ಕಂಗೊಳಿಸುವುದು ನೋಳ್ಪ ಜನಕೆ ಪ

ಕಾಮಧೇನುವಿನಂತೆ ಇಪ್ಪ ಗುರುವರ ಸಾರ್ವ
ಭೌಮ ಸುಧೀಯೀಂದ್ರಸುತ ರಾಘವೇಂದ್ರ
ಆಮಯಾಧಿಪ ಖಳತಮಿಶ್ರ ಓಡಿಸುವ ಚಿಂ
ತಾಮಣಿ ಪ್ರಕಾಶದಂತಿಪ್ಪ ವೃಂದಾವನದಿ ೧

ಸುರತರುವಿನಂತಿಪ್ಪ ಕೀರ್ತಿ ಸಚ್ಛಾಯಾಶ್ರಿ
ತರ ಮನೋರಥಗಳನು ಪೂರೈಸುವಾ
ಧರಣಿಸುರಾಖ್ಯ ಷಟ್ಪದಗಳಿಗೆ ಸತ್ಯದಾ
ಪರಿಮಳದಿ ತೃಪ್ತಿಬಡಿಸುವ ಮರುತನಂತೆ ೨

ವಾರಾಹಿ ಎಂಬ ನಂದನ ವನದಿ ಜನರತಿ ವಿ
ಹಾರ ಮಾಳ್ಪರು ಸ್ನಾನಪಾನದಿಂದಾ
ಶ್ರೀ ರಾಘವೇಂದ್ರನಿಲ್ಲಿಪ್ಪ ಕಾರಣ ಪರಮ
ಕಾರುಣ್ಯ ನಿಧಿ ಜಗನ್ನಾಥ ವಿಠಲನಿಹನು ೩

೧೨೩

ಸ್ಮರಿಸಿ ಬೇಡುವೆನು ನಾ ಹೇ ಗುರು ಸಾರ್ವಭೌಮಾ ಪ

ನಿರುತ ನೀ ಪೊರೆ ಎನ್ನ ವಾದಿಗಜಸಿಂಹ ಅ.ಪ.

ದಿತಿಸುತಗೆ ಸುತನೆನಿಸಿ । ಅತಿಮುದದಿ ಸುರಮುನಿಯ
ಮತ ಹಿಡಿದು ಹರಿಯ ಮಹಿಮೆ ಪಿತಗೆ ಪೇಳಿ
ಖತಿಗೊಂಡು ನಿನ್ನ ಮೂರುತಿ ತೋರೆನಲು ಶ್ರೀ
ಪತಿಯ ಸ್ತಂಭದಿ ಕರೆದ ಪ್ರಹ್ಲಾದ ರಾಜ ೧

ಬಾಲ್ಯದಲಿ ಯತಿಯಾಗಿ ಲೀಲೆಯಿಂದಲಿ । ಭೂಮಿ
ಪಾಲಗೊದಗಿರ್ದ ಕುಹು ಯೋಗ ಬಿಡಿಸಿ
ಖೂಳ ಮಾಯಳ ಜಯಿಸಿ ಚಂದ್ರಿಕಾ ಗ್ರಂಥವನು
ಪೇಳಿ ಹರಿಪೀಠವೇರಿದ ವ್ಯಾಸರಾಜ ೨

ಕಾಮರಿಪುನುತ ಮೂಲರಾಮ ಪದಯುಗ ಕುಮುದ
ಸೋಮನೆನಿಸುವ ಭಕ್ತಸ್ತೋಮಕ್ಕೆಲ್ಲ
ನೇಮದಿಂದಲಿ ವಿವಿಧ ಕಾಮಿತಾರ್ಥ ಸ್ಫುಟತ
ಹೇಮಸನ್ನಿಭ ಗಾತ್ರ ಪಾವನ ಚರಿತ್ರ ೩

ಶಾಂತತೆಯ ಪೊಂದಿ ಮಂತ್ರಾಲಯದಿ ವೃಂದಾವ
ನಾಂತರದೊಳಿರುತ ಸಿರಿಕಾಂತ ಹರಿಯಾ
ಚಿಂತಿಸುತಲಿಹ ಸರ್ವತಂತ್ರ ಸ್ವತಂತ್ರ ಕರು
ಣಾಂತರಂಗನೆ ರಾಘವೇಂದ್ರ ಯತಿವರ್ಯಾ ೪

ಮೂಕ ಬಧಿರಾಂಧತ್ವಗಳ ಪೊಂದಿ ಧರಣಿಯೊಳು
ವ್ಯಾಕುಲವ ಪಡುವವರನುದ್ಧರಿಸುತ
ನಾಕಪತಿವಿನುತ ಜಗನ್ನಾಥವಿಠಲನ ಮಧುಪ
ನೀ ಕೊಟ್ಟು ಸಲಹೆನ್ನಭೀಷ್ಟ ಸಮುದಾಯ ೫

ಇತರ ಯತಿವರೇಣ್ಯರ ಸ್ತೋತ್ರ

೧೨೪

ಆ ನಮಿಪೆ ಗುರುಸಂತತಿಗೆ ಸತತ ಗೆ
ಜ್ಞಾನ ಭಕ್ತ್ಯಾದಿಗಳ ಕರುಣಿಸಲಿ ಎನಗೆಂದು ಪ

ಹಂಸನಾಮಕ ಹರಿ ಬ್ರಹ್ಮಗುರುವರ ಸರೋ
ಜಾಸನ ಪುತ್ರರೆನಿಸಿಕೊಂಬಾ

ಆ ಸನಕ ಸನಂದನ ಕುಮಾರಕರ ಶಿಷ್ಯ ದೂ
ರ್ವಾಸಮುನಿ ಜ್ಞಾನನಿಧಿ ತೀರ್ಥ ಪದಾಬ್ಜಗಳಿಗೆ ೧

ಗರುಡವಾಹನತೀರ್ಥ ಕೈವಲ್ಲಜ್ಞಾನೇಶ
ಪರತೀರ್ಥ ಸತ್ಯ ಪ್ರಜ್ಞ ಪ್ರಾಜ್ಞರಾ
ವರಕುಮಾರಕ ತಪೋರಾಜ ಸಂಯಮಿ ವಿಮಲ
ಕರಕಮಲ ಸಂಜಾತ ಅಚ್ಯುತ ಪ್ರೇಕ್ಷರಿಗೆ ೨

ಶ್ರೀ ಮಧ್ವವರ ಪದ್ಮನಾಭ ನರಹರಿಮುನಿಪ
ಶ್ರೀ ಮಾಧವಕ್ಷೋಭ್ಯಯತಿ ಜಯಾರ್ಯ
ಧೀಮಂತ ವಿದ್ಯಾಧಿರಾಜ ಸುಕವೀಂದ್ರ ನಿ
ಸ್ಸೀಮ ವಾಗೀಶಯತಿ ರಾಮಚಂದ್ರಾರ್ಯರಿಗೆ ೩

ವಿದ್ಯಾನಿಧಿ ರಘುನಾಥ ರಘುವರ್ಯೋತ್ತಮ ಕರ
ಪದ್ಮ ಸಂಜಾತ ವೇದವ್ಯಾಸರಾ
ವಿದ್ಯಾಪತಿ ಅಧೀಶನಿಧಿ ಸತ್ಯವ್ರತ ನಿಧಿಯಾ
ಶುದ್ಧಾತ್ಮ ಸತ್ಯನಾಥರ ಪಾದ ಕಮಲಗಳಿಗೆ ೪

ಸತ್ಯಾಭಿನವ ಪೂರ್ಣ ಸತ್ಯವಿಜಯ ಪ್ರೀಯಾ
ಸತ್ಯಬೋಧರ ಸತ್ಯಸಂಧವರರಾ
ನಿತ್ಯದಲಿ ನೆನೆದು ಕೃತಕೃತ್ಯನಾಗುವೆ ಬಿಂಬ
ಮೂರ್ತಿ ಜಗನ್ನಾಥವಿಠಲನ ತೋರಿಸಲೆಂದು ೫

೧೨೫

ಸ್ಮರಿಸು ಗುರು ಸಂತತಿಯನು ಮನವೇ ಪ

ಸ್ಮರಿಸು ಗುರು ಸಂತತಿಯ ಸರ್ವಕಾಲಗಳಲ್ಲಿ
ಪೊರೆವ ಹರಿ ಚತುರವಿಧ ಪುರುಷಾರ್ಥಗಳನಿತ್ತು ಅ.ಪ.

ಪರಮಹಂಸಾಖ್ಯ ಹರಿ ಗುರುತಮನೆನಿಸುತಿಪ್ಪ
ಪರಮೇಷ್ಠಿ ತತ್ಸುತರು ಸನಕಾದ್ಯರಾ
ಕರಕಮಲ ಸಂಜಾತ ಕೂರ್ಮಾಸ ಜ್ಞಾನನಿಧಿ
ಗುರುಡವಾಹನ ತೀರ್ಥ ಕೈವಲ್ಯ ಯತಿವರರ ೧

ಜ್ಞಾನೇಶ ಪರತೀರ್ಥ ಸತ್ಯ ಪ್ರಜ್ಞ ಪ್ರಾಜ್ಞ
ಸೂನು ಸುತಪೋರಾಜ ವರಕುಮಾರಾ
ಮೌನಿಕುಲವರ ಅಚ್ಯುತ ಪ್ರೇಕ್ಷರಂಘ್ರಿಗಳ
ಆ ನಮಿಪೆನನವರತ ಭಕ್ತಿ ಪೂರ್ವಕದೀ ೨

ಅಚ್ಛಿನ್ನ ಭಕ್ತ ಮರುತವತಾರ ಮಧ್ವಮುನಿ
ಪ್ರೋಚ್ಚಾಬ್ಜನಾಭ ನರಹರಿ ಮಾಧವಾ
ಸಚ್ಚರಿತ ಅಕ್ಷೋಭ್ಯ ಮುನಿಪ ಪ್ರತಿವಾದಿ ಭೂ
ತೋಚ್ಚಾಟನವಗೈದ ಜಯತೀರ್ಥ ಗುರುವರರ ೩

ವಿದ್ಯಾಧಿರಾಜ ರಾಜೇಂದ್ರ ಸುತಪೋನಿಧಿ ಜ
ಯಧ್ವಜರ ಪುರುಷೋತ್ತಮ ಬ್ರಹ್ಮಣ್ಯರಾ
ಮಧ್ವ ಸಿದ್ಧಾಂತ ಸ್ಥಾಪಕ ವ್ಯಾಸರಾಯ ಪ್ರ
ಸಿದ್ಧ ಶ್ರೀನಿವಾಸಯತಿಗಳ ಪವಿತ್ರ ಪದ ೪

ಲಕ್ಷ್ಮೀ ಕಾಂತರನ ಶ್ರೀಪತಿ ರಾಮಚಂದ್ರರನ
ಲಕ್ಷ್ಮೀ ವಲ್ಲಭ ಲಕ್ಷ್ಮೀ ನಾಥಪತಿಯಾ
ಲಕ್ಷ್ಮೀ ನಾರಾಯಣರ ಶ್ರೀ ರಘುನಾಥ ಸು
ಭಿಕ್ಷುಗಳ ಜಗನ್ನಾಥ ಗುರುಗಳನಾ ೫

ಸಾನುರಾಗದಲಿ ಸರ್ವೋತ್ತಮನ ಮೂರ್ತಿ ವಿ
ಜ್ಞಾನ ಪೂರ್ವಕ ಭಜಿಸಿ ಸುಖಿಸುತಿಪ್ಪಾ
ಶ್ರೀನಾಥ ಗುರುವರರ ಕರಕಮಲಜಾತ ವಿ
ದ್ಯಾನಾಥ ಯತಿಗಳನು ಅನುದಿನದಿ ಮರೆಯದಲೆ ೬

ವಿದ್ಯಾಧಿರಾಜರ ಕವೀಂದ್ರ ವಾಗೀಶರ ಸ್ವ
ಸಿದ್ಧಾಂತ ಸ್ಥಾಪಿಸಿದ ರಾಮ ಚಂದ್ರಾ
ಅದ್ವೈತ ಕುಮುದ ದಿನಪ ವಿಬುಧೇಂದ್ರಾರ್ಯ
ಸದ್ವೈಷ್ಣವಾಗ್ರಣಿ ಜಿತಾಮಿತ್ರ ಮುನಿವರರ ೭

ರಘುನಂದನ ಸುರೇಂದ್ರ ವಿಜಯೀಂದ್ರ ಸುಧೀಂದ್ರ
ಸುಗುಣ ವಾರಿಧಿ ರಾಘವೇಂದ್ರಾರ್ಯರಾ
ನಿಗಮಾರ್ಥ ಕೋವಿದ ಸುಯೋಗೀಂದ್ರ ಸೂರೀಂದ್ರ
ಜಗತೀತಳದಿ ಪ್ರಸಿದ್ಧ ಸುಮತೀಂದ್ರರ ೮

ಸಾಧುಜನಸನ್ನುತ ಉಪೇಂದ್ರರಾಯರ ವೇದ
ವೇದಾಂಗ ಚತುರ ವಾದೀಂದ್ರ ಯತಿಯಾ
ಭೇದಮತ ವಾರಿನಿಧಿ ಚಂದ್ರ ವಸುಧೇಂದ್ರ ವಿ
ದ್ಯಾದಾನಾಸಕ್ತ ವರದೇಂದ್ರ ಯತಿವರರ ೯

ರಾಮವೇದವ್ಯಾಸರಂಘ್ರಿ ಕಮಲಗಳ ಹೃ
ತ್ತಾಮರಸದೊಳು ಪೂಜಿಸಿದ ಬಗೆಯನ್ನು
ಧೀಮಂತರಿಗೆ ತಿಳಿಸಲೋಸುಗದಿ ನವರತ್ನ
ಹೇಮ ಮಂಟಪ ವಿರಚಿಸಿದ ಭುವನೇಂದ್ರರಾ ೧೦

ಪವಮಾನ ಮತ ಪ್ರವರ್ತಕರೊಳುತ್ತಮರೆನಿಪ
ಭವ ಗೆದ್ದಾ ಸುಬೋಧ ಸುಜನೇಂದ್ರರಾ
ಅವನಿತ ದೊಳಗೆ ಅಭ್ಯಧಿಕರನ ಮಾಡಿ ಸ
ತ್ಕವಿಗಳನೆ ಸಂತೈಸಲೆಂದು ಸ್ಥಾಪಿಸಿದವರಾ ೧೧

ಹರಿಯ ಸಂಸ್ಮರಣೆ ಅಹರ್ನಿಶಿಗಳಲಿ ಮಹ ವಿಪ
ತ್ಪರಿಹಾರಗೈಸುವುದು ಗುರುಗಳ ಸ್ಮರಣೇ
ಪರಮ ಸೌಖ್ಯವನೀವದಾದಾವ ಕಾಲದಲಿ
ಪೊರೆವ ಜಗನ್ನಾಥ ವಿಠ್ಠಲವೊಲಿದು ನಿರುತಾ ೧೨

ನವ ವೃಂದಾವನ

೧೨೬

ವೃಂದಾವನಗಳಿಗಾನಮಿಸಿ ನಿತ್ಯ
ನಂದ ತೀರ್ಥ ಮತೋದ್ಧಾರಕರೆನಿಪ ಪ

ವರ ಮಧ್ವಮುನಿ ಕಮಲಕರ ಪದ್ಮ ಸಂಜಾತ
ಗುರು ಪದ್ಮನಾಭ ಶ್ರೀ ರಾಮತೀರ್ಥ ಕವೀಂದ್ರಾ
ಕರಸರೋರುಹ ಜಾತ ವಾಗೀಶಮುನಿ
ಪರಘುವರ್ಯ ಗೋವಿಂದಾಖ್ಯ ಒಡೆಯರ ಪವಿತ್ರತಮ ೧

ಶ್ರೀ ಸುಧೀಂದ್ರಾರ್ಯರ ಪ್ರಪೌತ್ರರೆನಿಪ
ವಸುಧೀಂದ್ರ ವ್ಯಾಸರಾಯ ಶ್ರೀನಿವಾಸ ಮುನಿಯಾ
ಭೂಸುರರು ಪರಮ ಸಂತೋಷದಲಿ ಸ್ಮರಿಸೆ ನಿ
ರ್ದೋಷರನ ಮಾಡಿ ಅಭಿಲಾಷೆ ಪೂರೈಸುತಿಹ ೨

ದೇವತೆಗಳು ಇವರು ಸಂದೇಹ ಬಡಸಲ್ಲಾ ಮಿ
ಥ್ಯಾವಾದಿಗಳ ಪರಾಭವ ಮಾಡಿ ಈ ವಸುಂಧರೆಯೊಳಗೆ
ಕೀರ್ತಿಯುತರಾಗಿ ಲಕ್ಷ್ಮೀವರ ಜಗ
ನ್ನಾಥ ವಿಠಲನ ಐದಿಹರಾ ೩

ಸತ್ಯಬೋಧ ತೀರ್ಥ

೧೨೭

ನಾ ಧನ್ಯನಾದೆನಿಂದು । ಸತ್ಯ । ಬೋಧರಾಯರ ದಿವ್ಯ ।
ಪಾದಕಮಲವ ಕಂಡು ಪ

ಹಿಂಗಿದವಖಿಳದೋಷಂಗಳು ಸನ್ಮುನಿಗಳವ
ರಂಘ್ರಿ ಸಂದರುಶನದೀ

ಗಂಗಾದಿತೀರ್ಥ ಭುಜಂಗಾದಿ ಮೊದಲಾದ
ತುಂಗ ತೀರ್ಥಯಾತ್ರೆ ಫಲ ಸಮನಿಸಿತು ೧

ಆವ ಮುನಿಗಳೋ ಮತ್ತಾವ ದೇವತೆಗಳೋ
ಆವಾವಬಲ್ಲ ಮತ್ತಾವಾಗಲೂ
ಸೇವಿಸುವರ ಕೃಪಾವಲೋಕನದಿಂದ
ಪಾವನ ಮಾಡಲು ಕೋವಿದಾರ್ಯರ ಕಂಡು ೨

ಸೀತಾರಮಣ ಜಗನ್ನಾಥ ವಿಠ್ಠಲರೇಯಾ
ಭೂತಳದೊಳಗೀ ಮಹಾತ್ಮರನಾ
ಪ್ರೀತಿಯಂ ಸೃಜಿಸಿದನಾಥ ಜನರನ ಪು
ನೀತರ ಮಾಡಲು ಆತ ತಕ್ಷಣದಿ ೩

೧೨೮

ಪ್ರತಿಗಾಣೆ ನಿಮ್ಮ ಮಹಿಮೆಗೆ
ಸತ್ಯಭೋಧ ಯತಿಕುಲವರನೆ ನಿತ್ಯ
ತುತಿಸಿ ವಂದಿಸುವ ತಾವಕರೊಳು ಎಣಿಸೋ ಪ

ಅರ್ಥಿಜನ ಚಿಂತಾಮಣಿ ಸತ್ಕರುಣಿ
ಶ್ರೀನಿವಾಸನ ಗುಣ ಸಾನುರಾಗದಲಿ ವ್ಯಾ
ಖ್ಯಾನ ಪೇಳುವ ಕಾಲದಿ
ಶ್ವಾನರೂಪದಿ ಪವಮಾನ ಜನರು ನೋಡೆ
ಕಾಣಿಸಿಕೊಂಡನಂದೊ ತಾ ಬಂದು ೧

ಬವರಗೋಸುಗ ಬಂದ ಯವನಾಧಿಪತಿ ನಿಮ್ಮ
ಸುವಿಚಿತ್ರ ಮಹಿಮೆ ಕಂಡು
ಪ್ರವಿನೀತನಾಗಿ ಕಪ್ಪವೆ ಕೊಟ್ಟು ನಮಿಸಿದ
ಕವಿ ಆವಾ ವಿಭವಾ ವರ್ಣಿಸುವಾ ೨

ಇವರು ದೇವಾಂಶರೆಂದರುಷುವಗೋಸುಗ ಬಂದು
ದಿವಿಜತರಂಗಿಣಿಯು
ಶಿವನಂಗಭೂರುಹ ಮೂಲ ಭಾಗದಲಿ ಉ
ದ್ಭವಿಸಿ ಕಂಗೊಳಿಸಿದಳು ಕೃಪಾಳು ೩

ಸ್ವಾಂತಸ್ಥ ಮುಖ್ಯ ಪ್ರಾಣಾಂತರಾತ್ಮಕ ಭಗ
ವಂತನಂಘ್ರಿ ಕಮಲ
ಸಂತತ ಸರ್ವತ್ರ ಚಿಂತಿಸುತಿಪ್ಪ ಮ
ಹಾಂತರಿಗೇನಚ್ಚರೀ ವಿಚಾರ ೪

ಮರುತ ಮತಾಬ್ಧಿ ಚಂದಿರ ಚಾರು ಚರಿತ ಭೂ
ಸುರವರ ಸನ್ನುತನೇ
ಪರಮ ಪುರುಷ ಜಗನ್ನಾಥ ವಿಠ್ಠಲ ನಿಮ್ಮ
ಪರಿಪರಿ ಮಹಿಮೆ ಎಲ್ಲಾ ತಾ ಬಲ್ಲಾ ೫

೧೨೯

ವಾದಿವಾರಣ ಪಂಚವದನ ।ಸತ್ಯ
ಬೋಧ ಸದ್ಗುರು ಜಿತಮದನ ಪ

ಬಾದರಾಯಣ ವೈದೇಹಿ ಚರಣಾಬ್ಜಾ
ರಾಧಕ ನಮಿಪೆ ಸನ್ಮೋದವಿತ್ತು ಕಾಯೊ ಅ.ಪ.

ಶ್ರೀ ಮಧ್ವ ಮತವಾರಿಧಿ ಸೋಮ । ದ್ವಿ ಜ
ಸ್ತೋಮ ಸನ್ನುತ ಗುಣಧಾಮಾ
ಕಾಮಿತಜನ ಕಲ್ಪಭೂಜ ವಿಬುಧ ಸು
ಪ್ರೇಮ ಸಂಯಮಿಕುಲೋದ್ದಾಮ ದಯಾಂಬುಧೇ
ಗೋಮಿನೀವಲ್ಲಭನ ಪದಯುಗ

ತಾಮರರಸಗಳನನುದಿನದಿ ಬಿಡ
ದೇ ಮನಾಬ್ಜದಿ ಭಜಿಸುತಿಪ್ಪಮ
ಹಾ ಮಹಿಮ ತುತಿಸಿಬಲ್ಲನೆ ೧

ದೀನಜನರ ಬಂಧು ನಿನ್ನಾ । ಪಾದ
ಕಾನೆರಗುವೆ ಸುಪ್ರಸನ್ನಾ
ದಾನ ಮಾನಗಳಿಂದ ಜ್ಞಾನಿಜನರಿಗೆ ಮ
ಹಾನಂದ ಬಡಿಸುತ ಸಾನುರಾಗದಿ ನಿತ್ಯಾ
ಶ್ರೀ ನಿಕೇತನ ಪರಮ ಕಾರು
ಣ್ಯ ನಿವಾಸ ಸ್ಥಾನನೆನಿಪ ಮ
ಹಾನು ಭಾವ ಭಗವತ್ಪದಾಂಭೋ
ಜಾನುಗರೊಳೆನ್ನೆಣಿಸಿ ಪಾಲಿಸು ೨

ಸತ್ಯಪ್ರಿಯರ ಕರಕಮಲ । ಜಾತ
ನಿತ್ಯ ನಿರ್ಜಿತ ಘೋರ ಶಮಲಾ
ಚಿತ್ತಜಪಿತ ಜಗನ್ನಾಥ ವಿಠಲನ
ಚಿತ್ತಾನುವರ್ತಿಗಳಾಗಿ ಸಂಚರಿಸುತಾ
ಅತ್ಯಧಿಕ ಸಂತೋಷದಲಿ
ಪ್ರತ್ಯರ್ಥಿಗಳಿಗುತ್ತರಿಸಿ ಮಿಗೆ ಪುರು
ಷೋತ್ತಮನೆ ಪರನೆಂದು ಡಂಗುರ
ವೆತ್ತಿ ಹೊಯ್ಸಿ ಕೃತಾರ್ಥನೆನಿಸಿದ ೩

ಸತ್ಯಸಂಧ ತೀರ್ಥರು

೧೩೦

ವಂದಿಸು ಗುರು ಸತ್ಯಸಂಧ ಮುನಿಯಾ
ವೃಂದಾವನಕೆ ಹರುಷದಿಂದ ಎಂದೆಂದು ಪ

ಗಂಗಾ ಪ್ರಯಾಗ ಗಯಾ ಶ್ರೀಶೈಲಹೋಬಲ ಘು
ಜಂಗಾದ್ರಿ ಮೊದಲಾದ ಕ್ಷೇತ್ರಗಳನು

ಇಂಗಿತಜ್ಞರ ಸಹಿತ ಸಂಬಂಧ ಗೈಸಿ ವರಮಹಿಷ
ತುಂಗಾತಟದಿ ವಾಸವಾಗಿಪ್ಪ ಯತಿವರಗೆ ೧

ಭೂದೇವನುತ ಸತ್ಯಬೋಧ ಮುನಿವರ ಕರ
ವೇದಿಕದೊಳುದ್ಭವಿಸಿದ ಕಲ್ಪವೃಕ್ಷ
ಸಾಧುಜನರಿಗೆ ಬೇಡಿದಿಷ್ಟಾರ್ಥಗಳ
ಮೋದದಿ ಕೊಡುವ ಮಹಿಮರ ಕಂಡು ೨

ಶ್ರೀ ಮನೋರಮನ ಅತಿವಿಮಲತರ ಶಾಸ್ತ್ರ
ನಾಮಾವಳಿಗೆ ಸುವ್ಯಾಖ್ಯಾನ ರಚಿಸಿ
ಧೀಮಂತ ಜನರಿಗುಪದೇಶಿಸಿ ನಿರಂತರ
ಧಾಮ ಜಗನ್ನಾಥ ವಿಠಲನ ಒಲುಮೆ ಪಡೆದವರಿಗೆ ೩

ವರದೇಂದ್ರ ತೀರ್ಥರು

೧೩೧

ವರದೇಂದ್ರ ಮುನಿಪ ದಿಕ್ಷತಿಗಳಂತೆ
ಪರಮ ಸಂಭ್ರಮದಿ ರಾಜಿಸುವ ನೋಳ್ಪರಿಗೆ ಪ

ಸುರರಾಜನಂತೆ ಭೂಸುರಗಡಣ ಮಧ್ಯದಲಿ
ಮೆರೆವ ದುರ್ವಿಷಯಕೆ ಪಾವಕಾ
ನಿರುತ ಸದ್ಧರ್ಮ ಶಿಕ್ಷಿಸುವಲ್ಲಿ ವರದಂಡ
ಧರನಂತೆ ಇರುವ ದಿಗ್ವಜಿಯಿಸುವ ೧

ಜ್ಞಾನಾದಿ ಗುಣದಿ ರತ್ನಾಕರನೆನಿಸಿ ಕುಮತ
ಪಾನೀಯಧರಗಳಿಗೆ ಪವಮಾನನೆನಿಪ
ದೀನಜನರಿಗೆ ಧನದ ವೈರಾಗ್ಯ ತಪದಲಿ
ಕೃಶಾನು ಕೇತನ ತೆರದಲೊಪ್ಪುವನಜಸ್ರ ೨

ಸೂರಿಕುಲವರಿಯ ವಸುಧೀಂದ್ರರಾಯ ಕರಸ
ರೋರುಹದಿ ಜನಿಸಿ ಪರಮೋತ್ಸಹದಲಿ
ಶ್ರೀರಾಮ ವ್ಯಾಸ ಜಗನ್ನಾಥ ವಿಠಲನ ಚರ
ಣಾರವಿಂದರ್ಚನೆಯ ಪಡೆದು ಸಂತೋಷಿಸುವ ೩

೧೩೨

ವರದೇಂದ್ರ ಯತಿ ಚಕ್ರವರ್ತಿ ನಿರಂತರ
ವರಣಿಸುವೆ ನಿಮ್ಮ ಕೀರ್ತಿ
ಪರಮ ಕರುಣಿ ನಿಮ್ಮ ಚರಣಕಮಲಯುಗ
ಕ್ಕೆರಗಿ ಬೇಡುವೆ ವರವಾ ಎಮ್ಮನು ಪೊರೆವಾ ಪ

ನತಜನಬಂಧು ನೀನೆಂದೂ । ತಿಳಿದು
ನತಿಸಿದೆ ಗುಣಗಣಸಿಂಧು
ಪ್ರತಿಗಾಣೆ ನಿಮಗೆ ಸುವ್ರತಿ ವರ ಪ್ರಣತ ಕಾ
ಮಿತ ಕಲ್ಪತರುವೆ ನಿರ್ಜಿತಮಾರಮಾರ್ಗಣ
ಕ್ಷಿತಿಪರಿಗೆ ಪ್ರತಿದಿನದಿ ಪರಮಾದ್ಭುತವೆನಿಸುವುದು ನಿಮ್ಮದಾನ
ಪ್ರತತಿ ಸಾಂಪ್ರತ ಮಧುರವಚನಾ ಶಾಸ್ತ್ರ ಪ್ರವಚನಾ ೧

ಮರುತ ಮತಾಂಬುಧಿ ಚಂದ್ರಾ । ಚಾಮಿ
ಕರವರ್ಣಸರಸ ರವೀಂದ್ರ
ಪರವಾದಿತಿಮಿರ ಭಾಸ್ಕರ ವಸುಧೀಂದ್ರ ಸ
ದ್ಗುರು ಕರಸಂಜಾತ ನಿರುಪಮ ನಿರ್ಭೀತಾ
ಖರಮಥನ ಪದಕೋಸದ ಮಧುಕರ ಕೃಪಾಕರ
ಕರವ ಪಿಡಿದುದ್ಧರಿಸುವುದು ಭೂ
ಸುರ ಕುಲೋತ್ತಂಸಾ ನಮೋ ಪರಮಹಂಸಾ ೨

ಕಲಿತ ಸುಂದರ ಮಂದಹಾಸಾ ಹೇ ನಿ
ಷ್ಕಲುಷ ಸುತತ್ವ ವಿಲಾಸಾ
ಗಳಿತಾ ಘಸಂಘನಿಶ್ಚಲ ಜಗನ್ನಾಥ ವಿ
ಠಲನೊಲಿಮೆಯ ಪಡೆದಿಳಿಯೊಳು ಚರಿಸುವ
ಭಳಿರೆ ಪ್ರತಿಯೋಗಿಗಳೆನಿಪ ಕಂ
ಕಲಭಕೇಸರಿ ನಿಮ್ಮ ದಾಸರೊಳೊಲಿದು
ಪಾಲಿಪುದನವರತ ಎನ್ನ ನಂಬಿದೆನೋ ನಿನ್ನ ೩

ಸತ್ಯವರ ತೀರ್ಥರು

೧೩೩

ಸತ್ಯವರ ಮುನಿಪ ದಿಕ್ಷತಿಗಳಂತೆ
ನಿತ್ಯದಲಿ ತೋರ್ಪ ನೋಳ್ಪರಿಗೆ ಸಂಭ್ರಮದಿ ಪ

ಸಿಂಧೂರವೇರಿ ದೇವೇಂದ್ರನಂತೊಪ್ಪುವನು
ವಂದಿಪ ಜನರಘಾಳಿವನ ಕೃಶಾನು
ಮಂದ ಜನರಿಗೆ ದಂಡ ಧರನಂತೆ ತೋರ್ಪಕ
ರ್ಮಂದಿಪನು ನರವಾಹನವೇರಿ ನಿಋಋತಿಯೆನಿಪ ೧

ಜ್ಞಾನಾದಿ ಗುಣದಿ ರತ್ನಾಕರನೆನಿಪ ಶೈವ
ಜೈನಾದಿಮತ ಘನಾಳಿಗೆ ಮಾರುತಾ
ದೀನ ಜನರಿಗೆ ಧನದನಾಗಿ ಸಂತೈಪ ವ್ಯಾ
ಖ್ಯಾನ ಕಾಲದಿ ಜಗತ್ತೀಶನೆಂದೊರೆವಾ ೨

ಶ್ರೀಮದ್ರಮಾಪತಿ ಜಗನ್ನಾಥ ವಿಠಲ
ಸ್ವಾಮಿ ಪಾದಾಬ್ಜ ಭಜನಾಸಕ್ತನಿವ
ಧೀಮಂತ ಗುರು ಸಾರ್ವಭೌಮ ಭೂ ಸುರನುತ
ಮಹಾ ಮಹಿಮ ಪೊಗಳಲೆನ್ನೊಶವೇ ಕರುಣಾ ಸಿಂಧು ೩

೧೩೪

ಗುರುಸತ್ಯವರರೆಂಬ ಕಲ್ಪಭೂಜಾ
ಧರೆಯೊಳಗೆಮ್ಮನುದ್ಧರಿಸ ಬಂತಿದಕೊ ಪ

ಶ್ರೀಮಧ್ವಮತವೆಂಬೋ ಭೂಮಿಯೊಳಗುದ್ಭವಿಸಿ
ರಾಮ ವೇದವ್ಯಾಸ್ಯರಂಘ್ರಿ ಯುಗಳ
ವ್ಯೋಮ ಮಂಡಲವನಾಶ್ರಯಿಸಿ ಸತ್ಕೀರ್ತಿನಿ
ಸ್ಸೀಮ ಶಾಖೋಪಶಾಖೆಗಳಿಂದ ಶೋಭಿಸುತ ೧

ಭವವೆಂಬ ಭಾಸ್ಕರತಪದಿಂದ ಬೆಂದು ಬಂ
ದವರ ಮಂದಸ್ಮಿತ ನೆಳಲಿಂದಲೀ
ಪ್ರವಣರಂತಃಸ್ತಾಪ ಕಳೆದು ನಿತ್ಯದಲಿ ಸ
ತ್ಕವಿ ದ್ವಿಜಾಳಿಗಲಿಗಾಶ್ರಿತರಾಗಿ ಮೆರೆವ ೨

ವಿಳಿತ ಕರ್ಮ ಜ್ಞಾನ ಮಾರ್ಗಸ್ಥ ಜನರಿಗಾಗಿ
ಲ್ಲಿಹವು ಫಲ ಪುಷ್ಪ ಐಹಿಕಾಮುಷ್ಮಿಕಾ
ಮಹಿತ ಜಗನ್ನಾಥ ವಿಠಲನೆಂಬ ಭುಜಗ ಹೃ
ದ್ಗುಹದೊಳಿಪ್ಪದು ಮಾಯಿಮೂಷಕಗಳೋಡಿಸುತ ೩

ಭುವನೇಂದ್ರ ತೀರ್ಥರು

೧೩೫

ಕೃತಕೃತ್ಯನಾದೆನಿಂದಿನ ದಿನದಲಿ
ವ್ರತಿ ಕುಲೋತ್ತಂಸ ಭುವನೇಂದ್ರರಾಯರ ಕಂಡು ಪ

ಗಂಗಾ ಪ್ರಯಾಗ ಗಯಾ ನೈಮಿಷಾರಣ್ಯ ಕುರು
ಜಾಂಗಳಾದ್ಯಖಿಳ ಸುಕ್ಷೇತ್ರಗಳಲಿ
ಸಾಂಗ ಕರ್ಮಗಳ ಹರಿಗರ್ಪಿಸಿದ ಫಲವು ಮುನಿ
ಪುಂಗವರ ಕಂಡ ಮಾತ್ರದಿ ಸಮನಿಸಿತೆನಗೆ ೧

ಹಿಂದೆ ಬಹು ಜನ್ಮದಿ ಮಾಡಿದ ಸುಕೃತಕೆ ಕ
ರ್ಮಂದೀಶ್ವರನ ದಿವ್ಯ ಪಾದ ಕಮಲ
ಸಂದರ್ಶನವೆ ಮಹತ್ಫಲವಾಯಿತೆನಗೆ ಗೋ
ವಿಂದನ ಪ್ರತಿಬಿಂಬರಾದ ಕಾರಣದಿಂದ ೨

ಅನ್ಯಸಾಧನೆಗಳಿನ್ನಾಚರಿಸಲ್ಯಾಕೆ ಮ
ತ್ತನ್ಯರಾರಾಧನೆಯ ಮಾಡಲ್ಯಾಕೆ
ಸನ್ನುತ ಮಹಿಮ ಜಗನ್ನಾಥ ವಿಠಲನ ಕಾ
ರುಣ್ಯ ಪಾತ್ರರಾ ಕರುಣವಾಯಿತೆನ್ನೊಳಿಂದು ೩

೧೩೬

ನಮಿಸುವೆನು ಭುವನೇಂದ್ರ ಗುರುರಾಯರ
ಅಮಿತ ಮಹಿಮಗೆ ಅಹೋರಾತ್ರಿಯಲಿ ಬಿಡದೆ ಪ

ಸಿದ್ಧಾರ್ಥಿ ನಾಮ ಸಂವತ್ಸರದ ವೈಶಾಖ
ಶುದ್ಧೇತರ ಪಕ್ಷ ಸಪ್ತಮಿಯಲಿ
ವಿದ್ವತ್ಸಭಾ ಮಧ್ಯದಲಿ ರಾಮವ್ಯಾಸರ
ಪದದ್ವಯವನೈದಿದ ಮಹಾಮಹಿಮರನ ಕಂಡು ೧

ರಾಜವಳ್ಳಿ ಎಂಬ ಪುರದಿ ಕರುಣದಿ ಪಾರಿ
ವ್ರಾಜಕಾಚಾರ್ಯ ವರವತಂಸ ಪಾದ
ರಾಜೀವಯುಗಳ ಧೇನಿಸುತಿಪ್ಪರಿಗೆ ಕಲ್ಪ
ಭೂಜದಂದದಿ ಬೇಡಿದಿಷ್ಟಾರ್ಥ ಕೊಡುವರಿಗೆ ೨

ಶ್ರೀ ತುಂಗ ಭದ್ರಾ ತರಂಗಿಣೀ ತೀರದಲಿ
ವಾತಾತ್ಮಜನ ಪಾದ ಮೂಲದಲ್ಲಿ
ಪ್ರೀತಿ ಪೂರ್ವಕವಾಗಿ ವಾಸವಾದರು ಜಗ
ನ್ನಾಥ ವಿಠಲನ ಕಾರುಣ್ಯಪಾತ್ರರ ಕಂಡು ೩

೧೩೭

ಭುವನೇಂದ್ರ ಮುನಿಪ ನಿನ್ನವನೋ ಎನ್ನ
ಅವಗುಣಗಳೆಣಿಸದಲೆ ಅನುದಿನದ ಪಾಲಿಪುದು ಪ

ಸಾಧುಜನ ಸಂಪೂಜ್ಯ ಸತತ ನೀ ಎನ್ನ ಅಪ
ರಾಧಗಳೆಣಿಸದಲೆ ಸಂತೈಪುದು
ವೇದ ಪದಯೋಗ್ಯ ಸುಮನಸರ ಗುರು ಶ್ರೀ ಪೂರ್ಣ
ಬೋಧ ಮತ ವಾರಿನಿಧಿ ಚಂದ್ರ ಸದ್ಗುಣ ಸಾಂದ್ರ ೧

ಶ್ರೀ ಮೂಲದಿಗ್ವಿಜಯರಾಮ ವ್ಯಾಸಾಂಘ್ರಿ ಯುಗ
ತಾಮರಸ ಭಜಕ ಈ ಭೂಮಿಯೊಳಿಹ
ಪಾಮರನ ಉದ್ಧರಿಸು ರವಿ ಸಾರ್ವ
ಭೌಮ ನೀ ಸಂಚರಿಪೆ ಈ ಮಹೀತಳದಿ ೨

ವರದೇಂದ್ರ ಯತಿವರ್ಯ ಕರ ಕಮಲ ಸಂಜಾತ
ನಿರುಪಮ ಜಗನ್ನಾಥ ವಿಠಲ ದೂತ
ನೆರೆ ನಂಬಿದೆನೋ ನಿನ್ನ ಪರಿಪಾಲಿಸುವುದೆನ್ನ
ಮರೆಯಲಾಗದು ಜಿತಸ್ಮರ ಭೂವರ ಪ್ರವರಾ ೩

ವ್ಯಾಸತತ್ವಜ್ಞ ತೀರ್ಥರು

೧೩೮

ಆವ ಜನುಮದ ಸುಕೃತ ಫಲಿಸಿತೆನಗೆ
ಕೋವಿದಾಗ್ರಣಿ ವ್ಯಾಸತತ್ವಜ್ಞರ ಕಂಡೆ ಪ

ಜೀವ ಸಾಮಾನ್ಯವೆಂದರಿಯದಿಲಿ ಶಾಸ್ತ್ರಗಳ
ನಾವಲೋಕನದಿ ಪೇಳ್ವರು ನಿತ್ಯದಿ
ದೇವಾಂಶರಿವರು ಸಂಶಯವು ಬಡಸಲ್ಲ ಮಾ
ಯಾ ವಲ್ಲಭನು ಇವರ ಹೃದಯದೊಳಗಿರುತಿಪ್ಪ ೧

ಕವಿ ಭರಿಡಿತ ಮಹಾಮುನಿ ವ್ಯಾಸಕೃತ ಸುಭಾ
ಗವತಾದಿ ಗ್ರಂಥ ವ್ಯಾಖ್ಯಾನ ನೋಡಿ
ಭುವನೇಂದ್ರರಾಯರ ಕರುಣದಲಿ ತುರೀಯಾ ಶ್ರ
ಮನವಿತ್ತು ವ್ಯಾಸತತ್ವಜ್ಞ ರಹುದೆಂದು ೨

ಈ ಜಗತ್ರಯ ದೊಳಗೆ ಪೂಜ್ಯ ಪೂಜಕರ ನಿ
ರ್ವ್ಯಾಜದಲಿ ತಳುಪಿದನು ಭಕ್ತಜನಕೆ
ಶ್ರೀ ಜಗನ್ನಾಥ ವಿಠಲನೊಬ್ಬ ಪೂಜ್ಯ ಪಂ
ಕೇಜ ಭವ ಭವರು ಪೂಜಕರೆಂಬುವರ ನೋಡ್ದೆ ೩

೧೩೬

ಕೃತ ಕೃತ್ಯನಾದೆನಿಂದಿನ ದಿನದೊಳು
ಕ್ಷಿತಿಸುತ ವೆಂಕಟರಾಮಾರ್ಯರನ ಕಂಡು ಪ

ಭೂಮಂಡಲದೊಳುಳ್ಳ ಸಕಲ ತೀರ್ಥಸ್ನಾನ
ಹೇಮಾದ್ರಿ ಮೊದಲಾದ ಕ್ಷೇತ್ರ ಯಾತ್ರೆ
ನೇಮ ಜಪತಪ ವ್ರತಾದಿಗಳ ಮಾಡಿದ ಪುಣ್ಯ
ಈ ಮಹಾತ್ಮರ ಕಂಡ ಮಾತ್ರ ಸಮನಿಸಿತು ೧

ಷಣ್ಣವತ್ಯಬ್ಧ ಪರಿಯಂತ ಹರಿಮಹಿಮೆಗಳ
ಸನ್ನುತಿಯಲೀ ಶ್ರುತಿಸ್ಮೃತಿಗಳಿಂದ
ಧನ್ಯರೆಂದೆನಿಸಿ ಮಹಿಯೊಳಗೆ ಪೂರಿತರಾದ
ಪುಣ್ಯಚರಿತರ ದಿವ್ಯ ಪಾದವನೆ ನಾ ಕಂಡು ೨

ಹೀನ ಜನರೇ ಬಹಳ ಕ್ಷೋಣಿಯ ಮೇಲೆ ಸು
ಜ್ಞಾನಿಗಳು ದುರ್ಲಭರು ಕಲಿಯುಗದಲಿ
ಆನತೇಷ್ಟಪ್ರದ ಜಗನ್ನಾಥ ವಿಠಲ
ತಾನೆ ಕರೆತಂದು ತೋರಿ ಪುನೀತನ ಮಾಡ್ದ ೩

೧೪೦

ತೆರಳಿದರು ವ್ಯಾಸತತ್ವಜ್ಞರಿಂದು
ಪುರುಷೋತ್ತಮನ ಗುಣಗಳರುಪಿ ಸುಜನರಿಗೆ ಪ

ವರ ರೌದ್ರಿನಾಮ ಸಂವತ್ಸರದ ಶ್ರಾವಣ
ಪರಪಕ್ಷ ಅಷ್ಟಮಿ ಭಾನುವಾರ
ಭರಣಿ ನಕ್ಷತ್ರ ಪ್ರಾತಃಕಾಲದಲಿ ಸೋಮ
ಪುರದಿ ಗೋಪಾಲಕೃಷ್ಣನ ಪಾದ ಸನ್ನಿಧಿಗೆ ೧

ವೇದಾಬ್ಜಭವಸೂತ್ರ ಭಾಷ್ಯ ಭಾಗವತ ಮೊದ
ಲಾದ ಶಾಸ್ತ್ರಗಳ ಕೀರ್ತನೆಗೈಯುತಾ
ಪಾದೋದಕವ ಶಿರದಿ ಧರಿಸುತಿಪ್ಪ ವರಘಾತಿ
ರೋಧಾನಗೈಸಿ ಪರಗತಿ ಮಾರ್ಗವನು ತೋರಿ ೨

ಸೋಜಿಗವಿದಲ್ಲ ಸಜ್ಜನರನುದ್ಧರಿಸುವುದು
ನೈಜ ಜಗನ್ನಾಥ ವಿಠ್ಠಲನ ಪಾದ
ರಾಜೀವಯುಗಳ ನಿರ್ವ್ಯಾಜದಲಿ ಭಜಿಪ ಪ್ರ
ಯೋಜನನೊರೆದಿತರ ವ್ಯಾಪಾರ ತೊರೆದು ೩

೧೪೧

ರಾಮಾರ್ಯ ನಿಮ್ಮಂಘ್ರಿ ಕಮಲಗಳಿಗೆ
ನಾ ಮುಗಿವೆ ಕರವ ಕರುಣದಿ ನೋಡು ವೆಂಕಟ ಪ.

ಬಾಹ್ಯ ಕರ್ಮವ ತೊರೆದು ಸರ್ವಗತನಾದ ನರ
ಸಿಂಹನ ಪ್ರೀತಿಗಳಿಸುವ ಸ್ನೇಹದಿ
ಮಹ್ಯಮರರಿಗೆ ವಿದ್ಯೆ ವಸ್ತ್ರಾನ್ನ ಪ್ರತಿ ದಿವಸ
ಸಹ್ಯವಿಲ್ಲದೆ ಕೊಟ್ಟು ಮೋದಿಸುವ ವೆಂಕಟ ೧

ವಾಸುದೇವ ವಿಠಲನಂಘ್ರಿಗಳ ರಾ
ಜೀವ ಮಧುಕರ ಮಧ್ವ ಶಾಸ್ತ್ರಜ್ಞನೇ
ಅವ ದೇಶದೊಳಿದ್ದರೇನ್ಮರೆಯದೆ ನಿಮ್ಮ
ಸೇವ ಸೇವಕರೊಳಗೆ ಎಣಿಸುವುದು ವೆಂಕಟ ೨

ಬಾಲಕನ ಬಿನ್ನಪ ಲಾಲಿಸಿ ಕರುಣದಿ ಗೋ
ಪಾಲ ವಿಠಲನ ದಾಸರ ಮಗನೆಂದು
ಪಾಲಿಪುದು ಪರಮ ಕರುಣಾಳು ಜಗನ್ನಾಥ ವಿಠಲ
ಗಾಳೆನಿಪ ಪವಮಾನ ಗಾಯನನೆ ವೆಂಕಟ ೩

ಪುರಂದರದಾಸರ ಸ್ತೋತ್ರ

೧೪೨

ದಾಸರಾಯ ಪುರಂದರ ದಾಸರಾಯ ಪ

ದಾಸರಾಯ ಪ್ರತಿವಾಸರದಲಿ ಶ್ರೀನಿ
ವಾಸನ್ನ ತೋರೋ ದಯಾಸಾಂದ್ರ ಅ.ಪ.

ವರದನಾಮಕ ಭೂಸುರನ ಮಡದಿ ಬ
ಸಿರಲಿ ಜನಿಸಿ ಬಂದು ಮೆರೆದೆ ಧರಣಿಯೊಳು ೧

ಕುಲಿಶಧರಾಹ್ವಯ ಪೊಳಲೊಳು ಮಡದಿ ಮ
ಕ್ಕಳ ಕೂಡಿ ಸುಖದಿ ಕೆಲ ಕಾಲದಲಿದ್ದ್ಯೊ ೨

ವ್ಯಾಸರಾಯರಲಿ ಭಾಸುರ ಮಂತ್ರೋ ಪ
ದೇಶವ ಕೊಂಡು ರಮೇಶನ ಒಲಿಸಿದ್ಯೊ ೩

ಮನೆ ಧನ ಧಾನ್ಯ ವಾಹನ ವಸ್ತುಗಳನೆಲ್ಲ
ತೃಣಕೆ ಬಗೆದು ಕೃಷ್ಣಾರ್ಪಣವೆಂದೆ ಬುಧರಿಗೆ ೪

ಪ್ರಾಕೃತ ಭಾಷೆಯೊಳ್ ನೀ ಕೃತಿ ಪೇಳಿ ಅ
ಪ್ರಾಕೃತ ಹರಿಯಿಂದ ಸ್ವೀಕೃತ ನೀನಾದ್ಯೊ ೫

ತೀರ್ಥಕ್ಷೇತ್ರಗಳ ಮೂರ್ತಿ ಮಹಿಮೆಗಳ
ಕೀರ್ತಿಸಿ ಜಗದಿ ಕೃತಾರ್ಥನೆಂದೆನಿಸಿದೆ ೬

ಪಾತಕ ವನಧಿ ಪೋತನೆನಿಪ ಜಗ
ನ್ನಾಥ ವಿಠ್ಠಲನ ಸುಪ್ರೀತಿಯಿಂದೊಲಿಸಿದೆ ೭

೧೪೩

ತೆರಳಿದರು ವೈಕುಂಠ ಪುರದರಸನ
ಚರಣಾಬ್ಜ ಸೇವಿಸಲು ನರಸಿಂಹದಾಸರು ಪ

ಜವಹರುಷದಿಂದ ಪಾರ್ಥಿವ ಮರುಷ ಮಾರ್ಗಶಿರ
ಅಪರ ಪಕ್ಷದ ಷಷ್ಠಿ ಭೌಮವಾರ
ದಿವದಿ ಪ್ರಾತಃಕಾಲ ಸಮಯದಲಿ ಶ್ರೀ ಲಕ್ಷ್ಮೀ
ಧವನಂಘ್ರಿ ಕಮಲ ಧೇನಿಸುತ ಸಂತೋಷದಲಿ ೧

ವರಹತನಯಾತೀರ ಪ್ರಾಚಿದಿಗ್ಭಾಗದಲಿ
ಪರಮ ವೈಷ್ಣವ ಸುಕೃತ ಭಾಗಿಯೆಂಬಾ
ಪುರವರದಿ ತತ್ವ ತತ್ವೇಶರೊಳು ಲಯವರಿತು
ಪರಮ ಪುರುಷನ ದಿವ್ಯ ನಾಮಗಳ ಸ್ಮರಿಸುತಲಿ ೨

ವರಯಜುಶ್ಶಾಖ ಹರಿತಸಗೋತ್ರ ಭವ ಅನಂ
ತರಸನ ಜಠರದಿ ಜನಿಸಿ ಬಂದೂ
ಗುರುವ್ಯಾಸಮುನಿ ಪುರಂದರ ದಾಸರಂಘ್ರಿಗಳ
ಸ್ಮರಿಸುತ ಜಗನ್ನಾಥ ವಿಠಲನೊಲುಮೆಯ ಪಡೆದು ೩

೧೪೪

ನಂಬಿದೆ ನಿನ್ನ ಪಾದಾಂಬುಜ ನರಸಿಂಹ ।
ದಾಸರಾಯಾ ಎನ್ನ ।
ಬೆಂಬಿಡದಲೆ ಕಾಯೋ ಬಹು ಪರಿಯಿಂದ ದಾಸರಾಯಾ ಪ

ಈರೇಳು ವರುಷವಾರಂಭಿಸಿ ಪ್ರತಿದಿನ । ದಾಸರಾಯ ಜಾವು
ಮೂರುಗಳಲ್ಲಿ ಮುಕುಂದನ ಚರಣವ । ದಾಸರಾಯಾ ।
ಚಾರು ಮನಾಬ್ಜದಿ ಬಹಿರದಿ ಬಗೆ ಬಗೆ । ದಾಸರಾಯಾ ।
ಬಿಡದಾರಾಧಿಸಿದೆ ಭೂರಿ ಭಕುತಿ ಭರಿತನಾಗಿ । ದಾಸರಯ್ಯಾ ೧

ರಂಗನೊಲಿಮೆ ಭಾಗವತರೆಂದು ಹರುಷದಿ ।
ದಾಸರಾಯಾ । ಗುರು
ಪುಂಗವ ಸುಮತೀಂದ್ರ ರಾಯ ಕರೆದ ನಿನ್ನ । ದಾಸರಾಯಾ ।
ಸಂಗೀತ ರಸನ ಪಾನಮಾಡಿ ಹರುಷದಿ ।
ದಾಸರಾಯಾ । ಹರಿ ।
ಡಿಂಗರೊಳುತ್ತುಂಗನೆನಿಸಿಕೊಂಡೆ ದಾಸರಾಯ ೨

ಕುಶಲಗಾನವ ಕೇಳಿ ಗುರುಸತ್ಯ ಪೂರ್ಣರು ।
ದಾಸರಾಯಾ । ಪರಾ
ವಸುನಾಮ ಗಂಧರ್ವನವತಾರ ನೀನೆಂದು । ದಾಸರಾಯಾ ।
ಪೆಸರಿಟ್ಟರಂದು ವಿದ್ವಜ್ಜನ ಮೆಚ್ಚಲು ದಾಸರಾಯಾ । ಎನ
ಗೊಶವಹುದೇ ನಿಮ್ಮ ಮಹಿಮೆ ಕೊಂಡಾಡಲು ।
ದಾಸರಾಯಾ । ೩

ಚರಿಸಿದೆ ಪುಣ್ಯಕ್ಷೇತ್ರಗಳ ಭಕುತಿಯಿಂದ ।
ದಾಸರಾಯಾ । ಪ್ರತಿ ।
ವರುಷ ಬಿಡದೆ ಶೇಷಗಿರಿಯವಾಸನ । ದಾಸರಾಯಾ ।

ಚರಣಾಬ್ಜ ಯುಗಲರ ನೂರಬ್ಧ ಪರಿಯಂತ ।
ದಾಸರಾಯಾ । ಪರಿ
ಚರಿಯವ ಕೈಕೊಂಡು ಪಡೆದೆ ಮಂಗಳಗತಿ ದಾಸರಾಯ ೪

ಮುನಿಯು ಉಪೇಂದ್ರರಾಯರು ನಿಮ್ಮ ಚರಿತೆಯ ।
ದಾಸರಾಯಾಕೇಳಿ
ಸಾನುರಾಗದಿ ಸರ್ವ ಮಂತ್ರೋಪದೇಶವ । ದಾಸರಾಯಾ ।
ಆನುಪೂರ್ವಕಮಾಡಿ ಅತಿ ಸಂತೋಷದಿ ।
ದಾಸರಾಯಾ । ಕೊಟ್ಟರು
ಶ್ರೀ ನರಸಿಂಹ ಪ್ರತಿಮೆ ಸಾಲಿಗ್ರಾಮ । ದಾಸರಾಯಾ । ೫

ಕಿಂಕರನೆನಿಸಿ ಪರಂದರದಾಸರೆ । ದಾಸರಾಯಾ । ಅವರಿಂ
ದಂಕಿತ ವಹಿಸಿ ನಿಶ್ಯಂಕೆಯಿಂದ ನೀನು ದಾಸರಾಯಾ ।
ಪೊಂಕವ ಪೊಗಳುತ ಪೊಡವಿಯೊಳು ಚರಿಸಿದೆ ।
ದಾಸರಾಯಾ।ಭವ
ಪಂಕವ ದಾಟ ಪರೇಶನನ್ನೈದಿದೆ । ದಾಸರಾಯಾ ೬

ಜನನವಾರಭ್ಯವಸಾನದ ಪರಿಯಂತ । ದಾಸರಾಯಾ । ಹೀನ
ಮನುಜಗೆ ಕರ ಒಡ್ಡಲೊಲ್ಲೆನೆಂಬುವ ಛಲ । ದಾಸರಾಯಾ ।
ನಿನಗೆ ಸಲ್ಲಿತು ನಿಜ ಭಾಗವತರ ಪ್ರಿಯ ।
ದಾಸರಾಯಾ । ನಿಮ್ಮಾ
ಅನುಭವೋಪಾಸನೆ ಏನು ತಿಳಿಯದು ದಾಸರಾಯಾ ೭

ಇರಳು ಹಗಲು ನಿಮ್ಮ ಚರಣ ಕಮಲ ಧ್ಯಾನ ದಾಸರಾಯಾ ।
ಸ್ನಾನ ವರ ಮಂತ್ರ ಜಪ ತಪ ವಿಹಿತಾಚರಣೆಗಳು ।
ದಾಸರಾಯಾ
ಪೆರತೊಂದು ಸಾಧನ ಮನ ವಾಕ್ಕಾಯಗಳಲಿ । ದಾಸರಾಯಾ ।
ನಾನೊಂದರಿಯೆ ದಯಾಬ್ಧಿ ಉದ್ಧರಿಸೆನ್ನ
ಭವದಿಂದ ದಾಸರಾಯಾ ೮

ನಾರಾಯಣಾತ್ಮಜ ಅನಂತಾರ್ಯರುದರದಿ
ದಾಸರಾಯಾ ।ಪುಟ್ಟಿ ।
ನೂರೊಂದು ಕುಲಗಳುದ್ಧಾರ ಮಾಡಿದೆ । ದಾಸರಾಯಾ ।
ಕಾರುಣ್ಯನಿಧಿ ಜಗನ್ನಾಥವಿಠಲ । ದಾಸರಾಯಾ । ನಿಮ್ಮ
ಚಾರು ಚರಿತ್ರೆಯ ತುತಿಸಿ ಪಾವನನಾದೆ । ದಾಸರಾಯಾ ೯

ವಿಜಯದಾಸರು

೧೪೫

ತೆರಳಿದರು ವಿಜಯರಾಯರು ವಿಜಯ ವಿಠಲನ
ಪುರದೊಳಗೆ ಪರಮ ಭಕ್ತರ ಕಾಣಬೇಕೆನುತ ಪ

ಯುವ ಸಂವತ್ಸರದ ಕಾರ್ತಿಕ ಶುದ್ಧ ದಶಮಿ ವಿಭಕ
ರವು ಗುರುವಾರ ಪ್ರಥಮ ಯಾಮದೀ
ಪವನಾಂತರಾತ್ಮಕ ಶ್ರೀ ಹರಿಯ ದರ್ಶನೋ
ತ್ಸವ ಸಂಪಾದಿಸುವ ಬಹು ಲವಲವಿಕೆಯಿಂದ ೧

ಧರಣಿಯೊಳು ಬಾಸ್ಕರ ಕ್ಷೇತ್ರವೆನಿಸುವ ಚಿಪ್ಪ
ಗಿರಿಯೆಂಬ ಗ್ರಾಮದಿ ವಿಬುಧರ ಮುಖದಿ
ವರ ಭಾಗವತ ಬ್ರಹ್ಮಸೂತ್ರ ಭಾರತ ಗೀತ
ಮರುತ ಶಾಸ್ತ್ರಾರ್ಥ ಗ್ರಂಥಗಳನಾಲಿಸುತಲಿ ೨

ಸುಖತೀರ್ಥ ಮುನಿಯ ಮನಕನುಕೂಲ ಸಚ್ಛಾಸ್ತ್ರ
ನಿಕರಗಳ ಕವನ ರೂಪದಲ್ಲಿ ರಚಿಸಿ
ಭಕತರಿಗೆ ಸನ್ಮಾರ್ಗ ತೋರಿ ಸಂತೋಷದಲಿ
ವಿಖನಸಾರ್ಚಿತ ಜಗನ್ನಾಥ ವಿಠಲನ ಪದಕೆ ೩

೧೪೬

ರತುನ ದೊರಕಿತಲ್ಲ । ಎನಗೆ ದಿವ್ಯ ರತುನ ದೊರಕಿತಲ್ಲ ಪ

ರತುನ ದೊರಕಿತು ಎನ್ನ ಜನುಮ ಪ
ವಿತರವಾಯಿತು ಈ ದಿನದಿ ನಾ
ಯತನ ಗೈಯುತ ಬರುತಿರಲು ಪ್ರ
ಯತನವಿಲ್ಲದೆ ವಿಜಯರಾಯರೆಂಬೊ ಅ.ಪ.

ಪಥದಿ ನಾ ಬರುತಿರಲು ಥಳಥಳವೆಂದು
ಅತಿ ಕಾಂತಿ ಝಳಪಿಸಲು ಬೆರಗಾಗುತ್ತ
ಅತಿ ಚೋದ್ಯವ ಕಾಣಲು ಸೇವಿಸುತಿರೆ
ಸತತ ಕರಪಿಡಿದಾದರಿಸಿ ಮನೋ
ರಥವ ಪೂರೈಸುತಲಿ ದಿವ್ಯ । ಸ
ನ್ಮತಿಯ ಪಾಲಿಸಿ ಮೋಕ್ಷ ಸುಪಥವ
ಅತಿಶಯದಿ ತೋರುತ್ತ ಪೊರೆದ ೧

ಜ್ಞಾನವೆಂಬೊ ಪುತ್ಥಳಿ ಕಂಬಿಯಲ್ಲಿ
ಆಣಿಮುತ್ತಿನ ಭಕ್ತೀಲಿ ಸುಕೃತ ಮಾಲಾ
ನಾನಾವಿಧ ಹವಳದಲಿ ಸೇರಿಸುತಲಿ
ಪ್ರಾಣ ಪದಕವೆಂಬ ಮಾಲೆಯನು ಅನು
ಮಾನವಿಲ್ಲದೆ ಕೊರಳಿಗ್ಹಾಕುತ
ಗಾನದಿಂ ಕುಣಿಯುತ್ತ ಪಾಡುತ್ತ
ದೀನ ಜನರುದ್ಧಾರ ಗೈಯುವ ೨

ಶೋಧಿಸಿ ಗ್ರಂಥಗಳ – ಸುಳಾದಿಯ
ಮೋದದಿಂದಲಿ ಬಹಳ ಕವಿತೆ ಮಾಡಿ
ಸಾಧುಜನಕೆ ಸಕಾಲ ಆನಂದ ವಿತ್ತು
ವಾದಿಜನರನು ಗೆದ್ದು ಬೋಧಿಸಿ
ಮಾಧವ ಜಗನ್ನಾಥ ವಿಠಲನ
ಪಾದ ಕಮಲಕೆ ಮಧು ಪನಂದದಿ
ಸಾದರದಿ ತೋರುತ್ತ ಮೆರೆಯುವ ೩

ಗೋಪಾಲದಾಸರು

೧೪೭

ಗೋಪಾಲ ದಾಸರಾಯ ನಿನ್ನಯ ಪಾದ
ನಾ ಪೊಂದಿದೆನೊ ನಿಶ್ಚಯ ಪ

ಈ ಪೀಡಿಸುವ ತ್ರಯತಾಪಗಳೋಡಿಸಿ
ಕೈ ಪಿಡಿದೆನ್ನ ಕಾಪಾಡಿದ ಗುರುರಾಯ ಅ.ಪ.

ಘೋರ ವ್ಯಾಧಿಯನೆ ನೋಡಿ । ವಿಜಯರಾಯ
ಭೂರಿ ಕರುಣವ ಮಾಡಿ
ತೋರಿದರಿವರೆ ಉದ್ಧಾರಕರೆಂದಂದಿ
ನಾರಭ್ಯ ತವ ಪಾದ ಸಾರಿದೆ ಸಲಹೆಂದು ॥
ಸೂರಿಜನ ಸಂಪ್ರೀಯ ಸುಗುಣೋದಾರ
ದುರುಳನ ದೋಷ ನಿಚಯವ
ದೂರಗೈಸಿ ದಯಾಂಬುನಿಧೆ ನಿ
ವಾರಿಸದೆ ಕರಪಿಡಿದು ಕರುಣದಿ
ಅಪಮೃತ್ಯುಯವನು ತಂದೆ ಎನ್ನೊಳಗಿದ್ದ ೧

ಅಪರಾಧಗಳ ಮರೆದೆ
ಚಪಲ ಚಿತ್ತನಿಗೊಲಿದು ವಿಪುಲ ಮತಿಯನಿತ್ತು

ನಿಪುಣನೆಂದೆನಿಸಿದೆ ತಪಸಿಗಳಿಂದಲಿ
ಕೃಪಣ ವತ್ಸಲ ನಿನ್ನ ಕರುಣೆಗೆ
ಉಪಮೆಗಾಣೆನೊ ಸಂತತವು ಕಾ
ಶ್ಯಪಿಯೊಳಗೆ ಬುಧರಿಂದ ಜಗದಾ
ಧಿಪನ ಕಿಂಕರನೆನಿಸಿ ಮೆರೆಯುವ ೨

ಎನ್ನ ಪಾಲಿಸಿದಂದದಿ ಸಕಲ ಪ್ರ
ಪನ್ನರ ಸಲಹೊ ಮೋದಿ
ಅನ್ಯರಿಗೀಪರಿ ಬಿನ್ನಪ ಗೈಯೆ ಜ
ಗನ್ನಾಥ ವಿಠಲನ ಸನ್ನುತಿಸುವ ಧೀರ ॥
ನಿನ್ನ ನಂಬಿದ ಜನರಿಗೆಲ್ಲಿಯ
ಬನ್ನವೋ ಭಕ್ತಾನು ಕಂಪಿಶ
ರಣ್ಯಾ ಬಂದೆನೊ ಈ ಸಮಯದಿ ಅ
ಹರ್ನಿಶಿ ಧ್ಯಾನಿಸುವೆ ನಿನ್ನನು ೩

ಆತ್ಮ ನಿವೇದನೆ

೧೪೮

ಗತಿ ಯಾವುದೆನಗೆ ಶ್ರೀಪತಿಯೆ ಪೇಳೊ ಪ

ಮತಿಗೆಟ್ಟು ಸತತ ಪರ ಸತಿಯರನು ಬಯಸುವೆನೊ ಅ.ಪ.

ಮರುಳು ಬುದ್ಧಿಗಳಿಂದ ಕರ ಸೂಚನೆಯ ಮಾಡಿ
ತರುಣಿಯರ ತಕ್ಕೈಸಿ ಸರಸವಾಡಿ
ಇರುಳು ಹಗಲು ಹೀಗೆ ದುರುಳತನದಲಿ ತಿರುಗಿ
ಧರೆಯೊಳಗೆ ನಾನೊಬ್ಬ ಹರಿದಾಸನೆನಿಸಿದೆನು ೧

ನಾಚಿಕಿಲ್ಲದಲೆ ಬಲು ನೀಚರಲ್ಲಿಗೆ ಪೋಗಿ
ಯಾಚಿಸುವೆ ಸನ್ಮಾರ್ಗ ಯೋಚಿಸದಲೆ

ಆ ಚತುರ್ದಶ ವರುಷರಾರಭ್ಯ ಈ ವಿಧದಿ
ಅಚರಿಪೆನ್ನೈ ಸವ್ಯ ಸಾಚಿಸಖ ಶ್ರೀ ಕೃಷ್ಣ ೨

ನಾನು ನನ್ನದು ಎಂಬ ಹೀನ ಬುದ್ಧಿಗಳಿಂದ
ಜ್ಞಾನ ಶೂನ್ಯನು ಆದೆ ದೀನ ಬಂಧು
ಸಾನುರಾಗದಿ ಒಲಿದು ನಾನಾ ಪ್ರಕಾರದಲಿ
ನೀನೆ ಕರುಣಿಸು ಹರಿಯೆ ಜ್ಞಾನಗುಣ ಪರಿಪೂರ್ಣ ೩

ಅಂಬುಜಾಕ್ಷನೆ ನಿನ್ನ ನಂಬಿ ಭಜಿಸುವರ ಪಾ
ದಾಂಬುಜಕ್ಕೆರಗದಲೆ ಸಂಭ್ರಮದಲಿ
ತಂಬೂರಿಯನು ಪಿಡಿದು ಡಂಭತನದಲಿ ನಾನು
ಶಂಬರಾರಿಗೆ ಸಿಲುಕಿ ಬೆಂಬಿಡದೆ ಚಾಲ್ವರಿದೆ ೪

ಪರಮೇಷ್ಠಿಯಾರಭ್ಯ ತ್ರಣಜೀವ ಪರ್ಯಂತ
ತರತಮವ ತಿಳಿಸಿ ತರುವಾಯದಲ್ಲಿ
ಗುರುಹಿರಿಯರಲಿ ಭಕುತಿ ವೈರಾಗ್ಯವನೆ ಕೊಟ್ಟು
ಸಿರಿಜಗನ್ನಾಥ ವಿಠಲ ನಿರುತ ನೀ ಪೊರೆಯದಿರೆ ೫

೧೪೯

ಬಿನ್ನೈಪೆ ನಿನಗಾನು ಭಕ್ತ ಬಂಧು
ನಿನ್ನ ವಿಸ್ಮೃತಿ ದೋಷ ಕೊಡದಿರೆಂದೆಂದು ಪ

ಏಳುವಾಗಲಿ ಭಾರ ತಾಳುವಾಗಲಿ ಎಡಹಿ
ಬೀಳುವಾಗ ಕಾಲ ಕಾಲಗಳಲ್ಲಿ
ಕಾಲನಾಮಕ ನಿನ್ನ ಲೀಲೆಗಳ ಮರೆಯದೆ
ನಾಲಿಗ್ಗೆ ಬರುವಂತೆ ೧

ನಿಲ್ಲುವಾಗ ಕುಳಿತು ಮೈದೊಳೆವಾಗ ಅನ್ನಗಳ
ಮೆಲುವಾಗ ವಿದ್ಯೆಗಳ ಕಲಿವಾಗ

ಮಲಗಿ ಸುಖದಿಂದ ನಲಿವಾಗ ಭಕ್ತವ
ತ್ಸಲ ನಿನ್ನ ಮಹಿಮೆಗಳ ತಿಳಿವಂತೆ ಮಾಡಯ್ಯ ೨

ಖೇದ ಮೋದಗಳು ಸಂತೋಷ ಸಂಪಾದಿಸಿದ
ವೈದೀಕವೈದಿಕಗಳು
ಸ್ತ್ರೀ ಧನಗಳೆಲ್ಲ ಶ್ರೀಧವನ ಆರಾಧನೆಗೆ ನಿ
ವೇದಿಪುದ ತಿಳಿಸೆಂದು ೩

ದಂತಪದಿ ಮೃಗ ಚೋರ ಮುಂತಾದ ಭಯಗಳಲಿ
ಭ್ರಾಂತಿಗೊಳಿಸುವ ವಿಷಯ
ಸಂತತಿಯಲಿ ಪ್ರಾತಃ ಕಾಲದಿ ರಮಾರಮಣ ನಿನ್ನ ಮೂರ್ತಿ
ಚಿಂತನೆಗೆ ಬರಲೆಂದು ಸಂತೋಷದಾತ ೪

ಚಂಡಾಲ ಶ್ವಾನ ಸೂಕರ ಜನ್ಮ ಬರಲಿ ಯಮ
ದಂಡ ದೂತರ ಪಾಶಕಂಜೆ ನಾನು
ಪಾಂಡವ ಪ್ರಿಯ ಜಗನ್ನಾಥ ವಿಠಲನೆ ಪಾ
ಷಂಡಿ ಮತಗಳಲಿ ಚೆನ್ನ ಕೊಡದಿರೆಂದು ೫

೧೫೦

ಮನವೇ ಮರೆವರೇನೊ ಹರಿಯಾ ಪ

ಬಹು ಜನುಮಗಳಲ್ಲಿ ಬಟ್ಟ ಬವಣೆಗಳರಿಯಾ ಅ.ಪ.

ವಿಷಯ ಚಿಂತನೆ ಮಾಡಸಲ್ಲ ಮೇಷ
ವೃಷನನಾದನು ಹಿಂದೆ ಪೌಲೋಮಿ ನಲ್ಲ
ಝುಷ ಕೇತುವಿನ ವ್ಯಾಳ ಹೊಲ್ಲ ನಿರಾ
ಶಿಷನಾಗು ಯಮರಾಯನೆಂದೆಂದೂ ಕೊಲ್ಲ ೧

ಧನವೆ ಜೀವನವೆಂಬಿ ನಿನಗೆ ಸುಯೋ
ಧನ ನೋಡು ಧನದಿಂದ ಏನಾದ ಕೊನೆಗೆ
ಅನಿರುದ್ಧ ದೇವನ ಮನೆಗೆ ಪೋಪ
ಘನ ವಿಜ್ಞಾನವನೆ ಸಂಪಾದಿಸು ಕೊನೆಗೆ ೨

ಹರಿದಾಸನಾಗಿ ಬಾಳೋ ಗುರು
ಹಿರಿಯರ ಪಾದಕಮಲಕೆ ನೀ ಬೀಳೋ
ನರರ ನಿಂದಾಸ್ತುತಿ ತಾಳೋ ದೇಹ
ಸ್ಥಿರವಲ್ಲ ಸಂಸಾರ ಬಹು ಹೇಯ ಕೇಳೋ ೩

ಹಲವು ತೀರ್ಥಗಳಲ್ಲಿ ಸ್ನಾನ ಮಾಡೆ
ಮಲ ಪೋಯಿತಲ್ಲದೆ ನಿರ್ಮಲ ಜ್ಞಾನ
ಫಲಿಸದೆಂದಿಗು ಹೀನ ಬುದ್ಧಿ
ಕಳೆದು ಸೇವಿಸು ಸಾಧುಗಳನನುದಿನ ೪

ಜಿತವಾಗಿ ಪೇಳುವೆ ಸೊಲ್ಲಾ ಹರಿ
ಕಥೆಯಲ್ಲಿ ನಿರತನಾಗಿರು ಲೋಹ ಕಲ್ಲಾ
ಪ್ರತಿಮೆ ಪೂಜಿಸಿದರೇ ನಿಲ್ಲ ಪರೀ
ಕ್ಷಿತನೆಂಬ ರಾಯ ಈ ಮಹಿಮೆಯ ಬಲ್ಲಾ ೫

ಜ್ಞಾನೇಚ್ಛಾ ಕ್ರಿಯಾ ಶಕ್ತಿ ತ್ರಯವಾ ತಿಳಿ
ದಾನಂದ ಪಡು ಬಯಸದಿರುಭಯವಾ
ಸಾನುರಾಗದಿ ಬೇಡು ದಯವಾ ನೀ ಮ
ದ್ದಾನೆಯಂದದಿ ಚರಿಸು ಬಿಟ್ಟು ಭಯವಾ ೬

ಭಾವ ಕ್ರಿಯಾ ದ್ರವ್ಯಾದ್ವೈತ ತ್ರಯ
ಆವಾಗ ಚಿಂತಿಸು ಭೂಮ್ಯಾದಿ ಭೂತಾ
ಜೀವಿಗಳೊಳು ಜಗನ್ನಾಥ ವಿಠಲ
ಗಾವಾಸ ಯೋಗ್ಯವೆಂದರಿಯೋ ಸಂತತಾ ೭

೧೫೧

ಶೇಷ ಪರ್ಯಂಕ ಶಯನ ವಿಷಯದಭಿ
ಲಾಷೆ ಪರಿಹರಿಸಿ ಕಾಯೋ ಪ

ಧನ ಓದನಂಗಳ ಬಯಸಿ ನಿಚೋಚ್ಚ
ರೆನದೆ ಮನೆಮನೆ ತಿರುಗಿದೆ
ಅನಿಮಿಷೋತ್ತಂಸ ನಿನ್ನ ಪಾದವೊಂ
ದಿನ ಭಜಿಸಿದವನಲ್ಲವೋ ೧

ಹರಿ ಗುರುಗಳನು ನಿಂದಿಪ ನೀಚರನು
ಸರಿಸಿ ಅವರನು ಸ್ತುತಿಸಿದೆ
ಪೊರೆಯಲೋಸುಗ ಉದರವ – ಜನರಿಂದ
ಹರಿದಾಸನೆನಿಸಿಕೊಂಡೆ ೨

ಭಗವಂತ ನಿನ್ನ ಗುಣವ ವರ್ಣಿಸದೆ
ಭಗವತಿಯರವಯವಗಳಾ
ಸೊಗಸಿನಿಂದಲಿ ವರ್ಣಿಸಿ ಎನ್ನ ನಾ
ಲಗೆ ಎರಡು ಮಾಡಿಕೊಂಡೆ ೩

ಸರ್ವಪ್ರಕಾರದಲ್ಲಿ ಹಗಲಿರುಳು
ದುರ್ವಿಷಯಕೊಳಗಾದೆನೋ
ಶರ್ವಾದಿ ವಂದ್ಯ ಚರಣಾ ನೀನೊಲಿ
ದುರ್ವಿಯೊಳು ಸಲಹ ಬೇಕು ೪

ಉಪರಾಗ ಪರ್ವಗಳಲಿ ಸ್ನಾನ ಜಪ
ತಪ ಅನುಷ್ಠಾನ ಜರಿದು
ನೃಪರ ಮಂದಿರವ ಕಾಯ್ದು ಧನವ ತಂ
ದುಪ ಜೀವಿಸಿದೆನೊ ಜೀಯಾ ೫

ವೇದ ಶಾಸ್ತ್ರಾರ್ಥಗಳನು ತಿಳಿದು ಸ
ನ್ಮೋದ ಬಡದಲೆ ಕುಶಾಸ್ತ್ರ
ಓದಿ ಪಂಡಿತನೆನಿಸಿದೆ ಕೀರ್ತಿ ಸಂ
ಪಾದಿಸಿದೆ ವ್ಯರ್ಥ ಬಾಳಿದೇ ೬

ವೈರಾಗ್ಯ ಪುಟ್ಟಲಿಲ್ಲ ಘೋರ ಸಂ
ಸಾರದೊಳು ಮಗ್ನನಾದೆ
ಸೂರಿಗಳ ಮಧ್ಯದಲ್ಲಿ ಬುಧನಂತೆ
ತೋರುವೆನು ನೋಳ್ಪ ಜನಕೆ ೭

ನಾ ಮಾಡ್ದ ಪಾಪರಾಶಿ ಎಣಿಸಲ್ಕೆ
ತಾಮರಸಭವಗಸದಳ
ಸ್ವಾಮಿ ಎನಗೇನು ಗತಿಯೋ ಭಾರವಾದೆ
ಈ ಮಹಿಗೆ ಪ್ರತಿದಿನದಲೀ ೮

ಭೂತ ಸಂಬಂಧದಿಂದ ಬಹುವಿಧದ
ಪಾತಕವೆ ಸಮನಿಸಿದವೋ
ದಾತ್ರನೀ ಕಡೆ ಗೈದಿಸೋ ಭವದಿ ಜಗ
ನ್ನಾಥ ವಿಠ್ಠಲ ಕೃಪಾಳೋ ೯

೧೫೨

ಶ್ರೀ ಮಧ್ವಚಿತ್ತ ಮಂದಿರನೆ ನಿನ್ನಯ ಚರಣ
ತಾಮರಸ ನೆರೆ ನಂಬಿದೆ ಪ

ಕಾಮಕ್ರೋಧವ ಕಳೆದು ನಿನ್ನ ನಾಮಾಮೃತವ
ಪ್ರೇಮದಲಿ ಎನಗುಣಿಸೋ ಸ್ವಾಮಿ ಅ.ಪ.

ಉಪರಾಗ ದಶಮಿ ದ್ವಾದಶಿ ದಿವಸ ಮೊದಲಾದ
ಉಪೇಕ್ಷೆ ಮಾಡಿ ಕಳೆದೆ

ಉಪಕಾರಯೆಂದು ನಿಜ ಉಕ್ತಿ ಪೇಳಿದರೆನಗೆ
ಅಪಕಾರ ಕಾಣುತಿದೆಕೋ
ನಿಪುಣನೆನಿಸುವೆನೆಂದು ಅಜ್ಞಾನಿಗಳ ಮುಂದೆ
ತಪ ವೃದ್ಧರನ್ನು ಹಳಿವೆ
ಸ್ವಪನದೊಳಗಾದರೊ ವೈರಾಗ್ಯ ಬಯಸದಲೆ
ಕಪಟ ಮನುಜರೊಳಾಡಿ ನಿನ್ನ ಮರೆದೆ ಸ್ವಾಮೀ ೧

ಮಾರನ ಉಪಟಳಾಕಾರದಲಿ ನಾ ಬಲು
ಪೋರ ಬುದ್ಧಿಯನು ಮಾಡಿ
ಆರು ಇಲ್ಲದ ಸಮಯದೊಳವಳು ಕಣ್ಣು ಸನ್ನೆಯ ಮಾಡಿ
ಕೋರಿದ್ದು ಇತ್ತು ನೀಡಿ
ಬಾರಿ ಬಾರಿಗೆ ಅವಳ ವಾರಿನೋಟಕೆ ಬೆರದು
ಕ್ರೂರಮಾನವರೊಳಗೆ ಆಡಿ
ವಾರಿಜನಾಭ ನಿನ್ನ ಆರಾಧನೆಯ ಮರೆದು
ಧಾರಿಣೀ ಭಾರದೆ ಪರಲೋಕ ಮರೆದೆ ೨

ಭೂಸುರರು ಚಂಡಾಲ ಜಾತಿಯೆನ್ನದೆ ಬಲು
ಹೇಸಿಕಿಲ್ಲದೆ ತಿರುಗುವೆ
ಆ ಸತಿಸುತರ ಸಾಕುವೆನೆಂದು ಪರಿ ಪರಿ
ವೇಷವನು ಧರಿಸಿ ಮೆರೆದೇ
ಆಶೆಯುಳ್ಳ ಮಹಪಿಶಾಚಿಗೊಳಗಾಗಿ ಹರಿ
ದಾಸ ಸಹವಾಸ ಜರೆದೆ
ವಾಸುಕೀಶಯನ ವಸುದೇವತನಯನೆ ನಿನ್ನ
ದಾಸನೆನ್ನಿಸದೆ ಅಪಹಾಸ ಮಾನವನಾದೆ ೩

ಹರಿದಾಸರ ಬಳಿ ಅರಘಳಿಗೆ ಕೂತರೆ
ಶಿರವ್ಯಾಧಿಯೆಂದೇಳುವೇ
ದುರುಳ ದುರ್ವಾರ್ತೆಗಳ ಪೇಳಲು ಹಸಿವು ತೃಷೆ
ಮರೆದು ಲಾಲಿಸಿ ಕೇಳುವೆ
ತರುಣಿ ಮಕ್ಕಳು ಎನ್ನ ಪರಿಪರಿ ಬೈದರೆ

ಪರಮ ಪರುಷವ ತಾಳುವೆ
ಗುರುಹಿರಿಯರೊಂದುತ್ತರವನಾಡಲು ಕೇಳಿ
ಧರಿಸಲಾರದೆ ನಾನು ಮತ್ಸರಿಪೆನವರೊಡನೇ ೨

ನಾ ಮಾಡಿದಪರಾಧ ಎಣಿಸಿ ಬರೆದರೆ ಈ
ಭೂಮಂಡಲವು ಸಾಲದಿಹುದೊ
ಕ್ಷಮೆಯೊಳಗುಳ್ಳ ದುರ್ಮತಿ ಕೂಡಿಡಲು
ಈ ಮತಿಯ ಅದು ಪೋಲದು
ಹೋಮ ಜಪತಪಗಳನು ಎಷ್ಟು ಮಾಡಲು ಪಾಪ
ಸ್ತೋಮ ಎಂದಿಗು ಪೋಗದೊ
ಸಾಮಜವರದ ಜಗನ್ನಾಥ ವಿಠಲ ನಿನ್ನ
ನಾಮ ಒಂದಲ್ಲದೆ ಪ್ರಾಯಶ್ಚಿತ್ತವು ಕಾಣೆ ೩

೧೫೩

ಸಿರಿರಮಣ ತವ ಚರಣ ಸೇವೆ ದೊರಕುವುದು ಹ್ಯಾಂಗಿನ್ನು
ಪರಮ ಪಾಪಿಷ್ಠ ನಾನು ಪ

ನರಹರಿಯೆ ನಿಮ್ಮ ನಾಮ ಸ್ಮರಣ ಮಾಡದಲೆ
ನರಕಕ್ಕೆ ಗುರಿಯಾದೆನೋ ಹರಿಯೆ ಅ.ಪ.

ಹೊಸಮನೆಯ ಕಂಡು ಬಲು ಹಸಿದು ಭೂಸುರರು ಬರೆ
ಕೊಸರಿ ಹಾಕುತ ದಬ್ಬುತ
ಶಶಿಮುಖಿಯೆ ಬಾರೆಂದು ಅಸಮಸದಿ ಬಣ್ಣಿಸಿ
ವಶವಾಗಿ ಅವಳೊಲಿಸುತ
ದಶಮಿ ಏಕಾದಶಿ ದ್ವಾದಶೀ ದಿನತ್ರಯದಿ
ಅಶನವೆರಡೊತ್ತುಣ್ಣುತ
ಘಸಘಸನೆ ತಾಂಬೂಲ ಪಶುವಿನಂದದಿ ಮೆದ್ದು
ಕುಸುಮ ಗಂಧಿಯ ರಮಿಸುತ ಸತತ ೧

ಕೆರೆ ಭಾವಿ ದೇವಾಲಯವ ಕೆಡಿಸಿ ದಿವ್ಯ
ಹಿರಿದಾಗಿ ಮನೆ ಕಟ್ಟಿದೆ
ನೆರೆ ನಡೆವ ಮಾರ್ಗದೊಳು ಅರವಟ್ಟಿಗೆಗಳನ್ನು
ಧರಧರದಿ ಬಿಚ್ಚಿ ತೆಗೆದೆ
ಪರಮ ಸಂಭ್ರಮದಿಂದ ಅರಳಿಯಾ ಮರ ಕಡಿಸಿ
ಕೊರೆಸಿ ಬಾಗಿಲು ಮಾಡಿದೆ
ಏಕ ಮಂದಿರವ ಮುಗಿಸಿ ಹರುಷ ಚಿತ್ರವ ಬರೆಸಿ
ಪರಿಪರಿಯ ಸುಖ ಸಾರಿದೇ ಮೆರೆದೆ ೨

ಸಾಕಲ್ಯದಿಂದ ಸಾಲಿಗ್ರಾಮದ ಅಭಿಷೇಕ
ಆಕಳ ಹಾಲಲಿ ಮಾಡದೆ
ನಾಕೆಂಟು ನಾಯಿಗಳ ಸಾಕಿ ಮನೆಯೊಳು ಬದುಕ
ಬೇಕೆಂದು ಹಾಲು ಹೊಯ್ದೆ
ಕಾಕು ಬುದ್ಧಿಗಳಿಂದ ಗುಡಿ ಗುಡಿ ನಸಿ ಪುಡಿ
ಹಾಕಿ ಭಂಗಿಯಾ ಸೇದಿದೆ
ಲೋಕ ನಿಂದಕ ನಾಗಿ ಪಾಪಕ್ಕೆ ಕೈ ಹಚ್ಚಿ ಅ
ನೇಕ ಜೂಜುಗಳಾಡಿದೇ ಬಿಡದೆ ೩

ಸ್ನಾನ ಸಂಧ್ಯಾನ ಅತಿಮೌನ ಗಾಯಿತ್ರಿ ಜಪ
ಭಾನುಗರ್ಘ್ಯವನು ಕೊಡದೆ
ಹೀನತ್ವ ವಹಿಸಿ ದಾನ ಧರ್ಮವ ಮಾಡದೆ
ಶ್ವಾನನಂದದಿ ಚರಿಸಿದೇ
ಶ್ರೀನಿವಾಸನೆ ನಿನ್ನ ಅನುಪೂರ್ವಕ ಪೂಜೆ
ನಾನೊಂದು ಕ್ಷಣಮಾಡದೇ
ಬೇನೆ ಬಂದಂತಾಗೆ ಹೀನ ಸಕೇಶಿಯ ಕೈಲೆ
ನಾನ ವಿಧಾನ್ನ ತಿಂದೇ ನೊಂದೇ ೪

ಬಾದರಾಯಣ ಕೃತ ಭಾಗವತ ಕೇಳಲಿಕೆ
ಆದರವೆ ಪುಟ್ಟಲಿಲ್ಲಾ
ವಾದಿಗಳ ಮತವಳಿದ ಮಧ್ವ ಸಿದ್ಧಾಂತದ
ಹಾದಿಗೆ ಹೋಗಲಿಲ್ಲ
ಶೋಧಿಸಿದ ಚಿನ್ನಕೆ ಸಮರಾದ ವೈಷ್ಣವರ ಪಾದಕ್ಕೆ ಬೀಳಲಿಲ್ಲ
ವೇದ ಬಾಹಿರನಾಗಿ ಅಪಸವ್ಯ ಮನನಾಗಿ
ಓದಿಕೊಂಡೆನೋ ಇದೆಲ್ಲ ಸುಳ್ಳ ೫

ಉತ್ತಮ ಬ್ರಾಹ್ಮಣರ ವೃತ್ತಿಗಳನೆ ತೆಗಸಿ ಬ್ರ
ಹ್ಮಹತ್ಯಗಾರನು ಎನಿಸಿದೆ
ಮತ್ತೆ ಮದುವೆ ಮುಂಜಿ ಸಮಯಕ್ಕೆ ನಾ ಪೋಗಿ
ಸತ್ತ ಸುದ್ದಿಯ ಪೇಳಿದೆ
ವಿತ್ತವಿದ್ದವರ ಬೆನ್ಹತ್ತಿ ದೂತರ ಕಳುಹಿ
ಕುತ್ತಿಗೆಯ ನಾ ಕೊಯ್ಸಿದೆ
ಹತ್ತು ಜನರೆನ್ನೆಣಿಕೆ ನಿತ್ಯ ಕಲ್ಲೊಡೆಯುತಿರೆ
ಮೃತ್ಯು ದೇವತೆಯೆನಿಸಿದೆ ಬಿಡದೇ ೬

ಕ್ಷಿತಿಯೊಳಗೆ ಇನ್ನಾರು ಹಿತವ ಬಯಸುವವರೆನಗೆ
ಗತಿಯೇನು ಪೇಳೊ ಕೊನೆಗೆ
ಸತತ ತವ ಧ್ಯಾನದಲಿ ರತನಾಗಿ ಇರುವ ಸ
ನ್ಮತಿಯ ಪಾಲಿಸಯ್ಯ ಎನಗೆ
ಪತಿತಪಾವನನೆಂಬ ಬಿರಿದು ಅವನಿಯ ಮೇಲೆ
ಶ್ರುತಿ ಸಾರುತಿದೆಯೋ ಹೀಗೆ
ಶಿತಕಂಠನುತ ಜಗನ್ನಾಥವಿಠ್ಠಲ ನಿನಗೆ
ನುತಿಸದೆ ಬೆಂಡಾದೆ ಕಾಯೋ ಹರಿಯೆ ೭

ಹರಿದಾಸ ಪ್ರಶಂಸೆ

೧೫೪

ಆವ ಭಯವಿಲ್ಲವೋ ಆವ ಭಯವಿಲ್ಲ
ಆವ ಭಯವಿಲ್ಲ ಪರಾವರೇಶನ ಸಕಲ ಪ

ಠಾವಿಲಿ ಚಿಂತಿಸುವ ಭಾವಜ್ಞ ಜನರಿಗಿನ್ನು ಅ.ಪ.

ದೇಶಕಾಲೋಚಿತ ಧರ್ಮ ಗಿರ್ಮಗಳು ಸ
ನ್ಯಾಸ ಮೊದಲಾದಾಶ್ರಮೋಚಿತ ಸುಕರ್ಮಗಳು
ಮಾಸೋಪವಾಸ ವ್ರತ ನೇಮ ಗೀಮಗಳು ಸದ್
ವ್ಯಾಸಂಗ ಗೀಸಾಂಗವೊ ಆಸನ ಜಯಗಿಯ
ಪ್ರದೋಷನ ಧ್ಯಾಯಗೀಯ
ಶ್ವಾಸ ಬಂಧನ ಉಪನ್ಯಾಸ ತೀರ್ಥಾಟನೆ ರ
ಮೇಶನ ಗುಣಗಳಟ್ಟಹಾಸದಲಿ ನೆನೆವುತ ನಿ
ರಾಶೆಯಿಂದಿಪ್ಪ ಹರಿದಾಸ ದಾಸರಿಗೆ ೧

ಸ್ನಾನ ಜಪ ದೇವತಾರ್ಚನೆ ವೈಶ್ಯದೇವ ಬಲಿ
ದಾನ ಪಾತ್ರಾಪಾತ್ರ ವಿಧಿ ನಿಷೇಧಗಳು ವಿ
ಜ್ಞಾನ ವಿಹಿತಾಚರಣೆ ಸರ್ವತ್ರ ವಿನಯ
ಸಂಹನನ ವೈರಾಗ್ಯ ಶಕ್ತಿ
ಶ್ರೀನಿವಾಸನ ಪರಮ ವಿಮಲ ಲೋಕೈಕ ಕ
ಲ್ಯಾಣ ಗುಣ ರೂಪ ಕ್ರಿಯೆಗಳನು ಜಡ ಚೇತನದಿ
ಧೇನಿಸುತ ಮನದಿ ಹಿಗ್ಗುತ ತುತಿಸಿ ನಲಿವ ಸುಮ
ಹಾನು ಭಾವರಿಗೆ ಈರೇಳು ಲೋಕದೊಳು ಇನ್ನು ೨

ಮಲಿನರಾಗಿಹರು ನೋಳ್ಪರಿಗೆ ಪ್ರತಿ ದಿನದಲ್ಲಿ
ಸುಲಭರಂತಿಹರು ದುರ್ಗಮರಾಗಿ ತೋರುವರು
ಅಳುವರೊಮ್ಮೊಮ್ಮೆ ಪರವಶರಾಗಿ ಮೈ ಮರೆದು
ನಲಿವರೊಮ್ಮೊಮ್ಮೆ ನಗುತಾ
ಜಲಜಾಕ್ಷನಮಲ ಮಂಗಳ ಗುಣವ ಕೇಳಿ ಗಂ
ಟಲ ಶಿರಗಳುಬ್ಬಿ ಚಪ್ಪಳೆಗಳಂ ಬಾರಿಸುತ
ಮುಳುಗಿ ಸುಖ ವನಧಿಯೊಳು ತನು ಪುಳಕೋತ್ಸವದಿ
ಇಳೆಯೊಳಗೆ ಸಂಚರಿಪ ಕಲುಷವರ್ಜಿತಂಗೆ ೩

ನೋಡುವುದೆ ಹರಿಮೂರ್ತಿ ಕೇಳುವುದೆ ಹರಿಕೀರ್ತಿ
ಆಡುವುದೆ ಹರಿವಾರ್ತೆ ಮಾಡುವುದೆ ಹರಿಪೂಜೆ
ನೀಡುವುದೆ ಅವಧಾನ ಬೇಡುವುದೆ ಪುರುಷಾರ್ಥ
ಕೂಡುವುದೆ ಸಾಯುಜ್ಯವು
ದಾಡಿಯಿಂದಲಿ ದನುಜರಳಿದು ಧರಣಿಯನು ತಂದ
ಕ್ರೋಢರೂಪನೆ ಲೋಕಕ್ಕೆಲ್ಲ ಆನಂದ
ನಾಡಾಡ ದೈವದಂತಿವನಲ್ಲವೆಂದು ಕೊಂ
ಡಾಡುತವನಿಯೊಳು ಸಂಚರಿಸುವ ವಿಪಶ್ಚಿತರಿಗೆ ೪

ಕುಟಿಲರಹಿತನು ಧರ್ಮಾರ್ಥ ಮುಕುತಿ ಸಂ
ಘಟಸಲೆಮಗೆಂದು ಸುರನದಿ ಮುಖ್ಯ ತೀರ್ಥ ವೆಂ
ಕಟ ಶೈಲ ಮೊದಲಾದ ಕ್ಷೇತ್ರದಲಿ ಸತ್ಕರ್ಮ
ಹಟದಿಂದ ಮಾಳ್ಪರೆಲ್ಲಾ
ವಟ ಪತ್ರಶಯನನೊಲುಮೆಯನೆ ಬಯಸುವ ಜಾಂಡ
ಕಟಹದ್ಬಹಿರ್ವ್ಯಾಪ್ತನಾದ ಶ್ರೀ ಜಗನ್ನಾಥ
ವಿಠಲನಾವ ದೇಶದಿ ಕಾಲದಲ್ಲಿ ಪಾ
ಸಟೆಯಿಲ್ಲವೆನುತ ಲಾಲಿಸುತಿಪ್ಪರಿಗೆ ೫

೧೫೫

ತಾರಕವಿದು ಹರಿಕಥಾಮೃತಸಾರ ಜನಕೆ ಪ

ಘೋರತರ ಅಸಾರ ಸಂಸಾರವೆಂಬ ವನಧಿಗೆ ನವ ಅ.ಪ.

ಶ್ವಾನಸೂಕರಾದಿ ನೀಚಯೋನಿಗಳಲಿ ಬಂದು ನೊಂದು
ವೈನತೇಯ ವಾಹನನ ಸನ್ನಿಧಾನ ಬೇಕು ಎಂಬುವರಿಗೆ ೧

ಪ್ರಿಯವಸ್ತುಗಳೊಳಗೆ ಪಾಂಡುವೇಯ ಸಖನೆ ಎಮಗೆ ಬ್ರಹ್ಮ
ವಾಯು ಉಚ್ಚ ಸುರರು ತಂದೆ ತಾಯಿ ಎಂದರಿತವರಿಗೆ ೨

ಜ್ಞೇಯ ಜ್ಞಾನ ಜ್ಞಾತೃ ಬಾದರಾಯಣಾಖ್ಯ ಹರಿಯ ವಚನ
ಕಾಯ ಮನದಿ ಮಾಡ್ದ ಕರ್ಮ ಶ್ರೀ ಯರಸ ನೀವನರಗೆ ೩

ಶ್ರೀ ಮುಕುಂದ ಸರ್ವ ಮಮಸ್ವಾಮಿ ಅಂತರಾತ್ಮ ಪರಂ
ಧಾಮ ದೀನಬಂಧು ಪುಣ್ಯ ನಾಮವೆಂದರಿತವರಿಗೆ ೪

ಭೂತಭವ್ಯ ಭವತ್ಪ್ರಭು ಅನಾಥಜನರಬಂಧು ಜಗ
ನ್ನಾಥ ವಿಠ್ಠಲ ಪಾಹಿಯೆಂದು ಮಾತುಮಾತಿಗೆಂಬುವರಿಗೆ ೫

೧೫೬

ದಾಸರಿಗುಂಟೆ ಭಯಶೋಕ ಹರಿ
ದಾಸರಿಗುಂಟೆ ಭಯಶೋಕ ಪ

ವಾಸುದೇವನ ಸದಾ ಸ್ಮರಿಸುವ ಹರಿ
ದಾಸರಿಗುಂಟೆ ಭಯಶೋಕ ಅ.ಪ.

ಕಾಮಧೇನು ವರ ಕಲ್ಪವೃಕ್ಷ ಚಿಂ
ತಾಮಣಿ ಕೈ ಸೇರಿದಕಿಂತ
ನಾಮತ್ರಯದಿಂದಪ್ಪುದು ಸುಖವು ಸು
ಧಾಮನೆ ಸಾಕ್ಷಿದಕೆಂಬ ಹರಿ ೧

ರಾಮಚಂದ್ರ ಶಬರಿ ತಿಂದೆಂಜಲ
ಜಾಮಿಳ ಮಾಡ್ದ ಕುಕರ್ಮಗಳ
ಧೂಮಕೇತು ತಾ ಭುಂಜಿಸುವಂದದಿ
ಮೇಧ್ಯಾಮೇಧ್ಯ ಕೈಗೊಂಬನೆಂಬ ಹರಿ ೨

ನೇಮ ಮಂತ್ರ ಜಪ ದೇವತಾರ್ಚನ ಸ
ಕಾಮುಕವಾಗಲು ತ್ಯಜಿಸುತಲಿ
ಧೀಮಂತರಾಗತಿಪ್ರಿಯವಾಗಲು ಬಹು
ತಾಮಸ ಕರ್ಮವ ಮಾಳ್ಪುವೆಂಬ ಹರಿ ೩

ಏನು ಮಾಡಿದಪರಾಧವ ಕ್ಷಮಿಸುವ
ಏನು ಕೊಟ್ಟುದನು ಕೈಗೊಂಬ
ಏನು ಬೇಡಿದಿಷ್ಟಾರ್ಥವ ಕೊಡುವ ದ
ಯಾನಿಧಿ ಅನುಪಮನೆಂಬ ಹರಿ ೪

ಪ್ರಹ್ಲಾದವರದ ಪ್ರಕಟನಾಗದಲೆ
ಎಲ್ಲರೊಳಿಪ್ಪನು ಪ್ರತಿದಿನದಿ
ಬಲ್ಲಿದವರಿಗೆ ಬಲ್ಲದ ಜಗನ್ನಾಥ
ವಿಠ್ಠಲ ವಿಶ್ವವ್ಯಾಪಕನೆಂಬ ಹರಿ ೫

೧೫೭

ನಿನ್ನವರ ಧರ್ಮ ವಿಹಿತವಾಗುವುದು ಮ
ತ್ತನ್ಯರಾಚರಿಸಿದ ಧರ್ಮ ಅಧರ್ಮ ಪ

ಕಡಲ ಮಥನದಲಿ ಕಪರ್ದಿ ಕಾಳಕೂಟ
ಕುಡಿಯಲು ಕಂಠಭೂಷಣವಾಯಿತು
ಒಡನೆ ರಾಹು ಕೇತು ಸುಧೆಯ ಪಾನದಿಂದ
ಮಡಿದರೆಂದು ಮೂರ್ಲೋಕವೇ ಅರಿಯೆ ೧

ಬಲಿನಿನ್ನ ಮುಕುಟ ಕದ್ದೊಯ್ಯೆ ಪಾತಾಳಕೆ
ಸಲೆ ಭಕ್ತನೆಂದು ಬಾಗಿಲ ಕಾಯ್ದೆ
ಇಳೆಯೊಳು ಸುರರಿಗೆ ಗೋ ಭೂ ಹಿರಣ್ಯವಿತ್ತಾ
ಖಳ ಜರಾಸಂಧನ ಕೊಲಿಸಿದೆ ಹೋಗಿ ೨

ಪತಿವ್ರತ ಧರ್ಮದಿ ಮೃತರಾದ ತ್ರಿಪುರರ
ಸತಿಯರು ಶಿವನಿಂದ ಹತರಾದರು
ಕೃತು ಭುಜರ ಗುರು ಸತಿ ಉಡುಪ ಪತಿಯಿಂದಲಿ
ಸುತರ ಪಡೆದು ನಿತ್ಯ ಸೇವೆಯೊಳಿರುವಳು ೩

•ಮೇದಿನಿಯೊಳು ಪ್ರಾಣಿ ಹಿಂಸಕನೆನಿಸಿದಾ
ವ್ಯಾಧನ ಯಮಿಕುಲೇಶನ ಮಾಡಿದೆ
ವೇದೋಕ್ತ ಕರ್ಮವಾಚರಿಸಿದ ಜಿನನೊಳ್
ಪ್ರಾದುರ್ಭೂತನಾಗಿ ಕೆಡಹಿದೆ ತಮಕೆ ೪

ಪರಾಶರನು ಸತ್ಯವತಿಯ ಸಂಬಂಧಿಸೆ
ಶ್ರೀರಮಣ ನೀನವತರಿಸಿದಲ್ಲಿ
ವಾರಿಜಾಸನ ಭವ ಸರೋಜ ಕನ್ನಿಕೆಯ
ಸಾರಲು ಬಿಡುವ ಜಗನ್ನಾಥ ವಿಠಲ ೫

೧೫೮

ಮುಕ್ತನಲ್ಲವೇ ಭವದಿ ಮುಕ್ತನಲ್ಲವೇ ಪ

ಶಕ್ತನಾದ ಹರಿಯ ಪರಮ ಭಕ್ತಿಯಿಂದ ಭಜಿಪ ನರನು ಅ.ಪ.

ಉದಯ ಝಾವದಲ್ಲಿ ಎದ್ದು
ಮಧುವಿರೋಧಿಯಮಲ ಗುಣವ
ಹೃದಯದಲ್ಲಿ ನೆನೆದು ಪರಮ ಮುದದಿ
ನಲಿದು ಪಾಡುವವನು ೧

ಕೇಶವಗೆ ರಮಾಬ್ಜಭವ ಸದಾಶಿವ ಶಕ್ರಾದಿ ಸುರರು
ದಾಸರು ಎವೆ ಇಡುವ ಶಕ್ತಿ ಲೇಶವಿಲ್ಲವೆಂಬ ನರನು ೨

ಒಂದಧಿಕ ದಶೇಂದ್ರಿಯಗಳಿಗಿಂದಿರೇಶ ವಿಷಯವ ಸಮ
ಬಂಧಗೈಸಿ ವೈಷಯಿಕ ಸುಖ ತಂದು ಕೊಡುವನೆಂಬ ನರನು ೩

ಈ ಪರಿಯಲಿ ತಿಳಿದು ಪುಣ್ಯ ಪಾಪಕರ್ಮ ದುಃಖಸುಖ ಜ
ಯಾಪಜಯ ಮಾನಾಪಮಾನ ಶ್ರೀಪ ಕೊಡುವನೆಂಬ ನರನು ೪

ವೇದ ಶಾಸ್ತ್ರಗಳಲಿ ಇಹ ವಿರೋಧವಾಕ್ಯಗಳನು ಶ್ರೀ ಪ್ರ
ಮೋದ ತೀರ್ಥರುಕ್ತಿಯಿಂದ ಶೋಧಿಸುತಲಿ ಸುಖಿಪ ನರನು ೫

ಮಹಿತರಾಚರಿಪ ಕರ್ಮ ವಿಹಿತ ಅಸಜ್ಜನರು ಮಾಳ್ಪ
ವಿಹಿತವಾದ ಕಾಲಕದು ಅವಿಹಿತವೆಂದು ತಿಳಿಯುವವನು ೬

ಪರಮ ಸೂಕ್ಷ್ಮ ಜೀವರೊಂದೆಡೆಯಳಿಯಗೊಡದಲೆ
ಸ್ವರ್ಗ ಭೂಮಿ
ನರಕ ಫಲಗುಣಿಸಿ ಕರ್ಮ ಹರಿಸುವ ಹರಿಯೆಂಬ ನರನು ೭

ಗುರುಹಿರಿಯರ ಮಾತುಗಳನುಸರಿಸಿ ನಡೆದು ಅವರೊಳಿಪ್ಪ
ಪರಮ ಪುರುಷಗರ್ಪಿಸುತಲಿ ಹರುಷ ಬಡುತಲಿಪ್ಪ ನರನು ೮

ಈ ಶರೀರದರಸು ಶ್ರೀನಿವಾಸಾ ಮಾತೆ ಪ್ರಾಣ ಪಾರ್ವ
ತೀಶರಿಪರು ಎಂದೀ ದೇಹ ಪೋಷಿಸುತಲಿ ತೋಷಿಸುವನು ೯

ಪ್ರಿಯ ವಸ್ತುಗಳೊಳಗೆ ಅನ್ನಮಯನೆ ಪ್ರೀಯನೆಂದು ಅನ್ಯ
ಬಯಕೆಗಳನು ಜರಿದು ಹರಿಯ ದಯವ ಬಯಸುತಿಪ್ಪ ನರನ ೧೦

ಶತ್ರುತಾಪಕನುಳಿದು ಅನ್ಯ ಮಿತ್ರರಿಲ್ಲವೆಂದು ಅಹೋ
ರಾತ್ರಿಯಲ್ಲಿ ಬಿಡದೆ ಜಗದ್ಧಾತ್ರನ ಗುಣ ತುತಿಪ ನರನು ೧೧

ಬಿಂಬನೆನಿಸಿ ಸರ್ವರ ಹೃದಯಾಂಬರದೊಳಗಿದ್ದು ಜನವಿ
ಡಂಬನಾರ್ಥ ಕರ್ಮಗಳ ಆರಂಭ ಮಾಳ್ಪೆನೆಂಬ ನರನು ೧೨

ಅಕ್ಷರೇಢ್ಯ ಬ್ರಹ್ಮ ವಾಯು ತ್ರ್ಯಕ್ಷಸುರಪ ಸುರರೊಳಗ
ಧ್ಯಕ್ಷ ಸರ್ವ ಕರ್ಮಗಳಿಗೆ ಸಾಕ್ಷಿಯೆಂದು ಸ್ಮರಿಸುವವನು ೧೩

ಅಂಬುಜ ಭವಾಂಡದೊಳು ಮಹಾಂಬರವಿಪ್ಪಂತೆ ಶ್ರೀ ನಿ
ತಂಬಿನಿ ಸಹ ಸರ್ವರೊಳಗೆ ತುಂಬಿಹನೆಂದರಿತ ನರನು ೧೪

ಅದ್ವಿತೀಯನಪೇಕ್ಷ ಭಕ್ತ ಹೃದ್ವನಜ ನಿವಾಸಿಯೆನಿಸಿ
ಕದ್ದೊಯ್ದವರಘವನುಣಿಪನದ್ವಯತನೆಂಬ ನರನು ೧೫

ಜಾಂಬವತೀರಮಣ ವಿಷಯ ಹಂಬಲವನು ಬಿಡಿಸಿ ತನ್ನ
ಕಾಂಬ ಸುಖವನಿತ್ತು ನಿಜ ಕುಟುಂಬದಿಡುವನೆಂಬ ನರನು ೧೬

ಅಣು ಮಹತ್ವದಾರ್ಥ ವಿಲಕ್ಷಣ ವಿಶೋಕ ಜೀವರೊಡನೆ
ಜನಿಸಿ ಪುಣ್ಯ ಪಾಪ ಫಲಗುಳುಣದೆ ಉಣಿಪನೆಂಬ ನರನು ೧೭

ವಿಧಿ ನಿಷೇಧವೆರಡು ಕರ್ಮ ಸುದತಿಯರೊಡಗೂಡಿ ಸಮಾ
ಭ್ಯಧಿಕ ಶೂನ್ಯ ಮಾಳ್ಪನೆಂದು ಪದೇ ಪದೆಗೆ ಸ್ಮರಿಸುವವನು ೧೮

ಸ್ವಾತಿವರುಷ ವಾರಿಕಣವ ಚಾತಕ ಹಾರೈಸುವಂತೆ
ಶ್ವೇತವಾಹನ ಸಖನ ಕಥೆಯ ಪ್ರೀತಿಯಿಂದ ಕೇಳ್ವ ನರನು ೧೯

ಲೋಕಬಂಧು ಲೋಕನಾಥ ಲೋಕಮಿತ್ರ ಲೋಕರೂಪ
ಲೋಕರಂತೆ ಲೋಕದೊಳು ವಿಶೋಕ ಮಾಳ್ಪನೆಂಬ ನರನು ೨೦

ಶಾತಕುಂಭವರ್ಣ ಜಗನ್ನಾಥ ವಿಠಲನೆಂಬ ಮಹ
ದ್ಭೂತ ಬಡಕರಾವು ಇವನ ಭೀತಿ ಬಿಡದು ಎಂಬನರನು ೨೧

೧೫೯

ಯಮರಾಯ ಪೇಳ್ದ ದೂತರಿಗೆ
ಲಕ್ಷ್ಮೀ ರಮಣನ ದಾಸರಿದ್ದೆಡೆಗೆ ಪೋಗದಿರೆಂದು ಪ

ವೇದ ವ್ಯಾಕರಣ ಶಾಸ್ತ್ರಗಳೋದಿ ಶ್ರಾದ್ಧವೇ
ಕಾದಶಿ ದಿನದಿ ಮಾಡುತಲಿಪ್ಪರಾ
ಭೇದಮತವ ಮಿಥ್ಯವೆನುತಲಿಪ್ಪ ಮಾಯ
ವಾದಿಗಳೆಳ ತಂದು ನರಕದೊಳಿಡಿರೆಂದು ೧

ತಿರಿಪುಂಡ್ರವನಿಟ್ಟು ಭಸ್ಮದೇಹಕೆ ಪಟ್ಟೆ
ಕೊರಳಿಗೆ ರುದ್ರಾಕ್ಷಿ ಸರವ ಕಟ್ಟಿ
ಕುರಿಗಳ ಕೊಯ್ದು ಯಜ್ಞವ ಮಾಳ್ಪೆವೆನುತಲಿ
ಹರಿಹರರೊಂದೆಂಬರೆಳತನ್ನಿರೆಂದು ೨

ಶಿವನೆ ತಾನೆಂದು ಜಾಹ್ನವಿ ತೀರದಲಿ ಪಾ
ರ್ಥಿವ ಲಿಂಗನ ಪೂಜಿಪ ಅವಿವೇಕರಾ

ಶಿವರಾತ್ರಿಗಳಲಿ ಆಹಾರ ಬಿಡುವವರ ಉ
ರವ ನರಕದೊಳ್ಹವಣಿ ಬಿಡಿಸಿರೆಂದು ೩

ಮಳೆ ಚಳಿ ಬಿಸಿಲು ಕತ್ತಲೆಯೊಳು ಬರಲು ನ
ಮ್ಮಿಳೆಯದೊಳು ಸ್ಥಳವಿಲ್ಲೆಂಬರ
ಕಳವಿಲವರ ದ್ರವ್ಯಗಳನಪಹರಿಸುವ
ಬಲು ನೀಚರ ಪಿಡಿದೆಳೆದು ತನ್ನಿರೋ ಎಂದು ೪

ಶ್ರೀ ತುಳಸಿಯ ಬಿಟ್ಟು ಹಲವು ಪುಷ್ಪದಿ ಜಗ
ನ್ನಾಥವಿಠಲನ ಪೂಜಿಸುತಿಪ್ಪರಾ
ಮಾತನಾಡಿ ವೇದಮಂತ್ರ ಬಿಡುವರ
ಯಾತನ ದೇಹವ ಕೊಟ್ಟು ಬಾಧಿಸಿರೆಂದು ೫

೧೬೦

ಯಾತರ ಭಯ ಶ್ರೀನಾಥನ ಪರಮ ಸುಪ್ರೀತಿಯ ಪಡೆದವಗೆ ಪ

ಕಾತರ ಪಡದಲೆ ಪಾತಕಹರ ವಿಧಿ ತಾತನೆ
ನಿಜಸುಖದಾತ ನೆಂದರಿತವಗೆ ಅ.ಪ

ಬಂಧು ಜನರು ತನಗೊಂದಿಸಿದಾಕ್ಷಣ ಬಂದ ಭಾಗ್ಯವೇನೊ
ಹಿಂದೆ ಮುಂದೆ ತನ್ನ ನಿಂದಿಸಿ ನುಡಿಯಲು ಕುಂದಾದದ್ದೇನೊ
ಮಂದರಧರ ಗೋವಿಂದನ ಮಾನಸ
ಮಂದಿರದಲಿ ತಂದಿಟ್ಟಿರುವವಗೆ ೧

ದುಸುಮುಸುಗುಟ್ಟುವ ಸತಿಸುತರಿಂದಲಿ ಹಸಗೆಟ್ಟದ್ದೇನೋ
ಅಶನಾಚ್ಛಾದನ ತರಲಿಲ್ಲವೆನುತಲಿ ವ್ಯಸನ ಪಡುವುದೇನೊ
ಕುಸುಮನಾಭ ಸುಮನಸರೊಂದಿತ ಪದ
ವಸುದೇವನಸುತನೊಶದೊಳಗಿರುವವಗೆ ೨

ಫಾಸಿಯಿಂದಲಾಯಾಸ ಪಡುತ ಅವಾಸದೊಳಿದ್ದೇನೋ
ಕಾಶಿ ಕಂಚಿ ಕಾಳಹಸ್ತಿ ಮೊದಲಾದ ದೇಶ ತಿರುಗಲೇನೋ
ಈಶಾಧೀಶ ಜಗನ್ನಾಥವಿಠ್ಠಲನ ದಾಸನೆಂದು
ಸಂತೋಷದಲ್ಲಿರುವವನಿಗೆ ೩

೧೬೧

ರಂಗಾ ನಿನ್ನ ಕೊಂಡಾಡುವ ಮಂಗಳಾತ್ಮರ
ಸಂಗಸುಖವಿತ್ತು ಕಾಯೋ ಕರುಣಾ ಸಾಗರ ಪ

ಅರಿಯರೋ ನೀನಲ್ಲದೆ ಮತ್ತನ್ಯದೈವರ
ಮರೆಯರೋ ನೀ ಮಾಡಿದ ಅನಿಮಿತ್ತೋಪಕಾರ
ತೊರೆಯರೋ ನಿನ್ನಂಘ್ರಿ ಸೇವಾ ಪ್ರತಿವಾಸರಾ
ಒರೆಯರೋ ಪರತತ್ವವಲ್ಲದೆ ಇತರ ವಿಚಾರಾ ೧

ಮೂಕ ಬಧಿರರಂತಿಪ್ಪರೋ ನೋಳ್ಪಜನಕೆ
ಕಾಕುಯುಕುತಿಗಳನ್ನು ತಾರರೋ ಮನಕೆ
ಸ್ವೀಕರಿಸರನರ್ಪಿತ ಒಂದು ಕಾಲಕ್ಕೆ
ಆ ಕೈವಲ್ಯಭೋಗ ಸುಖ ಅವರಿಗೆ ಬೇಕೆ ೨

ಕಂಡಕಂಡಲ್ಲಿ ವಿಶ್ವರೂಪ ಕಾಂಬೋರೋ
ಉಂಡು ಉಣಿಸಿದ್ದೆಲ್ಲ ನಿನ್ನ ಯಜ್ಞವೆಂಬರೋ
ಬಂಡುಣಿಯಂದದಿ ನಾಮಾಮೃತವ ಸವಿವರೋ
ಹೆಂಡಿರು ಮಕ್ಕಳು ನಿನ್ನ ತೊಂಡರೆಂಬೋರೋ ೩

ಬಿಡರು ತಮ್ಮ ಸ್ವಧರ್ಮಗಳೇನು ಬಂದರೂ
ಬಡರು ದೈನ್ಯ ಒಬ್ಬರಿಗೂ ಲೋಕ ವಂದ್ಯರೊ
ಪಿಡಿಯರೋ ನಿನ್ನ ದ್ವೇಷಿಗಳಿಂದೇನು ಬಂದರು
ಕೊಡುವರೋ ಬೇಡಿದಿಷ್ಟಾರ್ಥ ನಿತ್ಯಾನಂದರೂ ೪

ಜಯಾಜಯ ಲಾಭಾಲಾಭ ಮಾನಾಪಮಾನಾ
ಭಯಾಭಯ ಸುಖದುಃಖ ಲೋಷ್ಟ ಕಾಂಚನಾ
ಪ್ರಿಯಾಪ್ರಿಯ ನಿಂದಾಸ್ತುತಿಗಳನುದಿನಾ
ಶ್ರೀಯರಸ ಚಿಂತಿಸುವರೋ ನಿನ್ನ ಅಧೀನ ೫

ಈಶಿತವ್ಯರೆಂಬರೋ ಏಕಾಂತ ಭಕ್ತರೋ
ದೇಶಕಾಲೋಚಿತ ಧರ್ಮ ಕರ್ಮಾಸಕ್ತರು
ಆಶಾ ಕ್ರೋಧ ಲೋಭ ಮೋಹ ಪಾಶ ಮುಕ್ತರು
ಈ ಸುಜನರೇವೆ ಶಾಪಾನುಗ್ರಹ ಶಕ್ತರು ೬

ನಗುವರೋ ರೋದಿಸುವರೊ ನಾಟ್ಯವಾಡೋರೊ
ಬಗೆಯರೋ ಬಡತನ ಭಾಗ್ಯ ಭಾಗವತರು
ತೆಗೆಯರೋ ನಿನ್ನಲ್ಲಿ ಮನ ಒಮ್ಮೆಗಾದರೂ
ಜಗನ್ನಾಥವಿಠಲ ನಿನ್ನವರೇನು ಧನ್ಯರೋ ೭

೧೬೨

ಸಂತರೆನಬಹುದು ಸಜ್ಜನರಿವರನಾ ಪ

ಇಂಥ ಗುಣಗಳಿಂದ ಯುಕ್ತರಾಗಿಪ್ಪರ ಅ.ಪ.

ಸ್ವಾಂತಸ್ಥಾ ನುತ ಸರ್ವಾಂತರಾತ್ಮಕನೆಂದು
ಚಿಂತಿಸುತ ಮನದೊಳು ನಿರಂತರದಲಿ
ನಿಂತಲ್ಲಿ ನಿಲ್ಲದೆ ದುರಂತ ಮಹಿಮನ ಗುಣವ
ಸಂಸ್ತುತಿಸುತನವರತ ಶಾಂತರಾಗಿಹರಾ ೧

ಲೇಸು ಹೊಲ್ಲೆಗಳು ಪ್ರದ್ವೇಷ ಗೇಹಗಳು ಸಂ
ತೋಷ ಕ್ಲೇಶಗಳಿಗವಕಾಶ ಕೊಡದೆ

ದೋಷ ವರ್ಜಿತ ಹೃಷಿಕೇಶ ಮಾಡುವನೆಂದು
ಭೇಶನಂದದಲಿ ಪ್ರಕಾಶಿಸುತಲಿಹರಾ ೨

ವೇದ ಶಾಸ್ತ್ರಂಗಳೊಳು ಮೇದಿನಿ ದಿವಿಜರೊಳು
ಸಾಧು ಜನರೊಳು ಧರ್ಮಕರ್ಮಗಳೊಳು
ಶ್ರೀದನೊಳು ಗೋವುಗಳೊಳಗೆ ದ್ವೇಷಿಪರಿಗೆ ಅ
ನ್ನೋದಕಗಳೀಯದೆ ನಿಷೇಧಗಯ್ಯುತಲಿಹರಾ ೩

ಎನ್ನ ಪೋಲುವ ಪತಿತರಜ್ಞಾನಿಗಳು ಜಗದೊ
ಳಿನ್ನಿಲ್ಲ ಪತಿತ ಪಾವನನೆನಿಸುವ
ಜಾಹ್ನವೀ ಜನಕಗಿಂದಧಿಕರ್‍ಯಾರಿಲ್ಲೆಂದು
ಉನ್ನತೋತ್ಕಂಠದಿಂದ ಸನ್ನುತಿಸುತಿಪ್ಪವರ ೪

ಸತ್ಯ ಸಂಕಲ್ಪ ಏನಿತ್ತಿದ್ದೆ ಪರಮ ಸಂ
ಪತ್ತು ಎನಗೆನುತ ಸದ್ಭಕ್ತಿಯಿಂದಾ
ನಿತ್ಯದಲಿ ಕೀರ್ತಿಸುತ ಪುತ್ರಿಮಿತ್ರಾದಿಗಳು
ಭೃತ್ಯಾನುಭೃತ್ಯರೆಂದರ್ತಿಯಲಿ ಸ್ಮರಿಸುವರಾ ೫

ಜನುಮ ಜನುಮಗಳಲ್ಲಿ ಎನಗೆ ಜನನೀ ಜನಕ
ಅನುಜ ತನುಜಾಪ್ತ ಪೋದನ ಭೂಷಣಾ
ಅನಿಮಿತ್ತ ಬಂಧು ಒಬ್ಬನೇ ಎನಿಸುತಿಪ್ಪ ಸ
ಜ್ಜನರಿಗಿಹ ಪರ ಸೌಖ್ಯ ರೂಪನೆಂಬುವರಾ ೬

ನಾಗೇಂದ್ರಶಯನ ಭವರೋಗಾಪಹರ್ತ ಪಾ
ಪೌಘಾದ್ರಿ ವಜ್ರ ಅಮೋಘ ಶೌರ್‍ಯ
ತ್ರೈಗುಣ್ಯ ವರ್ಜಿತ ಜಗನ್ನಾಥ ವಿಠಲಗೆ
ಕೂಗಿ ಕೈಮುಗಿದು ತಲೆಬಾಗಿ ನಮಿಸುವರಾ ೭

೧೬೩

ಹರಿದಾಸರಿಗೆ ಒಬ್ಬರ ಗೊಡವೆ ಯಾತಕೆ
ಅರಿವೆ ಅನ್ನಾಭರಣ ದ್ರವ್ಯ
ಸರ್ವವು ಶ್ರೀ ವರನೆ ಎಂಬ ಪ

ನಿತ್ಯಾನಂದ ನಿತ್ಯಜ್ಞಾನಾನಿಮಿತ್ತ ಬಂಧು ಭಕ್ತರಿಗೆ
ಇತ್ತದ್ದೆ ಸಂಪತ್ತು ಎಂದು ಕೀರ್ತಿಸುತ್ತ ನರ್ತಿಸುವ ೧

ದೋಷದೂತರನೊಬ್ಬ ಪೋಷ್ಯ ಪೋಷಕಾಧಾರ ಧೇಯ
ದೋಷಕಾರಿ ತ್ರೈ ಲೋಕ್ಯ ವಿಭೂಷಣ ವಿಭೂತಿದನೆಂಬ ೨

ಎನ್ನ ಸ್ವಾಮಿ ಸರ್ವರಿಗೆ ಎನ್ನ ಬಿಂಬ ಎಲ್ಲರಿಗೆ
ಮಾನ್ಯ ಮಾನದನು ಜಗದ್ಭಿನ್ನನೆಂದು ತುತಿಸುತಿಪ್ಪ ೩

ಜನನೀ ಜನಕ ಲಕ್ಷ್ಮೀ ನಾರಾಯಣನೆ ಪುತ್ರಮಿತ್ರನೆಂದು
ಕ್ಷಣಶ ಕೊಂಡಾಡುತನ್ಯರ ಗಣನೆ ಮಾಡದಿಪ್ಪ ನಿಜ ೪

ಹಾನಿ ಲಾಭ ಕೀರ್ತಿ ಅಪಮಾನ ಮಾನ ಪುಣ್ಯಪಾಪ
ಶ್ರೀನಿವಾಸಗರ್ಪಿಸಿ ಮದ್ದಾನೆಯಂತೆ ಚರಿಸುತಿಪ್ಪ ೫

ಅನಂತ ಜೀವರಿಗಿನ್ನು ಅನಾದಿ ಅನ್ನದನಾಗಿ
ಅನಿರ್ವಿಣ್ಣ ನಾಮಕನೆಂದು ಸನ್ನುತಿಸಿ ಹಿಗ್ಗುತಿಪ್ಪ ೬

ಸರ್ವ ಜೀವ ದೇಹಾಂತಸ್ಥ ಸರ್ವ ಜಗನ್ನಾಥ ವಿಠಲ
ಸರ್ವರೂಪ ಸರ್ವನಾಮ ಸರ್ವವೇದೋದಿತನೆಂಬೊ ೭

ಉಪದೇಶ

೧೬೪

ಅರಿತವರಿಗತಿ ಸುಲಭ ಹರಿಯ ಪೂಜೆ ಪ

ಅರಿಯದವ ನಿರ್ಭಾಗ್ಯತರ ಲೋಕದೊಳಗೆ ಅ.ಪ.

ಹೈಮಾಂಡ ಮಂಟಪವು ಭೂಮಂಡಲವೆ ಪೀಠ
ಸೋಮ ಸೂರ್ಯರೆ ದೀಪ ಭೂರುಹಗಳು
ಚಾಮರಗಳತಿ ವಿಮಲ ವ್ಯೋಮ ಮಂಡಲ ಛತ್ರ
ಯಾಮಾಷ್ಟಕರಗಳಷ್ಟದಳದ ಪದ್ಮವುಯೆಂದು ೧

ಮಳೆಯೆ ಮಜ್ಜನವು ದಿಗ್ವಲಯಂಗಳೇ ವಸನ
ಮಲಯಜಾನಿಲವೇ ಶ್ರೀಗಂಧ ಧೂಪಾ
ಇಳೆಯೊಳಗೆ ಬೆಳೆದ ಧಾನ್ಯಗಳೆಲ್ಲ ನೈವೇದ್ಯ
ಥಳ ಥಳಿಪ ಮಿಂಚು ಕರ್ಪೂರದಾರತಿಗಳೆಂದು ೨

ನಕ್ಷತ್ರ ಮಂಡಲವೇ ಲಕ್ಷ ದೀಪಾವಳಿಯು
ದಕ್ಷಿಣೋತ್ತರ ಅಯನಗಳೇ ಬನವು
ವೃಕ್ಷ ವಲ್ಲಿಜ, ಸುಫಲ ಪುಷ್ಪಗಳೊಳಗೆ ಲಕ್ಷ್ಮೀ
ವಕ್ಷ ವ್ಯಾಪಕನಾಗಿ ತಾನೆ ಭೋಗಿಪನೆಂದು ೩

ಗುಡುಗು ಸಪ್ತ ಸಮುದ್ರ ಸಿಡಿಲು ಘೋಷವೇ ವಾದ್ಯ
ಪೊಡವಿಪರಿಗೀವ ಕಪ್ಪವೇ ಕಾಣಿಕೆಗಳು
ಉಡುಪ ಭಾಸ್ಕರರ ಮಂಡಲಗಳಾದರ್ಶಗಳು
ನಡೆವ ನಡೆಗಳು ಹರಿಗೆ ಬಿಡದೆ ನರ್ತನವೆಂದೂ ೪

ಯುಗ ಚತುಷ್ಟಯವೆ ಪರಿಯಂಕ ಪಾದಗಳಬ್ದ
ಬಿಗಿವ ಪಟ್ಟಿಗಳು ಕಂದಾಯ ಕಸಿ ಯೊ
ಗಗನ ಮೇಲ್ಗಟ್ಟು ಸಂಕ್ರಮಣಗಳೇ ಬಡವುಗಳೂ
ಭಗವಂತಗುಪಬರ್ಹಣಗಳು ಷಡ್ಋತುಗಳೆಂದೂ ೫

ನಾಗವಲ್ಲೆಗಳೆ ದಿವಸಗಳು ಕರಣವೇ ಕ್ರಮಕೆ
ಯೋಗಗಳೇ ಚೂರ್ಣ ರಾತ್ರೆ ತಾಂಶೊಕ
ಭೋಗವತೀ ಜಲವೆ ಗಂಡೂಷೋದಕ ಶುದ್ಧ
ಸಾಗರವೆ ಪಾದೋದಕ ವಿರಾಡ್ರೂಪಗೆಂದು ೬

ಶಾತಕುಂಭೋಧರಾಂಡಾಂತಸ್ಥ ರೂಪ ಸಂ
ಪ್ರೀತಿಯಿಂದಲಿ ಯಜಿಸಿ ಮೋದಿಪರನಾ
ಮಿತ ಶೋಕರ ಮಾಡಿ ಸಂತೈಸುತಿಹ ಜಗ
ನ್ನಾಥ ವಿಠಲ ಒಲಿದು ಸರ್ವ ಕಾಲಗಳಲ್ಲಿ ೭

೧೬೫

ಇನಿತೆಂದು ಶಾಸ್ತ್ರ ಪೇಳುವವು ಪ

ಪುನಹ ಪುನಹ ಭಗವತ್ಪ್ರಾಪ್ತಿ ಬೇಕೆಂಬುವರಿಗೆ ಅ.ಪ.

ಅನುಬಂಧಿಗಳಲಿ ಮಮತೆಯನೆ ಬಿಡು ವಿಷಯ ವಾ
ಸನೆಯನೀಡಾಡು ಸುಜ್ಞಾನ ಭಕ್ತಿಯ ಬೇಡು
ಮನದಲ್ಲಿ ಹರಿಯ ಮೂರ್ತಿಯನೆ ನೆರೆ ನೋಡು ಸುಜ್ಞ
ರನು ಕೊಂಡಾಡು ಅಜ್ಞಾನಿಗಳ ಸಹವಾಸ ಸುಡು
ವನಜನಾಭನ ಪೂಜೆ ಮಾಡು ಪ್ರತಿ
ಕ್ಷಣ ಬಿಡದೆ ಭಗವದ್ಗುಣಗಳ ಕೊಂಡಾಡು ೧

ಪರಮಾಣು ಮೊದಲ್ಗೊಂಡು ವ್ಯಕ್ತ ತತ್ವದೊಳ
ಹೊರಗೆ ವ್ಯಾಪಕನಾಗಿ ತದ್ರೂಪ ನಾಮದಿಂ
ಕರೆಸುತಲಿ ತದ್ವಿಕಾರಗಳಿಲ್ಲದಲೆ ಸೃಷ್ಟಿ
ಪರಿಪಾಲನೆ ಲಯಗಳನೆ ಮಾಡಿ ಮೋದಿಸುತಾ
ಪರಮಾತ್ಮನೊಬ್ಬನಿಹನೆಂದು ಹರಿಗೆ
ಮರೆಯದಲೆ ಮಹಿಮೆಗಳ ಪೊಗುಳುತಿರು ಮನುಜಾ ೨

ಹರಿಭಕ್ತರಿದ್ದೆಡೆಗೆ ಹರಿದು ಹೋಗಲಿ ಬೇಕು
ತಿರಿಯ ಕ್ಷುಂದ್ರಗಳ ನಿಂದಿಸಬೇಕು
ಹರಿಯ ನಾಮತ್ರಯಾಂಕಿತರಿಗೆರಗಲು ಬೇಕು
ಗುರು ಹಿರಿಯರ ವಗುಣಗಳೆಣಿಸದಿರ ಬೇಕು ಮ
ತ್ಸರವ ಬಿಡಬೇಕು ಭಕ್ತರಲಿ ಹೀಗೆ
ಒರೆದೊರೆದು ಪೇಳುವರು ಬುಧರು ನಿತ್ಯದಲಿ ೩

ನಿತ್ಯ ನೈಮಿತ್ತಿಕ ಸುಕರ್ಮ ಮಾಡಲು ಬೇಕು
ಕೃತ್ಯವಲ್ಲದೆ ಲೋಕವಾರ್ತೆಗಳ ಬಿಡಬೇಕು
ಚಿತ್ತದಲಿ ಹರಿಪಾದ ಚಿಂತಿಸುತಲಿರಬೇಕು
ವಿತ್ತದೇಹಾಗಾರ ಭಗವಂತನದೆಂದು ದೇ
ಹತ್ಯಾಗ ಪರಿಯಂತ ಮಾಳ್ಪ ಕರ್ಮ
ಸತ್ಯಸಂಕಲ್ಪಕಿವು ಪೂಜೆ ಎನಬೇಕು ೪

ಸೀತೋಷ್ಣ ಸುಖ ದುಃಖ ಮಾನಾಪಮಾನ ಜಯ
ಭೀತಿ ನಿರ್ಭೀತಿ ಅಪಜಯ ಜ್ವರಾಪಸ್ಮಾರ
ಭೂತ ಬಾಲ ಗ್ರಹ ಮೃಗಸರ್ಪ ನೃಪ ಚೋರ
ಯಾತನೆಗೆ ಭಯಪಡದೆ ಸರ್ವತ್ರದಲಿ ಜಗ
ನ್ನಾಥವಿಠ್ಠಲನ ಸ್ಮರಿಸುತಿರು ಮಹಾ
ಪಾತಕವ ಪರಿಹರಿಸಿ ಪೊರೆವ ದಯದಿಂದಾ ೫

೧೬೬

ಇರಬೇಕು ನಿಂದಕರು ಸಜ್ಜನರಿಗೆ ಪ

ದುರಿತ ರಾಶಿಗಳ ಪರಿಹರಿಸಲೋಸುಗ ಅ.ಪ.

ಕಲಿಯುಗದಿ ಕೋವಿದರು ಕಲುಷ ಕರ್ಮವ ಮಾಡೆ
ಕಳೆವರಿನ್ನಾರೆಂದು ಕಮಲಭವನು
ತಿಳಿದು ನಿರ್ಮಿಸಿದವನಿಯೊಳಗೆ ನಿಂದಕರ
ಕಲುಷರನ ಮಾಡಿ ತನ್ನವರ ಸಲಹುವ ೧

ದಿವಿಜರಿಳೆಯೊಳಗೆ ಜನ್ಮಗಳೊಲ್ಲೆವೆಂದಬ್ಜ
ಭವಗೆ ಮೊರೆಯಿಡಲು ವರವಿತ್ತನಂದು
ಭವಕೆ ಕಾರಣ ಕರ್ಮ ಮಾಡಿದರು ಸರಿಯೆತ
ನ್ನವನೆನಿಸದವಗೆ ತಜ್ಜನ್ಯ ಫಲ ಬರಲೆಂದು ೨

ಮಾನವಾಧಮ ಜನರು ನೋಡಿ ಸಹಿಸದಲೆ
ಹೀನ ಮತಿಯಿಂದ ಮಾತುಗಳಾಡಲು
ಭಾನು ಮಂಡಲಕೆ ಮೊಗವೆತ್ತಿ ಉಗುಳಿದರೆ
ಸ್ನಾನನವೆ ತೊಯ್ವುದಲ್ಲದರ್ಕಗೇನಪಮಾನ ೩

ಮಲವ ತೊಳೆವಳು ತಾಯಿ ಕೈಗಳಿಂದಲಿ ನಿತ್ಯ
ತೊಳೆವ ನಿಂದಕ ತನ್ನ ನಾಲಗಿಂದ
ಬಲು ಮಿತ್ರನಿವನೆಂದು ಕರೆದು ಮನ್ನಿಸಬೇಕು
ಹಲವು ಮಹ ಪಾಪಗಳ ಕಳೆದು ಪುಣ್ಯವನೀವ ೪

ಅನುಭವಿಪ ದುಷ್ಕರ್ಮಗಳ ಜನ್ಯ ಫಲವು ತ
ನ್ನಣುಗರಿಗೆ ಅಪವಾದ ರೂಪದಿಂದ
ಉಣಿಸಿ ಮುಕ್ತರ ಮಾಡಿ ಸಂತೈಪ ನರಕ ಯಾ
ತನೆಗಳವರಿಗೆ ಇಲ್ಲದುದರಿಂದ ಎಂದೆಂದೂ ೫

ಮನುಜಾಧಮರಿಗೆ ಹರಿದಾಸರಲಿ ದ್ವೇಷ
ವೆನಿಪ ಸಾಧನವೆ ನಿಸ್ಸಂದೇಹವು
ಅನುತಾಪ ಬಿಡದೆ ಹರುಷಿತರಾಗಿ ನಿಷ್ಠೆಯೋ
ಜನದಿ ಹರಿಪದಾಬ್ಜ ಭಜಿಪ ಭಜಕರಿಗೆ ೬

ಲೋಕದೊಳು ನಿರ್ಮಿಸಿದನಿರ್ವರನು ಹರಿ ತಾನು
ಭೂ ಕೋವಿದರ ಮಲವು ಪೋಗಲೆಂದು
ಶ್ರೀ ಕರಾರ್ಚಿತ ಜಗನ್ನಾಥವಿಠಲ ಗ್ರಾಮ
ಸೂಕರರು ನಿಂದಕರು ಕರುಣಾಳು ಇಳೆಯೊಳಗೆ ೭

೧೬೭

ಕಲಿಮುಖ್ಯ ದೈತ್ಯರನು ಸ್ಮರಿಸಿ ಬಿಡದೆ
ಕಲುಷವರ್ಜಿತ ಭಾಗವತರು ಮರೆಯದಲೆ ಪ

ಮಲಮೂತ್ರಗಳ ವಿಸರ್ಜನೆ ಗೈವಾಗ ಎಂ
ಜಲ ಕೈ ಬಾಯ್ತೊಳೆದು ಉಗುಳುವಾಗ
ಹುಳಿ ಬೀಜ ಕವಡೆ ಪಗಡೆಗಳಾಡುವಾಗ ಮ
ಕ್ಕಳನಾಡಿಸುತಲಿ ವಿಸ್ಮರಣೆಯಿಂದಿರುವಾಗ ೧

ಸಂಧಿಕಾಲದಲಿ ಸತಿಯೊಡನೆ ಪವಡಿಸಿದಾಗ
ನಿಂದ್ಯ ಕರ್ಮಗಳನಾಚರಿಸುವಾಗ
ತಂದೆ ತಾಯಿಗಳ ದಿನ ಮರೆತು ಒಟ್ಟಾಗ ಕ
ರ್ಮಂಧಿ ಭಿಕ್ಷಕೆ ಬರಲು ಇಲ್ಲೆಂಬುವಾಗ ೨

ಮಾಸೋಕ್ತ ಧರ್ಮವನು ತೊರೆದಾಗ ವಿಪ್ರಗೋ
ಗ್ರಾಸಗಳ ಕೊಡದೆ ಭುಂಜಿಸುವಗಲೇ
ಮೀಸಲು ಮಡಿ ಮೈಲಿಗೆಗಳ ನೋಡದಲೆ ದು
ಷ್ಯಾಸೆಯಲಿ ನೀಚರಾಲಯದಲುಂಬಾಗ ೩

ಪ್ರಾಯ ಧನ ಮದದಿಂದ ಹೇಯ ವಿಷಯಗಳು ಪಾ
ದೇಯವೆಂದರಿದು ಭುಂಜಿಸುವಾಗಲು
ಜಾಯಾತ್ಮ ದೇಹಾದಿಗಳು ತನ್ನದೆಂಬಾಗ
ಮಾಯವಾದಿಯ ಉಕುತಿ ಮನಕೆ ತಂದಾಗ ೪

ಮತಿವಮತರೊಡನೆ ಮತ್ಸರ ಪುಟ್ಟಿದಾಗವ
ರ್ಪಿತ ಪದಾರ್ಥಗಳ ಭುಂಜಿಸುವಾಗಲು
ಮೃತ ವತ್ಸ ಗೋವಿನ ಚಲಮಂಬಾಗ ಶ್ರೀ
ಪತಿ ಜಗನ್ನಾಥವಿಠಲನ ಸ್ಮೃತಿ ಬಿಟ್ಟಾಗ ೫

೧೬೮

ಜಗದಾಖ್ಯ ವೃಕ್ಷ ಚಿಂತಿಪುದು ಬುಧರು ಪ

ಭಗವಂತನೆಂಬ ಆಗಸದಲಿ ಪಸರಿಸಿದ ಅ.ಪ.

ಚತುರಾಸ್ಯ ವಾಣಿ ಈರ್ವರು ಬೀಜ ಚಿತ್ತ ಕೃತಿ
ಪೃಥವಿ ಕರ್ಮವು ಬೇರು ತ್ರಿಗುಣತ್ವ – ವು
ಕ್ಷಿತಿ ಜಲಾನಲ ವಾಯು ಗಗನ ಶಾಖೆಗಳಿಂದಕೆ
ಶತಕಿರಣ ಉಪಕೊಂಬೆಯೆನಿಸಿ ಕೊಂಬವು ಇದಕೆ ೧

ಅಹಂಕಾರ ಬಲದಿಂದ ಅಭಿವೃದ್ಧಿ ಐದುವುದು
ಅಹಿಕ ಸುಖ ಕುಸುಮ ತನ್ಮಾತ್ರ ರಸದಿ
ಸಹಿತವಾರ ಪ್ರವೃತ್ತಿ ನಿವೃತ್ತಿ ಕರ್ಮಫಲ
ಅಹರಹರ್ ಭುಂಜಿಪವು ತನ್ನಾಮ ಜೀವಖಗ ೨

ನಾನು ನನ್ನದು ಎಂಬ ನೀಡ ದ್ವಯಗಳಿದಕೆ
ಮಾನಾಪಮಾನಾದಿಗಳೆ ಪತ್ರವೂ
ಹೀನ ವಿದ್ಯಾದಿ ಪಂಚಕವೆ ಸರ್ಪಗಳಲ್ಲಿ
ಶ್ರೀನಿಧಿ ಜಗನ್ನಾಥವಿಠಲ ಸಂರಕ್ಷಕನು ೩

೧೬೯

ತಿಳಿವುದನ್ನಮಯ ಕೋಶಗಳನು
ಇಳೆಯೊಳಚ್ಯುತನ ದಾಸರು ನಿತ್ಯದಲಿ ಪ

ಮೇದಿನಿ ಸಲಿಲನ್ನಮಯ ವಿಹಾಯಸ ವಾಯು
ಆದಿತ್ಯ ಮುಖ್ಯಪ್ರಾಣ ಮನೋಮಯಕೆ
ಆದುದು ಮನ ಅಹಂಕಾರ ವಿಜ್ಞಾನಮಯ
ವೇದ್ಯ ತತ್ವಾನಂದ ಮಯಕೆ ಅವ್ಯಕ್ತವನು ೧

ಅನಿರುದ್ಧ ಶಾಂತಿ ಪ್ರದ್ಯುಮ್ನ ಕೃತಿ ಸಂಕರು
ಷಣ ಜಯಾ ಶ್ರೀ ವಾಸುದೇವ ಮಾಯಾ
ಘನ ಸುಲಕ್ಷಣ ಲಕ್ಷ್ಮೀ ನಾರಾಯಣರು ಮುಖ್ಯ
ರೆನಿಸುವರು ಪಂಚಕೋಶದಲಿ ಎಂದೆಂದೂ ೨

ಪ್ರಾಣಾಪಾನ ವ್ಯಾನೋದಾನ ಸಮಾನ ಪಂ
ಚಾನಿಲರೂ ಅಲ್ಲಿಹರು ಮತ್ತು
ದಾನವಾದಿಗಳಿಹರು ಭೂತ ಮಾತ್ರ ಕರ್ಮ
ಜ್ಞಾನೇಂದ್ರಿಯಗಳು ತನ್ನಿಷ್ಟವಾಗಿಹವಲ್ಲಿ ೩

ಅಬುಜ ಭವಾಂಡ ಪಿಂಡಾಂಡಕ್ಕೆ ಈ ತತ್ವ
ಒಂಬತ್ತು ಆವರಣವೆಂದೆನಿಪವು
ಕಂಬುಪಾಣಿಯ ರೂಪ ಲಕ್ಷ್ಮೀ ರೂಪವು ಪಂಚ
ಇಂಬುಗೊಂಡಿಹವು ಚಿಂತಿಪುದು ಭೂಸುರರು ೪

ಭೂಶನೇಶ್ವರ ವರುಣ ಸುರನದಿಗಳನ್ನಮಯ
ಕೋಶದೊಳಗಿರುತಿಹರು ಪ್ರಾಣಮಯದಿ
ಮೇಷವಾಹನ ಪ್ರವಹವಾಯು ಪ್ರಾವಹಿ ಮಹಾ
ಕಾಶಾಧಿಪತಿ ಗಣಪರಧಿಪರೆಂದೆನಿಸುವರು ೫

ಕಾಮೇಂದ್ರ ಶಿವ ರತೀಂದ್ರಾಣಿ ಪಾರ್ವತಿ ಮುಖ್ಯ
ಈ ಮನೋಮಯಕಧಿಪರೆನಿಸುತಿಹರು
ತಾಮರಸಭವ ವಾಯು ವಾಣಿ ಭಾರತಿ ಮುಖ್ಯ
ಸ್ವಾಮಿಗಳೆನಿಸುವರು ವಿಜ್ಞಾನಕೋಶದಲಿ ೬

ಆನಂದಮಯ ಕೋಶಕಭಿಮಾನಿ
ಶ್ರೀನಿವಾಸನು ಪಂಚರೂಪಾತ್ಮಕಾ
ಈ ನಿರ್ಜರರೊಳಿದ್ದು ತತ್ತದಾಹ್ವಯನಾಗಿ
ಪಾನೀಯಜಾಂಡದೊಳಿಪ್ಪ ಕರುಣೀ ೭

ಪೃಥಿವಿ ಗಂಧ ಘ್ರಾಣೋಪಸ್ಥಪ್ಪುರ ಸಂಜೀವಾ
ಪ್ರಥಮ ಕೋಶದಿ ವಾಯು ಅಷ್ಟತತ್ತ್ವ
ದ್ವಿತೀಯ ಕೋಶದಿ ತೇಜರೂಪ ಚಕ್ಷುಪಾದ
ಪ್ರಥಮಾಂಗ ಸ್ಪರ್ಶ ತ್ವಕು ಪಾಣಿ ತತ್ವಗಳಿಹವು ೮

ಆಕಾಶ ಶಬ್ದ ಶ್ರೋತ್ರವು ಪಿಂತೆ ಪೇಳ್ದಷ್ಟು
ವಾಕು ಪ್ರಾಣಾದಿ ತತ್ತ್ವ ದ್ವಾದಶ ಕಾಮ
ಶ್ರೀ ಕಂಠ ತತ್ವ ಮನ ಮನೋಮಯದಿ ವಿಜ್ಞಾನ
ರಾ ಕಮಲ ಭವ ನಂದ ಮಯತೆ ಅವ್ಯಕ್ತವನು ೯

ಸ್ಥೂಲ ದೇಹಕೆ ಇನಿತು ಲಿಂಗ ತನುವಿನಲಿ ತತ್ತ್ವ
ಜಾಲ ಸೂಕ್ಷ್ಮಗಳಿಹವು ಗುಣ ಭೇದದಿ
ಪೇಳುವೆನು ಅವ್ಯಕ್ತ ಮಹದಹಂಕಾರ ಮನ
ಮೇಳೈಸಿಹವು ಸತ್ವಪರಿ ಭೇದದಲಿ ೧೦

ರಜೋಪರಿಚ್ಛೇದದಲಿ ಜ್ಞಾನ ಕರ್ಮೇಂದ್ರಿಯವು
ರಜನೀ ಗುಣದ ಮಾತ್ರ ಭೂತ ಇಹವು
ಯಜಿಸು ಈ ತತ್ತ್ವ ಮಾನಿ ದಿವಿಜರನರಿತು
ವೃಜಿನವರ್ಜಿತನಾಗಿ ಸುಪದವೈದುವಿ ಮನುಜ ೧೧

ಭೂಮ್ಯಭ್ರನ್ನ ಮಯನಳನೀಳಾಗಸ ಪ್ರಾಣ ಮಯ ಮ
ನೋಮಯ ಮಹಾ ಅವ್ಯಕ್ತ
ಸಮ್ಯಗಾನಂದ ವಿಜ್ಞಾನಮಯನೆನಿಸಿ ಗುರು
ಸಮೀರನೊಳಗಿದ್ದು ಪಾಲಿಸುವ ಜಗವಾ ೧೨

ಪಂಚಕೋಶದ ವಿವರ ತಿಳಿದ ಮಹಾತ್ಮರಿಗೆ
ಕಿಂಚಿತಾದರು ದೋಷ ಬರಲರಿಯದು
ಪಂಚ ಮಾರ್ಗಣ ಪಿತ ಜಗನ್ನಾಥ ವಿಠಲನು
ಸಂಚತಾಗಾಮಿ ಕರ್ಮಗಳ ಫಲ ಬಿಡಿಸುವನು ೧೩

೧೭೦

ನೀಚನಲ್ಲವೇ ಇವನು ನೀಚನಲ್ಲವೇ ಪ

ಕೀಚಕಾರಿಪ್ರಿಯನ ಗುಣವ ಯೋಚಿಸದಲೆ ಯಾಚಿಸುವನು ಅ.ಪ.

ಶ್ರೀಕಳತ್ರನಂಘ್ರಿ ಕಮಲವೇಕಚಿತ್ತದಲ್ಲಿ ಮನೋ
ವ್ಯಾಕುಲಗಳ ಬಿಟ್ಟು ಸುಖೋದ್ರೇಕದಿಂದ ಭಜಿಸದವನು ೧

ಲೋಕವಾರ್ತೆಗಳಲಿ ಏಡ ಮೂಕರೆನಿಸಿ ವಿಷಯಗಳವ
ಲೋಕಿಸದಲೆ ಶ್ರೀಶಗಿವು ಪ್ರತೀಕವೆಂದು ತಿಳಿಯದವನು ೨

ಜನನಿ ಜನಕರಂತೆ ಜನಾರ್ದನನು ಸಲಹುತಿರಲು ಬಿಟ್ಟು
ಧನಿಕರ ಮನೆಮನೆಗಳರಸಿ ಶುನಕನಂತೆ ತಿರುಗುವವನು ೩

ಹರಿಕಥಾಮೃತವ ಬಿಟ್ಟು ನರ ಚರಿತ್ರೆಯಿಂದ ದ
ರ್ದುರಗಳಂತೆ ಹರಟೆ ದಿವಸ ಬರಿದೆ ಕಳೆಯುತಿಪ್ಪ ಮನುಜ ೪

ವಿಹಿತ ಕರ್ಮ ತೊರೆದು ಪರರ ಗೃಹಗಳಲ್ಲಿ ಸಂಚರಿಸುತ
ಕುಹಕ ಯುಕ್ತಿಯಿಂದ ಲೋಕ ಮಹಿತರನ್ನು
ನಿಂದಿಸುವ ಮನುಜ ೫

ಬಹಳ ದ್ರವ್ಯದಿಂದ ಗರುಡ ವಾಹನನಂಘ್ರಿ ಭಜಿಸಿ ಅನು
ಗ್ರಹವ ಮಾಡು ಎಂದು ಬೇಡಿ ಐಹಿಕಸುಖವ ಬಯಸುವವನು ೬

ಕರಣ ಜನ್ಯ ಪುಣ್ಯಪಾಪವೆರಡು ಹರಿಯಧೀನವೆಂದು
ಸ್ಮರಿಸುತಲತಿ ಭಕುತಿಯಿಂದ ಹರುಷಪಡದಲಿಪ್ಪ ಮನುಜ ೭

ಜೀವನ ಕರ್ತೃತ್ವ ಬಿಟ್ಟು ದೇವನೊಬ್ಬ ಕರ್ತೃ ರಮಾ
ದೇವಿ ಮೊದಲುಗೊಂಡು ಹರಿಯ ಸೇವಕರೆಂದರಿಯದವನು ೮

ವಾತಜನಕನೆನಿಪ ಜಗನ್ನಾಥವಿಠ್ಠಲನ ಪದಾಬ್ಜ
ಪೋತವಾಶ್ರಯಿಸಿ ಭವ ವೈತರಣಿಯ ದಾಟದವನು ೯

೧೭೧

ಫಲವಿದು ಬಾಳ್ದುದಕೆ ಪ

ಸಿರಿ ನಿಲಯನ ಗುಣಗಳ ತಿಳಿದು ಭಜಿಸುವುದೆ ಅ.ಪ.

ಸ್ವೋಚಿತ ಕರ್ಮಗಳಾಚರಿಸುತ ಬಹು
ನೀಚರಲ್ಲಿಗೆ ಪೋಗಿ ಯೊಚಿಸದೆ
ಖೇಚರವಾಹ ಚರಾಚರ ಬಂಧಕ
ಮೋಚಕನಹುದೆಂದ್ಯೋಚಿಸುತಿಪ್ಪುದೆ ೧

ನಿಚ್ಚ ಸುಭಕುತಿಯಲಚ್ಯುತನಂಘ್ರಿಗ
ಳರ್ಚಿಸಿ ಮೆಚ್ಚಿಸುತೆಚ್ಚರದಿ
ತುಚ್ಚ ವಿಷಯಗಳ ಇಚ್ಛಿಸದೆ ಯ
ದೃಚ್ಛಾಲಾಭದಿಂ ಪ್ರೋಚ್ಚನಾಗುವುದೆ ೨

ಮನೋವಾಕ್ಕಾಯದನುಭವಿಸುವ ದಿನ
ದಿನದಿ ವಿಷಯ ಸಾಧನಗಳಿಗೂ
ಅನಿಶಾಂತರ್ಗತ ವನರುಹದಳ ಲೋ
ಚನಗರ್ಪಿಸಿ ದಾಸನು ನಾನೆಂಬುದೇ ೩

ವಾಸವ ಮುಖ ವಿಬುಧಾಸುರ ನಿಚಯಕೆ
ವಾಸುದೇವನೆ ಶುಭಾಶುಭದ
ಈ ಸಮಸ್ತ ಜಗಕೀಶ ಕೇಶವಾ
ನೀಶ ಜೀವರೆಂಬ ಸುಜ್ಞಾನವೆ ೪

ಪಂಚ ಭೇದಯುತ ಪ್ರಪಂಚವು ಸತ್ಯ ವಿ
ರಿಂಚಿ ಭವ ಮುಖ ಬಲಿ ವಂಚಕಗೆ
ಸಂಚಲ ಪ್ರತಿಮೆ ಅಚಂಚಲ ಪ್ರಕೃತಿಯು
ಸಂಚಿಂತಿಸಿ ಮುದ ಲಾಂಛಿತನಹುದೆ ೫

ಪಂಚ ಋತುಗಳಲಿ ಪಂಚಾಗ್ನಿಗಳಲಿ
ಪಂಚ ಪಂಚರೂಪವ ತಿಳಿದು
ಪಂಚ ಸುಸಂಸ್ಕಾರಾಂಚಿತನಾಗಿ ದ್ವಿ
ಪಂಚ ಕರಣದಲಿ ಪಂಚಕನರಿವುದೆ ೬

ಹೃದಯದಿ ರೂಪವು ವದನದಿ ನಾಮವು
ಉದರದಿ ನೈವೇದ್ಯವು ಶಿರದಿ
ಪದ ಜಲ ನಿರ್ಮಾಲ್ಯವನೆ ಧರಿಸಿ ಕೋ
ವಿದರ ಸದನ ಹೆಗ್ಗದವ ಕಾಯುವುದೆ ೭

ಪಾತ್ರರ ಸಂಗಡ ಯಾತ್ರೆ ಚರಿಸುತ ವಿ
ಧಾತೃ ಪಿತನ ಗುಣ ಸ್ತೋತ್ರಗಳಾ
ಶ್ರೋತ್ರದಿ ಸವಿದು ವಿಚಿತ್ರಾನಂದದಿ
ಗಾತ್ರವ ಮರೆದು ಪರತ್ರವ ಪಡೆವುದೆ ೮

ಹಂಸ ಮೊದಲು ಹದಿನೆಂಟು ರೂಪಗಳ
ಸಂಸ್ಥಾನವ ತಿಳಿದನುದಿನದಿ
ಸಂಸೇವಿಸುವ ಮಹಾಪುರುಷರ ಪದ
ಪಾಂಸುವ ಧರಿಸಿ ಅಸಂಶಯನಪ್ಪುದೆ ೯

ವರ ಗಾಯಿತ್ರೀ ನಾಮಕ ಹರಿಗೀ
ರೆರಡಂಘ್ರಿಗಳ ವಿವರವ ತಿಳಿದು
ತರುವಾಯದಿ ಷಡ್ವಿಧ ರೂಪವ ಸಾ
ದರದಲಿ ಅನುದಿನ ಧ್ಯಾನಿಸುತಿಪ್ಪುದೆ ೧೦

ಬಿಗಿದ ಕಂಠದಿಂ ದೃಗ್ಬಾಷ್ಪಗಳಿಂ
ನಗೆ ಮೊಗದಿಂ ರೋಮಗಳೊಗೆದು
ಮಿಗೆ ಸಂತೋಷದಿಂ ನೆಗೆದಾಡುತ ನಾ
ಲ್ಮೊಗನಯ್ಯನ ಗುಣ ಪೊಗಳಿ ಹಿಗ್ಗುವುದೆ ೧೧

ಗೃಹಕರ್ಮವ ಬ್ಯಾಸರದಲೆ ಪರಮೋ
ತ್ಸಹದಲಿ ಮಾಡುತ ಮೂಜಗದ
ಮಹಿತನ ಸೇವೆ ಇದೆ ಎನುತಲಿ ಮೋದದಿ
ಅಹರಹರ್ಮನದಿ ಸಮರ್ಪಿಸುತಿಪ್ಪುದೆ ೧೨

ಕ್ಲೇಶಾನಂದಗಳೀಶಾಧೀನ ಸ
ಮಾಸಮ ಬ್ರಹ್ಮ ಸದಾಶಿವರೂ
ಈಶಿತವ್ಯರು ಪರೇಶನಲ್ಲದೆ
ಶ್ವಾಸ ಬಿಡುವ ಶಕ್ತಿ ಲೇಸಿಲ್ಲೆಂಬುದೆ ೧೩

ಏಕೋತ್ತರ ಪಂಚಾಶದ್ವರ್ಣಗ
ಳೇಕಾತ್ಮನ ನಾಮಂಗಳಿವು
ಮಾಕಮಾಲಾಸನ ಮೊದಲದಮರರು
ಸಾಕಲ್ಯದಿಯಿವರರಿಯರೆಂಬುದೆ ೧೪

ಒಂದು ರೂಪದೊಳನಂತ ರೂಪವು
ಪೊಂದಿಪ್ಪವು ಗುಣಗಳಾ ಸಹಿತ
ಹಿಂದೆ ಇಂದು ಮುಂದೆಂದಿಗು ಗೋ
ವಿಂದಗೆ ಸರಿಮಿಗಿಲಿಲ್ಲೆಂತೆಂಬುದೆ ೧೫

ಮೇದಿನಿ ಪರಮಾಣಂಬು ಕಣಂಗಳ
ನೈದಬಹುದು ಪರಿಗಣನೆಯನು
ಮಾಧವನಾನಂದಾದಿ ಗುಣಂಗಳ
ನಾದಿ ಕಾಲದಲಿ ಅಗಣಿತವೆಂಬುದೆ ೧೬

ಹರಿಕಥೆ ಪರಮಾದರದಲಿ ಕೇಳುತ
ಮರೆದು ತನುವ ಸುಖ ಸುರಿವುತಲೀ
ಉರುಗಾಯನ ಸಂದರುಶನ ಹಾರೈ
ಸಿರುಳು ಹಗಲು ಜರಿ ಜರಿದು ಬಾಳ್ವುದೆ ೧೭

ಆ ಪರಮಾತ್ಮಗೆ ರೂಪದ್ವಯವು ಪ
ರಾಪರ ತತ್ತ್ವ ಗಳಿದರೊಳಗೆ
ಸ್ತ್ರೀ ಪುಂ ಭೇದದಿ ಈ ಪದ್ಮಜಾಂಡವ
ವ್ಯಾಪಿಸಿಹನೆಂದೀಪರಿ ತಿಳಿವುದೆ ೧೮

ವಿಷಯೇಂದ್ರಿಯಗಳಲಿ ತದಭಿಮಾನಿ ಸುಮ
ನಸರೊಳು ನಿಂದು ನಿಯಾಮಿಸುತಾ
ಶ್ವಸನಾಂತರ್ಗತ ವಾಸುದೇವ ತಾ
ವಿಷಯಂಗಳ ಭೋಗಿಸುವನೆಂದರಿವುದೆ ೧೯

ಮೂಜಗದೊಳಗಿಹ ಭೂ ಜಲ ಖೇಚರ
ಈ ಜೀವರೊಳೊ ಮಹೌಜಸನ
ಸೋಜಿಗ ಬಹುವಿಧ ನೈಜ ವಿಭೂತಿಯ
ಪೂಜಿಸುತನುದಿನ ರಾಜಿಸುತಿಪ್ಪುದೆ ೨೦

ಗುಣಕಾಲಾಹ್ವಯ ಆಗಮಾರ್ಣವ ಕುಂ
ಭಿಣಿ ಪರಮಾಣ್ವಾಂಬುಧಿಗಳಲಿ
ವನಗಿರಿ ನದಿ ಮೊದಲಾದದರೊಳಗಿಂ
ಧನಗತ ಪಾವಕನಂತಿಹನೆಂಬುದೆ ೨೦

ಅನಳಾಂಗಾರನೊಳಿದ್ದೋಪಾದಿಯ
ಲನಿರುದ್ಧನು ಚೇತನರೊಳಗೆ
ಕ್ಷಣ ಬಿಟ್ಟಗಲದೆ ಏಕೋ ನಾರಾ
ಯಣ ಶ್ರುತಿ ಪ್ರತಿಪಾದ್ಯನು ಇಹನೆಂಬುದೆ ೨೧

ಪಕ್ಷಗಳಕ್ಷಿಗಳಗಲದಲಿಪ್ಪಂ
ತ್ಯಕ್ಷರ ಪುರುಷನಪೇಕ್ಷೆಯಲಿ
ಕುಕ್ಷಿಯೊಳಬ್ಜಜ ತ್ರ್ಯಕ್ಷಾದ್ಯಮರರ
ಈಕ್ಷಿಸಿ ಕರುಣದಿ ರಕ್ಷಿಪನೆಂಬುದೆ ೨೨

ಕಾರಣ ಕಾರ್ಯಾಂತರ್ಗತ ಅಂಶವ
ತಾರಾವೇಶಾಹಿತ ಸಹಜಾ
ಪ್ರೇರಕ ಪ್ರೇರ್ಯಾಂಹ್ವಯ ಸರ್ವತ್ರ ವಿ
ಕಾರವಿಲ್ಲದಲೆ ತೋರುವನೆಂಬುದೆ ೨೪

ಪ್ರತಿದಿವಸ ಶ್ರುತಿಸ್ಮೃತಿಗಳಿಂದ ಸಂ
ಸ್ತುತಿಸುತ ಲಕ್ಷ್ಮೀ ಪತಿಗುಣವ
ಕೃತಿಪತಿ ಸೃಷ್ಟಿ ಸ್ಥಿತಿಲಯ ಕಾರಣ
ಇತರ ಸರ್ವ ದೇವತೆಗಳಿಗಿನಿತಿಲ್ಲೆಂಬುದೆ ೨೫

ಪವನ ಮತಾನುಗರವ ನಾನಹುದೆಂ
ದವನಿಯೊಳಗೆ ಸತ್ಕವಿ ಜನರ
ಭವನಂಗಳಲಿ ಸಂಚರಿಸುತ ಸುಕಥಾ
ಶ್ರವಣವ ಮಾಡುತ ಪ್ರವರನಾಗುವುದೆ ೨೬

ಪನ್ನಗಾಚಲ ಸನ್ನಿವಾಸ ಪಾ
ವನ್ನಚರಿತ ಸದ್ಗುಣಭರಿತಾ
ಜನ್ಯಜನಕ ಲಾವಣ್ಯೈಕನಿಧಿ ಜ
ಗನ್ನಾಥವಿಠಲಾನಾನ್ಯಪನೆಂಬುದೆ ೨೭

೧೭೨

ಬಯಸದಿರೈಹಿಕ ಸುಖಗಳನುದಿನ ನಿ ಪ

ರ್ಭಯದಿ ಭಜಿಸು ಹರಿಯ
ವಯನಗಮ್ಯ ವಾಂಛಿತ ಫಲಗಳ ಸ
ದ್ದಯದಿ ಕೊಡುವುದರಿಯ ಅ.ಪ.

ಭೂರುಹ ಮೃಗ ಪಶು ವಾರಿ ಖೇಚರ ಶ ರೀರಗಳಲಿ ಬಂದೆ
ಮಾರಿ ಮಸಣಿ ಬಿಕಾರಿ ಭವಾನಿಗ ಳಾರಾಧಿಸಿ ನೊಂದೆ
ನಾರಾಯಣ ಪದಾರವಿಂದ ಯುಗ ಳಾರಾಧನೆ ಒಂದೇ
ತಾರಿಸುವುದು ಸಂಸಾರ ಶರಧಿ ಸುಖ
ತೋರುವುದೋ ಮುಂದೆ ೧

ಅನಿರುದ್ಧನು ನಿಜ ಮನಕೆ ಸಹಿತ ತಾ ಧನ ಧಾನ್ಯದೊಳಿಪ್ಪ
ಅನುಬಂಧಿಗಳೊಳು ಕೃತಿಪತಿ ಪ್ರದ್ಯುಮ್ನನು
ಸುಖಗಳ ತೋರ್ಪಾ
ಗುಣವಂತರೊಳು ಜಯಪತಿ ಸಂಕರ್ಷಣ ಕರ್ಮವ ಮಾಳ್ಪಾ
ಕುನರರು ಮಾಡುವ ಮಾಳ್ಪ
ಧರ್ಮ ಕರ್ಮಗಳ ಕೊನೆಗೀತನು ಒಪ್ಪ ೨

ವಾಸುದೇವ ವಿಜಯಪ್ರದನಾಗೀ ನರ ರಾ ಶರೀರಗಳೊಳು
ವಾಸವಾಗಿ ಮಾಯಾಪತಿ ಸರ್ವದ ಕ್ಲೇಶ ಸುಪುಣ್ಯಗಳ
ತಾ ಸಮನಿಸುವನು ಸಂದೇಹಿಸದಿರು
ಆಶಾಪಾಶಗಳನು ತಾ ಸಡಲಿಸುವನು ಶೀಘ್ರದಿಂದ ೩

ನಾರಾಯಣ ಕರುಣಾಸಮುದ್ರ ಕೇಳು ತನ್ನಾರಾಧಕರಿಗೆ
ದೂರಗೈದು ದುರಿತಾ
ಕಾರುಣಿಕ ಕೈವಲ್ಯ ಪ್ರದಾಯಕ ತೋರುವ ಸರ್ವಜಿತ
ಹಾರೈಸದಿರು ಅಲ್ಪಾಹಿಕ ಸುಖಗಳ ನರಕದ್ವಾರಗಳವು ನಿರುತ
ಸೂರಿಗಳನು ಸಂಸೇವಿಸು ಮುಕ್ತಿಗೆ ದ್ವಾರವಹುದು ಸತತಾ ೪

ಪಂಚರೂಪಿ ಪರಮಾತ್ಮನು ತಾ ಷ ಟ್ಟಂಚ ರೂಪದಿ ಪೊರೆವಾ
ಪಂಚ ಜ್ಞಾನ ಕರ್ಮೇಂದ್ರಿಯ ಜನ್ಯ ದ್ವಿ ಪಂಚ ಪಾತಕ ತರಿವ
ಸಂಚಿತಾಗಾಮಿಗಳಪರಾಧವ ಮುಂಚಿನವಂಗೀವಾ
ವಾಂಛಿತಪ್ರದಗಾಮಿಗಳ ಜಗನ್ನಾಥ ವಿಠಲನು
ಮಿಂಚಿನಂದದಿ ಪೊಳೆವಾ ೫

೧೭೩

ಬೇಡಲೇತಕೆ ಪರರ ದೇಹಿಯೆಂದು ಪ

ನೀಡುವಾ ಧೊರೆ ಎನಗೆ ನೀನಿರಲು ಸರ್ವದಾ ಅ.ಪ.

ಗ್ರಾಸವನು ಬೇಡೆ ದೂರ್ವಾಸ ಮುನಿಗಂದನ್ನ ಅನಾ
ಯಾಸದಿಂ ತತ್ಕಾಲದಲಿ ಕಲ್ಪಿಸಿ
ಆ ಸಂಯಮಿಗೆ ಉಣಿಸಿ ದಣಿಸಿದ ಮಹಾ ದಾತಾ
ದಾಶರಥೆ ನಿನ್ನ ಬಿಟ್ಟನ್ಯ ದೇವತೆಗಳನು ೧

ಖಳ ದುಶ್ಶಾಸನನು ದ್ರೌಪದಿಯ ಸಭೆಯೊಳು ದು
ಕೂಲವನು ಸೆಳೆಯೆ ದ್ವಾರಕ ಮಂದಿರಾ
ಶ್ರೀ ಲೋಲ ಶ್ರೀ ಕೃಷ್ಣ ಕರುಣಿಸು ಕರುಣಿಸೆನೆ ಪಾಂ
ಚಾಲಿ ಮೊರೆ ಕೇಳಿ ದಿವ್ಯಾಂಬರ ನಿಚಯವಿತ್ತೆ ೨

ಮಡದಿ ಕಳುಹಲು ಬಂದ ಬ್ರಾಹ್ಮಣನ ಪೀಡಿಸುವ
ಬಡತನವ ಕಳೆದೆ ಒಪ್ಪಿಡಿಯವಲಿಗೆ

ಪೊಡವಿಯನ್ನಾಳಿಸಿದೆ ಕ್ರಿಮಿಗೊಲಿದು ಕಾರುಣ್ಯದಲ್ಲಿ
ಜಡಜಸಂಭವ ಮೃಡ ಬಿಡೌಜರೀಪ್ಸಿತ ಕೊಡುವೆ ೩

ತಾಪಸೋತ್ತಮ ಮೃಕಂಡಾತ್ಮಜಗೆ ಕಲ್ಪಾಯು
ನೀ ಪೂರ್ತಿ ಮಾಡಿ ಅಲ್ಪಾಯು ಕಳೆದು
ಆ ಪರ್ವತೇಶ್ವರನ ಪಟ್ಟಣವ ಸಾರ್ದು ಸಾಂ
ದೀಪ ತನಯನ ತಂದ ಸರ್ವಾಂತರ್ಯಾಮಿ ೪

ಕಲ್ಪ ಕಲ್ಪಗಳಲ್ಲಿ ವಿಶ್ವ ಜೀವರಿಗನ್ನ
ಕಲ್ಪಕನೆ ನೀನಿರಲು ಜ್ಞಾನ ದ್ರವ್ಯ
ಅಲ್ಪ ಮಾನವರಿಗಾಲ್ಪರಿರೇನಹುದು ಅಹಿ
ತಲ್ಪ ಜಗನ್ನಾಥ ವಿಠ್ಠಲ ಕಲ್ಪತರುವಿರಲು ೫

೧೭೪

ಮದ ಮತ್ಸರವ ಬಿಡದನಕಾ ವಿಧ
ವಿಧದ ಸಾಧನವ ಮಾಡಲೇನೋ ಪ

ವೇದ ಶಾಸ್ತ್ರಗಳೋದಲೇನು ಗಂಗಾ
ಗೋದಾವರಿಯಲಿ ಸ್ನಾನವ ಮಾಡಲೇನು
ಸಾಧು ಕರ್ಮವಾಚರಿಸೇನು ವಿಷ್ಣು
ಪಾದದಿ ಪಿಂಡ ದಾನವ ಮಾಡಲೇನು ೧

ಸನ್ಯಾಸಾಶ್ರಮ ಧರಿಸಲೇನೂ ಗೋಹಿ
ರಣ್ಯಾದಿಗಳಲಿ ಮಮತೆ ಬಿಟ್ಟರೇನು
ಪುಣ್ಯ ಕ್ಷೇತ್ರಕೆ ಪೋಗಲೇನು ಅನ್ನ
ಕನ್ಯಾದಿ ದ್ರವ್ಯದಾನವ ಮಾಡಲೇನು ೨

ಪಾಪ ಕರ್ಮವ ತೊರೆದರೇನೊ ಲಕ್ಷ
ದೀಪಾರಾಧನೆ ದಿನ ದಿನ ಮಾಡಲೇನು

ಶಾಪಾನುಗ್ರಹ ಶಕ್ತಿ ಇದ್ದೇನು ಪೂಜಾ
ಸೋಪಸ್ಕರ ಬಹುತರವಿರಲೇನು ೩

ಶ್ವಾಸ ನಿರೋಧಿಸಲೇನು ಪಕ್ಷ
ಮಾಸೋಕ್ತ ಧರ್ಮ ಕರ್ಮವ ಮಾಡಲೇನು
ಆಸನ ಜಯ ಸಂಪಾದಿಸಲೇನು ಉಪ
ವಾಸ ವ್ರತದಿ ದೇಹ ಬಳಲಿಸಲೇನು ೪

ಜ್ಯೋತಿಷ್ಟೋಮ ಮಾಡಲೇನು ಲಕ್ಷ
ಶ್ರೀ ತುಳಸಿ ಅರ್ಪಿಸಲೇನು
ಭೂತದಯವು ಇದ್ದರೇನು ಜಗ
ನ್ನಾಥ ವಿಠಲನಂಘ್ರಿ ಪೊಂದಿದ್ದವರೊಳು ೫

೧೭೫

ವ್ಯರ್ಥಕಳೆವರೇನೊ ಕಾಲವ ಹೇ ಪ್ರಾಣಿ ನೀನು ಪ

ಪಾರ್ಥಸಖನ ವಿಮಲವಾರ್ತೆ
ಕೀರ್ತಿಸದೆ ಕುವಾರ್ತೆಯಿಂದ ಅ.ಪ.

ನೇಸರನುದಯಿಸದ ಮುನ್ನ
ಶ್ರೀಶನ ಗುಣ ಕರ್ಮ ನಾಮ
ಬೇಸರದಲೇ ಸ್ಮರಿಸದೇ
ಗ್ರಾಸದ್ದರಟೆಗಳನು ಹರಟಿ ೧

ಪವನ ಮತವನವಲಂಬಿಸಿದ
ಸ್ಥವಿರ ಕವಿಗಳಿಂದ ಕಥಾ
ಶ್ರವಣ ರಸವ ಕಿವಿಯ ದಣಿಯೆ
ಸವಿದು ಸುಖಿಸಿ ಪ್ರವರನಾಗದೆ ೨

ಕ್ಷಿತಿ ಜಲಾಗ್ನಿ ವಾಯು ಖಂ
ಅತುಳ ಬುದ್ಧಿ ಅಹಂಕಾರಗಳು
ಕೃತಿರಮಣನ ವಿಮಲ ಭಿನ್ನ
ಪ್ರತಿಮೆಯೆಂದರಿದು ಭಜಿಸದೆ ೩

ಶ್ರೀಪಯೋಜ ಪೀಠ ಶೈಲ
ಚಾಪ ಗೋಪಮುಖಿರು ದ್ವಿತೀಯ
ರೂಪರೆಂದು ಹರಿಗೆ ನೀ ಪ
ದೇ ಪದೇ ನಮಸ್ಕರಿಸದೆ ೪

ಪುತ್ರ ಜನನಿ ಜನಕ ವಿತ್ತ
ಕರ್ತ ಜಗನ್ನಾಥವಿಠಲ
ಪಾತ್ರ ಕರ್ಮ ಕಠಿಣ ಕ್ರಿಯಾ
ಭೋಕ್ತನು ಮಿತ್ರನೆಂದರಿಯದೆ ೫

೧೭೬

ಸಾರಿದ ಡಂಗುರ ಯಮನು ಪ

ಅಘ ನಾರೇರ ಎಳತಂದು ನರಕದಲ್ಲಿಡಿರೆಂದು ಅ.ಪ.

ಹೊತ್ತಾರೆ ಎದ್ದು ಪತಿಗೆ ಎರಗದವಳ
ಮೃತ್ತಿಕೆ ಶೌಚ ಮಾಡದೆ ಇಪ್ಪಳಾ
ಬೆತ್ತಲೆ ಕುಳಿತು ಮೈದೊಳೆವಳ ನಾದಿನಿ
ಅತ್ತೆ ಮಾವನ ಬೈವವಳೆಳೆದು ತನ್ನೀರೆಂದು ೧

ತಿಲಕಾಯುಧವ ಬಿಟ್ಟು ಕುಂಕುಮವಿಡುವಳ
ಬೆಳಗಾದ ಕಾಲಕ್ಕೂ ಮಲಗಿಪ್ಪಳ
ಮಲಿನ ವಸ್ತ್ರದಲಿ ಪತಿಯ ಬಳಿಗೆ ಪೋಗುವಳ
ಕಲಹಕಾರಿಯ ಹಿಡಿದೆಳೆದು ತನ್ನಿರಿಯೆಂದು ೨

ಉತ್ತಮ ಗುರುಹಿರಿಯರನು ನಿಂದಿಸುವಳ
ಪೆತ್ತ ಮಕ್ಕಳ ಮಾರಿ ಬದುಕುವಳ
ಪ್ರತ್ಯೇಕ ಶಯ್ಯದಿ ಮಲಗಿ ಇಪ್ಪಳ ಪಿಡಿ
ದೆತ್ತ ಎಳೆದು ತಂದು ನರಕದಲ್ಲಿಡಿರೆಂದು ೩

ಜಲ ಜಕ್ಕಿ ಸಾಳಿ ಕಂಬಳಿ ಬೋಳಿ ಬಕ್ಕಿ ಗೊಂ
ಡಳಿ ಮೊದಲಾದವು ದೈವವೆಂದು
ತಿಳಿದು ಪಿಶಾಚಿ ಎಂಜಲ ಉಂಡು ಹಿಗ್ಗುವ
ಲಲನೇರಾ ಸೆಳೆದು ತನ್ನಿರೋ ಎಂದು ೪

ನಾಗೇಂದ್ರ ಶಯನನ ದಿನದುಪವಾಸದ
ಜಾಗರ ಮಾಡದೆ ಮಲಗಿಪ್ಪಳಾ
ಭಾಗವತ ಸಚ್ಛಾಸ್ತ್ರ ಕೇಳದೆ ಉನ್ಮತ್ತ
ಳಾಗಿರುವಳ ಎಳೆದು ತನ್ನಿರೆಂದು ೫

ಗಂಡ ನಿರ್ಧನಿಕನೆಂದಪಮಾನ ಮಾಳ್ಪಳ
ಉಂಡ ಶೇಷಾನ್ನುವನುಣಿಸುವಳಾ
ಕೊಂಡೆ ಮಾತುಗಳಾಡಿ ಕಳವಳಗೊಳಿಪಳ
ಮಂಡೆಗೊದಲು ಹಿಡಿದು ಎಳೆದು ತನ್ನಿರಿ ಎಂದು ೬

ಉಡಲಿಲ್ಲ ಉಣಲಿಲ್ಲ ಇಡಲಿಲ್ಲ ತೊಡಲಿಲ್ಲ
ಸುಡಲಿಗಂಡನ ಒಗೆತನವೆನ್ನುತಾ
ಹಡೆದವರನು ನುಡಿನುಡಿಗೆ ಬಯ್ಯುತಿಪ್ಪಂಥ
ಕಡು ಪಾಪಿಗಳ ಹೆಡ ಮುಡಿಗಟ್ಟಿ ತನ್ನಿರಿ ಎಂದು ೭

ಸಾಲೆಡೆಯಲಿ ಭೇದ ಮಾಡಿ ಬಡಿಸುವಳ
ನೀಲಾಂಬರವನುಟ್ಟು ಮಡಿಯೆಂಬಳ
ಬಾಲಕರ ಬಡಿದಳಿಸುತಿಪ್ಪಳ ಹಿಂ
ಗಾಲ ತೊಳೆಯದವಳ ಎಳೆದು ತನ್ನಿರೋ ಎಂದು ೮

ಪತಿಗೆ ಬೇಕಾದವರ ಅಪಮಾನ ಮಾಳ್ಪಳ
ಮೃತವತ್ಸ ಗೋವಿನ ಪಾಲುಂಬಳಾ
ಹುತವಾದ ಅಗ್ನಿ ತೊಳೆದು ನಂದಿಸುವಳ
ಮತಿಗೇಡಿಯ ಬಿಡದೆಳೆದು ತನ್ನಿರೋ ಎಂದು ೯

ಒಲಿವ ಔಷಧ ಮಾಡಿ ಪತಿಯ ಬಳಲಿಸುವಳ
ಕುಲಮಕ್ಕಳೊಳು ಮತ್ಸಂಸುತಿಪ್ಪಳಾ
ಕಳವಿಲಿ ಕಾಂತನ ಧನವ ವಂಚಿಸುವಳ
ಗಳಕೆ ಪಾಶವ ಕಟ್ಟಿ ಎಳೆದು ತನ್ನಿರೋ ಎಂದು ೧೦

ಮಿಥ್ಯಾವಾದಿಯ ಕೂಡ ಸ್ನೇಹ ಮಾಳ್ಪಳಾ
ಸತ್ತವರ ನೆನೆದಳುತಿಪ್ಪಳಾ
ದತ್ತಾಪಹಾರವ ಮಾಡುತಿಪ್ಪಳ ನೀಚ
ವೃತ್ತಿಲಿ ಬದುಕುವಳೆಳೆದು ತನ್ನಿರೋ ಎಂದು ೧೧

ಲಶನು ವೃಂತಕಾದಿಗಳನು ಭಕ್ಷಿಸುವಳಾ
ಸೊಸೆಯರೊಡನೆ ಮತ್ಸರಿಸುತಿಪ್ಪಳಾ
ಹಸಿದು ಬಂದವರಿಗೆ ಅಶನವಿಲ್ಲೆಂಬಳಾ
ಉಸಿರು ಬಿಡದಂತೆ ಎಳೆದು ತನ್ನಿರೊ ಎಂದು ೧೨

ತುಲಸಿ ವೃಂದಾವನಕಭಿನಮಿಸದವಳ
ಜಲವ ಸೋಸದೆ ಪಾನವ ಮಾಳ್ಪಳಾ
ಫಲ ಧಾನ್ಯಾದಿಗಳ ನೋಡದೆ ಪಾಕ ಮಾಳ್ಪಳ
ಮಳೆ ಗಾಳಿ ನಿಂದಿಪಳ ಎಳೆದು ತನ್ನಿರೋ ಎಂದು ೧೩

ಮೀಸಲು ಮಡಿ ಎನ್ನದೆ ಭಕ್ಷಿಸುವಳ
ಕೇಶಿಯೊಡನೆ ಗೆಳೆತನ ಮಾಳ್ಪಳ
ದಾಸೆರಿಂದಲಿ ಪಾಕ ಪಾತ್ರೆ ಮುಟ್ಟಿಸುವಳ
ನಾಸಿಕ ಬಂಧಿಸಿ ಎಳೆ ತನ್ನಿರೋ ೧೪

ಬಾಲಕರನು ತೊಟ್ಟಿಲೊಳಿಟ್ಟು ತೂಗುತ
ಪಾಲೆರೆವುತ ಬೀಸುತ ಕಟ್ಟುತಾ
ಆಲಯದೊಳು ಕೆಲಸಗಳ ಮಾಡುತ ಲಕ್ಷ್ಮೀ
ಲೋಲನ ಗುಣವ ಪಾಡುವರ ಮುಟ್ಟದಿರೆಂದು ೧೫

ಅರಿಷಣ ಕುಂಕುಮ ಪುಷ್ಪಾಂಜನ ವಸ್ತ್ರಾ
ಭರಣ ಭೂಷಿತರಾಗಿ ಪತಿಯೊಡನೆ
ಸರಸವಾಡುತ ಸುಖ ಹರಿಗೆ ಅರ್ಪಿತವೆಂಬ
ಹರಿದ್ವೇರಿದೆಡೆಗೆ ಕೈಮುಗಿದು ಬನ್ನಿರಿ ಎಂದು ೧೬

ಅಗಣಿತ ಮಹಿಮ ಶ್ರೀ ಜಗನ್ನಾಥ ವಿಠಲನ್ನ
ಬಗೆಬಗೆಯಿಂಧ ಪಾಡುತಲೀ
ಹೊಗಳುವ ದಾಸರ ಬಗೆಯ ನೇಮಿಸಿ ಕಾಯ್ವ
ಸುಗುಣೇರಿದ್ದೆಡೆಗೆ ಕೈಮುಗಿದು ಬನ್ನಿರೆಂದು ೧೭

೧೭೭

ಹಿಂದಿಲ್ಲ ಇಂದು ಮುಂದಿಲ್ಲ ಪ

ಶ್ರೀ ಮುಕುಂದಗೆ ಸಮರೆನಿಸುವರು ಲೋಕದೊಳು ಅ.ಪ.

ವನಧಿ ಮಥನದಲ್ಲಿ ಅನಿಮಿಷರನ ಬಿಟ್ಟು
ಜನನಿ ಲಕುಮಿ ನಾರಾಯಣನೊಲಿಸಿದಳಾ ೧

ಪ್ರಪಿತಾಮಹನು ಲೋಕಾಧಿಪ ಬ್ರಹ್ಮಗೆ
ತಪ ತಪವೆಂದು ಪೇಳಿದಗುಪಮೆ ಎನಿಸುವವರು ೨

ಕಂದು ಗೊರಳ ವರವನೀಯೆ ಹಿಂದಟ್ಟದಸುರನ
ಕೊಂದು ಶಿವನ ಕಾಯ್ದ ಇಂದಿರಾಪತಿಗೆಣೆ ೩

ಮಂದರಾದ್ರಿಯನೆತ್ತಿ ಸಿಂಧುಮಥನ ಮಾಡಿ
ವೃಂದಾರಕರಿಗೆ ಆನಂದವಿತ್ತು ಪರಿ ೪

ಭೃಗು ಮುನಿಪನು ಬ್ರಹ್ಮಾದಿಗಳ ಪರೀಕ್ಷಿಸಿ
ಜಗನ್ನಾಥವಿಠಲ ತ್ರಿಗುಣವರ್ಜಿತನೆಂದು ೫

೧೭೮

ಶ್ರೀದ ವಿಠಲ ಸರ್ವಾಂತರಾತ್ಮಾ
ನೀ ದಯದಿ ಒಲಿದು ನಿತ್ಯದಲಿ ಕಾಪಾಡುವುದು ಪ

ಚಿಕ್ಕ ತನದಲಿ ತಂದೆತಾಯಿಗಳು ಒಲಿದು ಪೆಸ
ರಿಕ್ಕಿ ಕರೆದರು ನಿನ್ನ ದಾಸನೆಂದೂ
ಅಕ್ಕರದಿ ಒಲಿದು ಭವದುಃಖಗಳ ಪರಿಹರಿಸಿ
ಮಕ್ಕಳನು ತಾಯ್ಸಲಹುವ ತೆರದಿ ಸಂತೈಸು ೧

ಶುಕನಯ್ಯ ನಿನ್ನ ಪದಭಕುತಿ ತ್ವತ್ಕಥಾಶಾಸ್ತ್ರ
ಯುಕುತಿವಂತರ ಸಂಗಸುಖವನಿತ್ತು
ಸಕಲ ಕರ್ಮಗಳ ವೈದಿಕವೆನಿಸು ಒಲಿದು ದೇ
ವಕಿತನಯ ನಿನ್ನವರ ಮುಖದಿಂದ ಪ್ರತಿದಿನದಿ ೨

ಮಾತರಿಶ್ವಪ್ರಿಯ ಸುರೇತರಾಂತಕನೆ ಪುರು
ಹೂತನಂದನಸಖ ನಿರಾತಂಕದಿ
ನೀ ತೋರು ಮನದಿ ಸಂಪ್ರೀತಿಯಿಂದಲಿ ಒಲಿದು
ಹೋತಾಪ್ವಗುರು ಜಗನ್ನಾಥ ವಿಠಲ ಬಂಧು ೩

೧೭೯

ಶ್ರೀ ಶವಿಠ್ಠಲ ನೀನೆ ಸಂತೈಪುದು
ಕ್ಲೇಶನಾಶನ ನಿನ್ನದಾಸರವನೆಂದರಿತು ಪ

ಭೂದೇವ ಜನ್ಮವಿತ್ತವಗೆ ನೀ ದಯದಿಂದ
ಸಾಧು ಜನಸಂಗ ಸುಜ್ಞಾನ ಭಕುತಿ
ಸಾದರದಿ ನಿನ್ನ ತುತಿಸುವ ಭಾಗ್ಯ ಕರುಣಿಸಿದೆ ಕೃ
ಪೋದಧಿಯೆ ನಿನಗೆ ನಾ ನಮಿಪೆ ಬಹು ಬಗೆಯಿಂದ ೧

ಯೋಗ್ಯತೆಗಳನು ಬಲ್ಲೆ ಬಹು ಜೀವರೊಳಗಿದ್ದು
ಅಜ್ಞಾನಿ ನೀನಲ್ಲ ಸರ್ವಜ್ಞನೆಂದು
ವಿಜ್ಞಾಪಿಸುವೆ ನಿರುತ ವಿನಯದಿಂದಲಿ ಪರಮ
ಭಾಗ್ಯವಂತನೆ ನಿನ್ನ ಪಾದಕಮಲಕೆ ಬಿಡದೆ ೨

ಸಕಲ ಲೋಕಗಳ ನಾಯಕ ಇವಗೆ ಹೇಯ ಲೌ
ಕಿಕ ಮಾರ್ಗವನೆ ಬಿಡಿಸಿ ಸತ್ಯದಲ್ಲಿ
ಪ್ರಕಟವನೆ ಗೈಸು ಸದ್ಧರ್ಮ ಕರ್ಮಗಳ ದೇ
ವಕಿತನಯ ಶ್ರೀ ಜಗನ್ನಾಥವಿಠ್ಠಲ ಒಲಿದು ೩

ಸಂಪ್ರದಾಯದ ಹಾಡುಗಳು

೧೮೦

ಜಯ ಮಂಗಳಂ ನಿತ್ಯ ಶುಭ ಮಂಗಳಂ
ಭಯನಿವಾರಣ ಭಾರತೀರಮಣನಿಗೆ ಪ

ಮಂಗಳಂ ಮಹದಾದಿ ತತ್ವೇಶಪಗೆ
ಮಂಗಳಂ ಸಂಕರುಷಣಾತ್ಮ ಭವಗೆ
ಮಂಗಳಂ ತ್ರಿಜಗನ್ನಿಯಾಮಕ ಸಮೀರನಿಗೆ
ಮಂಗಳಂ ಸುರಸಿದ್ಧ ಸಾಧ್ಯವರಗೆ ೧

ಸಕಲ ಜೀವೋತ್ತಮಗೆ ಅಕಳಂಕ ಮಹಿಮಗೆ
ಮಕರ ಧ್ವಜಾರಿ ಪ್ರಮುಖ ವಂದ್ಯಗೆ
ಕಕುಭೇಷರೊಳು ನಿಯಾಮಕನಾಗಿ
ತತ್ಕಾರ್ಯ ಪ್ರಕಟ ಮಾಡುವ ಭಾವಿ ವಿಖನಸನಿಗೆ ೨

ಖೇಟ ಸತ್ಫಣಿವರ ಲಲಾಟಾಕ್ಷ ಮುಖ್ಯರ ಕಿ
ರೀಟ ಮಂಡಿತ ಪಾದ ಪೀಠಯುಗಗೆ
ಸಾಟಿ ಮಾಡದೆ ಕಾಳಕೂಟ ಪಾನವ ಮಾಡಿ
ಕೋಟಿಯೊಳು ಖಳರ ನಿಪಾಟಸಿದಗೆ ೩

ಶತ ಧೃತಿ ವರ ಕಲ್ಪಶತಗಳಲಿ ಪರಮ
ಅದ್ಭುತ ತಪವಗೈದು ಶ್ರೀಪತಿ ಕರುಣದಿ
ಚತುರಮುಖನಿಂದ ಭಾರತಿ ಸಹಿತ ಜನಿಸಿ ಪಾ
ರ್ವತಿ ಪಡೆದ ನಿರ್ಜಿತ ಕಾಮಗೆ ೪

ಜೀವನಾಮಕ ಶೇಷ ವಾರುಣಿಯ ಪಡೆದವಗೆ
ಜೀವ ನಿಯಾಮಕಗೆ ಜೀವೇಶಗೆ
ದೇವ ದೇವಕಿ ಪತಿ ಜಗನ್ನಾಥ ವಿಠಲನ
ಪಾವನ ಗುಣವ ತುತಿಪ ಪವಮಾನಗೆ ೫

೧೮೧

ನಮೋ ನಮೋ ನಾರಾಯಣ
ನಿಖಿಳಾಗಮ ಸನ್ನುತ ಸುಗುಣ ಗುಣಾರ್ಣವ
ಸುಮನಪತಿ ಶ್ರೀ ಭೂದುರ್ಗಾರಮಣ ಮಾಂಪಾಹಿ ಪ

ಲೋಕೇಶ ವಿಧಾತಜನಕ ರ
ತ್ನಾಕರಮಥನ ಜಗದಾಘಪಹ
ಶ್ರೀಕಂಠ ಪಿತಾಮಹ ಮದನನೇಕ ಸುಲಾವಣ್ಯ
ಆಕಾಶ ತರಂಗಿಣಿ ಪಿತ ಕರುಣಾಕರ

ಕೌಮೋದಕಿಧರ ಧರಣಿ ಕುವರಾಂತಕ
ಕರುಣದಿ ಚಿತ್ತೈಸು ನೀ ಹಸಿಗೆ ಶೋಭಾನೆ ೧

ಅರದೂರಾಬ್ಜ ಭವಾಂಡೋದರ
ಶರಣಾಗತ ಸವಿ ಪಂಜರ ಅಂ
ಬರ ಭೂ ಪಾತಾಳದಿ ವ್ಯಾಪ್ತಾ ಜರಮೃತ್ಯು ವಿದೂರ
ಕರಿವರ ಪ್ರಭಂಜನ ಪೀತಾಂ
ಬರಧರ ಖಳಕುಲವನ ವೈಶ್ವಾ
ನರ ನಾರದನುತ ಮಹಿಮನೆ ಚಿತ್ತೈಸು [ಹಸೆಗೆ] ೨

ಸತ್ವರಜಸ್ತಮ ಜೀವರ
ತತ್ ಸಾಧನವರಿತವರಗತಿ ಗ
ಳಿತ್ತು ಪೊರೆವ ವಿಬುಧವರದ ವರಸತ್ಯವತಿ ಸೂನು
ಉತ್ತನು ಪುರುಷನೆ ಚೇತನ ಜಡದ
ತ್ಯಂತವಿಭಿನ್ನ ವಿಜಯ ಸಖ
ಸತ್ಯಸುಕಾಮ ಕಮಲನಯನನೆ ಚಿತ್ತೈಸೊ [ಹಸೆಗೆ] ೩

ವಾಸವತನುಸಂಭವ ಸಾರಥಿ
ವೀಶುದ್ಧುಜ ವಿಧೃತ ಸುದರ್ಶನ
ದಶಾರ್ಹ ದಿವಕರನಿಭ ಸಂಕಾಶ ಸುಭದ್ರಾತ್ಮಾ
ವಾಸುಕಿ ಪರ್ಯಂಕಶಯನ ಹರಿ
ವ್ಯಾಸಕಪಿಲ ದತ್ತಾತ್ರಯ ಮಹಿದಾಸ
ವೃಷಭರೂಪ ರಮೆಯರಸ ಚಿತ್ತೈಸು [ಹಸೆಗೆ] ೪

ಪಾಂಡವ ಸಖ ಪತಿತ ಸುಪಾವನ
ಚಂಡಾಂಶು ನಿಶಾಕರ ಪಾವಕ
ಮಂಡಲದೊಳಗತಿ ಬೆಳಗುವ ಕೋದಂಡ ಧೃತ ಕರಾಬ್ಜ
ಕುಂಡಲ ಮಂಡಿತ ಗಂಡಸ್ಥಳ
ಖಂಡಮಹಿಮ ಖೇಚರ ಪುರಹರ
ಗಂಡುಗಲಿ ಜಗನ್ನಾಥ ವಿಠಲ ಚಿತ್ತೈಸೋ [ಹಸೆಗೆ] ೫

೧೮೨

ಪಂಕಜನಯನ ಪಾವನ್ನ ಸುಖ
ಸಂಕೂಲ ಮೂರುತಿ ಲಾಲಿಸು ಚಿನ್ನಾ
ವೆಂಕಟ ನಿಲಯಾ ಹಸೆಗೇಳು ಪ

ತಮನ ಕೊಂದು ವೇದಾವಳಿ ತಂದು
ಕಮಲ ಸಂಭವಗಿತ್ತ ಕಮನೀಯ ಕಾಯ
ಸುಮನಸ ಜನತೆ ಸುಧೆಯನುಣಿಸಿ
ಭೂಮಿ ಚೋರನ ಕೊಂದ ಮುನಿಗಳೊಡೆಯ
ವಿಮಲ ಮೂರುತಿ ಹಸೆಗೇಳೋ ೧

ನರಹರಿ ರೂಪದಿ ಬಂದು ದೈತ್ಯ
ನುರವ ಬಗೆದು ವಟು ರೂಪದಿ ನಿಂದ್ಯೋ
ದುರುಳ ರಾಯರನೆಲ್ಲ ಕೊಂದು ಲಂಕಾ
ಪುರದಾಧಿಪತಿಯ ಸದೆದ ದಯಸಿಂಧೋ
ಕರುಣಾಸಾಗರನೆ ಹಸೆಗೇಳೋ ೨

ಯದುಜನೆನಿಸಿ ಎಲ್ಲಾ ಖಳರ ಜಯಿಸಿ
ಸುದತೇರ ವ್ರತವ ಕೆಡಿಸಿದತಿ ಧೀರ
ಕುದುರೆನೇರಿದ ಮಾಧಾರಾ ನಿನ್ನ
ಅದುಭೂತ ಬಲ್ಲಿದಕ್ಕೆಣೆಗಾಣೆನುದಾರಾ
ಉದಧಿ ಶಯನನೆ ಹಸೆಗೇಳು ೩

ಅಪ್ರತಿಮಲ್ಲ ಅನಂತಾ ಸುಹಜ
ನ ಪ್ರೀಯಾ ಸುರಪತಿ ಸಿರಿದೇವಿ ಕಾಂತಾ
ಸ್ವ ಪ್ರಕಾಶಿತನೆ ಧೀಮಂತಾ ಅತಿ
ಕ್ಷಿಪ್ರದಿ ಭಕ್ತರ ಪೊರೆವತಿ ಶಾಂತಾ
ಸುಪ್ರದಾಯಕನೆ ಹಸೆಗೇಳೋ ೪

ಪರಮ ಪುರುಷ ಪುಣ್ಯನಾಮಾ ಪರ
ಪುರಷೋತ್ತಮ ಪರಿಪೂರ್ಣ ಕಾಮಾ
ಶರಣರ ಭವವನ ಧೂಮಾ ಕೇತು
ಕರಿಯ ಬಲ್ಲೆನೆ ಕಾಮಿತರ ಕಲ್ಪದ್ರುಮಾ
ಕರಿರಾಜವರದಾ ಹಸೆಗೇಳೋ ೫

ಸತ್ಯ ಸಂಕಲ್ಪ ಸಮರ್ಥಾ ನಿತ್ಯ
ತೆತ್ತಿಗರೊಡನೆ ನಮಿತರ ಸಾಧಕ
ಅತ್ಯಂತ ಮಹಿಮನೆ ಆಪ್ತ ಜನರ
ಚಿತ್ತದ ಕ್ಲೇಶ ಕಳೆವ ಸುಕೀರ್ತೀ
ಚಿತ್ತಜ ಜನಕ ಹಸೆಗೇಳೋ ೬

ಕ್ಷೀರಾಬ್ಧಿವಾಸಾ ಚಿನ್ಮಯನೆ ನಿನ್ನ
ಪಾರ ಮಹಿಮೆ ತಿಳಿವವನಿಹನೆ
ಮೂರು ಗುಣ ರಹಿತನೆ ದೋಷ ದೂರ ವಿದೂರ
ಶಿರಿದೇವಿಯೊಡನೆ ಬಾರಯ್ಯ ಹಸೆಯ ಜಗುಲಿಗೆ ೭

ವ್ಯಾಳಮರ್ದನನೆ ವಿಗಮನಾ ತ್ರಿ
ಶೂಲ ಪಾಣಿಯ ಓಡಿಸಿದ ಖಳನಾ
ಸೋಲಿಸಿದಪ್ರತಿಸುಗುಣ ಹೇಮ
ದಾಲದಲೆಯ ಶಾಯಿ ಸಾಮಗಾಯನಾ ಲೋಲ
ಲಲಿತಾಂಗ ಹಸೆಗೇಳೋ ೮

ಅಗಣಿತ ಔದಾರ್ಯ ಸಾರಾ ನಿನ್ನ
ಪೊಗಳ ಬಲ್ಲೆನೆ ಪಾತಕದೂರಾ
ನಗರಾಜನುತ ನಿರಾಧಾರ ಭವಾದಿಗಳಿಂದ ವಂದ್ಯನೆ
ನವನೀತ ಚೋರ ಜಗನ್ನಾಥ ವಿಠಲ ಹಾಸೆಗೇಳೋ ೯

೧೮೩

ಮಂಗಳಂ ಗುರು ವಸುಧೀಂದ್ರಗೆ ಜಯ
ಮಂಗಳಂ ಕಲ್ಯಾಣ ಸಾಂದ್ರಗೆ ಪ

ವಾದೀಂದ್ರ ಗುರುವರ ಕುವರಗೆ ಮಂಗಳ
ಮೇದಿನಿ ಸುವಿನುತಗೆ ಮಂಗಳ
ಸಾಧಿತ ಸಕಲ ಸುತತ್ವಗೆ ಮಂಗಳ
ವಾದಿ ವಾರಿದ ಚಂಡ ಪವಮಾನಗೆ ೧

ವರಹತನಯ ತೀರ ಧರಣಿ ಧರಾಹ್ವಯ
ಪುರದಿ ವಿರಾಜಿಸುವಗೆ ಮಂಗಳ
ವರದೇಂದ್ರ ಯತಿವರರ ಕಮಲಾರ್ಚಿತ
ಚರಣ ಪಂಕೇಜ ಯುಗ್ಮಗೆ ಮಂಗಳ ೨

ಸೂರಿಕುಲೋತ್ತಮ ಶ್ರೀ ರಾಘವೇಂದ್ರ
ಗುರು ಸದ್ವಂಶ ಜಾತಗೆ ಮಂಗಳ
ನಾರದನುತ ಜಗನ್ನಾಥವಿಠಲನ ಕರುಣ
ಪಾತ್ರ ಸಂಯಮಿವರಗೆ ಮಂಗಳ ೩

೧೮೪

ಮಂಗಳಂ ಭಾರತಿರಮಣಗೆ ಜಯ
ಮಂಗಳಂ ನಿಜಭಕ್ತ ಪರಿಪಾಲಗೆ ಪ

ಅಂಜನಾ ಕೇಸರಿ ತನಯಗೆ ಮಂಗಳ
ಕಂಜಾಪ್ತಜನ ಕಾಯ್ದಗೆ ಮಂಗಳ
ಅಂಜನಾದ್ರಿ ತಂದಾತಗೆ ಮಂಗಳ
ಸಂಜಯವಂತ ಶ್ರೀ ಹನುಮಂತಗೆ ೧

ಕುಂತಿ ಪಾಂಡವಜನಾಗಿ ಕುವಲಯದೊಳು ಬಲ
ವಂತ ರಾಯರಾ ತರಿದಗೆ
ದಂತಿಪುರವ ಬೇಡಿ ಕೊಡದಿರೆ ಕೌರವರ
ಸಂತತಿ ಸವರಿದ ಸುಖ ಪೂರ್ಣಗೆ ೨

ಮೂರವತಾರ ಮಾಡಿದಗೆ ಮಂಗಳ
ಮೂರೇಳು ಮತಗಳ ಮುರಿದವಗೆ ಮಂಗಳ
ಕಾರುಣ್ಯ ಸಿಂಧು ಜಗನ್ನಾಥ ವಿಠಲನ
ಆರಾಧಿಸಿದ ಮಧ್ವ ಮುನಿರಾಯಗೆ ೩

೧೮೫

ಮಂಗಳವೆನ್ನಿರೆ ಮಾರಮಣಗೆ ಮಂಗಳವೆನ್ನಿರೆ ಮಧ್ವೇಶಗೆ
ಮಂಗಳವೆನ್ನಿ ಮುದವೆನ್ನಿ ಶೋಭಾನೆ ಪ

ಮಂಗಳ ಗುಣವನನಿಧಿ ಸಿರಿ ಲತಾಂಗಿ ಹುತ್ಕುಮಲಾಲಯ ಕು
ರಂಗ ಧ್ವಜ ತೇಜಾ ಸುರರಾಜ ಶಾಮ ಸಿತಾಂಗನೆ ರಂಗ ಬಾ
ಹಸೆಯ ಜಗಲಿಗೇ ೧

ಇಂಗಡಲಾತ್ಮಜೆ ಇಂದಿರೆ ಮಾ ತಿಂಗಳ
ಸಹೋದರೆ ಸುನಿಭಾನನೆ
ಅಂಗಜ ಮಾತೆ ಶ್ರುತಿಗೀತೆ ಶ್ರುತಿಗೀತೆ ಸರಸಿಜ ಪಾಣಿ
ಮಂಗಳ ದೇವಿ ಹಸೆಗೇಳು ೨

ಶಿತಿಕಂಠಾದ್ಯನಿಮಿಷ ಸಂಸ್ತುತ
ಅತುಲಮಹಿಮ ಅಜರಾಮರಣನೆ
ಶತಪತ್ರ ನೇತ್ರ ಸುಚರಿತ್ರಾ ಸುಚರಿತ್ರ ಶೋಭನಗಾತ್ರ
ಪತಿತ ಪಾವನ್ನ ಹಸೆಗೇಳೋ ೩

ಉದ್ಯದ್ರವಿ ಸನ್ನಿಭೆ ಆಗಮ ವೇದ್ಯಳೆ ವಿನತಾತ್ಮಜ ಧ್ವಜರಿ
ಪದ್ಮ ಪತ್ರಾಕ್ಷೆ ಖಳಶಿಕ್ಷೇ ಕನಕಾಂಬರಧರೇ ವಿದ್ವಜ್ಜ
ನಪ್ರಿಯೆ ಹಸೆಗೇಳು ೪

ಶ್ವೇತವಾಹನ ಸಾರಥಿ ಸುಮನಸ
ವ್ರಾತೋತ್ತಮ ವ್ರಜಭವ ನಾರೇರ
ನಾಥ ನರಸಿಂಗ ದಯಾಪಾಂಗ ದಯಾಪಾಂಗ
ದಾಮೋದರ ಜಗನ್ನಾಥ
ವಿಠ್ಠಲ ಹಸೆಗೇಳೋ ೫

೧೮೬

ಮಂಗಳ ಶ್ರೀ ರಾಘವೇಂದ್ರಗೆ ಶುಭ
ಮಂಗಳ ಸುಜನಾಂಬುಧಿ ಚಂದ್ರಗೆ ಪ

ಶ್ರೀ ಸುಧೀಂದ್ರ ಕುಮಾರಗೆ ಮಂಗಳ
ಭೂಸುರನುತ ಮಹಿಮಗೆ ಮಂಗಳ
ದೇಶಿಕ ಕುಲವನ ಜಾತನಿಗೆ ಮಂಗಳ
ಭಾಸುರ ಕೀರ್ತಿಯ ಪಡೆದವಗೆ ೧

ವೃಂದಾವನ ದಿವಿಯೊಳಗೆ ಸುರದ್ರುಮ
ದಂದದಿ ರಾಜಿಸುವವಗೆ ಮಂಗಳ
ಅಂಧ ಪಂಗು ಮೂಕ ಬಧಿರರೀಪ್ಸಿತ
ಸಂದೋಹ ಸಲಿಸುವ ಮುನಿಗೆ ೨

ಭೂತ ಪ್ರೇತ ಬೇತಾಳ ವಿಪಿನ ಭಯ
ವೀತಿಹೋತ್ರನಿಗೆ ಮಂಗಳ
ವಾತ ಜನಕ ಜಗನ್ನಾಥ ವಿಠ್ಠಲನ
ದೂತರ ಸಲಹುವ ದಾತನಿಗೆ ೩

೧೮೭

ಶೋಭಾನವೆನ್ನಿರೆ ಸರ್ವಜ್ಞ ಹರಿಗೆ
ಶೋಭಾನವೆನ್ನಿರೆ ಸಕಲ ಗುಣನಿಧಿಗೆ
ಶೋಭಾನವೆನ್ನಿ ಸಮೀರ ಪಿತನಿಗೆ
ಶೋಭಾನವೆನ್ನಿ ಸರೋಜಸದನ
ಮನೋಭಿರಾಮನಿಗೆ ಶೋಭಾನವೆನ್ನಿ ಪ

ಶಫರ ವೇಷದವಗೆ ಕಪಟ ಕಮಠಗೆ
ತಪ ನಿಯಾಂಬಕನಸುಪರಿಹರಿಸಿದಗೆ
ಕೃಪಣ ಪ್ರಹ್ಲಾದನ ವಿಪತ್ತು ಕಳೆದವಗೆ
ಶಿಪಿಯ ಕರದಿ ಬಲು ವಪ್ರವ ಬಿಗಿಸಿದವಗೆ
ಚಪಲಾಕ್ಷಿಯರಾರುತಿ ಬೆಳಗಿರೆ ೧

ಕೊಡಲಿ ಕೋದಂಡವ ಪಿಡಿವ ಪಂಡಿತಗೆ
ಕಡಲ ಕಟ್ಟಿಸಿ ಖಳರೊಡಲ ಬಗೆದಗೆ
ಮಡುವಿನೊಳಗೆ ಫಣಿ ಪೆಡೆಯ ತುಳಿದವಗೆ
ಮೃಡನ ಗೆಲಿಸಿ ಕೀರ್ತಿ ಒಡನೆ ತಂದಿತ್ತಗೆ
ಮಡದೇರಾರುತಿಯ ಬೆಳಗೀರೆ ೨

ಹರಿಗಿ ಸುರಿಗಿ ಪಿಡಿದರವಿಂದಾಂಬಕಗೆ
ಶರಧಿಯೊಳಾಡ್ದಗೆ ಗಿರಿಮಹಿಧರಗೆ
ನರಹರಿ ರೂಪಗೆ ಧರಣಿಯಾಳ್ದಗೆ
ಧುರದೊಳು ರಾಯರ ತರಿದ ಸಮರ್ಥಗೆ
ಗರತೇರಾರುತಿಯ ಬೆಳಗೀರೆ ೩

ದಶರಥ ತನಯಗೆ ವಸುದೇವ ಸುತಗೆ
ವಸನ ವಿಹೀನಗೆ ಅಸುರ ಭಂಜನಿಗೆ
ಝಷ ಕೂರ್ಮ ರೂಪಗೆ ವಸುಧಿ ವಾಹಕಗೆ

ಮಿಸುನಿ ಕಶ್ಯಪಗೆ ಹೆಬ್ಬಸಿರ ಬಗೆದವಗೆ
ಶಶಿಮುಖಿಯರಾರುತಿ ಬೆಳಗೀರೆ ೪

ವಟು ಭೃಗುರಾಮಗೆ ಜಟಲ ಮಸ್ತಕಗೆ
ಕಠಿಣ ಕಂಸನ ತಳ ಪಟವ ಮಾಡಿದಗೆ
ನಿಟಲಾಕ್ಷವರದಗೆ ಕಪಟ ಭೀಕರಗೆ
ವಟಪತ್ರಶಯನ ನಿಷ್ಕುಟಿಲ ಜಗನ್ನಾಥ
ವಿಠಲಗಾರುತಿಯ ಬೆಳಗೀರೆ ೫

೧೮೮

ಸಂಕರ್ಷಣ ಜಯಾತನಯಗೆ ಮಂಗಳ
ಕಂತು ಭವನ ಪದವಿಯೋಗ್ಯಗೆ
ಶಂಕ ಇಲ್ಲದ ಜೀವರಾಶಿಗಳೊಳಗಚ್ಯು
ತಾ ಕಸ್ಥನೆನಿಸಿದ ಪವಮಾನಗೆ ೧

ವಾನರ ವೇಷನಾ ತೋರ್ದಗೆ ಮಂಗಳ
ಭಾನುತನಯನ ಕಾಯ್ದಗೆ ಮಂಗಳ
ಜಾನಕಿಗುಂಗುರವಿತ್ತಗೆ ಮಂಗಳ
ದಾನವತತಿ ಪುರವ ದಹಿಸಿದವಗೆ ಮಂಗಳ ೨

ಅತಿ ಬಲವಂತರೆಂದೆನಿಸಿದ ದೈತ್ಯ ಸಂ
ತತಿಗಳನೆಲ್ಲವ ಸವರಿದವಗೆ ಮಂಗಳ
ಪ್ರೋತನದೊಳಗೆ ಪ್ರತಿಕೂಲ ಸುಯೋಧನನ
ಮೃತಿಗೆ ಕಾರಣನಾದ ಮರುದಂಶಗೆ ೩

ಏಳೇಳು ಲೋಕದ ಗುರುವರನೆನಿಸಿ ಮೂ
ರೇಳು ಕುಭಾಷ್ಯವ ಮುರಿದವಗೆ ಮಂಗಳ
ಏಳುಕೋಟ ಲೋಕದೊಳಗಿಟ್ಟು ದೈತ್ಯರ
ಪಳದಂತೆ ಮಾಡಿದ ಯತಿರಾಯಗೆ ೪

ಮೂರು ರೂಪಗಳಿಂದ ಮುಕ್ತಿ ಪ್ರದಾಯಕ
ನಾರಾಧಿಸಿದ ಅನಿಮಿಷ ಪೂಜ್ಯಗೆ ಮಂಗಳ
ಶ್ರೀ ರಮಾರಮಣ ಜಗನ್ನಾಥ ವಿಠಲನ
ಕಾರುಣ್ಯ ಪಾತ್ರ ಸಮೀರಣಗೆ ಮಂಗಳ ೫

೧೮೯

ಸುವ್ವಿ ಶ್ರೀ ದೇವಿರಮಣ ಸುವ್ವಿ ಸರ್ಪರಾಜಶಯನ
ಸುವ್ವಿ ದೈತ್ಯನಿಕರ ಹರಣ ಸುವ್ವಿ ನಾರಾಯಣ ಪ

ಭವ್ಯಚರಿತ ದುರಿತವಿಪಿನ ಹವ್ಯವಾಹನ ಭವೇಂದ್ರಾದಿ
ಸೇವ್ಯಮಾನ ಸುಪ್ರಸಿದ್ಧ ಸುಲಭ ಮೂರುತಿ
ಅವ್ಯಯಾಮಿತ ಸುಖಾತ್ಮ ದಿವ್ಯ ಮಹಿಮೆ ತುತಿಪೆ
ಸುವಿವೇಕಿಗಳಿಗೆ ಕೊಡುವುದಮಿತ ಮೋದವ ೧

ವಾಸವಾದ್ಯಮರ ವಾರಾಶಿ ಶಾರದೇಂದು ಮಧ್ವ
ದೇಶಿಕಾರ್ಯ ಚಿತ್ತ ಸಿಂಹಪೀಠಮಧ್ಯಗ
ದೇಶಕಾಲ ವ್ಯಾಪ್ತ ಸರ್ವೇಶ ಸಾರ್ವಭೌಮ ಶ್ರೀಮ
ಹೀ ಸಮೇತ ಕೃಷ್ಣ ಕೊಡಲಿ ಎಮಗೆ ಮಂಗಳ ೨

ಕಮಲ ಸಂಭವನ ವೇದ ತಮನು ಒಯ್ಯುತಿರಲು ಲಕ್ಷ್ಮೀ
ರಮಣ ಮಚ್ಛನಾಗಿ ತಂದ ಶರಧಿ ಮಥನದಿ
ಕಮಠ ರೂಪಿನಿಂದ ಸುರರಿಗಮೃತವಿತ್ತು ಕಾಯ್ದ ಅಖಿಳ
ಸುಮನಸೇಂದ್ರ ಸ್ವಾಮಿ ಕೊಡಲಿ ಎಮಗೆ ಮಂಗಳ ೩

ಕನಕ ಲೋಚನನ ಸದೆದು ಮನುಜಸಿಂಹ ವೇಷನಾದ
ದ್ಯುನದಿ ಪಡೆದು ಜನನಿ ಕಡಿದು ವನವ ಚರಿಸಿದ
ಜನಪ ಕಂಸನ್ನೊದೆದು ತಿರಿಪುರವನಿತೆಯರ ಸುವ್ರತ
ವನಳಿದ ವಿನುತ ಕಲಿ ದೇವರ್‍ಾಜ ಎಮ್ಮ ಸಲಹಲಿ ೪

ಪಾಹಿ ಪಾವನ ಚರಿತ್ರ ಪಾಹಿ ಪದ್ಮ ಪತ್ರನೇತ್ರ
ಪಾಹಿ ನಿಗಮ ನಿಕರಸ್ತೋತ್ರ ಲಲಿತ ಗಾತ್ರ ಮಾಂ
ಪಾಹಿ ಸಜ್ಜನಸುಮಿತ್ರ ಪಾಹಿ ದೋಷದೂರ ಸುಗುಣ
ಪಾಹಿ ಜಗನ್ನಾಥ ವಿಠಲ ಜಯ ತ್ರಿಧಾಮಗ ೫

೧೯೦

ಹಸೆಗೇಳೊ ಪ

ಶಂಕರ ದೇವನಾಲಂಕಾರ ಶಯನ ಶಂಖ ನೃಪನ ಪಾಲಾ
ಶಂಖಾದಿ ಸೂದನ ಶಂಕೆಯಿಲ್ಲದೆ ತಾಯಿ
ಸಂಕಲೆ ಕಡಿದ ಶಶಾಂಕಕೋಟಿ ಪ್ರಭಾವ
ಸಂಕರುಷಣ ದೇವ ಶಂಖಾರಿಧರನೆ ೧

ಕಲ್ಯಾಣ ಗುಣನಿಧಿ ಕಾಮನ ಪಿತನ ಸೊಲ್ಲಿಗೆ
ಕಂಬದಿ ಬಂದಚ್ಯುತನೆ
ಗೊಲ್ಲರ ಸಲಹಿದ ಗೋವರ್ಧನಧರ ಪುಲ್ಲ ಲೋಚನನೆ ೨

ಶಕಟ ಮೊದಲಾದ ಅಖಿಳ ಅಸುರರ ಶಕುತಿಯ
ಅಪಹರಿಸಿದ ಅದಿತಿ ರುಕ್ಮಿಣಿಯೊಡನೆ ವಿಹಾರ ಸಕಲ
ಸುರರೊಡೆಯ ಸಾಮಗಾಯನಲೋಲ ಶಕುಜನಕನೆ ೩

ಶಾಮಲ ಶರೀರ ವರ್ಣ ವಿನುತ
ವ್ಯೋಮ ಗಂಗೆಯ ಪೆತ್ತ ಪಾವನಚರಿತ
ರೋಮ ರೋಮ ಕೂಪದಿ ಆನಂದ ಭರಿತ
ದಾಮೋದರ ವಿಶ್ವದಾನಿಗಳರಸನೇ ಸಾಮಜವರದ ೪

ಸನಕಾದಿ ಮುನಿಜ ಸನ್ನುತ ಚರಣ
ಅನಿರುದ್ಧ ದೇವನೆ ಅಸುರ ಸಂಹರಣಾ

ಕನಕಗರ್ಭಾದಿ ಸುರಕಟಕ ಪಾಲಕನೆ
ವನಜ ಜಾಂಡವ ಪೆತ್ತ ವೈಕುಂಠ ಪುರಾಧೀಶ ೫

ಫಣಿ ಫಣ ಮರ್ದನ ಪ್ರಣವ ಪ್ರತಿಪಾದ್ಯ ಪ್ರ
ಸನ್ನವದನಾ ರಣರಂಗ ಭೀಮಾ ಭಕುತ
ಜನ ಮೋದನಾ ಅಣು ಸ್ಥೂಲದಲಿ
ಅನುಗಾಲ ವ್ಯಾಪ್ತನೆ ಫಣಿರಿಪು ಗಮನ ೬

ಶ್ವೇತವಾಹನನ ಸಮರದಿ ಕಾಯಿದಾ
ರಾತಿದೂರನೆ ಅಖಿಳ ಜೀವ ಭೇದಾ
ಪೀತವಸನ ದರ ಪರಮ ಸುಮೋದಾ
ಭೀತಿರಹಿತ ಕಲ್ಪಭೂಜನೆನಿಪ ಜಗನ್ನಾಥವಿಠ್ಠಲನೆ ೭

ಕೊಳಲ ಸ್ತುತಿ

೧೯೧

ಕೊಳಲೇನು ಪುಣ್ಯವ ಮಾಡಿ ಕೃಷ್ಣನ ಕರವನೈದಿತೆ ಪ

ಬಹಳುಗ್ರತಪವ ಮಾಡದೆ ಇಂಥ ಭೋಗವಾದೀತೇ ಅ.ಪ.

ಧರಿಸಲ್ಬರಿಯು ಜಗವಮೋಹಿಪ ಶಕುತಿ ಬಂದಿತೇ
ಸ್ಮರನ ಬಾಧೆಯು ಆತನ ನುಡಿಗೆ ಸ್ಮರಗೈದಿತೇ ೧

ವಾರಿಜಾಕ್ಷನ ಮುಖರಿಗಿಂಥಾ ಸಾಹಸ ಬಂದಿತೇ
ಶ್ರೀ ರಮೆಯರಿಂಗೆ ಬಲವಾದಸೂಯೆ ದೊರಕಿತೇ ೨

ಭುವನಸದನ ಜೀವರಿಗೆ ಪಾದಪವಾಳೀತೇ
ಜಗನ್ನಾಥವಿಠಲನ ಮುಖರಿಗೆ ಶಬ್ದವಿಲ್ಲ ಧೋಯಿತೇ ೩

೧೯೨

ಎಂಥಾದೋ ಶ್ರೀ ವೈಕುಂಠವೆಂಥಾದೋ ಪ

ಎಂಥಾದೋ ವೈಕುಂಠಾವರಣ ಅಲ್ಲಿ
ಕಂತುಪಿತನ ದೇಹಕಿರಣ ಅದ
ರಂತರಂಗ ಹೇಮಾಭರಣ ಕಾಂತಿ
ಗಂತು ನಾಚಿದ ರವಿ ಅರುಣ ಅಹಾ
ನಂತ ಕಾಲದಲ್ಲಿ ಸಂತತ ತುತಿಪರ್ಗೆ
ಪ್ರಾಂತಕ್ಕೆ ನಾಲ್ಕು ನಿಶ್ಚಿಂತ ಮುಕ್ತಿಯ ಸ್ಥಾನ ೧

ಪಾಲಸಾಗರ ಮಧ್ಯೆ ಕೂಟ ಒಳ
ಗೇಳು ಸುತ್ತಿಸಾಗರ ದಾಟಿ ತಾಳ
ಮೇಳದವರು ಮೂರುಕೋಟಿ ನಾಮ
ಪೇಳ್ವ ಗಾಯಕರ ಗಲಾಟೆ ಆಹ
ಶೀಲ ಮುನಿಗಳು ದೇವ ಗಂಧರ್ವರು
ಜೀವನ್ಮುಕ್ತರುಗಳು ಸೇರಿಪ್ಪ ಹರಿಪುರ ೨

ಹೇಮ ಪ್ರಾಕಾರದ ಪುರವು ಅಲ್ಲಿ
ಆ ಮಹ ಬೀದಿ ಶೃಂಗಾರವು ನೋಡೆ
ಕಾಮಧೇನು ಕಲ್ಪತರುವು ಬಲು
ರಮಣೀಯವಾದ ಇರವು ಆಹಾ
ಶ್ರೀ ಮೂರುತಿಯೊಂದು ವೇದಾಂತಶ್ರುತಿ ಸಾರೆ
ಆ ಮಹಮುಕ್ತರು ಸೇರಿಹ ಮಂದಿರ ೩

ಸುತ್ತಲು ಸನಕಾದಿ ಮುನಿಯ ದಿವ್ಯ
ನರ್ತನ ಗಾಯನ ಧ್ವನಿಯು ಪುಷ್ಪ
ವೃಷ್ಟಿ ಚಂಪಕ ಜಾಜಿ ಹನಿಯು ಅಲ್ಲಿ

ಅಷ್ಟಮ ಸ್ತ್ರೀಯರ ಮನೆಯು ಆಹಾ
ನಿತ್ಯಾವಿಯೋಗಿನಿ ಒತ್ತುತ್ತ ಪಾದ ಸಂ
ಪತ್ತಿಗೀ ಶಯನ ಸರ್ವೋತ್ತಮನ ಗೃಹ ೪

ಥಳಥಳಿಸುವ ದಿವ್ಯದ್ವಾರ ಅಲ್ಲಿ
ಹೊಳೆವಂಥ ರಂಗಮಂದಿರ ಮುತ್ತಿ
ನೆಳೆಗಳ ಗೊಂಚಲ ಭಾರ ಹೇಮ
ತುಳಸಿ ಸರದ ಶೃಂಗಾರ ಆಹಾ
ಹೊಳೆವ ಮಾಣಿಕದ ಮಂಟಪ ಮಧ್ಯದೊಳ್ಮೆರವ
ಚೆಲುವ ಜಗನ್ನಾಥ ವಿಠಲನ ನಿಜಸ್ಥಾನ ೫

೧೯೩

ಅಸುರ ಬಾಧಿಸುತಿರಲು ಋಷಿಗಳು ಸ್ತುತಿ ಮಾಡೆ
ದಶರಥನ ಗರ್ಭದಲಿ ಜನಿಸಿ ಬಂದೆ ೧

ಶಿಶುವಾಗಿ ಕೌಸಲೆಗೆ ಬಾಲಲೀಲೆಯ ತೋರ್ದು
ಕುಶಲದಿಂ ನಾಲ್ವರ ಕೂಡೆ ಬೆಳೆದೆ ೨

ಅಸುರರನೆ ಬಡಿದಟ್ಟಿ ಋಷಿಯ ಯಾಗವ ಕಾಯ್ದು
ವಸುಧೆಯೊಳು ಶಿಲೆಯನ್ನು ಸತಿಯ ಮಾಡಿ ೩

ಮಿಥಿಲ ಪಟ್ಟಣಕೈದಿ ಮೃಡನ ಧನುವನೆ ಮುರಿದು
ಶಶಿಮುಖಿ ಜಾನಕಿಯ ಕರವ ಪಿಡಿದು ೪

ಪಥದೊಳಗೆ ಬರುತ ಭಾರ್ಗವರೊಡನೆ ಹೋರಾಡಿ
ದಶರಥಗೆ ಏಕೀಭಾವವನೆ ತೋರಿ ೫

ಪರಮ ಹರುಷದಲಿ ಸಾಕೇತನಗರಿಗೆ ಬಂದು
ಕಿರಿಯ ಮಾತೆಯ ಕಠಿಣ ನುಡಿ ಕೇಳಿ ೬

ಚಿತ್ರಕೂಟಕೆ ಬಂದು ಕೃತ್ಯವೆಲ್ಲವ ನಡೆಸಿ
ಭ್ರಾತೃ ಭರತನಿಗೆ ಪಾದುಕೆಯನಿತ್ತು ೭

ವನದೊಳಗೆ ಸಂಚರಿಸಿ ಘನ ಕಾರ್ಯಗಳ ಮಾಡಿ
ಹನುಮನ ಕಳುಹಿ ಮುದ್ರಿಕೆಯ ಕೊಡಲು ೮

ಮಿತ್ರೆ ಜಾನಕಿಗರುಹಿ ರತ್ನ ಕೊಂಡು ಬರಲು
ಅತ್ಯಂತ ಹರುಷದಲಿ ಶರಧಿ ಕಟ್ಟಿ ೯

ದುಷ್ಟ ರಾಕ್ಷಸ ಕುಲವ ಕುಟ್ಟಿ ಬೇರನೆ ಸವರಿ
ಸೃಷ್ಟಿಸುತೆ ಜಾನಕಿಯ ಅಗ್ನಿ ಹೊಗಿಸಿ ೧೦

ಪಟ್ಟಣಕೆ ಬಂದು ಭರತನಿಗೆ ಪೇಳೆ
ಅಷ್ಟಗಂಗೆ ಉದಕವನೆ ತಂದು ೧೧

ಅಷ್ಟಋಷಿಗಳು ಎಲ್ಲ ಕೂಡಿ ಕೊಂಡು
ಪಟ್ಟಾಭಿಷೇಕವನು ಮಾಡುತಿರಲಂದು ೧೨

ಸೃಷ್ಟಿಯೊಳು ಜಗನ್ನಾಥವಿಠಲನಿಗೆ ಪುಷ್ಪ
ವೃಷ್ಟಿಗಳನ್ನು ಕರೆದರಾಗ ೧೩

೧೯೪

ಸೋಮ ಸುರ್ಯೋಪರಾಗದಲಿ ಗೋಸಹಸ್ರಗಳ
ಭೂಮಿದೇವರಿಗೆ ಸುರನದಿಯ ತಟದಿ
ಶ್ರೀ ಮುಕುಂದಾರ್ಪಣವೆನುತ ಕೊಟ್ಟ ಫಲವಕ್ಕು
ಈ ಮಧ್ವನಾಮ ಬರೆದೋದಿದವರಿಗೆ ೧

ಪುತ್ರರಿಲ್ಲದವರು ಸತ್ಪುತ್ರರೈದುವರು ಸ
ರ್ವತ್ರದಲಿ ದಿಗ್ವಿಜಯವಹುದು ಸಕಳ

ಶತ್ರುಗಳು ಕೆಡುವರಪಮೃತ್ಯು ಬರಲಂಜುವುದು
ಸೂತ್ರನಾಮಕನ ಸಂಸ್ತುತಿ ಮಾತ್ರದೀ ೨

ಶ್ರೀ ಪಾದರಾಯರು ಪೇಳಿದ ಮಧ್ವ ನಾಮ ಸಂ
ತಾಪ ಕಳೆದಖಿಳ ಸೌಖ್ಯನೀವುದೂ
ಶ್ರೀಪತಿ ಜಗನ್ನಾಥವಿಠಲನ ತೋರಿ ಭವ
ಕೂಪಾರದಿಂದ ಕಡೆಹಾಯಿಸುವುದು ३

ಉಗಾಭೋಗಗಳು

೧೯೫

ಅನಘಾನೆಂದೊಮ್ಮೆ ನೆನೆದು ಮಾನವ ಪಾಪ
ವನಧಿ ದಾಟುವ ಬಹುವೇಗದಿಂದ
ಜನನ ಮರಣ ಭಯವಿನಿತಿಲ್ಲಾ ಅವನೆ ಸ
ಜ್ಜನ ಶಿರೋಮಣಿ ಕಾಣೊ ಸರ್ವರೊಳು
ಜನಕ ಜನನಿ ಮೊದಲಾದ ನೂರೊಂದು ಕುಲವ ಪಾ
ವನಿತಾದಿ ವಿಷಯಗಳನನುಭವಿಸುತ ತನ್ನ
ಮನೆಯೊಳಿರಲವ ಜೀವನ ಮುಕ್ತನೊ
ಸನಕಾದಿ ಮುನಿಗಳ ಮನಕೆ ನಿಲುಕದಿಪ್ಪ
ಘನ ಮಹಿಮನೆ ಬಂದು ಕುಣಿವ ಮುಂದೆ
ಹನುಮವಂದಿತ ಜಗನ್ನಾಥವಿಠ್ಠಲರೇಯ
ಅನಿಮಿತ್ತ ಬಂಧು ನೀನು ಆವಾವ ಕಾಲದಲ್ಲಿ ೧

೧೯೬

ಆರು ವಂದಿಸಲೇನು ಆರು ನಿಂದಿಸಲೇನು
ಆರು ಶಾಪಿಸಲೇನು
ಆರು ಕೋಪಿಸಲೇನು
ಆರು ಮುನಿದು ಮಾತನಾಡದಿದ್ದರೆ ಏನು
ಮಾರುತಾಂತರ್ಯಾಮಿ ಜಗನ್ನಾಥವಿಠಲನ
ಕಾರುಣ್ಯ ಪಾತ್ರರ ಕರುಣವೆನ್ನೊಳಗಿರೆ ೧

ಸುಳಾದಿಗಳು

೧೯೭

ಧ್ರುವತಾಳ

ದುರಿತವನ ಕುಠಾರಿ ದುರ್ಜನ ಕುಲವೈರಿ
ಶರಣಾಗತ ವಜ್ರ ಪಂಜರ ಕುಂಜರ
ವರ ಸಂರಕ್ಷಕ ಜನ್ಮ ಮರಣರಹಿತ ಮಹಿತ
ಪರಮ ಕರುಣಾಸಿಂಧು ಭಕ್ತ ಬಂಧು
ಸ್ವರತ ಸ್ವತಂತ್ರ ಜಗದ್ಭರಿತ ಚಿತ್ಸುಖಪೂರ್ಣ
ಹರಿಯೆ ಕ್ಷರಾಕ್ಷರ ಪುರುಷೋತ್ತಮ
ಉರಗಶಯನ ವೈಕುಂಠವರ ಮಂದಿರ ಚಂದಿರ
ತರಣಿಕೋಟಿ ಸಂಕಾಶ ವಿಮಲಕೇಶ
ಧುರದೊಳಗರ್ಜುನನ ತುರಗ ನಡೆಸಿದ ಸಂ
ಗರ ಭಯಂಕರ ಲೋಕೈಕ ಧೀರ
ಸ್ಮರಣೆ ಮಾತ್ರದಿ ಅಜಾಮಿಳಗೆ ಮುಕ್ತಿಯನಿತ್ತೆ
ಅರಿದೆನೊ ನೀ ಎಮ್ಮ ಪೊರೆವುದಕ್ಕೆ
ಸರುವ ಕಾಮದ ಜಗನ್ನಾಥವಿಠ್ಠಲ ಭಕ್ತ
ಪರಿಪಾಲಕನೆಂಬ ಬಿರುದು ನಿನ್ನದಲ್ಲದೆ ೧

ಮಟ್ಟತಾಳ

ವಿಧಿಪಿತ ನೀನಲ್ಲದೆ ನಿಧಿಪತಿಗಳು ಉಂಟೆ
ಸದನನಾಗಿ ಇಪ್ಪೆ ನಿನ್ನ ದಾಸರಿಗಾಗಿ
ಮಧುಸೂದನ ಜಗನ್ನಾಥವಿಠ್ಠಲರೇಯ
ನಿಧನನೆನಿಸಿ ಕೊಂಡೆ ನಿನ್ನ ದ್ವೇಷಿಗಳಿಗೆ ೨

ರೂಪಕತಾಳ

ಮೂರು ಲೋಕ ಸ್ವಾಮಿ ಸರ್ವಜ್ಞ ಸುಖಪೂರ್ಣ
ಪ್ರೇರಕ ಸಾಕ್ಷಿ ಕಾರಣ ಕಾರ್ಯ ದೋಷ ವಿ
ದೂರ ಸದ್ಗುಣ ಸಾಂದ್ರ ಸುಜನಾಂಬುಧಿ ಚಂದ್ರ

ಭಾರಕರ್ತನೆ ಜಗಕೆ ನೀನಿರೆ ಎಮ್ಮ ಮ
ನೋರಥವ ಸಲಿಸುವುದೇನಾಶ್ಚರ್ಯವೊ
ಕ್ರೂರ ಮಾನವರ ಸಂಹಾರ ಮಾಡಿಸು ಗುರು
ಮಾರುತನಿಂದತಿ ಶೀಘ್ರನಾಗೀ
ನೀ ರಕ್ಷಿಸೆಂದು ಪ್ರಾರ್ಥಿಸುವ ಭಕ್ತರಿಗೆ ಭೂರಿ
ಸಾರ ಭಾಗ್ಯವನಿತ್ತು ನೀ ರಕ್ಷಿಸನುದಿನ
ಶೂರ ಜಗನ್ನಾಥ ವಿಠ್ಠಲ ನೀನಲ್ಲದಿರುಭ
ಕ್ತರ ಕಾವ ಕರುಣಿಗಳು ಜಗದೀ ೩

ಝಂಪೆ ತಾಳ

ಪಿತನಿಂದ ನೊಂದ ಪ್ರಹ್ಲಾದನ ಕಾಯಿದೆ ದೇ
ವತೆಗಳಿಗೆ ಬಂದ ಭಯ ಪರಿಹರಿಸಿ ದಯದಿ ದ್ರೌ
ಪದಿಯ ಮೊರೆ ಕೇಳಿ ದಿವ್ಯಾಂಬರವ ಕರುಣಿಸಿದೆ
ಕ್ಷಿತಿಜನಾಲಯದಿ ಬಳಲುವ ಬಾಲೆಯರ ದ್ವಾರಾ
ವತಿಗೆ ಕರೆದೊಯ್ದು ಒಲಿದವರ ಪೋಷಿಸಿದೆ ಮಾ
ರುತಿಯ ಕರದಿಂದ ಬೃಹದ್ರಥನ ಕುವರನ ಕೊಲಿಸಿ
ಕ್ಷಿತಿಪರನ ಬಿಡಿಸಿ ಪಾಲಿಸಿದೆ ಕರುಣದಲಿ ಕುರು
ಪೃತನದೊಳು ಪಾಂಡವರ ಗೆಲಿಸಿ ಕೀರ್ತಿಯ ಪಡೆದೆ
ಶತಮೋಹನಾಸ್ತ್ರದಿಂದಲಿ ಗರ್ಭದೊಳಗೆ ಪೀ
ಡಿತನಾದ ಶಿಶು ಪರೀಕ್ಷಿತನ ಸಂತೈಸಿದೇ
ಶಿತಿಕಂಠಗೊಲಿದು ಸಾರಥಿಯಾಗಿ ಮುಪ್ಪುರದ
ಸತಿಯರನ ಕೊಲಿಸಿ ಕೀರುತಿಯಿತ್ತೆ ಭಕ್ತನಿಗೆ
ಮಿತಿಯುಂಟೆ ನಿನ್ನ ಕರುಣಕ್ಕೆ ದೇವವರ್ಯ ಸಾಂ
ಪ್ರತ ಬೇಡಿಕೊಂಬೆ ಬಿನ್ನಪ ಕೇಳಜಸ್ರ ಸಂ
ತುತಿಪ ಭಕುತನ ಮನೋರಥವ ಪೂರೈಸು ಸು
ವ್ರತನಾಮ ಶ್ರೀ ಜಗನ್ನಾಥ ವಿಠ್ಠಲ ಭಾಗ
ವತಜನ ಪ್ರೀಯ ನೀನೆ ಗತಿ ಎಮಗೆ ಇಹಪರದಿ ೪

ತ್ರಿವಿಡಿತಾಳ

ನೀ ಸಲಹಲಿನ್ನಾರು ಬಂದ
ಡ್ಡೈಸುವರು ಮೂಲೋಕದೊಳಹೊರ
ಗೀ ಸಮಸ್ತ ದಿವೌಕಸರು ನಿನ
ಗೆ ಸಮರ್ಪಕವಾದ ಕಾರ್ಯ ಮ
ಹಾ ಸುಖದಿ ನಡೆಸುವರು ಲಕ್ಷ್ಮೀ
ದಾಸಿ ಎನಿಪಳು ನಿನ್ನ ಮನೆಯಲ್ಲಿ
ದೇಶ ಕಾಲಾದಿಗಳು ನಿನಗಾ
ವಾಸ ಯೋಗ್ಯಸ್ಥಾನವೆನಿಪವು
ಶ್ರೀಶ ಲೋಕತ್ರಯಕೆ ಲೇಸಾ
ಯಾಸವೆಂಬುದು ಕಾಣೆನೋ ಕರು
ಣಾ ಸಮುದ್ರನೆ ಒಲಿದು ಎಮ್ಮಭಿ
ಲಾಷೆ ಪೂರೈಸೆಂದು ವೇದವ್ಯಾಸ ಕೀಟಕೆ ಒಲಿದು
ಮಹಿ ಸಿಂಹಾಸನವೇರಿಸಿ ಮೆರೆಸಿದ ಪ
ರಾಶರಾತ್ಮಜ ನಿನ್ನ ಬಣ್ಣಿಸೆ
ನಾ ಸಮರ್ಥನೆ ಎಂದಿಗಾದರು
ನೀ ಸುಲಭನೆಂದರಿದು ನಾ ಬಿ
ನ್ನೈಸಿದೆನೊ ಈ ರೀತಿಯಲಿ ಸ
ರ್ವಾಸುನಿಲಯ ಜಗನ್ನಾಥ ವಿಠಲೇಸು ಮಾತುಗಳ್ಯಾಕೆ ಮನ್ಮನ
ದಾಸೆ ಪೂರ್ತಿಯ ಮಾಡಿ ಎಮ್ಮನು
ದಾಸಿಸದೆ ದಯದಿಂದ ನೋಳ್ಪುದು ೫

ಅಟ್ಟತಾಳ

ನಿಗಮ ತತಿಗಳಿಗೆ ವೇದ್ಯವಾದ ನಿನ್ನ
ಅಗಣಿತ ಮಹಿಮೆ ಲಕುಮಿ ಬೊಮ್ಮ ಭವಾ
ದಿಗಳು ತಾವರಿಯರು ಸಾಕಲ್ಯಮಂದ ಜೀ
ವಿಗಳಿಗೆ ಗೋಚರಿಸುವುದೆ ನಿನ್ನರೂಪ
ಭಗವಂತ ನೀನೆ ದಯಾಳು ಎಂದರಿದು ನಾ

ಪೊಗಳಿದೆನೊ ಯಥಾಮತಿಯೊಳಗೆ ಲೇಶ
ಬಗೆಯಾದೀಗೆನ್ನಪರಾಧ ಕೋಟಿಗಳನು
ಜಗತೀಪತಿ ತನ್ನ ಮಗುವಿನ ತೊದಲು ಮಾ
ತುಗಳನು ಕೇಳಿ ತಾ ನಗುತಲಿ ಕಾಮಿತ
ಬಗೆ ಬಗೆಯಿಂದ ಪೂರ್ತಿಸಿ ಮಿಗೆ ಹರುಷದಿ
ಬಿಗಿದಪ್ಪಿ ಮೋದಿಪನಲ್ಲದೆ ಶಿಶುವಿನ
ತೆಗೆದು ಬಿಸುಟು ಮತ್ತೆ ಹಗೆಗೊಂಬನೇನೋ ತ್ರೈ
ಯುಗನೆ ಬಿಡದೆ ಪಾಡಿ ಪೊಗುಳುವ ದಾಸಗೀ
ಬಗೆ ಬಡತನವ್ಯಾಕೊ ಸಂಸಾರದೊಳಗೆ ನಾ
ಲ್ಮೊಗನಯ್ಯ ಅರ್ಥ ಕಾಮಗಳೊಳಗಿಪ್ಪ ಈ
ರ್ವಗೆ ರೂಪವೊಂದಾಗೆ ಆವುದಸಾಧ್ಯವೊ
ಗಗನ ಪಾತಾಳ ವ್ಯಾಪ್ತ ರೂಪನೆ ಕರ
ಮುಗಿವೆ ಗೋಚರಿಸೆಮ್ಮ
ದೃಗಯುಗಗಳಿಗಿಂದು ಯುಗಾವರ್ತ
ಜಗನ್ನಾಥ ವಿಠಲ ನರ
ಮೃಗನಾಗಿ ಸ್ತಂಭದಿಂದೊಡೆದು ಬಂದೊದಗಿದೆ ೬

ಏಕತಾಳ

ಶ್ರೀನಿಧಿ ಪ್ರತಿದೇಹಗಳಲ್ಲಿ ಗತಿ
ನೀನಲ್ಲದೆ ಎಮಗಾರಿಹ ಪರದಲ್ಲಿ
ಆ ನಳಿನಭವ ಭವಾದ್ಯನಿಮೀಷರ ನಿ
ಜಾನಂದವರಿತು ಫಲಗಳ ಕೊಡುವಿ ಮ
ಹಾನುಭಾವ ಎಮ್ಮಭಿಮತ ಸಲಿಸುವು
ದೇನಚ್ಚರಿ ನಿನ್ನರಸಿ ಲಕುಮಿ ಕಡೆ
ಗಾಣಳು ಪರಮೈಶ್ವರ್ಯದ ಪ್ರಾಂತ ಚಿ
ದಾನಂದಮಯನೆ ಪ್ರಣತರ ಅಧಿಕಾ
ರಾನುಸಾರ ಸುಖ ಪಾನೀಯಧೀಯೊಳು ಲೋಲ್ಯಾಡಿಸುತಿಹೆ
ದಾನಿಗಳರಸ ಮನಾದಿಕರಣಗಳ
ಮಾನಿಗಳೊಡೆಯನೆನಿಸುವ ಮುಖ್ಯ

ಪ್ರಾಣ ಪತಿಗೆ ನೂತನ ವಿಜ್ಞಾಪನ
ವೇನುಂಟನುದಿನದಲಿ ಮಾಳ್ಪುದು
ಮಾನವ ಗುರು ಜಗನ್ನಾಥ ವಿಠ್ಠಲ ಕರು
ಣಾನಿಧೆ ಸರ್ವರ ಸುಲಭ ನೀನಲ್ಲದೆ ೭

ಜತೆ

ಚಟುಲ ಕಾರ್ಯಗಳ ಸಂಘಟನೆ ಮಾಡಿಸುವಿ ನಿ
ಷ್ಕುಟಿಲ ಜಗನ್ನಾಥವಿಠ್ಠಲ ದೇವೋತ್ತಮ ॥

೧೯೮

ಧ್ರುವತಾಳ

ವರದ ವರದ ಶೋಭಿತ ವರದಾಯಕ ವರ
ಪರಮ ಪುರುಷೋತ್ತಮ ಅಮಿತ ಮಹಿಮ
ಶರಣಾಗತರ ಕಲ್ಪತರುವೆ ವಿಮಲಾಂಬುರಹ
ನಿರುಪಮ ನಿರ್ದೋಷ ನಿಖಿಳ ನಿಶೇಷಾಶೇಷ ಜನನ
ಮರಣ ರಹಿತ ಲೋಕಮಹಿತ
ಸಿರಿ ಸರಿಸಿಜ ಭವ ವಾಣಿ ವಾಯು
ಗರುಡಶೇಷ ಇಂದ್ರ ದೇವೋತ್ತಂಸ ಹಂಸಾ
ಸ್ವರತ ಸ್ವತಂತ್ರನೆ ಸುಗುಣಭರಿತ ಸೌಭಾಗ್ಯವಂತ
ನಿರುತ ಎನ್ನಂತರಂಗವಾಸ ಶ್ರೀಶಾ
ಹರಿಯೆ ನೀನಲ್ಲದೆ ಅನ್ಯರನರಿಯೆ ಎಮ್ಮ ಸಾಕುವ
ಧೊರಿಯೆ ದೂರುವೆ ಎನ್ನಯ ಮೊರೆಯ ಕೇಳೊ ಕೇಳೊ
ಮರುಳ ಕುವಳೆ ಎನ್ನ ದುರುಳ ವಿಷಯಂಗಳಿ
ಗೆರಗಿಸಿ ಕಂಗೆಡಿಪ ಕರಣಂಗಳು
ಇರುಳು ಹಗಲು ನಿನ್ನ ಪರವಾಗಿರಲಿ ಬಾಹ
ದುರಿತ ಕೋಟಿಗಳಿಗೆ ಅಂಜೆ ನಾನು
ಸುರಚಿ ನಾಮಕ ಜಗನ್ನಾಥ ವಿಠ್ಠಲ ನಿಜ
ಕರುಣಿ ಕೈ ಪಿಡಿದೆನ್ನನುದ್ಧರಿಸ ಬೇಕೊ ೧

ಮಟ್ಟತಾಳ

ಈಶ ಪೂರ್ಣಕಾಮ ದೋಷರಹಿತ ಸ್ವಪ್ರ
ಕಾಶ ವಾರಿಧಿ ಲಕುಮಿ ಶೇಷ ದಿವಿಜರಿಂದ
ನೀ ಸೇವಿತನಾಗಿ ದೇಶ ಕಾಲಗಳಲ್ಲಿ ವಾಸವಾಗಿಯಿಪ್ಪ
ವಾಸುದೇವನೆ ನಿನ್ನ ಉಪಾಸನೆ ಮಾಡದಲೆ
ಕ್ಲೇಶಕೆ ಒಳಗಾದೆ ಪಾಶಧರಾರ್ಚಿತನೆ
ಘಾಸಿಗೊಳಿಸದೆಮ್ಮ ಪೋಷಿಸಬೇಕಿನ್ನು
ವಾಸವಾನುಜ ಜಗನ್ನಾಥ ವಿಠ್ಠಲ ಲೌಕಿಕ
ಆಸೆ ಬಿಡಿಸಿ ನಿನ್ನ ದಾಸನೆನಿಸಿ ಸಲಹೊ ೨

ತ್ರಿವಿಡಿತಾಳ

ಕರಣನಾಮಕನಾಗಿ ಇಂದ್ರಿಯಗಳೊಳು ಮಾನಿ
ಸುರರೊಳು ನೆಲೆಸಿದ್ದು ವಿವಿಧ ವಿಷಯಂಗಳು
ನೆರವಿಗಳೊಳಗಿದ್ದು ನಿನ್ನ ರೂಪವ
ಬೆರೆಸಿ ಅರಿಯಗೊಡದೆ ವಿಹರಿಸುತಿಪ್ಪೆ
ಗುರಿ ಮಾಡಿ ಜೀವರ ಪುಣ್ಯಪಾಪಗಳಿಗೆ
ನಿರಯ ಸ್ವರ್ಗಗಳೀವೆ ಲೀಲೆಯಿಂದ
ಪರಿಪೂರ್ಣ ಕಾಮ ಈ ಪರಿ ಸಂಸಾರದೊಳೆಮ್ಮ
ತಿರುಗಿಸಿ ನೀ ಕ್ರೀಡೆಯಾಡುತಿಪ್ಪೆ
ವಿರಿಜಾನಾಮಕ ಜಗನ್ನಾಥ ವಿಠ್ಠಲ ನಿಜ
ಕರುಣಿ ಕೈಪಿಡಿದೆಮ್ಮನುದ್ಧರಿಸಬೇಕು ೩

ಅಟ್ಟತಾಳ

ಆ ಚತುರ್ಮುಖ ರಜತಾಚಲ ನಿಲಯಾದಿ
ಖೇಚರರಿಗೆ ಮನೋವಾಚಾಮಗೋಚರ
ಪ್ರಾಚೀನ ಕರ್ಮಾಬ್ಧಿ ವೀಚಿಯೊಳಗೆ ಮುಣುಗಿ
ಈ ಚಾರುವರಿವಂಗೆ ಗೋಚರಿಸುವೆ ಮ
ರೀಚನ ಕೋಟಿ ಭವ ಮೋಚಕ ನೀನೆಂದು
ಸೂಚಿಸಿದರು ಶ್ರೀಮದಾಚಾರ್ಯರು

ಈ ಚರಾಚರದಲ್ಲಿ ನೀಚರಿಗೆ ಕರ ಚಾಚದಂತೆ ಮಾಡು
ಯಾಚಿಸುವೆನು ಸವ್ಯಸಾಚಿ ವರದ ಜಗನ್ನಾಥ ವಿಠ್ಠಲ ನಿನ್ನಾ
ಲೋಚನೆ ಕೊಡುವುದು ಸದಾಚಾರಿಗಳ ಕೂಡೆ ೪

ಆದಿತಾಳ

ಅನಘ ನೀನೆದೊಮ್ಮೆ ನೆನೆವ ಮನವ ಬಂಧು
ಜನರ ಕೂಡಿಕೊಂಡು ವನಿತಾದಿ ವಿಷಯಂಗಳು
ಅನುಭವಿಸುತ ತನ್ನ ಮನೆಯೊಳಗಿರಲಾ ಜೀ
ವನೇ ಮುಕ್ತನೂ ಅನಿಮಿಷ ಭಾನು
ತನಯ ಲೋಕದಲಿ ನಾರಾಯಣ
ಎನೆ ನರಕಸ್ಥ ಜನರು ಮುಕ್ತರಹರು
ಘನಮಹಿಮನೆ ನಿನ್ನ ಅನುಶ್ರುತ ಉಳ್ಳವ
ಮನುಜನಾಗಲಿ ಮತ್ತೆ ದನುಜನಾಗಲಿ ತ್ರಿಭು
ವನದೊಳು ಮಾನ್ಯನೊ ಅನುಮಾನ ಇದಕ್ಕಿಲ್ಲ ಪುತ
ರ್ದನ ಶಾಮಕ ಜಗನ್ನಾಥ ವಿಠಲ
ನಿಋುಋುತಿ ವಿಭೀಷಣಗೆ ಒಲಿದಂತೆ ಕಾಯೊ ೫

ಜತೆ

ಭಕ್ತವತ್ಸಲ ಜಗನ್ನಾಥ ವಿಠ್ಠಲ ಮುಕ್ತಾ
ಮುಕ್ತ ನಿಯಾಮಕ ಭಕ್ತನ್ನ ಕೈ ಪಿಡಿಯೊ

೧೯೯

ಧ್ರುವ ತಾಳ

ಶುಭದ ಸುಂದರಕಾಯಾ ವಿಬುಧ ಸನ್ಮುನಿಗೇಯಾ
ಅಬುಜ ಜಾಂಡೋದರ ನಿರ್ವಿಕಾರ
ತ್ರಿಭುವನಾತ್ಮ ಭಾವನ ತ್ರಿಗುಣಾತೀತ ನಿತ್ಯದು
ರ್ಲಭ ದುರ್ವಿಭಾವ್ಯ ದೂರೀಕೃತ ದುರಿತ
ನಭಗವರ ವಾಹನ ನಳಿನ ಲೋಚನ ಚನ್ನ
ಇಭರಾಜವರದ ಇಂದಿರೆ ಅರಸ

ಉಭಯ ಸ್ಥಾನದಿ ವ್ಯಾಪ್ತ ತತ್ತದ್ದೋಷ ನಿರ್ಲಿಪ್ತ
ಸಭೆಯೊಳು ದ್ರೌಪದಿಯ ಕಾಯ್ದ ಕರುಣಿ
ನಿಬಿಡ ಪಂಕದಿ ಶಿಗಬಿದ್ದು ಬನ್ನಬಡುವ
ಅಬಲರ ಉದ್ಧರಿಸೊ ಅಬುಧಿ ಶಯನ
ಸುಭುಜನಾಮಕ ಜಗನ್ನಾಥ ವಿಠ್ಠಲ ನಿನ
ಗಭಿವಂದಿಸುವೆ ಎನಗೆ ಅಭಯವಿತ್ತು ಸಲಹೊ ೧

ಮಟ್ಟತಾಳ

ಪ್ರತಿ ಪ್ರತಿ ಕಲ್ಪಸ್ಥ ಪ್ರತಿ ಪ್ರತಿ ಜೀವರಿಗೆ
ಪ್ರತಿ ಪ್ರತಿ ಯುಗಗಳಲ್ಲಿ ಪ್ರತಿ ಪ್ರತಿ ದೇಹಕ್ಕೆ
ಕೃತ ಕರ್ಮಗಳರಿತು ಪಿತ ಜನನಿ ಭ್ರಾತ
ಸತಿಸುತ ಮುಂತಾದ ಇತರ ಜನರೊಳಿದ್ದು
ಗತಿ ತಪ್ಪಲಿಗೊಡದೆ ಒಬ್ಬೊಬ್ಬರೊಳಗೆ
ಹಿತವನೆ ಪುಟ್ಟಿಸಿ ಪೋಷ್ಯ ಪೋಷಕನೆನಿಸಿ
ವೃತಜ ಜಾಂಡ ಪೊರೆವೆ ನಿರ್ವ್ಯಾಜದಿ ನಿರುತ
ಪತಿತ ಪಾವನ ಜಗನ್ನಾಥ ವಿಠ್ಠಲ ನಿನ್ನ
ದ್ಭುತ ಮಹಿಮೆಯ ಶತಮೋದಗೋಚರವೇ ೨

ತ್ರಿವಿಡಿತಾಳ

ಕಂಥ ಪಟಗಳಿಗೆ ತಂತು ಜೋಡಿಸಿದಂತೆ
ಪಿಂತೆ ಮಾಡಿದ ಕರ್ಮ ತಂತುಗಳಿಂದಲಿ
ಅಂತವಿಲ್ಲದೆ ಜೀವ ತಂತಿಣಿಗಳ ಕಟ್ಟಿ
ಸಂತೆ ನೆರಹಿ ಜನರ ಅಂತರಂಗದಿ ನೆಲೆಸಿ
ಕಾಂತೆಯರೊಡನೆ ರಮಿಸಿ ಸಂತೊಷಗಳನೀವೆ
ಸಂತರಿಗೆ ಸರ್ವ ಕಾಲದಲಿ
ಎಂತೆಂತು ಸೇವಿಪ ಜಂತುಗಳಿಗೆ ಗತಿ
ಪ್ರಾಂತಕ್ಕೆ ಕೊಡುವೆ ಶ್ರೀಕಾಂತ ನೀನು
ಇಂಥ ವ್ಯಾಪಾರ ನೀ ಮಾಡುತ ಇರಲಾಗಿ
ಚಿಂತೆ ಬಡುವುದ್ಯಾಕೊ ಜೀವರಿಗೆ
ಹೊಂತಕಾರಿ ಜಗನ್ನಾಥ ವಿಠ್ಠಲ ಬ್ರಹ್ಮ
ಕಂತುಹರಾದ್ಯರ ಸ್ವಾಂತಕ್ಕೆ ನಿಲುಕೆ ೩

ಅಟ್ಟತಾಳ

ಆರಿಗೆ ಚಿಂತಿಸಲಾರಿಗೋಸುಗ ಪೋಗಿ
ಆರಿಗಾಲ್ಪರಿಯಲಿ ಆರೆನ್ನ ಸಲಹುವ
ರಾರಿವರೆನಗೆ ನಾನಾರು ಜೀವರಿಗೆ ಸ
ರೋರುಹ ಭವನ ಸುಚಾರು ಸೃಷ್ಟಿಯೊಳು
ಭಾರಕ ನಾನೊರ್ವ ಭಾರಕರ್ತನು ನೀನೆ
ಈರೇಳು ಭುವನದ ವ್ಯಾಪಾರ ಮಾಡುವ ಸರ್ವರಾ
ಧಾರ ನೀನಿರೆ ಬಡಿವಾರವ್ಯಾತಕೆ ಎನಗೆ ರ
ಮಾರುಮಣನೆ ಜಗನ್ನಾಥವಿಠ್ಠಲ ಪರಿ
ವಾರ ನಿನ್ನದು ಕಾಯೊ ಕಾರುಣ್ಯನಿಧಿ ಬೇಗ ೪

ಆದಿತಾಳ

ಏಸೇಸು ಕಲ್ಪದಲ್ಲಿ ಶ್ರೀ ಸತ್ಯಾದಿ ವೈಕುಂಠ
ಶ್ರೀ ಸತ್ಯಲೋಕ ಆದಿ ಜಗತ್ತು
ಈಶಾವಾಸ್ಯವೆಂದು ಭೂಸುರೋತ್ತಮರು ಪೇಳ್ವ
ರೈಸೇ ಅನ್ಯಥಾ ಉಂಟೆ ವಾಸುದೇವನೆ ಜೀವ
ರಾಸಿಯೊಳು ನೀನಿದ್ದು ದೋಷಫಲಗಳುಣಿಸ
ಲೋಸುಗ ಸ್ಥೂಲದೇಹ ನೀ ಸಂಬಂಧಿಸಿ ಹೃದಯಾ
ಕಾಶದೊಳು ನೀನಿದ್ದು ಕ್ಲೇಶ ಸುಖಗಳೀವೆ
ನೀ ಸ್ವತಂತ್ರನಾಗಿ ಅಜಭವ ಸುರಾದಿಗಳಾ
ಯಾಸವಿಲ್ಲದೆ ಪೊರೆವೆ ಶಾಶ್ವತ ಮೂರುತಿ
ವಾಸವಾನುಜ ಜಗನ್ನಾಥ ವಿಠ್ಠಲ ನಿನ್ನ
ದಾಸನ ಅಪರಾಧ ಲೇಶ ನೋಡದೆ ಕಾಯೊ ೫

ಜತೆ

ಅನಂತ ಜೀವರು ನಿನ್ನಾಧೀನರೊ ಶ್ರೀ ಜ
ಗನ್ನಾಥವಿಠ್ಠಲ ಪ್ರಪನ್ನವತ್ಸಲ ನೀನು ೬

ತತ್ವ ಸುವಾಲಿಗಳು

೧. ಶ್ರೀ ವಿನಾಯಕನ ಸ್ತೋತ್ರ

೧ ಅಂಬಿಕಾತನಯ ಭೂತಂಬರಾಧಿಪ ಸುರಕ
ದಂಬ ಸಂಪೂಜ್ಯ ನಿರವದ್ಯ । ನಿರವದ್ಯ ನಿನ್ನ ಪಾ
ದಾಂಬುಜಗಳೆನ್ನ ಸಲಹಲಿ ೧

೨ ಕಕುಭೀಶ ನಿನ್ನ ಸೇವಕನ ಬಿನ್ನಪವ ಚಿ
ತ್ತಕೆ ತಂದು ಹರಿಯ ನೆನೆವಂತೆ । ನೆನೆವಂತೆ ಕರುಣಿಸೊ
ಅಕುಟಿಲಾತ್ಮಕನೆ ಅನುಗಾಲ ೨

೩ ಗಜವಕ್ತ್ರ ಷಣ್ಮುಖಾನುಜ ಶಬ್ದ ಗುಣಗ್ರಾಹಕ
ಭುಜಗ ಕಟಿಸೂತ್ರ ಸುಚರಿತ್ರ । ಸುಚರಿತ್ರ ತ್ವತ್ಪಾದಾಂ
ಬುಜಗಳಿಗೆ ಎರಗಿ ಬಿನ್ನೈಪೆ ೩

೪ ವಿತ್ತಪತಿ ಮಿತ್ರಸುತ ಭೃತ್ಯಾನುಭೃತ್ಯನ್ನ ವಿ
ಪತ್ತು ಬಡಿಸುವ ಅಜ್ಞಾನ । ಅಜ್ಞಾನ ಬಿಡಿಸಿ ಮಮ
ಚಿತ್ತ ಮಂದಿರದಿ ನೆಲೆಗೊಳ್ಳೊ ೪

೫ ಮಾತಂಗ ವರದ ಜಗನ್ನಾಥವಿಠಲನ್ನ ಸಂ
ಪ್ರೀತಿಯಿಂದ ಸಾರೂಪ್ಯ । ಸಾರೂಪ್ಯವೈದಿ ವಿ
ಖ್ಯಾತ ಯುತನಾದೆ ಜಗದೊಳು ೫

೨. ಶ್ರೀ ವೆಂಕಟೇಶ ಸ್ತೋತ್ರ

೬ ಶರಣಾಗತರ ಕಲ್ಪತರುವೆ ವೆಂಕಟ ಧರಾ
ಧರನಾಥ ನಿನ್ನ ಚರಣಾಬ್ಜ । ಚರಣಾಬ್ಜಯುಗಳ ಸಂ
ದರುಶನವ ಈಯೊ ಎಂದೆಂದು ೧

೭ ಸ್ವಾಮಿ ತೀರ್ಥ ನಿವಾಸ ಸು
ಸ್ತೋಮ ಸುಜನರಾ ಭಯಹಾರಿ ।
ಭಯಹಾರಿ ಸುರರ ಸಾರ್ವ
ಭೌಮ ನೀ ಸಲಹೆಮ್ಮೆ ೨

೮ ವೆಂಕಟಾಚಲನಿಲಯ ಪಂಕಜೋದ್ಭವನಯ್ಯ
ಶಂಕರಪ್ರೀಯ ಕವಿಗೇಯ । ಕವಿಗೇಯ ನಿನ್ನ ಪದ
ಕಿಂಕರನೆನಿಸೊ ಶುಭಕಾಯ ೩

೯ ಸತ್ಯಸಂಕಲ್ಪ ಜಗದತ್ಯಂತ ಭಿನ್ನಸ
ರ್ವೋತ್ತಮ ಪುರಾಣ ಪುರುಷೇಶ । ಪುರುಷೇಶ ಸತತತ್ವ
ದ್ಭೃತ್ಯನ್ನ ಕಾಯೊ ಕರುಣಾಳೊ ೪

೧೦ ದೇವಶರ್ಮನ ತುತಿಗೆ ನೀನೊಲಿದು ಪಾಲಿಸಿದೆ
ದೇವಕೀಕಂದ ದಯದಿಂದ । ದಯದಿಂದ ಒಲಿದೆನ್ನ
ತಾವಕರೊಳಿಟ್ಟು ಸಲಹಯ್ಯ ೫

೧೧ ಕೃತಿಪತಿಯೆ ನಿನ್ನ ಸಂಸ್ಮೃತಿಯೊಂದಿರಲಿ ಜನ್ಮ
ಮೃತಿ ನರಕ ಭಯವು ಬರಲಂಜೆ । ಬರಲಂಜೆ ಎನಗೆಕೃಸಂ
ತತ ನಿನ್ನ ಸ್ಮರಣೆ ಕರುಣೀಸೊ ೬

೧೨ ಶುಚಿಸದ್ಮನೆ ಮನೋವಚನಾತ್ಮಕೃತ ಕರ್ಮ
ನಿಚಯ ನಿನಗೀವೆ ಸುಚರಿತ್ರ । ಸುಚರಿತ್ರ ಸುಗುಣಗಳ
ರಚನೆ ಸುಖವೀಯೊ ರುಚಿರಾಗ ೭

೧೩ ಹೃದಯದಲಿ ತವರೂಪ ವದನದಲಿ ತವನಾಮ
ಉದರದಲಿ ನೈವೇದ್ಯ ಶಿರದಲ್ಲಿ । ಶಿರದಲ್ಲಿ ನಿರ್ಮಾಲ್ಯ
ಪದಜಲಗಳಿರಲು ಭಯವುಂಟೆ ೮

೧೪ ಸತತ ಸ್ಮರಿಸುತ ನಿನ್ನ ನುತಿಸಿ ಬೇಡಿಕೊಳುವೆ
ಹಿತದಿಂದ ನಿನ್ನ ವಿಜ್ಞಾನ । ವಿಜ್ಞಾನ ನಿಜ ಭಾಗ
ವತರ ಸಂಗವನ್ನೇ ಕರುಣೀಸೊ ೯

೧೫ ಪ್ರಕೃತಿ ಗುಣಗಳ ಕಾರ್ಯ ಸುಖ ದುಃಖ ಮೂಲ ಜಡ
ಪ್ರಕೃತಿಗಭಿಮಾನಿ ಮಹಲಕ್ಷ್ಮಿ । ಮಹಲಕ್ಷ್ಮಿ ಪತಿ ನಿನ್ನ
ಭಕುತ ನಾನಯ್ಯ ಎಂದೆಂದು ೧೦

೧೬ ಪುಣ್ಯಪಾಪಾದಿಗಳು ನಿನ್ನಾಧೀನದೊಳಿರಲು
ಎನ್ನದೆಂದರುಹಿ ದಣಿಸುವಿ । ದಣಿಸುವುದು ಧರ್ಮವೇ
ನಿನ್ನರಿವ ಜ್ಞಾನ ಕರುಣೀಸೊ ೧೧

೧೭ ಋಷಕೇತು ಜನಕ ದುರ್ವಿಷಯಕೊಳಗಾಗಿ ಸಾ
ಹಸ ಪಡುವ ಚಿತ್ತ ಪ್ರತಿದಿನ । ಪ್ರತಿದಿನಗಳಲ್ಲಿ ನಿನ್ನ
ವಶಮಾಡಿಕೊಳ್ಳೊ ವನಜಾಕ್ಷ ೧೨

೧೮ ಇನಿತಿದ್ದ ಬಳಿಕ ಯೋಚನೆ ಯಾಕೆ ಗರುಡವಾ
ಹನನೆ ಮಹಲಕ್ಷ್ಮಿ ನರಸಿಂಹ/ನರಸಿಂಹ ಬಿನ್ನೈಪೆ
ಘನತೆ ನಿನಗಲ್ಲ ಕರುಣಾಳು ೧೩

೧೯ ಸುಲಭರಿನ್ನುಂಟೆ ನಿನ್ನುಳಿದು ಲೋಕತ್ರಯದಿ
ಬಲವಂತರುಂಟೆ ಸುರರೊಳು/ಸುರರೊಳು ನೀನು ಬೆಂ
ಬಲವಾಗಿ ಇರಲು ಭಯವುಂಟೆ ೧೪

೨೦ ಹಯವದನ ಸೃಷ್ಟಿ ಸ್ಥಿತಿಲಯ ಕಾರಣನುನೀನೆ
ದಯವಾಗಲೆಮಗೆ ದುರಿತೌಘ / ದುರಿತೌಘರ್ಗಳು ಬಟ್ಟ
ಬಯಲಾಗುತಿಹವೊ ಸುಕೃತಿಯಿಂದ ೧೫

೨೧ ಕಲುಷವರ್ಜಿತನೆ ಮಂಗಳ ಚರಿತ ಭಕ್ತವ
ತ್ಸಲ ಭಾಗ್ಯವ ಪುಷ ಬಹುರೂಪಿ /ಬಹುರೂಪಿ ಎನಗೆಚಂ
ಚಲ ಬಿಡಿಸಿ ನೀ ಕರುಣೀಸೊ ೧೬

೨೨ ಫಾಲಾಕ್ಷಪ್ರಿಯ ನಿನ್ನ ಲೀಲೆಗಳ ಮರೆಯದಲೆ
ಕಾಲಕಾಲದಲಿ ಸ್ಮರಿಸುವ/ ಸ್ಮರಿಸಿ ಹಿಗ್ಗುವ ಭಾಗ್ಯ
ಪಾಲಿಸೊ ಎನಗ ಪರಮಾತ್ಮ ೧೭

೨೩ ಚತುರವಿಧ ಪುರುಷಾರ್ಥ ಚತುರಾತ್ಮ ನೀನಿರಲು
ಇತರ ಪುರುಷಾರ್ಥ ನಾನೊಲ್ಲೆ । ನಾನೊಲ್ಲೆ ತ್ವತ್ಪಾದ
ರತಿ ಭಾಗ್ಯ ನೀನೆ ಕರುಣೀಸೊ ೧೮

೨೪ ಜಯ ಮತ್ಸ್ಯ ಕೂರ್ಮ ವರಹ ನರಸಿಂಹ
ಜಯತು ವಾಮನನೆ ಭೃಗುಕ ರಮ ।
ಭೃಗುರಾಮರಘುರಾಮ
ಜಯ ಬೌದ್ಧ ಕಲಿಹರ್ತಾ ೧೯

೨೫ ಜಯ ವಿಶ್ವತೈಜಸನೆ ಜಯ ಪ್ರಾಜ್ಞ ತುರ್ಯಾತ್ಮ
ಜಯ ಅಂತರಾತ್ಮ ಪರಮಾತ್ಮ । ಪರಮಾತ್ಮ ಜ್ಞಾನಾತ್ಮ
ಜಯತು ಅನಿರುದ್ಧ ಪ್ರದ್ಯುಮ್ನ ೨೦

೨೬ ಜಯ ಸಂಕರುಷಣನೆ ಜಯ ವಾಸುದೇವನೆ
ಜಯ ಜಯತು ಲಕ್ಷ್ಮೀನಾರಾಯಣಾ ।
ನಾರಾಯಣಾನಂತ
ಜಯತು ಗೋವಿಂದಾಚ್ಯುತ ಶ್ರೀ ಕೃಷ್ಣ ೨೧

೨೭ ಜಯ ಪೂರ್ಣ ಜ್ಞಾವಾತ್ಮ ಜಯ ಪೂರ್ಣೈಶ್ವರ್ಯ
ಜಯ ಪ್ರಭಾ ಪೂರ್ಣ ತೇಜಾತ್ಮ । ತೇಜಾತ್ಮ ನಂದಾತ್ಮ
ಜಯತು ಶಕ್ತ್ಯಾತ್ಮ ಕೃದ್ಧೋಲ್ಕ ೨೨

೨೮ ಜಯ ಜಯತು ಮಹೋಲ್ಕ ಜಯತು ವೀರೋಲ್ಕ
ಜಯ ಜಯತು ದ್ಯುಲ್ಕ ಸಹಸ್ರೋಲ್ಕ । ಸಹಸ್ರೋಲ್ಕ ಜಯ
ಜಯ ಜಯತು ಜಗನ್ನಾಥ ವಿಠಲಾರ್ಯ ೨೩

೨೯ ಶ್ರೀನಿವಾಸನ ಪೋಲ್ವ ದೀನವತ್ಸಲರುಂಟೆ
ದಾನಿಗಳುಂಟೆ ಜಗದೊಳು ।ಜಗದೊಳು
ನೀನೆ ಗತಿಯೆಂದನರರಿಗೆ
ಆನಂದವೀವೆ ಅನುಗಾಲ ೨೪

೩೦ ಒಪ್ಪಿಡಿ ಅವಲಕ್ಕಿಗೊಪ್ಪಿಕೊಂಡು ಮುಕುಂದ
ವಿಪ್ರನಿಗೆ ಕೊಟ್ಟ ಸೌಭಾಗ್ಯ । ಸೌಭಾಗ್ಯ ಕೊಟ್ಟ ನ
ಮ್ಮಪ್ಪಗಿಂತಧಿಕ ದೊರೆಯುಂಟೆ ೨೫

೩೧ ಏನು ಕರುಣಾ ನಿಧಿಯೊ ಶ್ರೀನಿತಂಬಿನಿರಮಣ
ತಾನುಮ್ಮನಗಲಿ ಸೈರಿಸ । ಸೈರಿಸದ ಕರುಣಿಯ
ನಾನೆಂತು ತುತಿಸಿ ಹಿಗ್ಗಲಿ ೨೬

೩೨ ಶ್ರೀನಿಧೆ ನಿನ್ನವರ ನಾನಾಪರಾಧಗಳ
ನೀನೆಣಿಸದವರ ಸಲಹುವಿ । ಸಲಹುವಿ ಸರ್ವಜ್ಞ
ಏನೆಂಬೆ ನಿನ್ನ ಕರುಣಕ್ಕೆ ೨೭

೩೩ ಎನ್ನ ಪೋಲುವ ಭಕ್ತರನ್ನಂತ ನಿನಗಿಹರು
ನಿನ್ನಂಥ ಸ್ವಾಮಿ ಎನಗಿಲ್ಲ । ಎನಗಿಲ್ಲವದರಿಂದ
ಬಿನ್ನೈಪೆನಿನ್ನು ಸಲಹೆಂದು ೨೮

೩೪ ಅಚ್ಯುತನೆ ನಿನ್ನಂಥ ಹುಚ್ಚು ದೊರೆಯನು ಕಾಣೆ
ಕಚ್ಚಿ ಬಯದೊಡ್ಡೆ ಭಕುತರ । ಭಕುತರಪರಾಧಗಳ
ತುಚ್ಛಗೈದವರ ಸಲಹೀದೆ ೨೯

೩೫ ಎನ್ನ ಬಂಧುಗಳೆಲ್ಲ ನಿನ್ನ ದಾಸರು ಸ್ವಾಮಿ
ಮನ್ನಿಸಬೇಕು ಮಹರಾಯ । ಮಹರಾಯ ನೀನಲ್ಲ
ದನ್ಯರು ಸಾಕಲರಿಯರು ೩೦

೩೬ ತಂದೆ ತಾಯಿಯು ಭ್ರಾತ ಸಖ ಗುರು ಪುತ್ರ
ಎಂದೆಂದು ನೀನೆ ಗತಿ ಗೋತ್ರ । ಗತಿಗೋತ್ರ ಇಹಪರಕೆ
ಇಂದಿರಾರಾಧ್ಯ ಸಲಹೆಮ್ಮ ೩೧

೩೭ ಪತಿತ ನಾನಾದರೂ ಪತಿತ ಪಾವನ ನೀನು
ರತಿನಾಥ ನಗಪಾಣಿ । ನಗಪಾಣಿ ನೀನಿರಲು
ಇತರ ಚಿಂತ್ಯಾಕೊ ಎನಗಿನ್ನು ೩೨

೩೮ ನಡೆ ನುಡಿಗಳಪರಾಧ ಒಡೆಯ ನೀನೆಣಿಸಿದರೆ
ಬಡವ ನಾನೆಂತು ಬದುಕಲಿ । ಬದುಕಲಿ ಕರುಣಿಯೆ
ಕಡೆ ಬೀಳ್ವುದೆಂತೊ ಭವದಿಂದ ೩೩

೩೯ ಏಸೇಸು ಜನ್ಮದಲಿ ದಾಸ ನಾ ನಿನಗಯ್ಯ
ಈಶ ನೀನೆಂಬೊ ನುಡಿಸಿದ್ಧ । ನುಡಿಸಿದವಾಗಿರಲು
ದಾಸೀನ ಮಾಡೋದುಚಿತಲ್ಲ ೩೪

೪೦ ಆವ ಯೋನಿಯಲಿರಿಸು ಆವ ಲೋಕದಲಿರಿಸು
ಆವಾಗ್ಯೆ ನಿನ್ನ ನೆನೆವಂತೆ । ನೆನೆವಂತೆ ಕರುಣಿಸೊ
ದೇವಕೀಕಂದ ದಯದಿಂದ ೩೫

೪೧ ಶಿಷ್ಟನೆಂದೆನಿಸೆನ್ನ ಭ್ರಷ್ಟನೆಂದೆನಿಸು ಸ
ರ್ವೇಷ್ಟ ಮೂರುತಿಯೆ ಜನರಿಂದ ।
ಜನರಿಂದ ನುಡಿಸಿದ್ದು
ಇಷ್ಟವೇ ಕಾಣೊ ಎನಗಿನ್ನು ೩೬

೪೨ ಶರಣಪಾಲಕನೆಂಬ ಬಿರುದಿದ್ದ ಮೇಲಿನ್ನು
ಪೊರೆಯದಿರಲೆನ್ನ ನಗರೇನೊ ।
ನಗರೇನೊ ಮೂರ್ಲೋಕ
ದರಸೆ ನಾ ನಿನ್ನ ಬಿಡೆ ಕಂಡ್ಯ ೩೭

೪೩ ಏಸು ಬಗೆಯಾದರೂ ನೀ ಸಲಹಬೇಕೆನ್ನ
ವಾಸವವಂದ್ಯ ವರದೇಶ । ವರದೇಶ ನಿನ್ನವರ
ದಾಸ ನಾನೆಂದು ದಯಮಾಡೊ ೩೮

೪೪ ಪಾಪ ಪುಣ್ಯಗಳು ಬರಲಾಪವೆ ನಿನ್ನುಳಿದು
ಪ್ರಾಪಕನು ನೀನೆ ಇರಲಾಗಿ । ಇರಲಾಗಿ ತಿಳಿಯದುದೆ
ಪಾಪ ತಿಳಿಯುವುದೆ ಮಹಪುಣ್ಯ ೩೯

೪೫ ಜ್ಞಾನಗಮ್ಯನೆ ಕೇಳು ನೀ ತಿಳಿಯದಪರಾಧ
ನಾನೊಮ್ಮೆ ಮಾಡೆ ನಳಿನಾಕ್ಷ ।
ನಳಿನಾಕ್ಷ ನೀ ಕಾಯಿ ಕೊಂ
ಡೆನ್ನ ಮಾಡೊ ಶರಣನ್ನ ೪೦

೪೬ ಎಂತೆಂತು ನೀ ನುಡಿಸಿದಂತೆ ನಾ ನುಡಿವೆನೊ
ಎಂತು ನೀ ನಡೆಸೆ ನಡೆವೇನೊ । ನಡೆವೆನೋ ರಮಾ
ಕಾಂತ ಎನ್ನಲ್ಲಿ ತಪ್ಪೇನೊ ೪೧

೪೭ ನಿಲ್ಲಲು ನಿಲುವೆ ಕುಳಿತು ಮಲಗಿದರೆ ಮಲುಗುವೆನು
ತಿಳಿದು ತಿಳಿದರೆ ತಿಳಿವೆನೊ । ತಿಳಿವನೊ ದೇಹದ ನೆ
ರಳಂತೆ ಇಪ್ಪೆನೊ ಅನುಗಾಲ ೪೨

೪೮ ಸರ್ವ ಸ್ವತಂತ್ರ ನೀನೊಬ್ಬಲ್ಲದೆ ಮತ್ತಿ
ನ್ನೊರ್ವರುಂಟೆ ಜಗದೊಳು । ಜಗದೊಳು ಅಜಾದಿಗಳು
ದರ್ವಿಯಂದದಲಿ ಚರಸೋದು ೪೩

೪೯ ಸರ್ವೇಶ ಸರ್ವಜ್ಞ ಸರ್ವಾಂತರಾತ್ಮಕನೆ
ಶರ್ವಾದಿವಂದ್ಯ ಶಿವರೂಪಿ । ಶಿವರೂಪಿ ಸಜ್ಜನರ
ಸರ್ವಕಾಲದಲ್ಲಿ ಸಲಹಯ್ಯ ೪೪

೫೦ ಗುಣಕಾಲ ಕರ್ಮಗಳ ಮನೆಮಾಡಿ ಜೀವರಿಗೆ
ಉಣಿಸುವಿ ನೀನೆ ಸುಖದುಃಖ । ಸುಖದುಃಖ ಮಿಶ್ರಫಲ
ಉಣಿಸಿ ಸರ್ವತ್ರ ಬೆಳೆಗುವಿ ೪೫

೫೧ ನಿಖಿಳಾಗಮೈಕವೇದ್ಯ ಅಕಳಂಕ ಸುಚರಿತ್ರ
ವಿಖಸನಾರಾಧ್ಯ ಸುಖರೂಪ । ಸುಖರೂಪ ನಿನ್ನಂಥ
ಸಖನಿರಲು ದುರಿತ ಬರಲುಂಟೆ ೪೬

೫೨ ಎಲ್ಲಿ ಈಶತ್ವ ಮತ್ತೆಲ್ಲಿಹುದು ಕರ್ತೃತ್ವ
ಹುಲ್ಲು ಮನುಜರಿಗೆ ಕರ್ತೃತ್ವ । ಕರ್ತೃತ್ವವೆಂಬುದು
ಎಲ್ಲಿಹುದೊ ಬರಿದೆ ಅಪವಾದ ೪೭

೫೩ ಹಗಲು ಇರುಳು ಸ್ಮರಣೆ ಒದಗುತಿರೆ ಜಿಹ್ವೆಯೊಳು
ಬಗೆಯಲಿನ್ನುಂಟೆ ಸಾಧನಗಳು । ಸಾಧನಗಳೇತಕ್ಕೆ
ಜಗದೊಳಗೆ ಇನ್ನುಂಟೆ ೪೮

೫೪ ಎನ್ನಂಥ ಭಕುತರು ಅನಂತ ನಿನಗಿಹರು
ನಿನ್ನಂಥ ಸ್ವಾಮಿಯೆನಗಿಲ್ಲ । ಎನಗಿಲ್ಲದ್ದರಿಂದ
ಬಿನ್ನೈಪೆ ನಿನ್ನ ಸಲಹೆಂದು ೪೯

೫೫ ಎನ್ನ ಪೋಲುವ ಪತಿತರಿನ್ನಿಲ್ಲ ಪತಿತ ಪಾ
ವನರೊಳಗೆ ನಿನಗೆ ಸರಿಯಿಲ್ಲ ।
ಸರಿಯಿಲ್ಲ ಲೋಕದೊಳು
ಅನ್ಯಭಯ ನಮಗೆ ಮೊದಲಿಲ್ಲ ೫೦

೫೬ ಮನವಚನ ಕಾಯದಿಂದನುಭವಿಪ ವಿಷಯಗಳ
ನಿನ್ನಗರ್ಪಿಸುವೆನೊ ನಿಖಿಳೇಶ । ನಿಖಿಳೇಶ ನಿನ್ನ ಪಾ
ವನ ಮೂರ್ತಿ ತೋರಿ ಸುಖವೀಯೊ ೫೧

೫೭ ಭೋಜ್ಯವಸ್ತುಗಳಲ್ಲಿ ಭೋಜ್ಯನಾಮಕನಾಗಿ
ತಜ್ಜನ್ಯರಸವ ಜನರಿಗೆ । ಜನರಿಗೆ ಉಂಡುಣಿಸಿ
ನಿರ್ಜನರರಸ ಸುಖವೀಯೊ ೫೨

೫೮ ಸದಸದ್ವಿಲಕ್ಷಣನೆ ಅಧಿಭೂತ ಅಧ್ಯಾತ್ಮ
ಅಧಿದೇವ ರಸ ರಸರೂಪಿ । ರಸರೂಪಿ ನೀನೆ ಸ
ನ್ಮೋದ ಪುಷ್ಟಿ ತುಷ್ಟಿ ಕೊಡುತಿಪ್ಪಿ ೫೩

೫೯ ಅನ್ನದನ್ನಾದನ್ನ ಸಪ್ತಾನ್ನ ಕಲ್ಪನೆಂಬ
ಅನ್ನಮಯ ರೂಪ ಅನಿರುದ್ಧ । ಅನಿರುದ್ಧ ಜಗಕ್ಕೆ ದಿ
ವ್ಯಾನ್ನವನೆ ಕೊಟ್ಟು ಸಲಹುವಿ ೫೪

೬೦ ಪ್ರಾಣಪಂಚಕರೂಪ ಪ್ರಾಣಾಂತರಾತ್ಮಕನೆ
ಪ್ರಾಣಿಗಳೊಳಗಿದ್ದು ಪ್ರತಿದಿನ । ಪ್ರತಿದಿನ ಪ್ರದ್ಯುಮ್ನ
ಪ್ರಾಣಮಯನೆಂದು ಕರೆಸುವಿ ೫೫

೬೧ ಮನದೊಳಗೆ ನೀನಿದ್ದು ಮನವೆಂದೆನಿಸಿಕೊಂಡು
ಮನದ ವೃತ್ತಿಗಳ ಸೃಜಿಸುವಿ । ಸೃಜಿಸುವಿ ಸಂಕರುಷಣನೆ
ನಿನ್ನ ಕರುಣಕ್ಕೆ ಎಣೆಗಾಣೆ ೫೬

೬೨ ಸನ್ನಿಧಾನವು ನಿನ್ನದೆನ್ನಲ್ಲಿ ಇರಲಾಗಿ
ಮುನ್ನಿಸುತ್ತಿಹರು ಜನರೆಲ್ಲ । ಜನರೆಲ್ಲ ನಿನ್ನ ಕಾ
ರುಣ್ಯ ಕಾರಣವೊ ಕಮಲಾಕ್ಷ ೫೭

೬೩ ನಾನಾ ಪದಾರ್ಥಧಲಿ ನಾನಾ ಪ್ರಕಾರದಲಿ
ನೀನಿದ್ದು ಜಗವ ನಡೆಸುವಿ । ನಡೆಸುವಿ ನೀನೆ
ನಾನೆಂಬೊ ನರರಿಗೆ ಗತಿವುಂಟೆ ೫೮

೬೪ ಸೇವ್ಯ ಸೇವಕರಲ್ಲಿ ಸೇವ್ಯ ಸೇವಕನಾಗಿ
ಅವ್ಯಕ್ತನಾಗಿ ನೆಲೆಸಿಪ್ಪಿ । ನೆಲೆಸಿಪ್ಪಿ ಸರ್ವದಾ
ಸೇವ್ಯ ನಾ ನಿನಗೆ ಸರಿಗಾಣೆ ೫೯

೬೫ ಹಗಲಿರುಳು ಮಾತು ಮಾತಿಗೆ ನಿನ್ನ ನಾಮ ನಾ
ಲಿಗೆ ತುದಿಯಲಿಪ್ಪ ಬುಧರಿಗೆ । ಬುಧರಿಗೆ ಜನರು ಮೈ
ಲಿಗೆ ಎನಬಹುದು ತಿಳಿಯಾದೆ ೬೦

೬೬ ವಿಧಿನಿಷೇಧಗಳೆಂಬುದಧಮಾಧಿಕಾರಿಗ
ಲ್ಲದೆ ನಿತ್ಯ ನಿನ್ನ ನಾಮ ಸರ್ವತ್ರ । ಸರ್ವತ್ರ ಚಿಂತಿಪ
ಬುಧರಿಗಿನ್ನುಂಟೆ ಜಗದೊಳು ೬೧

೬೭ ಜಲದೊಳಗೆ ಮಿಂದು ನಿರ್ಮಲರಾದೆವೆಂದು ತ
ಮ್ಮೊಳು ತಾವೆ ಹಿಗ್ಗಿ ಸುಖಿಸೋರು ।
ಸುಖಿಸೋರು ಪರಮಮಂ
ಗಳ ಮೂರ್ತಿ ನಿನ್ನ ತಿಳಿಯಾದೆ ೬೨

೬೮ ಜಡಭೂತ ಜಲ ಜನರ ಮಡಿ ಮಾಡಲಾಪುದೆ
ಜಡಧಿ ಮಂದಿರನ ಸಿರಿನಾಮ । ಸಿರನಾಮ ಮೈಲಿಗೆ
ಕೆಡಿಸಿ ಮಂಗಳವ ಕೊಡದೇನೊ ೬೩

೬೯ ಓಡಿ ಹೋಗುವ ಮಡಿಯ ಮಾಡಿ ದಣಿಯಲು ಬೇಡ
ನೋಡು ಸರ್ವತ್ರ ಹರಿರೂಪ । ಹರಿರೂಪ ನೋಡಿ ಕೊಂ
ಡಾಡಿ ನಲಿದಾಡೊ ಮನವುಬ್ಬಿ ೬೪

೭೦ ಮರುಳು ಮನವೇ ಕೇಳು ಮರೆವರೇ ಹರಿನಾಮ
ಕರುಣಾಬ್ಧಿ ಅನುಗಾಲ । ಅನುಗಾಲ ಸಲಹುತಿರೆ
ಬರಿದೆ ಚಿಂತ್ಯಾಕೊ ನಿನಗಿನ್ನು ೬೫

೭೧ ಮನವೆ ಆಲೋಚಿಸಿಕೊ ನಿನಗಿದ್ದ ಚಿಂತೆ ನ
ಮ್ಮನಿರುದ್ಧಗಿಲ್ಲೆ ಅನುಗಾಲ । ಅನುಗಾಲ
ಅನಿಮಿಷರ ಸಲಹುವ
ಬಿನುಗು ಮಾನವರ ಬಿಡುವಾನೆ ೬೬

೭೨ ಬಂಡು ಮನವೆ ಕೇಳು ಕಂಡ ಕಂಡವರಿಗೆ
ಆಂಡಲೆದರೇನು ಪುರುಷಾರ್ಥ ।
ಪುರುಷಾರ್ಥ ಸ್ವಾಮಿ ಪದ
ಪುಂಡರೀಕವನೆ ನೆರೆನಂಬು ೬೭

೭೩ ಅಶನವಸನಗಳೀವ ವಸುದೇವ ಸುತನಿರಲು
ಪುಸಿಯಾಡಿ ಬದುಕೊ ನರರಿಗೆ । ನರರಿಗಾಲ್ಪರಿದರೆ
ಹಸಿವೆ ಅಡಗುವುದೆ ಎಲೊ ಜೀವ ೬೮

೭೪ ಹಿಂದೆ ಜನ್ಮಾಂತರದಿ ತಂದು ಕೊಟ್ಟವರಾರು
ಇಂದು ಮುಂದೀವ ದೊರೆಯಾರು ।
ದೊರೆಯಾರು ಎಲೆಮನವೆ
ಮಂದಮತಿಯಾಗಿ ಕೆಡಬೇಡ ೬೯

೭೫ ತಂದೆ ಮಕ್ಕಳನು ಪೊರೆವಂದದಲಿ ಶ್ರೀಕಾಂತ
ಎಂದೆಂದು ತನ್ನ ಭಕುತಾರ । ಭಕುತಾರ ಸಲಹುವ
ಸಂದೇಹವ್ಯಾಕೊನಿನಗಿನ್ನು ೭೦

೭೬ ಏಸು ಕಲ್ಪದಲ್ಲು ನಮ್ಮ ಸ್ವಾಮಿ ಜೀವ
ರಾಶಿಗಳಿಗನ್ನ ಕೊಡುತಿಪ್ಪ । ಕೊಡುತಿಪ್ಪ ಹರಿಯ ಉ
ದಾಸೀನ ಮಾಡಿ ಬಿಡುವಾರೆ ೭೧

೭೭ ಅಬುಜಭವಾಂಡದೊಳು ಒಂಭತ್ತು ವಿಧದಲ್ಲಿ
ಅಂಬುಜಾಂಬಕನ ವಿಭೂತಿ । ವಿಭೂತಿ ಮೂರ್ತಿಗಳ
ಕಾಂಬುವನೆ ಯೋಗಿ ಜಗದೊಳು ೭೨

೭೮ ಕರ್ತೃಕರ್ಮಗಳಲ್ಲಿ ಕಾರಣಕ್ರಿಯೆಗಳಲ್ಲಿ
ನಿತ್ಯ ನೀನಿದ್ದು ನಡೆಸುವಿ । ನಡೆಸುವಿ ಜೀವರ ಕೃತ
ಕೃತ್ಯರನು ಮಾಡಿ ಸಲಹುವಿ ೭೩

೭೯ ನಿನಗೆ ದಾಸನು ನಾನು ಎನಗೆ ದಾತನು ನೀನು
ಇನಿತಿದ್ದ ಬಳಿಕ ಅಧಮರ । ಅಧಮ ಮಾನವರ
ನನುಸರಿಸಲ್ಯಾಕೊ ಅನುಗಾಲ ೭೪

೮೦ ಇಂದಿರಾಪತಿ ನೀನು ಮಂದಭಾಗ್ಯನು ನಾನು
ವಂದ್ಯನೊ ನೀನು ಸುರರಿಂದ । ಸುರರಿಂದ ನರರಿಂದ
ನಿಂದ್ಯನೋ ನಾನು ಜಗದೊಳು ೭೫

೮೧ ನಿತ್ಯಬದ್ಧನು ನಾನು ನಿತ್ಯ ಮುಕ್ತನು ನೀನು
ಭೃತ್ಯನೋ ನಾನು ಪ್ರಭು ನೀನು । ಪ್ರಭು
ನೀನು ಮೂಲೋ೯ಕ
ವ್ಯಾಪ್ತನೂ ನೀನು ಅಣು ನಾನು ೭೬

೮೨ ಭೂಮಂಡಲವೆ ಪೀಠ ವ್ಯೋಮ ಮಂಡಲ ಛತ್ರ
ಸೋಮ ಸೂರ್ಯರೇ ಮಹದೀಪ । ಮಹದೀಪ ನಕ್ಷತ್ರ
ಸ್ತೊಮವೇ ನಿನಗೆ ಉಪದೀಪ ೭೭

೮೩ ಮಳೆಯೆ ಮಜ್ಜನವು ದಿಗ್ವಲಯಂಗಳೇ ವಸನ
ಬೆಳೆವ ಬೆಳಸುಗಳೆ ನೈವೇದ್ಯ । ನೈವೇದ್ಯ ಜನರ ಕಂ
ಗಳ ಕಾಂತಿ ನಿನಗೆ ಆರಾರ್ತಿ ೮

೮೪ ತರುಗಳೇ ಚಾಮರವ ಮಾಡುವೆನು ನಾ ನಿನಗೆ
ಶರಧಿ ಘೋಷಗಳೆ ಮಹವಾದ್ಯ । ಮಹವಾದ್ಯ ಜೀವರ
ಸ್ವರಗಳೇ ನಿನಗೆ ಸಂಗೀತ ೭೯

೮೫ ಪಾತಾಳ ಪಾದುಕೆ ವಿಧಾತೃಲೋಕವೆ ಮಕುಟ
ಶ್ವೇತದ್ವೀಪವೆ ನಿನಗೆ ಒಡ್ಯಾಣ । ಒಡ್ಯಾಣ ವೈಕುಂಠ
ಆತಪತ್ರವೇ ನಿನಗೀವೆ ೮೦

೮೬ ನಡೆವುದೇ ಹರಿಯಾತ್ರೆ ನುಡಿವುದೇ ಹರಿನಾಮ
ಕುಡಿವ ನೀರುಗಳೆ ಅಭಿಷೇಕ । ಅಭಿಷೇಕ ದಿನದಿನದಿ
ಒಡಲಿಗುಂಬನ್ನ ನೈವೇದ್ಯ ೮೧

೮೭ ಮುನ್ನಾವ ಜನ್ಮದ ಪುಣ್ಯ ಫಲಿಸಿತೊ ಎನಗೀಗ
ನಿನ್ನಂಥ ಸ್ವಾಮಿಯೆನಗಾದೆ ।ಎನಗಾದೆಯದರಿಂದ
ಧನ್ಯರೋ ನಮ್ಮ ಹಿರಿಯಾರು ೮೨

೮೮ ಎನ್ನೊಳಿಪ್ಪ ಮಹಾತ್ಮ ಅನ್ಯರೊಳು ನೀನಿದ್ದು
ಅನ್ಯೋನ್ಯವಾಗಿ ಮಮತೆಯ । ಮಮತೆಯ ಕಲ್ಪಿಸಿ
ನಿನ್ನೊಳು ನೀನೆ ರಮಿಸುವಿ ೮೩

೮೯ ಮನದೊಳಗೆ ಹರಿಚಿಂತನೆಯುಳ್ಳ ಮಾನವಗೆ
ಮನೆಯಾದರೇನು ವನವೇನು । ವನವೇನು ಸತತದು
ರ್ಜನರ ಸಂಗದೊಳಿರಲೇನು ೮೪

೯೦ ತತ್ತತ್ಪದಾರ್ಥದೊಳು ತತ್ತದಾಕಾರನಾಗಿ
ಎತ್ತ ನೋಡಿದರು ಇರುತಿಪ್ಪ । ಇರುತಿಪ್ಪ ಶ್ರೀಹರಿಗೆ
ಭೃತ್ಯನೆಂಬುವುದೇ ಬಹುಧರ್ಮ ೮೫

೯೧ ಶ್ರೀ ಯರಸನೇ ನಿನ್ನ ಮಾಯಕ್ಕೆ ಎಣೆಗಾಣೆ
ಹೇಯ ವಿಷಯಗಳ ಜನರಿಗೆ । ಜನರಿಗುಣಿಸಿ ಉಪಾ
ದೇಯವೆಂತೆಂದು ಸುಖಿಸುವಿ ೮೬

೯೨ ಶ್ರೀ ಪ್ರಾಣನಾಯಕನೆ ನೀ ಪ್ರಾಣಿಗಳ ಮ್ಯಾಲೆ
ಸುಪ್ರೀತನಾಗಿ ಸಲಹೆಂದು । ಸಲಹೆಂದು ಸರ್ವದಾ
ನಾ ಪ್ರಾರ್ಥಿಸುವೆನೊ ಪರಮಾತ್ಮ ೮೭

೯೩ ಅನಘ ರೋಗಘ್ನ ಎಂದಿನಿತು ಮಂಗಳನಾಮ
ನೆನೆಯೆ ದುರಿತಗಳು ಬರಲುಂಟೆ । ಬರಲುಂಟ ಜೀವರಾ
ಧನ್ವಂತ್ರಿ ದಯವಾಗೊ ೮೮

೯೪ ಬಿಂಬ ನೀ ಎನಗೆ ಪ್ರತಿಬಿಂಬ ನಾ ನಿನಗೆ ಕ್ಷೀ
ರಾಂಬುಧಿಶಾಯಿ ನರಸಿಂಹ । ನರಸಿಂಹ ಎನಗಿರಲು ವಿ
ಳಂಬ ಇನ್ಯಾಕೊ ಕರುಣಕ್ಕೆ ೮೯

೯೫ ನಿನಗಸಮ್ಮತವಾದ ಅನಿಮಿಷೇಶನ ಲೋಕ
ಎನಗಿತರೇನು ಯದುನಾಥ । ಯದುನಾಥ ನೀನಿತ್ತ
ಘನನರಕ ಎನಗೆ ಪುರುಷಾರ್ಥ ೯೦

೯೬ ನಿನ್ನ ಕೊಂಡಾಡಿದಂತನ್ಯರನು ಕೊಂಡಾಡೆ
ನಿನ್ನ ನಾ ನೋಡ ಬಯಸುವೆ । ಅಪರಾಧ ಸ್ವೀಕರಿಸಿ
ಎನ್ನ ಕುಲಸ್ವಾಮಿ ಸುಖವೀಯೊ ೯೧

೯೭ ನೀರು ತೃಣವೀಯೆ ಗೋ ಕ್ಷೀರ ಕರೆವಂದದಲಿ
ಸೂರಿಗಳು ಮಾಳ್ಪ ಅಪರಾಧ । ಅಪರಾಧ ಸ್ವೀಕರಿಸಿ
ಸಾರೂಪ್ಯವೀವೆ ಸರ್ವಜ್ಞ । ೯೨

೯೮ ನಿನ್ನ ಸಂಕಲ್ಪಕ್ಕೆ ಅನ್ಯಥಾವಾಗಿಪ್ಪ
ಪುಣ್ಯ ಕರ್ಮಗಳ ನಾನೊಲ್ಲೆ । ನಾನೊಲ್ಲೆ ಶ್ರೀ ಹರಿಯೆ
ಮನ್ನಿಸೈ ನಿನ್ನ ಮನದಂತೆ ೯೩

೯೯ ನಿನ್ನ ತುತಿಪುದಕಿಂತ ಪುಣ್ಯ ಬೇರೇನಯ್ಯಾ
ನಿನ್ನಂಘ್ರಿ ಭಜನೆ ಸುಖಕ್ಕಿಂತ ।
ಸುಖಕ್ಕಿಂತ ಪುರುಷಾರ್ಥ ಬೇರೆ
ಇನ್ನುಂಟೆ ಸ್ವಾಮಿ ಜಗದೊಳು ೯೪

೧೦೦ ವೇದ ಶಾಸ್ತ್ರಗಳು ನಿನಗಾದರೋಪಚಾರ
ಹಾದಿ ನಡೆವೋದೆ ನರ್ತನ ।
ನರ್ತನವು ಸಜ್ಜನರ ವಾದ ಸಂ
ವಾದಗಳೆ ನಿನಗೆ ಉಯ್ಯಾಲೆ ೯೫

೧೦೧ ಮೀನು ಮೊಸಳೆಗಳು ತಪ್ಪೇನು ಜಲದೊಳಗಿಹವು
ಸ್ನಾನ ಫಲವ್ಯಾಕೆ ಬರಲಿಲ್ಲ । ಬರಲಿಲ್ಲ ಜಲಚರ
ಪ್ರಾಣಿಗಿನ್ನಜ್ಞರಿಗೆ ಕೊರತೇನೊ ೯೬

೧೦೨ ಏನು ಮಾಡುವ ಕರ್ಮ ನೀನೆ ಮಾಡಿಪುದೆಂಬ
ಜ್ಞಾನವೇ ಎನಗೆ ಜಿತವಾಗಿ । ಜಿತವಾಗಿ ಇರಲಿ ಮತ್ತೇನು
ನಾನೊಲ್ಲೆ ನಿನ್ನಾಣೆ ೯೭

೧೦೩ ಏಕಾದಶೇಂದ್ರಿಯಗಳೇಕ ಪ್ರಕಾರದಲಿ
ಏಕೈಕನಾಥ ನಿನ್ನಲ್ಲಿ । ನಿನ್ನಲ್ಲಿ ಶ್ರುತಿಗೊಳಲು
ವೈಕುಂಠಲೋಕ ನಾನೊಲ್ಲೆ ೯೮

೧೦೪ ಸತ್ಯಸಂಕಲ್ಪತ್ವ ಚಿತ್ತಾನುಸಾರದಲಿ ಮ
ಚ್ಚಿತ್ತ ವರ್ತಿಸಲಿ ಸರ್ವತ್ರ । ಸರ್ವತ್ರ ಸರ್ವದಾ
ಮತ್ತೊಂದು ಲಾಭ ನಾನೊಲ್ಲೆ ೯೯

೧೦೫ ಮಾನ ಧನ ವನಿತೆ ಸಂತಾನಾದಿಗಳ ಬಯಸಿ
ಸ್ನಾನಜಪ ತತಿಹೋಮ ಉಪವಾಸ ।
ಉಪವಾಸ ವ್ರತನೇಮ
ಏನು ಮಾಡಿದರು ಹರಿಮೆಚ್ಚ ೧೦೦

೧೦೬ ಮೃತ್ಯುಂಜಯಾರಾಧ್ಯ ಮೃತ್ಯುಮೃತ್ಯು ಮರಕಂ
ಡಾತ್ಮಜ ಪ್ರೀಯ ಕವಿಗೇಯ । ಕವಿಗೇಯ ಸಜ್ಜನರ ಅಪ
ಮೃತ್ಯು ಪರಿಹರಿಸಿ ಸಲಹಯ್ಯ ೧೦೧

೧೦೭ ಹರಿಯೆ ನೀನೊಳಗಿದ್ದು ಪರದಾರಧನಗಳಲಿ
ಎರಗೀಸಿ ಮನವ ಮರುಗೀಸಿ । ನುಡಿ ಸಿದ್ಧವಾಗಿರಲು
ಕರುಣಿ ನಿನಗಿದು ಉಚಿತಾವೆ ೧೦೨

೧೦೮ ಗೋವಿಂದನೇ ಬಂದು ಆವಾವ ಕಾಲದಲಿ
ಕಾವನು ಎಂಬ ನುಡಿಸಿದ್ಧ । ನುಡಿಸಿದ್ಧವಾಗಿರಲು
ಆವ ಭಯಕಂಜೆ ಎಂದೆಂದು ೧೦೩

೧೦೯ ಒಳಹೊರಗೆ ನೀನಿದ್ದು ತಿಳಿಯಗೊಡದಲೆ ಜಗದಿ
ಹಲವು ಕರ್ಮಗಳ ನೀ ಮಾಡಿ । ನೀ ಮಾಡಿ
ಮಾಡಿಸುತ ಫಲ
ಗಳನೀವೆ ಜನರೀಗೆ ೧೦೪

೧೧೦ ದೇವಗಂಗೆಯ ತಡಿಯ ಭಾವಿ ತೋಡುವನಂತೆ
ದೇವೇಶನಿರಲು ತಿರಿತಿಂಬ । ತಿರಿತಿಂಬ ರಕ್ಕಸರ
ದೇವರೆಂತೆಂದು ಕೆಡದೀರು ೧೦೫

೧೧೧ ಎಲ್ಲರಂತೆ ಲಕ್ಷ್ಮೀ ನಲ್ಲನೆಂತೆನಬೇಡಿ
ಬಲ್ಲಿದನು ಕಂಡ್ಯ ಭಗವಂತ । ಭಗವಂತ ನಿನ್ನ ಮಹಿಮೆ
ಬಲ್ಲವರಿಲ್ಲೊ ಜಗದೊಳು ೧೦೬

೧೧೨ ನೀನಲ್ಲದನ್ಯರಿಗೆ ನಾನೆರಗೆನೊ ಸ್ವಾಮಿ
ದಾನವಾಂತಕನೆ ದಯವಂತ । ದಯವಂತ ಎನ್ನೊಳಭಿ
ಮಾನ ನಿನಗಿರಲು ದಯವಾಗೊ ೧೦೭

೧೧೩ ಲೆಕ್ಕವಿಲ್ಲದೆ ಭೂಮಿ ತುಕ್ಕಿದರೆ ಫಲವೇನು ವಿ
ರಕ್ತ ನಾದರೇನು ಫಲವೇನು । ಫಲವೇನು ಜಗದೀಶ ನಿನ್ನ
ಭಕ್ತರನು ಕಂಡು ಭಜಿಸಾದೆ ೧೦೮

೧೧೪ ಅನ್ನ ಇಲ್ಲವು ಎಂದು ಅನ್ಯರನು ಬೇಡದೆ
ಅನ್ನಮಯನಾದ ಅನಿರುದ್ಧ । ಅನಿರುದ್ಧ ದೇವರ ಪ್ರ
ಸನ್ನೀಕರಿಸಿದರೆ ಫಲವೀವ ೧೦೯

೧೧೫ ಪ್ರಾಣಭಯ ಬಂದಾಗ ಕಾಣದಲೆ ಹಲುಬದಿರು
ಪ್ರಾಣಮಯನಾದ ಪ್ರದ್ಯುಮ್ನ । ಪ್ರದ್ಯುಮ್ನ ಮೂಜಗ
ತ್ರಾಣನಾಗಿನ್ನು ಸಲಹುವ ೧೧೦

೧೧೬ ಕರಿರಾಜವರದನೆ ನಿನ್ನ ಕರುಣದೊಳಗಿನ ಕಾಯ
ಶರಧಿ ದಾಟುವಾ ತರನ್ಯಾಂಗೆ ।
ತರನ್ಯಾಂಗೆ ಈ ಲೋಕಾ ಜ
ನರಿಂದ ಲೇಶಾ ಸುಖವಿಲ್ಲ ೧೧೧

೧೧೭ ಗೋಳಕಗಳೆಲ್ಲ ನಿನಗಲಯವು ಕರಣಗಳು
ಸಾಲು ದೀಪಗಳು । ದೀಪಗಳು ತದ್ಭೋಗ್ಯ ವಿಷಯಗಳ
ಮೇಳನವೆ ನಿನಗೆ ಮಹಪೂಜೆ ೧೧೨

೧೧೮ ನಿನ್ನ ವಿಸ್ಮೃತಿ ಕೊಡುವ ಪುಣ್ಯ ಕರ್ಮಗಳೊಲ್ಲೆ
ನಿನ್ನನೇ ನೆನೆವ ಮಹಪಾಪ । ಮಹಪಾಪ ಕರ್ಮಗಳು
ಜನ್ಮ ಜನ್ಮದಲಿ ಇರಲಯ್ಯ ೧೧೩

೧೧೯ ನಿರ್ದೋಷಿ ಗುಣಪೂರ್ಣ ಸ್ವರ್ಧುನೀಜನಕ ಗೋ
ವರ್ಧನೋದ್ಧಾರ ಗಂಭೀರ । ಗಂಭೀರ ಖಳರ ಕುಲ
ಮರ್ದನನೆ ನೀ ಎನಗೆ ದಯವಾಗೊ ೧೧೪

೧೨೦ ನಾರಾಯಣ ಅನಿರುದ್ಧ ಈರೈದು ಕರಣದಿ ವಿ
ಹಾರಗೊಳುತಿರ್ಪ ಪ್ರದ್ಯುಮ್ನ ।
ಪ್ರದ್ಯುಮ್ನ ಸಂಕರ್ಷಣನೆ ನೀ
ವಿರಾಜಿಸುವಿ ಜಗದೊಳು ೧೧೫

೧೨೧ ವಾಸುದೇವನೆ ಜೀವರಾಶಿಗಳೊಳಗಿದ್ದು ಅವ
ಕಾಶ ಕೊಡುತಿಪ್ಪೆ ವಿಷಯಕ್ಕು । ವಿಷಯಗಳನುಂಡು ಸಂ
ತೋಷ ಪಡಿಸುವಿ ಭಕುತರ ೧೧೬

೧೨೨ ಅಣುವಿಗಣುತರನಾಗಿ ಘನಕೆ ಘನತರವಾಗಿ
ಅಣು ಮಗತ್ತುಗಳ ದೆಸೆಯಿಂದ । ದೆಸೆಯಿಂದ ನೀ ವಿಲ
ಕ್ಷಣನೆನಿಸಿಕೊಂಬ ಶ್ರುತಿಯೊಳು ೧೧೭

೧೨೩ ಏನು ಕೊಟ್ಟರು ಕೊಡು ಶ್ರೀನಿವಾಸನೆ ನಿನ್ನ
ಧೀನದವನಯ್ಯ ಎಂದೆಂದು । ಎಂದೆಂದು ಸುಖದುಃಖ
ಮಾನಾದಿಗಳಿಗೆ ಪ್ರಭು ನೀನು ೧೧೮

೧೨೪ ವಿಹಿತ ಕರ್ಮಗಳಿಂದ ಅಹಿಕಪಾರತ್ರಿಕಗ
ಳಹವು ಜೀವರಿಗೆ ಸರ್ವತ್ರ । ಸರ್ವತ್ರ ಸಜ್ಜನರ
ಸಹವಾಸವೆಂತೊ ದೊರೆವೋದು ೧೧೯

೧೨೫ ದ್ರುಹಿಣಪಿತ ನಿನ್ನವರ ಸಹವಾಸ ನಿನ್ನನು
ಗ್ರಹವೆಂದು ತಿಳಿವೆ ಅನುಗಾಲ । ಅನುಗಾಲ ಸುಖವೀವ
ಮಹದಾದಿಲೋಕ ನಾನೊಲ್ಲೆ ೧೨೦

೧೨೬ ನೋಕನೀಯನೆ ನಿನ್ನ ಶ್ರೀಕಮಲಜಾದಿಗಳು
ಏಕದೇಶವನು ಅರಿಯರೊ । ಅರಿಯದಾ ಮಹಿಮೆಗಳು
ಈ ಕುಮತಿ ಜನರು ತಿಳಿವ್ರೋರೇ ೧೨೧

೧೨೭ ಎನ್ನಪ್ಪ ಎನ್ನಮ್ಮ ಎನ್ನಯ್ಯ ಎನ್ನರಸ
ಎನ್ನ ಕುಲದೈವ ಸುಖದೋರೊ ।
ಸುಖದೋರೊ ಇಹಪರದಿ
ಎನ್ನ ಬಿಟ್ಟಗಲದಿರು ಕಂಡ್ಯ ೧೨೨

೧೨೮ ಪನ್ನಗಾಚಲವಾಸ ನಿನ್ನುಳಿದು ಸಂತೈಪ
ರಿನ್ನೆಲ್ಲಿ ಕಾಣೆ ನಿನ್ನಾಣೆ । ನಿನ್ನಾಣೆ ಸುಗುಣ ಸಂ
ಪನ್ನ ಸಜ್ಜನರ ಸಲಹಯ್ಯ ೧೨೩

೧೨೯ ದೋಷದೂರನೆ ಕೇಳು ದ್ವೇಷಿ ನಾ ನಿನಗಲ್ಲ
ಈ ಷಣತ್ರಯದಿ ಮಮತೆಯ । ಕೊಟ್ಟಿನ್ನ
ಮೋಸಗೊಳಿಸುವುದು ಉಚಿತಲ್ಲ ೧೨೪

೧೩೦ ಭೂರಮಣ ಸರ್ವಪ್ರಕಾರದಲೆಮ್ಮ
ದೂರದಲಿಪ್ಪ ದುರಿತವ । ದುರಿತಗಳ ಸಂಹರಿಸಿ
ಕಾರುಣಿಕ ನೀನೆ ಸಂತೈಸೊ ೧೨೫

೧೩೧ ವಿಜಿತಾತ್ಮನೆ ನೀನು ಭೂಭೂಜರೊಳಿದ್ದನವರತ
ಯಜಮಾನನೆಂದು ಕರೆಸುವಿ । ಕರೆಸುವಿ ರಕ್ಷಕನಾಗಿ
ಸಂತೈಸು ನೀನೆ ಪ್ರಭು ಎಂದೆಂದು ೧೨೬

೧೩೨ ಯಾವದವಯವಗಳೊಳ್ ಹೃಷಿಕ ವ್ಯಾಪಕನಿದ್ದು
ವಿವಿಧ ವ್ಯಾಪಾರ ನೀ ಮಾಡಿ । ನೀ ಮಾಡಿ ಮಾಡಿಸಿ
ಭವದೊಳಿಟ್ಟೆಮ್ಮ ದಣಿಸುವಿ ೧೨೭

೧೩೩ ಏನೆಂಬೆ ನಿನ್ನಾಟಕಾನಂದಮಯನೆ ಗುಣ
ಮಾನಿಗಳೊಳಿದ್ದು ಗುಣಕರ್ಮ । ಗುಣಕರ್ಮಗಳ ಮಾಡಿ
ಮಾನವರಿಗುಣಿಪೆ ಸುಖದುಃಖ ೧೨೮

೧೩೪ ಎಲ್ಲಿ ಹರಿರೂಪ ಮತ್ತೆಲ್ಲಿ ಗುಣಕ್ರಿಯೆಗಳನು
ಅಲ್ಲೆ ಗುಣರೂಪಕ್ರಿಯೆಗಳು । ಕ್ರಿಯೆಗಳು ಗುಣರೂಪ
ಬಲ್ಲವನೆ ಜ್ಞಾನಿ ಜಗದೊಳು ೧೨೯

೧೩೫ ಶೋಕನಾಶನ ವಿಗತಶೋಕ ನೀ ನೆಂದರಿತು
ನಾ ಕರವ ಮುಗಿವೆ ಕರುಣಾಳು । ಕರುಣಾಳು ಭಕುತರ
ಶೋಕಗಳ ಕಳೆದು ಸುಖವೀಯೋ ೧೩೦

೧೩೬ ಜೀವನಾಮಕನಾಗಿ ಜೀವರೊಳು ನೀನಿದ್ದು
ಜೀವ ಕೃತಕರ್ಮ ನೀ ಮಾಡಿ । ನೀ ಮಾಡಿ ಮಾಡಿಸಿ
ಜೀವರಿಗೆ ಕೊಡುವಿ ಸುಖದುಃಖ ೧೩೧

೧೩೭ ನೀನಿಲ್ಲದಾಸ್ಥಾನ ಈ ನಳಿನಜಾಂಡದೊಳು
ನಾನೆಲ್ಲಿ ಕಾಣೆ ನರಸಿಂಹ । ನರಸಿಂಹ ನರಕ ಬಂ
ದೇನು ಮಾಡುವುದು ನಮಗಿನ್ನು ೧೩೨

೧೩೮ ನೀನಿಪ್ಪಲೋಕ ನಿರ್ವಾಣವೆಂದಾಗಮ ಪು
ರಾಣ ಪೇಳುವುದು ಪ್ರತಿದಿನ । ಪ್ರತಿದಿನದಿ ನರಕ ವಿ
ದ್ದೇನು ಮಾಡುವುದೊ ಎಮಗಿನ್ನು ೧೩೩

೧೩೯ ನರಕ ಸ್ವರ್ಗಗಳೆಂಬೆರಡು ಇಲ್ಲಿಹವು ವಿಸ್ಮೃತಿ
ನರಕ ಸ್ಮೃತಿಯೆ ಸ್ವರ್ಗ । ಸ್ಮೃತಿಸ್ವರ್ಗವಿರೆ ಬಾಹ್ಯ
ನರಕ ಭಯಕಂಜೆ ಎಂದೆಂದು ೧೩೪

೧೪೦ ಕೃಪಣವತ್ಸಲ ಎನ್ನ ಅಪಾರಾಧಗಳ ನೋಡಿ
ಕುಪಿತನಾಗುವರೆ ಕಮಲಾಕ್ಷ । ಕಮಲಾಕ್ಷ ನೀನೆನಗೆ
ಉಪಕಾರಿಯೆಂದು ಸ್ಮರಿಸುವೆ ೧೩೫

೧೪೧ ಅಪರಾಜಿತನೆ ನಿನ್ನ ನಿಪುಣತನಕೆ ನಮಿಪೆ
ಅಪರಿಮಿತ ಕರ್ಮ ನೀ ಮಾಡಿ । ನೀ ಮಾಡಿ ಮಾಡಿಸಿ
ಅಪರಾಜಿತನಂತೆ ಇರುತಿಪ್ಪೆ ೧೩೬

೧೪೨ ಅಪರಾಧಿ ನಾನಲ್ಲ ಅಪರಾಧ ಎನಗಿಲ್ಲ
ಸ್ವಪರ ಗತಿ ನೀನೆ ಬಹುಕರ್ಮ । ಬಹುಕರ್ಮಗಳ ಮಾಡಿ
ಅಪರಾಧಿ ನಿನಗೆ ನಾನಾದೆ ೧೩೭

೧೪೩ ಅಪರಾಧಿ ನಾನೆಂಬುದುಪಚಾರ ಮಾತ್ರ ನಿನ
ಗಪರಾಧವೆಂಬೊದಿಳೆಯೊಳು । ಇಳೆಯೊಳು ಇನ್ನುಂಟೆ
ಅಪರಾಧಿಯೆಂಬೋದಪರಾಧ ೧೩೮

೧೪೪ ನಿನ್ನ ಅಧೀನನು ನಾನು ನಿನ್ನ ದಾಸರ ದಾಸ
ಎನ್ನದೇನಯ್ಯ ಅಪರಾಧ । ಅಪರಾಧಗಳ ನೋಡಿ
ಬನ್ನ ಬಡಿಸುವುದು ಉಚಿತವಲ್ಲ ೧೩೯

೧೪೫ ಎನಗೆ ನಿನ್ನಲಿ ಭಕುತಿ ಇನಿತಿಲ್ಲದಿದ್ದರು
ಅನಿಮಿತ್ತ ಬಂಧು ಸಲಹೂವಿ । ಸಲಹೂವಿ ಸರ್ವದಾ
ಏನೆಂಬೆ ನಿನ್ನ ಕರುಣಕ್ಕೆ ೧೪೦

೧೪೬ ವೈಷಮ್ಯ ಮೊದಲಾದ ದೋಷರಹಿತನೆ ನಿರಭಿ
ಲಾಷೆಯಲಿ ನಿನ್ನ ಸರ್ವತ್ರ । ಸರ್ವತ್ರ ಚಿಂತಿಪರ
ತೋಷಿಸುವಿ ಒಲಿದು ಸುಖವಿತ್ತು ೧೪೧

೧೪೭ ಭೂರಮಣ ನಿತ್ಯ ಸಂಸಾರಿಗಳಲಿದ್ದು ಧನ
ದಾರಾದಿಗಳಲಿ ಮಮತೆಯ ।
ಮಮತೆಯನು ಕೊಟ್ಟು ಸಂ
ಚಾರ ಮಾಡಿಸುವೆ ಭವದೊಳು ೧೪೨

೧೪೮ ಕ್ರೂರಕರ್ಮಗ ದುರ್ಗಾರಮಣ ದೈತ್ಯರೊಳು
ತೋರಿಕೊಳ್ಳದಲೆ ನೀ ಮಾಡಿ । ನೀ ಮಾಡಿ ಮಾಡಿಸುತ
ಘೋರ ದುಃಖಗಳ ಉಣಿಸೂವಿ ೧೪೩

೧೪೯ ದಾನವಾರಣ್ಯಕೆ ಕೃಶಾನು ಕಾಮಿತ ಕಲ್ಪ
ಧೇನು ಶ್ರೀ ಲಕ್ಷ್ಮಿ ಮುಖ ಪದ್ಮ । ಮುಖಪದ್ಮ ನವಸು ಸ
ದ್ಭಾನು ನೀನೆಮಗೆ ದಯವಾಗೊ ೧೪೪

೧೫೦ ಲೊಕದಯ್ಯನೆ ನಿನ್ನ ಶ್ರೀ ಕಮಲಜಾದಿಗಳು
ಏಕ ದೇಶವನು ಅರಿಯಾರು । ಅರಿಯದಾ ಮಹಿಮೆಗಳ
ಈ ಕುಮತಿ ಜನರು ಅರಿವಾರೆ ೧೪೫

೧೫೧ ಇಂದಿರಾರಮಣ ಗೋವಿಂದ ಕೇಶವ ಭಕ್ತ
ಬಂಧು ನೀನೆಂದು ಮೊರೆಹೊಕ್ಕೆ । ಮೊರೆಹೊಕ್ಕೆ ಕಾರುಣ್ಯ
ಸಿಂಧು ನೀಎನಗೆ ದಯವಾಗೊ ೧೪೬

೧೫೨ ವಾಮನ ತ್ರಿವಿಕ್ರಮ ನಿರಾಮಯ ನಿರಾಧಾರ
ರಾಮ ರಾಜೀವದಳನೇತ್ರ । ದಳನೇತ್ರ ಮಮಕುಲ
ಸ್ವಾಮಿ ನೀಎನಗೆ ದಯವಾಗೊ ೧೪೭

೧೫೩ ಅನಿರುದ್ಧ ಪ್ರದ್ಯುಮ್ನ ಅನಲ ಧರಣೀಧರನೆ
ಅನುವಿಷ್ಟನಾಗಿ ಪ್ರಕೃತಿಯ । ಪ್ರಕೃತಿಯ ನಿರ್ಮಿಸಿದ
ಘನ ಮಹಿಮ ಎನಗೆ ದಯವಾಗೊ ೧೪೮

೧೫೪ ಅನಂದನಂದ ವಿಜ್ಞಾನಮಯ ವಿವಿಧ ಸ
ನ್ಮಾನದ ಪ್ರವರ ಸಮವರ್ತಿ । ಸಮವರ್ತಿ ಸಮನೆ ಸ
ತ್ರಾಣ ನೀನೆಮಗೆ ದಯವಾಗೊ ೧೪೯

೧೫೫ ನಾ ನಿನ್ನ ಮರೆತರೂ ನೀನೆನ್ನ ಮರೆಯದಲೆ
ಸಾನುರಾಗದಲಿ ಸಲಹುವಿ । ಸಲಹುವಿ ಸರ್ವಜ್ಞ
ಏನೆಂಬೆ ನಿನ್ನ ಕರುಣಕ್ಕೆ ೧೫೦

೧೫೬ ಜ್ಞಾನಕರ್ಮೇಂದ್ರಿಯಗಳಾನಂದಮಯಗಧಿ
ಷ್ಠಾನವೆಂದರಿತು ಪ್ರತಿದಿನ । ಪ್ರತಿದಿನ
ಪಾನಾದಿ ವಿಷಯ ಹರಿಗೆನ್ನು ೧೫೧

೧೫೭ ನಕ್ಷತ್ರ ಮಂಡಲವು ಲಕ್ಷದೀಪವು ನಿನಗೆ
ರುಕ್ಷೇಷ ತರಣಿ ಆಕಾಶ । ಆಕಾಶ ದೀಪಗಳು
ವೃಕ್ಷ ವಲ್ಲಿಜವೆ ಫಲ ಪುಷ್ಪ ೧೫೨

೧೫೮ ಸತ್ಯಸಂಕಲ್ಪ ಜಗದತ್ಯಂತ ಭಿನ್ನಸ
ರ್ವೋತ್ತಮನೆ ಸುಖ ಪೂರ್ಣ । ಸುಖಪೂರ್ಣ ನೀಎನ್ನ
ಚಿತ್ತದಿಂದಗಲದಿರು ಕಂಡ್ಯ ೧೫೩

೧೫೯ ಕುಂಡವೇ ಗೋಳಕವು ಕೆಂಡಗಳೇ ಕರಣಗಳು
ಉಂಡುಡುವ ವಿಷಯ ಅವಧಾನ ।
ಅವಧಾನ ಕೈಕೊಂಡು
ಪುಂಡರೀಕಾಕ್ಷ ದಯವಾಗೊ ೧೫೪

೧೬೦ ಶ್ರೀವರನೆ ನೀ ತತ್ವ ದೇವತೆಗಳೊಳಿದ್ದು
ಯಾವತ್ತು ಕರ್ಮ ನೀ ಮಾಡಿ । ನೀ ಮಾಡಿ ಮಾಡಿಸಿ
ಜೀವರಿಗೆ ಕೊಡುವೆ ಸುಖದುಃಖ ೧೫೫

೧೬೧ ಹೃಷಿಕನಿಯಾಮಕನೆ ವಿಷಯದೊಳು ನೀನಿಂತು
ಪ್ರಸುಖಾತ್ಮಕವಾಗಿ ರಮಿಸುವಿ ।ರಮಿಸುವಿ ಜೀವರ
ಮೋಹಿಸಿ ನಿನ್ನ ತಿಳಿಯ ಕೊಡದಿಪ್ಪೆ ೧೫೬

೧೬೨ ವಿಷಯದಲಿ ಮನವಿರಿಸಿ ಮನ ವಿಷಯದೊಳಗಿರಿಸಿ
ವಿಷಯೇಂದ್ರಿಯಂಗಳಭಿಮಾನಿ । ಅಭಿಮಾನಿ ದಿವಿಜರಿಗೆ
ವಿಷಯನಾಗದಲೆ ಇರುತಿಪ್ಪೆ ೧೫೭

೧೬೩ ದೇಶಕಾಲಾದಿಗಳಿಗೀಶ ನೀನೆಂದರಿದು ಉ
ಪಾಸನೆ ಗೈವ ಭಕುತರ । ಭಕುತರೆಲ್ಲಿದ್ದರು
ದೋಷವೆಲ್ಲಹುದೋ ಅವರೀಗೆ ೧೫೮

೧೬೪ ನಾರಾಯಣಾಚ್ಯುತ ಮುರಾರಿ ಮುನಿಗಣ ಸೇವ್ಯ
ನಾರದ ಪ್ರಿಯ ನರಸಿಂಹ । ನರಸಿಂಹ ನಿನ್ನವರಿಗೆ
ವೈರಾಗ್ಯಭಾಗ್ಯ ಕರುಣೀಸೊ ೧೫೯

೧೬೫ ವಾಸುದೇವಾನಂತ ವಾಸವಾನುಜ ವರ
ವಾಸುಕೀ ಶಯನ ವನಮಾಲಿ । ವನಮಾಲಿ ವೀತಭಯ
ವಾಸವಾಗೆನ್ನ ಮನದಲ್ಲಿ ೧೬೦

೧೬೬ ಬಾಹ್ಯಾಂತರದಲ್ಲಿ ದೇಹಾಭಿಮಾನಿಗಳು
ನೀ ಹೇಳಿದಂತೆ ನಡೆಸೋರು ।
ನಡೆಸೋರು ನುಡಿಸೋರು
ದ್ರೋಹಕ್ಕೆ ಎನ್ನ ಗುರಿಮಾಡಿ ೧೬೧

೧೬೭ ಮಲವು ಮೂತ್ರ ರಕ್ತಕಶ್ಮಲ ದೇಹಪೋಷಣೆಗೆ
ಬಳಲಿದೆ ನಾ ನಿನ್ನ ಭಜಿಸಾದೆ । ಭಜಿಸದೆ ನರಕಾ ಬಾ
ಗಿಲ ಕಾಯ್ದು ಕಳೆದೆ ದಿವಸವ ೧೬೨

೧೬೮ ಸರ್ವಾಂತರಾತ್ಮಕನೆ ದುರ್ವಿಷಯ ತೈಲದೊಳು
ದರ್ವಿಯಂದದಲಿ ಚರಿಸುವ । ಚರಿಸುವ ಮನದಲ್ಲಿ
ಸರ್ವಕಾಲದಲಿ ನೆಲೆಗೊಳ್ಳೊ ೧೬೩

೧೬೯ ಏನ ಬೇಡಲಿ ನಿನ್ನಧೀನವೀ ಜಗವು ಸಾವ
ಧೀನ ವಸ್ತುಗಳ ನಾ ಕಾಣೆ । ನಾ ಕಾಣೆ ಭಕ್ತಿ ವಿ
ಜ್ಞಾನ ವೈರಾಗ್ಯವನೆ ಕರುಣಿಸೋ ೧೬೪

೧೭೦ ಆಶೆಯೆಂಬುದುಂಟು ಸರ್ವೇಶ ವಿಜ್ಞಾಪಿಸುವೆ
ವಿಶ್ವಂಭರಾ ಭಾಗ್ಯ ಸತಿಮೋಹ । ಸತಿಮೋಹ ತಪ್ಪಿಸಿ
ನೀ ಸಲಹಬೇಕೋ ದಯದಿಂದ ೧೬೫

೧೭೧ ಏನ ಬೇಡುವುದಿಲ್ಲ ಮಾನಾದಿ ಸಂಪತ್ತು
ನಾನೊಲ್ಲೆ ಸ್ವಪ್ನದಲಿ ತವನಾಮ । ತವನಾಮ ಕ್ಷಣಕ್ಷಣಕೆ
ತಾನೊದಗಲೆನ್ನ ವದನಕ್ಕೆ ೧೬೬

೧೭೨ ಸಿರಿ ನಿನ್ನ ಚರಣದ ಕಿರುಬೆರಳ ನಖದ ಗುಣ
ಅರಸಿ ನೋಡುತಲಿ ಅನುಗಾಲ । ಅನುಗಾಲ ಕಾಣದಿರೆ
ಬೆರಗು ಬೀಳುವಳೋ ಮರುಳಾಗಿ ೧೬೭

೧೭೩ ಕರ್ಮಜ್ಞ ಕರ್ಮೇಶ ಕರ್ಮ ಪ್ರವರ್ತಕನೆ
ಕರ್ಮ ಫಲದಾತ ಕರ್ಮಸ್ಥ । ಕರ್ಮಸ್ಥ ಎನ್ನ ದು
ಷ್ಕರ್ಮ ಕಳೆದು ನೀ ಸಲಹಯ್ಯ ೧೬೮

೧೭೪ ಸ್ವಾನಂದ ಪರಿಪೂರ್ಣ ನಾನಾ ವಿಷಯಗಳಲ್ಲಿ
ನೀನಿಂದು ಮಮತೆಯ ಕಲ್ಪಿಸಿ । ಕಲ್ಪಿಸಿ ಹೀನನೆಂ
ದೆನ್ನನೇತಕ್ಕ ದಣಿಸುವಿ ೧೬೯

೧೭೫ ಅನಾಥ ಬಂಧು ಜಗನ್ನಾಥ ವಿಠಲ ಪ್ರ
ಸನ್ನ ಪರಿಪಾಲ ಮಾಲೋಲ ।
ಮಾಲೋಲ ಅರಿ ಪಾಂಚ
ಜನ್ಯ ಧೃತಪಾಣಿ ಸಲಹೆಮ್ಮ ೧೭೦

೩. ಶ್ರೀಕೃಷ್ಣ ಸ್ತೋತ್ರ

೧೭೬ ಶರಣು ದೇವರ ದೇವ ಶರಣು ಸುರವರ ಮಾನ್ಯ
ಶರಣು ಶತಕೋಟಿ ಲಾವಣ್ಯ । ಲಾವಣ್ಯ ಮೂರುತಿಯೆ
ಶರಣೆಂಬೆ ಸ್ವಾಮಿ ಕರುಣೀಸೊ ೧

೧೭೭ ಆದಿನಾರಾಯಣನು ಭೂದೇವಿ ಮೊರೆ ಕೇಳಿ
ಯಾದವರ ಕುಲದಲ್ಲಿ ಜನಿಸೀದ । ಜನಿಸೀದ ಕೃಷ್ಣ
ಪಾದಕ್ಕೆ ಶರಣೆಂಬೆ ದಯವಾಗೊ ೨

೧೭೮ ನಿನ್ನ ವಿಸ್ಮೃತಿ ದೋಷ ಜನ್ಮ ಜನ್ಮಕ್ಕೆ ಕೊಡದಿರು
ಎನ್ನ ಕುಲ ಬಂಧು ಎಂದೆಂದು ।ಎಂದೆಂದು ನಿನಗಾನು
ಬಿನ್ನೈಪೆ ಬಿಡದೆ ಸಲಹಯ್ಯ ೩

೧೭೯ ವಸುದೇವನಂದನನ ಹಸುಗೂಸು ಎನಬೇಡಿ
ಶಿಶುವಾಗಿ ಕೊಂದ ಶಕಟನ್ನ । ಶಕಟನ್ನ ವತ್ಸಾಸುರನ
ಅಸುವಳಿದು ಪೊರೆದ ಜಗವನ್ನ ೪

೧೮೦ ವಾತರೂಪಿಲಿ ಬಂದ ಆ ತೃಣಾವರ್ತನ್ನ
ಪಾತಾಳಕಿಳುಹಿ ಮಡುಹೀದ ।
ಮಡುಹಿ ಮೊಲೆಯುಣಿಸಿದಾ
ಪೂತನಿಯ ಕೊಂದ ಪುರುಷೇಶ ೫

೧೮೧ ನಿನ್ನ ಸ್ಮೃತಿಗಿಂತಧಿಕ ಪುಣ್ಯ ಕರ್ಮಗಳಿಲ್ಲ
ನಿನ್ನ ವಿಸ್ಮೃತಿಗಿಂತ । ಅಧಿಕವಾದ ಮಹಪಾಪಗಳು
ಇನ್ನಿಲ್ಲ ಲೋಕತ್ರಯದೊಳು ೬

೧೮೨ ಅಂಬುಜಾಂಬಕಿಗೊಲಿದ ಜಂಭಾರಿಪುರದಿಂದ
ಕೆಂಬಣ್ಣದ ಮರ ತೆಗೆದಂಥ । ತೆಗೆದಂಥ ಕೃಷ್ಣನ ಕ
ರಾಂಬುಜವೆ ನಮ್ಮ ಸಲಹಲಿ ೭

೧೮೩ ದೇವಕೀಸುತನಾಗಿ ಗೋವುಗಳ ಕಾದದೆ
ಪಾವಕವ ನುಂಗಿ ನಲಿವೋನೆ ।
ನಲಿವೋನೆ ಮೂರ್ಲೋಕ
ಓವ ದೇವೇಂದ್ರ ತುತಿಪೋನೆ ೮

೧೮೪ ಜಗದುದರ ನೀನಾಗಿ ಜಗದೊಳಗೆ ನೀನಿಪ್ಪೆ
ಜಗದಿ ಜೀವರನ ಸೃಜಿಸುವಿ । ಸೃಜಿಸಿ ಜೀವರೊಳಿದ್ದು
ಜಗದನ್ಯನೆಂದು ಕರೆಸುವಿ ೯

೧೮೫ ಕರಣನೀಯಾಮಕನೆ ಕರುಣಾಳು ನೀನೆಂದು
ಮೊರೆಹೊಕ್ಕೆ ನಾನಾ ಪರಿಯಲ್ಲಿ । ಪರಿಯಲ್ಲಿ ಮಧ್ವೇಶ
ಮರುಳು ಮಾಡುವರೆ ನೀಯೆನ್ನ ೧೦

೧೮೬ ಕುವಲಯಾಪೀಡನನು ಲವಮಾತ್ರದಿ ಕೊಂದು
ಶಿವನ ಚಾಪವನು ಮುರಿದಿಟ್ಟಿ । ಮುರಿದಿಟ್ಟಿ ಮುಷ್ಟಿಕನ
ಬವರದಲಿ ಕೆಡಹಿ ಬಲಿಗೈದೆ ೧೧

೧೮೭ ಗಂಧವಿತ್ತಬಲೆಯೊಳ ಕುಂದನೆಣಿಸದೆ ಪರಮ
ಸುಂದರಿಯ ಮಾಡಿ ವಶವಾದಿ । ವಶವಾದಿ ನಮ್ಮ ಗೋ
ವಿಂದ ನೀನೆಂಥ ಕರುಣಾಳು ೧೨

೧೮೮ ವಂಚಿಸಿದ ಹರಿಯೆಂದು ಪರಚಿಂತೆಯಲಿ ಕಂಸ
ಮಂಚದ ಮ್ಯಾಲೆ ಕುಳಿತಿದ್ದ । ಕುಳಿತಿದ್ದ ಮದಕರಿಗೆ
ಪಂಚಾಸ್ಯನಂತೆ ಎರಗೀದೆ ೧೩

೧೮೯ ದುರ್ಧರ್ಷ ಕಂಸನ್ನ ಮಧ್ಯರಂಗದಿ ಕೆಡಹಿ
ಗುದ್ದಿಟ್ಟ ತಲೆಯ ಜನನೋಡೆ ।
ಜನನೋಡೆ ದುರ್ಮತಿಯ
ಮರ್ದಿಸಿದ ಕೃಷ್ಣ ಸಲಹೆಮ್ಮ ೧೪

೧೯೦ ಮಣಿಕುಂದಣಗಳು ಕಂಕಣದಿ ಶೋಭಿಸುವಂತೆ
ತೃಣದಿ ನಿನ್ನಖಿಳ ಶ್ರೀದೇವಿ ಸಹಿತ ನಿ
ರ್ಗುಣನು ಶೋಭಿಸುವಿ ಒಪ್ಪಿಡಿ ಪ್ರತಿದಿನ ೧೫

೧೯೧ ಉಗ್ರಸೇನನಿಗೆ ಪಟ್ಟ ಶೀಘ್ರದಲಿ ಕಟ್ಟಿ ಕಾ
ರಾಗೃಹಲ್ಲಿದ್ದ ಜನನಿಯ । ಜನನಿಯ ಜನಕರ ಬಿಡಿಸಿ
ಅಗ್ರಜನ ಕೂಡ ಹೊರವಂಟ ೧೬

೧೯೨ ಕಪ್ಪ ಕೊಡಲಿಲ್ಲೆಂದು ದರ್ಪದಲಿ ದೇವೇಂದ್ರ
ಗುಪ್ಪಿದನು ಮಳೆಯ ವ್ರಜದೊಳು ।
ವ್ರಜದೊಳು ಪರ್ವತವ
ಪುಷ್ಪದಂತೆತ್ತಿ ನೀ ಸಲಹೀದಿ ೧೭

೧೯೩ ಜ್ಞಾನ ಸುಜ್ಞಾನವಜ್ಞಾನ ವಿಜ್ಞಾನಮಯ
ಮಾಣವಕರೂಪ ವಸುದೇವ । ವಸುದೇವತನಯ ಸು
ಜ್ಞಾನವನು ಕೊಟ್ಟು ಕರುಣೀಸೊ ೧೮

೧೯೪ ರಂಗರಾಯನೆ ಕೇಳು ಶೃಂಗಾರ ಗುಣಪೂರ್ಣ
ಭಂಗಪಡಲಾರೆ ಭವದೊಳು ।ಭವಬಿಡಿಸಿ ಎನ್ನಂತ
ರಂಗದಲಿ ನಿಂತು ಸಲಹಯ್ಯ ೧೯

೧೯೫ ತಾಪತ್ರಯಗಳು ಮಹದಾಪತ್ತು ಪಡಿಸೋದು
ಕಾಪಾಡು ಕಂಡ್ಯ ಕಮಲಾಕ್ಷ । ಕಮಲಾಕ್ಷ ಮೊರೆಯಿಟ್ಟ
ದ್ರೌಪದಿಯ ಕಾಯ್ದೆ ಅಳುಕಾದೆ ೨೦

೧೯೬ ಸ್ವಚ್ಛ ಗಂಗೆಯೊಳಗೆ ಅಚ್ಯುತನ ಸ್ಮರಿಸಿದರೆ
ಸ್ವಚ್ಛ ಮುಡಿಯೆಂದು ಕರೆಸೋದು । ಕರೆಸೋದು ಕೈವಲ್ಯ
ನಿಶ್ಚಯ ಕಂಡ ಎಮಗಿನ್ನು ೨೧

೧೯೭ ಶ್ವಾನಸೂಕರ ನೀಚ ಯೋನಿಯೊಳು ಬರಲಂಜೆ
ಶ್ರೀನಿಧಿಯೆ ನಿನ್ನ ಸ್ಮೃತಿಸ್ವರ್ಗ । ಸ್ಮೃತಿಸ್ವರ್ಗ ಸುಖವ ನಿನ
ಗಾನು ಬೇಡುವೆನೊ ಎಂದೆಂದು ೨೨

೧೯೮ ಕನಸಿಲಾದರು ವಿಷಯ ನೆನೆಹನೀಯದೆ ಎನ್ನ
ಮನದಲ್ಲಿ ನೀನೆ ನೆಲೆಗೊಳ್ಳೊ ।
ನೆಲೆಗೊಳ್ಳೊ ಲೋಕ ಪಾ
ವನಚರಿತ ಪಾರ್ಥಸಖ ಶ್ರೀಕೃಷ್ಣ ೨೩

೧೯೯ ವಾಸುದೇವನ ಬಿಟ್ಟು ಲೇಸು ಹರಿಸಿಕೊಂ
ಡೇಸು ದೈವಗಳ ಭಜಿಸಲು । ಭಜಿಸಲು ಬರಿದೆ ಆ
ಯಾಸವಲ್ಲದಲೆ ಸುಖವಿಲ್ಲ ೨೪

೨೦೦ ಉಂಡು ಉಟ್ಟದ್ದೆಲ್ಲ ರಂಗನ ಸೇವೆಯಿನ್ನಿ
ಕಂಡ ಕಂಡದ್ದು ಹರಿಪ್ರೀತಿಯೆನ್ನಿ ।
ಹರಿಪ್ರೀತಿಯೆನ್ನಿಮೂರ್ಲೋಕಕ್ಕೆ
ಪಾಂಡವಪ್ರಿಯನೆ ದೊರೆಯೆನ್ನಿ ೨೫

೨೦೧ ಮತದೊಳಗೆ ಮಧ್ವ ಮತ ವ್ರತದೊಳಗೆ ಹರಿದಿನವು
ಕಥೆಯೊಳಗೆ ಭಾಗವತ ಕಥೆಯೆನ್ನಿ ।
ಕಥೆಯೆನ್ನಿ ಮೂರ್ಲೋಕ
ಕತಿಶಯ ಶ್ರೀಕೃಷ್ಣ ಪ್ರತಿಮೆನ್ನಿ ೨೬

೨೦೨ ನೀನಲ್ಲದನ್ಯರಿಗೆ ನಾ ನಮಿಸೆನೆಲೊ ಹರಿಯೆ
ದೀನರಕ್ಷಕನೆ ದಯವಂತ । ದಯವಂತ ನಮ್ಮ ಅನು
ಮಾನವಿಲ್ಲದಲೆ ಪೊರೆ ಕಂಡ್ಯ ೨೭

೨೦೩ ನರರ ಕೊಂಡಾಡಿ ದಿನ ಬರಿದೆ ಕಳೆಯಲು ಬೇಡ
ನರನ ಸಖನಾದ ಸಿರಿಕೃಷ್ಣ । ಸಿರಿಕೃಷ್ಣ ಮೂರುತಿಯ
ಚರಿತೆ ಕೊಂಡಾಡೊ ಮನವುಬ್ಬಿ ೨೮

೨೦೪ ಪಾಹಿ ಪಾಂಡವಪಾಲ ಪಾಹಿ ರುಕ್ಮಿಣಿ ಲೋಲ
ಪಾಹಿ ದ್ರೌಪದಿಯ ಅಭಿಮಾನ । ಅಭಿಮಾನ ಕಾಯ್ದ ಹರಿ
ದೇಹಿ ಕೈವಲ್ಯ ನಮಗಿಂದು ೨೯

೨೦೫ ಪಾಹಿ ಕರುಣಾಕರನೆ ಪಾಹಿ ಲಕ್ಷ್ಮೀರಮಣ
ಪಾಹಿ ಗೋಪಾಲ ಗುಣಶೀಲ । ಗುಣಶೀಲ ಪಾಪ ಸಂ
ದೋಹ ಕಳೆದೆನ್ನ ಸಲಹಯ್ಯ ೩೦

೨೦೬ ನಗಧರನ ಸ್ಮರಿಸದೆ ಅಘಮರಕ್ಷಣ ಮಾಡೆಣಿಸೆ
ನಗರೇನು ಇದರ ಅಮರಾರು । ಅಮರಾರು ಇದಕಿನ್ನು
ಜಗನ್ನಾಥವಿಠಲಾ ಒಲಿದಾನೆ ೩೧

೨೦೭ ಏಕಾಂತಿಗಳ ಒಡೆಯ ಲೋಕೈಕರಕ್ಷಕನೆ
ನಾಕಜಾ ವಂದ್ಯ ನಳಿನಾಕ್ಷ । ನಳಿನಾಕ್ಷ ನಿನ್ನ ಪಾದ
ಕೆ ಕೈಮುಗಿವೆ ದಯವಾಗೊ ೩೨

೨೦೮ ಏಕಾದಶೇಂದ್ರಿಯಗಳು ಏಕಪ್ರಕಾರದಲ್ಲಿ
ಲೋಕೈಕನಾಥ ನಿನ್ನಲ್ಲಿ । ನಿನ್ನಲ್ಲಿ ಸ್ಮೃತಿ ಕೊಡಲು
ವೈಕುಂಠಲೋಕ ನಾನೊಲ್ಲೆ ೩೩

೨೦೯ ನಿನ್ನವರ ನೀ ಮರೆದರಿನ್ನು ಸಾಕುವರ್ಯಾರು
ಪನ್ನಂಗಶಯನ ಪುರುಷೇಶ । ಪುರುಷೇಶ
ನೀ ಸತತ ಶರಣ
ರನು ಬಿಡುವೋದು ಉಚಿತಲ್ಲ ೩೪

೨೧೦ ಆನಂದ ಆನಂದ ಪರಮಾನಂದ ರೂಪ ನಿ
ತ್ಯಾನಂದ ವರದ ಅರದೂರ । ಅರದೂರ ನಾರಾಯಣ
ಆನಂದಮಯನೆ ದಯವಾಗೊ ೩೫

೨೧೧ ಏನೆಂಬೆ ನಿನ್ನಾಟಕಾನಂದಮಯನೆ ಗುಣಿ
ಗುಣ ಗಳೊಳಗಿದ್ದು ಗುಣಕಾರ್ಯ ।
ಗುಣಕಾರ್ಯಗಳ ಮಾಡಿ
ಪ್ರಾಣಿಗಳಿಗುಣಿಪೆ ಸುಖ ದುಃಖ ೩೬

೨೧೨ ಕುಟ್ಟಿಬೀಸಿ ಕುಯ್ದು ಸುಟ್ಟು ಬೇಯಿಸಿದ ಪಾಪ
ಕೆಟ್ಟುಪೋಪುದಕೆ ಬಗೆಯಿಲ್ಲ । ಬಗೆಯಿಲ್ಲದುದರಿಂದ
ವಿಠ್ಠಲನ ಪಾಡಿ ಸುಖಿಯಾಗೊ ೩೭

೨೧೩ ಶುಕನಯ್ಯ ನೀನೆ ತಾರಕನೆಂದು ನಿನ್ನ ಸೇ
ವಕರು ಪೇಳುವುದು ನಾ ಕೇಳಿ । ನಾ ಕೇಳಿ ಮೊರೆಹೊಕ್ಕೆ
ಭಕುತವತ್ಸಲನೆ ದಯವಾಗೊ ೩೮

೨೧೪ ನೀ ನುಡಿದು ನಡೆದಂತೆ ನಾ ನುಡಿದು ನಡೆವೆನೊ
ಜ್ಞಾನಿಗಳರಸ ಗುಣಪೂರ್ಣ । ಗುಣಪೂರ್ಣ ನೀಯೆನ್ನ
ದೀನತೆಯ ನೋಡಿ ಬಿಡುವಾರೆ ೩೯

೨೧೫ ಮೂರುಗುಣಗಳಭಿಮಾನಿ ಶ್ರೀ ಭೂರಮಾದುರ್ಗೆ
ನಾರಿಯರ ಕೂಡಿ ನಲಿದಾಡಿ । ನಲಿದಾಡಿ ಜೀವರನ
ದೂರತರ ಮಾಡಿ ನಗುತಿಪ್ಪೆ ೪೦

೨೧೬ ಲೋಕನಾಯಕನಾಗಿ ಲೋಕದೊಳು ನೀನಿದ್ದು
ಲೋಕಗಳ ಸೃಜಿಸಿ ಸಲಹುವಿ । ಸಲಹಿ ಸಂಹರಿಸುವ
ಲೋಕೇಶ ನಿನಗೆ ಎಣೆಗಾಣೆ ೪೧

೨೧೭ ಎಂದು ಕಾಂಬೆನು ನಿನ್ನ ಮಂದಸ್ಮಿತಾನನವ
ಕಂದರ್ಪನಯ್ಯ ಕವಿಗೇಯ । ಕವಿಗೇಯ ನಿನ್ನಂಥ
ಬಂಧುಗಳು ನಮಗಿರಲೊ ಅನುಗಾಲ ೪೨

೨೧೮ ಏಸುಜನ್ಮದ ಪುಣ್ಯ ತಾ ಸಮನಿಸಿತೊ ಎನಗೆ
ವಾಸುಕೀಶಯನ ಜನರೆಲ್ಲ । ಜನರೆಲ್ಲ ವೈಕುಂಠ
ದಾಸನೆಂದು ತುತಿಪೋರೊ ೪೩

೨೧೯ ಈತನ ಪಾದಾಂಬುಜ ವಿಧಾತೃ ಮೊದಲಾದ ಸುರ
ವ್ರಾತ ಪೂಜಿಪುದೊ ಪ್ರತಿದಿನ । ಪ್ರತಿದಿನದಿ ಶ್ರೀ ಜಗ
ನ್ನಾಥವಿಠ್ಠಲನ ನೆನೆ ಕಂಡ್ಯ ೪೪

೪. ದಶಾವತಾರ ಸ್ತೋತ್ರ

೨೨೦ ವೇದತತಿಗಳ ಕದ್ದೊಯ್ದವನ ಕೊಂದು ಪ್ರಳ
ಯೋದಧಿಯೊಳಗೆ ಚರಿಸಿ । ಚರಿಸಿ ವೈವಸ್ವತನ
ಕಾಯ್ದ ಮಹಾಮಹಿಮ ದಯವಾಗೊ ೧

೨೨೧ ಮಂದರಾದ್ರಿಯ ಧರಿಸಿ ಸಿಂಧುಮಥನವ ಮಾಡಿ
ಬೃಂದಾರಕರಿಗೆ ಅಮೃತವ । ಅಮೃತವನುಣಿಸಿದ
ಇಂದಿರಾರಾಧ್ಯ ದಯವಾಗೊ ೨

೨೨೨ ಸೋಮಪನ ನುಡಿಕೇಳಿ ಹೇಮಾಂಬಕನ ಕೊಂದಿ
ಭೂಮಿಯಾ ನೆಗಹಿದ ದಾಡಿಂದ । ದಾಡಿಂದ ನೆಗಹಿದ
ಸ್ವಾಮಿ ಭೂವರಹ ದಯವಾಗೊ ೩

೨೨೩ ಕಂದ ಕರೆಯಲು ಕಂಬದಿಂದುದಿಸಿ ರಕ್ಷಿಸಿದಿ
ವಂದಿಸಿದ ಸುರರ ಸಲಹೀದಿ । ಸಲಹೀದಿ ನರಸಿಂಹ
ತಂದೆ ನೀನೆಮಗೆ ದಯವಾಗೊ ೪

೨೨೪ ವೈರೋಚನಿಯ ಭೂಮಿ ಮೂರುಪಾದವ ಬೇಡಿ
ಈರಡಿಯೊಳಗಳೆದೆ ಭೂ ವ್ಯೋಮ ।
ಭೂ ವ್ಯೋಮವಳೆದೆ ಭಾ
ಗೀರಥಿಯ ಜನಕ ದಯವಾಗೊ ೫

೨೨೫ ಕುವಲಯಾಧೀಶ್ವರರ ಬವರ ಮುಖದಲಿ ಕೊಂದೆ
ಅವನಿಭಾರವ ನೀನುಳುಹಿದ । ಇಳುಹಿದಾ ಸ್ವಾಮಿ ಭಾ
ರ್ಗವರಾಮ ಎಮಗೆ ದಯವಾಗೊ ೬

೨೨೬ ಶತಧೃತಿಯ ನುಡಿಗೆ ದಶರಥನ ಗರ್ಭದಿ ಬಂದು
ದಿತಿಜರನು ಸವರಿ ಸುಜನರ । ಸುಜನರ ಪೊರೆದ ರಘು
ಪತಿ ಎನಗೆ ದಯವಾಗೊ ೭

೨೨೭ ವಸುದೇವ ದೇವಕೀ ಬಸುರೀಲಿ ಜನಿಸಿದ
ವಸುಧೆ ಭಾರವನು ಇಳುಹಿದಿ । ಇಳುಹಿ ಪಾಂಡವರ ಕ
ವಿಸಿದ ಶ್ರೀಕೃಷ್ಣ ದಯವಾಗೊ ೮

೨೨೮ ಜಿನನೆಂಬ ದನುಜ ಸಜ್ಜನ ಕರ್ಮವ ಮಾಡೆ
ಜನಿಸಿ ಅವರಲ್ಲಿ ದುರ್ಬುದ್ಧಿ । ದುರ್ಬುದ್ಧಿ ಕವಿಸಿದ
ವಿನುತ ಶ್ರೀ ಬುದ್ಧ ದಯವಾಗೊ ೯

೨೨೯ ಕಲಿ ವ್ಯಾಪಾರ ವೆಗ್ಗಳವಾಗೆ ತಿಳಿದು ಶಂ
ಫಲಿ ಎಂಬ ಪುರದಿ ದ್ವಿಜನಲ್ಲಿ । ದ್ವಿಜನಲ್ಲಿ ಜನಿಸುವ
ಕಲಿಮಲವ ಹರಿಸುವ ಕಲ್ಕಿ ದಯವಾಗೊ ೧೦

೨೩೦ ಧಾರುಣಿಯಲ್ಲಿ ಹತ್ತವತಾರದಲಿ ಸುಜ
ನರ ರಕ್ಷಿಸಿದೆ ಜಗನ್ನಾಥ । ಜಗನ್ನಾಥವಿಠಲ ಮ
ದ್ಭಾರ ನಿನ್ನದೊ ಮಧು ವೈರಿ ೧೧

೫. ಶ್ರೀ ಭೂ ದುರ್ಗಾ ಸ್ತೋತ್ರ

೨೩೧ ಶ್ರೀ ಭೂಮಿದುರ್ಗ ಮತ್ತೇಭೇಂದ್ರಿಗಮನೆ ಸ್ವ
ರ್ಣಾಭ ಗಾತ್ರೆ ಸುಚರಿತ್ರೆ । ಸುಚರಿತ್ರೆ ಶ್ರೀ ಪದ್ಮ
ನಾಭನ್ನ ಜಾಯೆ ವರವೀಯೆ ೧

೨೩೨ ದರಹಸಿತವದನೆ ಸುಂದರಿ ಕಮಲ ಸದನೆ ನಿ
ರ್ಜರರ ಸಿದ್ಧಗೀತೆ ವಿಧಿ ಮಾತೆ ।
ವಿಧಿ ಮಾತೆ ಲೋಕಸುಂ
ದರಿಯೆ ನೀ ನೋಡೆ ದಯಮಾಡೆ ೨

೨೩೩ ತ್ರಿಗುಣಾಭಿಮಾನಿ ಎನ್ನವ ಗುಣದ ರಾಶಿಗಳ
ಬಗೆಯದಲೆ ತಾಯೆ ವರವೀಯೆ ।
ವರವೀಯೆ ನಿನ್ನ ಪಾದ
ಯುಗಳಕ್ಕೆ ನಮಿಪೆ ಜಗದಂಬೆ ೩

೨೩೪ ಪ್ರಳಯ ಕಾಲದಲಿ ಪತಿ ಮಲಗ ಬೇಕೆನುತ ವಟ
ದೆಲೆಯಾಗಿ ಹರಿಯ ಒಲಿಸಿದಿ । ಒಲಿಸಿದಿ ಜಗದ ಮಂ
ಗಳ ದೇವಿ ನಮಗೆ ದಯವಾಗೆ ೪

೨೩೫ ತಂತು ಪಟದಂತೆ ಜಗದಂತರ್ಬಹಿರದಲ್ಲಿ
ಕಾಂತಮೊಡಗೂಡಿ ನೆಲೆಸಿಪ್ಪೆ । ನೆಲೆಸಿಪ್ಪೆ ನೀನೆ
ನ್ನಂತರಂಗದಲಿ ನೆಲೆಗೊಳ್ಳೆ ೫

೨೩೬ ಈಶಕೋಟಿ ಪ್ರವಿಷ್ಟೆ ಈಶ ಭಿನ್ನಳೆ ಸರ್ವ
ದೋಷವರ್ಜಿತಳೆ ವರದೇಶ । ವರದೇಶ ಪತಿದೊಡನೆ
ವಾಸವಾಗೆನ್ನ ಮನದಲ್ಲಿ ೬

೨೩೭ ಆನಂದಮಯಿ ಹರಿಗೆ ನಾನಾಭರಣವಾದೆ
ಪಾನೀಯವಾದೆ ಪಟವಾದೆ । ಪಟವಾದೆ ಪಂಕಜ
ಪಾಣಿ ನೀನೆಮಗೆ ದಯವಾಗೆ ೭

೨೩೮ ಮಹದಾದಿ ತತ್ವಗಳ ವಹಿಸಿ ನಿನ್ನುದರದೊಳು
ದ್ರುಹಿಣಾಂಡ ಪಡೆದೆ ಪತಿಯಿಂದ । ಪತಿಯಿಂದ ಶ್ರೀಲಕ್ಷ್ಮಿ
ಮಹಮಹಿಮಳೆ ಎಮಗೆ ದಯವಾಗೆ ೮

೨೩೯ ಆವ ಬ್ರಹ್ಮಾದಿ ದೇವರೆಲ್ಲರು ತವ ಕೃ
ಪಾವ ಲೋಕನದಿ ಕೃತಕೃತ್ಯ । ಕೃತಕೃತ್ಯರಾಗಿ ಹರಿ
ದೇವಿ ನಾ ಬಯಸುವುದು ಅರಿದಲ್ಲ ೯

೨೪೦ ಪಕ್ಷೀಂದ್ರವಾಹನನ ವಕ್ಷಸ್ಥಳವಾಗಿ
ಅಕ್ಷಯಜ್ಞಾನಿ ಸುಖಪೂರ್ಣೆ । ಸುಖಪೂರ್ಣೆ ಕಮಲದ
ಳಾಕ್ಷಿ ನೋಡೆನ್ನ ದಯದಿಂದ ೧೦

೨೪೧ ಹಲವು ಮಾತ್ಯಾಕೆ ಶ್ರೀಲಲನೆ ಶ್ರೀಜಗನ್ನಾಥ ವಿ
ಠ್ಠಲ ಎಮಗೆ ಕೂಡಿ ಮನದಲ್ಲಿ ।
ಮನದಲ್ಲಿ ವಾಸವಾಗೆಲ್ಲ
ಕಾಲದಲಿ ಅವಿಯೋಗಿ ೧೧

೬. ಶ್ರೀ ರುಕ್ಮಿಣೀ ವಿಲಾಸ

೨೪೨ ಫಣಿರಾಜಶಯನ ರುಕ್ಮಿಣೀ ದೇವಿಯೊಡಗೂಡಿ
ಮಣಿ ಮಂಚದ ಮೇಲೆ ಕುಳಿತಿರ್ದ ।
ಕುಳಿತಿರ್ದ ಸತಿಯೊಡನೆ
ಅಣಕವಾಡಿದನು ಇನಿತೆಂದು ೧

೨೪೩ ಹೇ ರಾಜಕನ್ನಿಕೆ ಭೂರಮಣ ನಾನಲ್ಲ
ವಾರಿಧಿಯೊಳಗಿದ್ದು ಬದುಕುವ ।
ಬದುಕುವಗೆ ಮರುಳಾದಿ
ನಾರದನ ನುಡಿಗೆ ನಳಿನಾಕ್ಷಿ ೨

೨೪೪ ಶಿಶುಪಾಲ ಮೊದಲಾದ ವಸುಧೆಪಾಲರ ಬಿಟ್ಟು
ಪಶುಪಾಲಗೊಲಿದೆ ಸುಕುಮಾರಿ ।
ಸುಕುಮಾರಿ ಎನಲು ಪರ
ವಶಳಾದಳಾಗ ಮಹಲಕ್ಷ್ಮಿ ೩

೨೪೫ ಈ ಮಾತ ಕೇಳಿ ಕೈ ಚಾಮರವನೀಡಾಡಿ
ಭೂಮಿಗೊರಗಿದಳು ಭುಗಿಲೆಂದು ।
ಭುಗಿಲೆಂದು ಮಲಗಿದಾ
ಕಾಮಿನಿಯ ಕಂಡ ಕಮಲಾಕ್ಷ ೪

೨೪೬ ಕಂಗೆಟ್ಟಳೆಂದು ತನ್ನ ಅಂಗನೆಯ ಬಿಗಿದಪ್ಪಿ
ಮುಂಗುರುಳ ತಿದ್ದಿ ಮುದ್ದಿಸಿ । ಮುದ್ದಿಸಿ ಮಾತಾಡ್ಡ
ಕಂಗಳಶ್ರುಗಳ ಒರೆಸುತ್ತ ೫

೨೪೭ ಸಲಿಗೆ ಮಾತಿನ ಬಗೆಯ ತಿಳಿಯದಲೆ ಹೀಗೆ ಚಂ
ಚಲವನ್ನೈದುವರೆ ಚಪಲಾಕ್ಷಿ । ಚಪಲಾಕ್ಷಿ ಏಳೆಂದು
ತಲೆಯ ಮೇಲಿಟ್ಟ ಕರಪದ್ಮ ೬

೨೪೮ ಶ್ರೀ ದೇವಿ ನಿನ್ನೊಳು ವಿನೋದ ಮಾಡಲಿಷ್ಟು ವಿ
ಷಾದ ಪಡಲ್ಯಾಕೆ ಅನುದಿನ । ಅನುದಿನದಿ ಸ್ಮರಿಸುವರ
ಕಾದುಕೊಂಡಿಹೆನು ಬಳಿಯಲ್ಲಿ ೭

೨೪೯ ಹಿಗ್ಗಿದಳು ಮನದಿ ಸೌಭಾಗ್ಯ ಭೂಮಿನಿಯು ಅಪ
ವರ್ಗದನ ನುಡಿಗೆ ಹರುಷಾದಿ । ಹರುಷದಿಂದಲಿ ಪಾದ
ಯುಗ್ಮಕೆರಗಿದಳು ಇನಿತೆಂದು ೮

೨೫೦ ಜಗದೇಕ ಮಾತೆ ಕೈ ಮುಗಿದು ಲಜ್ಜೆಯಲಾಗ
ಮುಗುಳು ನಗೆ ಸೂಸಿ ಮಾತಾಡಿ ।
ಮಾತಾಡಿದಳು ಪತಿಯ
ಮೊಗವ ನೋಡುತಲಿ ನಳಿನಾಕ್ಷಿ ೯

೨೫೧ ಪರಿಪೂರ್ಣಕಾಮ ನಿನ್ನರಸಿ ನಾನಹುದು ಸ್ವೀ
ಕರಿಸಿದೆಯೊ ಎನ್ನ ಸತಿಯೆಂದು । ಸತಿಯೆಂದ ಕಾರಣಾ
ಕ್ಷರಳೆನಿಸಿಕೊಂಡೆ ಶ್ರುತಿಯಿಂದ ೧೦

೨೫೨ ಭುವನಾಧಿಪತಿ ನೀನು ಅವಿಯೋಗಿ ನಿನಗಾನು
ಅವಿವೇಕಿ ನೃಪರ ಪತಿಯೆಂದು । ಪತಿಯೆಂದು ಬಗೆವೆನೇ
ಸವಿ ಮಾತಿದಲ್ಲ ಸರ್ವಜ್ಞ ೧೧

೨೫೩ ಭಗವಂತ ನೀನು ದುರ್ಭಗ ದೇಹಗತರವರು
ತ್ರಿಗುಣವರ್ಜಿತವು ತವರೂಪ । ತವರೂಪ ಗುಣಗಳನು
ಪೊಗಳಲೆನ್ನಳವೆ ಪರಮಾತ್ಮ ೧೨

೨೫೪ ಭಾನು ತನ್ನಯ ಕಿರಣ ಪಾಣಿಗಳ ದೆಸೆಯಿಂದ
ಪಾನೀಯಜಗಳನರಳಿಸಿ । ಆರಳಿಸಿ ಗಂಧ ಆ
ಘ್ರಾಣಿಸಿದಂತೆ ಗ್ರಹಿಸೀದಿ ೧೩

೨೫೫ ಬೈದವನ ಕುತ್ತಿಗೆಯ ಕೊಯ್ದು ಅಂಧಂತಮಸ್ಸಿ
ಗೊಯ್ದು ಹಾಕಿದೆಯೊ ಪರಿಪಂಥಿ ।
ಪರಿಪಂಥಿ ನೃಪರನ್ನು
ಐದುವೆನೆ ನಿನ್ನ ಹೊರತಾಗಿ ೧೪

೨೫೬ ನಿಮ್ಮನುಗ್ರಹದಿಂದ ಬ್ರಹ್ಮರುದ್ರಾದಿಗಳ
ನಿರ್ಮಿಸಿ ಸಲಹಿ ಸಂಹಾರ । ಸಂಹಾರ ಮಾಡುವೆನು
ದುರ್ಮದಾಂಧರನಾ ಬಗೆವೇನೆ ೧೫

೨೫೭ ಮಂಜುಳೋಕ್ತಿಯ ಕೇಳಿ ಅಂಜಲ್ಯಾತಕೆಂದು ನವ
ಕಂಜಲೋಚನೆಯ ಬಿಗಿದಪ್ಪಿ । ಬಿಗಿದಪ್ಪಿ ಮುದ್ದಿಸಿದ ಧ
ನಂಜಯ ಪ್ರಿಯನು ಸಥೆಯಿಂದ ೧೬

೨೫೮ ನಿನಗೆ ಎನ್ನಲಿ ಭಕುತಿ ಎನಿತಿಹುದೊ ಕಂಡೆ
ಎನಗಿಹುದು ಕರುಣ ಎಂದೆಂದು ।
ಎಂದೆಂದು ಇಹುದು ಇದ
ಕನುಮಾನವಿಲ್ಲ ವನಜಾಕ್ಷಿ ೧೭

೨೫೯ ದೋಷವರ್ಜಿತ ರುಕ್ಮಿಣೀಶನ ವಿಲಾಸ
ತೋಷದಲಿ ಕೇಳಿ ಪಠಿಸಿದ । ಪಠಿಸಿದಂಥವರ ಅಭಿ
ಲಾಷೆ ಪೂರೈಸಿ ಸಲಹೂವ ೧೮

೨೬೦ ನೀತಜನಕ ಶ್ರೀ ಜಗನ್ನಾಥ ವಿಠ್ಠಲ ಜಗ
ನ್ಮಾತೆಯೆನಿಸುವಳು ಮಹಲಕ್ಷ್ಮಿ । ಮಹಲಕ್ಷ್ಮಿ ಸುತ ಬ್ರಹ್ಮ
ಪಾತ್ರನೆನಿಸುವ ಗುರು ರುದ್ರ ೧೯

೭. ತುಳಸಿ ಸ್ತೋತ್ರ

೨೬೧ ಬೃಂದಾವನಿ ಜನನಿ ವಂದಿಸುವೆ ಸತತ ಜ
ಲಂಧರನ ರಾಣಿ ಕಲ್ಯಾಣಿ । ಕಲ್ಯಾಣಿ ಶ್ರೀ ತುಲಸಿ ನಿಜ
ಮಂದಿರೆ ಎನಗೆ ದಯವಾಗೆ ೧

೨೬೨ ಜಲಜಾಕ್ಷನಮಲ ಕಜ್ಜಲ ಬಿಂದು ಪೀಯೂಷ
ಕಲಶದಲಿ ಬೀಳೆ ಜನಿಸಿದಿ । ಜನಿಸಿದಿ ಹರಿಯಿಂದ ಶ್ರೀ
ತುಲಸಿ ನೀನೆಂದು ಕರೆಸೀದಿ ೨

೨೬೩ ಶ್ರೀ ತರುಣಿವಲ್ಲಭನ ಪ್ರೀತಿ ವಿಷಯಳೆ ನಿನ್ನ
ನಾ ತುತಿಸಿ ಕೈಯ ಮುಗಿವೆನು ।
ಕೈ ಮುಗಿವೆ ಎನ್ನಯ ಮಹ
ಪಾತಕವ ಕಳೆದು ಪೊರೆಯಮ್ಮ ೩

೨೬೪ ತುಲಸಿ ನಿನ್ನಡಿಗೆ ನಾ ತಲೆವಾಗಿ ಬಿನ್ನೈಪೆ
ಕಲುಷ ಕರ್ಮಗಳ ಎಣಿಸದೆ । ಎಣಿಸದೆ ಸಂಸಾರ
ಜಲಧಿಯಿಂದೆಮ್ಮ ಕಡೆ ಹಾಯ್ಸು ೪

೨೬೫ ನೋಡಿದವ ದುರಿತ ಈಡಾಡಿದವ ನಿನ್ನ ಕೊಂ
ಡಾಡಿದವ ನಿತ್ಯ ಹರಿಪಾದ । ಹರಿಪಾದ ಕಮಲಗಳ
ಕೂಡಿಸುವೆ ಸತ್ಯವೆಂದೆಂದು ೫

೨೬೬ ನಿಂದಿಸಿದವರೆಲ್ಲ ನಿಂದ್ಯರಾಗುವರು ಅಭಿ
ವಂದಿಸಿದ ಜನರು ಸುರರಿಂದ । ಸುರರಿಂದ ನರರಿಂದ
ವಂದ್ಯರಾಗುವರು ಎಂದೆಂದು ೬

೨೬೭ ಕಲುಷವರ್ಜಿತ ನಿನ್ನ ದಳಗಳಿಂದಲಿ ಲಕ್ಷ್ಮೀ
ನಿಲಯನಂಘ್ರಿಗಳನ್ನು ಪೂಜಿಪ ।
ಪೂಜಿಪರಿಗೆ ಪರಮಮಂ
ಗಳದ ಪದವಿತ್ತು ಸಲಹೂವಿ ೭

೨೬೮ ಶ್ರೀ ತುಲಸಿದೇವಿ ಮನ್ಮಾತೆ ಲಾಲಿಸು ಜಗ
ನ್ನಾಥ ವಿಠಲನ್ನ ಚರಣಾಬ್ಜ । ಚರಣಾಬ್ಜ
ಎನ್ನ ಹೃತ್ಪದ್ಮದಲಿ
ನೀ ತೋರೆ ಕೃಪೆಯಿಂದ ೮

೮. ಬ್ರಹ್ಮದೇವರ ಸ್ತೋತ್ರ

೨೬೯ ಸತ್ಯಲೋಕೇಶನೆ ಬಳಿತ್ಥಾದಿ ಶ್ರುತಿವಿನುತ
ಮತ್ಯುಂಜಯಾದಿ ಸುರಪೂಜ್ಯ ।
ಸುರಪೂಜ್ಯ ಭಕುತರ ವಿ
ಪತ್ತು ಪರಹರಿಸಿ ಸಲಹಯ್ಯ ೧

೨೭೦ ಸತ್ಯಲೋಕವೆ ಸದನ ತತ್ವಾಭಿಮಾನಿಗಳು
ಭೃತ್ಯರೆನಿಸುವರು ಮಹಲಕ್ಷ್ಮಿ । ಮಹಲಕ್ಷ್ಮಿ ಜನನಿ ಪುರು
ಷೋತ್ತಮನೆ ಜನಕನೆನಿಸುವ ೨

೨೭೧ ಚತುರದಶ ಲೋಕಾಧಿಪತಿಯೆಂದೆನಿಪ ನಿನಗೆ ಸರ
ಸ್ವತಿಯು ನಿಜರಾಣಿ ವಿಹಗೇಂದ್ರ । ವಿಹಗೇಂದ್ರ ಶೇಷ ಪಾ
ರ್ವತಿಪರಾತ್ಮಜರು ಎನಿಸೋರು ೩

೨೭೨ ಋಜುಗಣಾಧೀಶ್ವರನೆ ಅಜಪದವಿಗೋಸುಗದಿ
ಭಜಿಸಿದವನಲ್ಲ ಹರಿಪಾದ । ಹರಿಪಾದ ಸೇವೆಯು ಸ
ಹಜವೇ ಸರಿ ನಿನಗೆಂದೆಂದು ೪

೨೭೩ ಚತುರಾಸ್ಯ ತತ್ವ ದೇವತೆಗಳಂತರ್ಯಾಮಿ
ನತಿಸಿ ಬಿನ್ನೈಪೆ ನಿನ್ನಲ್ಲಿ । ನಿನ್ನಲ್ಲಿ ಭಕ್ತಿಶಾ
ಶ್ವತವಾಗಿರಲೋ ಹರಿಯಲ್ಲಿ ೫

೨೭೪ ದ್ವಿಶತ ಕಲ್ಪದಲಿ ತಪವೆಸಗಿ ಅಸುದೇವ ಪೊಂ
ಬಸಿರ ಪದ ಪಡೆದೆ ಹರಿಯಿಂದ ।
ಹರಿಯಿಂದ ಮಿಕ್ಕ ಸುಮ
ನಸರಿಗುಂಟೇನೊ ಈ ಭಾಗ್ಯ ೬

೨೭೫ ಇನಿತಿದ್ದ ಬಳಿಕ ನೀ ಸಲಹದಿಪ್ಪುದು ನಮ್ಮ
ಅನುಚಿತೋಚಿತವೊ ನೀ ಬಲ್ಲೇ । ನೀ ಬಲ್ಲೆ ಶಾರದಾ
ವನಿತೆಯ ರಮಣ ದಯವಾಗೊ ೭

೨೭೬ ಸತ್ವಾತ್ಮಕ ಶರೀರ ಮಿಥ್ಯಾದಿ ಮತಗಳೊಳು
ಉತ್ಪತ್ತಿ ಸಂಪತ್ತು ಕೊಡದಿರು । ಕೊಡದಿರೆನಗೆಂದು ಸಂ
ಪ್ರಾರ್ಥಿಸುವೆ ನಿನಗೆ ನಮೋ ಎಂದು ೮

೨೭೭ ಅಜ್ಞಾನವೆಂಬ ಧಾನ್ಯವನು ಒರಳಿಗೆ ಹಾಕಿ
ಸುಜ್ಞಾನವೆಂಬೊ ಒನಕೀಲಿ । ಒನಕೀಲಿ ಪಾಪಧಾನ್ಯಗಳ
ನುಗ್ಗು ಮಾಡಿದೆಯೊ ಫಳಿಗ್ಯಾಗೆ ೯

೨೭೮ ಮಾತರಿಶ್ವನೆ ನಿನ್ನ ಪ್ರೀತಿಯೊಂದೇ ಜಗ
ನ್ನಾಥವಿಠಲನ್ನ ಕರುಣಕ್ಕೆ । ಕರುಣಕ್ಕೆ ಕಾರಣವು ಯಮ
ಯಾತನವು ಬರಲು ನಾನಂಜೆ ೧೦

೯. ವಾಯುದೇವರ ಸ್ತೋತ್ರ

೨೭೯ ಹನುಮ ಭೀಮಾನಂದ ಮುನಿರಾಯ ಎನ್ನದು
ಗುಣಗಳೆಣಿಸದಲೆ ಸಾಕಿ ಸಲಹೆಂದು ।
ಸಲಹೆಂದು ಬಿನ್ನೈಪೆವಿ
ಜ್ಞಾನ ರೂಪ ವಿಜಿತಾತ್ಮ ೧

೨೮೦ ತ್ರಿದಶವಿಂಶತಿ ರೂಪ ಸುದತಿಯಿಂದೊಡಗೊಡಿ
ಪದುಮಜಾಂಡದೊಳು ಸರ್ವತ್ರ । ಸರ್ವತ್ರ ಭಕುತರಾ
ಬದಿಗನಾಗಿದ್ದು ಸಲಹುವಿ ೨

೨೮೧ ಕೋಟಿತ್ರಯ ಸ್ವರೂಪಿ ದಾಟಿಸು ಭವಾಬ್ಧಿಯ ನಿ
ಶಾಟ ಕುಲವೈರಿ ಭಯಹಾರಿ ।
ಭಯಹಾರಿ ರಣದೊಳು ಕಿ
ರೀಟಿಯ ಕಾಯ್ದಿ ಧ್ವಜನಾಗಿ ೩

೨೮೨ ಪ್ರಾಣನಾಯಕ ನಿನ್ನ ಕಾಣ ಬೇಕೆಂದೆನುತ
ಸಾನುರಾಗದಲಿ ನಮಿಸುವೆ । ನಮಿಸುವೆನು ಮೂಜಗ
ತ್ರಾಣ ಪಂಚಾಸ್ಯ ಪರಮೇಷ್ಟಿ ೪

೨೮೩ ಚತುರವಿಂಶತಿ ತತ್ವ ಪತಿಗಳೊಳಗೆ ಗರುವ
ನತಿಸುವೆನು ನಿನ್ನ ಚರಣಕ್ಕೆ । ಚರಣಕಮಲವ ತೋರಿ
ಕೃತ ಕೃತ್ಯನೆನಿಸೊ ಕೃಪೆಯಿಂದ ೫

೨೮೪ ಮೂರೇಳು ಸಾವಿರದ ಆರ್ನೂರು ಮಂತ್ರವ
ಈರೇಳು ಜಗದಿ ಜನರೊಳು । ಜನರೊಳು ಮಾಡಿ ಉ
ದ್ಧಾರ ಗೈಸುವಿಯೊ ಸುಜನರ ೬

೨೮೫ ಪವಮಾನರಾಯ ನೀ ತ್ರಿವಿಧ ಜೀವರೊಳಿದ್ದು
ವಿವಿಧ ವ್ಯಾಪಾರ ನೀ ಮಾಡಿ । ನೀ ಮಾಡಿ ಮಾಡಿಸಿ
ಅವರವರ ಗತಿಯ ಕೊಡುತಿಪ್ಪ ೭

೨೮೬ ಮಿಶ್ರ ಜೀವ ರೊಳಿದ್ದು ಮಿಶ್ರಜ್ಞಾನವನಿತ್ತು
ಮಿಶ್ರ ಸಾಧನವ ನೀ ಮಾಡಿ । ನೀ ಮಾಡಿ ಮಾಡಿಸಿ
ಮಿಶ್ರಗತಿಗಳನೆ ಕೊಡುತಿಪ್ಪೆ ೮

೨೮೭ ಅನಿಲದೇವನೆ ದೈತ್ಯದನುಜ ರಾಕ್ಷ ಸರೊಳಿದ್ದು
ಅನುಚಿತ ಕುಕರ್ಮ ನೀ ಮಾಡಿ । ನೀ ಮಾಡಿ ಮೋಹಿಸಿ
ದಣಿಸುವಿಯೊ ಅವರ ದಿವಿಜೇಶ ೯

೨೮೮ ಕಾಲನಿಯಮಕನೆ ಕಾಲತ್ರಯಾದಿಗಳಲ್ಲಿ
ಕಾಲ ಗುಣ ಕರ್ಮ ಅನುಸಾರ । ಅನುಸಾರವಿತ್ತು
ಪಾಲಿಸುವಿ ಜಗವ ಪವಮಾನ ೧೦

೨೮೯ ಆಖಿಣಾಶ್ಮನೆ ನಿನ್ನ ಸೋಕಲರಿಯವು ದೋಷ
ಶ್ರೀಕಂಠ ಮುಖ್ಯ ಸುರರಿಗೆ । ಸುರರಿಗಿಲ್ಲವು ಭಾರ
ತೀಕಾಂತ ನಿನಗೆ ಬಹದೆಂತೊ ೧೧

೨೯೦ ಕಲ್ಯಾದಿ ದೈತ್ಯಕುಲದಲ್ಲಣ ದಯಾಸಾಂದ್ರ
ಬಲ್ಲಿದನು ಜಗಕೆ ಭಯದೂರ । ಭಯದೂರ ಭಕ್ತರ
ನೆಲ್ಲ ಕಾಲದಲ್ಲಿ ಸಲಹಯ್ಯ ೧೨

೨೯೧ ಕಾರುಣ್ಯನಿಧಿ ಜಗದ ಉದ್ಧಾರಕನು ನೀನೆ ಉ
ದ್ಧಾರ ಮಾಡದಿರೆ ಭಕುತರ । ಭಕುತರನು ಕಾವ
ರಿನ್ನಾರು ಲೋಕದಲಿ ಜಯವಂತ ೧೩

೨೯೨ ತ್ರಿಜಗದ್ಗುರುವರೇಣ್ಯ ಋಜುಗಣಾಧಿಪ ಪಾದಾಂ
ಬುಜ ಯುಗ್ಮಕ್ಕೆರಗಿ ಬಿನ್ನೈಪೆ । ಬಿನ್ನೈಪೆ ಮನ್ಮನದಿ
ನಿಜರೂಪ ತೋರಿ ಸಂತೈಸೊ ೧೪

೨೯೩ ಅನಿಲದೇವನೆ ನಿನ್ನ ಜನುಮ ಜನುಮಗಳಲ್ಲಿ
ಇನಿತು ಬೇಡುವೆನು ಎಂದೆಂದು ।
ಎಂದೆಂದು ವಿಷಯ ಚಿಂ
ತನೆಯ ಕೊಡದೆನ್ನ ಸಲಹೆಂದು ೧೫

೨೯೪ ತಾರತಮ್ಯ ಜ್ಞಾನ ವೈರಾಗ್ಯಭಕ್ತಿ
ಧಾರಡ್ಯವಾಗಿ ಇರಲೆಂದು । ಇರಲೆಂದು ಬಿನ್ನೈಪೆ
ಭಾರತೀರಮಣ ನಿನಗಾನು ೧೬

೨೯೫ ಮರಣ ಜನನಗಳು ಬಂದರೆ ಬರಲಿ ಪ್ರದ್ವೇಷ
ಗುರು ಹಿರಿಯರಲ್ಲಿ ಹರಿಯಲ್ಲಿ । ಹರಿಯಲ್ಲಿ ಕೊಡದೆ ಉ
ದ್ಧರಿಸಬೇಕೆನ್ನ ಪರಮಾಪ್ತ ೧೭

೨೯೬ ವಿಷಯದಾಸೆಗಳ ಬಿಡಿಸಿ ಅಸುನಾಥ ಎನ್ನ ಪಾ
ಲಿಸಬೇಕು ಮನವ ನಿನ್ನಲ್ಲಿ । ನಿನ್ನಲ್ಲಿ ನಿಲಿಸಿ ಸಂ
ತಸದಿ ಕಾಯೆನ್ನ ಮರುದೀಶ ೧೮

೨೯೭ ವಾಯು ಹನುಮದ್ಭೀಮರಾಯ ಮಧ್ವರ ಸ್ತೋತ್ರ
ಬಾಯೊಳುಳ್ಳವಗೆ ಜನ್ಮಾದಿ । ಜನ್ಮಾದಿ ರೋಗಭಯ
ವೀಯನೆಂದೆಂದು ಭಗವಂತ ೧೯

೨೯೮ ಮಾತರಿಶ್ವನೆ ಎನ್ನ ಮಾತುಗಳ ಲಾಲಿಸಿ ಜಗ
ನ್ನಾಥ ವಿಠಲನ್ನ ಮನದಲ್ಲಿ । ಮನದಲ್ಲಿ ತೋರಿ ಭವ
ಭೀತಿಯನು ಬಿಡಿಸೊ ಭವ್ಯಾತ್ಮ ೨೦

೨೯೯ ನಮ್ಮ ಗುರುಗಳ ಪಾದ ಒಮ್ಮೆ ನೆನೆಯಲು ಆ
ಜನ್ಮ ಕೃತ ಪಾಪ ಪರಿಹಾರ । ಪರಿಹಾರವಾಗಿ ಸ
ದ್ಬೊಮ್ಮಪದವಿಯಲಿ ಸುಖಿಸುವಿ ೨೧

೩೦೦ ಮೂರೇಳು ಸಾವಿರದ ಆರುನೂರು ಹಂಸ
ಮೂರು ಮಂತ್ರಗಳ ಜನರೊಳು । ಜನರೊಳು ಮಾಡ್ವ ಸ
ಮೀರನ ಅಡಿಗೆ ಶರಣೆಂಬೆ ೨೨

೩೦೧ ಅಂಜಿದವರಿಗೆ ವಜ್ರಪಂಜರನೆನಿಪ ಪ್ರ
ಭಂಜನ ಪ್ರಭುವೆ ಪ್ರತಿದಿನ । ಪ್ರತಿದಿನ ನಮ್ಮ ಭಯ
ಭಂಜಿಸಿ ಕಾಯೊ ಬಹುರೂಪ ೨೩

೩೦೨ ಭವಿಷ್ಯದ್ವಿಧಾತನೆ ತವ ಚರಣ ಸೇವಿಪೆನು
ಶ್ರವಣ ಮನನಾದಿ ಭಕುತಿಯ । ಭಕುತಿ ನಿನ್ನಲ್ಲಿ ಮಾ
ಧವನಲ್ಲಿ ಕೊಟ್ಟು ಸಲಹಯ್ಯ ೨೪

೩೦೩ ಕಲಿಮುಖ್ಯ ದೈತ್ಯರುಪಟಳವ ಪರಿಹರಿಸಿ ಮ
ತ್ಕುಲಗುರುವೆ ಸಲಹೊ ಕಾರುಣ್ಯ । ಕಾರುಣ್ಯ ಸಿಂಧು ನಿ
ನ್ನೊಲುಮೆಯೊಂದಿ ಹರಿಕಾಯ್ವ ೨೫

೩೦೪ ಭಾರತೀ ರಮಣ ಮದ್ಭಾರ ನಿನ್ನದು ಎನ್ನ
ಪಾರ ದೋಷಗಳ ಎಣಿಸದೆ । ಎಣಿಸದೆ ಸಂತೈಸೊ
ಕಾರುಣ್ಯ ಸಿಂಧು ಎಂದೆಂದು ೨೬

೩೦೫ ಶ್ರೀಶಸದ್ಮನೆ ಜೀವರಾಶಿಯೊಳಗೊಂದಧಿಕ
ವಿಂಶತಿ ಸಹಸ್ರದಾರ್ನೂರು । ಆರ್ನೂರು ಹಗಲಿರುಳು
ಶ್ವಾಸ ಜಪಮಾಡಿ ಹರಿಗೀವಿ ೨೭

೩೦೬ ತಾಸಿಗೊಂಭೈ ನೂರು ಶ್ವಾಸಜಪಗಳ ಮಾಡಿ
ಬೇಸರದೆ ನಮ್ಮ ಸಲಹುವಿ । ಸಲಹುವಿ ಶ್ರೀ ಭಾರ
ತೀಶ ನಿನ್ನಡಿಗೆ ಶರಣೆಂಬೆ ೨೮

೩೦೭ ಬಲದೇವ ನೀನೆ ಬೆಂಬಲವಾಗಿ ಇರಲು ದು
ರ್ಬಲ ಕಾಲಕರ್ಮ ಕೆಡಿಸೋದೆ । ಕೆಡಿಸೋದೆ ನಿನ್ನ ಹಂ
ಬಲು ಉಳ್ಳ ಜನರ ಜಗದೊಳು ೨೯

೩೦೮ ಹಾಲಾಹಲವನುಂಡು ಪಾಲಿಸಿದೆ ಜಗವ ಕರು
ಣಾಳು ಪವಮಾನ ವಿಜ್ಞಾನ । ವಿಜ್ಞಾನ ಭಕುತಿ ಶ್ರೀ
ಲೋಲನಲಿ ಕೊಟ್ಟು ಸಲಹಯ್ಯ ೩೦

೩೦೯ ವಾತಾತ್ಮಜನೆ ನಿನ್ನ ಪ್ರೀತಿಯನೆ ಪಡೆದ ಖ
ದ್ಯೋತನಂದನನ ಪೊರೆದಂತೆ ।
ಪೊರೆದಂತೆ ಪೊರೆಯೆನ್ನ
ನೀನಿಂತು ಕ್ಷಣದಿ ಕೃಪೆಯಿಂದ ೩೧

೩೧೦ ಅಪರಾಜಿತನೆ ಮನದೊಳಪರೋಕ್ಷವಿತ್ತೆನಗೆ
ಅಪವರ್ಗದಲ್ಲಿ ಸುಖವೀಯೊ ।
ಸುಖವೀಯೊ ಭಾವಿ ಲೋ
ಕಪಿತಾಮಹನೆ ಎನಗೆ ದಯವಾಗೊ ೩೨

೩೧೧ ಬುದ್ಧಿ ಬಲ ಕೀರ್ತಿ ಪರಿಶುದ್ಧ ಭಕ್ತಿಜ್ಞಾನ
ಸದ್ಧೈರ್ಯಾಜಾಡ್ಯ ಆಯುಷ್ಯ । ಆಯುಷ್ಯ ವಿತ್ತಭಿ
ವೃದ್ಧಿ ಯೈದಿಸುವಿ ಪವಮಾನ ೩೩

೩೧೨ ದ್ರೌಪದೀರಮಣ ವಿಜ್ಞಾಪಿಸುವೆ ನಿನ್ನಡಿಗೆ
ತಾಪತ್ರಯಗಳ ಭಯ ಶೋಕ । ಭಯಶೋಕ ಪರಿಹರಿಸಿ
ಶ್ರೀ ಪತಿಯ ಧ್ಯಾನ ಸುಖವೀಯೊ ೩೪

೩೧೩ ಪಾಲ್ಗಡಲ ಮಗಳಾಳ್ದನಾಳ್ಗಳೊಳಗಪ್ರತಿಮ
ಓಲೈಪ ಜನರ ಸಲಹೆಂದು । ಸಲಹೆಂದು ಬಿನ್ನೈಪೆ
ಫಲ್ಗುಣಾಗ್ರಜನೆ ಪ್ರತಿದಿನ ೩೫

೩೧೪ ಮಧ್ವಾಖ್ಯವೆಂಬ ಪ್ರಸಿದ್ಧ ಶ್ರುತಿ ಪ್ರತಿಪಾದ್ಯ
ಮಧ್ವಮುನಿರಾಯ ತವಕೀರ್ತಿ । ತವಕೀರ್ತಿವಾಣಿ
ರುದ್ರಾದಿಗಳಿಗರಿದು ತುತಿಸಲ್ಕೆ ೩೬

೩೧೫ ಅದ್ವೈತಮತವಿಪಿನ ಪ್ರಧ್ವಂಸ ಕಾನಳನೆ
ಮಧ್ಯಗೇಹಾಖ್ಯ ದ್ವಿಜಪತ್ನಿ । ದ್ವಿಜಪತ್ನಿ ಜಠರದೊಳು
ಉದ್ಭವಿಸಿ ಮೆರೆದೆ ಜಗದೊಳು ೩೭

೩೧೬ ಹುಣಿಸೆ ಬೀಜದಿ ಪಿತನ ಋಣನ ತಿದ್ದಿದ ಪೂರ್ಣ
ಗುಣವಂತ ಗುರುವೆ ದಯವಾಗೊ ।ದಯವಾಗಿ ನೀನೆನ್ನ
ಋಣ ಮೂರರಿಂದ ಗೆಲಿಸಯ್ಯಾ ೩೮

೩೧೭ ಯತ್ಯಾಶ್ರಮವ ವಹಿಸಿ ಶ್ರುತ್ಯರ್ಥಗ್ರಂಥ ಮೂ
ವತ್ತೇಳು ರಚಿಸಿ ದಯದಿಂದ ।ದಯದಿಂದ ನಿನ್ನವರಿ
ಗಿತ್ತು ಪಾಲಿಸಿದಿ ಕರುಣಾಳು ೩೯

೩೧೮ ನಾಮತ್ರಯಾಂಕಿತ ಸುಧೀಮಂತ ಕುಲಗುರುವೆ
ಶ್ರೀಮದಾಚಾರ್ಯ ಗುರುವರ್ಯ । ಗುರುವರ್ಯ
ಧರ್ಮಾರ್ಥಕಾಮ ಮೋಕ್ಷದನೆ ದಯವಾಗೊ ೪೦

೩೧೯ ಮೂರೇಳು ಕುಮತ ಘೋರಾರಣ್ಯ ಪಾವಕ ಸ
ಮೀರಾವತಾರ ಗಂಭೀರ । ಗಂಭೀರ ತ್ವತ್ಪದಾಂ
ಭೋರುಹ ಧ್ಯಾನ ಕರುಣೀಸೊ ೪೧

೩೨೦ ಈ ಚರಾಚರದೊಳು ಅನಾಚಾರದಲಿ ನಡೆವ
ನೀಚ ಮಾಯಿಗಳ ಗೆಲಿದಿರ್ಪ । ಗೆಲಿರ್ಪ ಶ್ರೀಮ
ದಾಚಾರ್ಯರಡಿಗಳಿಗೆ ಶರಣೆಂಬೆ ೪೨

೩೨೧ ನಿನಗಿಂದಧಿಕರಾದ ಅನಿಮಿತ್ತ ಬಾಂಧವರು
ಎನಗಿಲ್ಲ ಶ್ರೀಮಧ್ವ ಮುನಿರಾಯ ।
ಮುನಿರಾಯನಿರಲು ಯೋ
ಚನೆ ಯಾಕೆ ಜಗದಿ ನಮಗಿನ್ನು ೪೩

೩೨೨ ಶ್ರೀ ಮತ್ಸಮಸ್ತ ಗುಣಧಾಮ ವಿಷ್ಣೋರಂಘ್ರಿ
ತಾಮರಸ ಮಧುಪ ಭವತಾಪ । ಭವತಾಪ ಗುರುಸಾರ್ವ
ಭೌಮ ಪರಿಹರಿಸಿ ಸಲಹಯ್ಯ ೪೪

೩೨೩ ಉದ್ಧರಿಪುದೆಮ್ಮ ಹನುಮದ್ಭೀಮಸೇನ ಗುರು
ಮಧ್ವ ಮುನಿರಾಯ ಕವಿಗೇಯ । ಕವಿಗೇಯ ಎನ್ನ ದು
ರ್ಬುದ್ಧಿಗಳ ಬಿಡಿಸೊ ದಯದಿಂದ ೪೫

೩೨೪ ನಮೋ ಭಾರತೀರಮಣ ಹನುಮದ್ಭೀಮ
ಯಮಿಕುಲೋತ್ತಂಸ ಗುರುಮಧ್ವ ।
ಗುರುಮಧ್ವ ದುರ್ವಾದಿ
ತಿಮಿರ ಮಾರ್ತಾಂಡ ಸುರಶೌಂಡ ೪೬

೩೨೫ ವಾತಾತ್ಮಜನೆ ನಿನ್ನ ದೂತರಿಗೆ ಬಂದ ಭಯ
ನೀ ತರಿದು ಕಾಯೊ ನಲವಿಂದ । ನಲವಿಂದ ಶ್ರೀ ಜಗ
ನ್ನಾಥ ವಿಠಲನ ನಿಜದೂತ ೪೭

೧೦ ರುದ್ರದೇವರ ಸ್ತೋತ್ರ

೩೨೬ ಚಂದ್ರಶೇಖರ ಸುಮನಸೇಂದ್ರ ಪೂಜಿತ ಚರಣಾ
ಹೀಂದ್ರ ಪದಯೋಗ್ಯ ವೈರಾಗ್ಯ । ವೈರಾಗ್ಯಾ ಪಾಲಿಸಮ
ರೇಂದ್ರ ನಿನ್ನಡಿಗೆ ಶರಣೆಂಬೆ ೧

೩೨೭ ನಂದಿವಾಹನ ವಿಮಲ ಮಂದಾಕಿನೀಧರನೆ
ವೃಂದಾರಕೇಂದ್ರ ಗುಣಸಾಂದ್ರ । ಗುಣಸಾಂದ್ರ ಎನ್ನ ಮನ
ಮಂದಿರದಿ ನೆಲೆಸಿ ಸುಖವೀಯೊ ೨

೩೨೮ ಕೃತ್ತಿವಾಸನೆ ನಿನ್ನ ಭೃತ್ಯಾನುಭೃತ್ಯ ಎ
ನ್ನತ್ತ ನೋಡಯ್ಯ ಶುಭಕಾಯ ಭಕ್ತರಪ
ಮೃತ್ಯು ಪರಿಹರಿಸಿ ಸಲಹಯ್ಯ ೩

೩೨೯ ನೀಲಕಂಧರ ರುಂಡಮಾಲಿ ಮೃಗವರಪಾಣಿ
ಶೈಲಜಾರಮಣ ಶಿವರೂಪಿ । ಶಿವರೂಪಿ ನಿನ್ನವರ
ಪಾಲಿಸೊ ನಿತ್ಯ ಪರಮಾಪ್ತ ೪

೩೩೦ ತ್ರಿಪುರಾರಿ ನಿತ್ಯವೆನ್ನಪರಾಧಗಳ ನೋಡಿ
ಕುಪಿತನಾಗದಲೆ ಸಲಹಯ್ಯ । ಸಲಹಯ್ಯ ಬಿನ್ನೈಪೆ
ಕೃಪಣವತ್ಸಲನೆ ಕೃಪೆಯಿಂದ ೫

೩೩೧ ಪಂಚಾಸ್ಯ ಮನ್ಮನದ ಚಂಚಲವ ಪರಿಹರಿಸಿ
ಸಂಚಿತಾಗಾಮಿ ಪ್ರಾರಬ್ಧ । ಪ್ರಾರಬ್ಧ ದಾಟಿಸು ವಿ
ರಿಂಚಿಸಂಭವನೆ ಕೃತಯೋಗ ೬

೩೩೨ ಮಾನುಷಾನ್ನವನುಂಡು ಜ್ಞಾನ ಶೂನ್ಯನು ಆದೆ
ಏನು ಗತಿ ಎನಗೆ ಅನುದಿನ । ಅನುದಿನದಿ ನಾ ನಿನ್ನ
ಧೀನದವನಯ್ಯ ಪ್ರಮಥೇಶ ೭

೩೩೩ ಅಷ್ಟಮೂರ್ತ್ಯಾತ್ಮಕನೆ ವೃಷ್ಟಿವರ್ಯನ ಹೃದಯಾ
ಧಿಷ್ಠಾನದಲ್ಲಿ ಇರದೋರು । ಇರದೋರು ನೀ ದಯಾ
ದೃಷ್ಟಿಯಲಿ ನೋಡೊ ಮಹದೇವ ೮

೩೩೪ ಪಾರ್ವತಿರಮಣ ಶುಕ ದೂರ್ವಾಸ ರೂಪದಲ್ಲಿ
ಉರ್ವಿಯೊಳಗುಳ್ಳ ಭಕುತರ । ಭಕುತರ ಸಲಹು ಸುರ
ಸಾರ್ವಭೌಮತ್ವ ವೈದಿದೆ ೯

೩೩೫ ಭಾಗಿಥಿಧರನೆ ಭಾಗವತ ಜನರ ಹೃ
ದ್ರೋಗ ಪರಿಹರಿಸಿ ನಿನ್ನಲ್ಲಿ । ನಿನ್ನಲ್ಲಿ ಭಕ್ತಿ ಚೆ
ನ್ನಾಗಿ ಕೊಡು ಎನಗೆ ಮರೆಯಾದೆ ೧೦

೩೩೬ ಮೃಡದೇವ ಎನ್ನ ಕೈಪಿಡಿಯೊ ನಿನ್ನವನೆಂದು
ಬಡವ ನಿನ್ನಡಿಗೆ ಬಿನ್ನೈಪೆ । ಬಿನ್ನೈಪೆನೆನ್ನ ಮನ
ದೃಢವಾಗಿ ಇರಲಿ ಹರಿಯಲ್ಲಿ ೧೧

೩೩೭ ವ್ಯೋಮ ಕೇಶನೆ ತ್ರಿಗುಣನಾಮ ದೇವೋತ್ತಮ ಉ
ಮಾಮನೋಹರನೆ ವಿರುಪಾಕ್ಷ ।
ವಿರುಪಾಕ್ಷ ಮಮ ಗುರು
ಸ್ವಾಮಿ ಎಮಗೆ ದಯವಾಗೊ ೧೨

೩೩೮ ಅಷ್ಟ ಪ್ರಕೃತಿಗನೆ ಸರ್ವೇಷ್ಟ ದಾಯಕನೆ ಪರ
ಮೇಷ್ಟಿ ಸಂಭವನೆ ಪಂಮಾಪ್ತ । ಪರಮಾಪ್ತ ಎನ್ನದಯ
ದೃಷ್ಟಿಯಿಂದ ನೋಡಿ ಸಲಹಯ್ಯ ೧೩

೩೩೯ ಪಂಚಾಸ್ಯ ದೈತ್ಯಕುಲ ವಂಚಕನೆ ಭಾವಿ ವಿ
ರಿಂಚಿ ಶೇಷನಲಿ ಜನಿಸಿದೆ । ಜನಿಸಿದೆ ಲೋಕತ್ರಯದಿ
ಸಂಚಾರ ಮಾಳ್ಪೆ ಸಲಹಯ್ಯ ೧೪

೩೪೦ ಉಗ್ರತಪ ನಾ ನಿನ್ನನುಗ್ರಹದಿ ಜನಿಸಿದೆ ಪ
ರಿಗ್ರಹಿಸಿ ಎನ್ನ ಸಂತೈಸು । ಸಂತೈಸಿ ಇಂದ್ರಿಯವ
ನಿಗ್ರಹಿಪ ಶಕ್ತಿ ಕರುಣೀಸೊ ೧೫

೩೪೧ ಲೋಚನತ್ರಯ ನಿನ್ನ ಯಾಚಿಸುವೆ ಸಂತತವು
ಖೇಚರೇಶನ ವಹನ ಗುಣರೂಪ ।
ಗುಣರೂಪ ಕ್ರಿಯೆಗಳಾ
ಲೋಚನೆಯ ಕೊಟ್ಟು ಸಲಹಯ್ಯ ೧೬

೩೪೨ ಮಾತಂಗ ಷಣ್ಮುಖರ ತಾತ ಸಂತತ ಜಗ
ನ್ನಾಥ ವಿಠ್ಠಲನ ಮಹಿಮೆಯ । ಮಹಿಮೆಯನು ತಿಳಿಸು
ಪ್ರೀತಿಯಿಂದಲೆಮಗೆ ಅಮರೇಶ ೧೭

೩೪೩ ಭೂತನಾಥನ ಗುಣ ಪ್ರಭಾತ ಕಾಲದಲೆದ್ದು
ಪ್ರೀತಿಪೂರ್ವಕದಿ ಪಠಿಸುವ । ಪಠಿಸುವರ ಜಗ
ನ್ನಾಥವಿಠಲನು ಸಲಹುವ ೧೮

೧೧. ಅಗ್ನಿ ಸ್ತೋತ್ರ

೩೪೪ ಕಡಲ ಒಡಲೊಳಗಿದ್ದು ಬಡಬಾಗ್ನಿ ಎನಿಸುವೆ
ಅಡವಿಯೊಳಗಿದ್ದು ದಾವಾಗ್ನಿ । ದಾವಾಗ್ನಿ ಎನಿಸುವಿ
ಪೊಡವಿಯೊಳು ಭೌಮ ಎನಿಸುವಿ ೧

೩೪೫ ಕೃಷ್ಣ ವರ್ತ್ಮನೆ ಎನ್ನ ದುಷ್ಟ ಕರ್ಮವ ನೋಡಿ
ಭ್ರಷ್ಟನೆನ್ನದಲೆ ಸಂತೈಸೊ । ಸಂತೈಸಿ ಭಾರ್ಗವಗ
ಧಿಷ್ಠಾನನೆಂದು ಮೊರೆಹೊಕ್ಕೆ ೨

೩೪೬ ದೇವಮುಖ ಎನ್ನಯ ಕರಾವಲಂಬನವಿತ್ತು
ಪಾಮರಗೊಲಿದು ಭವತಾಪ । ಭವತಾಪ ಪರಿಹರಿಸು
ಪಾವಕನ ಜನಕ ಪ್ರತಿದಿನ ೩

೩೪೭ ರುದ್ರಾಕ್ಷಗನೆ ಮಹೋಪದ್ರಗಳ ಪರಿಹರಿಸು
ಭದ್ರಪ್ರಕಾಶ ಮಹ ಭದ್ರ । ಮಹಭದ್ರ ವಿಖ್ಯಾತ ಕರುಣಾಸ
ಮುದ್ರ ನೀನೆಂದು ಶರಣೆಂಬೆ ೪

೩೪೮ ವೀತಿಹೋತ್ರನೆ ಜಗನ್ನಾಥ ವಿಠ್ಠಲನ ಸಂ
ಪ್ರೀತಿ ಪೂರ್ವಕದಿ ಸುತಿಸುವ । ತುತಿಸಿ ಹಿಗ್ಗುವ ಭಾಗ್ಯ
ಜಿತವಾಗಿ ಇರಲಿ ಎಂದೆಂದು ೫

೩೪೯ ಶುಚಿನಾಮಕನೆ ಮನೋವಚನಾದಿಗಳ ದೋಷ
ನಿಭಯಗಳನೆಣಿಸಿ ದಣಿಸದೆ । ದಣಿಸದೆ ಮಚ್ಚಿತ್ತ
ಖಚಿತವನು ಮಾಡೊ ಹರಿಯಲ್ಲಿ ೬

೩೫೦ ಹುತವಹನೆ ಎನ್ನ ದುರ್ಮತಿಯ ಪರಿಹರಿಸಿ ಸ
ದ್ಗತಿಯ ಪಥ ತೋರೊ ದಯದಿಂದ ।
ದಯದಿಂದ ನಿತ್ಯ ನಾ
ನುತಿಸುವೆ ನಿನ್ನಾ ಕರುಣಾಳು ೭

೧೨ ನವಗ್ರಹ ಸ್ತೋತ್ರ

೩೫೧ ಆದಿತ್ಯದೇವ ತ್ವತ್ಪಾದಯುಗಳಕಭಿ
ವಾದನವ ಮಾಳ್ಪೆ ಅನುದೀನ । ಅನುದೀನ ಸಜ್ಜನರ
ವ್ಯಾಧಿಯ ಕಳೆದು ಸುಖವೀಯೊ ೧

೩೫೨ ಸಂಜ್ಞಾರಮಣ ನಿನಗೆ ವಿಜ್ಞಾಪಿಸುವೆನೊ ಸ
ರ್ವಜ್ಞ ನೀನೆಂದು ಸರ್ವತ್ರ । ಸರ್ವತ್ರ ಎನಗೆ ಬ್ರ
ಹ್ಮಜ್ಞಾನ ಭಕುತಿ ಕರುಣೀಸೊ ೨

೩೫೩ ಸೂರಿಗಮ್ಯನೆ ವಾಕ್ಶರೀರ ಬುದ್ಧಿಜವಾದ
ಪಾರ ದೋಷಗಳನೆಣಿಸಾದೆ । ಎಣಿಸಾದೆ ಭಗವಂತ
ನಾರಾಧನೆಯನಿತ್ತು ಕರುಣೀಸೊ ೩

೩೫೩ ರೋಹಿಣೀರಮಣ ಮದ್ದೇಹಗೇಹಾದಿಗಳ
ಮೋಹ ಪರಿಹರಿಸಿ ಮನದಲ್ಲಿ । ಮನದಲ್ಲಿ ಎನಗೆ ಗರುಡ
ವಾಹನನ ಸ್ಮರಣೆಯನು ಕರುಣೀಸೊ ೪

೩೫೪ ಕ್ಷೀರಾಬ್ಧಿಜಾತ ಮಾರಾರಿಮಸ್ತಕಸದನ
ವಾರಿಜೋದ್ಭವನ ಆವೇಶ । ಆವೇಶಪಾತ್ರ ಪರಿ
ಹಾರ ಗೈಸೆನ್ನ ಭವತಾಪ ೫

೩೫೫ ದತ್ತದೂರ್ವಾಸನನುಜ ಅತ್ರಿಸಂಭವನೆ ತ್ವ
ದ್ಭೃತ್ಯ ನಾನಯ್ಯ ಎಂದೆಂದು । ಎಂದೆಂದು ಪ್ರಾರ್ಥಿಸುವೆ
ಹೃತ್ತಿಮಿರ ಕಳೆದು ಸಂತೈಸೊ ೬

೩೫೬ ಕೋಲ ಭೂನಂದನ ಪ್ರವಾಳ ಸಮವರ್ಣ ಕರ
ವಾಳ ಸಮಖೇಟ ನಿಶ್ಯಂಕ । ನಿಶ್ಯಂಕನಾಖ್ಯ ಸುರ
ಮೌಳಿ ನೀಯೆನ್ನ ೭

೩೫೭ ಮಂಗಳಾಹ್ವಯನೆ ಸರ್ವೇಂಗಿತಜ್ಞನೆ ಅಂತ
ರಂಗದಲಿ ಹರಿಯ ನೆನೆವಂತೆ । ನೆನೆವಂತೆ ಕರುಣಿಸೊ
ಅಂಗಾರವರ್ಣ ಅನುದಿನ ೮

೩೫೮ ಭೌಮರಾಜನೆ ತ್ವನ್ಮಹಾಮಹಿಮೆ ತುತಿಸಲ್ಕೆ
ಪಾಮರನಿಗಳವೆ ಎಂದೆಂದು । ಎಂದೆಂದು ಸಜ್ಜನರ
ಕಾಮಿತಾರ್ಥವನೆ ಕರುಣೀಸೊ ೯

೩೫೯ ಬುಧನೆ ನೀ ಸುಗುಣವಾರಿಧಿಯೆಂದು ಬಿನ್ನೈಪೆ
ಕ್ಷುಧೆಯ ಸಂಹರಿಸಿ ಸುಜ್ಞಾನ । ಸುಜ್ಞಾನ ಸದ್ಭಕ್ತಿ
ಸುಧೆಯ ಪಾನವನೆ ಕರುಣೀಸೊ ೧೦

೩೬೦ ಚಂದ್ರನಂದನ ಸತತ ವಂದಿಸುವೆ ಮನ್ಮನದ
ಸಂದೇಹ ಬಿಡಿಸಯ್ಯಾ ಮಮದೈವ ।
ಮಮದೈವ ಸರ್ವ ಗೋ
ವಿಂದನಹುದೆಂದು ತಿಳಿಸಯ್ಯಾ ೧೧

೩೬೧ ತಾರಾತ್ಮಜನೆ ಮಚ್ಛರೀರದೊಳು ನೆಲೆಗೊಂಡು
ತೋರು ಸಜ್ಜನರ ಸನ್ಮಾರ್ಗ । ಸನ್ಮಾರ್ಗ ತೋರಿ ಉ
ದ್ಧಾರಗೈಸೆನ್ನ ಭವದಿಂದ ೧೨

೩೬೨ ನತಿಸಿ ಬೇಡುವೆ ಬೃಹಸ್ಪತಿ ಗುರುವೆ ಎನ್ನದು
ರ್ಮತಿಯ ಪರಿಹರಿಸಿ ಸುಜ್ಞಾನ ಸುಜ್ಞಾನವಿತ್ತು ಶ್ರೀ
ಪತಿಯ ತೋರೆನ್ನ ಮನದಲ್ಲಿ ೧೩

೩೬೩ ಸುರರಾಜಗುರುವೆ ತ್ವಚ್ಚರಣಾರವಿಂದಗಳಿ
ಗೆರಗಿ ಬಿನ್ನೈಪೆ ಇಳೆಯೊಳು ಇಳೆಯೊಳುಳ್ಳಖಿಳ ಬ್ರಾಹ್ಮ
ಣರ ಸಂತೈಸೋ ದಯದಿಂದ ೧೪

೩೬೪ ತಾರಾರಮಣನೆ ಮದ್ವಾರ ನಿನ್ನದೊ ಮಹೋ
ದಾರ ನೀನೆಂದು ಬಿನ್ನೈಪೆ । ಬಿನ್ನೈಪೆ ದುರಿತವ ನಿ
ವಾರಿಸಿ ತೋರೊ ತವರೂಪ ೧೫

೩೬೫ ಶಕ್ರಾರಿಗಳ ಗುರುವೆ ಶುಕ್ರಮುನಿರಾಯ ದರ
ಚಕ್ರಾಬ್ಜಪಾಣಿ ಗುಣರೂಪ । ಗುಣರೂಪ ವ್ಯಾಪಾರ
ಪ್ರಕ್ರಿಯವ ತಿಳಿಸೊ ಪ್ರತಿದೀನ ೧೬

೩೬೬ ಕವಿಕುಲೋತ್ತಂಸ ಭಾರ್ಗವ ಬೇಡಿಕೊಂಬೆ ಭಾ
ಗವತ ಭಾರತ ಮೊದಲಾದ । ಮೊದಲಾದ ಶಾಸ್ತ್ರಗಳ
ಶ್ರವಣ ಸುಖವೆನಗೆ ಕರುಣಿಸೊ । ೧೭

೩೬೭ ನಿಗಮಾರ್ಥ ಕೋವಿದನೆ ಭೃಗುಕುಲೋತ್ತಂಸ ಕೈ
ಮುಗಿದು ಬೇಡುವೆನೊ ದೈವಜ್ಞ। ದೈವಜ್ಞ ಹರಿಯ ಓ
ಲಗದಲ್ಲಿ ಬುದ್ಧಿಯಿರಲೆಂದು ೧೮

೩೬೮ ತರಣಿನಂದನ ಶನೈಶ್ಚರ ನಿನ್ನ ದಿವ್ಯ ಪದಾಬ್ಜ
ಕ್ಕೆರಗಿ ಬಿನ್ನೈಪೆ । ಬಿನ್ನೈಪೆ ಬಹುಜನ್ಮಕೃತ ಪಾಪ
ತ್ವರಿತದಿಂದಿಳಿಸಿ ಪೊರೆಯೆಂದು ೧೯

೩೬೯ ಛಾಯಾತನುಜ ಮನೋವಾಕ್ಕಾಯ ಕ್ಲೇಶಗಳಿಂದ
ಆಯಾಸಕೊಡುವ ಸಮಯದಿ ।
ಸಮಯದಿ ಶ್ರೀ ಲಕ್ಷ್ಮೀನಾ
ರಾಯಣನ ಸ್ಮರಣೆ ಕರುಣೀಸೊ ೨೦

೩೭೦ ಇದನೆ ಬೇಡುವೆ ಪದೇಪದೆಗೆ ಪುಷ್ಕರನ ಗುರುವೆ
ಹೃದಯವದನದಲಿ ಹರಿಮೂರ್ತಿ ।
ಹರಿಮೂರ್ತಿ ಕೀರ್ತನೆಗೆ
ಒದಗಲೆನಗೆಂದು ಬಿನ್ನೈಪೆ ೨೧

೩೭೧ ಅಹಿಕ ಪಾರತ್ರಿಕದಿ ನರಹರಿಯದಾಸರ ನವ
ಗ್ರಹದೇವತೆಗಳು ದಣಿಸೋರೆ । ದಣಿಸೋರೆ ಇವರನ್ನು
ಅಹಿತರೆಂದೆನುತ ಕೆಡಬೇಡಿ ೨೨

೩೭೨ ಜಗನ್ನಾಥವಿಠ್ಠಲನ ಬದಿಗರಿವರಹುದೆಂದು
ಹಗಲಿರುಳು ಬಿಡದೆ ತುತಿಸುವ । ತುತಿಸುವ ಮಹಾತ್ಮರಿಗೆ
ಸುಗತಿಗಳನಿತ್ತು ಸಲಹೋರು ೨೩

೧೩. ತತ್ವಪ್ರತಿಪಾದನೆ

೩೭೩ ಶಿವನು ನೀನಾದರೆ ಶಿವನ ರಾಣಿ ನಿನಗೇನೊ
ಅವಿವೇಕ ಮನುಜ ಈ ಮಾತು । ಈ ಮಾತು ಕೇಳಿದರೆ
ಕವಿಜನರು ನಗರೆ ಕೈ ಹೊಡೆದು ೧

೩೭೪ ಎಲ್ಲ ಬಂದೇ ಎಂಬ ಖುಲ್ಲ ಮಾನವ ನಿನ್ನ
ವಲ್ಲಭೆಯ ಬೆರೆದು ಸಂತಾನ । ಸಂತಾನ ಪಡೆವೇಕೆ
ಇಲ್ಲವೇ ಜನನಿ ಭಗಿನೇರು ೨

೩೭೫ ಬಿಂಬವೊಂದೆ ಪ್ರತಿಬಿಂಬ ವೊಂದೆಂಬಿ ಈಶು
ದ್ಧಾಂಬರದ ನೆರಳು ಕಪ್ಪಾಗೆ । ಕಪ್ಪಾದ ಬಳಿಕ ನೀ
ನೆಂಬೊ ಈ ಮಾತು ಪುಸಿಯಲ್ಲಿ ೩

೩೭೬ ಎಲ್ಲ ಒಂದೆ ಎಂಬ ಸೊಲ್ಲು ಖರೆಯೆಂತೆನಲು
ಸುಳ್ಳು ಎಂಬೋದು ಖರೆಯಾಗಿ ।
ಖರೆಯೆಂಬ ಮಾತುಗಳು
ಸುಳ್ಳೆನ್ನರೇನೊ ಸುಜನಾರು ೪

೩೭೭ ನಿಮ್ಮ ನಾ ಬೈದರೆ ನಮ್ಮ ನೀವ್ ಬೈದರೆ
ನಿರ್ಮೂಲವಾಯ್ತು ಅದ್ವೈತ । ಅದ್ವೈ ತವುಳುಹಲಿಕೆ
ಸುಮ್ಮನಿರಬೇಕು ಎಲೊ ಭ್ರಾಂತ ೫

೩೭೮ ಶುದ್ಧ ಬ್ರಹ್ಮನ ಸುಂಗುಣವ ಕದ್ದ ಪ್ರಯುಕ್ತ ಪ್ರ
ಸಿದ್ಧ ಚೋರತ್ವ ನಿನ್ನಲ್ಲಿ । ನಿನ್ನಲ್ಲಿ ಪೊದ್ದಿತೊ
ಉದ್ಧಾರವೆಲ್ಲೊ ಭವದಿಂದ ೬

೩೭೯ ಮಾಯವಾದಿಯ ಮತವು ಹೇಯವೆಂಬುದು ಸಿದ್ಧ
ತಾಯಿತಂದೆಗಳು ಸತಿಪುತ್ರ । ಸತಿಪುತ್ರರಗಲಿದರೆ
ಬಾಯಿ ಬಿಟ್ಯಾಕೊ ಆಳುತಿದ್ದಿ ೭

೩೮೦ ಸುಳ್ಳಿಗಿಂತಧಿಕ ಮತ್ತಿಲ್ಲವೋ ಮಹಪಾಪ
ಸುಳ್ಳು ಕಳ್ಳತನವು ನಿನ್ನಲ್ಲಿ । ನಿನ್ನಲ್ಲಿ ಉಂಟಾಯಿ
ತಲ್ಲೊ ಜಾರತ್ವ ಇದರಂತೆ ೮

೩೮೧ ಮೇ ಮಾತೆ ವಂಧ್ಯೆಯೆಂಬ ಈ ಮಾತಿನಂತೆ ಮು
ಕ್ತಾಮುಕ್ತ ಜಗವು ಪುಸಿಯೆಂಬ ।
ಅಪುಸಿಯಿಂಬೀ ಮಾತುಗಳು
ಭ್ರಾಮಕವೆ ಖರೆಯೊ ನಿಜವಲ್ಲ ೯

೩೮೨ ಶಶವಿಷಾಣಗಳೆಂದು ಒಪ್ಪುವರೆ ಬಲ್ಲವರು
ಬಸವನಿಗುಂಟೇನೊ ಮೊಲೆಹಾಲು ।
ಮೊಲೆಹಾಲು ಉಂಡಿತೋ
ರಿಸೊ ಮಿಥ್ಯೆ ಸತ್ಯವಹುದೇನೊ ೧೦

೩೮೩ ಸತ್ಯವೆಂದರೆ ಖರೆಯು ಮಿಥ್ಯೆಯೆಂದರೆ ಸುಳ್ಳು
ಸತ್ಯಮಿಥ್ಯಗಳು ಏಕತ್ರ । ಏಕತ್ರವಿಹುದೆ ಉ
ನ್ಮತ್ತ ಈ ಮಾತು ನಿಜವೆಲ್ಲಿ ೧೧

೩೮೪ ಭೀತಿ ನಿರ್ಭೀತಿ ಶೀತತಾಪಗಳೊತ್ತಟ್ಟು
ನೀತವಾಗಿಹವೆ ಜಗದೊಳು ।ಜಗದೊಳಿದ್ದರೆ ತೋರು
ಜಾತಿ ಭೇದಗಳು ಇರಲಾಗಿ ೧೨

೩೮೫ ಜೀವೇಶರೊಂದೆಂಬ ಈ ಮಾತು ಕೇಳ್ವರಿಗೆ
ಕೇವಲ ಶ್ರಾವ್ಯವೆಂದೆಂದು । ಎಂದೆಂದು ಬುಧರು ಪಶು
ಗಾವಿ ನೀನೆಂದು ಕರೆಯಾರೆ ೧೩

೩೮೬ ಗುಣವಂತನೆಂಬ ಈ ಮಾತನು ಕೇಳಿ ಸುಖಿಸದವ
ಮನುಜ ಪಶುಸಿದ್ಧ ಪುಸಿಯಲ್ಲ । ಪುಸಿಯಲ್ಲ ನಿನ್ನ ಮತ
ಗಣನೆ ಮಾಡದಲೆ ಬಯ್ವೋರ ೧೪

೩೮೭ ಮಲದ ಗರ್ತಕೆ ಶುದ್ಧ ಜಲಧಿ ಸಮಯವೆಂತೆಂಬಿ
ಕಲುಷವರ್ಜಿತಕೆ ತೃಣಜೀವ । ತೃಣಜೀವ ಸರಿಯೆ ಸಿಂ
ಬಳಕ ಗೋಘೃತವು ಸಮವಹುದೆ ೧೫

೩೮೮ ಐರಾವತಕೆ ಸರಿಯೆ ಕೂರಿಹೇನಿನ ಮರಿಯು
ಮೇರು ಪರ್ವತಕ್ಕೆ ಕಸಕುಪ್ಪೆ । ಕಸಕುಪ್ಪೆ ಸರಿಯಹುದೆ
ತೋರಿತೊ ನಿನ್ನ ಅಜ್ಞಾನ ೧೬

೩೮೯ ದ್ವಾಸುಪರ್ಣಾ ಎಂಬ ಈ ಶ್ರುತಿಗಳಲ್ಲಿ ವಿ
ಶ್ವಾಸ ಮಾಡದಲೆ ಜೀವೇಶ । ಜೀವೇಶಕ್ಯೈಕ್ಯೋಪ
ದೇಶ ಮಾಡಿದವ ಚಂಡಾಲ ೧೭

೩೯೦ ಅಜರಾಮರಣ ಬ್ರಹ್ಮ ಭುಜಗಭೂಷಣ ಪೂಜ್ಯ
ತ್ರಿಜಗ ದೇವೇಶ ಹರಿಯೆತ್ತ । ಹರಿಯೆತ್ತ ನೀನೆತ್ತ
ಅಜಗಜನ್ಯಾಯ ಪುಸಿಯಲ್ಲ ೧೮

೩೯೧ ಪಾಲುಗಡಲೊಳಗಿಪ್ಪ ಶ್ರೀ ಲೋಲ ಹರಿಯೆಲ್ಲಿ
ಹೇಲುಚ್ಚೆವೊಳಗೆ ಹೊರಳುವ । ಹೊರಳಾಡಿ ಬಳಲುವ
ಖೂಳ ಮಾನವನೆ ನೀನೆಲ್ಲಿ ೧೯

೩೯೨ ಕ್ಷೀರಾಂಬುಧಿಗೆ ಸರಿಯೆ ಕಾರಿಕೆಯ ಶ್ಲೇಷ್ಮ ಭಾ
ಗೀರಥಿಗೆ ಸಮವೆ ಖರಮೂತ್ರ । ಖರಮೂತ್ರ ಜೀವ ಲ
ಕ್ಷ್ಮೀರಮಣಗೆಣೆಯೆ ಜಗದೊಳು ೨೦

೩೯೩ ಗುಣಪೂರ್ಣ ಸರ್ವಜ್ಞ ಅಣುಮಹದ್ಗತನ ನಿ
ರ್ಗುಣ ಅಲ್ಪನೆನುತಿದ್ದಿ । ಎನುತಿದ್ದಿ ಹರಿಗೆ ದೂ
ಷಣೆಯು ಬೇರುಂಟೆ ಇದಕಿಂತ ೨೧

೩೯೪ ಈಶ ನಾನೆನಲು ಕೀನಾಶನಿಂದಲಿ ದಣಿಪ
ದಾಸನೆಂಬುವಗೆ ದಯದಿಂದ । ದಯದಿಂದ ತನ್ನಯಾ
ವಾಸದೊಳಿಟ್ಟು ಸಲಹೂವ ೨೨

೩೯೫ ಈಶತ್ವ ವೆಂಬುದು ಲಕುಮೀಶಗಲ್ಲದೆ ಜೀವ
ರಾಶಿಗಳಿಗುಂಟೆ ಈ ಶಕ್ತಿ । ಈ ಶಕ್ತಿ ಸತ್ವಗುಣ
ಈಶ ಬಿಟ್ಟಿಹನೆ ಜಗದೊಳು ೨೩

೩೯೬ ಉದ್ಗೀಥಶ್ರೀ ಪ್ರಾಣ ಹೃದ್ಗತನು ಜಗದೇಕ
ಸದ್ಗುರುವರೇಣ್ಯನೆನುತಿಪ್ಪ । ಎನುತಿಪ್ಪರಿಗೆ ಯಮ
ಗದ್ಗದನೆ ನಡುಗಿ ನಮಿಸುವ ೨೪

೩೯೭ ಸ್ವಾಮಿ ಭೃತ್ಯನ್ಯಾಯ ಈ ಮಾತಿನೊಳಗುಂಟು
ಗ್ರಾಮಧಾಮಗಳು ಇದರಂತೆ । ಇದರಂತೆ ನೋಡಿಕೊ
ನೀ ಮಾತ್ರ ನುಡಿಯೆ ಸಾಕೆಂಬೆ ೨೫

೩೯೮ ಈಶ ನಾನೆಂದವನ ಶ್ವಾಸ ಬಿಡಗೊಡದೆ ಯಮ
ಪಾಶಗಳ ಕಟ್ಟಿ ಸೆಳೆದೊಯಿದು ।
ಸೆಳೆದೊಯಿದು ನರಕದೊಳು
ಘಾಸಿಗೊಳಿಸುವನೊ ಬಹುಕಾಲ ೨೬

೩೯೯ ಮಾತಾ ಪಿತರ ದ್ರೋಹಿ ಬಂಧು ಘಾತಕ ಬ್ರಹ್ಮ
ಘಾತಕನು ನೀನು ಪುಸಿಯಲ್ಲ । ಪುಸಿಯಲ್ಲ ಶ್ರೀ ಜಗ
ನ್ನಾಥ ವಿಠಲನೆ ನಾನೆಂಬಿ ೨೭

ಅನುಬಂಧಗಳು

೧. ಕಠಿಣ ಶಬ್ದಗಳ ಅರ್ಥ

೨. ಟಿಪ್ಪಣಿಗಳು

೩. ಕೀರ್ತನೆಗಳ ಅಕಾರಾದಿ

೪. ಸಹಾಯಕ ಸಾಹಿತ್ಯ

ಅನುಬಂಧ-೧

ಕಠಿಣ ಶಬ್ದಗಳ ಅರ್ಥ

ಅಂಘ್ರಿ - ಪಾದ
ಅಂಬರಾಧಿಪ - ಗಣಪತಿ
ಅಂಬುಜಾಂಬಕ - ವಿಷ್ಣು
ಅಂಬುರುಹ - ಕಮಲ
ಅಂಭೋರುಹ - ಕಮಲ
ಅಗ್ರಜ - ಅಣ್ಣ
ಅಘ - ಪಾಪ
ಅಘಮರಷಣ - ಪಾಪಕಳೆಯುವ ಕಾರ್ಯ
ಅಘಾಳಿ - ಪಾಪ ಸಮೂಹ
ಅಜಪದವಿ - ಬ್ರಹ್ಮಪದವಿ
ಅನಘ - ಪಾಪ ಹೊಂದದವನು
ಅನಿಮಿಷ - ದೇವತೆ : ರೆಪ್ಪೆಯಿಲ್ಲದವರು
ಅನಿಮಿಷೇಶ - ಇಂದ್ರ :ದೇವತೆಗಳ ಒಡೆಯ
ಅಪವರ್ಗ _ ವೈಕುಂಠ
ಅಬ್ಧಿ - ಸಮುದ್ರ
ಅರದೂರ - ದೋಷಿದೂರ :
ಅರ್ಕ - ಸೂರ್ಯ
ಅರಾತಿ - ಶತ್ರು
ಅಲವ ಭೋಧ - ಮಧ್ವಾಚಾರ್ಯ
ಅವಧಾನ - ಮನಸ್ಸಿನ ಏಕಾಗ್ರತೆ
ಅವರ - ಕಡಿಮೆ
ಅವರಜ - ತಮ್ಮ
ಅವಿಯೋಗಿನಿ - ಲಕ್ಷ್ಮೀ ದೇವಿ : ಎಂದೂ ಅಗಲದಿರುವವಳು
ಅಸುದೇವ - ಪ್ರಾಣದೇವ
ಅಹಿರಾಜ - ಶೇಷ
ಅಹೀಂದ್ರ - ಶೇಷ
ಆತಪತ್ರ - ಕೊಡೆ : ಛತ್ರಿ
ಆತ್ಮಜ - ಮಗ
ಆದಿತೇಯ - ದೇವತೆ
ಆಮಯ - ರೋಗ
ಆರುಮೊಗ - ಷಣ್ಮುಖ
ಇಂಗಡಲು - ಹಾಲಿನ ಸಮುದ್ರ
ಇಂಗಡಲಾತ್ಮಜೆ - ಲಕ್ಷ್ಮಿ : ಕ್ಷೀರ ಸಮುದ್ರದಲ್ಲಿ ಹುಟ್ಟಿದವಳು
ಇಭ - ಆನೆ
ಈಪ್ಸಿತ - ಆಸೆ
ಈಶಿತವ್ಯ - ಭಕ್ತ : ಜ್ಞಾನಿ

ಉಡುಪಿ	– ಚಂದ್ರ
ಉತ್ತಂಸ	– ಆಭರಣ
ಉತ್ತುಂಗ	– ಶ್ರೇಷ್ಠ
ಉದಧಿ	– ಸಮುದ್ರ
ಉದ್ಗೀಥ	– ಸಾಮ ವೇದ ಪ್ರಿಯನಾದ ನಾರಾಯಣ
ಉಪರಾಗ	– ಗ್ರಹಣ
ಉರ್ವಿ	– ಭೂಮಿ
ಎಲರುಣಿ	– ಗಾಳಿಯನ್ನು ಆಹಾರವನ್ನಾಗಿ ಉಳ್ಳದ್ದು : ಹಾವು
ಏಕಾಂತಿ	– ಅನನ್ಯ ಭಕ್ತ
ಓಲಗ	– ಸೇವೆ
ಕಂಜ	– ಕಮಲ
ಕಂಠೀರವ	– ಸಿಂಹ
ಕಂತುಹರ	– ಮನ್ಮಥನನ್ನು ಕೊಂದವ ; ಶಿವ
ಕಂದರ್ಪ	– ಮನ್ಮಥ
ಕಂದ ರ್ಪನಯ್ಯ	– ವಿಷ್ಣು
ಕಂದು ಗೊರಳ	– ಶಿವ (ವಿಷಕಂಠ)
ಕಂಬು	_ ಶಂಖ
ಕಕುಭ	– ಆಕಾಶ
ಕಕುಭೀಶ	– ಆಕಾಶಾಧಿಪತಿ – ಗಣೇಶ
ಕಜ್ಜಲ	– ಕಣ್ಣೀರು
ಕದಂಬ	– ಸಮೂಹ
ಕಪರ್ದಿ	– ಈಶ್ವರ
ಕಮಠ	– ಆಮೆ
ಕರಿಕಳಭ ಕೇಸರಿ	– ಆನೆಯ ಮರಿಗೆ ಸಿಂಹದಂತಿರುವ
ಕಲುಷಕರ್ಮ	– ದುಷ್ಕರ್ಮ

ಕಳತ್ರ	– ಪತ್ನಿ
ಕಶ್ಯಪಿ	– ಭೂಮಿ
ಕಾಸಾರ	– ಸರೋವರ
ಕೀನಾಶ	– ಯಮ
ಕುಂಜರ	– ಆನೆ
ಕುಂತಳ	– ಕೂದಲು
ಕುಂದಣ	– ವಜ್ರ
ಕುಂಭಸಂಭವ	– ಅಗಸ್ತ್ಯ ಮುನಿ
ಕುಂಭಿಣಿ	– ಭೂಮಿ
ಕುಧರ	– ಭೂಮಿಯನ್ನು ಧರಿಸಿದ ; ವರಾಹ
ಕುಲಾಲ	– ಕುಂಬಾರ
ಕುವಲಯ	– ಭೂಮಿ
ಕೂಪಾರ	– ಸಮುದ್ರ
ಕೆಂಬಣ್ಣದ ಮರ	– ಪಾರಿಜಾತ ವೃಕ್ಷ
ಕೇತನ	– ಬಾವುಟ
ನೀಕೇತನ	– ಮನೆ
ಕೋಕನ	– ಕನ್ನೈದಿಲೆ
ಕೋಲ	– ವರಾಹ
ಕೋಲನಂದನ	– ವರಾಹ ಪುತ್ರ
ಕುಲಿಶಧರಾಹ್ವಯ	– ಇಂದ್ರ ; ವಜ್ರಾಯುಧವನ್ನು ಧರಿಸಿದವನು
ಕೃತಿ ಪತಿ	– ಪ್ರದ್ಯುಮ್ನ
ಕೃತ್ತಿವಾಸ	– ಚರ್ಮಾಂಬರ ಧಾರಿ – ಶಿವ
ಕೃಪಣ	– ಪುಣ್ಯವನ್ನು ಕಳೆದು ಕೊಳ್ಳಲು ಇಷ್ಟಪಡದವನು
ಜ್ಞಾನಿ	– ಭಕ್ತ
ಕೃಶಾನು	– ಬೆಂಕಿ

ಕೃಷ್ಣ ವರ್ತ್ಮ – ಕಪ್ಪು ದಾರಿಯವನು – ಅಗ್ನಿ
ಕ್ರೋಢ – ವರಾಹ
ಖದ್ಯೋತನಂದನ – ಸೂರ್ಯಪುತ್ರ : ಸುಗ್ರೀವ
ಖರಮಥನ – ಖರನೆಂಬ ರಾಕ್ಷಸನನ್ನು ಕೊಂದವನು – ಶ್ರೀ ರಾಮ
ಖರೆ – ನಿಜ
ಖೇಟವಾಹನ – ಪಕ್ಷಿ ವಾಹನ : ವಿಷ್ಣು
ಗರ – ವಿಷ : ಗ್ರಹ: ಪಿಶಾಚಿ
ಗರಳ – ವಿಷ
ಗುಪ್ಪು – ಮುಸುಕು
ಗೋಘೃತ – ಹಸುವಿನ ಹಾಲಿನಿಂದ ತಯಾರಿಸಿದ ತುಪ್ಪ
ಗೋಪತಿ – ಎತ್ತು
ಗೋಮಿನಿ – ಭೂಮಿ
ಚಂಡಾಂಶು – ಸೂರ್ಯ
ಚತುರಾಸ್ಯ – ಬ್ರಹ್ಮ
ಚತುರಾನನ – ಬ್ರಹ್ಮ
ಚಾಮೀಕರ – ಚಿನ್ನ
ಚೂತಫಲ – ಮಾವು
ಚೈಲ – ಬಟ್ಟೆ
ಜಂಭಾರಿ – ಇಂದ್ರ
ಜಠರ – ಹೊಟ್ಟೆ
ಜಡಧಿಮಂದಿರ – ವಿಷ್ಣು
ಜಯಾಪತಿ – ಸಂಕರ್ಷಣ.

ಜವ – ವೇಗ
ಜಾಂಬೂನ – ಬಂಗಾರ
ಜಾತರೂಪ – ಬಂಗಾರ
ಝಷಕೇತು – ಮೀನನ್ನು ಬಾವುಟದಲ್ಲು ಳ್ಳವನು – ಮನ್ಮಥ
ತಂತುಪಟ – ಬಟ್ಟೆ
ತಟಿತ್ – ಮಿಂಚು
ತಾಮರಸ – ಕಮಲ
ತಾರಾತ್ಮಜ – ತಾರೆಯ ಮಗ – ಬುಧ
ತಾರಾರಮಣ – ತಾರೆಯುಪತ್ನಿ – ಬೃಹಸ್ಪತಿ
ತಾವಕ – ಭಕ್ತ
ತಿಮಿರ – ಕತ್ತಲು
ತಿರೋಹಿತ – ಮರೆಯಾದ
ತುಕ್ಕು – ಸಂಚರಿಸು
ತ್ರಿದಶ – ದೇವತೆ
ದರ – ಶಂಖ
ದರಹಸಿತ – ಮುಗುಳ್ನಗೆ
ದರ್ದುರ – ಕಪ್ಪೆ
ದರ್ವಿ – ಸೌಟು
ದಾರಾ – ಹೆಂಡತಿ
ದಿತಿಜ – ದಿತಿಯಮಗ – ರಾಕ್ಷಸ
ದಿವಿಜ ತರಂಗಿಣಿ – ದೇವನದಿ – ಗಂಗೆ
ದಿವಿಷತ್ ಪತಿ – ಇಂದ್ರ
ದುರಿತ – ಪಾಪ
ದುರಿತೌಘ – ಪಾಪ ಸಮೂಹ
ದುರ್ಧರ್ಷ – ಕೊಬ್ಬಿದ
ದ್ಯುನದಿ – ಗಂಗಾ ನದಿ

ದುಹಿತ್ರೆ - ಮಗಳು
ದ್ಯುಮಣಿ - ಸೂರ್ಯ
ದ್ರುಹಿಣ - ಬ್ರಹ್ಮ
ದ್ರುಹಿಣಾಂಡ - ಬ್ರಹ್ಮಾಂಡ
ದೇವಮುಖಿ - ಅಗ್ನಿ
ಧನದ - ಕುಬೇರ
ಧ್ವಾಂತ - ಕತ್ತಲು
ನಕ್ರ - ಮೊಸಳೆ
ನಗಧರ - ಗೋವರ್ಧನ ಗಿರಿಯನ್ನೆತ್ತಿದವನು - ಕೃಷ್ಣ
ನಗೋತ್ತಮ - ಶ್ರೇಷ್ಠ ಪರ್ವತ -
ನವಿರು - ಕೂದಲು
ನಾಕಜ - ದೇವತೆ
ನಿಚಯ - ಸಮೂಹ
ನಿಟಿಲಾಂಬಕ - ಹಣೆಯಲ್ಲಿ ಕಣ್ಣುಳ್ಳವನು - ಶಿವ
ನಿರ್ಜರ - ದೇವತೆ
ನಿರವದ್ಯ - ಕಳಂಕರಹಿತ
ನಿರ್ವಾಣ - ಮುಕ್ತಿ
ನಿಶಾಟ ಕುಲವೈರಿ - ದೈತ್ಯವೈರಿ - ವಿಷ್ಣು
ನೀರಧಿ - ಸಮುದ್ರ
ಪಂಕ - ಕೆಸರು
ಪಂಕಜೋದ್ಭವ - ಬ್ರಹ್ಮ
ಪಂಗು - ಕುಂಟ
ಪಂಚವದನ - ಸಿಂಹ
ಪಥ - ಹಾದಿ
ಪನ್ನಗಾಚಲ - ತಿರುಪತಿಯ ಬೆಟ್ಟ
ಪನ್ನಗಾಶನ - ಗರುಡ
ಪಯೋದಧಿ - ಹಾಲಿನ ಸಮುದ್ರ
ಪಾವಕ - ಅಗ್ನಿ
ಪಾಹಿ - ಕಾಪಾಡು
ಪಿಕ - ಕೋಗಿಲೆ
ಪಿನಾಕಿ - ಪಿನಾಕ ಎಂಬ ಧನುಸ್ಸನ್ನುಳ್ಳವನು - ಶಿವ
ಪೀಯೂಷ - ಅಮೃತ
ಪುತ್ಥಳಿ - ಗೊಂಬೆ
ಪುರುಹೂತ - ಇಂದ್ರ
ಪೋತ - ಮಗು : ಮರಿ
ಪೌತ್ರ - ಮೊಮ್ಮಗ
ಪ್ರದ್ಯೋತ - ಸೂರ್ಯ
ಪ್ರಪನ್ನ - ಭಕ್ತ
ಪ್ರಭಂಜನ - ವಾಯು
ಪ್ರವಿವಿಕ್ತ - ನಿರ್ಲಿಪ್ತ
ಪ್ರಭಂಜನ - ವಾಯು
ಪ್ರವಿವಿಕ್ತ - ನಿಲೀಪ್ತ
ಪ್ರಾಕೃತ - ಲೋಕ ಭಾಷೆ
ಪುಂಡರೀಕ - ಕಮಲ
ಪೊಂಬಸಿರ - ಬ್ರಹ್ಮ
ಫಾಲ ಲೋಚನ - ಶಿವ
ಬದರ - ಬೋಕೆ
ಬದಿಗ - ಹತ್ತಿರದಲ್ಲಿರುವವನು - ಭಕ್ತ
ಬಧಿರ - ಕಿವುಡ
ಬನ್ನ - ಭಗ್ನ ; ರೋಗ
ಬವರ - ಯುದ್ಧ
ಬ್ರಹ್ಮಾಣಿ - ಸರಸ್ವತಿ
ಬಾಂಬೊಳೆ - ಗಂಗೆ
ಬಿಸಿರುಹ - ಕಮಲ
ಬೃಂದಾರಕ - ದೇವತೆ
ಭರ್ಮಗರ್ಭ - ಬ್ರಹ್ಮ

ಭಾರ್ಗವ – ಪರಶುರಾಮ : ಶುಕ್ರ
ಭಾರ್ಗವಿ – ಲಕ್ಷ್ಮೀ
ಭಾಷಾತ್ರಯ – ದರ್ಶನ, ಸಮಾಧಿ ಮತ್ತು ಗುಹ್ಯ ಎಂಬ ಮೂರು ಬಗೆಯ ಅರ್ಥವೈವಿಧ್ಯ
ಭುಜಗ – ಸರ್ಪ
ಭೂರಿ – ಹೆಚ್ಚು
ಭೂರುಹ – ಮರ
ಭೇಶ – ಚಂದ್ರ
ಭೇಷಜ – ಔಷಧಿ
ಭೋಗಿ – ಹಾವು
ಭೋಗಿಶಯನ – ವಿಷ್ಣು
ಭೌಮ – ಮಂಗಳ ; ಕುಜ
ಮಖ – ಯಾಗ
ಮಧುಪ – ದುಂಬಿ
ಮಲದಗರ್ತ – ಹೊಲಸಿನ ಹಳ್ಳ
ಮಹ್ಯಮರ – ಬ್ರಾಹ್ಮಣ
ಮಾಣವಕ – ಬಾಲಕ
ಮಾತರಿಶ್ವ – ವಾಯುದೇವರು
ಮಾತಂಗ – ಆನೆ
ಮಾಯಾಪತಿ – ವಾಸುದೇವ
ಮಾರ – ಮನ್ಮಥ
ಮಾರಾರಿ – ಶಿವ
ಮಾರ್ಗಣ – ಬಾಣ
ಮಿಥ್ಯಾಮತ – ಅದ್ವೈತ ದರ್ಶನ
ಮಿಸುನಿ – ಚಿನ್ನ
ಮೀನಾಂಕ – ಮನ್ಮಥ
ಮುಮುಕ್ಷು – ಮೋಕ್ಷಾಪೇಕ್ಷಿ
ಮುಸಲ – ಒನಕೆ
ಮೇಮಾತೆ
ವಂಧ್ಯ – ನಮ್ಮ ತಾಯಿ ಬಂಜೆ
ಯವನಾಧಿಪತಿ – ಮಹಮ್ಮದೀಯ ದೊರೆ (ಹೈದರಾಲಿ)
ಯಮಿಕುಲೋತ್ತಂಸ –ಯತಿಕುಲತಿಲಕ
ಯಾತುಧಾನ – ದೈತ್ಯ
ಯೂಥಪ – ಆನೆ
ರತ್ನಾಕರ – ಸಮುದ್ರ
ರಥಾಂಗ – ಚಕ್ರ
ರದನ – ಹಲ್ಲು
ರಾಜೀವ – ಕಮಲ
ರುಕ್ಷೇಶ – ಜಾಂಬವಂತ
ರೋಗಘ್ನ – ರೋಗನಾಶಕ
ಲಶನು – ಬೆಳ್ಳುಳ್ಳಿ
ವಕ್ತ್ರ – ಮುಖ
ವಟದೆಲೆ – ಆಲದೆಲೆ
ವನರುಹ – ಕಮಲ
ವಪುಷ – ದೇಹ
ವಾತಾತ್ಮಜ – ವಾಯುಪುತ್ರ; ಹನುಮ/ಭೀಮ/ ಮಧ್ವಾಚಾರ್ಯ
ವಾರಣ – ಆನೆ
ವಾರಿದ – ಮೋಡ
ವಾರಿಧಿ – ಸಮುದ್ರ
ವಾಸವ – ಇಂದ್ರ
ವಾಸವಾತ್ಮಜ – ಅರ್ಜುನ
ವ್ಯಾಳ – ಸರ್ಪ
ವಿಖನಸ – ವಿರಕ್ತ [ವಾನಪ್ರಸ್ಥಾಶ್ರಮಿ]
ವಿಜಿತಾತ್ಮ – ಮನೋನಿಯಾಮಕ

ಅನುಬಂಧ-೨

ಟಿಪ್ಪಣಿಗಳು

(ಕೀರ್ತನೆ ಸುಳಾದಿ ಹಾಗೂ ಉಗಾಭೋಗಗಳು)

೧

ಸಕಲ ಶುಭ ಕಾರ್ಯಾಂಭಗಳಲ್ಲಿಯೂ ಶ್ರೀ ವಿನಾಯಕನ ಸ್ತೋತ್ರ ಗೈಯುವುದು ಭಾರತೀಯರ ಸಂಪ್ರದಾಯವಾಗಿದೆ. ವಿನಾಯಕನನ್ನು ವಿಘ್ನ ನಾಶಕನೆಂದು ಮುಖ್ಯವಾಗಿ ಪರಿಗಣಿಸಲಾಗಿದೆ. ಈ ಗಣಪತಿಯನ್ನು ಕುರಿತು ಮಾಡಿರುವ ಸ್ತೋತ್ರಪರವಾದ ಈ ಕೀರ್ತನೆಯಲ್ಲಿ ಗಣಪತಿಯು ಕೈಗಳಲ್ಲಿ ಹಿಡಿದಿರುವ ವಸ್ತುಗಳನ್ನು ವಿವರಿಸಿ ಜಗನ್ನಾಥವಿಠಲನ ದರ್ಶನಕ್ಕೆ ಅವಕಾಶ ಮಾಡಿ ಕೊಡ ಬೇಕೆಂದು ದಾಸರು ಪ್ರಾರ್ಥಿಸಿದ್ದಾರೆ.

೨

ಈ ಕೀರ್ತನೆಯೂ ವಿನಾಯಕನ ಸ್ತೋತ್ರವೇ ಆಗಿದೆ. ಪಾರ್ವತಿಯ ಪುತ್ರನಾದ ಗಣಪತಿಯು ದ್ವಾಪರ ಯುಗದಲ್ಲಿ ಶ್ರೀ ಕೃಷ್ಣನ ಮಗನಾಗಿ ಅವತಾರ ಮಾಡಿದ ಸಂಗತಿಯನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೩

ಶ್ರೀ ಮನ್ಮಧ್ವ ಸಿದ್ಧಾಂತದಲ್ಲಿ ತಾರತಮ್ಯಕ್ಕೆ ವಿಶೇಷ ಪ್ರಾಶಸ್ತ್ಯ ಉಂಟು. ತಾರತಮ್ಯದಲ್ಲಿ ಎರಡು ಬಗೆ. ಅವರೋಹಣ ತಾರತಮ್ಯ ಹಾಗೂ ಆರೋಹಣ ತಾರತಮ್ಯ ಎಂದು ಇವುಗಳನ್ನು ಕರೆಯುತ್ತಾರೆ. ಜಗನ್ನಾಥ ದಾಸರು ಈ ಕೀರ್ತನೆಯಲ್ಲಿ ಸರ್ವೋತ್ತಮನಾದ ಶ್ರೀ ಹರಿಯಿಂದ ಆರಂಭಿಸಿ ಅವರೋಹಣ ಕ್ರಮದಲ್ಲಿರುವ ಎಲ್ಲ ದೇವತೆಗಳನ್ನು ಪ್ರಾರ್ಥಿಸಿದ್ದಾರೆ.

೪

ಜೀವರಿಗೂ ಪರಮಾತ್ಮನಿಗೂ ಇರುವ ಮೂಲಭೂತ ವ್ಯತ್ಯಾಸ ಗುಣಗಳಲ್ಲಿ ಕೆಲವನ್ನು ದಾಸರು ಗುರುತಿಸಿದ್ದಾರೆ. ಜೀವರು ದುಃಖಿಗಳು; ಅವರವರ ಪಾಪ ಪುಣ್ಯಾನುಗುಣವಾಗಿ ಸುಖದುಃಖಗಳನ್ನನುಭವಿಸುವರು. ಆದರೆ ಪರಮಾತ್ಮನಿಗೆ ಯಾವ ಕಾಲದಲ್ಲಿಯೂ ಲವಲೇಶವೂ ದುಃಖವಿಲ್ಲವೆಂದೂ; ಅವನು ಸರ್ವಕಾಲದಲ್ಲಿಯೂ ಸುಖಿ ಎಂಬುದನ್ನು ದಾಸರು ಹೇಳಿದ್ದಾರೆ.

೫

ಜಗನ್ನಾಥ ದಾಸರು ಅಸಾಮಾನ್ಯ ಭಕ್ತರಾಗಿದ್ದರು ; ಅವರು ಭಗವಂತನನ್ನು ಲೌಕಿಕ ಇಷ್ಟಾರ್ಥಗಳ ಪೂರೈಕೆಗಾಗಿ ಭಜಿಸಿದವರಲ್ಲ; ಸದಾಕಾಲ ಭಗವಂತನ ಗುಣ ವಿಶೇಷಗಳನ್ನರಿತವರ ಸಹವಾಸವನ್ನು ನೀಡಿ ಜ್ಞಾನಾಮೃತ ದೊರಕುವಂತೆ ಮಾಡಬೇಕೆಂದು ಭಗವಂತನನ್ನು ಪ್ರಾರ್ಥಿಸುತ್ತಿದ್ದ ಬಗೆಯನ್ನು ಈ ಕೃತಿಯ ಮೂಲಕ ಅರಿಯ ಬಹುದಾಗಿದೆ. ಭಗವಂತನು ಬ್ರಹ್ಮಾದಿ ದೇವತೆಗಳಲ್ಲಿಯೂ ಚೇತನಾಚೇತನ ವಸ್ತುಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ವ್ಯಾಪ್ತನಾಗಿರುವನೆಂಬ ತತ್ವವನ್ನು ಇಲ್ಲಿ ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೬

ಮನುಷ್ಯ ಭಗವದ್ಭಕ್ತನಾಗಿ ತತ್ವ ಶಾಸ್ತ್ರಗಳನ್ನು ಎಷ್ಟೇ ಚೆನ್ನಾಗಿ ಅರಿತರೂ ಲೋಕದ ಕಷ್ಟಗಳು ಮಿತಿ ಮೀರಿ ಬಂದು ಅಪ್ಪಳಿಸಿದಾಗ ಆ ದುಃಖವನ್ನು ತಡೆಯಲಸಾಧ್ಯವಾಗಿ ಭಗವಂತನಲ್ಲಿ ತನ್ನ ಕಷ್ಟಗಳನ್ನು ನಿವೇದಿಸಿಕೊಳ್ಳುವುದು ಸಹಜವೇ ಆಗಿದೆ. ದಾಸರು ಭಗವಂತನ ಗುಣ ವಿಶೇಷಗಳನ್ನು ಇಲ್ಲಿ ಉಲ್ಲೇಖಿಸಿ ' ಶರಣಾಗತ ರಕ್ಷಕ ' ಎಂಬ ಬಿರುದು ಉಳಿಯುವಂತೆ ತಮ್ಮನ್ನು ಸಲಹಬೇಕೆಂದು ಪ್ರಾರ್ಥಿಸಿದ್ದಾರೆ.

೭

ಅನುಸಂಧಾನಪೂರ್ವಕವಾದ ಜೀವನವನ್ನು ಮಾಡುವುದರಿಂದ ಮಹಾ ಪುಣ್ಯ ಲಭಿಸುವುದೆಂದು ಶಾಸ್ತ್ರ ಹೇಳುವುದಾದರೂ ಆ ರೀತಿಯ ಜೀವನವನ್ನು ಮಾಡುವುದು ಸುಲಭವಲ್ಲ. ಸಕಲವೆಲ್ಲವೂ ಶ್ರೀ ಹರಿಯೇ ಜೀವರಿಂದ ಮಾಡಿಸುವನೆಂಬ ಪ್ರಜ್ಞೆಯನ್ನು

ಜಾಗೃತವಾಗಿಟ್ಟುಕೊಳ್ಳಲು ಭಗವಂತನೇ ಸಹಾಯಕನಾಗಬೇಕೆಂಬ ಪ್ರಾರ್ಥನೆ ಇಲ್ಲಿದೆ. ಯಾವುದೇ ನದಿಯಲ್ಲಿ ಸ್ನಾನ ಮಾಡಿದರೂ ಗಂಗಾ ಸ್ನಾನವೆಂದೂ. ನಮ್ಮ ದೇಹಕ್ಕೆ ನಾವು ಮಾಡಿಕೊಳ್ಳುವ ಸ್ನಾನವು ದೇಹಾಂತರ್ಗತವೂ, ಜೀವಾಂತರ್ಗತವೂ ಆದ ಶ್ರೀ ಬಿಂಬ ರೂಪಿಯಾದ ಶ್ರೀಹರಿಯ ಅಭಿಷೇಕವೆಂಬ ಚಿಂತನೆಯೇ ಅನುಸಂಧಾನವೆನಿಕೊಳ್ಳುತ್ತದೆ. ಇದು ಸ್ನಾನ ಕ್ರಿಯೆ ಮಾಡುವಾಗ ನೆನಪಿಗೆ ಬಂದು ಈ ಕ್ರಿಯೆ ಶ್ರೀಹರಿಗೆ ಸಮರ್ಪಿತವಾಗ ಬೇಕೆಂಬುದು ದಾಸರ ಆಶಯವಾಗಿದೆ.

೮

ಶ್ರೀ ಹರಿಯನ್ನು ಕುರಿತ ಪ್ರಾರ್ಥನಾ ಪರವಾದ ಕೀರ್ತನೆ ಇದು. ರಾಜನಿಂದುಂಟಾದ ತೊಂದರೆಯನ್ನು ಪರಹರಿಸಬೇಕೆಂಬ ವಾಕ್ಯ ಈ ಕೀರ್ತನೆಯಲ್ಲಿದೆ. ಆದರೆ ದಾಸರಿಗೆ ಯಾವ ರಾಜರಿಂದ ಯಾವ ತೊಂದರೆ ಬಂದಿತ್ತೆಂಬ ಐತಿಹಾಸಿಕ ಸಂಗತಿ ತಿಳಿದಿಲ್ಲ. ದಾಸರು ಪರೀಕ್ಷಿತ್ ಮೊದಲಾದ ಭಕ್ತರನ್ನು ಭಗವಂತನು ಕಾಪಾಡಿದ ಬಗೆಯನ್ನು ಸೂಚಿಸಿ ಅದರಂತೆ ತಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಂಡಿದ್ದಾರೆ.

೧. **ಪರೀಕ್ಷಿದ್ರಾಜನ ರಕ್ಷಿಸಿದಂತೆ** : ಅಭಿಮನ್ಯು ಮತ್ತು ಉತ್ತರೆಯ ಮಗನೇ ಪರೀಕ್ಷಿತ್ ರಾಜ. ಈತನು ಉತ್ತರೆಯ ಗರ್ಭದಲ್ಲಿರುವಾಗ ಅಶ್ವತ್ಥಾಮನು ಪಾಂಡವರ ವಂಶವನ್ನು ನಿರ್ಮೂಲ ಮಾಡಲೆಂದು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಆದರೆ ಶ್ರೀ ಕೃಷ್ಣನು ಪರೀಕ್ಷಿತನಿಗೆ ಬ್ರಹ್ಮಾಸ್ತ್ರದಿಂದ ಅಪಾಯವಾಗದಂತೆ ತಡೆಯುತ್ತಾನೆ.

೨. **ಸಂಜೆಯ ತೋರಿ ಧನಂಜಯನುಳುಹಿದ** : ಜಯದ್ರಥನನ್ನು ಕುರುಕ್ಷೇತ್ರದ ಯುದ್ಧದಲ್ಲಿ ಒಂದು ದಿನ ಸೂರ್ಯ ಮುಳುಗುವಷ್ಟರಲ್ಲಿ ಕೊಲ್ಲುವುದಾಗಿ ಅರ್ಜುನನು ಪ್ರತಿಜ್ಞೆ ಮಾಡಿದನು. ಅಲ್ಲದೆ ಅವನನ್ನು ಕೊಲ್ಲಲಾಗದಿದ್ದರೆ ಪ್ರಾಣಬಿಡುವುದಾಗಿಯೂ ಅರ್ಜುನನು ಶಪಥ ಮಾಡಿದನು. ಆಗ ದುರ್ಯೋಧನಾದಿಗಳು ಜಯದ್ರಥನನ್ನು ಬಚ್ಚಿಟ್ಟರು. ಕೃಷ್ಣನು ಚಕ್ರಾಯುಧದಿಂದ ಸೂರ್ಯ ಮಂಡಲವನ್ನು ಮುಚ್ಚಿದನು. ಸೂರ್ಯ ಮುಳುಗಿದನೆಂದು ಭಾವಿಸಿ ದುರ್ಯೋಧನನು ಜಯದ್ರಥನನ್ನು ಕರೆತಂದು ಅರ್ಜುನನ್ನು ತನ್ನ ಪ್ರತಿಜ್ಞೆಯಂತೆ ಪ್ರಾಣ ಬಿಡಬೇಕೆಂದು ಒತ್ತಾಯಿಸಿದಾಗ ಕೃಷ್ಣನು ಚಕ್ರವನ್ನು ಹಿಂದಕ್ಕೆ ಪಡೆದು ಸೂರ್ಯನನ್ನು ತೋರಿಸಿದನು. ಆಗ ಅರ್ಜುನನು ಜಯದ್ರಥನೊಡನೆ ಯುದ್ಧ ಮಾಡಿ ಕೊಂದನು.

೯

ಶ್ರೀಹರಿ ಪರವಾದ ಸ್ತೋತ್ರ ರೂಪದ ಈ ಕೀರ್ತನೆಯಲ್ಲಿ ಖರ, ಮುರ, ನರಕಾಸುರರೇ ಮೊದಲದ ರಾಕ್ಷಸರನ್ನು ಕೊಂದು ದ್ರೌಪದಿಯೇ ಮೊದಲಾದ ಭಕ್ತರನ್ನು ಕಾಪಾಡಿದ ಭಗವಂತ ತಮ್ಮನ್ನು ಕಾಪಾಡಬೇಕೆಂದು ದಾಸರು ಕೇಳಿಕೊಂಡಿದ್ದಾರೆ.

೧೦

ಹರಿದಾಸರ ಸಿದ್ಧಾಂತದ ಪ್ರಕಾರ ಜೀವರು ಸಾಧನೆಯನ್ನು ಪೂರೈಸಿ ಅಪರೋಕ್ಷ ಜ್ಞಾನವನ್ನು ಪಡೆದು ಮುಕ್ತ ಲೋಕವನ್ನು ಪ್ರವೇಶಿಸಿದ ಮೇಲೂ ಶ್ರೀಹರಿಯ ದಾಸರೇ ಆಗಿರುತ್ತಾರೆ. ಆದ್ದರಿಂದ ದಾಸದೀಕ್ಷೆಗೆ ಇಲ್ಲಿ ತುಂಬ ಮಹತ್ವವಿದೆ. ಜಗನ್ನಾಥ ದಾಸರು ಈ ಕೀರ್ತನೆಯಲ್ಲಿ ಶ್ರೀ ಹರಿಯ ಗುಣ ವಿಶೇಷಗಳನ್ನು ಕೊಂಡಾಡಿ ಅಂತಹ ಶ್ರೀಹರಿಯ ದಾಸರೆಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಭಗವಂತನು ಜೀವರೊಳಗಿರುತ್ತಾನೆ: ಕರ್ಮಗಳನ್ನು ಮಾಡಿಸುತ್ತಾನೆ. ಅದಕ್ಕೆ ತಕ್ಕ ಫಲಗಳನ್ನು ಕೊಡುತ್ತಾನೆ. ಅವನು ಕಾಲ ನಿಯಾಮಕನಾಗಿದ್ದಾನೆ; ಧರ್ಮ ಸಂರಕ್ಷಕನಾಗಿದ್ದಾನೆಂದು ದಾಸರು ಹೇಳಿದ್ದಾರೆ.

೧೧

ಭಗವಂತನಿಗೂ ಭಕ್ತರಿಗೂ ಉಂಟಾಗಿರುವ ಸಂಬಂಧ ಸೇತುವೆಗೆ ಭಗವಂತನ ಕಾರುಣ್ಯ ಗುಣವೇ ಕಾರಣವಾಗಿದೆ. ಭಗವಂತನು ಸಾತ್ವಿಕ ಜೀವರ ಉದ್ಧಾರಾರ್ಥವಾಗಿ ಮಾಡಿದ ಲೋಕ ಕಲ್ಯಾಣವಾಗಬಹುದಾದ ಜ್ಞಾನ ಕಾರ್ಯಗಳನ್ನು ದಾಸರು ಸೂಚಿಸಿ ತಮ್ಮನ್ನು ಸಲಹ ಬೇಕೆಂದು ಈ ಕೀರ್ತನೆಯಲ್ಲಿ ಬೇಡಿದ್ದಾರೆ.

೧. **ಶುದ್ಧಾಖ್ಯ ದ್ವಿಜನು** : ಶುದ್ಧ ಎಂಬ ಬ್ರಾಹ್ಮಣನು ಸ್ವಧರ್ಮವನ್ನು ತೊರೆದು ಕೇವಲ ಶ್ರಾದ್ಧಾನ್ನ ಭೋಜನವನ್ನು ಮಾಡಿ ಪುಣ್ಯ ಹೀನನಾಗಿರುವಾಗ ಅವನ ಹೆಂಡತಿಯು ಗಂಡನಿಗೆ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರಿಸಿದಳೆಂದೂ, ಭಗವಂತನು ಶುದ್ಧನ ಅಪರಾಧಗಳನ್ನು ಮನ್ನಿಸಿ ಕರುಣೆ ತೋರಿದನೆಂದು ಶ್ರಾವಣಮಾಸದ ಶುದ್ಧ ದ್ವಾದಶಿಯ ಕಥೆಯಲ್ಲಿ ಉಕ್ತವಾಗಿದೆ.

೨. **ವೈರೋಚನೀಯ ಭೂಮಿ ದಾನವ ಬೇಡಿ** : ಬಲಿ ಚಕ್ರವರ್ತಿಯಿಂದ ವಾಮನನು ಭೂ ದಾನವನ್ನು ಬೇಡಿ ಪಡೆದ ಕಥೆಯನ್ನು ಇಲ್ಲಿ ಸೂಚಿಸಲಾಗಿದೆ.

೧೨

ಭಗವಂತನು ತಮ್ಮನ್ನು ಯಾವ ಪರಿಸ್ಥಿತಿಯಲ್ಲಿಯೇ ಇಟ್ಟರೂ ಅದನ್ನು ಒಪ್ಪಿಕೊಳ್ಳುವುದಾಗಿ ದಾಸರು ಈ ಕೀರ್ತನೆಯಲ್ಲಿ ಹೇಳಿದ್ದಾರೆ. ನಿಜವಾದ ದಾಸದೀಕ್ಷೆ, ಹರಿ ಭಕ್ತಿಯುಳ್ಳವರು ಬದುಕಿನಲ್ಲಿ ಬರುವುದೆಲ್ಲವನ್ನು ಗಂಭೀರವಾಗಿ ಒಪ್ಪಿಕೊಳ್ಳುವರೆಂಬುದನ್ನು ಈ ಕೀರ್ತನೆಯ ಮೂಲಕ ಗ್ರಹಿಸಬಹುದಾಗಿದೆ.

೧೩

ಭಗವಂತನನ್ನು ಮನಸ್ಸಿನಲ್ಲಿ ಸದಾಕಾಲ ಧ್ಯಾನಿಸುವಂತಹ ಸ್ಥಿತಿಯನ್ನುಂಟು ಮಾಡಬೇಕೆಂದು ಜಗನ್ನಾಥ ದಾಸರು ಈ ಕೀರ್ತನೆಯಲ್ಲಿ ಪ್ರಾರ್ಥಿಸಿದ್ದಾರೆ; ನಾನಾ ವ್ರತಾದಿಗಳನ್ನು ಆಚರಿಸಿ ಭಗವಂತನ ಕೃಪೆಗಾಗಿ ಯತ್ನಿಸಿರುವುದನ್ನು ದಾಸರು ಇಲ್ಲಿ ಸೂಚಿಸಿದ್ದಾರೆ.

೧೪

ಭಗವಂತನ ಅಪರೋಕ್ಷಕ್ಕಾಗಿ ದಾಸರು ರಚಿಸಿರುವ ಪ್ರಾರ್ಥನಾಪರವಾದ ಕೀರ್ತನೆ ಇದು. ಶಾಸ್ತ್ರಾನು ಸಾರವಾಗಿ ಜೀವನವನ್ನು ಮಾಡಲಾಗದೆ ತಮಗೆ ಗಂಟು ಬಿದ್ದಿರಬಹುದಾದ ಪಾಪ ಪರ್ವತದ ಬಗ್ಗೆ ಚಿಂತಿತರಾಗಿ ಭಗವಂತನ ಕೃಪೆಯಿಂದ ಎಲ್ಲ ಪಾಪಗಳು ನಾಶವಾಗುವಂತಾಗಲೆಂದು ದಾಸರು ಬಯಸಿದ್ದಾರೆ.

೧. **ಕೃಪಣ ವತ್ಸಲನೆ** : ಶ್ರೀ ಹರಿಯನ್ನು ಕೃಪಣ ವತ್ಸಲ ಎಂದು ಅನೇಕ ಕೀರ್ತನೆಗಳಲ್ಲಿ ಕರೆಯಲಾಗಿದೆ. ಇಲ್ಲಿ ಭಕ್ತರನ್ನೇ ಕೃಪಣರು – ಜಿಪುಣರು ಎನ್ನಲಾಗಿದೆ. ಉನ್ನತ ಭಕ್ತರು ತಮ್ಮ ಆತ್ಮ ಸಾಧನೆಗೆ ಅಗತ್ಯವಾದ ಪುಣ್ಯದಲ್ಲಿ ಕೊಂಚ ಭಾಗವನ್ನೂ ಖರ್ಚು ಮಾಡದಂತೆ ಜಿಪುಣತನವನ್ನು ತೋರುವ ರಾದುದರಿಂದ ಭಕ್ತರನ್ನು ಕೃಪಣರು ಎಂದೂ, ಭಗವಂತನನ್ನು ಕೃಪಣ ವತ್ಸಲ ಎಂದೂ ಹೇಳಲಾಗಿದೆ.

೧೫

ಭಾಗವತಾದಿ ಪುರಾಣಗಳಲ್ಲಿರುವ ಶ್ರೀಹರಿಯ ಮಹಿಮಾ ಪೂರ್ಣವಾದ ಕಥೆಗಳನ್ನು ಸೂಚಿಸುತ್ತಾ ದಾಸರು ಆರ್ತರಾಗಿ ಭಗವಂತನನ್ನು ಪ್ರಾರ್ಥಿಸಿರುವ ಕೀರ್ತನೆ ಇದಾಗಿದೆ. ಭಗವಂತನೊಡನೆ ದಾಸರು ನೇರವಾಗಿ ಮಾತನಾಡುತ್ತಿರುವರೆಂಬ ಅನುಭವವನ್ನುಂಟ

ಮಾಡುವ ಧಾಟಿಯಲ್ಲಿ ಈ ರಚನೆ ಉಂಟೆಂಬುದನ್ನು ಗುರುತಿಸಬಹುದಾಗಿದೆ. ನರಸಿಂಹಾವತಾರ, ಮತ್ಸ್ಯಾವತಾರ, ವಾಮನಾವತಾರ, ರಾಮಾವತಾರದ ಪ್ರಧಾನ ಕಥೆಗಳನ್ನು ದಾಸರು ಇಲ್ಲಿ ಸೂಚಿಸಿದ್ದಾರೆ.

೧೬

ಶ್ರೀ ಹರಿಯನ್ನು 'ರಕ್ಷಿಸು' ಎಂದು ದಾಸರು ಪ್ರಾರ್ಥಿಸಿರುವರು ಕೀರ್ತನೆಯಲ್ಲಿ ಭಗವಂತನ ವಿವಿಧ ಹೆಸರುಗಳನ್ನು ಹೇಳುವುದರ ಮೂಲಕ ಆಯಾ ರೂಪಗಳಿಂದ ಭಗವಂತನು ನಡೆಸಿರುವ ಕ್ರಿಯೆಗಳನ್ನು ದಾಸರು ಸೂಚಿಸಿರುವರು. ಇದರಲ್ಲಿ ದಶಾವತಾರದ ಸೂಚನೆಯೂ ಇದೆ.

೧. **ಪುರಹರ ಬಾಣರೂಪ** : ತ್ರಿಪುರಾಸುರರನ್ನು ಸಂಹಾರ ಮಾಡಲು ಶಿವನು ಉದ್ಯುಕ್ತನಾದಾಗ ವಿಷ್ಣು ಬಾಣ ರೂಪವನ್ನು ತಾಳಿ ತ್ರಿಪುರಾಸುರನನ್ನು ನಾಶ ಮಾಡಿದನೆಂಬ ಕಥೆಯನ್ನು ಇಲ್ಲಿ ಸೂಚಿಸಲಾಗಿದೆ.

೧೭

ಹಂಪೆಯಲ್ಲಿರುವ ಗುಲಗಂಜಿ ಮಾಧವರಾಯನ ಸ್ತೋತ್ರವಿದು. ಮಾಧವರಾಯನು ಕೈಯಲ್ಲಿ ಗುಲಗಂಜಿ ಹಿಡಿದಿರುವದನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗಿದೆ. ಪಂಪಕ್ಷೇತ್ರವು ಇತರ ಕ್ಷೇತ್ರಗಳಿಗಿಂತ ಒಂದು ಗುಲಗಂಜಿ ತೂಕದಷ್ಟು ಅಧಿಕ ಪಾವಿತ್ರ್ಯವನ್ನು ಹೊಂದಿರುವ ಪುಣ್ಯ ಕ್ಷೇತ್ರವೆಂದು ಇದರ ತಾತ್ಪರ್ಯ.

೧೮

ಪ್ರಪಂಚವೆಲ್ಲವೂ ಭಗವಂತನ ಅಧೀನವಾಗಿದೆ ಎಂಬ ತತ್ವವನ್ನು ಪ್ರತಿಪಾದಿಸುವ ಕೀರ್ತನೆ ಇದು. ಕಾಲ ಗುಣ, ಕರ್ಮಗಳಿಗೆ ತಕ್ಕಂತೆ ಪ್ರತಿಯೊಬ್ಬ ಜೀವಿಗೂ ಸುಖದುಃಖಗಳನ್ನುಂಟು ಮಾಡುವುದು ಭಗವಂತನ ಸಂಕಲ್ಪವೆಂಬುದನ್ನು ದಾಸರು ಒತ್ತಿ ಹೇಳಿದ್ದಾರೆ.

೧೯

ಹರಿದಾಸರು ಕೆಲವು ಕೀರ್ತನೆಗಳಲ್ಲಿ ನಾಟಕೀಯತೆಯನ್ನು ತಂದಿರುವುದುಂಟು. ಜಗನ್ನಾಥದಾಸರು. ಭಗವಂತನ ಲಕ್ಷಣಗಳನ್ನು ವಿವರಿಸಲು ಸಂಭಾಷಣಾ ತಂತ್ರವನ್ನು ಉಪಯೋಗಿಸುವುದರ ಮೂಲಕ ಈ ಕೃತಿಗೆ ನಾಟಕೀಯತೆಯನ್ನುಂಟುಮಾಡಿದ್ದಾರೆ.

೨೦

'ಶ್ರೀನಿಕೇತನ' ಎಂಬುದು ವಿಷ್ಣುವಿಗೆ ಅನ್ವಯವಾಗುವ ಮಾತಾಗಿದೆ. ಲಕ್ಷ್ಮಿಗೆ ತನ್ನ ಹೃದಯವನ್ನೇ ಮನೆಯನ್ನಾಗಿ ಮಾಡಿಕೊಟ್ಟಿರುವ ವಿಷ್ಣುವಿನ ಗುಣಾವಳಿಗಳ ಪ್ರಶಂಸೆ ಇಲ್ಲಿರುವುದನ್ನು ಕಾಣಬಹುದು.

೧. **ಪನ್ನಗಾಚಲವಾಸ** : ತಿರುಪತಿಯ ಬೆಟ್ಟವನ್ನು ಶೇಷಾಚಲ ಅಥವಾ ಪನ್ನಗಾಚಲ ಎಂದು ಕರೆಯುವ ರೂಢಿ ಇದೆ.

೨೧

ಬ್ರಹ್ಮಾದಿ ದೇವತೆಗಳಿಂದ ವಂದಿತನಾದ ವಿಷ್ಣುವಿನ ಸ್ತೋತ್ರವಿದು. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ನಿವಾರಿಸಬೇಕೆಂದು ದಾಸರು ವಿಶೇಷವಾಗಿ ಪ್ರಾರ್ಥಿಸಿದ್ದಾರೆ

೧. **ಅಕೂತಿತನಯ** : ರುಚಿ ಪ್ರಜೇಶ್ವರನ ಹೆಂಡತಿಯ ಹೆಸರು ಅಕೂತಿ : ಈ ದಂಪತಿಗಳ ಪುತ್ರನಾಗಿ ವಿಷ್ಣುವೇ ಅವತರಿಸಿದನು : ಈತನಿಗೆ ಯಜ್ಞ ಎಂಬ ಹೆಸರಿತ್ತು.

೨೨

ಶ್ರೀಹರಿಯು ಎಲ್ಲ ವಸ್ತುಗಳಲ್ಲಿಯೂ ಯಾವಾಗಲೂ ಇರತಕ್ಕವನೆಂದೂ, ಸತ್ಯ ಸಂಕಲ್ಪನೆಂದೂ, ಪಾಪಿ ಜನರಿಂದುಂಟಾಗುತ್ತಿರುವ ತೊಂದರೆಗಳನ್ನು ತಪ್ಪಿಸಬೇಕೆಂದು ದಾಸರು ಪ್ರಾರ್ಥಿಸಿದ್ದಾರೆ.

೨೩

ಶ್ರೀಹರಿಯ ಗುಣ ವಿಶೇಷಗಳ ಪ್ರಶಂಸೆಯೇ ಈ ಕೀರ್ತನೆಯ ವಸ್ತುವಾಗಿದೆ. ಭಗವಂತನು ಅಣುವಿನೊಳಗೆ ಅಣುವಾಗಿರುವನೆಂದೂ, ಇಹಪರ ಸೌಖ್ಯ ಪ್ರದಾತನೆಂದೂ ಸಕಲ ಕ್ರಿಯೆಗಳೂ ಹರಿಯ ಸಂಕಲ್ಪದಂತೆ ನಡೆಯುವುದೆಂದೂ, ಶ್ರೀಹರಿಯ ಮೂಲರೂಪಕ್ಕೂ ಅವತಾರಗಳಿಗೂ ಗುಣ, ಶಕ್ತಿ, ಸಾಮರ್ಥ್ಯಗಳಲ್ಲಿ ವ್ಯತ್ಯಾಸವಿಲ್ಲವೆಂದೂ ದಾಸರು ಇಲ್ಲಿ ವಿವರಿಸಿದ್ದಾರೆ.

೨೪

ಇದು ದಶಾವತಾರ ಸ್ತೋತ್ರವಾಗಿದೆ. ನಾಲ್ಕು ಯುಗಗಳಲ್ಲಿ ಶ್ರೀಹರಿಯು ಒಟ್ಟು ಹತ್ತು ಅವತಾರಗಳನ್ನು ತಾಳಿದನು. ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ರಾಮ, ಪರಶುರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಎಂಬುದೇ ದಶಾವತಾರಗಳು.

೨೫

ವಿಷ್ಣುವೇ ವೇದವ್ಯಾಸ ಮುನಿಯಾಗಿ ಅವತರಿಸಿದನು. ಈ ವೇದವ್ಯಾಸರನ್ನು ಕುರಿತ ಸ್ತೋತ್ರವಿದು. ವೇದವ್ಯಾಸರನ್ನು ಕೃಷ್ಣ ದ್ವೈಪಾಯನರೆಂದೂ ಕರೆಯುವ ರೂಢಿ ಇದೆ. ಇವರಿಗೆ ಬಾದರಾಯಣ ; ಪಾರಾಶರ ಎಂಬ ಹೆಸರೂ ಉಂಟು. ವೇದಗಳನ್ನು ವಿಭಜಿಸಿ, ಮಹಾಭಾರತವನ್ನು ವೇದವ್ಯಾಸರು ರಚಿಸಿದರು.

೨೬

ತಿರುಪತಿಯಲ್ಲಿರುವ ವರಾಹ ದೇವರ ಸ್ತೋತ್ರವಿದು. ತಿರುಪತಿಯ ಶ್ರೀನಿವಾಸನ ದರ್ಶನ ಮಾಡುವ ಮೊದಲು ವರಾಹ ದೇವರ ದರ್ಶನ ಮಾಡಲೇಬೇಕೆಂಬುದು ಈ ಕ್ಷೇತ್ರದ ವಿಧಿಯಾಗಿದೆ. ಹಿರಣ್ಯಾಕ್ಷನೆಂಬ ರಾಕ್ಷಸನನ್ನು ಕೊಲ್ಲಲು ವಿಷ್ಣುವು ವರಾಹ ರೂಪಿಯಾಗಿ ಅವತರಿಸಿದನು.

೨೭

ನರಸಿಂಹ ದೇವರ ಸ್ತೋತ್ರವಿದು. ಹಿರಣ್ಯ ಕಶ್ಯಪುವೆಂಬ (ಪ್ರಹ್ಲಾದನ ತಂದೆ) ರಾಕ್ಷಸನನ್ನು ಕೊಲ್ಲಲು ವಿಷ್ಣುವೇ ನರಸಿಂಹನಾಗಿ ಅವತರಿಸಿದನು. ಕನಕ ಮುನಿ ಎಂಬ ಮಹರ್ಷಿಯಿಂದ ವಿಶೇಷವಾಗಿ ಪೂಜಿತಗೊಂಡ ನರಸಿಂಹ ದೇವರ ವಿಗ್ರಹವು ಆಂಧ್ರ ಪ್ರದೇಶದ ಕನಕಗಿರಿ ಎಂಬ ಸ್ಥಳದಲ್ಲಿದೆ. ಜಗನ್ನಾಥದಾಸರು ಕನಕಗಿರಿಗೆ ಭೇಟಿ ಕೊಟ್ಟಾಗ ರಚಿಸಿದ ಸ್ತೋತ್ರವಿದು ಎನಿಸುತ್ತದೆ.

೨೮

ಈ ಕೀರ್ತನೆಯೂ ನರಸಿಂಹ ದೇವರನ್ನು ಕುರಿತ ಸ್ತೋತ್ರವಾಗಿದೆ. ಈ ಕೀರ್ತನೆಯಲ್ಲಿ ಕನಕ ಸಂಯಮಿ ವರದಾ ಎಂಬ ಪ್ರಯೋಗವಿರುವುದರಿಂದ ಇದು ಕನಕಗಿರಿಯ ನರಸಿಂಹನನ್ನು ಕುರಿತ ಸ್ತೋತ್ರವಾಗಿದೆ ಎನ್ನಲವಕಾಶವಿದೆ.

೨೯

ಜಗನ್ನಾಥ ದಾಸರ ಸುಪ್ರಸಿದ್ಧ ಕೀರ್ತನೆಗಳಲ್ಲಿ ಇದೊಂದಾಗಿದೆ. ನರಸಿಂಹ ದೇವರ ಅವತಾರದ ಸ್ವರೂಪವನ್ನು ಈ ಕೀರ್ತನೆಯು ವಿವರಿಸುತ್ತದೆ.

೩೦

ಈ ಕೀರ್ತನೆಯೂ ನರಸಿಂಹ ದೇವರನ್ನು ಕುರಿತದ್ದಾಗಿದೆ. ನರಸಿಂಹ ದೇವರ ಗುಣವಿಶೇಷಗಳನ್ನು ಇಲ್ಲಿ ಚಿತ್ರಿಸಲಾಗಿದೆ.

೩೧

ನರಸಿಂಹದೇವರನ್ನು ಕುರಿತು ಬರೆದಿರುವ ಸ್ವಲ್ಪ ದೀರ್ಘವಾದ ಕೀರ್ತನೆ ಇದು. ಸಂಸಾರ ಸಾಗರದಿಂದ ಪಾರು ಮಾಡಬೇಕೆಂದು ಅನನ್ಯವಾಗಿ ದಾಸರು ನರಸಿಂಹನಲ್ಲಿ ಬೇಡಿದ್ದಾರೆ. ಮಾನಸಿಕವಾಗಿ ಭಗವಂತನ ಪೂಜೆಯನ್ನು ಅನನ್ಯವಾಗಿ – ಸತತವಾಗಿ ಮಾಡಲು ಅವಕಾಶವನ್ನುಂಟು ಮಾಡಬೇಕೆಂದು ಜಗನ್ನಾಥ ದಾಸರು ಕೇಳಿಕೊಂಡಿದ್ದಾರೆ.

೩೨

ಪ್ರಹ್ಲಾದನ ಭಕ್ತಿಗೆ ಮೆಚ್ಚಿ, ಅವನಾಡಿದ ಮಾತುಗಳನ್ನು ಸತ್ಯವೆನಿಸಲು ಹಾಗೂ ಹಿರಣ್ಯ ಕಶ್ಯಪುವೆಂಬ ರಾಕ್ಷಸನನ್ನು ಕೊಲ್ಲಲು ಅವತರಿಸಿದ ನರಸಿಂಹ ದೇವರನ್ನು ಅವನ ಮೂಲ ರೂಪ ಹಾಗೂ ಇತರ ರೂಪಗಳ ಗುಣವಿಶೇಷಗಳನ್ನು ಇಲ್ಲಿ ವರ್ಣಿಸಲಾಗಿದೆ.

೩೩

ಪ್ರಹ್ಲಾದವರದನೆನಿಸಿದ ನರಸಿಂಹನ ಸ್ತೋತ್ರದೊಡನೆ ನರಸಿಂಹನ ಮೂಲರೂಪದ ಗುಣಾತಿಶಯದ ಬಣ್ಣನೆ ಇಲ್ಲಿದೆ. ವಿಷ್ಣುವಿಗೆ ಎಲ್ಲ ಅಧಿಕಾರವಿದ್ದರೂ ತತ್ವಾಭಿಮಾನಿ ದೇವತೆಗಳ ವಿಜ್ಞಾಪನೆಯಂತೆಯೇ ನಿರ್ಧಾರವನ್ನು ಕೈಗೊಳ್ಳುವುದು ಅವನ ಸಹಜ ಸ್ವಭಾವವೂ ನಿಯಮವೂ ಆಗಿದೆ ಎಂಬ ತತ್ವ ನಿರೂಪಣೆ ಇಲ್ಲಿದೆ.

೧. **ಅನಿರುದ್ಧನೆಂದೆನಿಸಿ** : ಶ್ರೀಹರಿಯು ಅನಿರುದ್ಧ ಎಂಬ ರೂಪದಿಂದ ಜಗತ್ತನ್ನು ಸೃಷ್ಟಿ ಮಾಡುವನೆಂಬ ವಿಚಾರವನ್ನು ದಾಸರು ಸೂಚಿಸಿದ್ದಾರೆ.

೩೪

ಈಶ್ವರಗೆ ಲಯಕರ್ತೃತ್ವವನ್ನು ವಿಷ್ಣುವು ವಹಿಸಿದ್ದು ರುದ್ರನಲ್ಲಿ ನರಸಿಂಹರೂಪಿಯಾಗಿದ್ದು ಲಯಕಾರ್ಯ (ಜಗತ್ತಿನ) ವನ್ನು ಮಾಡುವುದಾಗಿ ಶಾಸ್ತ್ರಗಳು ಹೇಳುತ್ತಿರುವುದನ್ನು ದಾಸರು ಇಲ್ಲಿ ಸೂಚಿಸಿದ್ದಾರೆ.

೩೫

ವಿಷ್ಣುವಿನ ಮತ್ತೊಂದು ಅವತಾರವಾದ ಶ್ರೀ ರಾಮನ ಸ್ತೋತ್ರವನ್ನು ಈ ಕೀರ್ತನೆಯಲ್ಲಿ ಮಾಡಲಾಗಿದೆ. ರಾಮಾವತಾರ ಕಾಲದಲ್ಲಿ ರಾಮನು ಹಲವರಿಗೆ ಅನುಗ್ರಹಿಸಿದ ಪ್ರಸಂಗಗಳನ್ನು ದಾಸರು ಇಲ್ಲಿ ಸೂಚಿಸಿದ್ದಾರೆ.

೩೬

ಶ್ರೀ ರಾಮನನ್ನು ಈ ಕೀರ್ತನೆಯಲ್ಲಿ ಸ್ತುತಿಸಲಾಗಿದೆ. ರಾಮನು ಯಾವಾಗಲೂ ಧನುರ್ಧಾರಿಯಾಗಿರುತ್ತಿದ್ದುದರಿಂದ ಅವನನ್ನು ಕೋದಂಡರಾಮ ಎಂದು ಕರೆಯುವುದು ವಾಡಿಕೆಯಾಗಿರುವುದನ್ನು ದಾಸರು ಉಲ್ಲೇಖಿಸಿದ್ದಾರೆ.

೩೭

ಶ್ರೀರಾಮನನ್ನು ಕುರಿತ ಈ ಕೀರ್ತನೆಯಲ್ಲಿ ರಾಮಾಯಣದ ಕೆಲವು ಪ್ರಸಂಗಗಳನ್ನು ಉಲ್ಲೇಖಿಸಿ ದಾಸರು ರಾಮನನ್ನು ಗುಣಗಣಧಾಮ ಎಂದಿದ್ದಾರೆ.

೧. **ಗಾಧಿನಂದನನ ಸುಮೇಧ ರಕ್ಷಿಸಿದ** : ವಿಶ್ವಾಮಿತ್ರನನ್ನು ಗಾಧಿನಂದನ ಎನ್ನಲಾಗಿದೆ. ವಿಶ್ವಾಮಿತ್ರ ಮಾಡುತ್ತಿದ್ದ ಯಜ್ಞವನ್ನು ರಾಕ್ಷಸರು ಹಾಳು ಮಾಡುತ್ತಿದ್ದರು. ಆಗ ವಿಶ್ವಾಮಿತ್ರನು ದಶರಥನ ಬಳಿ ಬಂದು ರಾಮನನ್ನು ಸಹಾಯಕ್ಕೆ ಪಡೆಯುವನು.

೩೮

ಕೃಷ್ಣನನ್ನು ಕುರಿತು ಬರೆದಿರುವ ಈ ಕೀರ್ತನೆಯಲ್ಲಿ ಕೃಷ್ಣಾವತಾರದ ಅನೇಕ ಪ್ರಸಂಗಗಳನ್ನು ದಾಸರು ಇಲ್ಲಿ ಸೂಚಿಸಿದ್ದಾರೆ.

೧. **ಸಡಗರದಿ ದೈತ್ಯರ ಮರುಳುಗೊಳಿಸಿದ** : ದೇವತೆಗಳೂ ದೈತ್ಯರೂ ಸೇರಿ ಅಮೃತವನ್ನು ಸಮುದ್ರ ಮಥನ ಮಾಡಿ ಸಂಪಾದಿಸಿದ ಮೇಲೆ ಹರಿಯು ಮೋಹಿನಿಯ ಅವತಾರವನ್ನು ತಾಳಿ ರಾಕ್ಷಸರನ್ನು ಮರುಳುಗೊಳಿಸಿ ಅಮೃತ ಕಲಶವನ್ನು ಪಡೆದು ದೈತ್ಯರಿಗೆ ಅಮೃತ ದಕ್ಕದಂತೆ ಮಾಡುವನು.

೨. **ಬಾಣ ಗುರುವಿನ ಕಾಣೆನೆನಿಸಿದ ಜಾಣ** : ಕುರುಕ್ಷೇತ್ರದ ಯುದ್ಧದಲ್ಲಿ ಬಾಣಗುರುವೆನಿಸಿದ ದ್ರೋಣಾಚಾರ್ಯರು ಆತ್ಮಹತ್ಯೆ ಮಾಡಿಕೊಳ್ಳುವ ಹಾಗೆ ಕೃಷ್ಣನು ಮಾಡಿದ ತಂತ್ರದ ಸೂಚನೆ ಇಲ್ಲಿದೆ. ಧರ್ಮರಾಯನು 'ಅಶ್ವತ್ಥಾಮೋ ಹತಃ ಕುಂಜರಃ' ಎಂದು ಘೋಷಿಸಿದಾಗ ಕೃಷ್ಣನು ಶಂಖನಾದವನ್ನು ಮಾಡಿ 'ಕುಂಜರಃ' (ಆನೆ) ಎಂಬ ಶಬ್ದ ಕೇಳಿಸದಂತೆ ಮಾಡುತ್ತಾನೆ. ಇದರಿಂದ ದ್ರೋಣಾಚಾರ್ಯರು ತಮ್ಮ ಮಗನಾದ ಅಶ್ವತ್ಥಾಮ ಸತ್ತನೆಂದುಕೊಂಡು ಆತ್ಮಹತ್ಯೆ ಮಾಡಿಕೊಂಡರು.

೩೯

ಕೃಷ್ಣನನ್ನು ಕುರಿತ ಮತ್ತೊಂದು ಕೀರ್ತನೆ ಇದು. ಹಿಂದಿನ ಕೀರ್ತನೆಗಳಲ್ಲಿ ಉಲ್ಲೇಖಿಸದ ಪ್ರಸಂಗಗಳನ್ನು ದಾಸರು ಇಲ್ಲಿ ಉಲ್ಲೇಖಿಸಿ ಕೃಷ್ಣನ ಮಹಿಮಾತಿಶಯಗಳನ್ನು ಕೊಂಡಾಡಿದ್ದಾರೆ.

೧. **ಕೃಷ್ಣೆಗೆ ಒಲಿದತಿ ದುಷ್ಟರಾಯರನು ತರಿದಾ** : ಕೃಷ್ಣೆ ಎಂದರೆ ದ್ರೌಪದಿ ಎಂದರ್ಥ. ದ್ರೌಪದಿಯ ಭಕ್ತಿಗೆ ಒಲಿದು ಅವಳ ಕೋರಿಕೆಯಂತೆ ದುರ್ಯೋಧನಾದಿಗಳನ್ನು ಕೃಷ್ಣನು ಸಂಹಾರ ಮಾಡಿಸಿದನು.

೨. **ಪಡೆದವಳ ಜನಕಗೆ ಪಟ್ಟಗಟ್ಟಿದ** : ಕೃಷ್ಣನ ತಾಯಿ ದೇವಕಿ; ದೇವಕಿಯ ತಂದೆ ಉಗ್ರಸೇನ. ಈ ಉಗ್ರಸೇನನಿಗೆ ನಷ್ಟವಾಗಿದ್ದ ರಾಜ್ಯಾಧಿಕಾರವನ್ನು ಕೃಷ್ಣನು ನೀಡುವನು.

೩. **ಸುದತಿಯಗೋಸುಗ .... ತಂದ** : ಒಮ್ಮೆ ನಾರದರು ದೇವಲೋಕದ ಪಾರಿಜಾತ ವೃಕ್ಷವನ್ನು ತಂದು ಕೃಷ್ಣನಿಗೆ ಕೊಡುವರು. ಕೃಷ್ಣನು ಅದನ್ನು ರುಕ್ಮಿಣಿಗೆ ಕೊಡುವನು. ಆಗ ಸತ್ಯಭಾಮೆ ಕೋಪಗೊಳ್ಳುವಳು. ಆಗ ಕೃಷ್ಣನು ಸತ್ಯಭಾಮೆಯನ್ನು ಸಂತೋಷಗೊಳಿಸಲು ಅಮರಾವತಿಯಿಂದ ಮತ್ತೊಂದು ಪಾರಿಜಾತ ವೃಕ್ಷವನ್ನು ತಂದು ಕೊಟ್ಟನು.

೪೦

ಕೃಷ್ಣನನ್ನು ಕುರಿತ ನಿಂದಾಸ್ತುತಿ ಇದು. ಭಗವಂತನ ಗುಣಗಳಲ್ಲಿ ದೋಷಗಳನ್ನು ಗುರುತಿಸಿ ಟೀಕಿಸಿ ಅನಂತರ ಹೊಗಳುವ ರಚನೆಯನ್ನೊಳಗೊಂಡಿದ್ದನ್ನು ನಿಂದಾಸ್ತುತಿ ಎನ್ನುತ್ತಾರೆ. ಜನನ ಮರಣ ವಿದೂರನೆಂದು ಶ್ರೀಹರಿಯನ್ನು ವೇದಗಳು ಬಣ್ಣಿಸಿವೆ. ಆದರೆ ದಶವತಾರಗಳನ್ನು ತಾಳಿದ್ದರಿಂದ ಈ ತತ್ವಕ್ಕೆ ವಿರೋಧವಾಗಿ ನಡೆದುಕೊಂಡಂತಾಯಿತೆಂದು ದಾಸರು ತರ್ಕಿಸಿದ್ದಾರೆ.

೪೧

ನಾರದ ಪ್ರಿಯನಾದ ಕೃಷ್ಣನ ಸ್ತುತಿಯಿದು. ಈ ಭವಬಂಧನವನ್ನು ಬಿಡಿಸೆಂದು ಮೊರೆಯಿಟ್ಟಿದ್ದಾರೆ ಜಗನ್ನಾಥ ದಾಸರು.

೪೨

ಗೋವುಗಳನ್ನು ಪಾಲಿಸುವ ಕಾಯಕವನ್ನು ಕೃಷ್ಣ ಬಾಲ್ಯದಲ್ಲಿ ಕೈಗೊಂಡ ನಿಮಿತ್ತ ದಾಸರು ಕೃಷ್ಣನನ್ನು 'ಗೋಪಾಲ ಕೃಷ್ಣ' ಎಂದು ಬೋಧಿಸಿ ಕೃಷ್ಣ ಸ್ತೋತ್ರ ಮಾಡಿದ್ದರೂ ರಾಮನಿಗೂ ಕೃಷ್ಣನಿಗೂ ಭೇದವಿಲ್ಲವೆಂಬುದನ್ನು ಸೂಚಿಸುವ ಉದ್ದೇಶದಿಂದ ರಾಮಾವತಾರದ ಪ್ರಸಂಗವೊಂದನ್ನು ದಾಸರು ಇಲ್ಲಿ ಸೂಚಿಸಿದ್ದಾರೆ.

೧. **ಶಿವಚಾಪ ಭಂಜನಾ** : ರಾಮಾವತಾರದಲ್ಲಿ ಜನಕರಾಜನು ಏರ್ಪಡಿಸಿದ ಸ್ವಯಂವರ ಮಂಟಪದಲ್ಲಿ ಶಿವನ ಧನುಸ್ಸನ್ನು ರಾಮ ಮುರಿದ ಪ್ರಸಂಗದ ಕಥೆಯ ಸೂಚನೆ ಇಲ್ಲಿದೆ.

೪೩

ಹರಿದಾಸರೆಲ್ಲರೂ ವಿಶೇಷವಾಗಿ ತಿರುಪತಿಯ ವೆಂಕಟೇಶನನ್ನು ಸ್ತುತಿಸಿರುವರು. ತಿರುಪತಿಯ ಯಾತ್ರೆಯು ಹರಿದಾಸರ ವರ್ಷದ ಕಾರ್‍ಯಕ್ರಮಗಳಲ್ಲಿ ಒಂದಾಗಿತ್ತು. ತಿರುಪತಿಯ ವೆಂಕಟೇಶನ ಸ್ತೋತ್ರದೊಡನೆ ತಿರುಪತಿಯ ಬೆಟ್ಟಕ್ಕೆ ಸಂಬಂಧಿಸಿದ ಹಲವು ಪುರಾಣೋಕ್ತ ಪ್ರಸಂಗಗಳನ್ನು ದಾಸರು ಇಲ್ಲಿ ಉಲ್ಲೇಖಿಸಿದ್ದಾರೆ.

೧. **ಭೂಸುರನೋರ್ವನು** : ಕೂರ್ಮ ಎಂಬ ವಿಪ್ರನು ತನ್ನ ಪತ್ನೀ ಪುತ್ರರನ್ನು ತೋಂಡಮಾನ ರಾಜನಲ್ಲಿಟ್ಟು ತಾನು ಕಾಶೀಯಾತ್ರೆ ಮಾಡಿ ಬರುವ ತನಕ

ರಕ್ಷಿಸಬೇಕೆಂದು ಕೇಳಿಕೊಂಡನು. ಕೂರ್ಮನು ಯಾತ್ರೆ ಮುಗಿಸಿಕೊಂಡು ಎರಡು ವರ್ಷಗಳಾದ ಮೇಲೆ ಹಿಂದಿರುಗಿದಾಗ ರಾಜಸೇವಕರ ಉದಾಸೀನದಿಂದ ಅವರು ಆಹಾರವಿಲ್ಲದೆ ಸತ್ತುಹೋಗಿದ್ದರು. ಆಗ ತೋಂಡಮಾನನು ತನ್ನ ಬೇಜವಾಬ್ದಾರಿಗೆ ಪಶ್ಚಾತ್ತಾಪಪಟ್ಟು ತಿರುಪತಿಯ ಶ್ರೀನಿವಾಸನನ್ನು ಪ್ರಾರ್ಥಿಸಿದನು, ಶ್ರೀನಿವಾಸನ ಕರುಣೆಯಿಂದ ಕೂರ್ಮನ ಪತ್ನೀ ಪುತ್ರರು ಬದುಕಿದರು.

೨. **ವೃದ್ಧ ಬ್ರಾಹ್ಮಣನು ತುತಿಸೆ** : ತಿರುಪತಿಯಲ್ಲಿ ಶ್ರೀನಿವಾಸನು ವಾಸ ಮಾಡಿಕೊಂಡಿರುವಾಗ ವೃದ್ಧ ಬ್ರಾಹ್ಮಣನ ಕೋರಿಕೆಯಂತೆ ಅವನನ್ನು ಕುಮಾರಧಾರಾತೀರ್ಥದಲ್ಲಿ ಮುಳುಗಿಸಿ ಕಾರುಣ್ಯವನ್ನುಂಟು ಮಾಡಿದ ಕಥೆಯನ್ನು ಈ ವಾಕ್ಯ ಸೂಚಿಸುತ್ತಿದೆ.

೪೪

ಪರ್ವತಗಳಲ್ಲಿ ಕ್ಷೇತ್ರದ ದೃಷ್ಟಿಯಿಂದ ತಿರುಪತಿಯ ಬೆಟ್ಟವು 'ಗಿರಿರಾಜ' ಎನಿಸಿಕೊಂಡಿದೆ ಈ ಗಿರಿರಾಜನಲ್ಲಿರುವ ವೆಂಕಟೇಶನ ಸ್ತೋತ್ರವಿದು.

೪೫

ತಿರುಪತಿಯ ವೆಂಕಟೇಶನನ್ನು ಮುಖ್ಯವಾಗಿ ಸ್ತೋತ್ರ ಮಾಡುವ ಕೀರ್ತನೆ ಇದಾದರೂ ಶ್ರೀಹರಿಯ ಇತರ ಅವತಾರಗಳಲ್ಲಿನ ಕಥೆಗಳನ್ನು ದಾಸರು ಸೂಚಿಸಿ ಈ ಎಲ್ಲ ಅವತಾರಗಳನ್ನು ಮಾಡಿರುವನೆಂಬುದನ್ನು ದಾಸರು ಸೂಚಿಸಿರುವರು.

೧. **ವಕ್ಷ ಕೌಸ್ತುಭಮಣಿ** : ಶ್ರೀ ಹರಿಯು ಎದೆಯಲ್ಲಿ ಕೌಸ್ತುಭ ಎಂಬ ರತ್ನವನ್ನು ಧರಿಸಿದ್ದಾನೆ. ದೇವದೈತ್ಯರು ಸಮುದ್ರವನ್ನು ಕಡೆದಾಗ ದೊರೆತ ವಸ್ತುಗಳಲ್ಲಿ ಕೌಸ್ತುಭಮಣಿಯೂ ಒಂದಾಗಿದೆ.

೨. **ಕಲ್ಕಿ** : ಕಲಿಯುಗದ ಕೊನೆಯಲ್ಲಿ ಶ್ರೀಹರಿಯು ಕಲ್ಕಿ ಎಂಬ ಹೆಸರಿನಿಂದ ಅವತರಿಸಿ ದುಷ್ಟರನ್ನು ಕೊಂದು ಧರ್ಮವನ್ನು ಸ್ಥಾಪಿಸುವನು.

೩. **ಶಂಫಲಿ ಪುರವಾಸಿ** : ಕಲ್ಕಿಯನ್ನು ಶಂಫಲಿ ಪುರವಾಸಿ ಎನ್ನುತ್ತಾರೆ. ಏಕೆಂದರೆ ಕಲ್ಕಿಯು ಶಂಫಲಿ ಎಂಬ ಊರಿನ ವಿಷ್ಣುಯಶ ಎಂಬ ಬ್ರಾಹ್ಮಣನ ಮಗನಾಗಿ ಹುಟ್ಟುವನೆಂದು ಪುರಾಣಗಳು ಹೇಳುತ್ತವೆ.

೪೬

ತಿರುಪತಿಯ ಬೆಟ್ಟಕ್ಕೆ ಅನೇಕ ಹೆಸರುಗಳಿವೆ. ಅವುಗಳಲ್ಲಿ 'ನಾರಾಯಣಾದ್ರಿ' ಎಂಬುದು ಒಂದಾಗಿದೆ. ಶೇಷಾಚಲವೆಂಬ ಹೆಸರು ಈ ಪರ್ವತಕ್ಕೆ ಹೇಗೆ ಬಂದಿತೆಂಬುದರ ಸೂಚನೆ ಈ ಕೀರ್ತನೆಯಲ್ಲಿದೆ.

೧. **ವಾಸುಕಿ ತಪಕೆ ಮೆಚ್ಚಿ** : ಆದಿಶೇಷನು ತಿರುಪತಿಯ ಬೆಟ್ಟದಲ್ಲಿ ಕುಳಿತು ಹರಿಯನ್ನು ಕುರಿತು ತಪಸ್ಸು ಮಾಡಿ ಮೆಚ್ಚಿಸಿಕೊಂಡು ಆ ಬೆಟ್ಟಕ್ಕೆ ತನ್ನ ಹೆಸರನ್ನಿಡಬೇಕೆಂದೂ ಆ ಬೆಟ್ಟದಲ್ಲಿ ಶ್ರೀಹರಿಯು ನೆಲಸಬೇಕೆಂದೂ ಕೇಳಿಕೊಳ್ಳುವನು.

೪೭

ಪನ್ನಗಾದ್ರಿ ಎಂದರೆ ಶೇಷಾಚಲ ಎಂದೇ ಅರ್ಥ. ತಿರುಪತಿಯ ಈ ಬೆಟ್ಟದಲ್ಲಿ ವಾಸವಾಗಿರುವವನು ಶ್ರೀನಿವಾಸ. ಇವನ ಗುಣಾತಿಶಯಗಳನ್ನು ದಾಸರು ಭಕ್ತಿಯಿಂದ ವರ್ಣಿಸಿದ್ದಾರೆ.

೧. **ಮೈಗಣ್ಣನನುಜ** : ಮೈಗಣ್ಣ ಎಂದರೆ ಇಂದ್ರ. ಇವನಿಗೆ ದೇಹದಲ್ಲಿ ಸಹಸ್ರ ಕಣ್ಣುಗಳಿವೆಯಂತೆ, ಇವನ ತಮ್ಮನೇ ಉಪೇಂದ್ರ.

೨. **ಸ್ವರ್ಭಾನುವಿನ ತಲೆಗಡಿದು** : ರಾಹುವಿನ ಮತ್ತೊಂದು ಹೆಸರು ಸ್ವರ್ಭಾನು. ಕಶ್ಯಪ ಮತ್ತು ದನು ಎಂಬ ದಂಪತಿಗಳ ಮಗನಿವನು. ಈ ಸ್ವರ್ಭಾನುವು ಮೇರುಪರ್ವತವನ್ನು ಅಪ್ರದಕ್ಷಿಣವಾಗಿ ಸುತ್ತಿದಾಗ ವಿಷ್ಣುವು ಇವನ ತಲೆಯನ್ನು ಕಡಿದನು.

೪೮

ಶ್ರೀಹರಿಯ ಒಂದು ರೂಪವಾದ ವೆಂಕಟೇಶನ ಗುಣಗಳನ್ನು ದಾಸರು ಭಕ್ತಿಯಿಂದ ಸ್ತೋತ್ರ ಮಾಡಿದ್ದಾರೆ.

೧. **ತ್ರಿವಿಧ ಜೀವರು** : ಜೀವರಲ್ಲಿ ಮೂರು ವಿಧಗಳುಂಟು. ಅವರನ್ನು ಮುಕ್ತಿಯೋಗ್ಯರು, ನಿತ್ಯ ಸಂಸಾರಿಗಳು ಮತ್ತು ತಮೋಯೋಗ್ಯರೆಂದು ಹೇಳುವುದುಂಟು.

೨. **ಸೃಷ್ಟ್ಯಾದಿಕರ್ತ** : ಶ್ರೀಹರಿಗೆ ಅಷ್ಟಕರ್ತೃತ್ವಗಳುಂಟೆಂದು ಶಾಸ್ತ್ರಗಳು ಹೇಳುತಮ: ಸೃಷ್ಟ್ಯಾದಿ ಎಂದರೆ ಸೃಷ್ಟಿ, ಸ್ಥಿತಿ, ಲಯ, ನಿಯಮನ ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳೆಂಬ ಎಂಟು ವಿಧವಾದ ಕರ್ತೃತ್ವ ಶಕ್ತಿ ಎಂದರ್ಥ.

೩. **ವೃಷ್ಣೀಶ** : ಯಾದವ ವಂಶವನ್ನು ವೃಷ್ಣಿ ಕುಲ ಎನ್ನುತ್ತಾರೆ.

೪೯

ತಿರುಪತಿಯ ವೆಂಕಟೇಶನನ್ನು ಕುರಿತ ಈ ಸ್ತೋತ್ರದಲ್ಲಿ ಆದಿಪ್ರಾಸ ಪ್ರಯೋಗದಿಂದ ಕೀರ್ತನೆಗೆ ದಾಸರು ಹೆಚ್ಚು ನಾದಮಯತೆಯನ್ನುಂಟು ಮಾಡಿದ್ದಾರೆ.

೧. **ಕುಚೇಲನ ಸಾಕಿದಾ ಪರಿ** : ಕುಚೇಲನು ತನ್ನ ಬಡತನವನ್ನು ಪರಿಹರಿಸ ಬೇಕೆಂದು ಕೇಳಿಕೊಳ್ಳದಿದ್ದರೂ ಶ್ರೀಕೃಷ್ಣನು ಅವನ ಬಡತನವನ್ನು ಪರಿಹರಿಸಿದಂತೆ ತಮ್ಮ ಕಷ್ಟಗಳನ್ನು ಪರಿಹರಿಸಬೇಕೆಂದು ದಾಸರು ಕೇಳಿ ಕೊಂಡಿದ್ದಾರೆ.

೫೦

ತಿರುಪತಿಯ ಶ್ರೀನಿವಾಸನಿಗೆ ಪ್ರತಿ ವರ್ಷ ನವರಾತ್ರಿಯ ಹಬ್ಬದ ಕೊನೆಯ ದಿನ ವಿಜಯದಶಮಿಯಂದು ಬ್ರಹ್ಮ ರಥೋತ್ಸವವನ್ನು ನಡೆಸಲಾಗುತ್ತದೆ. ಶ್ರೀನಿವಾಸನನ್ನು ಈ ಬ್ರಹ್ಮರಥದಲ್ಲಿ ಕೂಡಿಸಿದ ಸಂದರ್ಭದಲ್ಲಿ ದಾಸರು ಭಗವನ್ಮೂರ್ತಿಯನ್ನು ದರ್ಶಿಸಿ ಆನಂದಾತಿರೇಕದಿಂದ ಸ್ತುತಿಗೈದ ಕೀರ್ತನೆ ಇದಾಗಿದೆ.

೧. **ಕಿರೀಟಿಯ ಸಲಹಿದ** : ಕೀರಿಟ ಎಂದರೆ ಅರ್ಜುನ ಎಂದರ್ಥ. ಕುರುಕ್ಷೇತ್ರದ ಯುದ್ಧದಲ್ಲಿ ಕರ್ಣನು ಬಿಟ್ಟ ಸರ್ಪಾಸ್ತ್ರದಿಂದ ಅರ್ಜುನನ ನಾಶವನ್ನು ತಡೆಯಲು ಕೃಷ್ಣನು ಭೂಮಿಯನ್ನೊತ್ತಿ ಸರ್ಪಾಸ್ತ್ರವು ಅರ್ಜುನನ ಕೊರಳಿಗೆ ತಾಕದಂತೆ ರಕ್ಷಿಸಿದ ಪ್ರಸಂಗವನ್ನು ದಾಸರು ಇಲ್ಲಿ ಸೂಚಿಸಿದ್ದಾರೆ.

೨. **ವಾತಾಶನಗಿರಿ** : ಗಾಳಿಯನ್ನು ಆಹಾರವನ್ನಾಗಿ ಸ್ವೀಕರಿಸುವ ಪ್ರಾಣಿ ಹಾವು : ಹಾವಿನ ಗಿರಿ ಎಂದರೆ ಶೇಷಾದ್ರಿ – ತಿರುಪತಿಯ ಬೆಟ್ಟ ಎಂದು ತಾತ್ಪರ್ಯ.

೫೧

ತಿರುಪತಿಯ ವೇಕಟೇಶನನ್ನು ಕುರಿತ ಸ್ತೋತ್ರವಿದು. ಕಾಂಚನ ಬ್ರಹ್ಮನೆಂದೇ ಪ್ರಖ್ಯಾತನಾದ ಶ್ರೀನಿವಾಸನು ಬೇಡಿದವರ ಇಷ್ಟಾರ್ಥಗಳನ್ನು ನೆರವೇರಿಸುವನೆಂದು ದಾಸರು ವಿಶೇಷವಾಗಿ ಇಲ್ಲಿ ಉಲ್ಲೇಖಿಸಿದ್ದಾರೆ.

೫೨

ಶಂಕರನಿಗೆ ಅಲಂಕಾರವಾಗಿರುವುದು ಸರ್ಪ, ಈ ಶೇಷ ಎಂಬ ಹೆಸರುಳ್ಳ ಪರ್ವತವೇ ಶೇಷಾದ್ರಿ – ಪನ್ನಗಾಚಲ – ತಿರುಪತಿಯ ಬೆಟ್ಟ. ಈ ಬೆಟ್ಟದಲ್ಲಿರುವ ಶ್ರೀನಿವಾಸನನ್ನು ದಾಸರು ಈ ಕೀರ್ತನೆಯಲ್ಲಿ ಭಕ್ತಿಯಿಂದ ಸ್ತೋತ್ರ ಮಾಡಿದ್ದಾರೆ.

೫೩

ಜಗನ್ನಾಥದಾಸರು ಸಂಸ್ಕೃತ ಭಾಷೆ ಮತ್ತು ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ವಶಾಸ್ತ್ರದಲ್ಲಿ ವಿಶೇಷ ಪಾಂಡಿತ್ಯವನ್ನು ಹೊಂದಿದವರು; ಅಂತೆಯೇ ಅವರ ಕೆಲವು ಕೃತಿಗಳಲ್ಲಿ ಸಂಸ್ಕೃತದ ಪ್ರಭಾವ ವಿಶೇಷವಾಗುಂಟೆಂಬುದಕ್ಕೆ ಈ ಕೀರ್ತನೆ ಒಂದು ಉದಾಹರಣೆಯಾಗಿದೆ. ಸರ್ವೋತ್ತಮ ಎಂದು ಶ್ರೀಮನ್ನಾರಾಯಣನನ್ನು ಕರೆಯಲು ಕಾರಣಗಳಾವುವು ? ಅವನ ಗುಣ ವಿಶೇಷಗಳೇನೆಂಬುದಕ್ಕೆ ಈ ಕೀರ್ತನೆಯಲ್ಲಿ ಸಮರ್ಥನೆ ಇದೆ.

೫೪

ಮೇಲಿನ ಕೃತಿಯು ಸಂಸ್ಕೃತ ಭೂಯಿಷ್ಠವಾಗಿರುವುದಾದರೆ ಈ ಕೀರ್ತನೆಯು ಸರಳಕನ್ನಡ ಶಬ್ದಗಳ ಜೋಡಣೆಯಿಂದ ಬಂಧುರವಾಗಿದೆ ಎಂಬುದನ್ನು ಗಮನಿಸಬಹುದು. ದಾಸರ ಅನನ್ಯ ಶರಣಾಗತ ದೃಷ್ಟಿ ಈ ಕೀರ್ತನೆಯಲ್ಲಿ ಮೆರೆದಿರುವುದನ್ನು ಗುರುತಿಸಬಹುದು. ನಲವತ್ತಾರು ನುಡಿಗಳುಳ್ಳ ಸುದೀರ್ಘ ಕೀರ್ತನೆ ಎಂಬುದು ಇದರ ಮತ್ತೊಂದು ವೈಶಿಷ್ಟ್ಯವಾಗಿದೆ.

೧. **ಸಾಂದೀಪ ನಂದನನ ತಂದ** : ಬಲರಾಮ ಮತ್ತು ಕೃಷ್ಣನ ಗುರು ಸಾಂದೀಪಮುನಿ. ಇವರು ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಏನನ್ನು ಗುರುದಕ್ಷಿಣೆಯನ್ನಾಗಿ ಕೊಡಲಿ ? ಎಂದು ಕೇಳಿದಾಗ ತಮ್ಮ ಮಗನನ್ನು ತಂದು ಕೊಡಬೇಕೆಂದು ಕೇಳುವರು. ಸಾಂದೀಪನಿ ಮಗನನ್ನು ಪಂಚಜನ ಎಂಬ ರಾಕ್ಷಸನು ಕದ್ದೊಯ್ದು ಸಮುದ್ರದಲ್ಲಿ ಅಡಗಿ ಕೊಂಡಿದ್ದನು. ಬಲರಾಮ ಕೃಷ್ಣರು ಸಮುದ್ರದೊಳಗೆ ಪ್ರವೇಶಿಸಿ ರಾಕ್ಷಸನನ್ನು ಸಂಹರಿಸಿ ಸಾಂದೀಪನಿಯ ಮಗನನ್ನು ತಂದು ಗುರುಗಳಿಗೆ ಒಪ್ಪಿಸಿದರು.

೫೫

ಇಂದಿನ ಮಹಾರಾಷ್ಟ ರಾಜ್ಯದಲ್ಲಿರುವ ಪಂಢರಾಪುರದ ವಿಠ್ಠಲನನ್ನು ಪ್ರತಿಯೊಬ್ಬ ಹರಿದಾಸರೂ ಸ್ತೋತ್ರಗೈದಿರುವರು. ಪಂಢರಾ ಪುರದ ವಿಠ್ಠಲನನ್ನು 'ನಾದ ಬ್ರಹ್ಮ ' ಎನ್ನುತ್ತಾರೆ.

ಏಕೆಂದರೆ ವಿಠ್ಠಲನು ಭಜನಪ್ರಿಯನಂತೆ ! ಚಂದ್ರಬಾಗಾ ನದಿಯ ತೀರದಲ್ಲಿರುವ ಪಂಢರಪುರದಲ್ಲಿ ಪುಂಡರೀಕ ಎಂಬ ಭಕ್ತನಿಗೆ ಶ್ರೀ ಹರಿಯು ಪಾಂಡುರಂಗ ವಿಠ್ಠಲ ರೂಪದಿಂದ ಪ್ರತ್ಯಕ್ಷನಾಗಿ ಅನಂತರ ಅಲ್ಲಿಯೇ ಪೂಜೆಗೊಳ್ಳಲು ಕಲ್ಲಾಗಿ ನಿಂತನೆಂದು ಐತಿಹ್ಯವಿದೆ.

೫೬

ಈ ಕೀರ್ತನೆಯೂ ಪಾಂಡುರಂಗ ವಿಠ್ಠಲನನ್ನು ಕುರಿತ ಸ್ತೋತ್ರವಾಗಿದೆ. ಪುಂಡರೀಕನ ಮಾತಾಪಿತೃ ಸೇವೆಗೊಲಿದ ವಿಠ್ಠಲನು ಕೃಷ್ಣ ಸ್ವರೂಪದವನೇ ಆಗಿರುವನೆಂಬುದನ್ನು ದಾಸರು ಇಲ್ಲಿ ಸ್ಪಷ್ಟ ಪಡಿಸಿದ್ದಾರೆ.

೧. **ಶ್ವೇತವಾಹನ ಸಖನ ಸತಿಗೆ ಪಾರಿಜಾತವ ತಂದವನಾ** : ಅರ್ಜುನನಿಗೆ ಶ್ವೇತವಾಹನ ಎನ್ನುತ್ತಾರೆ. ಇವನ ಮಿತ್ರನೇ ಕೃಷ್ಣ; ಕೃಷ್ಣನು ಸತ್ಯಭಾಮೆಯನ್ನು ಸಮಾಧಾನ ಪಡಿಸಿ ದೇವಲೋಕದಿಂದ ಪಾರಿಜಾತ ವೃಕ್ಷವನ್ನು ತಂದು ಕೊಟ್ಟನು.

೫೭

ಭಾರತೀಯ ದೇವಾಲಯಗಳಲ್ಲಿ ಭಗವಂತನಿಗೆ ವಿಶೇಷವಾಗಿ ಅಲಂಕರಿಸಿ ಭಕ್ತರು ಸೌಂದರ್ಯ ಪ್ರಜ್ಞೆಯನ್ನು ಮೆರೆದಿರುವರು. ಪಂಢರಪುರದ ವಿಠ್ಠಲನಿಗೆ ಮಾಡಿದ ವಿಶೇಷಾಲಂಕಾರದ ವರ್ಣನೆ ಇದಕ್ಕೊಂದು ಸಾಕ್ಷಿಯೆಂಬಂತೆ ಈ ಕೀರ್ತನೆ ಇದೆ.

೫೮

ಪಂಢರಾಪುರದ ವಿಠ್ಠಲನನ್ನು ಕುರಿತ ಈ ಸ್ತೋತ್ರದಲ್ಲಿ ಶ್ರೀ ಹರಿಯ ಗುಣವಿಶೇಷಗಳನ್ನು ಬಣ್ಣಿಸಲಾಗಿದೆ. ಮಾವನಾದ ಕಂಸನನ್ನು ಕೊಂದ ಶ್ರೀ ಕೃಷ್ಣನೇ ವಿಠ್ಠಲನೆಂಬ ಸಿದ್ಧಾಂತವನ್ನು ದಾಸರು ಇಲ್ಲಿ ಸೂಚಿಸಿದ್ದಾರೆ.

೫೯

ಜಗನ್ನಾಥದಾಸರು ವಿಠಲನ ಸಂದರ್ಶನದಿಂದ ಆನಂದ ಪುಲಕಿತರಾಗಿ ಭಾರತಾದಿ ಪುರಾಣ ಕಥೆಗಳಲ್ಲಿ ಭಗವಂತನು ಪ್ರಕಟಿಸಿದ ಲೀಲಾ ವಿನೋದಗಳನ್ನು ಜ್ಞಾಪಿಸಿಕೊಂಡು ಸ್ತುತಿಗೈದಿರುವ ಕೀರ್ತನೆ ಇದು.

೧. **ಯಾತುಧಾನರ ಭಾರತಾಳಿದೆ** : ಭೂದೇವಿಯು ಅಸುರರ ಆಧಿಕ್ಯತೆಯಿಂದ ಭಾರವನ್ನು ತಾಳಲಾಗದೆ ರಾಕ್ಷಸರನ್ನು ಸಂಹರಿಸಬೇಕೆಂದು ಶ್ರೀ ಹರಿಯನ್ನು ಪ್ರಾರ್ಥಿಸಿದಾಗ ವಿಷ್ಣುವು ಕೃಷ್ಣನಾಗಿ ಅವತರಿಸಿದ ಕಥೆಯ ಸೂಚನೆ ಇಲ್ಲಿದೆ.

೨. **ಯುವತಿ ವೇಷದಿ ಕಂದು ಗೊರಳನ ಸುತ್ತಿಸಿದನ** : ಶ್ರೀ ಹರಿಯು ಭಸ್ಮಾಸುರನನ್ನು ಕೊಲ್ಲುವ ಉದ್ದೇಶದಿಂದ ಶಿವನ ಪ್ರಾರ್ಥನೆಯಂತೆ ಮೋಹಿನಿ ರೂಪವನ್ನು ತಾಳಿದಾಗ ಶಿವನೇ ಮೋಹಿತನಾಗಿ ಮೋಹಿನಿಯ ಹಿಂದೆ ಹಿಂಬಾಲಿಸಿದ ಕಥಾ ಪ್ರಸಂಗದ ಸೂಚನೆ ಇಲ್ಲಿದೆ.

೬೦

ಪಂಢರಾಪುರದ ವಿಠ್ಠಲನನ್ನು ಕುರಿತು ಬರೆದಿರುವ ಈ ಸ್ತೋತ್ರವನ್ನು 'ಪಾಂಡರಂಗಾಷ್ಟಕ : ಪಾಂಡುರಂಗ ಪಾರಿಜಾತ' ಎಂದು ಕರೆಯುವ ರೂಢಿ ಇದೆ. ಈ ಸ್ತೋತ್ರದಲ್ಲಿ ಒಂದು ಸಂಸ್ಕೃತ ಶ್ಲೋಕವಾದ ಮೇಲೆ ಒಂದು ಕನ್ನಡ ನುಡಿಯನ್ನು (ಪದ್ಯ) ರಚಿಸಿರುವುದನ್ನು ಕಾಣ ಬಹುದು. ಆದರೆ ಈ ಕನ್ನಡ ರಚನೆಯು ಸಂಸ್ಕೃತ ಶ್ಲೋಕದ ಭಾಷಾಂತರವಲ್ಲ, ರಾಮಾಯಣ, ಭಾರತ, ಭಾಗವತ ಮೊದಲಾದ ಪುರಾಣ ಕಥೆಗಳ ಪ್ರಸಂಗಗಳ ಉಲ್ಲೇಖ ಇಲ್ಲಿದೆ.

೧. **ಇಟ್ಟಿಗೆ ಪೀಠ ಸಂಸ್ಥಿತ** : ಪಂಢರಾಪುರದಲ್ಲಿ ವಿಠ್ಠಲನ ಮೂರ್ತಿಯು ಇಟ್ಟಿಗೆಯ ಮೇಲೆ ಇದೆ ಎಂಬುದನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೨. **ಶಿಶುಪಾಲ** : ಕೃಷ್ಣನ ಸೋದರತ್ತೆಯ ಪುತ್ರನಾದ ಇವನು ರಾಜಸೂಯ ಯಾಗದಲ್ಲಿ ಕೃಷ್ಣನನ್ನು ನೂರಕ್ಕಿಂತ ಹೆಚ್ಚು ಬಾರಿ ಬೈದು ಕೃಷ್ಣನ ಚಕ್ರದಿಂದ ನಾಶವಾದನು.

೩. **ಧೇನುಕ** : ಕಂಸನ ಆಜ್ಞೆಯಂತೆ ಕತ್ತೆಯಾಗಿ ಕೃಷ್ಣ ಬಲರಾಮರನ್ನು ಒದ್ದು ಕೊಲ್ಲಲು ಯತ್ನಿಸಿದನು.

೪. **ವತ್ಸಾಸುರ** ; ಹಸುವಿನ ರೂಪದಿಂದ ಬಂದು ಕೃಷ್ಣನನ್ನು ಕೊಲ್ಲಲು ಯತ್ನಿಸಿ ಸತ್ತ ರಾಕ್ಷಸ.

೫. **ನಳಕೂಬರ : ಮಣಿಗ್ರೀವ** : ಕುಬೇರನ ಪುತ್ರರಾದ ಇವರು ಗಂಗಾನದಿಯಲ್ಲಿ ಜಲಕ್ರೀಡೆಯಾಡುತ್ತಿರುವಾಗ ಅಲ್ಲಿಗೆ ಬಂದ ನಾರದ ಮುನಿಗಳನ್ನು **ಅವಜ್ಞೆ**

ಮಾಡಿದ ನಿಮಿತ್ತ ಮತ್ತಿಯ ಮರಗಳಾಗಿ, ಎಂದ ಶಾಪವನ್ನು ಪಡೆದರು. ಕೃಷ್ಣನ ಸ್ಪರ್ಶದಿಂದ ಇವರಿಗೆ ಶಾಪ ವಿಮೋಚನೆಯಾಯಿತು.

೭. **ವೃಷಭ** : ಇವನು ಒಬ್ಬ ರಾಕ್ಷಸ : ನರಸಿಂಹದೇವರನ್ನು ಕುರಿತು ತಪಸ್ಸು ಮಾಡಿ ನರಸಿಂಹನೊಡನೆ ಯುದ್ಧ ಮಾಡಲು ಬಯಸಿ ಹತನಾದನು. ಸಾಯುವಾಗ ತಾನಿದ್ದ ಬೆಟ್ಟಕ್ಕೆ ತನ್ನ ಹೆಸರನ್ನಿಡಬೇಕೆಂದು ಕೇಳಿಕೊಂಡನು. ಆದ್ದರಿಂದ ಕೃತಯುಗದಲ್ಲಿ ತಿರುಪತಿ ಬೆಟ್ಟಕ್ಕೆ 'ವೃಷಭಾಚಲ' ಎಂಬ ಹೆಸರಾಯಿತೆಂದು ಪುರಾಣಗಳು ತಿಳಿಸುತ್ತವೆ.

೮. **ಶಕಟ** : ಕಂಸನ ಆಜ್ಞೆಯಂತೆ ಬಂಡಿಯ ರೂಪವನ್ನು ತಾಳಿ ಕೃಷ್ಣನನ್ನು ಕೊಲ್ಲಲು ಯತ್ನಿಸಿ ಹತನಾದವನು.

೮. **ಭುಜಗಮಾರ್ಗಣ ... ಕಾಯ್ದೆ** : ಕುರುಕ್ಷೇತ್ರದ ಯುದ್ಧದಲ್ಲಿ ಕರ್ಣನು ಬಿಟ್ಟ ಸರ್ಪಾಸ್ತ್ರದಿಂದ ಅರ್ಜುನನ ಕೊರಳು ಕತ್ತರಿಸದಂತೆ ಕೃಷ್ಣನು ಭೂಮಿಯನ್ನು ಒತ್ತಿದ ಪ್ರಸಂಗದ ಸೂಚನೆ ಇಲ್ಲಿದೆ.

೯. **ಬಾಣನ ತೋಳು ಖಂಡ್ರಿಸಿದೆಯೊ** : ಬಾಣಾಸುರನೊಡನೆ ಕೃಷ್ಣನು ಯುದ್ಧ ಮಾಡಿ ಅವನಿಗಿದ್ದ ಸಾವಿರ ತೋಳುಗಳಲ್ಲಿ ಕೇವಲ ನಾಲ್ಕು ತೋಳುಗಳನ್ನು ಮಾತ್ರ ಶಿವನ ಕೋರಿಕೆಯಂತೆ ಕತ್ತರಿಸಿದ ಪ್ರಸಂಗದ ಉಲ್ಲೇಖ ಇಲ್ಲಿದೆ.

೧೦. **ವೃತ್ರಹರ** : ವೃತ್ರಾಸುರ ಎಂಬುವವನನ್ನು ಇಂದ್ರನು ಯುದ್ಧ ಮಾಡಿ ಕೊಂದು ಹಾಕಿದನು.

೧೧ **ಏಳು ಗೂಳಿಯ ಗೆದ್ದ ಯದುಪತಿ** : ಶ್ರೀ ಕೃಷ್ಣನು ಸತ್ಯ ಎಂಬುವವಳನ್ನು ವಿವಾಹಗೊಳ್ಳುವ ಸಂದರ್ಭದಲ್ಲಿ ಸತ್ಯೆಯ ತಂದೆಯಾದ ನಗ್ನಜಿತ್ತುವು ಕೃಷ್ಣನ ಬಲ ಪರೀಕ್ಷೆ ಮಾಡಲು ಏಳು ಗೂಳಿಗಳೊಡನೆ ಯುದ್ಧ ಮಾಡಲು ಹೇಳುವನು. ಆಗ ಕೃಷ್ಣನು ನಿರಾಯಾಸವಾಗಿ ಆ ಗೂಳಿಗಳನ್ನು ಕಟ್ಟಿಹಾಕಿ ತನ್ನ ಪರಾಕ್ರಮವನ್ನು ಪ್ರಕಟಿಸಿದನು.

೧೨ **ಪೌಂಡ್ರೇಶ** : ಪುಂಡ್ರ ವಂಶದ ವಸುದೇವನ ಮಗನಾದ ಇವನು ಕೃಷ್ಣನಂತೆ ಕೀರ್ತಿಯನ್ನು ಪಡೆಯಲು ಶಂಖಚಕ್ರಾದಿಗಳನ್ನು ಧರಿಸಿ ಕೃಷ್ಣನ ಮೇಲೆ ಯುದ್ಧ ಮಾಡಿ ನಾಶವಾದನು.

೬೧

ಜಗನ್ನಾಥ ದಾಸರು ತಮ್ಮ ಗುರುಗಳಾದ ಗೋಪಾಲದಾಸರು ನೀಡಿದ ಸೂಚನೆಯಂತೆ ಅಂಕಿತ ಸ್ವೀಕಾರಕ್ಕಾಗಿ ಪಂಢರಾಪುರಕ್ಕೆ ತೆರಳಿ ಅಲ್ಲಿನ ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಶ್ರೀನಿವಾಸಾಚಾರ್ಯರಿಗೆ [ಜಗನ್ನಾಥದಾಸರಿಗೆ ಅವರ ತಾಯಿ ತಂದೆಯರಿಟ್ಟ ಹೆಸರು] ಒಂದು ಶಿಲೆ ದೊರಕಿತು. ಶಿಲೆಯಲ್ಲಿ 'ಜಗನ್ನಾಥ ವಿಠಲ' ಎಂದು ಬರೆದಿತ್ತೆಂದು, ಅದನ್ನು ನೋಡಿ ವಿಠ್ಠಲನೇ 'ಜಗನ್ನಾಥವಿಠಲ' ಎಂದು ತಮಗೆ ಅಂಕಿತವನ್ನು ಕರುಣಿಸಿದನೆಂದು ಆಚಾರ್ಯರು ಭಾವಿಸಿ ಈ ಅಂಕಿತ ಪದವನ್ನು ರಚಿಸಿದರೆಂದು ಐತಿಹ್ಯವಿದೆ. ಅಂಕಿತ ಪದದ ಆರಂಭದಲ್ಲಿ ಸಾಮಾನ್ಯವಾಗಿ ಗುರುಗಳ ಅಂಕಿತವಿರುತ್ತದೆ. ಇಲ್ಲಿ ಆರಂಭ ಹಾಗೂ ಕೊನೆ ಈ ಎರಡೂ ಭಾಗಗಳಲ್ಲಿ 'ಜಗನ್ನಾಥ ವಿಠಲ' ಎಂದೇ ಇರುವುದು ಗಮನಾರ್ಹ.

೬೨

ಲಕ್ಷ್ಮಿಯನ್ನು ಕುರಿತ ಸ್ತೋತ್ರವಿದು. ಶ್ರೀ ಹರಿಯೊಡನೆ ವಿಯೋಗವಿಲ್ಲದಂತೆ ಅನಾದಿ ಕಾಲದಿಂದ ಅನಂತ ಕಾಲದವರೆಗೆ ಇರುವ ಏಕೈಕ ವ್ಯಕ್ತಿ ಎಂದರೆ ಲಕ್ಷ್ಮಿ. ಮಿಕ್ಕ ಬ್ರಹ್ಮಾದಿ ದೇವತೆಗಳು ಪ್ರತಿಯೊಂದು ಕಲ್ಪದಲ್ಲೂ ಬೇರೆ ಬೇರೆಯವರು ಅವತರಿಸುತ್ತಾರೆ. ಆದರೆ ಲಕ್ಷ್ಮಿಯು ಮಾತ್ರ ವಿಷ್ಣುವಿನಂತೆ ಶಾಶ್ವತಳು. ವಿಷ್ಣುವಿನೊಡನೆ ಸಮಳೂ ಅಸಮಳೂ ಆಗಿರುವಳೆಂದು ಶಾಸ್ತ್ರ ತಿಳಿಸುತ್ತದೆ.

೬೩

ಲಕ್ಷ್ಮಿಯ ಗುಣ ವಿಶೇಷಗಳನ್ನು ಅತ್ಯಂತ ಭಕ್ತಿಯಿಂದ ಸ್ತೋತ್ರ ಮಾಡಿರುವ ಕೀರ್ತನೆ ಇದು.

೬೪

ಲಕ್ಷ್ಮಿಗಿರುವ ಅನೇಕ ಹೆಸರುಗಳ ಪಟ್ಟಿಯನ್ನು ಕೊಡುವುದರ ಮೂಲಕ ಹಾಗೂ ಆಕೆಯ ಸೌಂದರ್ಯವನ್ನು ವರ್ಣಿಸುವುದರ ಮೂಲಕ ಲಕ್ಷ್ಮಿಯ ಸ್ತೋತ್ರವನ್ನು ಈ ಕೀರ್ತನೆಯ ಮೂಲಕ ಮಾಡಲಾಗಿದೆ.

೬೫

ಶ್ರೀ ಹರಿ ಮತ್ತು ಲಕ್ಷ್ಮಿಯ ತರುವಾಯ ಬ್ರಹ್ಮ ವಾಯುಗಳು ಹಿರಿಯ ದೇವತೆಗಳೆನಿಸಿ ಕೊಂಡಿದ್ದಾರೆ. ಬ್ರಹ್ಮನಿಗೆ ಪೂಜೆಮಾಡುವ ಸಂಪ್ರದಾಯವಿಲ್ಲದಿರುವುದರಿಂದ

ವಾಯುದೇವರನ್ನು ಕುರಿತು ಸ್ತೋತ್ರಗಳುಂಟು. ಅನಿಲದೇವ – ಮುಖ್ಯಪ್ರಾಣ ಎನಿಸಿದ ವಾಯುವು ಹನುಮ, ಭೀಮ, ಮಧ್ವಾವತಾರಗಳನ್ನೆತ್ತಿ ಶ್ರೀ ಹರಿಯ ಸೇವೆ ಮಾಡಿದರೆಂಬುದು ಪ್ರಸಿದ್ಧವಾಗಿದೆ. ವಾಯುದೇವರು ಸಕಲ ಜೀವರಿಗೂ ಗುರುಗಳೆನಿಸಿದ್ದಾರೆ. ಆದ್ದರಿಂದ ವಾಯುದೇವರ ಕೃಪೆಯಿಲ್ಲದೆ ಯಾರೂ ಉಧೃತರಾಗರೆಂಬುದು ಶಾಸ್ತ್ರೋಕ್ತ ವಿಚಾರವಾಗಿದೆ.

೬೬

ವಾಯುದೇವರನ್ನು 'ಪವಮಾನ' ಎಂದು ಕರೆಯುವ ರೂಢಿ ಇದೆ. ಪವಮಾನ ಹೋಮ, ಪವಮಾನ ಸೂಕ್ತ ಜಪ ಪುನಶ್ಚರಣೆಗಳು ತುಂಬ ಪುಣ್ಯದಾಯಕವಾದುದು. ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಪಂಚ ಪ್ರಾಣರೂಪಗಳಿಂದ ಜೀವರನ್ನುದ್ಧರಿಸುವರೆಂಬ ಸಂಗತಿ ಇಲ್ಲಿ ಉಕ್ತವಾಗಿದೆ.

೬೭

ಪ್ರಾಣದೇವರ ಸ್ತೋತ್ರವಿದು. ಮೂಲ ರೂಪ ಹಾಗೂ ಅವತಾರ ಕಾಲಗಳಲ್ಲಿ ತೋರಿದ ಮಹಿಮಾತಿಶಯಗಳ ಉಲ್ಲೇಖವಿಲ್ಲಿದೆ.

೧. **ವಾಸವ ಕುಲಿಶದಿ** ....: ವಾಯುದೇವರು ಹನುಮಂತನಾಗಿ ಅವತರಿಸಿದಾಗ ಇಂದ್ರನು ಹನುಮಂತನನ್ನು ಒಮ್ಮೆ ವಜ್ರಾಯುಧದಿಂದ ಹೊಡೆದಾಗ ವಾಯುವು ಗಾಳಿಯನ್ನು ನಿಯಂತ್ರಿಸಿ ಎಲ್ಲ ಜೀವರು ಉಸಿರು ಕಟ್ಟಿಕೊಂಡು ಸಾಯುವಂತಾದ ಸ್ಥಿತಿಯನ್ನು ಅನುಭವಿಸಿದ ಪ್ರಸಂಗವನ್ನು ಇಲ್ಲಿ ಸೂಚಿಸಲಾಗಿದೆ.

೨. **ಪಾವಿನ ಪಾಶದಿ .... ತಂದಿತ್ತೇ** : ಇಂದ್ರಜಿತುವು ಸಕಲ ಕಪಿ ಸೈನ್ಯವೂ ಮೂರ್ಛೆ ಹೋಗುವಂತೆ ಬಾಣ ಪ್ರಯೋಗ ಮಾಡಿದಾಗ ಲಕ್ಷ್ಮಣನೂ ಮೂರ್ಛಿತನಾಗುತ್ತಾನೆ. ಆಗ ಹನುಮಂತನು ಹಿಮವತ್ಪರ್ವತಕ್ಕೆ ಬಂದು ಸಂಜೀವಿನಿಯ ಪರ್ವತವನ್ನು ತಂದು ಎಲ್ಲರನ್ನು ಮೂರ್ಛೆಯಿಂದ ಎಚ್ಚರಗೊಳಿಸುತ್ತಾನೆ. ಜೊತೆಗೆ ಸತ್ತ ಕಪಿಗಳು ಬದುಕಿದವು.

೬೮

ವಾಯುದೇವರನ್ನು ತತ್ವಾಭಿಮಾನಿ ದೇವತೆಗಳ ಒಡೆಯರೆಂಬುದನ್ನು ದಾಸರು ಇಲ್ಲಿ ವಿಶೇಷವಾಗಿ ಉಲ್ಲೇಖಿಸಿದ್ದಾರೆ. ಪ್ರತಿ ನಿಮಿಷದಲ್ಲೂ ವಾಯುದೇವರು ಸಕಲ ಜೀವಿಗಳಲ್ಲಿದ್ದು ಹಂಸ ಮಂತ್ರ ಜಪ ಮಾಡುವರೆಂಬ ಸಂಗತಿಯನ್ನು ಇಲ್ಲಿ ಉಲ್ಲೇಖಿಸಿದ್ದಾರೆ.

೬೯

ವಾಯುದೇವರ ಪತ್ನಿ ಭಾರತೀ ದೇವಿಯರು. ಆದ್ದರಿಂದ ಇವರನ್ನು ಭಾರತೀಶರೆಂದು ಕರೆಯುವರು. ಹನುಮ ಭೀಮ, ಮಧ್ವಾವತಾರವನ್ನೆತ್ತಿದ್ದ ವಾಯುದೇವರ ಪ್ರಶಂಸೆ ಈ ಕೀರ್ತನೆಯಲ್ಲಿದೆ.

೭೦

ವಾಯುದೇವರೇ ಹನುಮ, ಭೀಮ ಮತ್ತು ಮಧ್ವಾವತಾರವನ್ನು ತಾಳಿದರೆಂದು ಪ್ರತಿಪಾದಿಸುವ ಈ ಕೀರ್ತನೆಯಲ್ಲಿ ಈ ಮೂರು ಅವತಾರಗಳಲ್ಲಿಯೂ ವಾಯುದೇವರು ಹರಿಸೇವೆಯನ್ನು ಮಾಡಿದ ಬಗೆಯನ್ನು ದಾಸರು ಸ್ಥೂಲವಾಗಿ ವಿವರಿಸಿದ್ದಾರೆ.

೧. **ಜಯ ವಿಜಯರು** : ದೇವಹೂತಿ ಮತ್ತು ಕರ್ದಮ ಪ್ರಜಾಪತಿ ದಂಪತಿಗಳ ಮಕ್ಕಳಾದ ಇವರು ಸನಕ ಸಂದನ ಮತ್ತು ಸತತ್ಕುಮಾರ ಎಂಬ ಮುನಿಗಳ ಶಾಪಕ್ಕೊಳಗಾಗಿ ಜೀವದ್ವಯಾವೇಶದಿಂದ ಹಿರಣ್ಯಾಕ್ಯ, ಹಿರಣ್ಯ ಕಶ್ಯಪು : ರಾವಣ ಕುಂಭಕರ್ಣ : ಹಾಗೂ ಶಿಶುಪಾಲ ದಂತವಕ್ತ್ರರಾಗಿ ಮೂರು ಯುಗಗಳಲ್ಲಿ ಅವತರಿಸಿ ಶ್ರೀ ಹರಿಯಿಂದ ಸಂಹೃತರಾಗಿ ಶ್ರೀ ಹರಿಯ ಕೃಪೆಯಿಂದ ಸಾಲೋಕ್ಯ ಪದವಿಯನ್ನು ಪಡೆದು ವಿಷ್ಣುವಿನ ವೈಕುಂಠ ಲೋಕದ ಅರಮನೆಯ ದ್ವಾರಪಾಲಕರಾದರು.

೭೧

ವಾಯುದೇವರ ಎರಡನೆಯ ಅವತಾರವಾದ ಭೀಮಸೇನಾವತಾರವನ್ನು ಕುರಿತು ಬರೆದಿರುವ ಸ್ತೋತ್ರವಿದು. ಭೀಮಸೇನನು ದುಷ್ಟರನ್ನು ಕೊಂದು ಶಿಷ್ಟರನ್ನು ರಕ್ಷಿಸಿದನು. ಕೀಚಕನನ್ನು ಕೊಂದದ್ದು ಭೀಮಸೇನನ ಅತಿಶಯ ಶಕ್ತಿಗೆ ಸಂಕೇತವಾಗಿದೆ ಎನ್ನಬಹುದು.

೭೨

ಈ ಕೀರ್ತನೆಯೂ ಭೀಮಸೇನನ ಸ್ತೋತ್ರವೇ ಆಗಿದೆ. ದುಶ್ಯಾಸನನನ್ನು ಸೀಳಿ ಹೃದಯವನ್ನು ಬಗಿದು ರಕ್ತವನ್ನು ಹೀರಿದ ಮಹಾ ಪರಾಕ್ರಮವನ್ನು ದಾಸರು ಇಲ್ಲಿ ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೭೩

ಭಾರತೀರಮಣರೆನಿಸಿದ ವಾಯುದೇವರು ಜನನ ಮರಣಗಳ ಬಾಧೆಯನ್ನು ದೂರಮಾಡಲು ಶಕ್ತರಾದವರು : ಸಕಲ ಪಾಪಗಳು ನಾಶವಾಗುವ ಹಾಗೆ ಸಾಧನೆಗೆ ದಾರಿ ಮಾಡಬಲ್ಲವರು : ಪ್ರತಿಯೊಬ್ಬರಲ್ಲೂ ಇದ್ದು ಇಪ್ಪತ್ತೊಂದು ಸಾವಿರದಾರುನೂರು ಬಾರಿ ಹಂಸಮಂತ್ರವನ್ನು ಜಪ ಮಾಡುತ್ತಾ ಸಾಧನೆಯನ್ನು ಮಾಡಿ – ಮಾಡಿಸುವವರೆಂಬುದನ್ನು ದಾಸರು ಇಲ್ಲಿ ಹೇಳಿದ್ದಾರೆ.

೭೪

ಮೂರು ನುಡಿಗಳಿರುವ ಈ ಕೀರ್ತನೆಯಲ್ಲಿ ಒಂದೊಂದು ನುಡಿಯಲ್ಲಿ ವಾಯುದೇವರ ಒಂದೊಂದು ಅವತಾರದ ಕಥೆಯ ಸಾರವನ್ನು ದಾಸರು ತುಂಬ ಚೆನ್ನಾಗಿ ಕೊಟ್ಟಿದ್ದಾರೆ.

೭೫

ಭಗವಂತನಲ್ಲಿ ಭಕ್ತಿಯು ಅಭಿವೃದ್ಧಿಯಾಗುವಂತೆ ಭಗವಂತನ ಕಥಾ ಶ್ರವಣದಲ್ಲಿ ಆಸಕ್ತಿ ಉಂಟಾಗುವಂತೆ ದಯೆಗೈಯಬೇಕೆಂದು ದಾಸರು ಈ ಕೀರ್ತನೆಯಲ್ಲಿ ಪ್ರಾರ್ಥಿಸಿದ್ದಾರೆ. ಮುಂದಿನ ಕಲ್ಪದಲ್ಲಿ ಬ್ರಹ್ಮ ಪಟ್ಟವನ್ನು ವಾಯುದೇವರು ಪಡೆಯುವರೆಂಬ ವಿಚಾರವನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೭೬

ಹನುಮ, ಭೀಮ, ಮಧ್ವಾವತಾರ ಮಾಡಿದ ವಾಯುದೇವರನ್ನು ಭಕ್ತಿಯಿಂದ ದಾಸರು ಈ ಕೀರ್ತನೆಯಲ್ಲಿ ಸ್ತುತಿಗೈದಿದ್ದಾರೆ. ಮಧ್ವಾಚಾರ್ಯರೆಂದೇ ಖ್ಯಾತರಾದ ಇವರ ಆಶ್ರಮನಾಮ ಆನಂದ ತೀರ್ಥ ಎಂಬುದನ್ನು ದಾಸರು ವಿಶೇಷವಾಗಿ ಸೂಚಿಸಿದ್ದಾರೆ.

೭೭

ಜಗನ್ನಾಥ ದಾಸರು ಬರೆದಿರುವ ವಾಯುದೇವರನ್ನು ಕುರಿತ ಕೀರ್ತನೆಗಳಲ್ಲಿ ಈ ಕೀರ್ತನೆ ತುಂಬ ಪ್ರಸಿದ್ಧವಾದುದಾಗಿದೆ. ಇದರಲ್ಲಿ ಮೂರು ಅವತಾರಗಳನ್ನು ದಾಸರು ತುಂಬ ಅಚ್ಚು ಕಟ್ಟಾಗಿ ಸಂಗ್ರಹಿಸಿದ್ದಾರೆ. ಜೀವ ಕೋಟಿಯಲ್ಲಿ ಇವರೇ ಹಿರಿಯರೆಂಬುದನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೭೮

ಹನುಮಂತ ದೇವರನ್ನು ಕುರಿತು ಬರೆದಿರುವ ಕೀರ್ತನೆ ಇದು. ರಾಮಾವತಾರ ಕಾಲದಲ್ಲಿ ವಾಯುದೇವರೇ ಹನುಮಂತನಾಗಿ ಹುಟ್ಟಿ ಭಗವತ್ ಕೈಂಕರ್ಯವನ್ನು ಕೈಗೊಂಡರೆಂಬುದನ್ನು ದಾಸರು ಸ್ಪಷ್ಟ ಪಡಿಸಿದ್ದಾರೆ. ಶ್ರೀ ಹರಿಯ ಬಿಂಬ ದರ್ಶನಕ್ಕೆ ನೆರವಾಗಬೇಕೆಂದು ದಾಸರು ಈ ಕೀರ್ತನೆಯಲ್ಲಿ ಬೇಡಿಕೆಯನ್ನು ಸಲ್ಲಿಸಿದ್ದಾರೆ.

೭೯

ಭಗವಂತನ ಬಿಂಬದರ್ಶನಕ್ಕೆ ಸಹಾಯ ಮಾಡಬೇಕೆಂದು ಸೂಚಿಸಿ ಪ್ರಾರ್ಥಿಸಿರುವ ವಾಯುದೇವರನ್ನು ಕುರಿತ ಕೀರ್ತನೆ ಇದಾಗಿದೆ.

೮೦

ಮಧ್ವಾಚಾರ್ಯರನ್ನು ಗುರುರಾಯ ಎಂದು ಕರೆದು ಹನುಮ, ಭೀಮ, ಮಧ್ವಾವತಾರಗಳನ್ನು ವಾಯುದೇವರು ತಾಳಿದರೆಂದು ತಿಳಿಸುವ ಕೀರ್ತನೆ ಇದಾಗಿದೆ. ಸೀತೆಗೆ ರಾಮನುಂಗುರವನ್ನು ಒಪ್ಪಿಸಿದ್ದು : ಬಕಾಸುರನನ್ನು ಸಂಹಾರ ಮಾಡಿದ್ದು : ವೇದಗಳಿಗೆ ಸಮ್ಯಗರ್ಥವನ್ನು ವಿವರಿಸಿದ್ದುದನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೮೧-೮೨

ಮಧ್ವಾಚಾರ್ಯರು ಸ್ಥಾಪಿಸಿದ ಸಿದ್ಧಾಂತದ ಸಾರವನ್ನರಿಯುವುದರ ಪ್ರಾಮುಖ್ಯತೆಯನ್ನು ದಾಸರು ಈ ಎರಡು ಕೀರ್ತನೆಗಳಲ್ಲಿ ಸೂಚಿಸಿ ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂಬ ಸಂದೇಶವನ್ನು ಇಲ್ಲಿ ನೀಡಲಾಗಿದೆ.

೮೩

ವಿದ್ಯಾಭಿಮಾನಿಯಾದ ಸರಸ್ವತಿಯನ್ನು ಕುರಿತು ಬರೆದಿರುವ ಭಕ್ತಿಭರಿತ ಕೀರ್ತನೆ ಇದು. ಜ್ಞಾನ ಸಂಪಾದನೆಯಿಂದ ಮಾತ್ರ ಭಕ್ತಿಯ ಬೆಳವಣಿಗೆಯಾಗುವುದರಿಂದ ಅದಕ್ಕೆ ಸಹಾಯವಾಗುವಂತಹ ಸನ್ಮತಿಯನ್ನು ಅನುಗ್ರಹಿಸಬೇಕೆಂದು ದಾಸರು ಪ್ರಾರ್ಥಿಸಿದ್ದಾರೆ.

೮೪

ಈ ಕೀರ್ತನೆಯೂ ಜ್ಞಾನದಾಯಕಿ ಎನಿಸಿದ ಸರಸ್ವತಿಯ ಸ್ತೋತ್ರವಾಗಿದೆ. ಆಕೆಯ ಕೋಮಲವಾದ ವಾಣಿಯ ಸುಭಗತೆಯನ್ನು ವಿವೇಕಯುತವಾದ ಬೌದ್ಧಿಕ ಶಕ್ತಿಯನ್ನು ವೇದೋಪನಿಷತ್ತುಗಳು ಆಕೆಗೆ ಕರತಲಾಮಲಕವಾಗಿದೆ ಎಂಬುದನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೮೫

ವಾಯುದೇವರ ಪತ್ನಿಯಾದ ಭಾರತೀ ದೇವಿಯರ ಸ್ತೋತ್ರವಿದು. ಭಾರತೀದೇವಿಯರ ಶಕ್ತಿ ಗುಣ ಧರ್ಮಗಳ ವಿವರ ಇಲ್ಲಿದೆ.

೧. **ಭರತನರ್ಧಾಂಗಿ** : ಸರ್ವರನ್ನು ಕಾಪಾಡುವ ಗುರುಸ್ಥಾನದಲ್ಲಿರುವ ವಾಯುದೇವರನ್ನು 'ಭರತ' ಎನ್ನಲಾಗಿದೆ.

೨. **ಕಾಳಿ** : ಕಾಶಿ ರಾಜನ ಮಗಳು – ಕಾಳಿ : ಈಕೆಯು ಭೀಮಸೇನನ ಪತ್ನಿಯಾಗಿದ್ದಳು.

೩. **ಇಂದ್ರಸೇನೆ** : ಮುದ್ಗಲ್ಯ ಋಷಿಯ ಹೆಂಡತಿಯಾದ ಈಕೆ ಶಿವನನ್ನು ಕುರಿತು ತಪಸ್ಸು ಮಾಡಿ ದ್ರೌಪದಿಯಾಗಿ ಅವತರಿಸಿದಳು : ದ್ರೌಪದಿಯಲ್ಲಿ ಭಾರತಿಯ ಅಂಶವಿತ್ತೆಂಬುದನ್ನು ಮರೆಯಬಾರದು.

೮೬

ಭಾರತೀ ದೇವಿಯರ ತರುವಾಯ ತಾರತಮ್ಯದಲ್ಲಿ ಸ್ಥಾನ ಪಡೆದಿರುವ ಶೇಷದೇವರ ಸ್ತೋತ್ರವಿದು. ವಿಷ್ಣುವಿಗೆ ಹಾಸಿಗೆಯಂತಿರುವ ಶೇಷದೇವರು ವಿಷ್ಣುವಿನ ಅವತಾರಗಳಲ್ಲಿಯೂ ಜೊತೆಯಲ್ಲಿಯೇ ಅವತರಿಸಿ ಹರಿ ಸೇವೆ ಮಾಡುವರೆಂದು ಶಾಸ್ತ್ರಗಳು ಹೇಳುತ್ತಿದೆ. ರಾಮನಾಗಿ ಅವತರಿಸಿದಾಗ ಲಕ್ಷ್ಮಣನಾಗಿಯೂ ಕೃಷ್ಣನಾಗಿ ಅವತರಿಸಿದಾಗ ಬಲರಾಮನಾಗಿಯೂ ಶೇಷದೇವರು ಅವತರಿಸಿದರೆಂಬುದನ್ನು ದಾಸರು ಈ ಕೀರ್ತನೆಯಲ್ಲಿ ಸೂಚಿಸಿದ್ದಾರೆ.

೮೭

ಶ್ರೀ ಹರಿಗೆ ಮಂಚವಾಗಿ ಹರಿಸೇವೆ ಮಾಡುತ್ತಿರುವ ಶೇಷದೇವರ ವೈಶಿಷ್ಟ್ಯಗಳನ್ನು, ಅವತಾರ ಕಾರ್ಯಗಳನ್ನು ನಿರೂಪಿಸುವ ಕೀರ್ತನೆ ಇದಾಗಿದೆ. ಶೇಷದೇವರನ್ನು ಜೀವಾಭಿಮಾನಿ ಎಂದು ಕರೆಯುವುದನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೮೮

ಈ ಕೀರ್ತನೆಯೂ ಶೇಷದೇವರನ್ನು ಕುರಿತ ಕೀರ್ತನೆಯೇ ಆಗಿದೆ. ವಾರುಣೀಪತಿ ಎನಿಸಿದ ಶೇಷದೇವರಿಗೆ ಎರಡು ಸಾವಿರ ನಾಲಗೆಗಳು; ಸಾವಿರ ಹೆಡೆಗಳು ; ಎರಡು ಸಾವಿರ ಕಣ್ಣುಗಳುಂಟೆಂಬುದನ್ನು ದಾಸರು ಇಲ್ಲಿ ಸೂಚಿಸಿದ್ದಾರೆ. ಸುಬ್ರಹ್ಮಣ್ಯನೆಂದು ಶೇಷದೇವರನ್ನು ಪೂಜಿಸುವ ವಾಡಿಕೆ ಇದೆ ಎಂಬುದನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೮೯

ಗರುಡ, ಶೇಷ, ರುದ್ರರು ಸಮಾನ ಕಕ್ಷದವರಾಗಿದ್ದು ದಾಸರು ಈ ಕೀರ್ತನೆಯಲ್ಲಿ ಶಿವನನ್ನು ಸ್ತೋತ್ರ ಮಾಡಿದ್ದಾರೆ. ಶಿವನ ರೂಪದ ವರ್ಣನೆ ಇಲ್ಲಿ ಮುಖ್ಯವಾಗಿ ಮೂಡಿಬಂದಿದೆ. ಅಂಧಕಾಸುರನನ್ನು ಕೊಂದದ್ದನ್ನು ಷಣ್ಮುಖನ ತಂದೆ ಉರಗ ಭೂಷಣನೆಂಬುದನ್ನು ದಾಸರು ಇಲ್ಲಿ ಉಲ್ಲೇಖಿಸಿದ್ದಾರೆ.

೯೦

ಹಂಪೆಯಲ್ಲಿರುವ ವಿರೂಪಾಕ್ಷ ದೇವಾಲಯ ಪುರಾಣ ಪ್ರಸಿದ್ಧವಾಗಿದ್ದು ಇಲ್ಲಿ ಶಿವನ ವಿಶೇಷ ಸನ್ನಿಧಾನ ಉಂಟೆಂಬುದು ಲೋಕ ಪ್ರಸಿದ್ಧವಾದುದು. ದಾಸರು ಈ ವಿರೂಪಾಕ್ಷನನ್ನು ಸೋತ್ರಗೈದಿರುವರು.

೯೧

ಗಂಗಾಧರ, ಪನ್ನಗಾಭರಣ, ಗರಳಕಂಠ, ತ್ರಿನೇತ್ರನೆನಿಸಿದ ಶಂಕರನ ಸ್ತೋತ್ರವನ್ನು ಈ ಕೀರ್ತನೆಯಲ್ಲಿ ಮಾಡಲಾಗಿದೆ. ಮನಸ್ಸಿಗೆ ಅಭಿಮಾನಿ ಎನಿಸಿದ ರುದ್ರದೇವರ ಪ್ರಾಮುಖ್ಯ ಸಾಧನೆಯ ಮಾರ್ಗದಲ್ಲಿ ಎಷ್ಟೆಂಬುದನ್ನು ಈ ಕೀರ್ತನೆ ಮನವರಿಕೆ ಮಾಡಿಕೊಡುತ್ತದೆ.

೯೨

ಮೃತ್ಯುಂಜಯ ಎಂದೇ ಹೆಸರಾದ ಶಂಕರನೇ ದೂರ್ವಾಸರಾಗಿ, ಶುಕ ಮುನಿಯಾಗಿ, ಅಶ್ವತ್ಥಾಮನಿಗೆ ಅವತರಿಸಿದರೆಂಬ ಕಥೆಯ ಸೂಚನೆ ಈ ಕೀರ್ತನೆಯಲ್ಲಿದೆ.

೯೩

ಜಗನ್ನಾಥ ದಾಸರು ರಚಿಸಿರುವ ಶಿವನನ್ನು ಕುರಿತ ಮತ್ತೊಂದು ಸ್ತೋತ್ರವಿದು. ಅಪಮೃತ್ಯು ಕಳೆಯುವ ವಿಶೇಷ ಶಕ್ತಿ ಈಶ್ವರನಲ್ಲುಂಟೆಂಬುದನ್ನು ದಾಸರು ಈ ಕೀರ್ತನೆಯಲ್ಲಿ ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೯೪

ಶ್ರೀ ಹರಿಯ ವೈಕುಂಠದ ಅರಮನೆಯ ದ್ವಾರಪಾಲಕರಾಗಿರುವ ಜಯವಿಜಯರ ಸ್ತೋತ್ರವಿದು. ಜಯವಿಜಯರು ತಾರತಮ್ಯದಲ್ಲಿ ಹತ್ತೊಂಭತ್ತನೆಯ ಕಕ್ಷದವರಾಗಿರುತ್ತಾರೆ. ವಿಷ್ಣು ಭಕ್ತರಿಗಿರುವ ಚಿಹ್ನೆಗಳನ್ನು ಇವರು ಹೊಂದಿರುವರೆಂಬುದನ್ನು ದಾಸರು ಇಲ್ಲಿ ಉಲ್ಲೇಖಿಸಿದ್ದಾರೆ.

೯೫

ಭಾರತೀಯರು ತೀರ್ಥಕ್ಷೇತ್ರ ಸಂದರ್ಶನದಲ್ಲಿ ಆನಂದವನ್ನನು ಭವಿಸುವರು. ಜಗನ್ನಾಥದಾಸರು ಭಾರತದ ಎಲ್ಲ ಮುಖ್ಯತೀರ್ಥ ಕ್ಷೇತ್ರಗಳ ಪಟ್ಟಿಯನ್ನು ಇಲ್ಲಿ ಕೊಟ್ಟಿದ್ದಾರೆ.

೯೬

ಜೀವರಲ್ಲಿ ತಾರತಮ್ಯವಿರುವಂತೆ ನದಿಗಳಲ್ಲಿಯೂ ತಾರತಮ್ಯ ಉಂಟು. ಕೀರ್ತನೆಯಲ್ಲಿ ದಾಸರು ನದಿಗಳ ತಾರತಮ್ಯವನ್ನು ತಿಳಿಸಿದ್ದಾರೆ. ಇದನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಲಾಗಿದೆ. ವಸಿಷ್ಠ ಮಹರ್ಷಿಗಳು ನಿಮಿರಾಜನಿಗೆ ಈ ನದೀ ತಾರತಮ್ಯ ವಿಚಾರವನ್ನು ಬೋಧಿಸಿದರೆಂದು ತಿಳಿಸಲಾಗಿದೆ.

೯೭

ಶ್ರೀ ಶೈಲ ಪರ್ವತ ಶ್ರೇಣಿಯು ಬಹುವಿಸ್ತಾರವಾಗಿದ್ದು ಇದು ತಿರುಪತಿಯ ಬೆಟ್ಟದವರೆಗೆ ಚಾಚಿಕೊಂಡಿದೆ. ಇಲ್ಲಿರುವ ಸ್ವಾಮಿ ಪುಷ್ಕರಣಿಯೇ ಮೊದಲಾದ ಸರೋವರಗಳ ಪ್ರಾಮುಖ್ಯತೆಯನ್ನು ದಾಸರು ಇಲ್ಲಿ ಬಣ್ಣಿಸಿದ್ದಾರೆ.

೯೮

ಇದು ಗಂಗಾ ನದಿಯನ್ನು ಕುರಿತು ಬರೆದಿರುವ ಕೀರ್ತನೆಯಾಗಿದೆ ಕರ್ಕಾಟಕ ರಾಶಿಗೆ ಸೂರ‍್ಯನು ಬಂದಿರುವಾಗ ಗಂಗಾ ನದಿಯಲ್ಲಿ ಸ್ನಾನ ಮಾಡುವುದು ವಿಶೇಷ ಫಲದಾಯಕವೆಂದು ದಾಸರು ಇಲ್ಲಿ ಹೇಳಿದ್ದಾರೆ.

೯೯–೧೦೦

ಈ ಎರಡೂ ಕೃತಿಗಳು ಕೃಷ್ಣವೇಣಿ ಎಂಬ ನದಿಯ ಸ್ತೋತ್ರವಾಗಿದೆ. ಬುದ್ಧಿ ಶಕ್ತಿ ಇಲ್ಲದವರು ಈ ನದಿಯಲ್ಲಿ ಸ್ನಾನ ಮಾಡಿದರೆ ಅವರ ಪಾಪಗಳು ನಿವಾರಣೆಯಾಗುವುದೆಂದು ದಾಸರು ಈ ಕೀರ್ತನೆಯಲ್ಲಿ ಹೇಳಿದ್ದಾರೆ. ಗುರು ಗ್ರಹವು ಕನ್ಯಾರಾಶಿಯಲ್ಲಿರುವಾಗ ಈ ನದಿಯಲ್ಲಿ ಸ್ನಾನ ಮಾಡಿದರೆ ಅರುವತ್ತು ಸಾವಿರ ವರುಷ ಪರ‍್ಯಂತ ಗಂಗಾನದಿಯಲ್ಲಿ ಸ್ನಾನ ಮಾಡಿದ ಪುಣ್ಯ ಲಭ್ಯವಾಗುವುದೆಂದು ದಾಸರು ಹೇಳಿದ್ದಾರೆ.

೧೦೧

ಕಾವೇರಿ ನದಿಯ ಸ್ತೋತ್ರವಾಗಿರುವ ಈ ಕೀರ್ತನೆಯಲ್ಲಿ ದಾಸರು ಶ್ರೀ ರಂಗಪಟ್ಟಣವನ್ನು ಉಲ್ಲೇಖಿಸಿದ್ದಾರೆ. ಸೂರ‍್ಯನು ತುಲಾ ರಾಶಿಯಲ್ಲಿರುವಾಗ ಕಾವೇರಿ ನದಿಯ ಸ್ನಾನ ವಿಶೇಷ ಪುಣ್ಯದಾಯಕವೆಂಬುದನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೧೦೨

ಭಾರತದ ಅತ್ಯಂತ ಪ್ರಸಿದ್ಧವಾದ ಯಮುನಾ ನದಿಯ ಸ್ತೋತ್ರವಿದು. ಯಮುನಾ ನದಿಯಲ್ಲಿ ಮಕರ ಮಾಸದಲ್ಲಿ ಸ್ನಾನ ಮಾಡುವುದು ವಿಶೇಷ ಫಲದಾಯಕವೆನ್ನಲಾಗಿದೆ. ಸೂರ‍್ಯನು ಮಕರ ರಾಶಿಯಲ್ಲಿರುವಾಗ ಆ ಮಾಸವನ್ನು ಮಕರ ಮಾಸ ಎನ್ನುತ್ತಾರೆ.

೧೦೩

ಇದು ವರದಾ ನದಿಯ ಸ್ತೋತ್ರವಾಗಿದೆ. ಸ್ನಾನ ಸಂಧ್ಯೆ, ಜಪ, ಧ್ಯಾನಾದಿಗಳಿಂದ ಬರುವ ಪುಣ್ಯ ಫಲವು ಕೇವಲ ಈ ನದಿಯ ಸ್ನಾನದಿಂದ ಲಭ್ಯವಾಗುವುದೆಂದು ದಾಸರು ಹೇಳಿದ್ದಾರೆ.

೧೦೪

ಟೀಕಾಚಾರ್ಯರೆಂದೇ ಖ್ಯಾತರಾದ ಶ್ರೀ ಜಯತೀರ್ಥರನ್ನು ಕುರಿತ ಸ್ತೋತ್ರವಿದು. ಇವರು ಅಕ್ಷೋಭ್ಯತೀರ್ಥರ ಶಿಷ್ಯರೆಂದೂ, ಮಧ್ವಾಚಾರ್ಯರು ಎಲ್ಲ ಗ್ರಂಥಗಳಿಗೂ ಟೀಕೆ ಬರೆದ ಕಾರಣ ಟೀಕಾಚಾರ್ಯರೆಂಬ ಹೆಸರನ್ನು ಪಡೆದರೆಂದೂ, ಸುಪ್ರಸಿದ್ಧ ತತ್ವ ಶಾಸ್ತ್ರಜ್ಞರೆನಿಸಿದ ವಿದ್ಯಾರಣ್ಯರನ್ನು ವಾದದಲ್ಲಿ ಸೋಲಿಸಿದರೆಂದೂ ಇಂದ್ರಾಂಶಸಂಭೂತರಿವರೆಂಬ ವಿಚಾರವನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೧೦೫

ಈ ಕೀರ್ತನೆಯೂ ಜಯತೀರ್ಥರನ್ನೇ ಕುರಿತ ಸ್ತೋತ್ರವಾಗಿದೆ. ಜಯ ತೀರ್ಥರ ಭಕ್ತಿ ಕಾರುಣ್ಯ ಇತ್ಯಾದಿಗಳನ್ನು ಕೊಂಡಾಡಲಾಗಿದೆ. ಜಯ ತೀರ್ಥರ ಮೂಲ ಬೃಂದಾವನ ಗುಲಬರ್ಗಾ ಜಿಲ್ಲೆಯ ಸೇಡಂ ಬಳಿ ಇರುವ ಮಾಳಖೇಡದಲ್ಲಿದೆ.

೧೦೬–೧೦೮

ವಾದಿರಾಜರು ಹದಿನೈದು ಮತ್ತು ಹದಿನಾರನೆಯ ಶತಮಾನಗಳಲ್ಲಿ ಜೀವಿಸಿದ್ದ ಮಹಾ ತಪಸ್ವಿಗಳು ಹಾಗೂ ಜ್ಞಾನಿವರೇಣ್ಯರು. ಹಯಗ್ರೀವ ರೂಪಿ ಪರಮಾತ್ಮನನ್ನು ನಿತ್ಯವೂ ಪ್ರತ್ಯಕ್ಷೀಕರಿಸಿಕೊಳ್ಳುತ್ತಿದ್ದ ಮಹಾನುಭಾವರು. ಸೋದೆಯಲ್ಲಿ ಇವರ ಬೃಂದಾವನವಿದ್ದು ಉಡುಪಿಯ ಅಷ್ಟಮಠಗಳಲ್ಲಿ ಒಂದೆನಿಸಿದೆ. ಒಂದು ನೂರ ಇಪ್ಪತ್ತು ವರ್ಷಗಳ ಕಾಲ ಬದುಕಿದ್ದ ವಾದಿರಾಜರು ಸಂಸ್ಕೃತ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಅಸಂಖ್ಯಾತ ಕೃತಿಗಳನ್ನು ರಚಿಸಿರುವರು. ಸಶರೀರರಾಗಿ ಬೃಂದಾವನವನ್ನು ಪ್ರವೇಶ ಮಾಡಿದ ಕೆಲವೇ ತಪಸ್ವಿಗಳಲ್ಲಿ ಇವರೂ ಒಬ್ಬರಾಗಿದ್ದಾರೆ. ಇವರನ್ನು ಋಜುಗಣಸ್ಥರೆನ್ನುವ ಸಂಪ್ರದಾಯವಿದೆ. ಹೀಗೆಂದರೆ ಮುಂದಿನ ಕಲ್ಪದಲ್ಲಿ ವಾಯುದೇವರ ಪಟ್ಟವನ್ನು ಪಡೆಯುವರೆಂದರ್ಥ. ವಾದಿರಾಜರು ವಾಗೀಶತೀರ್ಥರ ಶಿಷ್ಯರೆಂಬುದನ್ನು ದಾಸರು ದಾಖಲಿಸಿದ್ದಾರೆ.

೧೦೯–೧೧೦

ಇದು ಕೃಷ್ಣದ್ವೈಪಾಯನರ ಸ್ತೋತ್ರವಾಗಿದೆ. ಬಾದರಾಯಣರು ಎಂಬುದು ಇವರ ಮತ್ತೊಂದು ಹೆಸರು; ಬದರಿಯ ವನದಲ್ಲಿ ಆಶ್ರಮವನ್ನಿಟ್ಟುಕೊಂಡು ತಪಸ್ಸು ಮಾಡಿದ ನಿಮಿತ್ತ ಬಾದರಾಯಣ ಎಂಬ ಹೆಸರು ಇವರಿಗೆ ಪ್ರಾಪ್ತವಾಯಿತು.

೧೧೧

ಇದು ಶ್ರೀ ವಸುಧೀಂದ್ರರ ಸ್ತೋತ್ರವಾಗಿದೆ. ಇವರು ವಾದೀಂದ್ರರ ಶಿಷ್ಯರು. ಇವರು ಮಹಾತಪಸ್ವಿಗಳು, ವಾಕ್ಪಟುಗಳು, ದ್ವೈತವೇದಾಂತದಲ್ಲಿ ಅಗಾಧ ಪಾಂಡಿತ್ಯವನ್ನು ಪಡೆದವರೂ ಆಗಿದ್ದರು.

೧೧೨-೧೨೩

ಜಗನ್ನಾಥದಾಸರು ಶ್ರೀ ರಾಘವೇಂದ್ರ ತೀರ್ಥರನ್ನು ಕುರಿತು ಹನ್ನೆರಡು ಕೀರ್ತನೆಗಳನ್ನು ರಚಿಸಿದ್ದಾರೆ. ಈ ಎಲ್ಲ ಕೀರ್ತನೆಗಳಲ್ಲಿಯೂ ಈ ಗುರುಗಳ ಗುಣಗಾನ ಮಾಡಿದ್ದಾರೆ. ರಾಘವೇಂದ್ರ ಸ್ವಾಮಿಗಳನ್ನು ರಾಯರು ಎಂದೇ ಕರೆಯುವ ವಾಡಿಕೆ ಇದೆ. ರಾಘವೇಂದ್ರರು ಸುಧೀಂದ್ರರ ಶಿಷ್ಯರು, ಮಂತ್ರಾಲಯದಲ್ಲಿ ಇವರ ಬೃಂದಾವನವಿದ್ದು ಕರ್ನಾಟಕ, ಆಂಧ್ರ ತಮಿಳುನಾಡುಗಳಲ್ಲಿ ಐನೂರಕ್ಕೂ ಹೆಚ್ಚು ಮೃತ್ತಿಕ ಬೃಂದಾವನಗಳಿವೆ. ಪ್ರಹ್ಲಾದ ರಾಜರ ಅವತಾರರಿವರೆಂದು ಪ್ರಸಿದ್ಧ; **ಅನಿಷ್ಟ**ಪುಣ್ಯವನ್ನು ಧಾರಾಳವಾಗಿ ಭಕ್ತರಿಗೆ ಹಂಚುತ್ತಿರುವರೆಂಬ ಕೀರ್ತಿ ಉಂಟು.

೧. **ಕುಧರ ದೇವನ ದಿವ್ಯ ರದನದಿ ಜನಿಸಿದ** : ಕುಧರ ದೇವ ಎಂದರೆ ಇಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿರುವ ವರಾಹ ಪರ್ವತ ಎಂದು ; ವರಾಹ ದೇವರ ಕೋರೆದಾಡೆ (ರದನದಿ) ಯಿಂದ ಹುಟ್ಟಿದ್ದು ತುಂಗಾನದಿ ಎಂದು ಪುರಾಣಗಳು ಹೇಳುತ್ತವೆ. ಈ ತುಂಗೆಯು ಭದ್ರಾನದಿಯೊಡನೆ ಸೇರಿ ತುಂಗಭದ್ರ ಎನಿಸಿತು ಮಂತ್ರಾಲಯವು ತಂಗಭದ್ರಾ ನದಿಯ ತೀರದಲ್ಲಿದೆ.

೧೨೪-೧೨೫

ಜಗನ್ನಾಥ ದಾಸರು ಹಂಸನಾಮಕ ಪರಮಾತ್ಮನಿಂದ ಸತ್ಯನಾಥ ತೀರ್ಥರವರೆಗೆ ಬಂದ ಯತಿ ಪರಂಪರೆಯ ಮುಖ್ಯ ಯತಿಗಳನ್ನು ಈ ಕೀರ್ತನೆಗಳಲ್ಲಿ ಸ್ತೋತ್ರ ಗೈದಿದ್ದಾರೆ.

೧೨೬

ಹಂಪೆಯ ಬಳಿ ಇರುವ ನವ ಬೃಂದಾವನ ಎಂಬ ಸ್ಥಳದಲ್ಲಿ ಒಂಭತ್ತು ಯತಿವರೇಣ್ಯರ ಬೃಂದಾವನಗಳಿವೆ. ಈ ಎಲ್ಲ ಯತಿಗಳ ಸ್ತೋತ್ರವನ್ನು ದಾಸರು ಈ ಕೀರ್ತನೆಯಲ್ಲಿ ಮಾಡಿದ್ದಾರೆ. ಪದ್ಮನಾಭತೀರ್ಥರು, ಕವೀಂದ್ರರು, ವಾಗೀಶತೀರ್ಥರು, ರಘುವರ್ಯ ತೀರ್ಥರು, ಗೋವಿಂದ

ಒಡೆಯರು, ಸುರೇಂದ್ರರು, ವಸುಧೀಂದ್ರ ತೀರ್ಥರು, ವ್ಯಾಸತೀರ್ಥರು (ವ್ಯಾಸರಾಜರು) ಹಾಗೂ ಶ್ರೀನಿವಾಸ ತೀರ್ಥರೇ ಈ ನವ ವೃಂದಾವನದ ಯತಿಗಳು.

೧೨೭-೧೨೯

ಶ್ರೀ ಮದುತ್ತಾರಾದಿ ಮಠದ ಯತಿ ಪರಂಪರೆಯಲ್ಲಿ ಸತ್ಯಬೋಧ ತೀರ್ಥರು ಮಹಾತಪಸ್ವಿಗಳೆಂದು ಪ್ರಸಿದ್ಧರಾಗಿದ್ದಾರೆ. ಇವರ ಬೃಂದಾವನ ಸವಣೂರಿನಲ್ಲಿದೆ.

೧೩೦

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮಹಿಷಿ ಎಂಬ ಊರಿನಲ್ಲಿ ಸತ್ಯಸಂಧತೀರ್ಥರ ಬೃಂದಾವನವಿದೆ. ಇವರನ್ನು ಶ್ರೀ ರಾಘವೇಂದ್ರಾಂಶ ಸಂಭೂತರೆಂದು ಹೇಳುತ್ತಾರೆ. ಉತ್ತರಾದಿ ಮಠದ ಯತಿವರೇಣ್ಯರಿವರು.

೧೩೧-೧೩೨

ಲಿಂಗಸುಗೂರಿನಲ್ಲಿ ವರದೇಂದ್ರ ತೀರ್ಥರ ಬೃಂದಾವನವಿದೆ ವಸುಧೀಂದ್ರ ತೀರ್ಥರ ಶಿಷ್ಯರಿವರು.

೧೩೩-೧೩೪

ಇದು ಸತ್ಯವರ ತೀರ್ಥರ ಸ್ತೋತ್ರವಾಗಿದೆ.

೧೩೫-೧೩೭

ಈ ಎರಡು ಕೀರ್ತನೆಗಳು ಭುವನೇಂದ್ರ ತೀರ್ಥರ ಸ್ತೋತ್ರವಾಗಿದೆ. ಭುವನೇಂದ್ರತೀರ್ಥರು ಕ್ರಿ.ಶ. ೧೭೭೯ನೇಯ ವರ್ಷದ ಸಿದ್ಧಾರ್ಥ ಸಂವತ್ಸರದ ವೈಶಾಖ ಮಾಸದ ಕೃಷ್ಣಪಕ್ಷದ ಸಪ್ತಮಿಯ ದಿನ ವಿದ್ವತ್ಸಭೆಯನ್ನು ನಡೆಸುತ್ತಿರುವಾಗಲೇ ಭಗವಂತನ ಪಾದವನ್ನು ಸೇರಿದರೆಂಬುದನ್ನು ದಾಸರು ವಿಶೇಷವಾಗಿ ದಾಖಲಿದ್ದಾರೆ.

೧೩೮-೧೪೧

ಇದು ವ್ಯಾಸತತ್ವಜ್ಞರ ಸ್ತೋತ್ರವಾಗಿದೆ. ವ್ಯಾಸತತ್ವಜ್ಞರು ಭುವನೇಂದ್ರ ತೀರ್ಥರ ಶಿಷ್ಯರೂ, ಭಾಗವತ ಗ್ರಂಥವನ್ನು ಕರತಲಾಮಲಕವನ್ನಾಗಿಸಿಕೊಂಡ ಮಹಾನುಭಾವರೆಂದು ವೀರ ವೈರಾಗ್ಯವನ್ನು ಹೊಂದಿದವರೆಂದೂ ಇಲ್ಲಿ ಕೀರ್ತಿಸಲಾಗಿದೆ.

೧೪೨

ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಜೀವಿಸಿದ್ದ ದಾಸವರೇಣ್ಯ ಪುರಂದರ ದಾಸರನ್ನು ಕುರಿತ ಸ್ತೋತ್ರವಿದು. ವರದಪ್ಪ ನಾಯಕರ ಮಗನಾಗಿ ಹುಟ್ಟಿ ವ್ಯಾಸರಾಜರಲ್ಲಿ ಮಂತ್ರೋಪದೇಶವನ್ನು ಪಡೆದು ಸಮಸ್ತ ಐಶ್ವರ್ಯವನ್ನು ದಾನ ಮಾಡಿ ವಿರಕ್ತರಾಗಿ ತೀರ್ಥಕ್ಷೇತ್ರಗಳನ್ನು ಸಂಚರಿಸಿ ಅಸಂಖ್ಯಾತ ಕೀರ್ತನೆಗಳನ್ನು ರಚಿಸಿದವರು ಪುರಂದರದಾಸರೆಂಬ ಸಂಗತಿಯನ್ನು ಈ ಕೀರ್ತನೆಯಲ್ಲಿ ತಿಳಿಸಿದ್ದಾರೆ.

೧೪೩-೧೪೪

ಜಗನ್ನಾಥದಾಸರು ತಮ್ಮ ತಂದೆಯವರಾದ ನರಸಿಂಹ ದಾಸರು ತೀರಿಕೊಂಡಾಗ ರಚಿಸಿದ ಕೀರ್ತನೆ ಇದು. ಭಾಗಿ ಎಂಬ ಊರಿನಲ್ಲಿ ಇವರು ಸ್ವರ್ಗಸ್ಥರಾದರೆಂಬ ಐತಿಹಾಸಿಕ ಸಂಗತಿಯನ್ನು ದಾಸರು ಇಲ್ಲಿ ತಿಳಿಸಿದ್ದಾರೆ. ಪರಾವಸು ಎಂಬ ಗಂಧರ್ವಾಂಶಸಂಭೂತರಿವರೆಂದು ಪ್ರಸಿದ್ಧರಾಗಿದ್ದರೆಂಬುದನ್ನು ದಾಸರು ತಿಳಿಸಿದ್ದಾರೆ.

೧೪೫

ವಿಜಯದಾಸರನ್ನು ಕುರಿತ ಸ್ತೋತ್ರವಿದು. ಕ್ರಿ.ಶ.೧೬೮೨ ರಿಂದ ೧೭೫೫ ರವರೆಗೆ ಜೀವಿಸಿದ್ದ ವಿಜಯದಾಸರು ಚೀಕನಪರಿವಿಯಲ್ಲಿ ಹುಟ್ಟಿ ಸ್ವಪ್ನದಲ್ಲಿ ಅಂಕಿತವನ್ನು ಪಡೆದು ಅನೇಕ ಬಾರಿ ಕಾಶಿಯಾತ್ರೆಯನ್ನು ಮಾಡಿ ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಕೀರ್ತನೆ, ಉಗಾಭೋಗ, ಸುಳಾದಿಗಳನ್ನು ರಚಿಸಿದರು. ವಿಜಯದಾಸರು ಸುಳಾದಿ ದಾಸರು, ಎಂದೇ ಪ್ರಸಿದ್ಧರು, ವಿಜಯದಾಸರು ಇಹ ಲೋಕವನ್ನು ತ್ಯಜಿಸಿದ ಸಂದರ್ಭದಲ್ಲಿ ಈ ಕೃತಿಯನ್ನು ಜಗನ್ನಾಥ ದಾಸರು ರಚಿಸಿದರು. ವಿಜಯದಾಸರ ಕಟ್ಟೆಯು ಆಂಧ್ರ ಪ್ರದೇಶದ ಗುಂತಕಲ್ ಬಳಿ ಇರುವ ಚಿಪ್ಪಗಿರಿಯಲ್ಲಿದೆ.

೧೪೬

ವಿಜಯದಾಸರ ಶಿಷ್ಯರು ಗೋಪಾಲದಾಸರು, ಗೋಪಾಲದಾಸರ ಶಿಷ್ಯರು ಜಗನ್ನಾಥ ದಾಸರು. ಆದ್ದರಿಂದ ವಿಜಯ ದಾಸರು ಜಗನ್ನಾಥ ದಾಸರ ಪರಮಗುರುಗಳಾದಂತಾಯಿತು. ಜಗನ್ನಾಥ ದಾಸರಿಗೆ ಉಂಟಾಗಿದ್ದ ವ್ಯಾಧಿ (ಹೊಟ್ಟೆನೋವು) ಯನ್ನು ವಿಜಯ ದಾಸರು ಗೋಪಾಲದಾಸರ ಮೂಲಕ ಪರಿಹರಿಸಿದಾಗ ಜಗನ್ನಾಥ ದಾಸರು ಅಪಾರ ಕೃತಜ್ಞತೆಯಿಂದ

ಈ ಕೃತಿಯನ್ನು ರಚಿಸಿದರು. ಜಗನ್ನಾಥ ದಾಸರ ಪಾಲಿಗೆ ವಿಜಯದಾಸರು 'ರತ್ನ' ವೆನಿಸಿದರೆಂಬುದು ಗಮನಾರ್ಹ ಸಂಗತಿಯಾಗಿದೆ.

೧೪೭

ಜಗನ್ನಾಥ ದಾಸರು ತಮ್ಮ ಗುರುಗಳಾದ ಗೋಪಾಲದಾಸರನ್ನು ಕುರಿತು ಬರೆದಿರುವ ಕೀರ್ತನೆ ಇದು. ಜಗನ್ನಾಥದಾಸರು ತಮಗೆ ಉಂಟಾಗಿದ್ದ ವ್ಯಾಧಿಯನ್ನು ವಿಜಯ ದಾಸರ ಸೂಚನೆಯಂತೆ ಗೋಪಾಲದಾಸರ ಮೂಲಕ ಪರಿಹರಿಸಿಕೊಂಡರು. ಆಗ ಜಗನ್ನಾಥದಾಸರು ಅಪಾರ ಭಕ್ತಿ ಮತ್ತು ಕೃತಜ್ಞತೆಗಳಿಂದ ಈ ಕೀರ್ತನೆಯನ್ನು ರಚಿಸಿದರು. ತಮ್ಮನ್ನುದ್ಧರಿಸಿದಂತೆ ಇತರರನ್ನು ಉದ್ಧರಿಸಬೇಕೆಂಬ ದಾಸರಾಯರ ಪ್ರಾರ್ಥನೆಯಲ್ಲಿ ಜಗನ್ನಾಥ ದಾಸರ ಹೃದಯ ವೈಶಾಲ್ಯವನ್ನು ಗುರುತಿಸಬಹುದಾಗಿದೆ.

೧೪೮

ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳಲ್ಲಿ ಒಂದನ್ನಾದರೂ ಸಂಪೂರ್ಣವಾಗಿ ನಿಯಂತ್ರಿಸುವುದು ಅಸಾಧ್ಯವೆಂಬುದು ಆತ್ಮವಿಮರ್ಶೆಯಿಂದ ಗೊತ್ತಾಗುವ ಸಂಗತಿಯಾಗಿದೆ. ದಾಸರು ಅರಿಷಡ್ವರ್ಗಗಳನ್ನು ಜಯಿಸಲು ಸಾಧ್ಯವಾಗಲಿಲ್ಲವೆಂಬ ಪರಿತಾಪವನ್ನು ಇಲ್ಲಿ ಪ್ರಕಟಿಸಿದ್ದಾರೆ ಭಕ್ತಿ, ವೈರಾಗ್ಯಗಳನ್ನು ಅನುಗ್ರಹಿಸಬೇಕೆಂದು ಬೇಡಿದ್ದಾರೆ.

೧೪೯

ಜಗನ್ನಾಥದಾಸರು ರಚಿಸಿರುವ ಆತ್ಮನಿವೇದನಾತ್ಮಕ ಕೀರ್ತನೆ ಇದು. ಲೌಕಿಕವಾದ ಕೆಲಸಗಳನ್ನು ಮಾಡುತ್ತಿರುವಾಗ ಅಂತರಂಗದಲ್ಲಿ ಭಗವಂತನ ಗುಣ, ಕ್ರಿಯೆಗಳನ್ನು ಚಿಂತಿಸುತ್ತಾ ಭಗವನ್ಮೂರ್ತಿಯ ಧ್ಯಾನ ಮಾಡುವಂತಹ ಸುಕೃತವನ್ನುಂಟು ಮಾಡಬೇಕೆಂದು ದಾಸರು ಈ ಕೀರ್ತನೆಯಲ್ಲಿ ಪ್ರಾರ್ಥಿಸಿದ್ದಾರೆ.

೧೫೦

ಜಗನ್ನಾಥದಾಸರ ಆತ್ಮಶೋಧನಾತ್ಮಕ ಕೀರ್ತನೆ ಇದಾಗಿದೆ. ಶ್ರೀ ಹರಿಯನ್ನು ನಿರಂತರವಾಗಿ ಸ್ಮರಿಸಬೇಕೆಂದು ಪ್ರತಿಜ್ಞೆ ಮಾಡಿದರೂ ಮನಸ್ಸು ಅದಕ್ಕೆ ಸಹಕರಿಸಲಿಲ್ಲವೆಂಬ ದುಃಖ ಈ ಕೃತಿಯಲ್ಲಿ ವಿಸ್ತಾರವಾಗಿದೆ. ಜನರು ಮಾಡುವ ನಿಂದಾಸ್ತುತಿಗಳಿಗೆ ಬೆಲೆ ಕೊಡದಂತಹ ಮನಸ್ಸನ್ನು ಕರುಣಿಸಬೇಕೆಂದು ದಾಸರು ಕೇಳಿ ಕೊಂಡಿದ್ದಾರೆ.

೧. **ಭಾವಾದ್ವೈತ** : ಶ್ರೀ ಹರಿಯು ಅಖಿಲ ಚೇತನಾಂತರ್ಯಾಮಿ: ಶ್ರೀ ಹರಿಯ ಈ ಭಿನ್ನ ರೂಪಗಳಲ್ಲಿ ತಾರತಮ್ಯವಿಲ್ಲ; ಗುಣಶಕ್ತಿ ಸಾಮರ್ಥ್ಯಗಳಲ್ಲೂ ಏಕತೆ ಇದೆ ಎಂದು ಭಾವಿಸುವುದೇ ಭಾವಾದ್ವೈತ.

೨. **ಕ್ರಿಯಾದ್ವೈತ** : ಪ್ರಪಂಚದಲ್ಲಿ ಎಲ್ಲ ಚೇತನ ವಸ್ತುಗಳಲ್ಲಿ ನಡೆಯುವ ಕ್ರಿಯೆಗೂ ಭಗವಂತನೆ ಕಾರಣನೆಂದು ತಿಳಿದು, ಹೀಗೆ ಅನಂತಾನಂತ ರೂಪಗಳಿಂದ ಕ್ರಿಯೆಗಳನ್ನು ನಡೆಸುವ ಭಗವಂತನ ರೂಪ ಶಕ್ತಿಗಳಲ್ಲಿ ಏಕತೆಯನ್ನು ಭಾವಿಸುವುದೇ ಕ್ರಿಯಾದ್ವೈತವೆನಿಸಿಕೊಳ್ಳುತ್ತದೆ. ಕಾಯಾ, ವಾಚಾ, ಮನಸಾ ಕರ್ಮಗಳನ್ನು ಬಿಂಬ ರೂಪಿ ಪರಮಾತ್ಮ ಮಾಡಿಸುವನೆಂಬ ಚಿಂತನೆ ಅಗತ್ಯ.

೩. **ದ್ರವ್ಯಾದ್ವೈತ** : ತಾನು, ಹಾಗೂ ಸರ್ವರಲ್ಲಿಯೂ ಸವಸ್ತುಗಳಲ್ಲಿಯೂ ಇರುವ ಭಗವಂತನ ಭಿನ್ನ ರೂಪಗಳೊಂದಿಗೆ ತನ್ನಲ್ಲಿ ಭಗವಂತನ ಬಿಂಬ ರೂಪದೊಂದಿಗೆ ಐಕ್ಯವನ್ನು ಚಿಂತಿಸುವುದು ದ್ರವ್ಯಾದ್ವೈತವೆನಿಸಿಕೊಳ್ಳುತ್ತದೆ.

೧೫೧

ಹರಿಭಕ್ತಿ ಸಾಧನೆಯಲ್ಲಿ ನೈಚ್ಯಾನುಸಂಧಾನಕ್ಕೆ ಮಿಗಿಲಾದ ಸ್ಥಾನವಿದೆ. ತಾನು ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಸಾಧಿಸಲಾಗಲಿಲ್ಲ: ಹರಿದಾಸನು ಹೇಗೆ ಜೀವಿಸಬೇಕೋ ಹಾಗೆ ಜೀವಿಸುತ್ತಿಲ್ಲ ಎಂಬ ಕೊರಗನ್ನು ಹೊಂದುವುದೇ ನೈಚ್ಯಾನುಸಂಧಾನವೆನಿಸಿಕೊಳ್ಳುತ್ತದೆ. ಈ ಭಾವವು ಈ ಕೀರ್ತನೆಯ ತುಂಬ ತುಂಬಿಕೊಂಡಿದೆ

೧೫೨

ಆತ್ಮ ಶೋಧನಾತ್ಮಕ ದೃಷ್ಟಿಯುಳ್ಳ ಮತ್ತೊಂದು ಕೀರ್ತನೆ ಇದು. ಶಾಸ್ತ್ರೋಕ್ತವಾದ ವ್ರತಾಚರಣೆ. ತೀರ್ಥ ಯಾತ್ರೆ ದಾನಧರ್ಮಾಧಿಗಳನ್ನು ಯಥೋಚಿತವಾಗಿ ಮಾಡಲು ಸಾಧ್ಯವಾಗಲಿಲ್ಲವೆಂಬ ಕೊರಗು ಇಲ್ಲಿದೆ. ತಾವು ಮಾಡಿರುವ ಪಾಪಕರ್ಮಗಳ ರಾಶಿಯು ಎಂತಹ ಹೋಮಹವನಾದಿಗಳನ್ನು ಮಾಡಿದರೂ ಸಂಪೂರ್ಣವಾಗಿ ಕರಗಲಾರದೆಂದು ದಾಸರು ಹೇಳಿದ್ದಾರೆ. ಇದು ಹರಿಭಕ್ತಿ ಸಾಧನೆಯ ಬಗ್ಗೆ ದಾಸರಿಗಿದ್ದ ಅತೃಪ್ತಿಯನ್ನು ಎತ್ತಿ ತೋರಿಸುತ್ತದೆ. ಈ ಅತೃಪ್ತಿಯೇ ಅವರ ಪರಮ ಭಕ್ತಿಯ ದ್ಯೋತಕವಾಗಿದೆ.

೧೫೩

ಶ್ರೀ ಹರಿಯೊಲುಮೆಯನ್ನು ಪಡೆಯಲು ಯಾವ ಬಗೆಯಾದ ಜೀವನ ಮಾಡಬಾರದೆಂಬುದರ ಬಗ್ಗೆ ಸೊಗಸಾದ ಸೂಚನೆಗಳು ಈ ಕೀರ್ತನೆಯಲ್ಲಿವೆ. ಭಗವಂತನ ಕೃಪಾಕಟಾಕ್ಷವನ್ನು ಪಡೆಯಲು ಕೆರೆ ಬಾವಿಗಳನ್ನು ಕಟ್ಟಿಸಿ ಸಾರ್ವಜನಿಕರಿಗೆ ತೃಪ್ತಿಯಾಗುವಂತೆ ಊಟವನ್ನು ಹಾಕಬೇಕು. ಪ್ರತಿನಿತ್ಯ ಭಗವಂತನ ಪೂಜೆಯನ್ನು ತಂತ್ರಸಾರೋಕ್ತ ರೀತಿಯಲ್ಲಿ ನಡೆಸಬೇಕು. ಪ್ರತಿನಿತ್ಯ ಭಾಗವತಾದಿ ಪುಣ್ಯಪ್ರದ ಪುರಾಣ ಕಥೆಗಳನ್ನು ಕೇಳಬೇಕೆಂದು ದಾಸರು ಸನ್ಮಾರ್ಗದರ್ಶನ ಮಾಡಿದ್ದಾರೆ.

೧೫೪

ಹರಿದಾಸರ ಪ್ರಶಂಸೆಯನ್ನು ಮಾಡುತ್ತಲೇ ನಿಜವಾದ ಹರಿ ದಾಸರ ಲಕ್ಷಣವೇನೆಂಬುದನ್ನು ತುಂಬ ಚೆನ್ನಾಗಿ ಈ ಕೀರ್ತನೆಯಲ್ಲಿ ಜಗನ್ನಾಥ ದಾಸರು ವಿವರಿಸಿದ್ದಾರೆ. ನಿಜವಾದ ಹರಿದಾಸರಿಗೆ ಯಾವ ಭಯವೂ ಇಲ್ಲವೆಂದು ದಾಸರು ಹೇಳಿದ್ದಾರೆ. ಹರಿದಾಸರ ದೃಷ್ಟಿಯೆಲ್ಲವೂ ಭಗವಂತನ ಕಡೆಗೇ ಇರುವುದರಿಂದ ಅವರು ಲೋಕದ ಜನರ ದೃಷ್ಟಿಯಿಂದ ವಿಲಕ್ಷಣವಾಗಿರುವರೆಂದು ದಾಸರು ಹೇಳಿದ್ದಾರೆ.

೧೫೫

ಶ್ರೀ ಹರಿಯ ಗುಣ ವಿಶೇಷಗಳನ್ನು ವಿವರಿಸುವಂತಹ ಸಾಹಿತ್ಯವೆಲ್ಲವನ್ನು ಹರಿಕಥಾಮೃತಸಾರ ಎನ್ನಬೇಕೆಂಬುದು ದಾಸರ ನಿಲುವಾಗಿದೆ ಭಗವಂತನ ಚರಿತ್ರೆಯ ಪಠಣದಿಂದ ಜನನ ಮರಣಗಳಿಂದ ದೂರವಾಗ ಬಹುದೆಂಬುದು ದಾಸರ ಘೋಷಣೆಯಾಗಿದೆ.

೧೫೬

ಹರಿದಾಸರಿಗೆ ಬದುಕಿನಲ್ಲಿ ಭಯವಾಗಲೀ ದುಃಖವಾಗಲೀ ಉಂಟಾಗಲಾರದೆಂದು ಜಗನ್ನಾಥ ದಾಸರು ಹೇಳಿದ್ದಾರೆ. ಭಗವಂತನು ಭಕ್ತರ ಪಾಲಿಗೆ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳಂತಿರುವುದರಿಂದ ಅವರ ಸುಖಕ್ಕೆ ಎಣೆಯೇ ಇಲ್ಲವೆಂದು ದಾಸರು ನುಡಿದಿದ್ದಾರೆ. ಭಕ್ತೆಯಾದ ಶಬರಿ ಕೊಟ್ಟ ಎಂಜಲು ಫಲವನ್ನೇ ಶ್ರೀ ರಾಮಚಂದ್ರ ಸ್ವೀಕರಿಸಿದ ಮೇಲೆ ಭಕ್ತರ ಬಗ್ಗೆ ಭಗವಂತನಿಗೆ ಅದೆಷ್ಟು ವಾತ್ಸಲ್ಯ ಉಂಟೆಂಬುದನ್ನು ಪ್ರತ್ಯೇಕವಾಗಿ ವಿವರಿಸುವ ಅಗತ್ಯವಿಲ್ಲ.

೧೫೭

ಹರಿಭಕ್ತರಾದವರು ಮಾಡುವ ಕಾರ್ಯಗಳಲ್ಲಿ ದೋಷವಿದ್ದರೂ ಭಗವಂತನು ಕ್ಷಮಿಸಿ ಉದ್ಧರಿಸುವನೆಂಬುದನ್ನು ದಾಸರು ಈ ಕೀರ್ತನೆಯಲ್ಲಿ ಒತ್ತಿ ಹೇಳಿದ್ದಾರೆ. ಸಮುದ್ರವನ್ನು ದೇವದೈತ್ಯರು ಕಡೆದಾಗ ಉದ್ಭವಿಸಿದ ವಿಷವನ್ನು ಶಿವನು ಕುಡಿದರೂ ಶಿವನಿಗೆ ಅಪಾಯವಾಗದಂತೆ ವಿಷ್ಣುವು ರಕ್ಷಿಸಿದ ಕಥೆಯನ್ನು ಈ ತತ್ವಕ್ಕೆ ಉದಾಹರಣೆಯಾಗಿ ಕೊಟ್ಟಿದ್ದಾರೆ.

೧. **ಕಡುಮಥನದಿ ....:** ದೇವತೆಗಳು ಹಾಗೂ ರಾಕ್ಷಸರು ಸೇರಿ ಸಮುದ್ರವನ್ನು ಕಡೆದಾಗ ಹೊರಹೊಮ್ಮಿದ ವಿಷವನ್ನು ಈಶ್ವರನು ಸ್ವೀಕರಿಸಿದನು. ಆದರೆ ಶಿವನು ಸಾಯದೆ ವಿಷ್ಣುವಿನ ಕೃಪೆಯಿಂದ ವಿಷಕಂಠನೆನಿಸಿಕೊಳ್ಳುವನು : ವಿಷಕಂಠ ಎಂಬುದು ಶಿವನಿಗೆ ಅಲಂಕಾರ ಪ್ರಾಯವಾಯಿತು.

೨. **ರಾಹುಕೇತು .... ಅರಿಯ** : ಮೋಹಿನಿಯು ಅಮೃತವನ್ನು ಹಂಚುವಾಗ ದೇವತೆಗಳ ಸಾಲಿನಲ್ಲಿ ರಾಕ್ಷಸನೊಬ್ಬನು ಅವಿತು ಕುಳಿತು ಅಮೃತಕ್ಕಾಗಿ ಬಾಯಿಬಿಟ್ಟನು. ಇದನ್ನರಿತ ವಿಷ್ಣುವು ಅವನ ಶಿರಸ್ಸನ್ನು ಛೇದಿಸಿದನು. ಅದರೆ ಆ ಹೊತ್ತಿಗೆ ಅಮೃತ ಪ್ರಾಶನ ಮಾಡಿದ ನಿಮಿತ್ತ ಅವನು ಬದುಕಿ ರಾಹು ಹಾಗೂ ಕೇತು ಎನಿಸಿಕೊಂಡರಂತೆ.

೩. **ಬಲಿನಿನ್ನ ಮಕುಟ** : ಒಮ್ಮೆ ಬಲಿ ಚಕ್ರವರ್ತಿಯು ವಿಷ್ಣುವಿನ ಕಿರೀಟವನ್ನು ಹಾರಿಸಿಕೊಂಡು ಹೋಗುತ್ತಾನೆ. ಆದರೆ ಈ ಅಪರಾಧವನ್ನು ಮರೆತು ವಿಷ್ಣುವು ರಸಾತಲದಲ್ಲಿರುವ ಬಲಿಯ ಅರಮನೆಯ ಬಾಗಿಲನ್ನು ಕಾಯುವ ದೀಕ್ಷೆಯನ್ನು ಸ್ವೀಕರಿಸಿ ಭಕ್ತ ವಾತ್ಸಲ್ಯವನ್ನು ಮೆರೆದನು.

೪. **ಮೇದಿನಿಯೊಳು .... ಮಾಡಿದೆ** : ವಾಲ್ಮೀಕಿಯು ಒಂದು ಕಾಲದಲ್ಲಿ ಬೇಟೆಗಾರನಾಗಿದ್ದು ದಾರಿಹೋಕರನ್ನು ದರೋಡೆ ಮಾಡಿ ಜೀವಿಸುತ್ತಿದ್ದನು. ಆದರೆ ಭಗವಂತನ ಕರುಣೆಯಿಂದ ಮುಂದೆ ಇವನು ಮಹರ್ಷಿ ಎನಿಸಿ ರಾಮಾಯಾಣ ಮಹಾಕಾವ್ಯವನ್ನು ಬರೆದನು.

೫. **ವೇದೋಕ್ತ ಕರ್ಮವಾಚರಿಸಿದ** : ವಿಷ್ಣುವು ಜೀನನ ಮನೆಯಲ್ಲಿ ಅವತರಿಸಿ ತಾಮಸರಿಗೆ ತಮೋ ಕಾರ್ಯ ಬುದ್ಧಿಯೇ ಪ್ರೇರಕವಾಗುವಂತೆ ಮಾಡಿದನೆಂದು ಹೇಳುವುದುಂಟು.

೬ **ಪರಾಶರನು** .... : ಪರಾಶರ ಮಹರ್ಷಿಯು ಸತ್ಯವತಿ ದೇವಿಯಲ್ಲಿ ವ್ಯಾಸ ಮಹರ್ಷಿಯಾಗಿ ವಿಷ್ಣುವೇ ಅವತಾರ ಮಾಡಿದನು.

೭ **ವಾರಿಜಾಸನ** .... : ಬ್ರಹ್ಮನು ತನ್ನ ಕನ್ನಿಕೆಯಾದ ಸರಸ್ವತಿಯನ್ನು ವಿವಾಹವಾಗಲು ವಿಷ್ಣುವೇ ಅವಕಾಶ ಮಾಡಿಕೊಟ್ಟ ಪ್ರಸಂಗದ ಉಲ್ಲೇಖವಿದೆ.

೧೫೮

ಹರಿದಾಸರು ದಾಸ ಜೀವನವನ್ನು ಅನುಷ್ಠಾನಗೊಳಿಸಿಕೊಂಡರೆ ಅವರಿಗೆ ಈ ಲೋಕದಲ್ಲಿ ಯಾವ ಕಾರಣಕ್ಕೂ ಮಾನಸಿಕವಾಗಿ ಅಹಿತವಾಗಲಾರದೆಂಬ ಸಂದೇಶ ಈ ದೀರ್ಘ ಕೀರ್ತನೆಯಲ್ಲಿದೆ. ಎಲ್ಲವನ್ನು ಭಗವಂತನು ಅವರವರ ಕರ್ಮಕ್ಕೆ ಅನುಗುಣವಾಗಿ ಮಾಡುವನೆಂದೂ, ಭಕ್ತರಾದವರನ್ನು ಭಗವಂತನು ಎಂದಿಗೂ ಕೈ ಬಿಡುವುದಿಲ್ಲವೆಂದೂ ಆಳವಾಗಿ ಅರಿತ ವ್ಯಕ್ತಿಗೆ ಬದುಕಿನಲ್ಲಿ ಏನೇ ತೊಂದರೆ ಬಂದರೂ ಅದನ್ನು ಎದುರಿಸುವ ಶಕ್ತಿ ಮನಸ್ಸಿನಲ್ಲಿದ್ದು ಎಲ್ಲವನ್ನೂ ನಿರಾತಂಕವಾಗಿ ಎದುರಿಸುವರೆಂಬ ಸಂಗತಿಯನ್ನು ದಾಸರು ಒತ್ತಿ ಹೇಳಿದ್ದಾರೆ.

೧೫೯

ಹರಿದಾಸರಲ್ಲದವರಿಗೆ ನರಕಾನುಭವವಾಗುವೆಂಬುದನ್ನು ಹೇಳುವುದರ ಮೂಲಕ ಹರಿದಾಸರ ಮೇಲ್ಮೆಯನ್ನು ಪರೋಕ್ಷವಾಗಿ ದಾಸರು ಈ ಕೀರ್ತನೆಯಲ್ಲಿ ಮಂಡಿಸಿದ್ದಾರೆ.

೧೬೦

ಹರಿದಾಸರಿಗೆ ಭಯವೆಂಬುದೇ ಇಲ್ಲವೆಂದು ದಾಸರು ಈ ಕೀರ್ತನೆಯಲ್ಲಿಯೂ ಒತ್ತಿ ಹೇಳಿದ್ದಾರೆ. ಹರಿಪೂಜೆ ಹರಿಭಜನೆ, ಹರಿಕ್ಷೇತ್ರಯಾತ್ರೆಯಲ್ಲಿ ನಿರತರಾದವರಿಗೆ ಇತರರ ನಿಂದಾಸ್ತುತಿಗಳು ಮನಸ್ಸಿಗೆ ಮುಟ್ಟುವುದಿಲ್ಲವೆಂದು ದಾಸರು ಈ ಕೀರ್ತನೆಯಲ್ಲಿ ಸ್ಪಷ್ಟ ಪಡಿಸಿದ್ದಾರೆ.

೧೬೧

ಗಾಢವಾದ ಜ್ಞಾನ, ಆಳವಾದ ಭಕ್ತಿ ದೃಢವಾದ ವೈರಾಗ್ಯ ಅಪರೋಕ್ಷ ಸಾಧನೆಯಲ್ಲಿ ಅಚಲವಾದ ದೃಷ್ಟಿಯನ್ನು ದಾಸಜೀವನ ಮಾಡುವ ಹರಿದಾಸರ ಲಕ್ಷಣಗಳನ್ನು ಜಗನ್ನಾಥ ದಾಸರು ಮನೋಜ್ಞವಾಗಿ ಈ ಕೀರ್ತನೆಯಲ್ಲಿ ವಿವರಿಸಿದ್ದಾರೆ. ಇದೊಂದು ಜಗನ್ನಾಥದಾಸರ ಸುಪ್ರಸಿದ್ಧ ಕೀರ್ತನೆಯಾಗಿದೆ. ಭಗವಂತನ ಗುಣ ಕಥನಗಳನ್ನು ಕೇಳಿ ಆನಂದ ಬಾಷ್ಪವನ್ನು ಸುರಿಸುತ್ತಾ ಲೋಕವನ್ನೇ ಮರೆಯುವುದು ಹರಿದಾಸರ ಸ್ವಭಾವವೆಂದು ದಾಸರು ಹೇಳಿದ್ದಾರೆ.

೧೬೨

ಮನಸ್ಸನ್ನು ಎಂತಹ ಸಂಕಷ್ಟ ಪರಿಸ್ಥಿತಿಯಲ್ಲಿಯೂ ಶಾಂತವಾಗಿಟ್ಟುಕೊಳುವ ಸಾಮರ್ಥ್ಯವನ್ನು ಪಡೆದವರೇ ಸಂತರು. ಸಜ್ಜನರಾಗಿದ್ದು ತತ್ವ ಶಾಸ್ತ್ರವನ್ನಾಲಿಸಿ, ಶ್ರೀ ಹರಿಯ ಸರ್ವೋತ್ತಮತ್ವವನ್ನು ತಿಳಿದು ಜ್ಞಾನ ಭಕ್ತಿ ವೈರಾಗ್ಯ ಪೂರ್ಣವಾದ ಜೀವನವನ್ನು ಮಾಡುತ್ತಿರುವವರೇ ನಿಜವಾದ ಸಂತರೆಂದು ದಾಸರು ಈ ಕೀರ್ತನೆಯಲ್ಲಿ ವಿವರಿಸಿದ್ದಾರೆ.

೧೬೩

ಹರಿದಾಸರು ಅನ್ಯರ ಗೊಡವೆಗೆ ಹೋಗುವವರಲ್ಲವೆಂದೂ, ತಮ್ಮ ಬದುಕಿನ ಎಲ್ಲ ವೇಳೆಯನ್ನು ಹರಿಪೂಜೆ ಭಜನೆ ಚಿಂತನೆ – ಕಥಾ ಶ್ರವಣಾದಿಗಳಿಗೆ ವಿನಿಯೋಗಿಸುವರೆಂದೂ ದಾಸರು ಈ ಕೀರ್ತನೆಯಲ್ಲಿ ವಿವರಿಸಿದ್ದಾರೆ.

೧೬೪

ಅನುಸಂಧಾನ ಕ್ರಮದ ಪೂಜೆಯೇ ಶ್ರೇಷ್ಠವಾದ ಪೂಜೆ –ಉತ್ತಮೋತ್ತಮವಾದ ಸಾಧನಾ ಮಾರ್ಗವೆಂದು ದಾಸರು ತಿಳಿಸಿ ಅದನ್ನು ಮಾಡುವ ಬಗೆಯನ್ನು ಈ ಕೀರ್ತನೆಯಲ್ಲಿ ವಿವರಿಸಿದ್ದಾರೆ. ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನೆನಿಸಿದ ಶ್ರೀ ಹರಿಗೆ ಒಂದೋ ಹತ್ತೋ ದೀಪಗಳನ್ನು ಹಚ್ಚಿ ಆರಾಧಿಸುವುದಕ್ಕಿಂತ ನಕ್ಷತ್ರ ಮಂಡಲವೇ ಲಕ್ಷ ದೀಪಗಳೆಂದು ಭಾವಿಸಿ ಪೂಜಿಸುವುದೇ ಅನುಸಂಧಾನ ಕ್ರಮದ ಪೂಜೆ ಎಂದು ದಾಸರು ಹೇಳಿದ್ದಾರೆ.

೧೬೫

ಹರಿದಾಸರು ತಮ್ಮ ಕೃತಿಗಳಲ್ಲಿ ಶಾಸ್ತ್ರೋಕ್ತ ವಿಚಾರಗಳನ್ನು ವೈಚಾರಿಕತೆಯ ನೆಲೆಯಲ್ಲಿ ವಿವರಿಸಿದ್ದಾರೆ. ಭಗವಂತನು ಅಣುವಿನೊಳಗೆ ಅಣುರೂಪವಾಗಿಯೇ ಇರುವನು: ಅವನು ಸತ್ಯಸಂಕಲ್ಪ : ಅವನಿಗೆ ಯಾವ ಜೀವರ ಮೇಲೂ ದ್ವೇಷವಾಗಲೀ, ಪ್ರೀತಿಯಾಗಲೀ ಇಲ್ಲ : ಎಲ್ಲರನ್ನು ಸಮ ದೃಷ್ಟಿಯಿಂದ ನೋಡುವವನವನು : ಈ ವಿಚಾರಗಳನ್ನು ದೃಢವಾಗಿ ಅರಿತು ಲೋಕ ವಿಚಾರಗಳ ಬಗ್ಗೆ ಆಸಕ್ತಿಯನ್ನು ಹೊಂದದೆ ಭಗವದ್ಭಕ್ತರ ಸ್ನೇಹ ಸಹವಾಸಗಳನ್ನು ಬಯಸುವವನೇ ಬಿಂಬಾಪರೋಕ್ಷ ಹೊಂದಲು ಅರ್ಹನೆಂಬ ಸಂಗತಿಯನ್ನು ದಾಸರು ವಿವರಿಸಿದ್ದಾರೆ.

೧೬೬

ಪ್ರಪಂಚದಲ್ಲಿ ಬಹುಜನ ತಮ್ಮ ವಿರಾಮ ವೇಳೆಯನ್ನು ಇತರರನ್ನು ಬೈಯುವುದರ ಮೂಲಕ ಕಳೆಯುವುದುಂಟು. ಸದ್ಧರ್ಮಾಚರಣೆಯಲ್ಲಿರುವವರು ಮಾಡಿರುವ ತಪ್ಪುಗಳನ್ನು ಎತ್ತಿ ಆಡುವುದು ಅಪರಾಧವೆಂದು ಇಂತಹವರು ತಿಳಿಯುವುದಿಲ್ಲ. ಹೀಗೆ ಬೈಯುವುದರಿಂದ ಮಾಡಿದವರ ಪಾಪ ಆಡಿದವರಿಗೆ ಎಂಬಂತಾಗುವುದೆಂದೂ ಈ ನಿಮಿತ್ತ ಸಮಾಜದಲ್ಲಿ ನಿಂದಕರಿರುವುದರಿಂದ ಪಾಪ ನಾಶವಾಗುವುದೆಂದೂ ದಾಸರು ಈ ಕೀರ್ತನೆಯಲ್ಲಿ ಹೇಳಿದ್ದಾರೆ.

೧೬೭

ಶ್ರೀ ಹರಿಯನ್ನು ಮತ್ತು ತತ್ವಾಭಿಮಾನಿ ದೇವತೆಗಳನ್ನು ಸತ್ಕಾರ್ಯ ಹಾಗೂ ವಿರಾಮ ವೇಳೆಯಲ್ಲಿ ಚಿಂತನೆ ಮಾಡುವುದರಿಂದ ಪುಣ್ಯ ಲಭಿಸುವುದೆಂದು ಹೇಳಿರುವಂತೆ, ಕಲಿಯೇ ಮೊದಲಾದ ದೈತ್ಯರನ್ನು ಮಲ ಮೂತ್ರ ವಿಸರ್ಜನೆ ಇತ್ಯಾದಿ ಕೆಲಸಗಳನ್ನು ಮಾಡುವಾಗ ಸ್ಮರಿಸುವುದರಿಂದಲೂ ಪುಣ್ಯ ಲಭ್ಯವಾಗುವುದು – ಪಾಪ ನಾಶವಾಗುವುದು ಎಂದು ಶಾಸ್ತ್ರ ವಚನವಿದೆ. ಇದನ್ನನುಸರಿಸಿ ಜಗನ್ನಾಥ ದಾಸರು ಯಾವ ಯಾವ ಸಂದರ್ಭಗಳಲ್ಲಿ ಕಲಿಯೇ ಮೊದಲದ ದೈತ್ಯರನ್ನು ಸ್ಮರಿಸಬೇಕೆಂಬುದನ್ನು ಈ ಕೀರ್ತನೆಯಲ್ಲಿ ವಿವರಿಸಿದ್ದಾರೆ.

೧೬೮

ಜೀವ ಎಂಬ ಪಕ್ಷಿಯು ಜಗತ್ತೆಂಬ ಮಹಾವೃಕ್ಷದಲ್ಲಿ ಹಾರಾಡಿ ಬದುಕುವ ಬಗೆಯನ್ನು ಚಿತ್ರಿಸುವ ಕೀರ್ತನೆ ಇದಾಗಿದೆ. ಜಗತ್ತನ್ನು ಒಂದು ಮಹಾವೃಕ್ಷಕ್ಕೂ ಜೀವವನ್ನು ಪಕ್ಷಿಗೂ ಹೋಲಿಸಿ ಬರೆದಿರುವ ಈ ರೂಪಕಾತ್ಮಕ ಕೀರ್ತನೆ ಕಾವ್ಯ ಮೌಲ್ಯವನ್ನು ಹೊಂದಿದೆ. ಈ ಜಗತ್ತೆಂಬ ವೃಕ್ಷವನ್ನು ಜೀವವೆಂಬ ಪಕ್ಷಿಯನ್ನು ಕಾಪಾಡುವವನು ಭಗವಂತನೆಂಬುದನ್ನು ದಾಸರು ಸ್ಪಷ್ಟ ಪಡಿಸಿದ್ದಾರೆ.

೧೬೯

ಹರಿದಾಸರೆನಿಸಿ ಕೊಂಡವರು ಪಂಚಕೋಶಗಳ ವಿವರಗಳನ್ನು ತಿಳಿದಿರಬೇಕೆಂಬ ಬೋಧೆ ಇಲ್ಲಿದೆ. ಅನ್ನಮಯ, ಆನಂದಮಯ, ವಿಜ್ಞಾನಮಯ, ಮನೋಮಯ ಮತ್ತು ಪ್ರಾಣಮಯ ಕೋಶಗಳೇ ಐದು ಕೋಳಗಳಾಗಿವೆ. ಈ ಕೋಶಗಳ ಅಭಿಮಾನಿ ದೇವತೆಗಳ ಹಾಗೂ ಭಗವದ್ರೂಪಗಳ ವರ್ಣನೆ ಇಲ್ಲಿದೆ.

೧೭೦

ಹರಿದಾಸದೀಕ್ಷೆಯನ್ನು ಹೊಂದಿ ಭಗವಂತನ ಪಾದಾರವಿಂದಗಳಲ್ಲಿ ಶುದ್ಧ ಭಾವಭಕ್ತಿಯನ್ನು ಹೊಂದದೆ ಐಹಿಕ ಸುಖಾಪೇಕ್ಷೆಗಳ ನೆರವೇರಿಕೆಗಾಗಿ ಬೇಡಿಕೆಯನ್ನು ಮಂಡಿಸುವವರು ನೀಚರು ಎಂದು ದಾಸರು ಬೈದಿದ್ದಾರೆ. ಮಹದೈಶ್ವರ್ಯವನ್ನು ಭಗವಂತನ ಪೂಜೆಗಾಗಿ ಖರ್ಚು ಮಾಡಿ ಮತ್ತಷ್ಟು ಐಶ್ವರ್ಯವನ್ನು ಬೇಡುವವನನ್ನು ದಾಸರು ಭಕ್ತ ಎನ್ನದೆ ನೀಚ ಎಂದಿದ್ದಾರೆ.

೧೭೧

ಜಗನ್ನಾಥ ದಾಸರು ಬರೆದಿರುವ ಕೀರ್ತನೆಗಳಲ್ಲಿ ಮಾತ್ರವಲ್ಲ, ಹರಿದಾಸ ಸಾಹಿತ್ಯದಲ್ಲಿಯೇ ಒಂದು ಅತ್ಯುತ್ಕೃಷ್ಟ ಕೀರ್ತನೆ ಇದೆಂಬ ಖ್ಯಾತಿಗೊಳಗಾಗಿರುವ ಕೀರ್ತನೆ ಇದಾಗಿದೆ. ತತ್ವಶಾಸ್ತ್ರದ ಸಾರವನ್ನು ಇದು ಒಳಗೊಂಡಿರುವುದರೊಡನೆ ಆದರ್ಶ ಜೀವನದ ಸ್ವರೂಪದ ಚಿತ್ರಣ ಇಲ್ಲಿ ಸೊಗಸಾಗಿ ಮೂಡಿ ಬಂದಿದೆ. ಆಧ್ಯಾತ್ಮಿಕ ದೃಷ್ಟಿಯು ಜ್ಞಾನ ಪೂರ್ಣವಾಗಿ ಜಾಗೃತ ಗೊಳ್ಳಬೇಕೆಂಬ ಸಂದೇಶ ಇಲ್ಲಿದೆ. ಇದನ್ನು ಅಣು ಹರಿಕಥಾಮೃತಸಾರ ಎಂದೂ ಕರೆಯುವುದುಂಟು. ಮಧ್ವಸಿದ್ಧಾಂತದ ಸಾರ ಉತ್ಕೃಷ್ಟ ರೀತಿಯಲ್ಲಿ ಇಲ್ಲಿ ಪ್ರತಿಪಾದಿತವಾಗಿದೆ. ತಾರತಮ್ಯ, ಪಂಚಭೇದ ಚತುವಿಂಶತಿ (೨೪) ರೂಪಗಳ ಉಪಾಸನೆಯ ಬಗೆ, ಗೋಪೀಚಂದನ ನಾಮ ಧಾರಣೆ, ಮುದ್ರಾಧಾರಣೆ ಅನುಸಂಧಾನದ ಬಗೆ, ತೀರ್ಥಯಾತ್ರೆಯ ಮಹತ್ವ, ಭಜನೆಯ ಮಹತ್ವ, ಲೌಕಿಕ ಕರ್ತವ್ಯಗಳಲ್ಲಿ ಆಧ್ಯಾತ್ಮಿಕ ವಿಚಾರ ಸಂಪನ್ನರು ತೋರಬೇಕಾದ ನಿಷ್ಠೆ: ತತ್ವಾಭಿಮಾನಿಗಳ ಪ್ರೇರಕ ಶಕ್ತಿ, ಬದುಕಿನಲ್ಲಿ ಬರುವ ಕಷ್ಟಗಳನ್ನೆದುರಿಸಬೇಕಾದ ಕ್ರಮ ಇತ್ಯಾದಿಗಳನ್ನು ತುಂಬ ಚೆನ್ನಾಗಿ ವಿವರಿಸಲಾಗಿದೆ.

೧೭೨

ರಕ್ತದ ಒತ್ತಡ, ಹೃದಯದ ವ್ಯಾಧಿ, ನಿದ್ರಾರಾಹಿತ್ಯ, ಚಿಂತೆಗಳು ಇಲ್ಲದೆ ಬಾಳನ್ನು ಸವೆಸಬೇಕಾದರೆ ಪ್ರತಿಯೊಬ್ಬ ಮನುಷ್ಯನೂ ಆಧ್ಯಾತ್ಮಿಕ ದೃಷ್ಟಿಯನ್ನು ಹೊಂದಲೇಬೇಕು: ಭಗವಂತನ ಸಾಕ್ಷಾತ್ಕಾರದ ದೃಷ್ಟಿ ಹಾಗೂ ಲೋಕದ ಸುಖಗಳನ್ನು ಕರುಣಿಸೆಂಬ ಬೇಡಿಕೆಯನ್ನು ಭಗವಂತನಲ್ಲಿಡದಿರುವ ನಿಷ್ಠೆ ಹೊಂದಬೇಕೆಂಬ ಸೂಚನೆ ಈ ಕೀರ್ತನೆಯಲ್ಲಿದೆ.

೧೭೩

ಭಗವಂತನೆಂಬ ಕಲ್ಪತರುವನ್ನು ಹೊಂದಿದವರು ಅನ್ಯರನ್ನು ಯಾವುದಕ್ಕೂ ಬೇಡಬಾರದೆಂದು ದಾಸರು ಹೇಳಿದ್ದಾರೆ. ಪುರಾಣಗಳಲ್ಲಿ ಅನೇಕ ಭಕ್ತರ ಅಪರಿಹಾರ್ಯ

ಸಮಸ್ಯೆಗಳನ್ನು ಭಗವಂತನು ಲೀಲಾಜಾಲವಾಗಿ ನಿವಾರಿಸಿದ ಪ್ರಸಂಗಗಳನ್ನು ಉದಾಹರಿಸಿ ಶ್ರೀ ಹರಿಯನ್ನು ನಂಬಿ ಭಜಿಸುವುದೇ ಶ್ರೇಷ್ಠವೆಂಬುದನ್ನು ಪ್ರತಿಪಾದಿಸಿದ್ದಾರೆ.

೧. **ಗ್ರಾಸವನು ಬೇಡೆ ದೂರ್ವಾಸ** : ದುರ್ಯೋಧನನ ಆತಿಥ್ಯಕ್ಕೊಳಗಾಗಿ ದೂರ್ವಾಸರು ಅವನ ಬೇಡಿಕೆಯನ್ನೀಡೇರಿಸಲು ದ್ರೌಪದಿಯ ಊಟವಾದ ಮೇಲೆ ಧರ್ಮರಾಜನ ಬಳಿ ಹೋಗಿ ತಮಗೂ ತಮ್ಮ ಜೊತೆಗಿರುವ ಅರುವತ್ತು ಸಾವಿರ ಶಿಷ್ಯರಿಗೂ ಊಟ ಹಾಕಬೇಕೆಂದು ಕೇಳಿಕೊಳ್ಳುವರು. ಆಗ ದ್ರೌಪದಿಯು ಅನನ್ಯವಾಗಿ ಶ್ರೀ ಕೃಷ್ಣನನ್ನು ಭಜಿಸಿ ಅವನ ಕೃಪೆಯಿಂದ ದೂರ್ವಾಸ ಹಾಗೂ ಅವರ ಪರಿವಾರಕ್ಕೆ ಅಕ್ಷಯ ಪಾತ್ರೆಯಲ್ಲಿ ತಯಾರಾದ ಅಮೃತೋಪಮ ಭೋಜನವನ್ನು ಮಾಡಿಸಿದಳು.

೨. **ಖೂಳ ದುಶ್ಶಾಸನನು ದ್ರೌಪದಿಯ** : ದುರ್ಯೋಧನನ ಸೋದರನಾದ ದುಶ್ಶಾಸನನು ದ್ರೌಪದಿಗೆ ತುಂಬಿದ ಸಭೆಯಲ್ಲಿ ಮಾನಹಾನಿ ಮಾಡಲು ಯತ್ನಿಸಿದಾಗ ಭೀಷ್ಮಾದಿಗಳಾಗಲೀ ಪಾಂಡವರಾಗಲೀ ರಕ್ಷಿಸಲಿಲ್ಲ, ಶ್ರೀ ಕೃಷ್ಣ ದಿವ್ಯವಾದ ಅಕ್ಷಯ ವಸ್ತ್ರವನ್ನಿತ್ತು ರಕ್ಷಿಸಿದನು.

೩. **ಮಡದಿ ಕಳುಹಲು ಬಂದ .....** : ಕುಚೇಲನನ್ನು ಅವನ ಹೆಂಡತಿಯು ಒತ್ತಾಯ ಮಾಡಿ ಕೃಷ್ಣನ ಬಳಿಗೆ ಅಟ್ಟಿ ಬಡತನವನ್ನು ನಿವಾರಿಸಿಕೊಳ್ಳಬೇಕೆಂದು ಹೇಳುತ್ತಾಳೆ. ಕುಚೇಲನು ಕೃಷ್ಣನಲ್ಲಿಗೆ ಬಂದು ಬಡತನವನ್ನು ಪರಿಹರಿಸು ಎಂದು ಕೇಳದಿದ್ದರೂ ಶ್ರೀ ಕೃಷ್ಣ ಅವನಿಗೆ ಅತುಲೈಶ್ವರ್ಯವನ್ನು ನೀಡಿದನು.

೪. **ತಾಪಸೋತ್ತಮ, ಮೃಕಂಡಾತ್ಮಜಗೆ ....** : ಮೃಕಂಡನ ಮಗನಾದ ಮಾರ್ಕಂಡೇಯ ಮಹರ್ಷಿಯು ಅಲ್ಪಾಯುವಾಗಿದ್ದನು. ಆದರೆ ಅವನು ಭಗವಂತನನ್ನು ಕುರಿತು ದೀರ್ಘಾಯುವಾಗಬೇಕೆಂದು ಬೇಡಿದಾಗ ಅವನಿಗೆ ಹದಿನಾಲ್ಕು ಕಲ್ಪಗಳವರೆಗೆ ಬದುಕುವಂತೆ ವರ ನೀಡಿದನು.

೧೭೪

ಆಧ್ಯಾತ್ಮಿಕ ಜ್ಞಾನ ಅಭಿವೃದ್ಧಿಯಾದಂತೆ ಕೇವಲ ಉಪಾವಾಸ, ವ್ರತಾಚರಣೆ, ಭಜನೆ, ಪೂಜೆ ಇತ್ಯಾದಿಗಳನ್ನು ಮಾಡಿದಾಕ್ಷಣ ಪುಣ್ಯ ಪ್ರಾಪ್ತಿಯಾಗದು, ಅಹಂಕಾರ ಮತ್ತು ಮಾತ್ಸರ್ಯಗಳನ್ನು ಸಂಪೂರ್ಣವಾಗಿ ಮನಸ್ಸಿನಿಂದ ದೂರ ಮಾಡದಿದ್ದರೆ ಯಾವ

ಸತ್ಕರ್ಮಾಚರಣೆಗಳಿಂದಲೂ ಫಲ ಪ್ರಾಪ್ತಿಯಾಗದೆಂದು ದಾಸರು ಈ ಕೀರ್ತನೆಯ ಮೂಲಕ ಎಚ್ಚರಿಕೆ ಕೊಟ್ಟಿದ್ದಾರೆ.

೧೭೫

'ಕಾಲ' ತುಂಬ ಅಮೂಲ್ಯವಾದುದೆಂದು ಎಲ್ಲರಿಗೂ ತಿಳಿದಿಲ್ಲ. ಈ ಕಾಲವನ್ನು ಸದುಪಯೋಗ ಮಾಡಿಕೊಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ. ಇಂದು ಹೋದ ಕಾಲವನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ಎಷ್ಟೋ ಜನ ವ್ಯರ್ಥವಾಗಿ ಹರಟೆ ಹೊಡೆದು ಕಾಲಹರಣ ಮಾಡುತ್ತಾರೆ. ಹೀಗೆ ಮಾಡುವುದು ವಿವೇಕವಲ್ಲ : ನ್ಯಾಯ ಧರ್ಮ ಹಾಗೂ ನೀತಿಯುಕ್ತ ಜೀವನವನ್ನು ನಡೆಸುವುದರೊಡನೆ ಭಗವಂತನ ಸೇವೆಯಲ್ಲಿ ಕಾಲವನ್ನು ಕಳೆಯಬೇಕೆಂದು ದಾಸರು ಉಪದೇಶಿಸಿದ್ದಾರೆ.

೧೭೬

'ಪತಿವ್ರತೆ' ಎನಿಸಿಕೊಳ್ಳಲಪೇಕ್ಷಿಸುವ ಸ್ತ್ರೀಯು ಪ್ರತಿನಿತ್ಯ ಮಾಡಬೇಕಾದ ಕರ್ತವ್ಯಗಳ ಪಟ್ಟಿ ಇಲ್ಲಿದೆ. ನೂರು ಬಗೆಯ ದೈವೋಪಾಸನೆಯನ್ನು ದಾಸರು ಅಲ್ಲಗಳೆದು ಶ್ರೀ ಹರಿ ಭಜನೆಗೈಯಲು ಕರೆ ಇತ್ತಿದ್ದಾರೆ. ಜೀವನವೆಂದರೆ ಸತಿ ಪತಿಯರು ಪರಸ್ಪರ ಗಾಢವಾಗಿ ಪ್ರೀತಿಸುವುದೇ ಆಗಿದೆ ಎಂಬುದನ್ನು ದಾಸರು ಇಲ್ಲಿ ಸೂಚಿಸಿದ್ದಾರೆ ಈ ರೀತಿ ಸ್ತ್ರೀಯು ಪತಿವ್ರತೆಯಾಗಿ ಬದುಕದಿದ್ದರೆ ಯಮನಿಂದ ಶಿಕ್ಷೆಯನ್ನನುಭವಿಸಬೇಕಾಗುವುದೆಂಬ ಎಚ್ಚರಿಕೆಯೂ ಇಲ್ಲಿದೆ.

೧೭೭

ಶ್ರೀ ಹರಿಯೇ ಸರ್ವೋತ್ತಮನೆಂದು ಪ್ರತಿಪಾದಿಸುವ ಕೀರ್ತನೆ ಇದಾಗಿದೆ. ಭೃಗುಮಹರ್ಷಿಯು ಸರ್ವೋತ್ತಮನಾರೆಂದು ಪರೀಕ್ಷಿಸಿದ್ದು : ಶಿವನನ್ನು ಭಸ್ಮಾಸುರ ನಾಶ ಪಡಿಸಲು ಯತ್ನಿಸಿದಾಗ ಶ್ರೀ ಹರಿಯು ಮೋಹಿನಿ ವೇಷವನ್ನು ತಾಳಿ ರಕ್ಷಿಸಿದ್ದು, ಸಮುದ್ರ ಮಥನ ಕಾಲದಲ್ಲಿ ಉದಯಿಸಿದ ಲಕ್ಷ್ಮಿಯು ವಿಷ್ಣುವನ್ನು ಒಲಿಸಿದ್ದು – ಈ ಪ್ರಕರಣಗಳನ್ನು ದಾಸರು ಪ್ರಸ್ತಾಪಿಸಿ ಹರಿ ಸರ್ವೋತ್ತಮತ್ವವನ್ನು ಪ್ರತಿಪಾದಿಸಿದ್ದಾರೆ.

೧೭೮

ಜಗನ್ನಾಥದಾಸರು ಹದಿಮೂರು ಜನರಿಗೆ ಅಂಕಿತೋಪದೇಶ ಮಾಡಿ ದಾಸ ದೀಕ್ಷೆಯನ್ನುಂಟು ಮಾಡಿದರು. ಹೀಗೆ ಅಂಕಿತೋಪದೇಶ ಮಾಡುವಾಗ ಅಂಕಿತ ಪದವನ್ನು ರಚಿಸಿಕೊಡುವುದು ಸಂಪ್ರದಾಯವಾಗಿದೆ. ಆದರೆ ಜಗನ್ನಾಥ ದಾಸರು ರಚಿಸಿರುವ ಅಂಕಿತ

ಪದಗಳಲ್ಲಿ ಕೇವಲ ಎರಡೇ ಎರಡು ದೊರೆತಿವೆ, ಈ ಕೀರ್ತನೆಯು ಶ್ರೀದವಿಠ್ಠಲರಿಗೆ ಅಂಕಿತ ಪ್ರದಾನ ಮಾಡಿದ ಸಂದರ್ಭದಲ್ಲಿ ರಚನೆಯಾದುದಾಗಿದೆ. ಶ್ರೀದವಿಠ್ಠಲರು ಕೆಲವು ಕೀರ್ತನೆಗಳನ್ನು ರಚಿಸಿರುವುದರೊಡನೆ ಹರಿಕಥಾಮೃತಸಾರಕ್ಕೆ ಫಲಸ್ತುತಿಯನ್ನು ಬರೆದಿದ್ದಾರೆ.

೧೭೯

ಈ ಕೀರ್ತನೆಯೂ ಒಂದು ಅಂಕಿತ ಪದವಾಗಿದೆ. ಹುಂಡೇಕಾರ ದಾಸಪ್ಪ ಎಂಬುವವರಿಗೆ ಜಗನ್ನಾಥದಾಸರು, ಶ್ರೀಶವಿಠ್ಠಲ ಎಂಬ ಅಂಕಿತವನ್ನು ಕೊಟ್ಟಾಗ ರಚಿಸಿದ ಪದವಿದು. ಶ್ರೀ ಶ್ರೀಶ ವಿಠ್ಠಲರು ಹಲವು ಕೃತಿಗಳನ್ನು ರಚಿಸಿ ದಾಸ ಸಾಹಿತ್ಯ ವಲಯದಲ್ಲಿ ಮಾನ್ಯರಾಗಿದ್ದಾರೆ.

೧೮೦

ಭಗವಂತನಿಗೆ ಅಮಂಗಳವೆಂಬುದು ಯಾವ ಕಾಲದಲ್ಲಿಯೂ ಇಲ್ಲ. ಆದರೆ ಭಕ್ತರಿಗೆ ಮಂಗಳ ಉಂಟಾಗಬೇಕಾದರೆ ಅವರು ಭಗವಂತನಿಗೆ ಮಂಗಳವನ್ನು ಹಾಡಬೇಕೆಂದು ಶಾಸ್ತ್ರವಿದೆ. ಆದ್ದರಿಂದ ಎಲ್ಲ ಹರಿದಾಸರೂ ಭಗವಂತನಿಗೆ ಮಂಗಳವನ್ನು ಹಾಡಿದ್ದಾರೆ. ಶ್ರೀಹರಿಯು ಎಲ್ಲ ದೇವಾನುದೇವತೆಯರಿಗಿಂತಲೂ ಶ್ರೇಷ್ಠವೆಂಬುದನ್ನು ಮನವರಿಕೆ ಮಾಡಿಕೊಡಲು ಅಗತ್ಯವಾದ ವಿಚಾರಗಳನ್ನು ಈ ಕೀರ್ತನೆಯಲ್ಲಿ ಹೇಳಿದ್ದಾರೆ.

೧೮೧

ಹಸೆಗೆ ಕರೆಯುವ ಪದವಿದು. ಮಂಗಳ ಕಾರ್ಯವನ್ನು ಮಾಡಲು ರಂಗೋಲಿಯನ್ನು ಹಾಕಿ ಅದರ ಮೇಲೆ ಮಣೆಯಿಟ್ಟು ಮಣೆಯ ಮೇಲೆ ಅಲಂಕೃತ ವಸ್ತ್ರವನ್ನು ಹೊದಿಸಿದ ಪೀಠಕ್ಕೆ ಹಸೆಮಣೆ ಎನ್ನುತ್ತಾರೆ. ಶ್ರೀ ಹರಿಯ ವಿಶೇಷ ಗುಣ ಶಕ್ತಿಗಳನ್ನು ವಿವರಿಸುತ್ತಾ ದಾಸರು ಭಗವಂತನನ್ನು ಹಸೆಗೆ ಆಹ್ವಾನಿಸಿದ್ದಾರೆ.

೧೮೨

ಈ ಕೀರ್ತನೆಯೂ ಭಗವಂತನನ್ನು ಹಸೆಗೆ ಆಹ್ವಾನಿಸುವ ಪದವೇ ಆಗಿದೆ. ಶ್ರೀ ಹರಿಯು ತಾಳಿದ ದಶಾವತಾರಗಳನ್ನು ಬಿಡಿಬಿಡಿಯಾಗಿ ಹೇಳಿ ಹೊಗಳಿ ಭಗವಂತನನ್ನು ಹಸೆಗೆ ಬರಬೇಕೆಂದು ದಾಸರು ಹೇಳಿದ್ದಾರೆ.

೧೮೩

ಈ ಮಂಗಳ ಪದವು ಗುರುಗಳಾದ ವಸುಧೀಂದ್ರರನ್ನು ಕುರಿತು ರಚಿಸಲಾಗಿದೆ. ವಸುಧೀಂದ್ರರು ವಾದೀಂದ್ರರ ಶಿಷ್ಯರಾಗಿದ್ದರು. ವಸುಧೀಂದ್ರರ ಶಿಷ್ಯರು ವರದೇಂದ್ರರೆಂದೂ, ಇವರು ರಾಘವೇಂದ್ರರ ಯತಿ ಪರಂಪರೆಯಲ್ಲಿ ಬಂದವರೆಂದೂ ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

೧೮೪

ಈ ಮಂಗಳ ಪದವು ವಾಯುದೇವರನ್ನು ಕುರಿತದ್ದಾಗಿದೆ. ಹನುಮ, ಭೀಮ, ಮಧ್ವರಾಗಿ ಭಾರತೀಶರು ಅವತರಿಸಿದ ಕಥೆಯನ್ನು ದಾಸರು ಉಲ್ಲೇಖಿಸಿ ವಾಯುದೇವರಿಗೆ ಮಂಗಳವನ್ನು ಹಾಡಿದ್ದಾರೆ.

೧. **ಮೂರೇಳು ಮತಗಳ ಮುರಿದವಗೆ** : ಮೂರೇಳು ಮತಗಳು ಎಂದರೆ ಇಪ್ಪತ್ತೊಂದು ಮತಗಳು ಎಂದರ್ಥ. ಮಧ್ವಾಚಾರ್ಯರು ತಮಗಿಂತ ಪೂರ್ವದಲ್ಲಿ ವೇದೋಪನಿಷತ್ತುಗಳ ಅರ್ಥವನ್ನು ನಿರ್ಣೈಸಿದ ಇಪ್ಪತ್ತೊಂದು ಮತ ಸಂಸ್ಥಾಪಕರ ವ್ಯಾಖ್ಯಾನಗಳು ಸಮರ್ಪಕವಲ್ಲವೆಂಬುದನ್ನು ಸಾಧಿಸಿ ದ್ವೈತ ಸಿದ್ಧಾಂತವನ್ನು ಸ್ಥಾಪಿಸಿದರೆಂದು ಈ ವಾಕ್ಯದ ಅರ್ಥವಾಗಿದೆ.

ಈ ಇಪ್ಪತ್ತೊಂದು ದಾರ್ಶನಿಕರ ಹೆಸರುಗಳು ಹೀಗಿವೆ : ಭಾರತೀ ವಿಜಯ, ಸಂವಿದಾನಂದ, ಬ್ರಹ್ಮ ಘೋಷ, ಶತಾನಂದ, ಉದ್ವರ್ತ, ವಿಜಯ, ರುದ್ರಭಟ್ಟ, ವಾಮನ, ಯಾದವ ಪ್ರಕಾಶ ರಾಮಾನುಜಾಚಾರ್ಯ, ಭರ್ತೃ ಪ್ರಪಂಚ, ಬ್ರಹ್ಮದತ್ತ, ಭಾಸ್ಕರ, ಪಿಶಾಚ, ವೃತ್ತಿಕಾರಕ, ವಿಜಯ ಭಟ್ಟ, ವಿಷ್ಣು ಕ್ರಾಂತ, ಮಾಧವ ದಾಸ, ಶಂಕರಾಚಾರ್ಯ.

೧೮೫

ಶ್ರೀ ಹರಿಯನ್ನು ಕುರಿತ ಮಂಗಳ ಪದವಿದು. ಐದು ನುಡಿಗಳುಳ್ಳ ಈ ಕೀರ್ತನೆಯಲ್ಲಿ ಹರಿಸರ್ವೋತ್ತಮತ್ವವನ್ನು ಪ್ರತಿಪಾದಿಸುತ್ತಾ ದಾಸರು ಭಗವಂತನಿಗೆ ಮಂಗಳ ಹಾಡಿದ್ದಾರೆ.

೧. **ಶ್ವೇತವಾಹನ ಸಾರಥಿ** : ಶ್ವೇತವಾಹನ ಎಂಬುದು ಅರ್ಜುನನಿಗೆ ಅನ್ವಯವಾಗುತ್ತದೆ. ಇವನ ಸಾರಥಿಯಾದವನು ಶ್ರೀ ಕೃಷ್ಣ

೨. **ಇಂಗಡಲಾತ್ಮಜೆ** : ಇನಿದಾದ ಕಡಲು ಇಂಗಡಲು ಎನಿಸುತ್ತದೆ. ಕ್ಷೀರ ಸಮುದ್ರವನ್ನು ಇಂಗಡಲು ಎನ್ನುತ್ತಾರೆ. ಈ ಸಮುದ್ರವನ್ನು ಕಡೆದಾಗ

ಹುಟ್ಟಿದವಳು ಲಕ್ಷ್ಮಿ. ಆದ್ದರಿಂದ ದಾಸರು ಲಕ್ಷ್ಮಿಯನ್ನು ಇಂಗಡಲಾತ್ಮಜೆ ಎಂದಿದ್ದಾರೆ.

೧೮೬

ಮಂತ್ರಾಲಯದ ಶ್ರೀ ರಾಘವೇಂದ್ರರನ್ನು ಕುರಿತ ಮಂಗಳ ಪದವಿದಾಗಿದೆ. ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ಕುರಿತು ಅವರ ನಂತರ ಉದಿಸಿದ ಪ್ರತಿಯೊಬ್ಬ ಹರಿದಾಸರು ಹತ್ತಾರು ಸ್ತೋತ್ರಗಳನ್ನು ರಚಿಸಿರುವರು.

೧೮೭

ಈ ಕೀರ್ತನೆಯು ಶ್ರೀ ಹರಿಗೆ ಮಂಗಳವನ್ನು ಕೋರುವ ಪದವಾಗಿದೆ. ದಶಾವತಾರಗಳನ್ನೆತ್ತಿದ ಶ್ರೀ ಹರಿಗೆ ಮಂಗಳವನ್ನು ದಾಸರು ಹಾಡಿದ್ದಾರೆ.

೧೮೮

–ಈ ಕೀರ್ತನೆಯು ಮುಖ್ಯಪ್ರಾಣ ದೇವರಿಗೆ ಮಂಗಳವನ್ನು ಕೋರುವ ಪದವಾಗಿದೆ. ಹನುಮ, ಭೀಮ, ಮಧ್ವರು ಮುಖ್ಯ ಪ್ರಾಣನ ಮೂರು ಅವತಾರಗಳೆಂಬುದನ್ನು ದಾಸರು ಸ್ಪಷ್ಟಪಡಿಸಿ ಮಂಗಳವನ್ನು ಹಾಡಿದ್ದಾರೆ.

೧೮೯

ಜಾನಪದ ಧಾಟಿಯಲ್ಲಿ ಬರೆದಿರುವ 'ಸುವ್ವಿ' ಪದವಿದು. ದಾಸರು ತೀರಾ ಸಾಮಾನ್ಯರಲ್ಲಿ ಜನಜನಿತವಾದ ಜಾನಪದೀಯ ಮಟ್ಟುಗಳಲ್ಲಿ ಕೀರ್ತನೆಗಳನ್ನು ರಚಿಸಿರುವುದು ಅವರ ಜನತಾದೃಷ್ಟಿಗೆ ಸಾಕ್ಷಿಯಾಗಿದೆ. ದಶಾವತಾರಗಳ ಕಥೆಗಳನ್ನು ದಾಸರು ಇಲ್ಲಿ ಜ್ಞಾಪಿಸಿ ಮಂಗಳವನ್ನು ಹಾಡಿದ್ದಾರೆ.

೧೯೦

ಶ್ರೀಹರಿಯನ್ನು ಕುರಿತು ಹಸೆಗೆ ಬರಬೇಕೆಂದು ಕರೆಯುವ ಮಂಗಳ ಪದವಿದು. ಭಗವಂತನ ರೂಪ ಶಕ್ತಿ ಸಾಮರ್ಥ್ಯಗಳ ವರ್ಣನೆ ಇದರಲ್ಲಿದೆ.

೧೯೧

ಕೃಷ್ಣನು ಬಾಲ್ಯದಲ್ಲಿ ಕೊಳಲನೂದಿ ಗೋಪಾಲಕರಿಗೂ, ಗೋವುಗಳಿಗೂ ಆನಂದವನ್ನುಂಟು ಮಾಡುತ್ತಿದ್ದನೆಂದು ಭಾಗವತದಲ್ಲಿ ಕಥೆಯುಂಟು. ಭಗವಂತನ

ಕೈಯಲ್ಲಿರುವ ಪುಣ್ಯವನ್ನು ಕೇಳಲು ಪಡೆದ ಮಿತ್ತ ಅದರ ಬದುಕು ಸಾರ್ಥಕ ವಾಯಿತೆಂದು ಹೊಗಳುವ, ಕೀರ್ತನೆ ಇದಾಗಿರುವುದರಿಂದ ಇದನ್ನು 'ಕೊಳಲಸ್ತುತಿ' ಎನ್ನಬಹುದು.

೧೯೨

ಜಗನ್ನಾಥದಾಸರು ಸಂಸ್ಕೃತದ ತಂತ್ರಸಾರದ ಸಾರವನ್ನು ಕನ್ನಡದಲ್ಲಿ ಸಂಗ್ರಹಿಸಿ ಬರೆದಿರುವ ಕೀರ್ತನೆ ಇದು. ಮೈಸೂರು ವಿಶ್ವವಿದ್ಯಾಲಯದ ಪ್ರಕಟನೆಯಲ್ಲಿ ಈ ಕೃತಿ ಸೇರಿಲ್ಲವೆಂಬುದು ಗಮನಾರ್ಹ. ಇಪ್ಪತ್ತೊಂಬತ್ತು ನುಡಿಗಳುಳ್ಳ ಈ ಪದ್ಯದಲ್ಲಿ ಬ್ರಹ್ಮದೇವರು ವಿಷ್ಣುವಿನ ಬಳಿ ಬಂದು ಸರ್ವೋತ್ತಮನಾರು? ಏಕೆ? ಅವನ ಗುಣ ವಿಶೇಷಗಳೇನು? ಎಂದು ಕೇಳಿದಾಗ ಶ್ರೀಹರಿಯು ಉತ್ತರಿಸಿದ ಪರಿ ಇಲ್ಲಿದೆ. ಓಂಕಾರದಲ್ಲಿರುವ ಭಗವದ್ರೂಪಗಳ ವಿವರ, ಅದರ ಮಹತ್ವ, ಐವತ್ತು ಅಕ್ಷರಗಳಲ್ಲಿರುವ ಭಗವದ್ರೂಪಚಿಂತನೆ, ಗಾಯಿತ್ರಿ ಮಂತ್ರ, ನಾರಾಯಣ ಅಷ್ಟಾಕ್ಷರಿಮಂತ್ರದ ಮಹತ್ವವನ್ನು ಕೀರ್ತನೆಯಲ್ಲಿ ವಿವರಿಸಲಾಗಿದೆ. ರಾಮಾಯಣಗಳು ಪ್ರಪಂಚದಲ್ಲಿ ಅತಂಖ್ಯಾತವಾಗಿದೆ ಎಂಬುದನ್ನು ದಾಸರು ಉಲ್ಲೇಖಿಸಿದ್ದಾರೆ.

೧೯೩

ಮೋಕ್ಷ ಲೋಕಗಳಲ್ಲಿ ಒಂದಾದ ವೈಕುಂಠದ ವರ್ಣನೆ ಈ ಕೀರ್ತನೆಯ ವಸ್ತುವಾಗಿದೆ. ವೈಕುಂಠ ಲೋಕಕ್ಕೆ ಚಿನ್ನದ ಕೋಟೆಯೇ ಆವರಣವಾಗಿರುವುದೆಂದೂ, ಅಲ್ಲಿರುವ ಬೀದಿಗಳು ತುಂಬ ಅಲಂಕಾರ ಮಯವಾಗಿರುವುದೆಂದೂ, ಮೂರುಕೋಟಿ ಗಂಧರ್ವ ಗಾಯಕರು ಶ್ರೀಹರಿಯನ್ನು ಸ್ತುತಿ ಸುತ್ತಿರುವರೆಂದೂ ದಾಸರು ಹೇಳಿದ್ದಾರೆ.

೧೭೭

ಜಗನ್ನಾಥದಾಸರು ರಾಮಾಯಣ ಸಾರವನ್ನು ಈ ಕೀರ್ತನೆಯಲ್ಲಿ ಸಂಗ್ರಹಿಸಿದ್ದಾರೆ. ಕೇವಲ ಹದಿಮೂರು ನುಡಿಗಳಲ್ಲಿ, ಇಪ್ಪತ್ತಾರು ಸಾಲುಗಳಲ್ಲಿ ರಾಮಾಯಣದ ಮುಖ್ಯ ಪ್ರಸಂಗಗಳೆಲ್ಲವನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

೧೯೪

ಶ್ರೀಪಾದರಾಜರು 'ಮಧ್ವನಾಮ' ಎಂಬ ಕೃತಿಯನ್ನು ರಚಿಸಿದ್ದಾರೆ. ಈ ಮಧ್ವನಾಮದಲ್ಲಿ ಹನುಮ ಭೀಮ ಮಧ್ವಾವತಾರದ ಸಾಧನೆಗಳನ್ನು, ವಾಯುದೇವರ ಮಹಿಮಾತಿಶಯಗಳನ್ನು ವಿವರಿಸಿದ್ದಾರೆ. ಇದು ತುಂಬ ಮಹತ್ವವನ್ನುಳ್ಳ ಕ್ಷಿಪ್ರಫಲ ಕಾರಿಯಾಗುವ ಸ್ತೋತ್ರವೆಂದು ಹರಿದಾಸ ವಲಯದಲ್ಲಿ ಪ್ರಸಿದ್ಧವಾಗಿದೆ. ಜಗನ್ನಾಥದಾಸರು ಈ ಮಧ್ವನಾಮವನ್ನು ಪಠಿಸುವುದರಿಂದ ದೊರಕುವ ಫಲಗಳನ್ನು ಈ ಕೀರ್ತನೆಯಲ್ಲಿ ವಿವರಿಸಿದ್ದಾರೆ. ಒಬ್ಬ ಹರಿದಾಸರು

ಬರೆದ ಪದ್ಯಕ್ಕೆ ಮತ್ತೊಬ್ಬ ಹರಿದಾಸರು ಫಲಸ್ತುತಿ ಬರೆದಿರುವವುದು ಈ ಸಾಹಿತ್ಯವಲಯದಲ್ಲಿ ತುಂಬ ವಿರಳವಾದುದಾಗಿದೆ.

೧೯೫

ಜಗನ್ನಾಥದಾಸರು ಎರಡೇ ಎರಡು ಉಗಾಭೋಗಗಳನ್ನು ಬರೆದಿದ್ದಾರೆ. ಹರಿದಾಸರು ಮುಖ್ಯವಾಗಿ ಕೀರ್ತನೆ, ಸುಳಾದಿ, ಉಗಾಭೋಗ ಎಂಬ ಮೂರು ಬಗೆಯಾದ ರಚನೆಗಳನ್ನು ರಚಿಸಿದ್ದಾರೆ. ಉಗಾಭೋಗಗಳಿಗೆ ತಾಳ, ರಾಗಗಳ ನಿರ್ದೇಶನವಿರುವುದಿಲ್ಲ. ಉದ್ಗಾಹ, ಮೇಲಾಪಕ, ಅಂತರ, ಧ್ರುವ ಮತ್ತು ಆಭೋಗ ಎಂಬ ಐದು ಧಾತುಗಳು ಸೇರಿರುವ ಸಂಗೀತ ಬದ್ಧರಚನೆಗೆ ಉಗಾಭೋಗ ಎನ್ನುತ್ತಾರೆ. ಭಗವಂತನನ್ನು 'ಪಾಪಲೇಪವಿಲ್ಲದವನೆಂದು ಭಜಿಸಿದರೆ ಭಜಿಸಿದವರ ಪಾಪನಾಶವಾಗುವುದೆಂದು ದಾಸರು ಹೇಳಿದ್ದಾರೆ.

೧೯೬

ಇದು ಜಗನ್ನಾಥದಾಸರು ರಚಿಸಿರುವ ಮತ್ತೊಂದು ಉಗಾಭೋಗ. ಜನರು ಗೌರವಿಸಲಿ, ಗೌರವಿಸದಿರಲಿ ಅಥವಾ ಅವಮಾನವನ್ನೇ ಮಾಡಲಿ. ಜಗನ್ನಾಥವಿಠಲನ ಕರುಣೆಯೊಂದಿದ್ದರೆ ಸಾಕು; ಲೋಕದ ಬದುಕಿನ ಪರಿಸ್ಥಿತಿಯ ಬಗ್ಗೆ ನಿರ್ಲಕ್ಷ್ಯ ತಾಳಬೇಕೆಂದು ಇಲ್ಲಿ ಹೇಳಿದ್ದಾರೆ.

೧೯೭

ಜಗನ್ನಾಥದಾಸರು ರಚಿಸಿರುವ ಎರಡು ಉಗಾಭೋಗಗಳು ದೊರೆತಿರುವುದಾದರೆ ಸುಳಾದಿಗಳು ಮೂರು ದೊರೆತಿವೆ. ಮೊದಲನೆಯದಾದ ಈ ಸುಳಾದಿಯು ನರಸಿಂಹ ದೇವರನ್ನು ಕುರಿತು ಬರೆದಿರುವ ದೀರ್ಘಸುಳಾದಿಯಾಗಿದೆ. ಅತಿ ಬಡವನೊಬ್ಬರು ಜಗನ್ನಾಥದಾಸರ ಬಳಿ ಬಂದು ತನ್ನ ಬಡತನವನ್ನು ನಿವಾರಿಸಬೇಕೆಂದು. ಕೇಳಿ ಕೊಂಡಾಗ ದಾಸರು ಅವನಲ್ಲಿದ್ದ ಏಕೈಕ ತಂಬಿಗೆಯನ್ನು ಮಾರಿಸಿ ಬಂದ ಹಣದಲ್ಲಿ ಪಾನಕವನ್ನು ಮಾಡಿಸಿ ದಾನ ಮಾಡಿಸಿ ಈ ಸುಳಾದಿಯನ್ನು ರಚಿಸಿ ನಲವತ್ತೆಂಟು ದಿನಗಳ ಕಾಲ ಜಪಿಸಲು ಹೇಳಿದರಂತೆ. ಅದರಂತೆ ಬಡವನು ವರ್ತಿಸಿದಾಗ ಅವನ ಬಡತನ ಸಂಪೂರ್ಣವಾಗಿ ನೀಗಿತೆಂಬ ಐತಿಹ್ಯವಿದೆ.

೧೯೮

ಸುಳಾದಿಗಳು ವಚನಗಳಂತೆ ಪಾದಸಂಖ್ಯಾನಿಯಮವಿಲ್ಲದೆ ಮುಂದುವರಿಯುವ ದೀರ್ಘ ರಚನೆಗಳು. ಸಾಮಾನ್ಯವಾಗಿ ಧ್ರುವ, ಮಟ್ಟ, ತ್ರಿವಿಡಿ, ಆದಿ, ಝಂಪೆ, ರೂಪಕ

ತಾಳಗಳಲ್ಲಿ ಈ ರಚನೆಗಳಿರುತ್ತವೆ. ತಾಳ ಬೇರೆಯಾದರೂ ರಾಗ ಒಂದೇ ಆಗಿರುತ್ತದೆ. ಆದರೆ ಈ ರಾಗಗಳ ನಿರ್ದೇಶನದಲ್ಲಿ. ವಿವಿಧ ಹಸ್ತ ಪ್ರತಿಗಳಲ್ಲಿ ಏಕತೆ ಇಲ್ಲದ ನಿಮಿತ್ತ ಈ ಪ್ರಕಟನೆಯಲ್ಲಿ ರಾಗ ನಿರ್ದೇಶನ ಮಾಡಿಲ್ಲ. ಈ ಸುಳಾದಿಯಲ್ಲಿ ದಾಸರು ಭಗವಂತನನ್ನು ಅನನ್ಯವಾಗಿ ಪ್ರಾರ್ಥಿಸಿದ್ದಾರೆ.

೧೯

ಜಗನ್ನಾಥದಾಸರು ರಚಿಸಿರುವ ಮತ್ತೊಂದು ಸುಳಾದಿ ಇದು. ತಾತ್ವಿಕ ವಿಚಾರಗಳನ್ನು ತಿಳಿಸುವುದು ಈ ಸುಳಾದಿಯ ವಸ್ತುವಾಗಿದೆ. ಭಗವಂತನು ಸತ್ಯ ಸಂಕಲ್ಪ; ಅವರವರ ಕರ್ಮಗಳಿಗನುಸಾರವಾಗಿಯೇ ಅವನು ಫಲಗಳನ್ನು ಕೊಡುತ್ತಾನೆ. ಅವನನ್ನು ನಂಬಿ ಪೂಜಾದಿಗಳನ್ನು ಮಾಡಿದರೆ ಅವನ ಕೃಪೆ ಖಂಡಿತವಾಗಿ ದೊರಕುತ್ತದೆ ಎಂದು ದಾಸರು ಈ ಸುಳಾದಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

(ಆ) ತತ್ವ ಸುವಾಲಿಗಳ ಟಿಪ್ಪಣಿಗಳು

೧–೫

ಭಾರತೀಯರು ತಮ್ಮ ಬದುಕಿನಲ್ಲಿ ಯಾವುದೇ ಕೆಲಸವನ್ನಾರಂಭಿಸುವ ಮೊದಲು ವಿಘ್ನನಾಶಕನೆನಿಸಿದ ವಿನಾಯಕನ ಪ್ರಾರ್ಥನೆಯನ್ನು ಮಾಡುವುದು ಶಾಸ್ತ್ರೋಕ್ತ ಸಂಪ್ರದಾಯವಾಗಿದೆ. ದೇವರ ಪೂಜೆಯನ್ನಾರಂಭಿಸುವ ಮೊದಲು ವಿನಾಯಕನ ಪೂಜೆಯನ್ನು ಮಾಡಿ ದೇವರ ಪೂಜೆಯು ನಿರ್ವಿಘ್ನವಾಗಿ ನಡೆಯಲೆಂದು ಪ್ರಾರ್ಥಿಸುವ ರೂಢಿಯುಂಟು. ಸಾಹಿತ್ಯ ಪ್ರಪಂಚದಲ್ಲಿಯೂ ಕವಿಗಳು ಕಾವ್ಯಾರಂಭದಲ್ಲಿ ವಿನಾಯಕನನ್ನು ಪ್ರಾರ್ಥಿಸಿರುವರು. ಇದನ್ನನುಸರಿಸಿ ಜಗನ್ನಾಥದಾಸರು ತತ್ವಸುವ್ವಾಲಿಗಳೆಂಬ ಮೊದಲಲ್ಲಿ ವಿನಾಯಕನನ್ನು ಕುರಿತು ಐದು ಸುವಾಲಿಗಳನ್ನು ರಚಿಸಿದ್ದಾರೆ. ಶಂಕರ ಪಾರ್ವತಿಯರ ಪುತ್ರನಾದ ವಿನಾಯಕನಿಗೆ " ಅಂಬಿಕಾತನಯ, ಭೂತಾಂಬರಾಧಿಪ, ಕಕುಭೀಶ, ಗಜವಕ್ತ್ರ, ಷಣ್ಮುಖಾನುಜ" ಇತ್ಯಾದಿ ಹೆಸರುಗಳುಂಟೆಂದು ದಾಸರು ಸೂಚಿಸಿದ್ದಾರೆ. ದಾಸರು ಅಜ್ಞಾನವನ್ನು ಪರಿಹರಿಸಿ ಜ್ಞಾನವನ್ನು ನೀಡಬೇಕೆಂದು ವಿನಾಯಕನ್ನು ಈ ತತ್ವಸುವಾಲಿಗಳಲ್ಲಿ ಪ್ರಾರ್ಥಿಸಿದ್ದಾರೆ.

೬–೧೦

ಜಗನ್ನಾಥದಾಸರು ತಿರುಪತಿಯ ವೆಂಕಟೇಶನನ್ನು ಕುರಿತು ಒಂದು ನೂರು ಎಪ್ಪತ್ತು ತತ್ವಸುವಾಲಿಗಳನ್ನು ರಚಿಸಿದ್ದಾರೆ. ದಾಸರ ಆಳವಾದ ಭಕ್ತಿಗೆ ಇದು ಕನ್ನಡಿಯಂತಿದೆ. ಈ ಸ್ತೋತ್ರ ಪ್ರವಾಹ ಅಂತರಂಗದ ಮೇಲೆ ತುಂಬ ಪ್ರಭಾವವನ್ನು ಬೀರುವಂತಿದೆ.

೧. **ಸ್ವಾಮಿತೀರ್ಥನಿವಾಸ:** ತಿರುಪತಿಯ ಬೆಟ್ಟದ ಮೇಲೆ ವೆಂಕಟೇಶನ ದೇವಾಲಯದ ಎಡಭಾಗದ ಮೂಲೆಯಲ್ಲಿ ವರಾಹ ದೇವಾಲಯದೆದುರು ಇರುವ ವಿಶಾಲವಾದ ಸರೋವರಕ್ಕೆ ಸ್ವಾಮಿ ಪುಷ್ಕರಿಣಿ ಎನ್ನುತ್ತಾರೆ. ಆದ್ದರಿಂದ ದಾಸರು ಶ್ರೀನಿವಾಸನನ್ನು ಸ್ವಾಮಿತೀರ್ಥನಿವಾಸ ಎಂದು ಕರೆದಿದ್ದಾರೆ.

೨. **ದೇವಶರ್ಮನ ತುತಿಗೆ :** ಆದಿತ್ಯಪುರಾಣದಲ್ಲಿ ದೇವಶರ್ಮನ ಭಕ್ತಿಗೆ ತಿರುಪತಿಯ ಶ್ರೀನಿವಾಸನು ಬಂದು ಕೃಪೆ ತೋರಿದ ಕಥೆ ಇದೆ.

೧೧–೧೫

ಈ ಐದು ಸುವಾಲಿಗಳಲ್ಲಿ ದಾಸರು ಭಗವಂತನ ಸ್ಮರಣೆ ಸದಾಕಾಲದಲ್ಲಿ ಮಾಡುವಂತೆ ಅವಕಾಶವನ್ನು ಭಗವಂತನೇ ಕರುಣಿಸಬೇಕೆಂದು ಪ್ರಾರ್ಥಿಸಿದ್ದಾರೆ. ಭಗವನ್ನಾಮಸ್ಮರಣೆ ಇರುವ ನರಕವನ್ನು ಅನುಭವಿಸಲು ಅವರು ಸಿದ್ಧರೆಂದೂ, ಭಗವಂತನ ವಿಸ್ಮೃತಿ ಇರುವ ಸ್ವರ್ಗ ತಮಗೆ ಬೇಡವೆಂದೂ ಹೇಳಿದ್ದಾರೆ. ಹೃದಯದಲ್ಲಿ ಹರಿಯ ರೂಪ, ಬಾಯಿಯಲ್ಲಿ ನಾಮಸ್ಮರಣೆ, ಹೊಟ್ಟೆಗೆ ಭಗವಂತನಿಗೆ ಅರ್ಪಿಸಿದ ನೈವೇದ್ಯ, ತಲೆಯಲ್ಲಿ ಹರಿಗರ್ಪಿಸಿದ ತುಲಸಿ ಹೂವುಗಳನ್ನಿಟ್ಟು ಕೊಳ್ಳುವ ಭಾಗ್ಯವನ್ನು ಸದಾ ಕೊಡಬೇಕೆಂದು ಕೇಳಿಕೊಂಡಿದ್ದಾರೆ.

೧೯–೨೦

ತತ್ವ ಸುವಾಲಿಗಳು ತತ್ವಗರ್ಭಿತವಾದುವು. ಈ ಐದು ಸುವಾಲಿಗಳಲ್ಲಿ ಪುಣ್ಯ ಪಾಪಾದಿಗಳೆಲ್ಲವನ್ನು ಭಗವಂತನೇ ಮಾಡಿಸಿದರೂ ಇದರ ಫಲಗಳನ್ನು ಜೀವರೇ ಅನುಭವಿಸ ಬೇಕೆಂಬ ತತ್ವವನ್ನು ವಿವರಿಸಿದ್ದಾರೆ. ಆದ್ದರಿಂದ ಕುಕರ್ಮಗಳನ್ನು ತಮ್ಮಿಂದ ನಡೆಯದಂತೆ ಅನುಗ್ರಹಿಸಬೇಕೆಂದು ದಾಸರು ಶ್ರೀಹರಿಯನ್ನು ಬೇಡಿದ್ದಾರೆ. ಶ್ರೀಹರಿಯು ಬ್ರಹ್ಮಾಂಡಕ್ಕೆ ನಾಯಕನಾಗಿದ್ದರೂ ಭಕ್ತರ ಸ್ತುತಿ – ಪೂಜೆಗಳಿಗೆ ಹಿಗ್ಗಿ ಕರುಣಾ ಸಾಗರನಾಗಿ ವರ್ತಿಸುವನೆಂದು ಹೇಳಿದ್ದಾರೆ. ಸೃಷ್ಟಿ, ಸ್ಥಿತಿ, ಲಯಗಳೆಲ್ಲವನ್ನು ಶ್ರೀಹರಿಯೇ ನಡೆಸುವನೆಂದೂ, ಸೃಷ್ಟಿಲಯಗಳನ್ನು ಬ್ರಹ್ಮ ಮತ್ತು ಶಿವರು ಮಾಡುವರಾದರೂ ಅವರಿಗೆ ಶ್ರೀಹರಿಯೇ ಶಕ್ತಿ ಪ್ರಧಾನನೆಂಬ ತತ್ವವನ್ನು ಇಲ್ಲಿ ಸೂಚಿಸಿದ್ದಾರೆ.

೨೧–೨೫

ಭಗವಂತನ ಲೀಲಾ ವಿನೋದ ಪ್ರಸಂಗಗಳಿಗೆ ಲೆಕ್ಕವೇ ಇಲ್ಲ. ಆ ಕಥೆಗಳನ್ನು ಕೇಳುವುದರಲ್ಲಿ ಸದಾ ಆಸಕ್ತಿಯನ್ನುಂಟು ಮಾಡಿ ಹರಿಕಥಾಶ್ರವಣದಿಂದ ಶ್ರವಣ

ಸುಖವನ್ನನುಭವಿಸುವಂತಹ ಮನಸ್ಸನ್ನು ಕೊಡಬೇಕೆಂದು ದಾಸರು ಕೇಳಿಕೊಂಡಿದ್ದಾರೆ. ಜೊತೆಗೆ ಕೇವಲ ಮೂರೇ ಸಾಲುಗಳಲ್ಲಿ ದಶಾವತಾರಗಳನ್ನು ನೆನಪಿಸಿಕೊಂಡಿದ್ದಾರೆ ಮತ್ತು ವಿಶ್ವ, ತೈಜಸ, ಪ್ರಾಜ್ಞ, ತುರ್ಯ ಮೊದಲಾದ ರೂಪಗಳಿಗೆ ಜಯ ಜಯಕಾರ ಮಾಡಿದ್ದಾರೆ.

೨೬–೩೦

ಭಗವಂತನಿಗೆ ಮಂಗಳವನ್ನು ಹೇಳಿದರೆ ಭಕ್ತರಿಗೆ ಮಂಗಳವೂ, ಭಗವಂತನಿಗೆ ಜಯಕಾರ ಹೇಳಿದರೆ ಭಕ್ತರಿಗೆ ಜಯವೂ ಉಂಟಾಗುವುದೆಂದು ಶಾಸ್ತ್ರದ ಅಭಿಪ್ರಾಯವಾಗಿದೆ. ಭಗವಂತನ ಗುಣ ಶಕ್ತಿಗಳನ್ನು ಹೊಗಳುವುದರಿಂದ ಭಕ್ತರು ಶಕ್ತರೂ, ಗುಣವಂತರಾಗುವರು. ಅದ್ದರಿಂದ ದಾಸರು ಭಗವಂತನು ವಿಶೇಷ ರೂಪಗಳಿಂದ ನಡೆಸುವ ಕ್ರೀಡೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವನಿಗೆ ಈ ಸುವಾಲಿಗಳಲ್ಲಿ ಜಯಕಾರ ಹೇಳಿದ್ದಾರೆ.

೩೧–೩೫

ತಿರುಪತಿಯ ಶ್ರೀನಿವಾಸನನ್ನು ಕುರಿತ ಈ ಸ್ತೋತ್ರದಲ್ಲಿ ಭಗವಂತನ ಭಕ್ತ ವಾತ್ಸಲ್ಯ ಗುಣವನ್ನು ದೃಷ್ಟಾಂತಪೂರ್ವಕ ದಾಸರು ವಿವರಿಸಿದ್ದಾರೆ.

೧. **ಒಪ್ಪಿಡಿ ಅವಲಕ್ಕಿಗೊಪ್ಪಿಕೊಂಡು** : ಕುಚೇಲನ ಹೆಂಡತಿಯು ಶ್ರೀಕೃಷ್ಣನಿಗಾಗಿ ಕಳುಹಿಸಿದ ಒಂದು ಹಿಡಿಯವಲಕ್ಕಿಯನ್ನು ಸ್ವೀಕರಿಸಿ ಕುಚೇಲನ ಕುಟುಂಬಕ್ಕೆ ಅತುಲೈಶ್ವರ್ಯವನ್ನು ಕೊಟ್ಟವನು ಶ್ರೀಕೃಷ್ಣ. ಇದು ಶ್ರೀಹರಿಯ ವಿಶೇಷ ಕಾರುಣ್ಯ ಗುಣವನ್ನು ಮನವರಿಕೆ ಮಾಡಿಕೊಡುವುದೆಂದು ದಾಸರು ಹೇಳಿದ್ದಾರೆ.

೨. **ಕಚ್ಚಿ ಬೈದೊದ್ದ ಭಕತರು:** ಶಬರಿಯು ಶ್ರೀರಾಮನಿಗೆ ಅತ್ಯಂತ ರುಚಿಕರವಾದ ಹಣ್ಣುಗಳನ್ನು ಕೊಡಬೇಕೆಂದು ಪ್ರತಿಯೊಂದು ಮರದಲ್ಲಿ ಬಿಟ್ಟ ಹಣ್ಣುಗಳನ್ನು ತಿಂದು ರುಚಿ ಇದ್ದ ಹಣ್ಣುಗಳನ್ನು ಮಾತ್ರ ರಾಮನಿಗೆ ಮೀಸಲಿಡುತ್ತಿದ್ದಳು ಆ ಫಲವನ್ನು ರಾಮನು ಸ್ವೀಕರಿಸಿದನು.

೩. **ಬೈದಭಕುತನು ಶಿಶುಪಾಲ** : ಶಿಶುಪಾಲನಲ್ಲಿ ಜೀವದ್ವಯಾವೇಶವಿದ್ದಿತು. ವೈಕುಂಠದ ದ್ವಾರ ಪಾಲಕನೇ ಶಾಪ ನಿಮಿತ್ತ ಶಿಶುಪಾಲನಲ್ಲಿ ಸೇರಿ ಕೊಂಡಿದ್ದನು. ಇವನು ರಾಜಸೂಯ ಯಾಗದಲ್ಲಿ ಕೃಷ್ಣನನ್ನು ಬೈದು

ಸುದರ್ಶನ ಚಕ್ರದಿಂದ ಹತನಾದನು. ಆದರೂ ದ್ವಾರ ಪಾಲಕನಿಗೆ ಮೋಕ್ಷ ದೊರಕಿತು.

೪. **ಒದ್ದ ಭಕ್ತ ಭೃಗುಮಹರ್ಷಿ** : ಹರಿಹರ ಬ್ರಹ್ಮಾದಿಗಳಲಿ ಯಾರು ಶ್ರೇಷ್ಠರೆಂಬುದನ್ನು ಪರೀಕ್ಷಿಸಲು ಭೃಗುವು ವಿಷ್ಣುವಿನ ಬಳಿಗೆ ಹೋಗಿ ಅವನು ಸರಿಯಾಗಿ ತನ್ನನ್ನು ಆದರಿಸಲಿಲ್ಲವೆಂದು ಕೋಪಿಸಿಕೊಂಡು ವಿಷ್ಣುವಿನ ಎದೆಗೆ ಒದ್ದನಂತೆ! ಆದರೆ ವಿಷ್ಣುವು ಭೃಗುವಿನ ಮೇಲೆ ಕೋಪಿಸದೆ ತನ್ನ ವಜ್ರ ಸದೃಶವಾದ ಎದೆಗೆ ಒದ್ದ ನಿಮಿತ್ತ ಭೃಗುವಿನ ಕಾಲಿಗೆ ನೋವಾಗಿರಬೇಕೆಂದು ಭಾವಿಸಿ ಭೃಗುವಿನ ಪಾದ ಪೂಜೆಯನ್ನು ಮಾಡಿದನು. ಭಕ್ತರ ಅಪರಾಧಗಳನ್ನು ಭಗವಂತನು ಉದಾಸೀನ ಮಾಡಿ ಕೃಪೆ ಮಾಡುವನೆಂಬುದಕ್ಕೆ ದಾಸರು ಈ ಮೂರು ದೃಷ್ಟಾಂತಗಳನ್ನು ಕೊಟ್ಟಿದ್ದಾರೆ.

೩೬–೪೦

ಪರಮಾತ್ಮನಲ್ಲಿ ಪರಮಾವಧಿ ಭಕ್ತಿಯನ್ನು ಹೊಂದುವುದೆಂದರೆ ಅವನನ್ನೇ ತಾಯಿ, ತಂದೆ, ಬಂಧು, ಬಳಗವೆಂದು ಭಾವಿಸುವುದು ; ನೈಚ್ಯಾನುಸಂಧಾನವನ್ನು ಹೊಂದಿ ಭಗವಂತನಲ್ಲಿ ಅನನ್ಯ ಶರಣಾಗತನಾಗಿ ಅವನ ದರ್ಶನಕ್ಕಾಗಿ ಒಂದೇ ಸಮನೆ ಪ್ರಾರ್ಥಿಸುವುದು ನಿಜವಾದ ಭಕ್ತನ ಲಕ್ಷಣವೆನಿಸುವುದೆಂಬುದನ್ನು ದಾಸರು ಈ ಸುವಾಲಿಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಭಗವಂತನನ್ನು ಸದಾ ಕಾಲ ಸ್ಮರಣೆ ಮಾಡುವವನೇ ಹಿರಿಯ ಭಕ್ತನೆನಿಸಿಕೊಳ್ಳುವನೆಂದು ದಾಸರು ಹೇಳಿದ್ದಾರೆ.

೪೧–೪೫

ಭಗವಂತನ ಸಂಕಲ್ಪದಂತೆ ಎಲ್ಲವೂ ನಡೆಯುವುದೆಂದು ದೃಢವಾಗಿ ತಿಳಿಯುವುದೇ ಜ್ಞಾನಿಯ ಲಕ್ಷಣವಾಗುತ್ತದೆ. ಜನರಿಂದ ಉಂಟಾಗುವ ಹೊಗಳಿಕೆ ಮತ್ತು ತೆಗಳಿಕೆಗಳು ಭಗವಂತನ ಸಂಕಲ್ಪವೆಂದು ಭಾವಿಸಿ ನಿರ್ಲಿಪ್ತವಾಗಿರಬೇಕೆಂದು ದಾಸರು ತಿಳಿಸಿ ಜ್ಞಾನ ಸಂಪಾದನೆಯೇ ಪುಣ್ಯವೆಂದೂ, ಜ್ಞಾನ ಸಂಪಾದನೆ ಮಾಡದಿರುವುದೇ ಪಾಪವೆಂದು ದಾಸರು ಹೇಳಿದ್ದಾರೆ.

೪೬–೫೦

ಎಲ್ಲವೂ ಶ್ರೀಹರಿಯಿಂದಲೇ ನಡೆಯುವುದೆಂದು ತಿಳಿದ ದಾಸರು ತಮ್ಮಿಂದಾದ ಅಕೃತ್ಯಗಳು ಭಗವಂತನ ಸಂಕಲ್ಪದಂತೆ ನೆರವೇರಿತೆಂದು ಭಾವಿಸಿರುವುದನ್ನು ಈ ಸುವಾಲಿಗಳಲ್ಲಿ ಕಾಣುತ್ತೇವೆ. ಎಲ್ಲ ನಡೆ ನುಡಿಗಳಿಗೆ ಭಗವಂತನೇ ಕಾರಣಕರ್ತನಾದುದರಿಂದ ತಮ್ಮದು ಯಾವ ತಪ್ಪು ಇಲ್ಲವೆಂದು ದಾಸರು ತರ್ಕ ಹೂಡಿದ್ದಾರೆ. ಅವರವರ ಕರ್ಮಕ್ಕನುಗುಣವಾಗಿ ಅವರವರಿಗೆ ಸುಖದುಃಖಗಳನ್ನುಂಟು ಮಾಡುತ್ತಾ ತಾನು ಮಾತ್ರ ಯಾವ ಬಗೆಯಾದ ದುಃಖ ಲೇಪವೂ ಇಲ್ಲದೆ ಸುಖ ಪೂರ್ಣನೂ, ಆನಂದ ಪೂರ್ಣನೂ ಆದವನು ಶ್ರೀಹರಿ ಎಂಬ ತತ್ವವನ್ನು ಇಲ್ಲಿ ಪ್ರತಿಪಾದಿಸಿದ್ದಾರೆ.

೫೧–೫೫

ಭಗವಂತನ ಗುಣಗಳನ್ನು ತಿಳಿಯುವುದು ಅಪೌರುಷೇಯವೆನಿಸಿದ ವೇದಗಳಿಂದ ಮಾತ್ರವೆಂಬುದನ್ನು ದಾಸರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಪರಮಾತ್ಮನ ಸ್ವರೂಪವೆಂದರೆ ಸುಖ ಪೂರ್ಣತ್ವ, ಆದ್ದರಿಂದ ಅವನನ್ನು ನಂಬಿದ ಭಕ್ತರಿಗೂ ಸುಖ ಉಂಟೆಂಬುದನ್ನು ದಾಸರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಮನುಷ್ಯನಿಗೆ ಬುದ್ಧಿ, ಶಕ್ತಿ ಹಾಗೂ ಕರ್ಮೇಂದ್ರಿಯಗಳಿದ್ದರೂ, ಸ್ವಾತಂತ್ರ್ಯ ಉಂಟೆನಿಸಿದರೂ ಎಲ್ಲ ಸ್ವಾತಂತ್ರ್ಯವೂ ಭಗವಂತನಿಗೆ ಮಾತ್ರವೆಂಬುದನ್ನೂ ಶ್ರೀಹರಿಯಂತಹ ವ್ಯಕ್ತಿ ಮತ್ತೊಬ್ಬರಿಲ್ಲವೆಂಬುದನ್ನೂ ದಾಸರು ಈ ಸುವಾಲಿಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

೫೬–೬೦

ಭಗವಂತನು ಎಲ್ಲಿದ್ದಾನೆಂಬ ಪ್ರಶ್ನೆಗೆ 'ಎಲ್ಲಿಲ್ಲ'? ಎಂಬ ಪ್ರಶ್ನೆಯೇ ಉತ್ತರವಾಗುತ್ತದೆ. ಸಕಲ ಜೀವರೂ ಸ್ವೀಕರಿಸುವ ಪ್ರತಿಯೊಂದು ಆಹಾರದಲ್ಲಿಯೂ ಭಗವಂತನ ಒಂದೊಂದು ಪ್ರತ್ಯೇಕ ರೂಪವಿದ್ದು ಶ್ರೀಹರಿಯು ಆ ರೂಪದಿಂದ ಆಯಾ ವಸ್ತುಗಳು ರುಚಿಯನ್ನು ಹೊಂದುವಂತೆ ಮಾಡಿ ಅದರಿಂದ ದೇಹಕ್ಕೆ ತುಷ್ಟಿ ಪುಷ್ಟಿಗಳನ್ನುಂಟು ಮಾಡುವನೆಂಬ ತತ್ವವನ್ನು ದಾಸರು ಇಲ್ಲಿ ಪ್ರತಿಪಾದಿಸಿದ್ದಾರೆ. ಆದ್ದರಿಂದ ಭಗವಂತನನ್ನು 'ಅನ್ನ' ಎನ್ನುವುದುಂಟು. ಜೀವರ ಪ್ರಾಣವನ್ನು ಕಾಪಾಡುವ ಆತ ಪ್ರಾಣ ಪಂಚಕನೆನಿಸಿಕೊಂಡಿರುವನೆಂಬ ವಿಚಾರವನ್ನು ಇಲ್ಲಿ ಪ್ರತಿಪಾದಿಸಿದ್ದಾರೆ.

೬೧-೬೫

ಮನಸ್ಸು ಜಡವಾದುದೇ. ಅದು ಕ್ರಿಯಾಶೀಲವಾಗಲು ಭಗವಂತನ ಸನ್ನಿಧಾನ ಹಾಗೂ ಪ್ರೇರಣೆಗಳು ಅತ್ಯಗತ್ಯ. ಸಂಕರ್ಷಣ ರೂಪದಿಂದ ಶ್ರೀಹರಿಯು ಮನಸ್ಸಿನಲ್ಲಿ ನೆಲೆಸಿದ್ದು ಅಲ್ಲಿ ಕರ್ಮಾನುಗುಣವಾಗಿ ಪ್ರೇರಣೆ ಮಾಡುವನೆಂಬುದನ್ನು ದಾಸರು ವಿವರಿಸಿದ್ದಾರೆ. ಈ ಜಗತ್ತಿನಲ್ಲಿ ಭಗವಂತನ ಸಂಕಲ್ಪವಿಲ್ಲದೆ ಒಂದು ಹುಲ್ಲು ಕಡ್ಡಿಯೂ ಚಲಿಸದು; ಜಗತ್ತನ್ನು ನಡೆಸುವ ಶಕ್ತಿ ಭಗವಂತನಿಗಿದ್ದ ಮೇಲೆ ಸಾಮಾನ್ಯ ಮನುಷ್ಯ ತಾನೇ ಎಲ್ಲವನ್ನು ಮಾಡುತ್ತೇನೆಂದು ಭಾವಿಸುವುದು ಅವಿವೇಕವಲ್ಲವೆ? ಅಂತಹ ಯೋಚನೆಯನ್ನು ಹೊಂದಿದವರಿಗೆ ಸದ್ಗತಿ ಪ್ರಾಪ್ತಿಯಾಗದೆಂದು ದಾಸರು ಇಲ್ಲಿ ಹೇಳಿದ್ದಾರೆ. ಸೇವಕರಲ್ಲಿದ್ದು ಸೇವೆಯನ್ನು ಸ್ವೀಕರಿಸುತ್ತಾನೆಂಬ ತತ್ವ ಪ್ರತಿಪಾದನೆ ಇಲ್ಲಿದೆ.

೬೬-೭೦

ಹರಿನಾಮ ಸ್ಮರಣೆಗಿಂತ ಉತ್ತಮವಾದ ಸಾಧನೆಯೇ ಬೇರೆ ಇಲ್ಲವೆಂಬುದನ್ನು ದಾಸರು ಹೇಳಿದ್ದಾರೆ. ಪರಮಾತ್ಮನನ್ನು ಸರ್ವಕಾಲಗಳಲ್ಲಿ ಚಿಂತಿಸುವುವವರಿಗೆ ವಿಧಿ – ನಿಷೇಧಗಳೆಂಬ ನಿಯಮವೇ ಇಲ್ಲವೆಂದು ದಾಸರು ಹೇಳಿದ್ದಾರೆ. ಕೇವಲ ನದಿಗಳಲ್ಲಿ ಸ್ನಾನ ಮಾಡಿ ಮಹಾಪುಣ್ಯ ಬಂದಿತೆಂದು ಭಾವಿಸುವುದಕ್ಕಿಂತ ಭಗವಂತನ ಚಿಂತನೆಯನ್ನು ಸದಾಕಾಲ ಮಾಡುವುದು ಶ್ರೇಷ್ಠವೆಂದು ದಾಸರು ಹೇಳಿದ್ದಾರೆ. ಮಡಿ ಮಾಡುವುದಕ್ಕಿಂತ ಶ್ರೀಹರಿಯ ಸನ್ನಿಧಾನವನ್ನು ಸಕಲ ಜಡ ಜೀವಗಳಲ್ಲಿಯೂ, ಲೋಕ ವ್ಯಾಪಾರಗಳಲ್ಲಿಯೂ ಗುರುತಿಸುವುದೇ ಹೆಚ್ಚಿನ ಸಾಧನೆ ಎಂಬುದನ್ನು ದಾಸರು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

೭೧-೭೫

ಭಗವಂತನಲ್ಲಿ ನಂಬಿಕೆ, ಶ್ರದ್ಧಾ ಪೂರ್ಣವಾದ ಪೂಜೆ, ಅನುಸಂಧಾನ ಪೂರ್ವಕವಾದ ಜೀವನವನ್ನು ಸತತವಾಗಿ ಮಾಡುವುದೇ ಶ್ರೇಷ್ಠತರವಾದ ಆಧ್ಯಾತ್ಮಿಕ ಜೀವನವೆನಿಸಿ ಕೊಳ್ಳುತ್ತದೆ. ಭಗವಂತ ಎಂದರೆ ಶ್ರೀಹರಿ ಎಂದೇ ತಿಳಿಯಬೇಕು. ಲೋಕದಲ್ಲಿ ಮನುಷ್ಯ ತನ್ನ ಎಲ್ಲ ಬೇಡಿಕೆಗಳನ್ನು ಭಗವಂತನ ಮುಂದೆಯೇ ನಿವೇದಿಸಿಕೊಳ್ಳುವುದು ಯುಕ್ತ. ಕೋಟಿ ಕೋಟಿ ಜೀವರಿಗೆ ಕ್ರಿಮಿ ಕೀಟಾದಿಗಳಿಗೆ ಅಗತ್ಯವಾದ ಆಹಾರವನ್ನು ಕಾಲಕಾಲಕ್ಕೆ ದೊರಕುವಂತಹ ಏರ್ಪಾಟು ಮಾಡಿರುವ ಶ್ರೀಹರಿಯನ್ನು ನಂಬದೆ – ಬೇಡದೆ, ಅತ್ಯಲ್ಪ ಶಕ್ತಿಯನ್ನು ಹೊಂದಿರುವ, ಸುಳ್ಳು – ಮೋಸ ಇತ್ಯಾದಿ ಅವಗುಣಗಳನ್ನು ಹೊಂದಿರುವ ಸಾಮಾನ್ಯ

ಮನುಷ್ಯನಲ್ಲಿ ನಮ್ಮ ಬೇಡಿಕೆಗಳನ್ನು ಮಂಡಿಸುವುದು ವ್ಯರ್ಥವೆಂದು ದಾಸರು ಇಲ್ಲಿ ಹೇಳಿದ್ದಾರೆ. ಭಕ್ತರನ್ನು ಭಗವಂತ ಕೈಬಿಡುವುದಿಲ್ಲವೆಂದಿದ್ದಾರೆ.

೭೬-೮೦

ಅಸ್ಪೃಶ್ಯ ರಾಶಿಯಿಂದ ಜೀವರಾಶಿಯನ್ನು ತೆಗೆದು ಜೀವರಿಗುಂಟಾಗುತ್ತಿದ್ದ ಮಹಾ ಯಾತನೆಯನ್ನು ಪರಿಹರಿಸಿ ದೇಹವನ್ನಿತ್ತು ಸಾಧನೆಯನ್ನು ಜನ್ಮ ಜನ್ಮಾಂತರಗಳಲ್ಲಿ ಮಾಡಿಸುವವನು ಶ್ರೀಹರಿ. ಇಂತಹ ಉಪಕಾರಿಯಾದ ಭಗವಂತನನ್ನು ಉದಾಸೀನ ಮಾಡುವುದು ಸರಿಯಲ್ಲವೆಂದು ದಾಸರು ಇಲ್ಲಿ ಸೂಚಿಸಿದ್ದಾರೆ. ಭಗವಂತನು ಲಕ್ಷ್ಮೀಪತಿ ಎನಿಸಿಕೊಂಡು ಸಕಲ ಸೌಭಾಗ್ಯಗಳನ್ನು ಸಕಲ ಕಾಲಗಳಲ್ಲಿಯೂ ಅನುಭವಿಸುವವನಾಗಿರು ವನಾದರೆ ಜೀವರು ಮಂದ ಭಾಗ್ಯರೆನಿಸಿ ಕೊಂಡಿದ್ದಾರೆಂದು ಹೇಳುವುದರ ಮೂಲಕ ದಾಸರು ಭಗವಂತನಿಗೂ ಭಕ್ತರಿಗೂ ಇರುವ ವ್ಯತ್ಯಾಸವೊಂದನ್ನು ಸ್ಪಷ್ಟಪಡಿಸಿದ್ದಾರೆ.

೮೧-೮೫

ಭಗವಂತನು ಅನಾದ್ಯನಂತ ಕಾಲದಿಂದ ಸಕಲ ದುಃಖಗಳಿಂದ ಬಿಡುಗಡೆಯನ್ನು ಹೊಂದಿದ್ದಾನೆ. ಜೀವರಾದರೋ ಮೋಕ್ಷ ಲೋಕವನ್ನು ಪ್ರವೇಶ ಮಾಡುವ ತನಕ ಒಂದಲ್ಲ ಒಂದು ಬಗೆಯ ದುಃಖವನ್ನನುವಿಸುತ್ತಲೇ ಇರುತ್ತಾರೆ. ಮೂರು ಲೋಕಗಳನ್ನು ವ್ಯಾಪಿಸಿಕೊಳ್ಳ ಬಲ್ಲ ಬೃಹತ್ ರೂಪ ಅವನದಾದರೆ ಜೀವಿಯದು ಅಣುರೂಪವಾಗಿರುತ್ತದೆ. ಇಂತಹ ಭಗವಂತನಿಗೆ ಭೂಮಂಡಲವೇ ಪೀಠ; ಆಕಾಶವೇ ಛತ್ರಿ; ಸೂರ್ಯಚಂದ್ರರೇ ದೀಪ; ನಕ್ಷತ್ರ ಸಮೂಹವೇ ಉಪದೀಪ; ಪಾತಾಳವೇ ಪಾದುಕೆ; ಎಂಬ ಅನುಸಂಧಾನದ ಪೂಜೆಯೇ ಉತ್ಕೃಷ್ಟವಾದುದೆಂದು ದಾಸರು ಹೇಳಿದ್ದಾರೆ.

೮೬-೯೦

ಅನುಸಂಧಾನ ಕ್ರಮದ ಪೂಜೆಗೆ ಮಹತ್ವವನ್ನು ದಾಸರು ಕೊಟ್ಟಿರುವುದನ್ನು ಸುವಾಲಿಗಳಲ್ಲಿ ಕಾಣಬಹುದು. ಯಾವ ಸ್ಥಳಕ್ಕೆ ನಡೆದು ಹೋದರೂ ಶ್ರೀಹರಿಯ ಚಿಂತನೆಯನ್ನ ಮಾಡುತ್ತಾ ಮುಂದುವರಿದರೆ ಅದು ಯಾತ್ರೆ ಎನಿಸಿಕೊಳ್ಳುವುದೆಂದು ದಾಸರು ಹೇಳಿದ್ದಾರೆ. ಆಡುವ ಮಾತುಗಳೆಲ್ಲ 'ಹರಿನಾಮ' ವೆನಿಸಿಕೊಳ್ಳಬೇಕಾದರೆ ಭಗವಂತನ ಪ್ರೇರಣೆಯಿಂದ ಮಾತನಾಡುತ್ತಿರುವೆನೆಂಬ ಚಿಂತನೆ ಇರಬೇಕೆಂದೂ. ಅಂತರಾತ್ಮನಿಗೆ ಅಭಿಷೇಕ ಮಾಡುತ್ತಿರುವೆನೆಂಬ ಭಾವನೆಯಿಂದ ನೀರನ್ನು ಕುಡಿದರೆ ಶ್ರೀಹರಿಗೆ ಅಭಿಷೇಕ

ಮಾಡಿದಂತಾಗುವುದೆಂದು ದಾಸರು ಹೇಳಿದ್ದಾರೆ. ಇದರಂತೆ ಮಾಡುವ ಊಟವೂ ನೈವೇದ್ಯ ವಾಗುವುದೆಂದಿದ್ದಾರೆ.

೯೧-೯೫

ಜಗನ್ನಾಥ ದಾಸರು ಜಗತ್ತಿನ ಎಲ್ಲ ಪ್ರಾಣಿಗಳನ್ನು ಉದ್ಧರಿಸಬೇಕೆಂದು ಈ ಸುವಾಲಿಗಳಲ್ಲಿ ಪ್ರಾರ್ಥಿಸಿದ್ದಾರೆ. ಭಗವಂತನನ್ನು 'ರೋಗಘ್ನ' ಎಂದು ಉಪಾಸನೆ ಮಾಡಿದರೆ ಜನರ ರೋಗನಿವಾರಣೆಯಾಗುವುದೆಂದು ಹೇಳಿದ್ದಾರೆ. ನರಸಿಂಹ ರೂಪಿಯಾದ ಭಗವಂತನು ಬಿಂಬವಾಗಿದ್ದು ಆ ಬಿಂಬರೂಪ ಧ್ಯಾನ ಮಾಡಿದರೆ ಅವನ ಕೃಪೆ ಶೀಘ್ರವಾಗುವುದೆಂದು ಹೇಳುವ ದಾಸರು ಭಗವಂತನ ಇಚ್ಛೆಗೆ ವಿರುದ್ಧವಾದ ಸ್ವರ್ಗಕ್ಕಿಂತ ಭಗವಂತನ ಇಚ್ಛೆಯನುಸಾರ ದೊರಕುವ ನರಕವನ್ನೇ ಸಂತೋಷದಿಂದ ಒಪ್ಪಿಕೊಳ್ಳುವುದಾಗಿ ದಾಸರು ಹೇಳಿದ್ಧಾರೆ.

೯೬-೧೦೦

ಹಸುವಿಗೆ ಹುಲ್ಲು ಮತ್ತು ನೀರನ್ನು ಕೊಟ್ಟರೆ ಅದನ್ನು ಸ್ವೀಕರಿಸಿ ಉತ್ಕೃಷ್ಟವಾದ ಹಾಲನ್ನು ನಮಗೆ ಕೊಡುವಂತೆ ಭಗವಂತನು ಭಕ್ತರು ಅರ್ಪಿಸುವ ಸಾಮಾನ್ಯ ಪೂಜಾದಿಗಳನ್ನು ಸ್ವೀಕರಿಸಿ ಅಮೃತ ಸದೃಶವಾದ ವೈಕುಂಠವನ್ನು ಭಕ್ತರಿಗೆ ಕೊಡುವುದಾಗಿಯೂ, ಆದ್ದರಿಂದ ಭಗವಂತನ ಪಾದ ಭಜನೆಗಿಂತ ಮಿಗಿಲಾದುದು ಯಾವುದೂ ಇಲ್ಲವೆಂದು ದಾಸರು ಹೇಳಿದ್ದಾರೆ. ವೇದಶಾಸ್ತ್ರಗಳಲ್ಲಿ ಹುದುಗಿರುವ ವಿಚಾರ ಸಂಗ್ರಹಕ್ಕೆ ನಡೆಸುವ ಚರ್ಚೆ ಪರಮ ಪುಣ್ಯದಾಯಕವೆಂದಿದ್ದಾರೆ.

೧೦೧-೧೦೫

ಜ್ಞಾನಪೂರ್ವಕವಾದ ಕರ್ಮಗಳನ್ನು ಮಾಡದಿದ್ದರೆ ಮಾಡಿದ ಕರ್ಮಗಳೆಲ್ಲವೂ ವ್ಯರ್ಥವೆಂದು ದಾಸರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಮೀನು, ಮೊಸಳೆಗಳು ಗಂಗಾನದಿಯಲ್ಲಿಯೇ ಹುಟ್ಟಿ ಬೆಳೆಯುವುದು. ಆದರೆ ಇವುಗಳಿಗೆ ಗಂಗಾಸ್ನಾನದ ಫಲ ಬರುವುದಿಲ್ಲ, ಹೀಗೆಯೇ ಜ್ಞಾನಾನುಸಂಧಾನದಿಂದ ಗಂಗಾ ಸ್ನಾನವನ್ನು ಮನುಷ್ಯರು ಮಾಡದಿದ್ದರೆ ಮನುಷ್ಯರಿಗೂ ಪುಣ್ಯ ಬರುವುದಿಲ್ಲವೆಂದು ದಾಸರು ಸ್ಪಷ್ಟಪಡಿಸಿದ್ದಾರೆ. ಸಕಲ ಇಂದ್ರಿಯಗಳೂ ಭಗವಂತನ ಕೈಂಕರ್ಯದಲ್ಲಿ ನಿರತವಾದರೆ ಮಾತ್ರ ಪುಣ್ಯ ಉಂಟಾಗುವುದೆಂದು ದಾಸರು ಹೇಳಿದ್ದಾರೆ. ಕೀರ್ತಿ, ಐಶ್ವರ್ಯ, ವಿವಾಹ, ಪುತ್ರ ಪ್ರಾಪ್ತಿಯೇ ಮೊದಲಾದ ಲೋಕದ ಸುಖಗಳನ್ನಪೇಕ್ಷಿಸಿ

ಶ್ರೀಹರಿಯ ಪೂಜೆ - ಜಪ - ಹೋಮಾದಿಗಳನ್ನು ಮಾಡುವುದರಿಂದ ಭಗವಂತನು ಮೆಚ್ಚುವುದಿಲ್ಲ - ಅಪರೋಕ್ಷ ಜ್ಞಾನಕ್ಕೆ ಅಗತ್ಯವಾದ ಪುಣ್ಯ ಲಭ್ಯವಾಗುವುದಿಲ್ಲವೆಂದು ದಾಸರು ಸ್ಪಷ್ಟಪಡಿಸಿದ್ದಾರೆ.

೧೦೬–೧೧೦

ಪ್ರಪಂಚದಲ್ಲಿ ಹಲವರನ್ನು ದೇವರೆಂದು ಪರಿಗಣಿಸಿ ಪೂಜಿಸುವ ಸಂಪ್ರದಾಯ ಉಂಟಾಗಿದೆ. ಶ್ರೀಹರಿಯನ್ನು ಬಿಟ್ಟು ಉಳಿದವರನ್ನು ದೇವರೆಂದು ಪರಿಗಣಿಸಿ ಪೂಜಿಸುವುದು ತರವಲ್ಲವೆಂದು ದಾಸರು ಇಲ್ಲಿ ಎಚ್ಚರಿಸಿದ್ದಾರೆ. ಎಲ್ಲರಲ್ಲಿದ್ದು ಎಲ್ಲ ಕರ್ಮಗಳನ್ನು ಮಾಡಿ ಮಾಡಿಸುವ ಹರಿಯು ತಮಗೆ ಪರಧನ, ಪರನಾರಿಯರಲ್ಲಿ ಆಸಕ್ತಿಯನ್ನುಂಟು ಮಾಡದಿರಲೆಂದು ಭಗವಂತನನ್ನು ದಾಸರು ಪ್ರಾರ್ಥಿಸಿದ್ದಾರೆ.

೧೧೧–೧೧೫

ಬದುಕಿನಲ್ಲಿ ಒಂದು ಹೊತ್ತಿನ ಊಟವೂ ದೊರಕದಂತಹ ಬಡತನ ಉಂಟಾದರೆ ಲೋಕದ ಜನರನ್ನು ಬೇಡುವುದಕ್ಕಿಂತ 'ಅನ್ನ' ಎನಿಸಿಕೊಂಡಿರುವ ಭಗವಂತನನ್ನು ಯಾಚಿಸಿದರೆ ಅವನು ದಾರಿದ್ರ್ಯವನ್ನು ಪರಿಹರಿಸುವುದಾಗಿ ದಾಸರು ಹೇಳಿದ್ದಾರೆ. ಭಗವಂತನನ್ನು ಪೂಜಿಸುವುದು ಎಷ್ಟು ಮುಖ್ಯವೋ ಅವನ ದಾಸರನ್ನು ಗೌರವಿಸುವುದು ಅಷ್ಟೇ ಮುಖ್ಯವೆಂಬ ವಿಚಾರವನ್ನು ದಾಸರು ಈ ಸುವಾಲಿಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಪ್ರಾಣ ಭಯ ಬಂದಾಗ ಪ್ರಾಣವನ್ನು ಕಾಪಾಡುವ ಹೊರೆ ಹೊತ್ತಿರುವ ಪ್ರದ್ಯುಮ್ನನ ಸ್ಮರಣೆ ಮಾಡಿದರೆ ಪ್ರಾಣಭಯ ನಿವಾರಣೆ ಯಾಗುವುದಾಗಿ ದಾಸರು ತಿಳಿಸಿದ್ದಾರೆ.

೧೧೬–೧೨೦

ಮೊಸಳೆಯ ಹಿಡಿತಕ್ಕೆ ಸಿಕ್ಕ ಆನೆಯನ್ನು (ಗಜೇಂದ್ರ) ಶ್ರೀಹರಿಯು ಬಿಡಿಸಿ ಕಾಪಾಡಿದಂತೆ ತಮ್ಮ ಪ್ರಾರ್ಥನೆಗೆ ಓಗೊಟ್ಟ ತಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿಸುವರಿಗೆ ಓಗೊಟ್ಟು ತಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿಸುವ ದಾಸರು ಪ್ರಪಂಚದಲ್ಲಿರುವ ಒಂದೊಂದು ಇಂದ್ರಿಯಗಳಿಂದ ಅನುಭವಿಸುವ ಸುಖಗಳೇ ಭಗವಂತನ ಪೂಜೆ ಎಂಬ ಅನುಸಂಧಾನವನ್ನು ಮಾಡಿದ್ದಾರೆ. ಹೇಗೆ ಅಗಾಧ ಮಳೆಯಿಂದ ತಪ್ಪಿಸಲು ಶ್ರೀ ಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿ ಪಶುಗಳನ್ನು ಪಶು ಪಾಲಕರನ್ನು ರಕ್ಷಿಸಿದನೋ ಅದರಂತೆ ಎಲ್ಲರನ್ನು ರಕ್ಷಿಸಲೆಂದು ದಾಸರು ಹಾರೈಸಿದ್ದಾರೆ.

೧೨೧-೧೨೫

ಭಗವಂತನು ಅಣುವಾಗಬಲ್ಲ ; ಮಹತ್ತೂ ಅಗಬಲ್ಲ : ಅವನು ವಿಲಕ್ಷಣವಾದ ಗುಣಗಳನ್ನುಳ್ಳವನೆಂದೂ, ವಾಸುದೇವನು ಸಕಲ ಜೀವರಾಶಿಗಳಲ್ಲಿದ್ದು, ಅವರವರ ಕರ್ಮಗಳಿಗನುಗುಣವಾಗಿ ಫಲಗಳನ್ನು ಕೊಡುವನೆಂದೂ : ಪರಮಾತ್ಮನ ಭಕ್ತರ ಸಹವಾಸವನ್ನು ಪರಮಾತ್ಮನೇ ಅನುಗ್ರಹಿಸಿದಾಗ ಮಾತ್ರ ಸಾಧನೆಯು ಮುಂದುವರಿಯುವುದೆಂದು ದಾಸರು ಈ ಸುವಾಲಿಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

೧೨೬-೧೩೦

ಈ ಸುವಾಲಿಗಳು ಭಗವಂತನನ್ನು ಕುರಿತು ದಾಸರು ಮಾಡಿರುವ ಅನನ್ಯ ಪ್ರಾರ್ಥನಾ ರೂಪದ ಸ್ತುತಿಯಾಗಿದೆ. ಬ್ರಹ್ಮನೇ ಮೊದಲಾದ ದೇವತೆಗಳೇ ಶ್ರೀಹರಿಯ ಶಕ್ತಿ, ಗುಣಾದಿಗಳನ್ನು ಪೂರ್ಣವಾಗಿ ಅರಿಯರೆಂದ ಮೇಲೆ ಉಳಿದವರ ಪಾಡೇನೆಂದು ಪ್ರಶ್ನಿಸುವುದರ ಮೂಲಕ ಶ್ರೀಹರಿಯ ಮಹಿಮೆಗಳು ಅಚಿಂತ್ಯಾದ್ಭುತವೆಂದು ದಾಸರು ಮನವರಿಕೆ ಮಾಡಿ ಕೊಟ್ಟಿದ್ದಾರೆ. ದಾರೇಷಣ, ವಿತ್ತೇಷಣ, ಪುತ್ರೇಷಣ ಎಂಬ ಈ ಷಣತ್ರಯಗಳನ್ನು ಮನಸ್ಸಿನಿಂದ ದೂರ ಮಾಡಬೇಕೆಂದು ಇದರಿಂದ ಪಾಪ ಸಂಪಾದನೆಯು ಅಡಗುವುದೆಂದು ದಾಸರು ಹೇಳಿದ್ದಾರೆ.

೧೩೧-೧೩೫

ರಾಜನಲ್ಲಿ ಶ್ರೀಹರಿಯ ವಿಶೇಷ ವಿಭೂತಿಯಿಂದಿರುವುದರಿಂದ ರಾಜನಲ್ಲಿ ತೋರುವ ಗೌರವದಿಂದಲೂ ಪುಣ್ಯ ಪ್ರಾಪ್ತಿ ಎಂಬುದನ್ನು ದಾಸರು ಹೇಳಿದ್ದಾರೆ. ಎಲ್ಲ ಇಂದ್ರಿಯ ಗಳಲ್ಲಿಯೂ ಶ್ರೀಹರಿಯು ಹೃಷೀಕೇಶ ನಾಮದಿಂದಿದ್ದು ಆಯಾ ಇಂದ್ರಿಯಗಳು ಕಾರ್ಯತತ್ಪರವಾಗುವಂತೆ ಮಾಡುವ ಶ್ರೀಹರಿಯ ಗುಣವಿಶೇಷಗಳ ಮನನ ಪರಮ ಪುಣ್ಯದಾಯಕವೆಂದು ದಾಸರು ಸ್ಪಷ್ಟಪಡಿಸಿದ್ದಾರೆ. ಶ್ರೀಹರಿಗೆ ಶೋಕವೆಂಬುದೇ ಇಲ್ಲವೆಂದಿದ್ದಾರೆ.

೧೩೬-೧೪೦

ಭಗವಂತನು ಇಲ್ಲದೆ ಇರುವ ಸ್ಥಳವೇ ಈ ಬ್ರಹ್ಮಾಂಡದಲ್ಲಿಲ್ಲವೆಂದು, ಈ ವಿಚಾರವನ್ನು ಶ್ರೀಹರಿಯು ನರಸಿಂಹಾವತಾರದ ಮೂಲಕ ಸ್ಪಷ್ಟಪಡಿಸಿರುವನೆಂದೂ ಹೇಳುವ ದಾಸರು ಇಂತಹ ನರಸಿಂಹನ ಮರೆವೇ ನರಕವೆಂದೂ ಹೇಳಿದ್ದಾರೆ. ಭಗವಂತನನ್ನು ದಾಸರು ಕೃಪಣವತ್ಸಲ ಎನ್ನುತ್ತಾರೆ. ಕೃಪಣ ಎಂದರೆ ಜಿಪುಣ. ಪುಣ್ಯವನ್ನು ಖರ್ಚಾಗದಂತೆ ತುಂಬ ಜೋಪಾನ ಮಾಡುವವರು ಭಕ್ತಾರಾದುದರಿಂದ ಭಕ್ತರನ್ನು 'ಕೃಪಣರು' ಎನ್ನುತ್ತಾರೆ.

೧೪೧-೧೪೫

ಶಾಸ್ತ್ರಗಳು ಭಗವಂತನನ್ನು 'ಅನಿಮಿತ್ತ ಬಾಂಧವ' ಎಂದಿದೆ. ಏಕೆಂದರೆ ಭಗವಂತನು ತನಗೆ ಯಾವ ಪ್ರಯೋಜನವಿಲ್ಲದಿದ್ದರೂ ಭಕ್ತರನ್ನು ಕಾಪಾಡುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾನೆ. ಒಂದು ತಪ್ಪನ್ನು ಭಕ್ತನು ಮಾಡಿ 'ನಾನು ತಪ್ಪು ಮಾಡಿದೆ' ಎಂಬ ಮಾತನ್ನಾಡುವುದೂ ತಪ್ಪೇ ಎಂಬುದು ದಾಸರ ಅಭಿಪ್ರಾಯವಾಗಿದೆ. ಏಕೆಂದರೆ ಆ ತಪ್ಪು ಕಾರ್ಯವನ್ನು ಭಗವಂತನೇ ಮಾಡಿಸುವನೆಂಬುದು ಶಾಸ್ತ್ರಗಳ ಸಾರವಾಗಿದೆ ಎಂದು ದಾಸರು ಹೇಳಿದ್ದಾರೆ.

೧೪೬-೧೫೦

ತಮೋಯೋಗ್ಯ ಜೀವರು ಮಾಡುವ ದುಷ್ಟ ಕಾರ್ಯಗಳನ್ನು ಶ್ರೀಹರಿಯೇ ಪ್ರೇರಣೆ ಮಾಡಿ ಮಾಡಿಸುವನೆಂದೂ, ರಾಜಸ ಜೀವರಲ್ಲಿದ್ದು ಲೌಕಿಕವಾದ ಸುಖಸಂಪಾದನೆಯ ನಿಮಿತ್ತವೇ ಸಕಲ ಪುಣ್ಯ ಕಾರ್ಯಗಳನ್ನು ಮಾಡಿಸಿ ಅವರು ನಿತ್ಯ ಸಂಸಾರಿಗಳಾಗುವಂತೆ ಮಾಡುವವನು ಶ್ರೀಹರಿಯೇ ಎಂಬುದನ್ನು ದಾಸರು ತಿಳಿಸಿ ಭಗವಂತನು ಯಾರನ್ನು ಎಂದಿಗೂ ದ್ವೇಷಿಸುವುದಿಲ್ಲವೆಂದೂ, ಪರಮಾತ್ಮನಲ್ಲಿರುವ ಸಾತ್ವಿಕ ಗುಣಕ್ಕೆ ಮೇರೆಯೇ ಇಲ್ಲವೆಂದು ದಾಸರು ಈ ಸುವಾಲಿಗಳಲ್ಲಿ ವಿವರಿಸಿದ್ದಾರೆ.

೧೫೧-೧೫೫

ಭಗವಂತನಿಗೆ ಇರುವ ಹೆಸರುಗಳು ಒಂದಲ್ಲ - ಎರಡಲ್ಲ; ಅನಂತವಾದುದು. ಅವನಿಗೆ ಎಲ್ಲ ಹೆಸರುಗಳು ಒಪ್ಪುವುವು; ಅಲ್ಲದೆ ಆಯಾ ಹೆಸರಿನಲ್ಲಿರುವ ಅರ್ಥಕ್ಕೆ ಅನುಗುಣವಾಗಿ ನಡೆದು ಕೊಳ್ಳುವವನು ಶ್ರೀಹರಿ. ಆದ್ದರಿಂದ ಕೇಶವಾದ ಚತುರ್ವಿಂಶತಿ (೨೪) ನಾಮ ಸ್ಮರಣೆಯು ಅಧಿಕ ಪುಣ್ಯವನ್ನುಂಟು ಮಾಡುವುದಾಗಿ ದಾಸರು ಹೇಳಿದ್ದಾರೆ.

೧೫೬-೧೬೦

ಭಗವಂತನ ಅಧಿಷ್ಠಾನ ಎಂದರೆ ಇರುವಿಕೆಯನ್ನು ಕರ್ಮ - ಜ್ಞಾನೇಂದ್ರಿಯಗಳಲ್ಲಿ ಚಿಂತನೆ ಮಾಡುವುದೇ ಜ್ಞಾನಿಗಳ ಲಕ್ಷಣವೆಂದು ದಾಸರು ಹೇಳಿದ್ದಾರೆ. ಸತ್ಯಸಂಕಲ್ಪನಾದ ಭಗವಂತನು ಜಗತ್ತಿನಲ್ಲಿರುವ ಇತರ ಎಲ್ಲ ವಸ್ತುಗಳಿಗಿಂತ ಭಿನ್ನನಾದವನೆಂದು ತಿಳಿದು, ಅವನು ಸುಖಪೂರ್ಣನೂ, ಸುಖಪ್ರದಾತನೂ ಎಂದು ಭಜಿಸಿ ನಕ್ಷತ್ರ ಮಂಡಲವೇ

ಸರ್ವೋತ್ತಮನಿಗೆ ಲಕ್ಷ ದೀಪಗಳೆಂದು ಪ್ರಪಂಚದಲ್ಲಿರುವ ಕೋಟಿ ಪುಷ್ಪಗಳೆಂದು ಚಿಂತಿಸಿ ಪೂಜಿಸುವುದು ಶ್ರೇಷ್ಠ ಪೂಜೆ ಎನಿಸಿಕೊಳ್ಳುವುದೆಂದು ದಾಸರು ಹೇಳಿದ್ದಾರೆ.

೧೬೧-೧೬೫

ಭಗವದಪರೋಕ್ಷವನ್ನು ಸಾಧಿಸಲು ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳು ಒಂದರೊಡನೊಂದು ಬೆಸೆದುಕೊಂಡು ಮನಸ್ಸು ನಿಶ್ಚಲತೆಯನ್ನು ಸಾಧಿಸಬೇಕೆಂದು – ಆಗ ಮಾತ್ರ ಭಗವಂತನ ಧ್ಯಾನದಲ್ಲಿ ಮನಸ್ಸು ನಿಲ್ಲಿಸಲು ಸಾಧ್ಯವಾಗುತ್ತದೆ. ಈ ಪರಿಸ್ಥಿತಿಯನ್ನು ಭಗವಂತನೇ ತಮಗುಂಟು ಮಾಡಬೇಕೆಂದು ದಾಸರು ಇಲ್ಲಿ ಪ್ರಾರ್ಥಿಸಿದ್ದಾರೆ.

೧೬೬-೧೭೦

ಯಾರಿಗೆ ಭಗವತ್ ಸಾಕ್ಷಾತ್ಕಾರವನ್ನು ಖಂಡಿತವಾಗಿ ಮಾಡಿಕೊಳ್ಳುವ ಛಲ ಉಂಟಾಗುವುದೋ ಅವರಿಗೆ ತಮ್ಮ ದಿನಗಳು ನಿರರ್ಥಕವಾಗಿ ಕಳೆಯುತ್ತಿವೆ ಎಂಬ ದುಃಖ ಮತ್ತೆ ಮತ್ತೆ ಉಂಟಾಗುತ್ತಿರುತ್ತದೆ. ದಿನದ ಕಾಲವೆಲ್ಲ ಉದರ ಪೋಷಣೆಗೆ ವ್ಯಯವಾಯಿತೆಂದು ದುಃಖವಾಗುತ್ತದೆ. ಇದು ಉತ್ಕಟ ಭಕ್ತಿಯ ಸಂಕೇತವೆನ್ನಬಹುದು. ಬಾಹ್ಯ ಮತ್ತು ಅಂತರಂಗದಲ್ಲಿರುವ ತತ್ವಾಭಿಮಾನಿ ದೇವತೆಗಳ ಚಿಂತನೆಯನ್ನು ಮಾಡುವಂತಹ ಭಾಗ್ಯವನ್ನು ಕೊಟ್ಟು ಜ್ಞಾನ ಭಕ್ತಿ ವೈರಾಗ್ಯಗಳನ್ನು ಕರುಣಿಸ ಬೇಕೆಂಬ ಬೇಡಿಕೆ ಇಲ್ಲಿದೆ.

೧೭೧-೧೭೫

ಸಕಲ ಕರ್ಮಗಳ ರಹಸ್ಯವನ್ನರಿತವನು ಶ್ರೀಹರಿ; ಕರ್ಮಗಳಲ್ಲಿ ಆಸಕ್ತಿಯನ್ನುಂಟು ಮಾಡುವವನೂ ಶ್ರೀಹರಿಯೇ; ಕರ್ಮಗಳಿಗೆ ಫಲಗಳನ್ನು ಕೊಡುವವನು ಶ್ರೀಹರಿಯೇ. ಅವನು ಅನಾಥರಿಗೆ ಬಂಧುವಾಗಿದ್ದಾನೆ. ಚಕ್ರ, ಶಂಖ, ಗದಾ, ಪದ್ಮಗಳನ್ನು ಧರಿಸಿರುವ ಶ್ರೀಹರಿಯ ಕಿರುಬೆರಳಿನ ಉಗುರಿನ ಶಕ್ತಿ ಸಾಮರ್ಥ್ಯವನ್ನು ಪೂರ್ಣವಾಗಿ ಲಕ್ಷ್ಮಿಯೇ ತಿಳಿಯಲಾರಳೆಂದ ಮೇಲೆ ಉಳಿದವರ ಪಾಡೇನೆಂದು ಇತರರೇ ಊಹಿಸಿ ಕೊಳ್ಳಬೇಕೆಂದು ದಾಸರು ಅಭಿಪ್ರಾಯ ಪಟ್ಟಿದ್ದಾರೆ.

೧೭೬-೧೮೦

ಜಗನ್ನಾಥದಾಸರು ಶ್ರೀಕೃಷ್ಣನನ್ನು ಕುರಿತು ನಲವತ್ತನಾಲ್ಕು ತತ್ವ ಸುವಾಲಿಗಳನ್ನು ರಚಿಸಿದ್ದಾರೆ. ಈ ಸುವಾಲಿಗಳಲ್ಲಿ ಕೃಷ್ಣನು ಬಾಲ್ಯದಿಂದ ತೋರಿದ ಲೀಲಾ ವಿನೋದಗಳನ್ನು ವರ್ಣಿಸಿ ಸ್ತೋತ್ರ ಮಾಡಿದ್ದಾರೆ. ಕಂಸನೇ ಮೊದಲಾದ ರಾಕ್ಷಸರ ತಂಡವು ಭೂಮಿಯಲ್ಲಿ ಹುಟ್ಟಿ ಸಾತ್ವಿಕರ ಧರ್ಮಕರ್ಮಗಳಿಗೆ ಸಂಪೂರ್ಣವಾಗಿ ಅಡ್ಡಿ ಪಡಿಸಿದಾಗ ಭೂದೇವಿಯು ಇಂತಹ ದೈತ್ಯವನ್ನು ಸಂಹರಿಸಿ ಭೂಭಾರ ಹರಣವನ್ನು ಮಾಡಬೇಕೆಂದು ಶ್ರೀಹರಿಯನ್ನು ಪ್ರಾರ್ಥಿಸುವಳು. ಭೂದೇವಿಯ ಪ್ರಾರ್ಥನೆಗೆ ಓಗೊಟ್ಟ ಶ್ರೀಹರಿಯು ವಾಸುದೇವ ದೇವಕಿಯರಲ್ಲಿ ಎಂಟನೆಯ ಮಗುವಾಗಿ ಹುಟ್ಟಿ ಯಶೋದೆಯ ಸಾಕು ಪುತ್ರನಾಗಿ ಬೆಳೆದು ದೈತ್ಯರನ್ನು ಒರಸಿ ಹಾಕಿದನು.

ಶ್ರೀಕೃಷ್ಣನು ಶೈಶವಾವಸ್ಥೆಯಿಂದಲೇ ಲೋಕೋತ್ತರ ಕೆಲಸಗಳನ್ನು ಮಾಡುತ್ತಾ ತಾನು ಅವತಾರ ಪುರುಷನೆಂಬುದನ್ನು ಪ್ರಪಂಚಕ್ಕೆ ತೋರಿಸಿಕೊಟ್ಟನು. ಶಕಟಾಸುರ ಎಂಬುವವನು ಎತ್ತಿನ ಗಾಡಿಯ ರೂಪದಲ್ಲಿ ಬಂದು ಕೃಷ್ಣನನ್ನು ಕೊಲ್ಲಲು ಯತ್ನಿಸಿದಾಗ ಆ ಬಂಡಿಯನ್ನು ಒದ್ದು ಪುಡಿಗೈದಾಗ ರಾಕ್ಷಸಾಕಾರದ ದೇಹ ನೆಲದ ಮೇಲೊರಗಿತು. ತೃಣಾವರ್ತ ಎಂಬ ರಾಕ್ಷಸನು ಗಾಳಿಯ ರೂಪದಲ್ಲಿ ಬಂದು ಕೃಷ್ಣನನ್ನೆತ್ತಿ ಕೊಂಡೊಯ್ಯಲು ಯತ್ನಿಸಿದಾಗ ಅವನನ್ನು ಪಾತಾಳ ಲೋಕಕ್ಕೆ ಕೃಷ್ಣನು ಅಟ್ಟಿದನು. ಪೂತನಿಯು ವಿಷಪೂರಿತವಾದ ಮೊಲೆಹಾಲನ್ನು ಕುಡಿಸಲು ಯತ್ನಿಸಿದಾಗ ಆಕೆಯ ಹಾಲನ್ನು ಹೀರುವ ಬದಲು ಪ್ರಾಣವನ್ನೇ ಹೀರಿಬಿಟ್ಟನೆಂಬ ಪ್ರಕರಣಗಳನ್ನು ದಾಸರು ಇಲ್ಲಿ ತಿಳಿಸಿದ್ದಾರೆ.

೧೮೧-೧೮೫

ಶ್ರೀಕೃಷ್ಣನು ಸತ್ಯಭಾಮೆಗಾಗಿ ಸ್ವರ್ಗಲೋಕದಿಂದ ಪಾರಿಜಾತ ವೃಕ್ಷವನ್ನೇ ತರುತ್ತಾನೆ ಹದಿನಾಲ್ಕು ಲೋಕಗಳಿಗೊಡೆಯನಾದರೂ ಪಶುಗಳನ್ನು ಕಾಯುವುದರ ಮೂಲಕ ಸರಳತೆಯನ್ನು ಮೆರೆಸಿದವನು ಶ್ರೀಕೃಷ್ಣ. ಜಗತ್ತನ್ನೇ ತನ್ನ ಉದರದಲ್ಲಿಟ್ಟುಕೊಂಡು ಕಾಪಾಡುವ ಶಕ್ತಿಯನ್ನು ಹೊಂದಿರುವ ಈತ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವವನೆಂದು ದಾಸರು ಹೇಳಿದ್ದಾರೆ.

೧೮೬-೧೯೦

ಕುವಲಯಾಪೀಡ ಎಂಬುದು ಕಂಸನ ಬಳಿ ಇದ್ದ ಅತ್ಯಂತ ಬಲಿಷ್ಠವಾದ ಆನೆ. ಈ ಆನೆಯನ್ನು ಕೃಷ್ಣನ ಮೇಲೆ ಬಿಟ್ಟು ಕೊಲ್ಲಿಸಲು ಕಂಸ ಯತ್ನಿಸಿದಾಗ ಎಂತಹ ಜಗಜಟ್ಟಿಯೂ

ನಿಯಂತ್ರಿಸಲಾಗದ ಆ ಆನೆಯನ್ನು ಕೃಷ್ಣನು ನಿರಾಯಾಸವಾಗಿ ನಿಯಂತ್ರಿಸುವನು. ಚಾಣೂರ, ಮುಷ್ಟಿಕ ಎಂಬ ಮಹಾ ಪ್ರಬಲರಾದ ಜಟ್ಟಿಗಳನ್ನು ಮಡಿಗೈದ ಕೃಷ್ಣ ಅಸಾಮಾನ್ಯ ವ್ಯಕ್ತಿ ಎನಿಸಿದನು, ಭಕ್ತಿಯಿಂದ ಕುಬ್ಜೆ ಕೊಟ್ಟ ಶ್ರೀಗಂಧವನ್ನು ಸ್ವೀಕರಿಸಿ ಕೃಷ್ಣನು ಆಕೆಯನ್ನು ಸುರಸುಂದರಿಯನ್ನಾಗಿ ಮಾಡಿದನು. ಕೃಷ್ಣನು ಹುಟ್ಟಿದಾಗಿನಿಂದ ಅವನನ್ನು ಕೊಲ್ಲಲು ಯತ್ನಿಸುತ್ತಿದ್ದ ಕಂಸನನ್ನು ಕೃಷ್ಣನೇ ಕೊಂದನೆಂಬುದನ್ನು ದಾಸರು ಈ ತತ್ವಸುವಾಲಿಗಳಲ್ಲಿ ಜ್ಞಾಪಿಸಿ ಕೊಂಡು ಭಗವಂತನನ್ನು ಸ್ತೋತ್ರ ಮಾಡಿದ್ದಾರೆ.

೧೯೧–೧೯೫

ಕೃಷ್ಣನು ಎಂದಿಗೂ ತಪ್ಪು ಮಾಡದವರಿಗೆ ಶಿಕ್ಷೆಯನ್ನು ಕೊಡುತ್ತಿರಲಿಲ್ಲ. ಮಗ ತಪ್ಪು ಮಾಡಿದನೆಂದು ತಂದೆಗೂ, ತಂದೆ ತಪ್ಪು ಮಾಡಿದನೆಂದು ಮಗನಿಗೂ ಶಿಕ್ಷೆ ಕೊಡುವ ದ್ವೇಷ ತೀರಿಸಿಕೊಳ್ಳುವ ಸ್ವಭಾವ ಅವನದಾಗಿರಲಿಲ್ಲವೆಂಬುದಕ್ಕೆ ಉಗ್ರಸೇನನ ಕಥೆಯೇ ಉದಾಹರಣೆಯಾಗಿದೆ. ಕಂಸನು ತನ್ನ ತಂದೆಯಾದ ಉಗ್ರಸೇನನನ್ನು ಕಾರಾಗೃಹದಲ್ಲಿಟ್ಟು ರಾಜನಾಗಿ ಮೆರೆಯುತ್ತಿದ್ದನು. ಕೃಷ್ಣನು ಕಂಸನನ್ನು ಕೊಂದ ಮೇಲೆ ಅವನ ತಂದೆಯನ್ನು ಕಾರಾಗೃಹದಿಂದ ಬಿಡಿಸಿ ರಾಜ್ಯವನ್ನು ಕೊಡುತ್ತಾನೆ. ಇದು ಕೃಷ್ಣನ ಗುಣವಿಶೇಷಕ್ಕೆ ಉದಾಹರಣೆ ಎಂದು ದಾಸರು ವಿವರಿಸಿದ್ದಾರೆ.

ಭಕ್ತರಾದವರ ತಾಪತ್ರಯಗಳನ್ನು ನಿವಾರಿಸುವ ಕಾರುಣ್ಯ ಗುಣ ಇವನಲ್ಲಿ ತುಂಬಿದೆ ಎನ್ನಲು ದ್ರೌಪದಿಯ ಮಾನ ಸಂರಕ್ಷಣ ಕಥೆಯೇ ಸಾಕ್ಷಿ ಎಂದು ದಾಸರು ಸುವಾಲಿಯಲ್ಲಿ ತಿಳಿಸಿದ್ದಾರೆ.

೧೯೬–೨೦೦

'ಮಾನವ ಜನ್ಮ ಬಲು ದೊಡ್ಡದು' ಎಂಬುದು ಇತರ ಪ್ರಾಣಿ ವರ್ಗಗಳ ಜೀವನವನ್ನು ನೋಡಿದರೆ ಯಾರಿಗಾದರು ಅರಿವಾಗುತ್ತದೆ. ಆದರೆ ನಾಯಿ ನರಿ ಜನ್ಮಗಳು ಬಂದರೂ ಶ್ರೀಹರಿಯ ಸ್ಮರಣೆ ಇರುವುದಾದರೆ ಅದೇ ಲೇಸೆಂದೂ, ಭತಗವಂತನ ಸ್ಮರಣೆ ಮಾಡುವ ಯೋಗವಿಲ್ಲದ ಮಾನವ ಜನ್ಮವನ್ನು ತಮಗೆ ಕರುಣಿಸ ಬಾರದೆಂದು ದಾಸರು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ. ಗಂಗಾನದಿಯಲ್ಲಿ ಸ್ನಾನ ಮಾಡಿದಾಗ ಅದು ಮಡಿ ಎನಿಸಿ ಕೊಳ್ಳಬೇಕಾದರೆ ಶ್ರೀಹರಿಯ ಸ್ಮರಣೆ ಸ್ನಾನದ ಸಮಯದಲ್ಲುಂಟಾಗಬೇಕೆಂಬ ತತ್ವವನ್ನು ಇಲ್ಲಿ ಬೋಧಿಸಿದ್ದಾರೆ. ವಾಸುದೇವನನ್ನು ಬಿಟ್ಟು ಉಳಿದ ಯಾರನ್ನೇ ದೈವವೆಂದು ಪೂಜಿಸಿದರೂ ವ್ಯರ್ಥವೆಂದು ದಾಸರು ಇಲ್ಲಿ ಎಚ್ಚರಿಸಿದ್ದಾರೆ.

೨೦೧-೨೦೫

ಮತ, ವ್ರತ, ಪುರಾಣಗಳಲ್ಲಿ ಯಾವುದು ಶ್ರೇಷ್ಠವೆಂಬ ಪ್ರಶ್ನೆಗೆ ಉತ್ತರವನ್ನು ದಾಸರು ಕೊಡುತ್ತಾ ಮಧ್ವಮತ, ಏಕಾದಶಿ ವ್ರತ ಹಾಗೂ ಭಾಗವತ ಪುರಾಣ ಶ್ರೇಷ್ಠವೆಂದು ಹೇಳಿ ಎಲ್ಲ ಪ್ರತಿಮಾ ಪೂಜೆಗಿಂತ ಶ್ರೀಕೃಷ್ಣನ ಪೂಜೆ ಶ್ರೇಷ್ಠವೆಂದಿದ್ದಾರೆ. ಆದ್ದರಿಂದ ಸಾಮಾನ್ಯ ಮನುಷ್ಯನನ್ನು ಹೊಗಳಿ ಕಾಲವನ್ನು ಹಾಗೂ ಶಕ್ತಿಯನ್ನು ವ್ಯಯ ಮಾಡದೆ ಶ್ರೀಕೃಷ್ಣನ ಆರಾಧನೆಯನ್ನು ಮಾಡಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ದಾಸರು ಹೇಳಿದ್ದಾರೆ.

೨೦೬-೨೧೦

'ನಗಧರ' ಎಂದರೆ ಬೆಟ್ಟವನ್ನು ಧರಿಸಿದವನು ಎಂದರ್ಥ. ಶ್ರೀಕೃಷ್ಣನು ಗೋವರ್ಧನ ಎಂಬ ಪರ್ವತವನ್ನು ಕೇವಲ ಒಂದೇ ಒಂದು ಬೆರಳಿನಲ್ಲಿ ಎತ್ತಿ ತನ್ನ ಶಕ್ತಿಯನ್ನು, ಪ್ರಪಂಚಕ್ಕೆ ಪ್ರಕಟಿಸಿದನು. ಇಂತಹ ಭಗವಂತನನ್ನು ಏಕಾಂತಿಗಳ ಒಡೆಯ ಎನ್ನುತ್ತಾರೆ. ಏಕಾಂತಿ ಎಂದರೆ ಒಬ್ಬನೇ ಇರುವುದು. ಇತರ ಬಂಧುಮಿತ್ರರ ಸಂಪರ್ಕವನ್ನು ಕಳೆದುಕೊಂಡು ಜಗದೇಕನಾಥನ ಒಲುಮೆಗಾಗಿ ಒಂಟಿಯಾಗಿ ತಪಸ್ಸು ಮಾಡುವವನು ಎಂದು ತಾತ್ಪರ್ಯ. ಅಂತಹವರು ತಮ್ಮ ಹನ್ನೊಂದು ಇಂದ್ರಿಯಗಳನ್ನು ಭಗವಂತನ ಸೇವೆಗೆ ಮೀಸಲಿಟ್ಟು ಶ್ರೀಹರಿಯ ಕರುಣೆಗೆ ಪಾತ್ರರಾಗುವರೆಂದು ದಾಸರು ಹೇಳಿದ್ದಾರೆ.

೨೧೧-೨೧೫

ಭಗವಂತನು ಸರ್ವಶಕ್ತನೇ ಆದರೂ ಪ್ರತಿಯೊಂದು ಕಾರ್ಯವನ್ನು ನಡೆಸಲು ಒಬ್ಬೊಬ್ಬರನ್ನು ನಿಯಮಿಸಿ ಅವರಿಂದ ಆ ಕಾರ್ಯಗಳನ್ನು ಮಾಡಿಸುವುದು ಅವನ ಲಕ್ಷಣವಾಗಿದೆ. ಸಾತ್ವಿಕ, ರಾಜಸ, ಮತ್ತು ತಾಮಸ ವ್ಯಾಪಾರಗಳನ್ನು ಶ್ರೀ, ಭೂ, ದುರ್ಗಾ ದೇವಿಯರಿಗೆ ವಹಿಸಿ ಅವರಿಂದ ಆ ಕಾರ್ಯಗಳನ್ನು ಮಾಡಿಸುವನೆಂಬ ಶಾಸ್ತ್ರೀಯ ಸಂಗತಿಯನ್ನು ತಿಳಿಸಿದ್ದಾರೆ. ಆಹಾರವನ್ನು ಸ್ವೀಕರಿಸಲು ಧಾನ್ಯಗಳನ್ನು ಕುಟ್ಟಿ, ಬೀಸಿ, ಕಾಸಬೇಕಾಗುತ್ತದೆ. ಹೀಗೆ ಮಾಡುವುದರಿಂದ ಧಾನ್ಯದೊಳಗಿರುವ ಜೀವಕ್ಕೆ ನೋವಾಗುತ್ತದೆ. ಇದರಿಂದುಂಟಾಗುವ ಪಾಪವನ್ನು ಭಗವಂತನೇ ನಿವಾರಿಸ ಬೇಕೆಂದು ದಾಸರು ಶ್ರೀಕೃಷ್ಣನಲ್ಲಿ ಪ್ರಾರ್ಥಿಸಿದ್ದಾರೆ.

೨೧೬–೨೧೯

ಜಗನ್ನಾಥದಾಸರಿಗೆ ಅವರು ದಾಸರೆಂಬ ಕಾರಣದಿಂದ ಜನ ನೀಡುತ್ತಿದ್ದ ಗೌರವವನ್ನು ನೆನಪಿಸಿಕೊಂಡು ಅದು ಎಷ್ಟು ಜನ್ಮಗಳ ಪುಣ್ಯವೋ ಎಂದು ಧನ್ಯತಾ ಭಾವವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಪ್ರಪಂಚದಲ್ಲಿ 'ಲೋಕನಾಯಕ' ಎಂಬ ಮಾತು ಕೇವಲ ಶ್ರೀಹರಿಗೆ ಮಾತ್ರ ಅನ್ವಯವಾಗುವುದೆಂದು ದಾಸರು ಹೇಳಿ ಈತನ ಪಾದಾರಾಧನೆಯ ಯೋಗ ತಮಗೆ ಲಭಿಸಿದುದಕ್ಕಾಗಿ ಭಗವಂತನಲ್ಲಿ ಕೃತಜ್ಞತಾ ಪೂರ್ವಕ ನಮಸ್ಕಾರಗಳನ್ನರ್ಪಿಸಿದ್ದಾರೆ.

೨೨೦–೨೩೦

ಜಗನ್ನಾಥದಾಸರು ದಶಾವತಾರಗಳನ್ನು ಕುರಿತು ಹನ್ನೊಂದು ತತ್ವಸುವಾಲಿಗಳನ್ನು ರಚಿಸಿರುವರು. ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ರಾಮ, ಪರಶುರಾಮ, ವಾಮನ, ಕೃಷ್ಣ, ಬುದ್ಧ, ಮತ್ತು ಕಲ್ಕಿ ಎಂಬ ಹತ್ತು ಅವತಾರಗಳನ್ನು ವಿಷ್ಣುವು ಕಾಲಕಾಲಕ್ಕೆ ತಾಳಿ ಧರ್ಮ ಸಂಸ್ಥಾಪನೆಯನ್ನು ಮಾಡಿದನೆಂದು ಪುರಾಣಗಳು ತಿಳಿಸಿವೆ.

೧. **ವೇದತತಿಗಳ ಕದ್ದೊಯ್ದವನು:** ಸೋಮಕ ಎಂಬ ರಾಕ್ಷಸನು ವೇದಗಳನ್ನು ಕದ್ದೊಯ್ದಾಗ ವಿಷ್ಣುವು ಮೀನಾಗಿ ಹುಟ್ಟಿ ಅವನನ್ನು ಸಂಹಾರ ಮಾಡಿ ವೇದರಾಶಿಯನ್ನುಳಿಸಿದನು.

೨. **ವೈವಸ್ವತನ ಕಾಯ್ದ :** ಇವನ ಪೂರ್ಣ ಹೆಸರು ವೈವಸ್ವತ ಮನು ಎಂದು : ಈತ ಮನು ಎಂದೂ, ವೈವಸ್ವತ ಎಂದೂ ಪ್ರಸಿದ್ಧ. ಇವನು ಈ ಮನ್ವಂತರದ ಅಧಿಪ. ವಿಷ್ಣುವು ಮೀನಾಗಿ ಹುಟ್ಟಿ ವೈವಸ್ವತನ ಬಳಿ ಬಂದನು. ಅದನ್ನು ಕಾಪಾಡಲೆಂದು ವೈವಸ್ವತನು ನೀರು ತುಂಬಿದ ಪಾತ್ರೆಯಲ್ಲಿ ಹಾಕಿದನು. ಅದು ಮಾರನೆಯ ದಿನ ಪಾತ್ರೆಯಷ್ಟು ಬೆಳೆಯಿತು. ದೊಡ್ಡ ಪಾತ್ರೆಗೆ ಹಾಕಿದಾಗ ಅಲ್ಲಿಯೂ ಬೆಳೆಯಿತು. ಕೊನೆಗೆ ಅದನ್ನು ಸಮುದ್ರದಲ್ಲಿ ಹಾಕಿ " ನೀನು ಯಾರು ?" ಎಂದು ಪ್ರಶ್ನಿಸಿದಾಗ "ನಾನು ವಿಷ್ಣುವಿನ ಅವತಾರ. ಕೆಲವು ದಿನಗಳಲ್ಲಿ ಪ್ರಳಯವಾಗಿ ಪ್ರಪಂಚವೇ ಮುಳುಗುತ್ತದೆ. ಆಗ ನೀನು ನನ್ನ ಸಹಾಯದಿಂದ ಪ್ರಾಣಿ ವರ್ಗಗಳನ್ನು ಕಾಪಾಡು" ಎಂದಿತು. ಅದರಂತೆ ಮನುವು ಪ್ರಳಯಕಾಲದಲ್ಲಿ ಪ್ರಾಣಿಗಳನ್ನು ಕಾಪಾಡಿ ಪ್ರಳಯ ಮುಗಿದ ಮೇಲೆ ಮನುಧರ್ಮ ಶಾಸ್ತ್ರವನ್ನು ರಚಿಸಿ ಮನ್ವಂತರಾಧಿಪತಿ ಎನಿಸಿದನು. ಹೀಗೆ ಮತ್ಸ್ಯಾವತಾರಿಯು ವೈವಸ್ವತನನ್ನು ಪ್ರಳಯಕಾಲದಲ್ಲಿ ರಕ್ಷಿಸಿದನು.

೩. **ಹೇಮಾಂಬನ ಕೊಂದಿ :** ಹಿರಣ್ಯಾಕ್ಷನನ್ನೇ ಹೇಮಾಂಬಕ ಎಂದು ದಾಸರು ಕರೆದಿದ್ದಾರೆ. ಹಿರಣ್ಯಾಕ್ಷನು ಕಶ್ಯಪ ಮತ್ತು ದಿತಿಯರ ಮಗ; ಹಿರಣ್ಯ ಕಶಿಪುವಿನ ಸೋದರ. ಇವನು ಬ್ರಹ್ಮನ ವರಬಲದಿಂದ ದೇವತೆಗಳನ್ನು ಪೀಡಿಸಲಾರಂಭಿಸಿದಾಗ ವಿಷ್ಣುವು ವರಾಹಾವತಾರವನ್ನು ತಾಳಿ ಇವನನ್ನು ಕೊಂದು ಹಾಕಿದನು.

೪. **ವೈರೋಚನಿಯ ಭೂಮಿ :** ಬಲಿಚಕ್ರವರ್ತಿಯು ವಿರೋಚನನ ಮಗನಾದುದರಿಂದ ಅವನನ್ನು ವೈರೋಚನಿ ಎನ್ನುತ್ತಾರೆ. ಬಲಿ ಚಕ್ರವರ್ತಿಯು ಇಂದ್ರ ಪದವಿಯನ್ನು ತಕ್ಷಣವೇ ಬಯಸಿ ನೂರು ಅಶ್ವಮೇಧಯಾಗವನ್ನು ಮಾಡಲು ನಿರ್ಧರಿಸಿದನು. ನೂರನೆಯ ಯಾಗವನ್ನು ಮಾಡುತ್ತಿರುವಾಗ ವಿಷ್ಣುವು ವಾಮನನಾಗಿ ಅವತರಿಸಿ ಮೂರು ಪಾದಗಳಷ್ಟು ಭೂದಾನವನ್ನು ಬೇಡಿ ತ್ರಿವಿಕ್ರಮನಾಗಿ (ಆಕಾಶದೆತ್ತರಕ್ಕೆ) ಬೆಳೆದು ಬಲಿಯ ಸಮಸ್ತ ಭೂಮಿಯನ್ನೇ ದಾನ ಪಡೆದು ಯಾಗವನ್ನು ಅಪೂರ್ಣ ಗೊಳಿಸಿದನು.

೫. **ಕುವಲಯಾಧೀಶ್ವರರ ಕೊಂದೆ:** ವಿಷ್ಣುವು ಪರಶುರಾಮನಾಗಿ ಅವತರಿಸಿ ಇಪ್ಪತ್ತೆಂಟು ಬಾರಿ ಯುದ್ಧವನ್ನು ಮಾಡಿ ದುಷ್ಟ ರಾಜರೆಲ್ಲರನ್ನು ಕೊಂದು ಹಾಕಿದನು.

೨೩೧–೨೩೫

ಲಕ್ಷ್ಮಿಯು ಶ್ರೀ, ಭೂ ಮತ್ತು ದುರ್ಗೆ, ಎಂಬ ಮೂರು ರೂಪಗಳಿಂದ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳಿಗೆ ಶ್ರೀಹರಿಗೆ ನೆರವನ್ನುಂಟು ಮಾಡುವುದರೊಡನೆ ಸತ್ವ, ರಜೋ, ತಮೋ ಜೀವರಿಗೆ ಅವರವರ ಯೋಗ್ಯತಾನುಸಾರ ಸಾಧನೆಯನ್ನು ಮಾಡಿಸುವಳು. ಪ್ರಳಯಕಾಲದಲ್ಲಿ ಲಕ್ಷ್ಮಿಯು ವಟ ವೃಕ್ಷದ ಎಲೆಯಾಗಿದ್ದು ಶ್ರೀಹರಿಯು ಅದರ ಮೇಲೆ ತೇಲಲು ಅವಕಾಶ ಮಾಡಿಕೊಡುವಳು. ಶ್ರೀಹರಿಯೊಡನೆ ಅವಿಯೋಗವನ್ನು ಲಕ್ಷ್ಮಿಯು ಹೊಂದಿರುವಳು. ಲಕ್ಷ್ಮಿಯು ಹರಿಯೊಡನೆ ಇರುವವಳೇ ವಿನಾ ಅಗಲಿಕೆ ಎಂಬುದು ಯಾವಾಗಲೂ ಇಲ್ಲವೆಂಬ ತತ್ವವನ್ನು ದಾಸರು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

೨೩೬–೨೪೧

ಲಕ್ಷ್ಮಿಯ ಗುಣ, ಶಕ್ತಿ, ರೂಪಗಳನ್ನು ವರ್ಣಿಸಿ ದಾಸರು ಸ್ತೋತ್ರ ಮಾಡಿದ್ದಾರೆ. ಸದಾನಂದ ನೆನಿಸಿಕೊಂಡಿರುವ ಹರಿಗೆ ಲಕ್ಷ್ಮಿಯು ನಾನು ಆಭರಣ ರೂಪಗಳನ್ನು ತಾಳಿ ಹರಿಗೆ ಅಲಂಕಾರ

ಪ್ರಾಯಳಾಗಿ ಹರಿಸೇವೆಯನ್ನು ಮಾಡುತ್ತಿರುವಳು. ಲಕ್ಷ್ಮಿಯು ಶ್ರೀಹರಿಯ ವಕ್ಷಸ್ಥಳವನ್ನೇ ತನ್ನ ಮನೆಯನ್ನಾಗಿ ಮಾಡಿಕೊಂಡು ಹರಿ ಸೇವೆಗೈಯುವಳು : ಬ್ರಹ್ಮಾದಿ ದೇವತೆಗಳಿಗಿಂತ ಅತ್ಯಧಿಕ ಶಕ್ತಿ, ಜ್ಞಾನ, ಸಾಮರ್ಥ್ಯಗಳನ್ನು ಲಕ್ಷ್ಮಿಯು ಪಡೆದಿರುವಳು. ಇಂತಹ ಲಕ್ಷ್ಮಿಯು ನಾರಾಯಣನೊಡನೆ ತಮ್ಮ ಮನಸ್ಸಿನಲ್ಲಿ ವಾಸಮಾಡಿ ಅಶೀರ್ವದಿಸಲೆಂದು ದಾಸರು ಬೇಡಿದ್ದಾರೆ.

೨೪೨-೨೬೦

ಜಗನ್ನಾಥದಾಸರು 'ರುಕ್ಮಿಣಿ ವಿಲಾಸ' ಎಂಬ ಹೆಸರಿನಲ್ಲಿ ಹತ್ತೊಂಬತ್ತು ತತ್ವ ಸವಾಲಿಗಳನ್ನು ರಚಿಸಿದ್ದಾರೆ. ಇದು ಸಂಭಾಷಣಾತ್ಮಕವಾದ ರಚನೆಯಾಗಿದೆ. ರುಕ್ಮಿಣಿ ಮತ್ತು ಶ್ರೀ ಕೃಷ್ಣರ ನಡುವೆ ನಡೆದ ಸಂಭಾಷಣೆಯೇ ಈ ರುಕ್ಮಿಣೀ ವಿಲಾಸದ ವಸ್ತುವಾಗಿದೆ.

ಒಂದು ದಿನ ಶ್ರೀ ಕೃಷ್ಣನು ರುಕ್ಮಿಣಿಯೊಡನೆ ಮಣಿಮಂಚದ ಮೇಲೆ ಕುಳಿತು 'ರಾಜಕುಮಾರಿಯಾದ ನೀನು ರಾಜಕುಮಾರನಲ್ಲದ ನನ್ನನ್ನು ಪಶುಪಾಲನಾದ ನನ್ನನ್ನು ಏಕೆ ವರಿಸಿದೆ ? ನಾರದನ ಮಾತುಗಳನ್ನು ಕೇಳಿ ನೀನು ಮರುಳಾಗಿ ಬಿಟ್ಟೆ' ಎಂದು ರೇಗಿಸಿದನು. ಈ ಮಾತುಗಳನ್ನು ಕೇಳಿದಾಕ್ಷಣ ರುಕ್ಮಿಣಿಗೆ ದುಃಖ ತುಂಬಿ ಬಂದು ನೆಲದ ಮೇಲೆ ಉರುಳೇ ಬಿಟ್ಟಳು. ಆಗ ಶ್ರೀ ಕೃಷ್ಣನು ರುಕ್ಮಿಣಿಗೆ ಉಪಚಾರ ಮಾಡಿ ಮುದ್ದಿಸಿ ' ತಮಾಷೆಗಾಗಿ ಹೇಳಿದ ಮಾತನ್ನು ಕೇಳಿ ಗಂಭೀರವಾಗಿ ಭಾವಿಸಬಾರದಾಗಿತ್ತು' ಎಂದನು. ತಮಾಷೆಗಾಗಿ ಆಡಿದ ಮಾತುಗಳೆಂದು ತಿಳಿದ ರುಕ್ಮಿಣಿಯು ಹಿಗ್ಗಿ ಕೃಷ್ಣನಿಗೆ ನಮಸ್ಕರಿಸಿ ನಗುನಗುತ್ತಾ ತನ್ನನ್ನು ಕೃಷ್ಣ ಪರಿಗ್ರಹಿಸಿದ ನಿಮಿತ್ತ ತಾನು, ಅಕ್ಷರ ಎನಿಸಿ ಕೊಂಡಿರುವುದಾಗಿಯೂ, ಹದಿನಾಲ್ಕು ಲೋಕಗಳ ಅಧಿಪತಿಯೇ ದೊರಕಿದಾಗ ಈ ಲೋಕದ ಸಾಮಾನ್ಯ ರಾಜರನ್ನು ಒಲಿಸುವ ಅವಿವೇಕಿ ತಾನಲ್ಲವೆಂದು ನುಡಿದಳು. ಅಲ್ಲದೆ ರುಕ್ಮಿಣಿಯು ಶ್ರೀಕೃಷ್ಣನ ಮಾತುಗಳನ್ನು ಮನಸಾರೆ ಹೊಗಳಿದಳು. ಶ್ರೀಕೃಷ್ಣನು ರುಕ್ಮಿಣಿಯ ಮಾತುಗಳನ್ನು ಕೇಳಿ ಆನಂದದಿಂದ ಆಕೆಯನ್ನು ಅಪ್ಪಿಕೊಂಡು ಸಂತೋಷವನ್ನುಂಟು ಮಾಡಿದನು.

೨೬೧-೨೬೮

ತುಳಸಿಯನ್ನು 'ಬೃಂದಾವನಿ' ಎಂದೂ, 'ಬೃಂದಾ' ಎಂದೂ ಕರೆಯುವುದುಂಟು. ಈಕೆಯು ವಿಷ್ಣುವಿನ ಪತ್ನಿ. ಉತ್ಥಾನ ದ್ವಾದಶಿಯಂದು ತುಳಸಿಯ ವಿಶೇಷ ಪೂಜೆಯನ್ನು ಮಾಡುವ ಸಂಪ್ರದಾಯವಿದೆ. ಈ ತುಳಸಿಯನ್ನು ಕುರಿತು ಜಗನ್ನಾಥದಾಸರು ಎಂಟು ತತ್ವಸುವಾಲಿಗಳನ್ನು ರಚಿಸಿದ್ದಾರೆ.

ಹಾಲಿನ ಸಮುದ್ರವನ್ನು ದೇವತೆಗಳೂ ದೈತ್ಯರೂ ಕಡೆದಾಗ ಅಮೃತ ಉದ್ಭವವಾಯಿತು. ಈ ಅಮೃತಕಲಶವನ್ನು ವಿಷ್ಣುವು ಕೈಗೆ ತೆಗೆದು ಕೊಂಡಾಗ ವಿಷ್ಣುವಿನ ಕಣ್ಣುಗಳಿಂದ ಆನಂದ ಬಾಷ್ಪ ಉದುರಿತು. ಈ ಆನಂದ ಬಾಷ್ಪಗಳು ಅಮೃತ ಕಲಶದಲ್ಲಿ ಬಿದ್ದಾಗ ತುಳಸಿ ಗಿಡವು ಹುಟ್ಟಿತೆಂದು ಸ್ಕಂಧ ಪುರಾಣದಲ್ಲಿ ಹೇಳಲಾಗಿದೆ.

ತುಳಸಿಯು ಲಕ್ಷ್ಮಿಯ ಅವತಾರ. ತುಳಸಿಯನ್ನು ನೋಡುವುದೇ ಪುಣ್ಯಕಾರ್ಯವೆಂದು ದಾಸರು ಹೇಳಿದ್ದಾರೆ. ಧರ್ಮಧ್ವಜ ಮತ್ತು ಮಾಧವಿ ಎಂಬುವರ ಮಗಳಾಗಿ ಹುಟ್ಟಿದ ತುಳಸಿಯು ಶಂಖ ಚೂಡ – ಜಲಂಧರನೆನಿಸಿದ ವಿಷ್ಣುವನ್ನು ವಿವಾಹಗೊಂಡಳು. ತುಳಸಿಯಿಲ್ಲದೆ ಶ್ರೀಹರಿಯ ಪೂಜೆ ಮಾಡುವುದು ವ್ಯರ್ಥವೆಂಬ ಸಂಗತಿಯನ್ನು ದಾಸರು ವಿಶೇಷವಾಗಿ ಸೂಚಿಸಿದ್ದಾರೆ.

೨೬೯–೨೭೮

ಜಗನ್ನಾಥದಾಸರು ಬ್ರಹ್ಮದೇವರನ್ನು ಕುರಿತು ಹತ್ತು ತತ್ವಸುವಾಲಿಗಳನ್ನು ರಚಿಸಿದ್ದಾರೆ. ಬ್ರಹ್ಮದೇವರನ್ನು ಕುರಿತ ಸ್ತೋತ್ರಗಳು ತುಂಬ ವಿರಳವೆಂಬುದನ್ನು ಈ ಸಂದರ್ಭದಲ್ಲಿ ನೆನೆಪಿಸಿಕೊಳ್ಳಬಹುದು. ಬಳಿತ್ಥಾಸೂಕ್ತದಲ್ಲಿ ಬ್ರಹ್ಮದೇವರ ವಿಶೇಷ ಗುಣಗಳನ್ನು ಉಲ್ಲೇಖಿಸಲಾಗಿದೆ ಎಂಬ ಸಂಗತಿಯನ್ನು ದಾಸರು ಇಲ್ಲಿ ತಿಳಿಸಿದ್ದಾರೆ. ಚತುರ್ದಶ ಲೋಕಾಧಿಪತಿಯಾದ ಬ್ರಹ್ಮನ ರಾಣಿ ಸರಸ್ವತಿಯನ್ನು ಬಿಟ್ಟರೆ ಬ್ರಹ್ಮದೇವರೆ ಜೀವರಾಶಿಗಳಲ್ಲಿ ಅತ್ಯಂತ ಅಧಿಕ ಸ್ಥಾನಮಾನವನ್ನು, ಶಕ್ತಿ ಸಾಮರ್ಥ್ಯವನ್ನು ಪಡೆದವರು, ಇವರನ್ನು ಋಜಗಣಸ್ಥರೆಂದು ಹೇಳುತ್ತಾರೆ. ಗರುಡ ಶೇಷ, ರುದ್ರಾದಿಗಳು ತಾರತಮ್ಯದಲ್ಲಿ ಇವರಿಗಿಂತ ಕಡಿಮೆಯಾಗಿರುವರು. ಈ ಬ್ರಹ್ಮ ದೇವರನ್ನು ಜಗನ್ನಾಥದಾಸರು ಅನನ್ಯವಾಗಿ ಪ್ರಾರ್ಥಿಸಿದ್ದಾರೆ.

೨೭೯–೩೯೧

ಬ್ರಹ್ಮನ ತರುವಾಯ ಅದೇ ಕಕ್ಷದಲ್ಲಿರುವವರು ವಾಯು ದೇವರು, ಇವರನ್ನು ಮುಖ್ಯಪ್ರಾಣ ಎಂದೂ ಕರೆಯುತ್ತಾರೆ. ವಾಯುದೇವರು ಹನುಮ, ಭೀಮ, ಮಧ್ವಾವತಾರವನ್ನು ತಾಳಿದರೆಂಬುದು ಪ್ರಸಿದ್ಧವಾಗಿದೆ. ವಾಯುದೇವರ ಪ್ರಸಾದವಿಲ್ಲದೆ ಶ್ರೀ ಹರಿಯ ಪ್ರಸಾದ ದೊರೆಯಲಾರದು. ಇವರು ಜೀವಕೋಟಿಗೆ ಗುರುಗಳೆನಿಸಿದ್ದಾರೆ. ಜೀವರೆಲ್ಲರ ಉಸಿರಾಟಕ್ಕೆ ವಾಯುದೇವರೇ ಕಾರಣರಾಗಿದ್ದಾರೆ. ಇಂತಹ ವಾಯುದೇವರ ಪತ್ನಿ ಭಾರತೀದೇವಿಯರಾಗಿದ್ದಾರೆ. ವಾಯುದೇವರನ್ನು 'ಭಾರತೀರಮಣ' ರೆಂದು ಕರೆಯುವುದು ತುಂಬ ಪ್ರಸಿದ್ಧವಾಗಿದೆ. ಇಂತಹ ವಾಯುದೇವರನ್ನು ಕುರಿತು ಜಗನ್ನಾಥದಾಸರು ನಲವತ್ತೇಳು ತತ್ವ ಸುವಾಲಿಗಳನ್ನು ರಚಿಸಿದ್ದಾರೆ.

ವಾಯುದೇವರು ಇಪ್ಪತ್ತನಾಲ್ಕು ತತ್ವಾಭಿಮಾನಿಗಳೊಳಗಿದ್ದು ಅವರಿಂದ ಮಾಡಿಸಬೇಕಾದ ಕರ್ಮಗಳನ್ನು ಮಾಡಿಸುವರೆಂಬ ತತ್ವವನ್ನು, ಪ್ರತಿನಿತ್ಯ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇಪ್ಪತ್ತೊಂದು ಸಾವಿದಾರುನೂರು ಹಂಸ ಮಂತ್ರಗಳನ್ನು ಇವರು ಜಪಿಸುವರೆಂಬ ವಿಚಾರವನ್ನು, ಸಾತ್ವಿಕರಲ್ಲಿ ಸಾಧುಪ್ರವೃತ್ತಿಯನ್ನು, ರಾಜಸರಲ್ಲಿ ಮಿಶ್ರ ಪ್ರವೃತ್ತಿಯನ್ನು, ತಾಮಸರಲ್ಲಿ ದುಷ್ಟ ಪ್ರವೃತ್ತಿಯನ್ನು ಇವರುಂಟು ಮಾಡುವರೆಂಬ ವಿಚಾರವನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

ವಾಯುದೇವರನ್ನು 'ಆಖಣಾಶ್ಮ' ಎನ್ನುತ್ತಾರೆ. ಇವರ ದೇಹ ವಜ್ರದಷ್ಟು ಕಠಿಣವಾದುದು. ಅವತಾರವೆತ್ತಿದಾಗ ಮೂವತ್ತೆರಡು ಲಕ್ಷಣಗಳನ್ನು ಹೊಂದಿರುವವರು. ಮುಂದಿನ ಕಲ್ಪದಲ್ಲಿ ಬ್ರಹ್ಮ ಪಟ್ಟಕ್ಕೆ ಏರುವವರು. ಎಂದಿಗೂ ಯಾವ ಸ್ವತ್ಯರಿಂದಲೂ ಸೋಲಿನ್ನ ಸೋಲನ್ನನುಭವಿಸುವರಲ್ಲ.

೧೯೨–೨೦೧

ಋಜುಗಣಸ್ಥರ ಒಡೆಯರೆಂದು ವಾಯುದೇವರನ್ನು ಕರೆಯುತ್ತಾರೆ. ಅನಿಲದೇವ – ಮರುತ್ – ಮಾತರಿಶ್ವ – ಮುಖ್ಯ ಪ್ರಾಣ ಇತ್ಯಾದಿ ಹೆಸರುಗಳು ಇವರಿಗುಂಟು. ವಾಯುದೇವರ ಕೃಪೆಯಾಗುವ ತನಕ ಶ್ರೀಹರಿಯ ಕೃಪೆಯಾಗದೆಂಬುದು ಶಾಸ್ತ್ರದ ವಚನವಾಗಿದೆ. ಆದ್ದರಿಂದ ಲೌಕಿಕ ವಿಷಯಗಳಲ್ಲಿ ಆಸಕ್ತಿಯನ್ನು ಕೊಡದೆ ದೇವತಾ ತಾರತಮ್ಯ ಜ್ಞಾನವನ್ನು ನೀಡಿ ಭಕ್ತಿ ವೈರಾಗ್ಯವನ್ನು ಮನಸ್ಸಿನಲ್ಲಿ ಜಾಗೃತವಾಗಿರುವಂತೆ ಅನುಗ್ರಹಿಸ ಬೇಕೆಂದು ದಾಸರು ವಾಯುದೇವರನ್ನು ಪ್ರಾರ್ಥಿಸಿದ್ದಾರೆ. ಎಷ್ಟೇ ಜನ್ಮಗಳು ಬಂದರೂ ಗುರುಹಿರಿಯರಲ್ಲಿಯೂ, ಶ್ರೀಹರಿಯಲ್ಲಿಯೂ ದ್ವೇಷ ಬರದಿರುವಂತೆ ಆಶೀರ್ವಾದ ಮಾಡಬೇಕೆಂದು ದಾಸರು ಕೇಳಿಕೊಂಡಿದ್ದಾರೆ. ಅಲ್ಲದೆ ಯಾರು ಹನುಮ, ಭೀಮ, ಮಧ್ವಾಚಾರ್ಯರ ಸ್ತೋತ್ರಗೈಯುವರೋ ಅಂತಹವರು ಮುಕ್ತಿಯನ್ನು ಖಂಡಿತವಾಗಿ ಪಡೆಯುವರೆಂದು ದಾಸರು ಹೇಳಿದ್ದಾರೆ.

೨೦೨–೨೧೧

ಸಾಧಕನ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಕಲಿಯೇ ಮೊದಲಾದ ದೈತ್ಯರುಪಟಳದಿಂದ ಭಕ್ತಿಸಾಧನೆಯಲ್ಲಿ ಹಿನ್ನಡೆಯುಂಟಾಗುತ್ತಿರುವುದಂತೆ. ಇದನ್ನು ತಪ್ಪಿಸಬೇಕೆಂದು ದಾಸರು ಇಲ್ಲಿ ಪ್ರಾರ್ಥಿಸಿದ್ದಾರೆ. ವಾಯುದೇವರು ಪ್ರತಿಯೊಂದು ಪ್ರಾಣಿ – ಮನುಷ್ಯ ಜೀವರಲ್ಲಿಯೂ ಇದ್ದು ಗಂಟೆಗೆ ಒಂಬೈನೂರು ಬಾರಿ ಹಂಸ ಮಂತ್ರ ಜಪಗಳನ್ನು ಮಾಡಿ ಶ್ರೀಹರಿಗೆ

ಅರ್ಪಿಸುವರಂತೆ. ಸಮುದ್ರಮಥನ ಕಾಲದಲ್ಲಿ ಉದ್ಭವಿಸಿದ ಹಾಲಾಹಲ ವಿಷವನ್ನು ಮೊದಲು ಸ್ವೀಕರಿಸಿ ದೇವತೆಗಳನ್ನು ಬದುಕಿಸಿದವರು ವಾಯುದೇವರು. ಇಂತಹ ವಾಯುದೇವರು ಬುದ್ಧಿ, ಬಲ, ಕೀರ್ತಿ, ಭಕ್ತಿ, ಜ್ಞಾನ, ಆರೋಗ್ಯ, ಆಯುಷ್ಯಾದಿಗಳನ್ನು ದಯಪಾಲಿಸಲೆಂದು ದಾಸರು ಪ್ರಾರ್ಥಿಸಿದ್ದಾರೆ.

೩೧೭–೩೨೫

ಜಗನ್ನಾಥದಾಸರು ವಾಯುದೇವರನ್ನು ಕುರಿತು ಸ್ತೋತ್ರ ಮಾಡುವಾಗಲೆಲ್ಲ ಹನುಮ ಭೀಮ ಮಧ್ವಾವತಾರಗಳನ್ನೆತ್ತಿ ಮಾಡಿದ ಸಾಧನೆಗಳನ್ನು ಪ್ರಸ್ತಾಪಿಸುತ್ತಾರೆ. ಅರ್ಜುನನ ಅಣ್ಣನಾಗಿ – ಭೀಮಸೇನನಾಗಿ ಸರ್ವಜ್ಞಾಚಾರ್ಯರಾಗಿ ಅವತರಿಸಿ ಇಪ್ಪತ್ತೊಂದು ಮತಗಳು ಸರಿಯಿಲ್ಲವೆಂಬುದನ್ನು ತಾರ್ಕಿಕವಾಗಿ ಮಂಡಿಸಿದ್ದು ; ಮಧ್ಯಗೇಹ ಭಟ್ಟರ ಸಾಲವನ್ನು ಕೇವಲ ಹುಣಿಸೆ ಬೀಜಗಳನ್ನೆಣಿಸಿ ಕೊಡುವುದರ ಮೂಲಕ ತೀರಿಸಿದ್ದು; ಬಾಲ್ಯದಲ್ಲಿಯೇ ಯತ್ಯಾಶ್ರಮವನ್ನು ಸ್ವೀಕರಿಸಿ ವೀರ ವೈರಾಗ್ಯವನ್ನು ತೋರಿ ಮೂವತ್ತೇಳು ಗ್ರಂಥಗಳನ್ನು ರಚಿಸಿದ್ದು ಇವೇ ಮೊದಲಾದ ಪ್ರಸಂಗಗಳನ್ನು ದಾಸರು ಈ ಸುವಾಲಿಗಳಲ್ಲಿ ಸೂಚಿಸಿ ಇಂತಹ ವಾಯುದೇವರು ತಮಗೆ ಶ್ರೀಹರಿಧ್ಯಾನವನ್ನು ಕರುಣಿಸಲೆಂದು ಬೇಡಿದ್ದಾರೆ.

೩೨೬–೩೪೩

ಮಧ್ವಸಿದ್ಧಾಂತವನ್ನನುಸರಿಸಿ ಹರಿದಾಸ ಸಾಹಿತ್ಯವನ್ನು ರಚಿಸಿದ ಹರಿದಾಸರು ತಾರತಮ್ಯದಲ್ಲಿ ಬ್ರಹ್ಮ ವಾಯುಗಳಿಗಿಂತ ಸ್ವಲ್ಪ ಕಡಿಮೆ ಎನಿಸಿರುವ ಈಶ್ವರನನ್ನು ಭಕ್ತಿಯಿಂದ ಸ್ತೋತ್ರ ಮಾಡುವರು. ಈಶ್ವರನನ್ನು ಈ ಸಿದ್ಧಾಂತದಲ್ಲಿ ಮನೋಭಿಮಾನಿ – ಎಂದರೆ ಮನಸ್ಸೆಂಬ ತತ್ವದ ಅಧಿಪತಿ ಎಂದು ಹೇಳಲಾಗಿದೆ. ಲೌಕಿಕವಾದ ಎಲ್ಲ ಸುಖಗಳನ್ನು ರುದ್ರಾರಾಧನೆಯಿಂದ ಸುಲಭವಾಗಿ ಶೀಘ್ರವಾಗಿ ಪಡೆಯಬಹುದೆಂಬುದು ಶಾಸ್ತ್ರೋಕ್ತ ವಿಚಾರವಾಗಿದೆ.

ಈಶ್ವರನು ಮುಂದಿನ ಕಲ್ಪದಲ್ಲಿ ಶೇಷ ಪದವಿಯನ್ನು ಪಡೆಯುವರೆಂದೂ, ನಂದಿ ಇವನ ವಾಹನ; ಗಂಗಾನದಿಯನ್ನು ಧರಿಸಿದನು; ಗಜಚರ್ಮಾಂಬರಧಾರಿ; ರುಂಡಮಾಲಿ; ನೀಲಕಂಠ; ತ್ರಿಪುರಾಸುರನನ್ನು ಸಂಹರಿಸಿದವನು; ಅಷ್ಟ ಮೂರ್ತ್ಯಾತ್ಮಕನಾದವನು; ದೂರ್ವಾಸ ಮಹರ್ಷಿಯು ಈಶ್ವರ ಅಂಶದವರು ಎಂದು ಈಶ್ವರನ ಗುಣ ಶಕ್ತಿರೂಪಗಳನ್ನು ಕುರಿತು ಜಗನ್ನಾಥದಾಸರು ವರ್ಣಿಸಿ ಸ್ತೋತ್ರ ಮಾಡಿದ್ದಾರೆ.

೩೪೪–೩೪೯

ಜಗನ್ನಾಥದಾಸರು ಅಗ್ನಿಯನ್ನು ಕುರಿತು ಐದು ತತ್ವಸುವಾಲಿಗಳನ್ನು ರಚಿಸಿದ್ದಾರೆ. ದೇವತೆಗಳ ತೃಪ್ತಿಯನ್ನು ಅಗ್ನಿಯನ್ನು ಹೋಮ ಮಾಡುವುದರ ಮೂಲಕ ಉಂಟು ಮಾಡಬಹುದೆಂಬುದು ಶಾಸ್ತ್ರೋಕ್ತ ವಿಚಾರವಾಗಿದೆ. ಅಗ್ನಿಯನ್ನು ಕುರಿತ ಸ್ತೋತ್ರ ವಿರಳವೆಂಬುದನ್ನು ಈ ಸಂದರ್ಭದಲ್ಲಿ ಗುರುತಿಸಬಹುದಾಗಿದೆ.

ಬೆಂಕಿಯು ಸಮುದ್ರದಲ್ಲಿ ಆರದೆ ಜೀವಂತವಾಗಿರುವುದೆಂಬುದನ್ನೂ ಉಲ್ಲೇಖಿಸಿರುವುದು ಗಮನಾರ್ಹ. ಅಗ್ನಿಯನ್ನು 'ದೇವ ಮುಖ' ಎನ್ನುವರೆಂಬುದನ್ನು ದಾಸರು ವಿಶೇಷವಾಗಿ ಉಲ್ಲೇಖಿಸಿ ಜಗನ್ನಾಥವಿಠಲನ ಕೃಪೆ ತಮಗೆ ದೊರಕುವಂತೆ ಅನುಗ್ರಹಿಸಬೇಕೆಂದು ಕೇಳಿಕೊಂಡಿದ್ದಾರೆ.

೩೫೧–೩೭೩

ಸೂರ್ಯ ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ ರಾಹು ಮತ್ತು ಕೇತು ಗ್ರಹಗಳನ್ನು ನವಗ್ರಹ ಎಂದು ಕರೆಯುತ್ತಾರೆ. ಈ ನವಗ್ರಹಗಳನ್ನು ಕುರಿತು ಜಗನ್ನಾಥದಾಸರು ಇಪ್ಪತ್ತಮೂರು ತತ್ವ ಸುವಾಲಿಗಳನ್ನು ರಚಿಸಿದ್ದಾರೆ. ಇವೆಲ್ಲವೂ ಪ್ರಾರ್ಥನಾ ಪರವಾಗಿವೆ. ಸೂರ್ಯಗ್ರಹವು ಆರೋಗ್ಯ ಪ್ರದಾಯಕ ಶಕ್ತಿಯನ್ನು ವಿಶೇಷವಾಗಿ ಹೊಂದಿರುವನೆಂದೂ, ವಿಷ್ಣು ಜ್ಞಾನ ಪ್ರದಾತನೆಂದೂ ಸ್ತೂತಿಸಲಾಗಿದೆ.

ಚಂದ್ರನನ್ನು ರೋಹಿಣಿಯ ಪತಿಯೆಂದು, ಕ್ಷೀರ ಸಮುದ್ರವನ್ನು ದೇವದೈತ್ಯರು ಕಡೆದಾಗ ಹುಟ್ಟಿದಾತನಿವನೆಂದೂ ದಾಸರು ಹೇಳಿದ್ದಾರೆ.

ಮಂಗಳನು ಅತ್ರಿಯ ಮಗನೆಂದೂ, ದೂರ್ವಾಸರ ಸೋದರನೆಂದೂ ಕೆಂಪು ಬಣ್ಣವನ್ನುಳ್ಳ ಹವಳ ಇವನಿಗೆ ಪ್ರಿಯವೆಂದೂ ಇವನ ರೂಪ ಕಷ್ಟೆಂದೂ ದಾಸರು ಹೇಳಿದ್ದಾರೆ.

ಬುಧನು ಚಂದ್ರ ಮತ್ತು ತಾರೆಯರ ಪುತ್ರನೆಂದೂ, ಇವನು ತಮಗೆ ಸಜ್ಜನರ ಸಹಾವಾಸವನ್ನು ಕರುಣಿಸಬೇಕೆಂದೂ ಕೇಳಿ ಕೊಂಡಿದ್ದಾರೆ.

ದೇವತೆಗಳ ಗುರುವೆನಿಸಿದ ಬೃಹಸ್ಪತಿಯನ್ನೇ ಗುರುಗ್ರಹ ಎನ್ನಲಾಗುತ್ತದೆ. ಇಂದ್ರಾದಿ ದೇವತೆಗಳಿಗೆ ಗುರುವೆನಿಸಿದ ಬೃಹಸ್ಪತಿಯು ತಮಗೆ ಸಜ್ಜನರ ಸಹವಾಸ ದೊರಕಿಸಲೆಂದು ದಾಸರು ಪ್ರಾರ್ಥಿಸಿದ್ದಾರೆ.

ದೈತ್ಯರ ಗುರುವೆಂದು ಶುಕ್ರಾಚಾರ್ಯರನ್ನು ಪುರಾಣಗಳಲ್ಲಿ ಗುರುತಿಸಲಾಗಿದೆ. ಶುಕ್ರಾಚಾರ್ಯರನ್ನು 'ಕವಿ' ಎಂದು ವೇದ ಶಾಸ್ತ್ರ ಸಂಪನ್ನರೆಂದು ಸ್ತುತಿಸಲಾಗಿದೆ.

ಛಾಯೆ ಮತ್ತು ಸೂರ್ಯರ ಪುತ್ರನಾದ ಶನಿಯು ಜಗತ್ತಿನ ಜನರಿಗೆ ಕಷ್ಟಗಳನ್ನು ಕೊಡುವವನೆಂದೇ ಪ್ರಸಿದ್ಧವಾಗಿದ್ದಾನೆ. ದಾಸರು ರಾಹು ಮತ್ತು ಕೇತು ಗ್ರಹಗಳನ್ನು ಪ್ರತ್ಯೇಕವಾಗಿ ಸ್ತುತಿಸಿರುವ ಸುವಾಲಿಗಳು ದೊರೆತಿಲ್ಲ.

೩೭೪-೩೭೮

ಜಗನ್ನಾಥದಾಸರು ಸಂಸ್ಕೃತ ಭಾಷೆ ಮತ್ತು ದ್ವೈತ ಸಿದ್ಧಾಂತದಲ್ಲಿ ಅಗಾಧ ಪಂಡಿತರಾಗಿದ್ದವರು.

ಇವರು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ವಿಶೇಷ ಅಧ್ಯಯನ ಮಾಡಿ ವಿದ್ವಾಂಸರೆನಿಸಿಕೊಂಡು ಮಾನವಿಯಲ್ಲಿ ಗುರುಕುಲವನ್ನು ನಡೆಸುತ್ತಿದ್ದರು. ಇವರು ಹರಿದಾಸರಾದ ಮೇಲೆ ತತ್ವಶಾಸ್ತ್ರ ವಿಚಾರಗಳ ಸಾರವನ್ನು ಕೀರ್ತನೆ ಹಾಗೂ ತತ್ವ ಸುವಾಲಿಗಳ ಮೂಲಕ ಪ್ರಚಾರಪಡಿಸುವುದರೊಡನೆ ಹರಿಕಥಾಮೃತಸಾರ ಎಂಬ ಭಾಮಿನೀ ಷಟ್ಪದಿಯ ಗ್ರಂಥದ ಮೂಲಕ ಪ್ರಚುರಗೊಳಿಸಿದರು. ಇವರು ತತ್ವವಿಚಾರಗಳ ಸಾರವನ್ನು ಇಪ್ಪತ್ತಾರು ಸುವಾಲಿಗಳಲ್ಲಿ ಸಂಗ್ರಹಿಸಿದ್ದಾರೆ.

ಹರಿಸರ್ವೋತ್ತಮದ ಪ್ರತಿಪಾದನೆಯೊಡನೆ 'ನಾನೇ ಶಿವ ' ಎಂದು ಭಾವಿಸುವುದು ಸರಿಯಲ್ಲವೆಂಬುದನ್ನು ದಾಸರು ತಾರ್ಕಿಕವಾಗಿ ಮಂಡಿಸಿದ್ದಾರೆ. ನಾನು ಶಿವನಾದರೆ ಪಾರ್ವತಿಯನ್ನು ನನ್ನ ಪತ್ನಿ ಎಂದು ಹೇಳಿಕೊಂಡಂತಾಗುವುದು: ಇದು ಲೋಕ ದೃಷ್ಟಿಯಿಂದಲೂ ಸಭ್ಯವಲ್ಲವೆಂದು ದಾಸರು ಹೇಳುತ್ತಾರೆ. ಪ್ರತಿಯೊಂದು ವಸ್ತು – ವ್ಯಕ್ತಿಗಳ ಗುಣಧರ್ಮಗಳಲ್ಲಿ ವ್ಯತ್ಯಾಸ ಕಾಣುವುದರಿಂದ ಎಲ್ಲವೂ ಒಂದು ಎಂಬ ತತ್ವ ಒಪ್ಪುವುದು ವಿವೇಕವಲ್ಲವೆಂದು ದಾಸರು ಹೇಳಿದ್ದಾರೆ. ಭಗವಂತನನ್ನು ಬಿಂಬ ಎಂದೂ, ಜೀವರನ್ನು ಪ್ರತಿಬಿಂಬ ಎಂದೂ ಸಿದ್ಧಾಂತದಲ್ಲಿ ಹೇಳಲಾಗಿದೆ. ಇವೆರಡೂ ಒಂದೇ ಎಂದರೆ ಬಟ್ಟೆ ಮತ್ತು ಬಟ್ಟೆಯ ನೆರಳೂ ಒಂದೇ ಎಂದು ಹೇಳಿದಂತಾಗುವುದೆಂದು ದಾಸರು ತರ್ಕ ಹೂಡಿದ್ದಾರೆ. ಪ್ರಪಂಚದಲ್ಲಿರುವ 'ನಾನು – ನೀನು' ಎಂಬ ಪದ ಪ್ರಯೋಗವೇ ಜೀವರಲ್ಲಿ ವ್ಯತ್ಯಾಸವಿದೆ ಎಂಬುದನ್ನು ಸಾಬೀತು ಪಡಿಸುವುದೆಂದು ದಾಸರು ಹೇಳಿದ್ದಾರೆ

೩೭೯–೩೮೦

ಈ ಪ್ರಪಂಚದಲ್ಲಾಗುವ ಅನುಭವವು ಮಾಯೆ-ಸುಳ್ಳು ಎಂಬ ವಾದ ಸರಿಯಲ್ಲ. ದುಃಖ-ನೋವುಗಳನ್ನನುಭವಿಸುತ್ತಲೇ ಇರುವುದರಿಂದ ಈ ಲೋಕ 'ಮಿಥ್ಯೆ' ಎಂದು ಭಾವಿಸುವುದು ಸರಿಯಲ್ಲವೆಂಬ ಸಿದ್ಧಾಂತವನ್ನು ದಾಸರು ಮಂಡಿಸಿದ್ದಾರೆ. 'ನನ್ನ ತಾಯಿ ಬಂಜೆ 'ಎಂಬ ಮಾತನ್ನು ಹೇಗೆ ಒಪ್ಪಲು ಸಾಧ್ಯವಿಲ್ಲವೋ ಹಾಗೆಯೇ ಜಗತ್ತು ಮಿಥ್ಯೆ ಎಂಬ ಮಾತನ್ನು ಒಪ್ಪಲಾಗದೆಂದು ದಾಸರು ಹೇಳಿದ್ದಾರೆ.

೩೮೧–೩೮೫

ಶಾಖ ಮತ್ತು ತಂಪು ಒಟ್ಟಿಗೆ ಇರಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಸತ್ಯ ಮಿಥ್ಯಗಳು ಒಟ್ಟಿಗೆ ಇರಲಾರವೆಂದೂ, ಜೀವರು ಈಶ್ವರರೇ ಆಗುವರೆಂಬ ಮಾತು ಕಿವಿಗೆ ತುಂಬ ಹಿತವಾದುದೆಂದು, ಆದರೆ ವಾಸ್ತವ ಸತ್ಯವಲ್ಲವೆಂದು ದಾಸರು ಇಲ್ಲಿ ಮನವರಿಕೆ ಮಾಡಿ ಕೊಟ್ಟಿದ್ದಾರೆ. ವಸ್ತುಗಳ ಗುಣಧರ್ಮ ಹಾಗೂ ವ್ಯಕ್ತಿಗಳ ಶಕ್ತಿ ಸಾಮರ್ಥ್ಯಗಳಲ್ಲಿ ವ್ಯತ್ಯಾಸಗಳನ್ನು ಕಣ್ಣಾರೆ ಕಾಣುತ್ತಿದ್ದರೂ ಎಲ್ಲ ಜೀವರೂ ಒಂದೇ – ಭಗವಂತನಿಗೆ ಸಮಾನ ಎಂದು ಭಾವಿಸುವುದು ಸರಿಯಲ್ಲವೆಂದು ದಾಸರು ಹೇಳಿದ್ದಾರೆ.

೩೮೬–೩೯೦

ಶ್ರೀಹರಿಯು ಮತ್ತು ಜೀವರು ಒಂದೇ : ಇವರಿಬ್ಬರೂ ಐಕ್ಯಗೊಳ್ಳುವರೆಂದು ಭಾವಿಸುವುದು ಸರಿಯಲ್ಲ ; ಈ ವಿಚಾರವು ದ್ವಾಸುಪರ್ಣಾ ಶ್ರುತಿಯಲ್ಲಿ ವಿವರಿಸಲಾಗಿದೆ. ಶ್ರೀಹರಿಯು ಅನಾದ್ಯನಂತಕಾಲದಿಂದ ಕ್ಷೀರಸಮುದ್ರಶಾಯಿಯಾಗಿ ಬ್ರಹ್ಮಾಂಡ ಕೋಟಿಯನ್ನು ನಿಯಂತ್ರಿಸುತ್ತಿರುವನು; ಸಾಮಾನ್ಯ ಮನುಷ್ಯ ತನ್ನನ್ನು ತಾನೇ ನಿಯಂತ್ರಿಸಕೊಳ್ಳಲಾಗುತ್ತಿಲ್ಲ; ಆದ್ದರಿಂದ ಜೀವೇಶರೊಂದೆಂಬ ಭಾವನೆ ಸಾಮಾನ್ಯ ಲೋಕಜ್ಞಾನಕ್ಕೆ ಕೂಡುವುದಿಲ್ಲವೆಂದು ದಾಸರು ಹೇಳಿದ್ದಾರೆ.

೩೯೧–೪೦೦

ಭಗವಂತನೇ ತಾನೆಂಬ ಭಾವನೆ ಸರಿಯಲ್ಲವೆಂಬ ಪ್ರತಿಪಾದನೆ ಈ ಸುವಾಲಿಗಳಲ್ಲಿಯೂ ಮುಂದುವರಿಸಿದೆ; ಈಶತ್ವವೆಂಬುದು ಲಕ್ಷ್ಮೀಪತಿ ಎನಿಸಿದ ಶ್ರೀಹರಿಗೆ ಮಾತ್ರ ಅನ್ವಯ ವಾಗುವುದೆಂಬುದನ್ನು ದಾಸರು ಇಲ್ಲಿ ಒತ್ತಿ ಹೇಳಿದ್ದಾರೆ.

ಅನುಬಂಧ–೩

ಕೀರ್ತನೆಗಳ ಅಕಾರಾದಿ

(ಆ) ತತ್ವಸುವಾಲಿಗಳ ಅಕಾರಾದಿ

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಪುಟ ಸಂಖ್ಯೆ
೨೬.	ಆದಿತ್ಯದೇವ	೩೧೧
೨೭.	ಆದಿನಾರಾಯಣನು	೨೮೬
೨೮.	ಆನಂದ ಆನಂದ	೨೯೦
೨೯.	ಆನಂದನಂದ ವಿಜ್ಞಾನಮಯ	೨೮೨
೩೦.	ಆನಂದಮಯ ಹರಿಗೆ	೨೯೪
೩೧.	ಆವ ಬ್ರಹ್ಮಾದಿ	೨೯೫
೩೨.	ಆವ ಯೋನಿಯಲ್ಲಿರಿಸು	೨೬೬
೩೩.	ಆಶೆಯೆಂಬುದುಂಟು ಸರ್ವೇಶ	೨೮೫
೩೪.	ಇಂದಿರಾಪತಿ ನೀನು	೨೭೨
೩೫.	ಇಂದಿರಾರಮಣ ಗೋವಿಂದ	೨೮೨
೩೬.	ಇದನೆ ಬೇಡುವೆ	೩೧೪
೩೭.	ಇನಿತಿದ್ದ ಬಳಿಕ ನೀ	೨೬೩
೩೮.	ಇನಿತಿದ್ದ ಬಳಿಕ ಯೋಚನೆಯಾಕೆ	೩೦೦
೩೯.	ಈ ಚರಾಚರದೊಳು	೩೦೭
೪೦.	ಈ ಮಾತ ಕೇಳಿ	೨೯೬
೪೧.	ಈತನ ಪಾದಾಂಬುಜ	೨೯೨
೪೨.	ಈಶಕೋಟಿ ಪ್ರವಿಷ್ಟೆ	೨೯೪
೪೩.	ಈಶ ನಾನೆನಲು	೩೧೮
೪೪.	ಈಶತ್ವವೆಂಬುದು	೩೧೮
೪೫.	ಈಶ ನಾನೆಂದವನ	೩೧೮
೪೬.	ಉಂಡು ಉಟ್ಟದ್ದೆಲ್ಲ	೨೮೯
೪೭.	ಉಗ್ರತಪನಾ ನಿನ್ನ	೩೧೦
೪೮.	ಉಗ್ರಸೇನನಿಗೆ ಪಟ್ಟ	೨೮೮
೪೯.	ಉದ್ಗೀಥ ಶ್ರೀ ಪ್ರಾಣ	೩೧೮
೫೦.	ಉದ್ಧರಿಪುದೆಮ್ಮ	೩೦೭
೫೧.	ಋಜುಗಣಾಧೀಶ್ವರನೆ	೨೭೧
೫೨.	ಎಂತೆಂತು ನೀ ನುಡಿಸಿದಂತೆ	೨೬೭

ಸಹಾಯಕ ಸಾಹಿತ್ಯ

೧.	ಶ್ರೀಜಗನ್ನಾಥದಾಸರು	:	ಡಾ|| ಕೆ. ಎಂ. ಕೃಷ್ಣರಾವ್
೨.	ಶ್ರೀ ಹರಿಕಥಾಮೃತಸಾರ	:	(ಸಂ) ಡಾ|| ಕೆ. ಎಂ. ಕೃಷ್ಣರಾವ್
೩.	ಶ್ರೀಹರಿಕಥಾಮೃತಸಾರ ಸೌರಭ	:	ಡಾ|| ಕೆ. ಎಂ.ಕೃಷ್ಣರಾವ್
೪.	ಶ್ರೀ ಜಗನ್ನಾಥ ದಾಸರ ಕೃತಿಗಳು	:	(ಸಂ) ಡಾ|| ಕೆ. ಎಂ. ಕೃಷ್ಣರಾವ್
೫.	ಶ್ರೀಜಗನ್ನಾಥ ದಾಸರ ಕೃತಿಗಳು	:	(ಸಂ) ಡಾ|| ಟಿ. ಎನ್. ನಾಗರತ್ನ
೬.	ಶ್ರೀಜಗನ್ನಾಥ ದಾಸರ ತತ್ವಸುವಾಲಿಗಳು	:	ಹರಿದಾಸರತ್ನಂ ಶ್ರೀ ಗೋಪಾಲದಾಸರು.
೭.	ಪುರಾಣನಾಮ ಚೂಡಾಮಣಿ	:	ಶ್ರೀ ಬೆನಗಲ್ ರಾಮರಾವ್ ಮತ್ತು ಶ್ರೀ ಪಾನ್ಯಂ ಸುಂದರ ಶಾಸ್ತ್ರಿ
೮.	ಶ್ರೀ ಜಗನ್ನಾಥದಾಸರು	:	ಶ್ರೀ ಟಿ. ಕೆ. ವೇಣುಗೋಪಾಲ ದಾಸರು
೯.	ದಾಸ ಸಾಹಿತ್ಯ	:	ದ್ವಿತೀಯ ಘಟ್ಟದ ಸಾಧನೆ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೦.	ಹರಿದಾಸ ಕೀರ್ತನ ತರಂಗಿಣಿ : ಭಾಗ – ೩	:	ಶ್ರೀ ಸುಬೋಧ ಎಂ. ರಾಮರಾವ್.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು